ARS 15 APP. 90

ಸಂಪುಟ 1884, 1885. 1886,
1887, 1888
ಬರಹ ದುಸ್ಥಿತಿಯಲ್ಲಿದ್ದ ಕಾರಣ
ಸೂಕ್ಷ್ಮ ಚಿತ್ರೀಕರಿಸಲು ಸಾಧ್ಯವಿರುವುದಿಲ್ಲ

ಸ್ಥಾಪನೆ : ೧೮೬೬

೧೯೮೯-೯೦

ಜೀವನ ಶಿಕ್ಷಣ ಪತ್ರಿಕೆಯ
ಶತಮಾನೋತ್ತರ ಬೆಳ್ಳಿ ಹಬ್ಬದ
ಪುಸ್ತಕ ಪ್ರದರ್ಶನ ೧೯೮೯

ಸಂಸ್ಥಾಪಕರು

2

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೮೯ ರಿಂದ)

ವರ್ಷ/889-90

ಡೆ. ಚನ್ನಬಸಪ್ಪನವರು
(೧೮೩೩-೧೮೮೧)
ನೆನಪು ಸಂಪುಟ

ಕನ್ನಡ
ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ
ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೂವ್ದರಸ್ತೆ, ಧಾರವಾಡ - ೮

ಶಾಲಾಪತ್ರಕವು.

ಪುಸ್ತಕ ೨೪)　　　　　(ಸಂಚಿಕೆ ೧

(ಜಾನೇವಾರಿ ೧೮೮೯)

School Organization.

ವಿದ್ಯಾಲಯದ ರಚನೆಯು.

ಲ ದೃಷ್ಟಿಯಿಂದ ನೋಡಲಾಗಿ ವಿದ್ಯಾಲಯದ
ಯೆರಡು ಮುಖ್ಯ ಸಂಗತಿಗಳು ಬರುತ್ತವೆ. ಅವು
ಂದರೆ——

ಪು——ವಿದ್ಯಾರ್ಥಿಗಳು ಕೂಡ್ರುವ ಸ್ಥಳ ಅಥವಾ
ಗೃಹ.

ದು—— ಶಿಕ್ಷಣದ ಉಪಕರಣಗಳು.

ಸರುಗಳ ಕೆಳಗೆ ಶಾಲಾ ಗೃಹವೂ ಅದರ ಬೇರೆ
ಾಗಗಳೂ ಬರುವದಲ್ಲದೆ ಕೆಳಗಿನ ಸಂಗತಿಗಳೂ ಬ

) ವರ್ಗಗಳ ಕೋಣೆಗಳಲ್ಲಿಯ ಸಾಮಾನುಗಳು
) ಪದ್ಧತಿ.
) ವರ್ಗಗಳ ರಚನೆ, ವೇಳಾಪತ್ರಕ.
) ಹಜಿರೀ ಬುಕ್ಕು.

ಲು ಶಾಲಾಗೃಹವನ್ನು ಕುರಿತು ಬರಿಯುವ. ಪ್ರ
ವರ್ಗಕ್ಕೆ ಒಬ್ಬೊಬ್ಬ ಶಿಕ್ಷಕನಿದ್ದು, ಅವನ ಮೇ
ಅವನ ವರ್ಗದ ಮೇಲೆಯೂ ಮುಖ್ಯ ಮಾಸ್ತರ

ನು ಬಹು ಸ್ವಲ್ಪ ಮಾತ್ರ ಅಧಿಕಾರ ನಡಿಸುತ್ತಿದ್ದಲ್ಲಿ ಒ ದೊಂದು ವರ್ಗಕ್ಕೆ ಒಂದೊಂದು ಕೋಣೆ ದೊರೆಯುವಾಗಿದ್ದ ಬಹಳ ಒಳ್ಳೇದು. ಆದರೆ ಸಾಧಾರಣ ಶಾಲೆಗಳಲ್ಲಿ ಈ ಪ್ರ ಕಾರದ ವ್ಯವಸ್ಥೆ ಇರುವದಿಲ್ಲ. ವಾಡಿಕೆಯಾಗಿ ಮುಖ್ಯ ಮಾಸ್ತರನು ಒಂದು ವರ್ಗಕ್ಕೆ ಕಲಿಸುತ್ತಿರುವದಲ್ಲದೆ, ಕಡಿಮೆ ಯೋಗ್ಯತೆಯುಳ್ಳಂಥ ಅಸಿಸ್ಟಂಟರ ಕೈಯಲ್ಲಿ ಬೇ ವರ್ಗಗಳನ್ನು ಕೊಟ್ಟು ಅವರ ಶಿಕ್ಷಣವನ್ನು ಸಹ ಲಕ್ಷ್ಯ ಟ್ಟು ನೋಡಬೇಕಾಗುತ್ತದೆ. ಇದೇ ಪ್ರಕಾರದ ವ್ಯವಸ್ಥೆ ಯು ಬಹುತರ ಎಲ್ಲ ಶಾಲೆಗಳಲ್ಲಿ ನಡಿಯುತ್ತದೆ. ಇಂ ಶಾಲೆಗಳಲ್ಲಿ ಎಲ್ಲಕ್ಕೂ ಮೊದಲು ಸಾಧಿಸಿಕೊಳ್ಳ ಕ್ಕ ಸಂಗತಿ ಯೇನೆಂದರೆ, ಬೇರೆ ಬೇರೆ ವರ್ಗಗಳಿ ರೆ ಬೇರೆ ಸ್ಥಳಗಳನ್ನು ಗೊತ್ತು ಮಾಡಬೇಕು. ಅಂ ರೆ ಒಂದು ವರ್ಗದ ವಿದ್ಯಾರ್ಥಿಗಳ ಓದಾಟದಿಂದಾಗಲಿ ಒದರಾಟದಿಂದಾಗಲಿ ಮತ್ತೊಂದು ವರ್ಗದ ಶಿಕ್ಷಕನ ಮನಸೂ ವಿದ್ಯಾರ್ಥಿಗಳ ಮನಸೂ ಏಕಾಗ್ರವಾಗಲಿಕ್ಕೆ ವಿಘ್ನವಾಗದಂತೆ ಎಚ್ಚರ ಪಡಬೇಕು. ಕಲಿಸುವವನ ಮನಸೂ ಕಲಿಯುವವರ ಮನಸೂ ಏಕಾಗ್ರವಾಗಿ ಪರಸ್ಪರರಲ್ಲಿ ಸಂಲಗ್ನವಾದ ಹೊರ್ತು ನಿಜವಾದ ಶಿಕ್ಷಣವು ಸಂಭವಿಸಲಾರದು. ಹೀಗೆ ಒಂದೊಂದು ವರ್ಗಕ್ಕೆ ಒಂದೊಂದು ಸ್ಥಳವು ಗೊತ್ತು ಮಾಡಲ್ಪಟ್ಟಾಗ್ಯೂ, ಎಲ್ಲ ವರ್ಗಗಳು ಮುಖ್ಯ ಮಾಸ್ತರರ ದೃಷ್ಟಿಗೆ ಒಮ್ಮೆಲೆ ಬೀಳುವ ಹಾಗಿರಬೇಕು. ಈ ಅನುಕೂಲತೆಯು ಎಷ್ಟೋ ಶಾಲೆಗಳಲ್ಲಿ ಇರುವದಿಲ್ಲ. ಒಮ್ಮೊಮ್ಮೆ ಇರಲಿಕ್ಕೆ ಕಟ್ಟಿದ ಮನೆಗಳೇ ಶಾಲೆಗಳಾಗಿರುತ್ತವೆ. ಅವುಗಳಲ್ಲಿಯ ಕೋಣೆಗಳು ಶಾಲೆಗೆ

ಸಕ್ಕೆ ಯೆಷ್ಟು ಮಾತ್ರವೂ ಅನುಕೂಲವಾಗಿರುವದಿಲ್ಲ. ಇ
ಮನೆಗಳಲ್ಲಿ ಶಾಲೆಯನ್ನು ಇಡುವಂಥ ಅಧಿಕಾರಿಗಳ
ಮಾಸ್ತರರೂ ಯಲ್ಲಿ ವರ್ಗಗಳು ಮುಖ್ಯ ಮಾಸ್ತರನ
ಟ್ಟಿಗೆ ಒಮ್ಮೆಲೆ ಬೀಳುವ ಹಾಗಿರಬೇಕೆಂಬ ತತ್ವವನ್ನು ಲಕ್ಷ್ಯ
ಲ್ಲ ಇಟ್ಟಿರುವದಿಲ್ಲೆಂದು ತೋರುತ್ತದೆ. ಆದರೆ ಈ ತತ್ವವನ
ನುಸರಿಸಿ ಶಾಲಾಗೃಹವನ್ನು ಮಾಡಿದ ಹೊರ್ತು ಶಿಕ್ಷಣ
ದ್ದೇಶವು ಕೈಗೂಡಲಾರದು. ಮುಖ್ಯ ಮಾಸ್ತರನು ಮೇಲ
ಶಿಕ್ಷಕನಿರುತ್ತಾನೆ, ಅಥವಾ ವೃದ್ಧ ವಿದ್ವಾಂಸನಿರುತ್ತಾನೆ
ಂಬದಿಷ್ಟೇ ಕಾರಣದಿಂದ ಅವನನ್ನು ಆ ಕೆಲಸಕ್ಕೆ ನೇಮಿ
ವದಿಲ್ಲ; ಆದರೆ ಅವನು ನಂಬಿಗಸ್ತನಾದಂಥವನೂ ಶಿಕ್ಷಣ
ಅನುಭವವುಳ್ಳವನೂ ಪರರಿಗೆ ಮಾರ್ಗ ತೋರಿಸಲಿಕ್ಕೆ
ರ್ಥನೂ ಇದ್ದು ಮೇಲಾದ ಶಿಕ್ಷಕನಿರುವದರಿಂದ ಅವನನ್ನು
ಕೆಲಸಕ್ಕೆ ನೇಮಿಸಿರುತ್ತಾರೆ. ಆದರೆ ಬೇರೆ ಬೇರೆ ವರ್ಗ
ಲ್ಲಿ ಯೇನೇನು ನಡೆಯುತ್ತದೆಂಬದು ಅವನ ದೃಷ್ಟಿಗೆ ಆಗಾ
ಬೀಳದೆ ಹೋದರೆ ಅವನಲ್ಲಿ ಈ ಗುಣಗಳಿದ್ದು ನಿಷ್ಫಲವಾ
ತ್ತದೆ.

ಯಾವನಾದರೂ ಮನುಷ್ಯನು ತನ್ನ ಕೋಣೆಯಲ್ಲಿ ಕೂ
ಕಾಗದ ಬರೆದು ದೊಡ್ಡ ಶಾಲೆಯ ಕೆಲಸವನ್ನು ನಡಿಸಲಾ
ು. ಅಭ್ಯಾಸಗಳ ಆಲೋಚನೆಯನ್ನೂ ವೇಳಾ ಪತ್ರಕವನ್ನೂ
ಕೋಣೆಯಲ್ಲಿ ಕೂತು ಮಾಡಬಹುದು. ಆದರೆ ಪ್ರತಿ ದಿವ
ಕೆಲಸವನ್ನು ಕಣ್ಣಾರೆ ನೋಡಿ ವ್ಯವಸ್ಥೆ ಮಾಡಿ, ಆಸೆ
ಯುಳ್ಳಂಥ ಶಿಕ್ಷಕರನ್ನು ಹುರಿದುಂಬಿಸಿ, ಸೋಮಾರಿಗಳಾ
ಥವರನ್ನು ಎಚ್ಚರದಿಂದ ಕೆಲಸಕ್ಕೆ ಹಚ್ಚುವಂಥ ವ್ಯ
ಯು ಯಾವತ್ತು ಶಾಲೆಯ ಮೇಲೆ ತಿರುಗುತ್ತಿದ್ದರೆ ಮಾತ್ರ

ಶಿಕ್ಷಣದ ಸಿದ್ಧಾಂತಗಳು ಪ್ರತ್ಯಕ್ಷ ಅನುಭವಕ್ಕೆ ಬರುವವು. ವರ್ಗಗಳ ಸ್ಥಳಗಳನ್ನು ವಿಚಾರದಿಂದ ಗೊತ್ತು ಮಾಡಿದ ಹೊರ್ತು ಈ ಪ್ರಕಾರದ ಅಮಲು ನಡಿಯಲಾರದು ಮೇಲೆ ಹೇಳಿದ ಯೆರಡೂ ಉದ್ದೇಶಗಳು ಒಮ್ಮೇಲೆ ಸಾಧಿಸುವ ಹಾಗಿರದಿದ್ದರೆ, ಬೇರೆ ಬೇರೆ ಕೋಣೆಗಳನ್ನು ಮಾಡುವದಕ್ಕಿಂತ ಮುಖ್ಯ ಮಾಸ್ತರನ ಲಕ್ಷ್ಯವು ಯೆಲ್ಲ ಕಡೆಯಲ್ಲಿ ಒಮ್ಮೇಲೆ ಮುಟ್ಟುವಂತೆ ವ್ಯವಸ್ಥೆ ಮಾಡುವದು ಲೇಸೆಂಬದಕ್ಕೆ ಸಂಶಯವಿಲ್ಲ.

ವರ್ಗಗಳ ಕೋಣೆಗಳು—ಇವು ಶಿಕ್ಷಕನಿಗೂ ವಿದ್ಯಾರ್ಥಿಗಳಿಗೂ ಸುಖವಾಗುವಂತೆ ಇರಬೇಕು. ಹಾಗಿದ್ದರೆ ಪಾಠಶಾಲೆಯ ಕೆಲಸವು ಚನ್ನಾಗಿ ನಡಿಯುತ್ತದೆ. ಕೋಣೆಗಳು ಸುಖವಾಗುವಂತೆ ಇರಬೇಕೆಂದರೆ—೧ ಅವುಗಳಲ್ಲಿ ಸ್ವಚ್ಛ ಹವೆಯು ಬರುತ್ತಿರಬೇಕು, ೨ ತಕ್ಕಂಥ ಬಾಕುಗಳಿರಬೇಕು, ೩ ತಕ್ಕಷ್ಟು ಬೆಳಕು ಇರಬೇಕು.

—o—

Education and Improvement.

ವಿದ್ಯಾಸುಧಾರಣೆಯ ಸಂಬಂಧವಾದ ವೃತ್ತಾಂತಗಳು.

ಈ ವರ್ಷದ ಯುನಿವರ್ಸಿಟಿಯ ಪರೀಕ್ಷೆಗಳಲ್ಲಿ ಪಾಸಾದವರಿಗೆ ಪದವಿಗಳನ್ನು ಕೊಡುವದಕ್ಕೋಸ್ಕರವಾಗಿ ಕಾನ್ವೋಕೇಶನ್ನೆಂಬ ಸಭೆಯು ಮುಂಬಯಿಯಲ್ಲಿ ಈ ತಿಂಗಳಲ್ಲಿ ಆಯಿತು. ಗವರ್ನರ ಧೊರೆ ಈ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಇದುವರೆಗೆ ಯೆಂದೂ ಕೂತಿದ್ದಿಲ್ಲ, ಈ ವರ್ಷದ ಸಭೆಯಲ್ಲಿ

ಕೂತಿದ್ದರು. ನಾಮದಾರ ಸಾಹೆಬರು ವಿದ್ಯಾಭಿಮಾನಿಗಳಾದವರಿಂದ ಇವರು ವಿದ್ಯಾಪ್ರಸಾರದ ಸಂಬಂಧವಾಗಿ; ವಿಶೇಷವಾಗಿ ಕಲಾಕೌಶಲ್ಯಗಳ ಬೆಳವಣಿಗೆಯ ಸಂಬಂಧವಾಗಿ, ತಮ್ಮ ಅಭಿಪ್ರಾಯವನ್ನು ಪ್ರಕಟಿಸುವರೆಂದು ಬಹು ಜನರು ಯೆದುರು ನೋಡುತ್ತಿದ್ದರು. ಆದರೆ ನಾಮದಾರ ಧೊರೆಗಳು ಆ ಸಂಬಂಧದಲ್ಲಿ ತಮ್ಮ ಮನೋಗತವನ್ನು ಸ್ಪಷ್ಟವಾಗಿ ತಿಳಿಸದಿದ್ದಾಗ್ಯೂ, ದೇಶಭಾಷೆಗಳ ವಿಷಯವಾಗಿ ಸಭಾಜನರಿಗೆ ಉತ್ಸಾಹ ಹುಟ್ಟುವಂತೆ ಮಾತಾಡಿದರು. ಧೊರೆಗಳವರು ಅಂದದ್ದೇನೆಂದರೆ— "ಮೇಲ್ತರದ ಶಿಕ್ಷಣಕ್ಕೂ ವ್ಯವಹಾರದ ಭಾಷೆಗಳಿಗೂ ಸಂಬಂಧವೇ ಇಲ್ಲೆಂದು ತಿಳಿದು ವ್ಯವಹಾರದ ಭಾಷೆಗಳ ಅಭ್ಯಾಸದಿಂದ ವಿದ್ಯಾರ್ಥಿಗಳಿಗೆ ಯೇನೂ ಲಾಭವಾಗುವದಿಲ್ಲೆಂದು ಪ್ರತಿಪಾದಿಸಿದರೆ, ಉಪಯುಕ್ತವಾದ ವಿದ್ಯಾಭ್ಯಾಸವನ್ನು ಕುರಿತು ಅಜ್ಞಾನವನ್ನೇ ಪ್ರಕಟಿಸಿದ ಹಾಗಾಗುತ್ತದೆ" ಇದರಿಂದ ಯುನಿವರ್ಸಿಟಿಯು ಅಭ್ಯಾಸಗಳಲ್ಲಿ ಇದುವರೆಗೆ ದೇಶಭಾಷೆಗಳನ್ನು ತಕ್ಕೊಳ್ಳದಿದ್ದದ್ದು ದೊಡ್ಡ ತಪ್ಪೆಂದು ಧೊರೆಗಳು ಸೂಚಿಸಿದರೆಂದು ತಿಳಿಯಲಿಕ್ಕೆ ಅಡ್ಡಿ ಇಲ್ಲ.

—o—

ಹಾಯಸ್ಕೂಲುಗಳನ್ನು ಸರಕಾರದವರು ಮೆಲ್ಲಮೆಲ್ಲಗೆ ಕಡಿಮೆ ಮಾಡತಕ್ಕವರಿದ್ದಾರೆಂಬ ಬೊಬ್ಬಾಟವು ಯೆಲ್ಲ ಕಡೆಯಲ್ಲಿ ಇರುತ್ತದಷ್ಟೇ. ಈ ತಿಂಗಳಲ್ಲಿ ಬೆಳಗಾವಿಯ ಹಾಯಸ್ಕೂಲಿನ ಮೇಲೆ ಸಂಕ್ರಾಂತಿ ಕೂತದ್ದು ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿರುತ್ತದೆ. ನೀವು ವರ್ಷಕ್ಕೆ ೩ ಸಾವಿರ ರೂಪಾಯಿ ಕೊಟ್ಟರೆ ನಿಮ್ಮಲ್ಲಿಯ ಹಾಯಸ್ಕೂಲು ಇದು

ತ್ತೇವೆ, ಇಲ್ಲದಿದ್ದರೆ ಅದನ್ನು ಮುಚ್ಚುತ್ತೇವೆ, ಯೆಂದು ಮಿ. ಡಾಯರೆಕ್ಟರ ಧೊರೆಗಳು ಬೆಳಗಾವಿಯ ಮ್ಯುನಿಸಿಪಾಲಿಟಿಯವರಿಗೆ ತಿಳಿಸಿದ್ದಾರಂತೆ. ಆ ಮ್ಯುನಿಸಿಪಾಲಿಟಿಯವರು ವರ್ಷಾಸನ ೧ ಸಾವಿರ ರೂಪಾಯಿ ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆಂತಲೂ ಕೇಳುತ್ತೇವೆ.

ಧಾರವಾಡದ ಹಾಯಸ್ಕೂಲಿನ ವಿಷಯವಾಗಿಯೂ ಇದೇ ಪ್ರಕಾರದ ವರ್ತಮಾನವು ಹೊರಬಿದ್ದಿರುತ್ತದೆ. ಆದರೆ ಅದು ನಿಜವೆಂದು ನಾವು ನಂಬಲಾರೆವು. ಆದರೆ ಹಾಯಸ್ಕೂಲುಗಳ ಆಯುಷ್ಯವು ಮುಗಿದದ್ದೇ ನಿಜವಾದರೆ, ವಿಜಾಪುರದಲ್ಲಿ ಹೊಸ ಹಾಯಸ್ಕೂಲು ಹುಟ್ಟುವ ಬಗೆಯೇನು? ಬೇರೆ ಹಾಯಸ್ಕೂಲುಗಳ ಗತಿಯೇನು? ಆಗಲಿ, ನಮ್ಮ ಧಾರವಾಡದ ಹಾಯಸ್ಕೂಲಿಗೆ ರಾ. ರಾ. ಮಾಧವರಾವ ಕಾಣೆ ಇವರು ಹೆಡ್‌ಮಾಸ್ತರರಾಗಿರುವ ಮಟ್ಟಿಗೆ ಯಾವ ಮಾತ್ರವೂ ಭಯವಿಲ್ಲ. ಯಾಕಂದರೆ ಈ ಹಾಯಸ್ಕೂಲಿನಿಂದ ಸರಕಾರದ ಹಣ ವೆಚ್ಚಾಗುವದಕ್ಕೆ ಬದಲಾಗಿ ಖಜಾನೆಗೆ ಭರತಿ ಬೀಳುತ್ತದೆ.

—x—

ಕಾಠೇವಾಡದ ರಾಜಕೋಟ ಯೆಂಬ ಪಟ್ಟಣದಲ್ಲಿ ರಾಜಕುಮಾರ ಕಾಲೇಜವೆಂಬದೊಂದು ದೊಡ್ಡ ವಿದ್ಯಾಲಯವಿರುತ್ತದೆ. ಅದರಲ್ಲಿ ಆ ಶೀಮೆಯ ಅರಸರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಆ ಕಾಲೇಜದ ವಾರ್ಷಿಕ ಪರೀಕ್ಷೆಯ ಸಮಾರಂಭವು ಈ ತಿಂಗಳಲ್ಲಿ ಆದಾಗ ಜನರಲ್ ಎಡ್ವರ್ಡ ಯೆಂಬ ಸರದಾರನು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿ ಭಾಷಣ ಮಾಡಿದ್ದೇನಂದರೆ — " ಈ ಕಾಲೇಜದ ವಿದ್ಯಾರ್ಥಿಗಳಿಗೆ ದಂಡಿನ ಕವಾಯಿತು ಮುಂತಾದ ವಿದ್ಯೆಗಳನ್ನು ಕಲಿಸಲಿಕ್ಕೆ

ಕರು. ಈಗ ಕಾಲೇಜಿನಲ್ಲಿ ನಡೆಯುವ ಅಭ್ಯಾಸದಲ್ಲಿ ಏ ತ್ತು ಕಡಿಮೆ ಮಾಡಬೇಕೆಂದು ನನ್ನ ಅಭಿಪ್ರಾಯವಿಲ್ಲ. ಈ ನ ಅಭ್ಯಾಸಗಳಲ್ಲಿ ನಡೆದು ದಂಡಿನ ವಿದ್ಯೆಗಳನ್ನು ಕಲಿಸ ಕೆಂದು ನಾನು ಹೇಳುತ್ತೇನೆ. ಈ ವಿದ್ಯಾರ್ಥಿಗಳು ಬಹು ಂತೋಷದಿಂದ ಆ ವಿದ್ಯೆವನ್ನು ಕಲಿಯುವರೆಂದು ನಾನು ವಿಸುತ್ತೇನೆ. ಹಿಂದುಸ್ತಾನದೊಳಗಿನ ಸರಕಾರೀ ದಂಡಿನ ಲ್ಲಿ ವಿಲಾಯತಿಯಲ್ಲಿಯಂತೆ ಸರದಾರ ಜನರು ಇರುವದು ತ್ಯವಶ್ಯವದೆ. ಇ. ,, ಈ ಭಾಷಣದಿಂದ ರಾಜಕುಮಾರರು ನಂದಭರಿತರಾಗಿ, ಪರೀಕ್ಷೆಯು ಸಮಾರಂಭ ಮುಗಿದ ಬಳಿಕ ಜನರಲ್ ಸಾಹೇಬರ ಮನೆಗೆ ಹೋಗಿ, ತಮಗೆ ದಂಡಿನ ವಿ ವನ್ನು ಕಲಿಸುವಂತೆ ಪ್ರಯತ್ನ ಮಾಡಿರೆಂದು ಅವರಿಗೆ ಬಹ ಪರಿಯಿಂದ ಹೇಳಿಕೊಂಡರು.

—o—

ಸನ್ ೧೮೮೫-೮೬ನೇ ವರ್ಷ ಹಿಂದುಸ್ತಾನದಲ್ಲಿ ಒಟ್ಟು ೧೨೯೪ ಛಾಪಖಾನೆಗಳಿದ್ದವು. ಅವುಗಳಲ್ಲಿ ವಾಯವ್ಯ ಪ್ರಾಂತದಲ್ಲಿ ೩೯೪, ಬಂಗಾಲದಲ್ಲಿ ೩೩೯, ಮುಂಬಯಿ ಇ ಖೆಯಲ್ಲಿ (ಸಂಸ್ಥಾನಗಳ ಹೊರ್ತು) ೨೨೮, ಆ ಸಂ ಸ್ಥಾನಗಳಲ್ಲಿ ೨೦, ಮದ್ರಾಸ ಇಲಾಖೆಯಲ್ಲಿ ೨೦೦, ಪಂಜಾ ದಲ್ಲಿ ೭೧, ಬ್ರಹ್ಮದೇಶದಲ್ಲಿ ೨೬, ಮಧ್ಯಪ್ರಾಂತದಲ್ಲಿ ೬, ವರಾಡದಲ್ಲಿ ೫, ಆಸಾಮಪ್ರಾಂತದಲ್ಲಿ ೪, ಕೊಡಗ ಮೆಯಲ್ಲಿ ೧, ಈ ಪ್ರಕಾರ ಇದ್ದವು. ಆ ವರ್ಷ ಮುಂಬ ಇಲಾಖೆಯಲ್ಲಿ ೧೨೪ ವರ್ತಮಾನಪತ್ರಗಳಿದ್ದವು.

—o—

ಮುಂಬಯಿ ಸರಕಾರದವರ ಕೋಟ ವರ್ಷದ ರಿಪೋರ್ಟ

ರಿಪೋರ್ಟಿನಲ್ಲಿ ದೇಶಭಾಷೆಯಲ್ಲಿ ಪ್ರಸಿದ್ಧವಾದ ಹೊಸ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಕಾಲೇಜಗಳಲ್ಲಿ ಕಲಿತಂಥ ವಿದ್ವಾಂಸರು ಹೊಸ ಗ್ರಂಥಗಳನ್ನು ರಚಿಸುವದರಲ್ಲಿ ಮನಸು ಹಾಕುವದಿಲ್ಲೆಂದು ನೋಡಿ ಸರಕಾರದವರು ಖೇದವನ್ನು ತೋರಿಸಿದ್ದಾರೆ. ಬಿ. ಎ. ಎಮ್. ಎ., ಮುಂತಾದವರಿಗೆ ಪದವಿಗಳು ದೊರಿದ ಬಳಿಕ ಹೊಟ್ಟಿ ಹೊರಕೊಳ್ಳುವ ಹೋರೆಯೊಂದು ದೊರಕಿತೆಂದರೆ ತೀರಿತು; ಅವರು ತಮ್ಮನ್ನೇ ಮರತು ಬಿಡುತ್ತಾರೆ, " गुरोर धीतं गुरवे निवेदितं " ಯೆಂದು ಹೇಳಿ ಆ ವಿದ್ಯಕ್ಕೂ ಅವನ್ನು ಕಲಿಸಿದ ಗುರುವಿಗೂ ಒಮ್ಮೇಲೆ ಕೈ ಮುಗಿದು ಬಿಡುತ್ತಾರೆ.

—o—

ಜೇಪಾನ ದೇಶದಲ್ಲಿ ೧೮ ವರ್ಷಗಳ ಹಿಂದೆ ಒಂದೇ ವರ್ತಮಾನ ಪತ್ರವಿತ್ತು. ಆದರೆ ಈಗ ೫೭೫ ವರ್ತಮಾನ ಪತ್ರಗಳು ಹೊರಡುತ್ತವೆ. ಇವಲ್ಲದೆ ಕಾಯದೆಯ ಪುಸ್ತಕಗಳು ೩೫, ಶಾಸ್ತ್ರೀಯ ಮಾಸಿಕ ಪುಸ್ತಕಗಳು ೧೧೧ ಹೊರಡುತ್ತವೆ. ನಮ್ಮ ದೇಶದಲ್ಲಿ ವರ್ತಮಾನ ಪತ್ರ ಬಂದು ೧೦೦ ವರ್ಷ ಮೀರಿ ಹೋದಾಗ್ಯೂ ಸದ್ಯಕ್ಕೆ ಯೆಲ್ಲ ಕೂಡಿ ೩೬೦ ಕ್ಕಿಂತ ಹೆಚ್ಚು ವರ್ತಮಾನ ಪತ್ರಗಳಿಲ್ಲ.

— — —

ವಿಲಾಯತಿಯ ಪಾರ್ಲಿಮೆಂಟಿನ ಸಭಾಸದರಾದ ಕೇನೆಂಬ ಧೊರೆಗಳು ಈ ದೇಶಕ್ಕೆ ಸಂಚಾರಾರ್ಥವಾಗಿ ಬಂದಿದ್ದಾರೆ. ಅವರು ಹೋದ ಹೋದಲ್ಲಿ ಸರಾಯಿಯ ಪ್ರಸಾರವು ಯೆಷ್ಟು ಬೆಳಿವದೆಂಬದನ್ನು ಕುರಿತು ಶೋಧ ಮಾಡಿ ವ್ಯಾಖ್ಯಾನಗಳನ್ನು ಕೊಡುತ್ತ ನಡೆದಿದ್ದಾರೆ. ಸರಕಾರದವರು ಜ್ಞಾನ

ಜಿಶಿ ಬಿಟ್ಟು ಸರಾಯಿಯ ವ್ಯಾಪಾರವನ್ನು ಆದಷ್ಟು ಬೇಗ ಕಡಿಮೆ ಮಾಡಬೇಕೆಂದು ಅವರ ಅಭಿಪ್ರಾಯವದೆ.

—o—

ಮುಂಬಯಿ ಸರಕಾರದ ಹೋದ ವರ್ಷದ ವಾರ್ಷಿಕ ರಿಪೋರ್ಟಿನಲ್ಲಿ ದೇಶೀ ವರ್ತಮಾನ ಪತ್ರಗಳ ಎಡಿಟರರನ್ನು ಬಹಳ ಹಳಿದಿದ್ದಾರೆ. ಈ ಎಡಿಟರ ಜನರಲ್ಲಿ ಕೆಲವರು ಸರಕಾರೀ ನೌಕರಿಯಲ್ಲಿ ಬರತರ್ಫಾದಂಥವರು, ಕೆಲವರು ಕಳವು, ವಿಶ್ವಾಸಘಾತ, ಮುಂತಾದ ಅಪರಾಧಗಳನ್ನು ಮಾಡಿ ಶರೆಮನೆಯಲ್ಲಿ ಬಿದ್ದು ಬಂದಂಥವರು, ಕೆಲವರು ನಾನಾ ಪ್ರಕಾರದ ದುರ್ಗುಣಗಳುಳ್ಳವರು ಇರುತ್ತಾರೆಂದು ಸರಕಾರದವರು ಪ್ರಕಟಿಸಿದ್ದಾರೆ. ವರ್ತಮಾನ ಪತ್ರಗಳ ಸ್ಥಿತಿಯು ಸದ್ಯಕ್ಕೆ ಹೀಗಿರುತ್ತದೆಂಬದಕ್ಕೆ ಸಂದೇಹವಿಲ್ಲ. ಯಾವ ಹೋರೆಯನ್ನೂ ಮಾಡಲಾರದಂಥವನು ವರ್ತಮಾನ ಪತ್ರವನ್ನು ಕೈಕೊಳ್ಳುವದು ಅಪರೂಪವಲ್ಲ.

—o*o—

ಸೂರ್ಯನ ಬಳಿಯಲ್ಲಿ, ಅಂದರೆ ಬುಧನಿಗೂ ಸೂರ್ಯನಿಗೂ ನಡುವೆ ಹೊಸದೊಂದು ಗ್ರಹವು ತಿರುಗುತ್ತದೆಂದು ಅಮೇರಿಕದವನೊಬ್ಬ ಜ್ಯೋತಿಷಿಯು ಬಳಗಡೆಯಲ್ಲಿ ಗೊತ್ತು ಹಚ್ಚಿದ್ದಾನೆ.

—o*o—

ಸ್ಪೆನ್ಸರನೆಂಬವನೊಬ್ಬ ಘಟ್ಟಿಗನು ಒಂದು ವಿಮಾನವನ್ನು ಮಾಡಿಕೊಂಡು ಮುಂಬಯಿಗೆ ಬಂದಿದ್ದಾನೆ. ಅವನು ಹೋದ ವಾರದಲ್ಲಿ ತನ್ನ ವಿಮಾನವನ್ನು ಹಾರಿಸಿದನು. ಅದು ೧೭೫೦ ಫೂಟು ಮೇಲಕ್ಕೇರಿದ ಬಳಿಕ ಸ್ಪೆನ್ಸರನು ಅದನ್ನು ಬಿಟ್ಟು,

ದೊಡ್ಡ ಛತ್ರಿಗೆ ಸಾಂಘಾದೊಂದು ಉಪಕರಣದ ಸಹಾಯದಿಂದ ಕೆಳಗಿಳಿದನು; ಅವನ ಹಿಂದೆ ವಿಮಾನವೂ ಇಳಿದು ಬಂತು. ಈ ಚಮತ್ಕಾರ ನೋಡಲಿಕ್ಕೆ ಸುಮಾರು ೧ ಲಕ್ಷ ಜನ ಕೂಡಿತ್ತು. ಸ್ಪೆನ್ಸರನಿಗೆ ೨೫೦೦೦ ರೂಪಾಯಿ ದೊರೆದವು.

— ೦ —

ಕರಾಚೀ ಪಟ್ಟಣಕ್ಕೆ ಬೆಂಕಿ ಹತ್ತಿ ೬೦ ಲಕ್ಷದ ಹಾನಿಯಾಯಿತು; ೩೦೦ ಮನೆಗಳು ಸುಟ್ಟವು.

ಧಾರವಾಡದ ಹಾಯಸ್ಕೂಲಿನಿಂದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ೫೭ ಜನ ಹೋಗಿದ್ದರು. ಅವರಲ್ಲಿ ೩೩ ಜನ ಪಾಸಾದರು. ಯಾವತ್ತು ಹಾಯಸ್ಕೂಲುಗಳಲ್ಲಿ ಈ ಹಾಯಸ್ಕೂಲಿನ ನಂಬರು ೪ನೇದು ಬಂದದೆ.

— ೦೦೦ —

ಇಲ್ಲಿಯ ಕೆರೆಯ ನೀರು ಇನ್ನೊಂದು ತಿಂಗಳೊಳಗೆ ಅಟ್ಟಿಸಿ ಹೋಗುವಹಾಗೆ ತೋರುತ್ತದೆ. ಮ್ಯುನಿಸಿಪಾಲಿಟಿಯವರು ನೀರಿನ ತಾಪತ್ರಯವನ್ನು ಬಿಡಿಸುವ ಪ್ರಯತ್ನವೇನೂ ಮಾಡುವಂತೆ ತೋರುವದಿಲ್ಲ.

— * —

ಹೆಸರಾದ ವಿಷ್ಣುಪಂತ ಛತ್ರೆಯೆಂಬವರ ಕುದುರೆಗಳ ಆಟ (ಸರ್ಕಸ) ಇಲ್ಲಿ ಬಂದಿತ್ತು. ೮, ೧೦ ದಿವಸಗಳಲ್ಲಿ ೮೦೦೦ ಕ್ಕಿಂತ ಹೆಚ್ಚು ಹಣವನ್ನು ಉಪಾರಿಸಿಕೊಂಡು ವಿಷ್ಣುಪಂತನು ಹುಬ್ಬಳ್ಳಿಗೆ ಹೋದನು.

— ೦ —

ಇಲ್ಲಿಯ ಮಿತ್ರಸಮಾಜದವರು ವಸಂತವ್ಯಾಖ್ಯಾನಮಾಲೆಯನ್ನು ಆರಂಭ ಮಾಡಿದ್ದಾರೆ. ಶರೀರ ಶಾಸ್ತ್ರವನ್ನು ಕುರಿ

ಹುಬ್ಬಳ್ಳಿಯ ಡಾಕ್ಟರರಾದ ಮಿ. ಕಾಡೋರೆಯೆಂಬವರು ಖ್ಯಾನ ಕೊಡುತ್ತಾರೆ. ಮೊದಲನೇ ವ್ಯಾಖ್ಯಾನವು ಮ ಷ್ಯ ಶರೀರದ ಅಸ್ಥಿ ಪಂಜರವನ್ನು ಕುರಿತು ಆಯಿತು.

ಮಿ. ಇನ್‍ಸ್ಪೆಕ್ಟರ ಸಾಹೇಬರು ಮುಂಬಯಿಂದ ಬೇಗ ರತಕ್ಕವರಿದ್ದಾರೆ.

Different degrees of Intelligence in boys of different Castes.

ಬೇರೆ ಬೇರೆ ಜಾತಿಗಳ ಹುಡುಗರಲ್ಲಿ ಬುದ್ಧಿಮಾನ ಬೇರೆ ಬೇರೆ.

ಬೇರೆ ಬೇರೆ ಜಾತಿಯ ಹುಡುಗರ ಬುದ್ಧಿಯು ಬೇರೆ ಬೇರೆ ರುತ್ತದೆ, ಅಂದರೆ ಒಬ್ಬರು ಹೆಚ್ಚು ಬುದ್ಧಿಯುಳ್ಳವರು ಒಬ್ಬರು ಕಮಿ ಬುದ್ಧಿಯುಳ್ಳವರು ಇರುವರು, ಇದರ ಕಾರಣವೇನು?

ಈ ಸೃಷ್ಟಿಯಲ್ಲಿರುವ ಪ್ರಾಣಿಗಳಲ್ಲಿ ಆಕಾರಗಳಿಂದಲೂ, ವದಿಂದಲೂ ಒಂದೇ ರೀತಿಯಾಗಿರುವ ಪ್ರಾಣಿಗಳನ್ನು ಡಿ ಬೇರೆ ಬೇರೆ ವರ್ಗಗಳನ್ನು ಮಾಡಿರುವರು. ಇವು ಲ್ಲಿ ಮನುಷ್ಯ ವರ್ಗವು ಒಂದಾಗಿದೆ. ಆದುದರಿಂದ ಒಂ ವರ್ಗದೊಳಗೆ ಸೇರುವ ಮನುಷ್ಯರೆಲ್ಲರು ಒಬ್ಬರನ್ನೊ ರು ಯಾವತ್ತು ವಿಷಯಗಳಲ್ಲಿ ಹೋಲುವರು ಎಂಬುದು ಣಿಗಳ ವರ್ಗವಿಭಾಗದ ತಾತ್ಪರ್ಯವು. ಆದರೆ ಈ ವ ದೊಳಗಿನ ಪ್ರತಿ ಒಂದು ವ್ಯಕ್ತಿಯನ್ನು ಕುರಿತು ವಿಚಾ ಸಲು; ಯಾವತ್ತೂ ಗುಣಗಳು ಸರ್ವರಲ್ಲಿ ಸರಿಯಾಗಿ ದೊ ಯುತ್ತಿದ್ದಾಗ್ಯೂ ಬುದ್ಧಿಯು ಸರ್ವರಲ್ಲಿ ಸರಿಯಾಗಿ ಇ ವದಿಲ್ಲ. ಹೀಗಿರುವ ಕಾರಣವೇನು? ಎಂಬುದನ್ನು ಕುರಿತು

ವಿಚಾರಿಸುವದರಿಂದ ಗೊತ್ತಾಗುವ ಸಂಗತಿಗಳೇ ನಮ್ಮ ಈಗಿನ ವಿಷಯವನ್ನು ಸಿದ್ಧ ಮಾಡುವದಕ್ಕೆ ಸಹಾಯ ಭೂತವಾಗುವವು. ಆದದರಿಂದ ಮನುಷ್ಯರಲ್ಲಿ ಬುದ್ಧಿಯ ಸಂಬಂಧದಿಂದ ಬೇರೆ ಬೇರೆ ವರ್ಗಗಳಾಗುವದನ್ನು ಕುರಿತು ಆಲೋಚಿಸುವಾ.

ಮನುಷ್ಯರ ತಲೆಗಳಲ್ಲಿ ಮಿದುಡೆಂಬ ಅವಯವವಿರುತ್ತದೆ. ಇದರ ಉಪಯೋಗವು ವಿಚಾರ ಶಕ್ತಿಯನ್ನು ಕೊಡುವದು. ನಾವು ಹುಟ್ಟಿದಾಗ್ಗೆ ಈ ಮಿದುಡಿನ ಶಕ್ತಿಯು ಬಹಳ ಕಡಿಮೆ ಮಾನದಿಂದ ಇರುವದು. ಇದರ ಉಪಯೋಗವನ್ನು ನಾವು ಮಾಡಿಕೊಂಡಷ್ಟು ಇದರ ಶಕ್ತಿಯು ಬೆಳೆಯುತ್ತದೆ. ಆದರೆ ಈ ಮಿದುಡು ಸರ್ವತ್ರರಲ್ಲಿಯೂ ಸರಿಯಾಗಿ ಇರುವದಿಲ್ಲ. ಇದರ ಕಾರಣವನ್ನು ಹೇಳುವದಕ್ಕೆ ನಾವು ಶಕ್ತರಲ್ಲ. ಯಾಕಂದರೆ ಸೃಷ್ಟಿ ನಿಯಮದ ತತ್ವಗಳು ನಮಗೆ ಗೊತ್ತಿಲ್ಲ. ಕಡಿಮೆ ಮಿದುಡುಳ್ಳವರು ಕಡಿಮೆ ಬುದ್ಧಿಯುಳ್ಳವರಾಗುವದು ಸ್ವಾಭಾವಿಕವೇ. ಇದರ ಬಗ್ಗೆ ವಿಚಾರ ಮಾಡಿ ಪ್ರಯೋಜನವಿಲ್ಲ. ಈಗಿನ ನಮ್ಮ ವಿಷಯವು ಸರಿಪದಾರ್ಥಗಳ ಸಂಬಂಧವಾಗಿರುವ ಕಾರಣ ಸರಿಯಾಗಿ ಮಿದುಡುಳ್ಳವರು ಬೇರೆ ಬೇರೆ ಬುದ್ಧಿಯುಳ್ಳವರಾಗುವದಕ್ಕೆ ಕಾರಣವೇನು? ಎಂಬದನ್ನು ವಿಚಾರಿಸಲಾಗಿ, ಮೇಲೆ ಬರೆದಂತೆ ಮಿದುಡಿನ ಉಪಯೋಗವು ಹೆಚ್ಚು ಆದ ಹಾಗೆ ಬುದ್ಧಿಯು ಬೆಳೆಯುತ್ತದೆ. ಎಂಬದರ ಮೇಲಿಂದ ಕಡಿಮೆ ಬುದ್ಧಿಯುಳ್ಳವರು ಮಿದುಡಿನ ಉಪಯೋಗವನ್ನು ಕಡಿಮೆ ಮಾಡಿಕೊಂಡಿರುವರೆಂತಲೂ, ಹೆಚ್ಚು ಬುದ್ಧಿಯುಳ್ಳವರು ಹೆಚ್ಚು ಉಪಯೋಗ ಮಾಡಿಕೊಂಡಿರುವರೆಂತಲೂ ಕಂಡು ಬರುವದು. ಹೂವುಗಳಿಂದ ತುಂಬಿರುವ ಮಲ್ಲಿಗೆಯ ಬಳ್ಳಿಯು ಎರಡು ಮನೆಗಳಲ್ಲಿ ಒಂ

ಉಂಡರೊಳಗೆ ಒಬ್ಬೊಬ್ಬನಂತೆ ಕಳುಹಿಸಲಾಗಿ ಹೆಚ್ಚು ಬ
ಗೆ ಪ್ರವೇಶಿಸಿ ಹೆಚ್ಚು ಶ್ರಮಪಟ್ಟವನು ಬಹಳ ಹೂವುಗ
ನ್ನು ತರುವನೆಂತಲೂ, ಮುಂಭಾಗದಲ್ಲಿಯೇ ನಿಂತು ಸ್ವ
ಲ್ಪ ಶ್ರಮ ಪಟ್ಟವನು ಕಡಿಮೆ ಹೂವುಗಳನ್ನು ತರುವನೆಂ
ಲೂ ವ್ಯವಹಾರದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇದ
ತೆಯೇ ಮಿದುಳಿನ ಉಪಯೋಗವೆಂಬ ಮನೆಯಲ್ಲಿ ಮನು
ನು ಎಷ್ಟು ಮಟ್ಟಿಗೆ ಪ್ರವೇಶಿಸುವನೋ, ಮತ್ತು ಎಷ್ಟು
ಟ್ಟಿಗೆ ಶ್ರಮಪಡುವನೋ ಅಷ್ಟು ಮಟ್ಟಿಗೆ ಬುದ್ಧಿಯು ದೊ
ಯುತ್ತದೆಂಬುವದು ಸಹಜವೇ. ಹೀಗೆ ಸರಿಯಾದವರಿಬ್ಬರು
ತಾವು ಮಾಡತಕ್ಕ ಕೆಲಸಗಳಲ್ಲಿ ಹೆಚ್ಚು ಕಡಿಮೆ
ಾಗಿ ಯಾಕೆ ಮಾಡುತ್ತಾರೆ. ಎಂಬದಕ್ಕೆ ಹಲವು ಕಾರಣ
ುಂಟು. ಮನುಷ್ಯನು ತನಗೆ ಯಾವದೊಂದು ಪದಾರ್ಥದ
ರತೆ ಬಿದ್ದಾಗ ಮಾತ್ರ ಅದನ್ನು ದೊರಕಿಸುವದಕ್ಕೆ ಪ್ರಯ
ಮಾಡುತ್ತಾನೆಂಬುವದು ಸ್ವಾಭಾವಿಕವಾದ ಮಾತು. ನಮ್ಮ
ಶದ ಐಶ್ವರ್ಯವಂತರು ತಮಗೆ ಇರುವ ಅನುಕೂಲತೆಯಿಂ
ತಮ್ಮ ನಿರ್ವಾಹವು ಏನು ತೊಂದರೆ ಇಲ್ಲದೆ ಸಾಗುತ್ತಿ
ವದರಿಂದ, ಎರಡನೇ ಕಡೆಗೆ ಹೋಗುವ ಪ್ರಸಂಗ ಬಾರ
ಂದ, ಎಲ್ಲಿಯೂ ಹೋಗದೆ, ಬೇರೆ ಕೆಲಸ ಮಾಡಿದರೆ
ತ್ರ ಮರ್ಯಾದೆಗೆ ಹಾನಿ, ಎಂಬ ಮೂಢತನದ ನೆವನವನ್ನು
ಳುತ್ತ ಸ್ವಸ್ಥ ಮನೆಯಲ್ಲಿ ಕೂಡ್ರುವರು. ಅದೇ ಅವ
ಬಡತನ ಬಂದರೆ ಬೇಕಾದಲ್ಲಿ ಹೋಗಿ ಬೇಕಾದ ಕೆಲ
ಮಾಡ ಹತ್ತುವರು. ಇದು ಕಣ್ಗಂಡ ಉದಾಹರಣವು.
ಾ ಅನೇಕ ಉದಾಹರಣೆಗಳನ್ನು ಕೊಡಬಹುದು. ನಮ್ಮ
ಷ್ಟ ಫಲ ಭರಿತವಲ್ಲದಂಥ ರಾಜ್ಯದ ಜನರು ತಮ್ಮ

ಲ್ಲಿ ಏನು ಮಾಡಿದಾಗ್ಯೂ ಹೊಟ್ಟೆಗೆ ಸಿಗುವದಿಲ್ಲೆಂಬ ಕಾರಣದಿಂದಲೇ ಪರದೇಶಗಳಿಗೆ ಹೋಗಿ ಹೊಟ್ಟೆ ತುಂಬಿಕೊಳ್ಳುತ್ತಿರುವ ಅನೇಕ ಜನರನ್ನು ನಾವು ಕಾಣಬಹುದು. ಮನುಷ್ಯನ ಸ್ಥಿತಿಯು ಹೀಗಿರುವದರಿಂದ ನಮ್ಮ ದೇಶದಲ್ಲಿ ಕೆಲವರು ಸಹಜವಾಗಿ ತಮ್ಮ ಹೊಟ್ಟೆ ತುಂಬುತ್ತಿರುವ ಕಾರಣ ತಮ್ಮ ಬುದ್ಧಿಯನ್ನು ಅಷ್ಟು ಹೆಚ್ಚು ಬೆಳಸುವದಿಲ್ಲ. ತಮ್ಮ ಬುದ್ಧಿಯ ಬಲದಿಂದಲೇ ಹೊಟ್ಟೆ ತುಂಬಿಕೊಳ್ಳ ಬೇಕೆಂಬವರು ಮಾತ್ರ ತಮ್ಮ ಮೆದುಳಿನ ಉಪಯೋಗವನ್ನು ಹೆಚ್ಚು ಮಾಡುತ್ತಾರೆ. ಈ ಕಾರಣದಿಂದಲೇ ಹೆಚ್ಚು ಬುದ್ಧಿಯುಳ್ಳವರೂ, ಕಡಿಮೆ ಬುದ್ಧಿಯುಳ್ಳವರೂ ಎಂಬ ಎರಡು ವರ್ಗಗಳಾಗುತ್ತವೆ.

ನಮ್ಮ ದೇಶದಲ್ಲಿ ಹೆಂಗಸರೆಲ್ಲರೂ ಮನೆಯೊಳಗಿನ ಕೆಲಸಗಳನ್ನೇ ಮಾಡಬೇಕು. ಗಂಡಸರು ದುಡಿದು ತರಬೇಕು ಎಂಬ ನಡಾವಳಿಯುಂಟು. ಆದದರಿಂದ ಗಂಡಸರು ಮಾತ್ರ ತಮ್ಮ ಕೆಲಸದ ಸಲುವಾಗಿ ಬುದ್ಧಿಯ ಸಹಾಯವನ್ನು ಅಪೇಕ್ಷಿಸಿ ಅದನ್ನು ಸಾಕಷ್ಟು ಪಡಕೊಳ್ಳುವರು. ಆದದರಿಂದಲೇ ಹೆಂಗಸರಕಿಂತಲೂ ಗಂಡಸರ ಬುದ್ಧಿಯು ಹೆಚ್ಚಿಗಿರುವದು. ಇದರಂತೆಯೇ ನಮ್ಮ ದೇಶದಲ್ಲಿ ಇರುವ ಬೇರೆಬೇರೆ ಜಾತಿಯ ಜನರು ಬೇರೆಬೇರೆ ಉದ್ಯೋಗಗಳನ್ನು ಹಂಚಿಕೊಂಡಿರುವರು. ಆ ಬೇರೆಬೇರೆ ಕೆಲಸಗಳಿಗೆ ಬುದ್ಧಿಯ ಸಹಾಯವು ಹೆಚ್ಚು ಕಡಿಮೆಯಾಗಿ ಬೇಕಾಗುವದು. ಆದದರಿಂದಲೇ ಬೇರೆಬೇರೆ ಜಾತಿಯ ಜನರ ಬುದ್ಧಿಯು ಹೆಚ್ಚು ಕಡಿಮೆಯಾಗಿರುವದು. ಈ ಸಂಗತಿಯನ್ನು ಸ್ಪಷ್ಟ ಮಾಡುವದಕ್ಕಾಗಿ ಉದ್ಯೋಗದಲ್ಲಿ ಮೂರು ವರ್ಗಗಳನ್ನು ಮಾಡುವಾ. ೧ ಸರಕಾರದ ಚಾಕರಿ

ಲಾಕೌಶಲ್ಯವೂ ವ್ಯಾಪಾರವೂ, ಈ ಒಕ್ಕಲತನದ ಕೆಲ
ು. ಈ ಮೂರು ತರದ ಉದ್ಯೋಗಗಳಲ್ಲಿ ಮೊದಲಿನ ಎರ
ಬಗೆಯ ಉದ್ಯೋಗಗಳಿಗೆ ಒಕ್ಕಲತನದ ಉದ್ಯೋಗಕ್ಕಿಂ
ಚ್ಚು ಬುದ್ಧಿ ಬೇಕಾಗುತ್ತದೆ. ಯಾಕಂದರೆ ಒಕ್ಕಲತನದ
ಮಾಡುವದಕ್ಕೆ ಹಿರಿಯರು ಮಾಡಿದ ಪದ್ಧತಿಯೊಂದು ಗೊ
ರೆ ಸಾಕು. ಅದರಿಂದಲೇ ಕೆಲಸ ಸಾಗಿಸಬಹುದು. ಬು
ಯೂ ಸ್ವಲ್ಪ ಬೇಕಾಗುವದು. ಆದರೂ ಮೊದಲಿನ ಎರ
ಉದ್ಯೋಗಗಳಿಗಿಂತ ಕಡಿಮೆ. ಹುಟ್ಟು ಬುದ್ಧಿಯೇ ಸಾ
ಅಂದಮೇಲೆ ಒಕ್ಕಲತನದವರು ತಮ್ಮ ಬುದ್ಧಿಯನ್ನು ಬೆ
ಲಿಕ್ಕೆ ಯಾಕೆ ಹೋದಾರು.! ಬೇಕಾಗದ ಒಣವೆಯು ಗೊ
ಗೆ ಹೋಗುವದೇ ಇಲ್ಲೆಂದು ಮೇಲೆ ತೋರಿಸಿಯೇ ಇದ್ದೇ
ದದರಿಂದ ಇವರು ಕಡಿಮೆ ಬುದ್ಧಿವಂತರಾಗುವದು ಸ್ವಾ
ಕವು. ಮೊದಲಿನೆರಡು ಉದ್ಯೋಗಗಳಲ್ಲಿ ಅಂದರೆ
ಕಾರದ ಚಾಕರಿ ಮತ್ತು ಕಲಾಕೌಶಲ್ಯವು, ವ್ಯಾಪಾರವು
ಗಳಲ್ಲಿ ಬುದ್ಧಿಯ ಉಪಯೋಗವು ಒಂದರಕಿಂತಲೂ ಒಂ
ಲ್ಲಿ ಹೆಚ್ಚು ಆಗಬೇಕಾಗುವದು. ಅದದರಿಂದ ಈ ಉದ್ಯೋ
ರು ತಮ್ಮ ಕೆಲಸಗಳ ಸಹಾಯಗಳಿಗಾಗಿ ಓದುಬರಹ
ದಲ್ಲಿ ಇಲ್ಲದೆ ಕಲಾಕೌಶಲ್ಯದ ವಿಷ್ಯದಲ್ಲಿ ಹೆಚ್ಚು ಶ್ರ
ಪಟ್ಟು ಮಿದುಳಿನ ಉಪಯೋಗವನ್ನು ಬೆಳೆಸುವರು. ಆದರೆ
ರವು ಎಲ್ಲರಕಿಂತಲೂ ಶ್ರೇಷ್ಠವಾದದರಿಂದ ಅದರ ಚಾ
ಗೆ ಶ್ರೇಷ್ಠರೆಂದೆನ್ನುವರು. ಶ್ರೇಷ್ಠರು ಮಾಡಿದ ಕೆಲಸವು
ವಾದದ್ದೆಂದು ತಿಳಿಯುವ ರೂಢಿಯು ಜನರಲ್ಲಿ ಉಂಟು.

(ಮುಂದೆ ಸಾಗುವದು.)

—೦—

Notices.
ನೋಟೀಸುಗಳು.

ಹಲ್ಯಾಳದಲ್ಲಿಯ ಹೆಣ್ಣುಮಕ್ಕಳ ಶಾಲೆಯ ಮಾಸ್ತರ
ದ ರಾ. ರಾ. ಲಕ್ಷ್ಮಣ ತ್ರಿಮಲ ಖಾನಾಪೂರ ಇವರು ಸ
೧೮೮೮ನೇ ಇಸ್ವಿ. ಸಪ್ಟಂಬರ ೩ನೇ ತಾರೀಖು ಸೋಮವಾ
ರ ದಿವಸ ಧಾರವಾಡದಲ್ಲಿ ಆದ ವರ್ಥಪ್ರೈಜ ಪರೀಕ್ಷೆಯ
ಪಾಸ್ ಆದದ್ದರಿಂದ ಅವರಿಗೆ " ವರ್ಥಪ್ರಾಯಿಜ " ಎಂ
೪೦ ರುಪಾಯಿಯ ಮೊದಲನೇ ಇನಾಮು ಕೊಡಲ್ಪಟ್ಟಿ

ಧಾರವಾಡ
೧೬ನೇ ಜಾನ್ಯುಆರಿ
ಸನ್ ೧೮೮೯

(Signed) S. V. Patwardha
Educational Inspector S. D

—o✱o—

ಜ್ಞಾಪಕ ನಂಬರ ೧೯೩೬

ವಿಜಾಪೂರ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತ
ಜನರಿಗೆ—

ಕೆಳಗೆ ಸಹಿ ಮಾಡುವವರ ಕಡಿಯಿಂದಾ ತಿಳಿಯಪಡಿಸುವದೇ
ನಂದರೆ—

ಬಿನ್ನ ಇಯತ್ತೆಯ ಮೊದಲಿನ ಎರಡು ಹೆಡ್ಡುಗಳನ್ನು ಬಿ
ಟ್ಟು ಉಳಿವ ಹೆಡ್ಡುಗಳ ಅಭ್ಯಾಸ ೫—೬ ರೂಪಾಯಿ ಪಗಾ
ಉಳ್ಳ ಅಸಿಷ್ಟಂಟ ಮಾಸ್ತರರ ಕಡಿಯಿಂದಾ ಬಿಲಕುಲ್ ಆಗು
ಹಾಗಿಲ್ಲ. ಆದದರಿಂದ ಈ ಸರಕ್ಯುಲರ ದ್ವಾರ ಎಲ್ಲಾ ಹೆಡ್ಡ
ಮಾಸ್ತರರಿಗೆ ತಿಳಿಸುವದೇನಂದರೆ ಹೆಡ್ಡಮಾಸ್ತರರೇ ಈ ವಿಷ

ನ್ನು ಸ್ವತಃ ಕಲಿಸಬೇಕು. ವರ್ಷಕ್ಕೆ ಪ್ರತಿಯೊಂದು ಕೆ
ನ ೧೫ ವಿಷಯಗಳು ಆದರೆ ಸಾಕು.

ಹೊಲ ಮಾಡುವವನು ಮುಂದಿನ ಬೀಜವನ್ನು ಹ್ಯಾಗೆ ಅರಿ
ಜೋಕೆ ಮಾಡಿಡುತ್ತಾನೋ ಅದೇ ಮೇರಿಗೆ ಬಿನ್ನ ಇಯತ್ತೆ
ು ಹುಡುಗರ ಕಡಿಗೆ ಹೆಡ್ಡಮಾಸ್ತರರ ಲಕ್ಷವಿರಬೇಕು. ಬಿಂ
ಇಯತ್ತೆ ಕೆಟ್ಟರೆ ಭಾವೀ ಸಾಲಿಯೇ ಕೆಡುತ್ತದೆ. ತಿಳಿಯ
ಸು ತಾ|| ೩ | ೧ | ೮೯ ಇಸ್ವಿ.

S. R. Savadi.

अगटिंग डे. ए. इ. जि. विजापूर.

ನೋಟೀಸು

೧೯೨೫

ವಿಜಾಪುರ ಜಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತ
ಜನರಿಗೆ ತಿಳಿಯ ಪಡಿಸುವದೇನಂದರೆ —

ಪಾಂಡುರಂಗ ಬಾಳಾಜಿ ಸ್ಕೂಲಮಾಸ್ತರ ನಿಡೋಣಿ ತಾ
ಕ ವಿಜಾಪುರ ಇವರು ತಮ್ಮ ಅಗಟಿಂಗ ಮನುಷ್ಯನ ಪಗಾರ
ತಕ್ಕದಲ್ಲದಿದ್ದು ಅದನ್ನು ತೆಗೆದುಕೊಂಡು ಸದರ ಅಗಟಿಂ
ಮನುಷ್ಯನ ಕಡಿಯಿಂದ ಬೇ ಕಾಯಿದೆ ಪಾವತಿಯನ್ನು ತೆಗೆ
ಕೊಂಡು ಅವನಿಗೆ ಆ ಪಗಾರ ಮುಟ್ಟಿಸುವಲ್ಲಿ ಬಹು ಸಂ
ಯ ಬರುವಂತೆ ನಡೆದದ್ದರ ಪುರಾವೆಯಾದದರಿಂದಲೂ, ಸಾ
ಲಿನ ಹೋದವರ್ಷ ಕೆಟ್ಟ ಮಾಡಿದ್ದರಿಂದಲೂ; ಮೇಲ,
ನ ಎ. ಇನಸ್ಪೆಕ್ಟರ ಸಾಹೇಬ ಬಾಹದ್ದೂರ ಪ್ರಾಂತದ
ಭಾಗ ಇವರ ಹುಕುಮಿನ ಮೇಲಿಂದ ಅವರನ್ನು ಕೆಲಸದಿಂ

ಷ ಟೀಕೆ ಮಾಡುತ್ತೇವೆ. ಅಪ್ರಮಾಣಿಕತನಕ್ಕೆ ಆದ ಈ ಶಿ
ಯನ್ನು ಎಲ್ಲ ಮಾಸ್ತರರು ಲಕ್ಷದಲ್ಲಿಟ್ಟು ಜಾಗ್ರತೆಯಿಂದ ನ
ಯುತಕ್ಕದ್ದು.

(ಬ) ಉಕ್ಕಲಿ ತಾಲೂಕ ಬಾಗೇವಾಡಿ ಇಲ್ಲಿಯ ಹೆಡ್ಡ
ಮಾಸ್ತರರಾದ ರಾ. ವಿಷ್ಣು ಕೃಷ್ಣ ಜೇವಾಲಿ ಇವರು ತಮ್ಮ
ಸಾಲೆ ಪ್ರಾತಃಕಾಲಕ್ಕೆ ೮ ಘಂಟೆಯ ನಂತರ ಆರಂಭ ಮಾ
ಡುತ್ತಾರೆಂಬವೂ ಹಾಗು ಸುಳ್ಳು ಹಾಜರಿ ಹಾಕಿಬಿದ್ದಾರೆಂಬವೂ
ವೇಳೆ ವೇಳಕ್ಕೆ ಟಾಯಿಂಟೇಬಲ ಪ್ರಕಾರ ಅಭ್ಯಾಸ ನಡಿಸ
ಲ್ಲವೆಂದು ಪುರಾವೆಯಿಂದ ಸಿದ್ಧವಾದ ಕಾರಣ ಅವರನ್ನು
ಟಪಾಲ ಆಫೀಸಿನ ಲಿಖಿವನಸ ರು. ೪ ಪಟ್ಟಿನ ಸ್ಥಳದ
ದ ಸಮ ಪಗಾರದ ಮೇಲೆ ಮೇಲಬರ್ಜನಗಿ ಮಾಡಿ ಮೆ
ಎ. ಇನಸ್ಪೆಕ್ಟರ ಸಾಹೇಬ ಬಹದ್ದೂರವರು ಟಪಾಲ ಆಫಿ
ಸಿನ ಸಾಗವಾತ ತಾಲೂಕ ವಿಜಾಪುರಕ್ಕೆ ವರ್ಗ ಮಾಡಿದ
ರೆ. ಸಮ ಪಗಾರದ ಮೇಲೆ ವರ್ಗವಾದರೆ ಒಂದು ತರದ ಶಿ
ಕ್ಷೆಯೇ ಸೈ. ಹಾಗು ಟಪಾಲ ಸಂಬಂಧ ಪಗಾರ ರೂಪಾಯಿ
೪ ಕಳಕೊಂಡದ್ದು ಎರಡನೇ ಶಿಕ್ಷೆ. ಈ ಪ್ರಕಾರ ತಮ್ಮ
ಕರ್ತವ್ಯ ಕರ್ಮಕ್ಕೆ ವಿಮುಖರಾದ ಈ ಮಾಸ್ತರರಿಗೆ ವಿಧಿಸ
ಟ್ಟ ದಂಡನೆಯನ್ನು ಎಲ್ಲರು ಲಕ್ಷದಲ್ಲಿಡತಕ್ಕದ್ದು.

ತಿಳಿಸುವದು ತಾ. ೩-೧-೮೯ ಇಸವಿ.

S. R. Savadi
ಆಕ್ಟಿಂಗ ಡೆ. ಎ. ಇ. ಜ ವಿಜಾಪುರ.

* * *

History of the Middle Ages.

ಯುರೋಪದ ಮಧ್ಯಕಾಲದ ಇತಿಹಾಸವು.

(೩೮ನೇ ಪುಟದಿಂದ ಮುಂದೆ ಸಾಗಿದ್ದು.)

ತರುವಾಯ ಈ ಚಕ್ರವರ್ತಿಯು ಲಾಂಬರ್ಡಿಯಲ್ಲಿ ತನ್ನ
ಧಿಕಾರವನ್ನು ಪೂರ್ಣವಾಗಿ ಸ್ಥಾಪಿಸುವ ಪ್ರಯತ್ನ ನಡಿಸಿ
ನ್ನು. ಆದದರಿಂದ ಅಲ್ಲಿಯ ನಿವಾಸಿಗಳು ಗುಪ್ತದಿಂದ ಪ್ರ
ಸಂಚು ಮಾಡಿಕೊಂಡಿರಲಾಗಿ, ಫ್ರೆಡರಿಕನು ಪೋಪನ ಸಂ
ತ ವಿರೋಧ ಬಳಸಿ ರೋಮಕ್ಕೆ ಮುತ್ತಿಗೆಯು ಹಾಕಿದ
, ೧೧೬೭ ಆದರೆ ಅವನ ಸೈನ್ಯವು ರೋಗದಿಂದ ನಾ
ಪಟ್ಟು ಅವನು ಹಿಂದಿರುಗಿ ಹೋಗಿ, ಕೆಲವು ವರ್ಷ ಯು
(ಕಲಹವನ್ನು ನಡಿಸಿ, ಸನ್ ೧೧೭೬ನೇ ವರ್ಷದಲ್ಲಿ
ಲಾನದವರ ಸಂಗಡ ಯುದ್ಧಕ್ಕೆ ನಿಂತು ಅಪಜಯ ಪಟ್ಟ
ು ಇದರಿಂದ ಲಾಂಬರ್ಡಿಯ ನಿವಾಸಿಗಳು ಪುನಃ ಪೆಸದ
ಂತೆ ಚಕ್ರವರ್ತಿಯ ಅಧಿಕಾರವನ್ನು ಮಾತ್ರ ಒಪ್ಪಿಕೊಂ
ಡು ಯೆಲ್ಲ ಕೆಲಸಗಳಲ್ಲಿ ಸ್ವತಂತ್ರರಾದರು. ಈ ನಿವಾಸಿಗ
ಳು ವಾಡಿಕೆಯಾಗಿ ಪೋಪನಿಗೆ ಆಶ್ರಯ ಕೊಡುವರು.

ಇಟಲಿ- ನೇಪಲ್ಸ್, ಸಿಸಲಿ.

ಈ ಪ್ರಾಂತಗಳನ್ನು ಸಿಸಿಲಿಯ ಕೌಂಟನಾದ ರೋಜರನೆಂ
ವನ ವಂಶದವರು ಅರಸರಾಗಿ ಆಳುತ್ತಿದ್ದರು. ಆದರೆ ಸನ್
೧೯೪ನೇ ವರ್ಷ ಚಕ್ರವರ್ತಿಯು ಇವುಗಳನ್ನು ಕೈವಶ
ಮಾಡಿಕೊಂಡು, ಮೊದಲಿನ ಅರಸನಿಗೆ ಅತಿ ಕ್ರೂರತನವ
ನ್ನು ತೋರಿಸಿದನು. ೨ನೇ ಫ್ರೆಡರಿಕನು ಹುಟ್ಟಿದ ಬಳಿಕ ಇ

ವನ ತಾಯಿಯು ಈ ಶೀಮೆಗಳನ್ನು ಅವನ ಹೆಸರಿನಿಂದ
ಳುತ್ತಿದ್ದಳು ಅವಳು ತೀರಿದ ಬಳಿಕ ೩ನೇ ಇನೋಸೆಂತ
ಆ ಹುಡುಗನ ಸಂರಕ್ಷಿಕನಾಗಿ, ಈ ಶೀಮೆಗಳ ಆಳಿಕೆಯನ
ಕೈಕೊಂಡು, ತನ್ನ ಸಂಸ್ಥಾನಕ್ಕೆ ಸಾಧಿಸಿದಷ್ಟು ಲಾಭಗಳನ
ಸಾಧಿಸಿದನು.

ಜರ್ಮನಿಯ ಸ್ವಾಬಿಯನ್' ವಂಶವು.

೫ನೇ ಹೆನರಿಯೋ ಫ್ರಾಂಕೋನಿಯನ್' ಮನೆತನದ ಕ
ಯು ಚಕ್ರವರ್ತಿಯು ಅವನು ತೀರಿದ ಬಳಿಕ ಸಾಕ್ಸನಿ
ಡ್ಯೂಕನಾದ ಲೋಥೆಯರನೆಂಬವನು ಚಕ್ರವರ್ತಿಯ ಪದ
ನ್ನು ಪಡೆದನು. ಅವನ ತರುವಾಯ (೧೧೩೮) ಸ್ವಾಬಿ
ಯ ಡ್ಯೂಕನ ಮನೆತನದವನಾದ ಕಾನರಾಡನೆಂಬವನು ಚಕ್ರ
ರ್ತಿಯಾಗಿ ನೇಮಿಸಲ್ಪಟ್ಟನು. ಇವನು ನೇಮಿಸಲ್ಪಡುವ ಪ
ರ್ವದಲ್ಲಿ ಬವೇರಿಯದ ಡ್ಯೂಕನಾದ ಹೆನರಿ ಯೆಂಬವ
ಚಕ್ರವರ್ತಿಯಾಗಲಿಕ್ಕೆ ಹವಣಿಸುತ್ತಿದ್ದನು. ಆದದರಿಂದ ಕಾ
ರಾಡನು ಆ ಡ್ಯೂಕನ ಆಸ್ತಿಗಳನ್ನೆಲ್ಲ ಕಸುಕೊಂಡು, ಅ
ನ ಸಂಗಡ ವಿರೋಧ ಬಳೆಸಲಾಗಿ, ಮುಂದೆ ಪ್ರಸಿದ್ಧಿಗೆ
ದ ಗೆಲ್ಫ್, ಘಿಬಲಿನ್ನೆಂಬ ಬಣಗಳು ಉಂಟಾದವು.

೩ನೇ ಕಾನರಾಡನು ಸಾಯುವಾಗ ತನ್ನ ತಮ್ಮನ ಮ
ನೂ ಸ್ವಾಬಿಯದ ಡ್ಯೂಕನೂ ಆದ ಫ್ರೇಡರಿಕ ಬಾರ್ಬರ
ಸಾ ಯೆಂಬವನನ್ನು ತನ್ನ ಹಿಂದೆ ನೇಮಿಸಬೇಕೆಂದು ಹೇ
ದ್ದನು, ೧೧೫೨ ಆದದರಿಂದ ಅವನೇ ನೇಮಿಸಲ್ಪಟ್ಟನು.
ಡರಿಕನು ಬಹು ಸಮರ್ಥನೂ ಶೂರನೂ ಇದ್ದನು ಇವ
ಲೊಂಬರ್ಡಿಯವರ ಸಂಗಡ ನಡಿಸಿದ ಕಲಹಗಳನ್ನು ಹಿಂ

ಳಿರುತ್ತೇವೆ. ಆಗ ರೋಮದ ಜನರೊಳಗೆ ವ್ಯಾಜ್ಯ ಪ್ರ ಟ, ನಾಲ್ಕನೇ ವಿಕ್ಟರನೆಂತಲೂ, ಮೂರನೇ ಅಲೆ ಂಡರನೆಂತಲೂ ಒಮ್ಮೇಲೆ ಇಬ್ಬರು ಪೋಪಗಳಾಗಿದ್ದರು. ಡರಿಕನು ವಿಕ್ಟರನ ಪಕ್ಷವನ್ನು ಸ್ವೀಕರಿಸಿದ್ದನು. ಫ್ರಾನ್ಸ, ಂಗ್ಲಂಡಗಳ ಅರಸರೂ ಲಾಂಬರ್ಡಿಯವರೂ ಅಲೆಕ್ಸಾಂಡ ಪಕ್ಷವನ್ನು ಸ್ವೀಕರಿಸಿದ್ದರು.

(ಮುಂದೆ ಸಾಗುವದು.)

Correspondence.

ಪತ್ರವ್ಯವಹಾರವು.

೧೮೮೮ ಇ. ದಶೆಂಬರ ೨೮೮ನೇ ಪುಟದಿಂದ ಮುಂ. ಸಾ.)

೨ನೇದು ಫೀ ಹಣದ ನಿಮಿತ್ಯಾರ್ಥವಾಗಿ ಮಾಸ್ತರ ಜನ ಜೊಬ್ಬಾಟವು ನಡದೇ ಇರುವದು. ಫೀ ಹಣ ಎಲ್ಲ ವಸೂ ಮಾಡಿ ಕಳಿಸಬೇಕಾದರೆ ಬಹು ಪ್ರಯಾಸ ಹ್ಯಾಗೆಂದರೆ ಹಣ ಕೇಳಿದರೆ ಸಂತಿಯು ಮಾಡಿ ಇಲ್ಲವೇ ಅಮಾವಾಸಿಗೆ ತಾ ಎರಡು ತಿಂಗಳು ಸುಸ್ತಿ ಮಾಡಿ, ಒಮ್ಮೆ ನಾಲ್ಕು ದುಡ್ಡು ಕ್ಕಾ ಕೊಟ್ಟು ಮುಂದೆ ಎರಡು ಮೂರು ತಿಂಗಳತನಕಾ ಉದ , ಇನಾ ಮೊನ್ನೆ ಕೊಟ್ಟೇವಿ, ಅಂತಾ ಹೇಳುವರು ಕೆಲವ ನಾವಕಾಶ ವರ್ಷದ ಕಡೆಗೆ ಒಮ್ಮೇಲೆ ಯಲ್ಲ ಫೀ ಹಣ ಕೊ ವು ಅಂತಾ ವರ್ಷದತನಕಾ ಕೆಟ್ಟ ಮಾತುಗಳನ್ನು ಧಿಟ್ಟತನ ದ ಹೇಳಿ ಕಡೆಗೆ ಸ್ಯಾ ಮಾಡುವರು. ಈ ನಿಮಿತ್ಯಾರ್ಥವಾಗಿ ಟ್ಟಿಯಂತೆ ಹೊಟ್ಟೆಯುಳ್ಳ ಧಡ್ಡ ಮಂಜರಿಗೆ ಹೇಳಿದರೆ, ಯಾವ ವಾಗಿ ಕೇಳಿರುತ್ತಾರೋ ಅದನ್ನು ಒತ್ತಟ್ಟಿ ಬದಿಗೆ ನೂ ಟ್ಟ, ತಮಗೆ, ಅ, ಅಕ್ಷರ ಹ್ಯಾಗೆ ಅಂತಾ ಕೇಳಿದರೆ, ಅ, ಅ.

ಕ್ಷರ ಹೇಳಲಿಕ್ಕೆ ಬರದು ಮಾಸ್ತರ್, ಹೀಂಗ ಕಲಿಸಬೇಕಂದ ಹ್ಯಾಂಗ ಕಲಿಸಬೇಕ್, ಬಾಗಿಲ್ ವ್ಯಾಕರಣಾ ಕಲಿತಾಗ ತೆರೆದ ಯೋನ ಮಾಡಾಕ್ರಿ ಪಂತೋಜಿ, ತಾಸಜರ್ಮ, ಚೀಟಿ ಓದಕ್ ಬರ್ಯಾಕ್ ಬಂದರ ಸಾಕ್ ಅಂತಾ ನಿರ್ಧಾರಕ ಬಾಸ್ತು ನ್ನಾಡಿದನಂತರ ಪಿಯಾ ನಿಂನ ಕೈಲಿ ದಾಟ್ ಮುಗಿಸಿಟ್ಟಿ ಸ ಕಾರ್, ಪಗಾರ್ ಬರತಾದ ಏನ್ ಉಪಕಾರ/ಪಕಾರ್ ದಾ ತೇನ್ ಎಂದು ಹೇಳಿದನಂತರ ಮಾಸ್ತರನು ಜನಾಗಿ ಸ ಜೂತ ಹೇಳಿದರೆ ಏನ್ ನೀ ಎಂಥಾ ಸಾಲಿ ಓದಿದಾವ ಕಾ ಊರೀಗ ಬಂದೀದಿ ನಿನಗ ಕಲ್ಯಾಣದು ಗೊತ್ತಿಲ್ಲ ಅಲ್ಲಾ. ಹುಡುರ್ ಹೆಸರ್ ತಗೊಂಡು ಬ್ಯಾಡ್, ನಿನ ಕೈಯಾಗ ಕಟಿಕೋಂ ಹುದ್ಯಾ ಏತೇನ್, ನಿನಗ್ಯಾಕ್ ಕಟಿಕೋಂದ ಬಂದ್ಯಾ ಏತೆನ್ ಎಂದು ಕಟ್ಟಿಗೊಂಡನ್ನು ಮುರಿದು ಕೈಯ್ಯಾಲಿ ಕೊಟ್ಟಂತೆ ಏಟ್ಟಿನದ ಕೊಟ್ಟು ಹಾತಗಳನ್ನ ಅಡಿಬಿಡುವವರಲ್ಲದೆ ಅವರ ಹೊಟ್ಟೆಯಲ್ಲಿ ಕನಿಕರವನೇನೂ ಹುಟ್ಟುವದಿಲ್ಲಾ. ಹೀಗಾಗಿ ಇಂಥ ಹಲವು ರೀತಿಯಿದ ಮಾಸ್ತರನ ಪಗಾರ ಹಣವು ಫೀ ಹಣ ಸಾಲಂತಿದ್ದರಲ್ಲ ಸಲ್ಲವದಾಗಿ ಕೈಯ್ಯಾಲ್ಲಿ ಭಿಕ್ಷೆಯು ಕೊಪ್ಪರಿಗೆಯು ಸಪತ್ಯ, ಈ ಮೋರಿಗೆ ನಡೆಯುದ್ದರೆ, ಹುಡುಗರ ಸಂಬಂಧ ಕಮೆಯಾಗಿ ಮಾಸ್ತರನ ರಾತ್ರಿಗೆ ಶಿರದ ಮೇಲೆ ಕೈ ಊರಲಿ ಇಂಗೊಡಲಿಕ್ಕಿಲ್ಲಾ. ಕಲ್ಪವೃರ ಅರ್ಜಿಗಳನ್ನು ಮಾಡಲಿಕ್ಕೆ ಎತ್ತ್ಯಸ್ಸರು. ದಾವ್ಯಾರೀ? ಮಾಸ್ತರಜನರ ನಶೀಬಕ್ಕೆ ಕರತೆ ಇಲ್ಲ;

ಇವೇನು ಬೆಳ್ಳಿಯಕಟ್ಟಿನ ಮೋಳದವರು ಮತ್ತು ಕೆಂಪುಟ್ಟಿನ ಮೋಳದವರು ಮೊಗೇರ ಮಾಡ್ಯಳವರು ಕೆಳಗೇ

ಳಿದವರು ಎಂ
ು ಬಲ್ಲಿದ ನೀನು
ಾಡುತ್ತಿರುವಾಗ
ುಡಗರ್, ಲಗ್ ಶ
ಟೊಣಪತನದ
ು ತಪ್ಪು ಹೊಲಸ
ಾದ ಕೆಲಸಗಳನ್ನು
ು ಕರಕೊಂಡು ಬ
ದೊಡ್ಡ ಮನೆಯ ದೈವೋತ್ಸವಗಳಲ್ಲಿ ಒಲ್ಲವೇ ಗುಡಿಯ
ಗಾಯನಶಾಲಾ ಸ್ಥಾಪನೆ ಮಾಡಿಕೊಂಡು ಪನ್ ತಗ್ಯಾ
ಭಿಕಾತ್ ಉಂಡರೀನ್; ಮೆಕ್ಸ್ಟಾಟ್, ತೇಕ್ರ್ಯಾಕ್ಷ್ನ ನೋಡೂ
ಂತ ಅಬ್ಬ, ಅಮ್ಮ, ಉಲಲ, ಎಂದು ವಕ್ರತ್ವದಿಂದ ಕೂತು
ಂಡು ಭೀಕರತನದ ಮಾತುಗಳನ್ನಾಡುವುದು ಸರಕಾರೀ
ತಶಾಲಾ ಮಾಸ್ತರನು ಕೇಳಿ ಎದೆಯು ಧಗಲ್ ಎಂದು ಭೀತ
ುದಲಾಗಿ, ಇವುಗಳಲ್ಲಿ ಸಹ ನಿದ್ರೆಯು ದುಷ್ಟನೇ ಎಂದೂ
ತ್ತುವದಿಲ್ಲ. ಮಸ್ತು ಮಾಸ್ತರನು ಯಾವದಾದರೂ ಅದ
ುವದರಿಂದ ಇಂಥ ರೀತಿಯುಳ್ಳ ಗ್ರಾಮಗಳಲ್ಲಿ ರಜೆ ಕ
ಂತರಂಗೂ ಅವನ ವಿನಾಶಕಾಲವು ತತ್ಕ್ಷಣ ಎದುರಿಗೆ
ತಿರುವದು ಇಬ್ಬರು ಗುದ್ದ್ಯಾಟ ಮಾರನೇಯುಲಿಗೆ ಬರು
ಭ ಎಂಬಂತೆ ಬಡಲಿ ಮಾಸ್ತರನು ತನ್ನ ಹಿತದಗೋಸ್ಕ
ಕ್ಕೆ ತಕ್ಕ ವೇಷ, ವೇಷಕ್ಕೆ ತಕ್ಕ ಭಾಷೆ ಎಂಬಂತೆ ಶಾಲಾ
ಾರಣೆ ಯಾಗಾದರೂ ಚಿಂತೆ ಇಲ್ಲಾ. ಅವರವರ ಗು
ನುಕೂಲದಂತೆ ಭಾಷಣಗಳನ್ನಾಡಿ ಅವರನ್ನು ಕೂಡಿಕೊಂ
ಕಾಯಂ ಮಾಸ್ತರನು ಬಂದರೆ, ಚಾರ್ಜ ಕೊಡಬಾರದೊ

ಜಾಹಿರಾತು.

(೧೦೦ ರುಪಾಯಿ ಇನಾಮು.)

ನೀತಿ ಮತ್ತು ಸದಾಚಾರ ಇವುಗಳನ್ನು ಕುರಿತು
ತ್ತಮವಾದ ನಿಬಂಧವನ್ನು ಕನ್ನಡ ಭಾಷೆಯಲ್ಲಿ ಬರೆ
ರಗೆ ಆನರೇಬಲ್ ಗುರುಸಿದ್ಧಪ್ಪಾ ಅಣ್ಣಾ ಗಿಲಗಂಚಿ ಇವ
ನೂರು ರುಪಾಯಿ ಇನಾಮು ಕೊಡುವರು. ನಿಬಂಧವು
ಪ್ಪತ್ತು ಫೂಲಿಸ್ಕೇಪ ಪಾಳಿಗಳಿಗಿಂತ ಕಡಿಮೆ ಇರಬಾರದ
ಮತ್ತು ಯಾವತ್ತು ಹಿಂದೂಮತಗಳನ್ನು ಅನುಸರಿಸುವ
ನರ ಉಪಯೋಗಕ್ಕೆ ಬರುವಂತೆ ಇರಲಿಕ್ಕೆ ಬೇಕು. ಈ
ಬಂಧ ಬರೆಯುವದರಲ್ಲಿ ಕನ್ನಡ ನೀತಿಗ್ರಂಥಗಳ ಸಹಾ
ತಕ್ಕೊಳ್ಳಲಿಕ್ಕೆ ಅಡ್ಡಿ ಇಲ್ಲ.

ಈ ನಿಬಂಧವನ್ನು ಬೇಕಾದವರು ಬರೆದು ಬಹು
ನಿಬಂಧಕಾರರು ತಮ್ಮ ತಮ್ಮ ನಿಬಂಧಗಳು ಬರುವ ಆ
ತಿಂಗಳಿನ ಅಖೈರಿನೊಳಗೆ ನಮಗೆ ಮುಟ್ಟುವಂತೆ ಅವ
ನ್ನು ರವಾನೆ ಮಾಡಬೇಕು. ನಿಬಂಧಕಾರರು ತಮ್ಮ ನಿಬ
ದ ಮುಖ ಪೃಷ್ಠದ ಮೇಲೆ ಒಂದು ಗುರುತಿನ ವಾಕ್ಯ
ರಿದು, ಅದೇ ವಾಕ್ಯವನ್ನು ಬೇರೆ ಒಂದು ಕಾಗದದ ಮೆ
ಬರಿದು ತಮ್ಮ ಸಹಿ ಮಾಡಿ ಆ ಕಾಗದವನ್ನು ಒಂದು
ಲಕೋಟಿಯೊಳಗೆ ಹಾಕಿ ಮೊಹರು ಮಾಡಿ ನಮ್ಮ ಕಡೆಗೆ
ಳಿಸಬೇಕು. ಈ ಲಕೋಟಿಯನ್ನು ನಿಬಂಧದ ಪುಸ್ತಕದೊ
ಗೆ ಹಾಕದೆ ಬೇರೆಯಾಗಿ ಕಳಿಸಬೇಕು.

ಸದರೀ ಮುದ್ದತಿಗೆ ನಮ್ಮ ಕಡೆಗೆ ಬಂದ ನಿಬಂ
ನ್ನು ಈ ಕೆಲಸಕ್ಕೆ ನೇಮಿಸಿದ ಕಮಿಟಿಯವರು ಪರೀ
ಬಳಿಕ, ಅವರು ಪಾಸ ಮಾಡಿದಂಥ ನಿಬಂಧವನ್ನು ಬರೆ
ಗೆ ಸದರೀ ಇನಾಮು ಕೊಡಲ್ಪಡುವದು.

ಧಾರವಾಡ ೧ನೇ ಫೆಬ್ರು) Venkat Rango Katt

ನ್ನಡ ಶಾಲಾಪತ್ರಿಕೆ

CANARESE
SCHOOL PAPER.

ಪುಸ್ತಕ ೨೪) (ಸಂಚಿಕೆ ೨

(ಫೆಬ್ರುವಾರಿ ೧೮೮೯)

ಅನುಕ್ರಮಣಿಕೆಯು.

ಪುಟ.

ಣದ ಬೇರೆ ಬೇರೆ ಪದ್ಧತಿಗಳು…… …………… ೨೫
ದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು …. ೩೧
ಟೀಸು……………… ………………… …. … ೩೬
ತಿ ಶಿಕ್ಷಣವು ……………………………… ೩೭
ರೆ ಬೇರೆ ಜಾತಿಗಳ ಹುಡುಗರಲ್ಲಿ ಬುದ್ಧಿಮಾನ ಬೇರೆಬೇರೆ ೪೧.
ರೋಪದ ಮಧ್ಯಕಾಲದ ಇತಿಹಾಸವು ………… ೪೫
ವ್ಯವಹಾರವು. …. …. ………… . …… ೪೭

CONTENTS

fferent systems………………………… 25
lucation and Improvement. ………… 31
tice… …. ……… ….. ……… ……… 36
oral Training. ……… ………………… 37
fferent degrees of Intelligence in
ys of different Castes……… … … 41
story of the Middle Ages ……… 45

DHARWAR.

ಶಾಲಾಪತ್ರಕವು.

ಪುಸ್ತಕ ೩೪) (ಸಂಚಿಕೆ ೩

(ಫೆಬ್ರುವಾರಿ ೧೮೮೯)

Different systems.

ಶಿಕ್ಷಣದ ಬೇರೆ ಬೇರೆ ಪದ್ಧತಿಗಳು.

ಈಗ ನಡಿಯುವ ೧೯ನೇ ಶತಕದ ಪೂರ್ವದಲ್ಲಿ ಶಾಲಾ
ನೆಯು ಕಡೆಗೆ ವಿದ್ಯಾಭಿಮಾನಿಗಳ ಲಕ್ಷ್ಯವು ಹೋಗತಕ್ಕ
ಹೋಗಿದ್ದಿಲ್ಲ. ಆ ಕಾಲಕ್ಕೆ ಇಂಗ್ಲಂಡದೊಳಗಿನ ಸಾ
ಜನಿಕ ಶಾಲೆಗಳಲ್ಲೆಲ್ಲ ವ್ಯಕ್ತಿ ಶಿಕ್ಷಣದ ಪದ್ಧತಿಯು ಬೇರೆ ಬೇ
ರೂಪಗಳಿಂದ ನಡಿಯುತ್ತಿತ್ತು. ಈಗಿನಂತೆ ಆಗೂ ಬೇರೆ
ರೆ ವರ್ಗಗಳನ್ನು ವಿಂಗಡಿಸಿ, ಒಂದೊಂದು ವರ್ಗದೊಳಗೆ
ಕೆಲವು ಹುಡುಗರನ್ನು ಕುಳ್ಳಿರಿಸಿಕೊಂಡು ಕಲಿಸುವ ಕ್ರ
ವಿದ್ದಾಗ್ಯೂ, ವರ್ಗದೊಳಗಿನ ಪ್ರತಿ ಒಬ್ಬ ಹುಡುಗನಿಗೆ
ರೆ ಬೇರೆಯಾಗಿ ಕಲಿಸುವದೇ ಬಹಳವಾಗಿ ನಡಿಯುತ್ತಿತ್ತು.

೧ ಮಾನಿಟರರೆಂಬ ಶಿಕ್ಷಕರ ಸಹಾಯದಿಂದ ಕಲಿಸುವ ಪ
ತಿಯು—ಈ ಪದ್ಧತಿಯು ೧೮ನೇ ಶತಕದ ಕಡೆಯಲ್ಲಿ ಆ
ಭವಾಯಿತು. ಇದರಲ್ಲಿ ಎರಡು ಒಳಭೇದಗಳುಂಟು.
ವೇ ಈಗ ಬಹಳವಾಗಿ ಸುಧಾರಿಸಲ್ಪಟ್ಟು ಇಂಗ್ಲಂಡದ ರಾ
ೀಯ ಶಿಕ್ಷಣದ ಮುಖ್ಯ ಪದ್ಧತಿಗಳಾಗಿರುತ್ತವೆ. ಅವು ಯಾ

ಏನೆಂದರೆ—

(ಅ) ಡಾಕ್ತರ ಬೆಲ್ಲೆಂಬವನ, ಅಂದರೆ ಮದ್ರಾಸ ಇಲಾ
ಖೆಯ ಪದ್ಧತಿಯು—ಈ ಪದ್ಧತಿಯು ಮದ್ರಾಸ ಇಲಾಖೆಯ
ಲ್ಲಿ ಸನ್ ೧೭೮೭ನೇ ವರ್ಷ ಆರಂಭವಾಗಿ ಮುಂದೆ ಸನ್
೧೭೯೮ನೇ ವರ್ಷ ಇಗ್ಲಂಡದ ಶಾಲೆಗಳಲ್ಲಿಯೂ ಸಾಗ
ತ್ತಿತು. ಈ ಪದ್ಧತಿಯ ಮುಖ್ಯ ಲಕ್ಷಣವು ಹ್ಯಾಗಂದರೆ, ವಿ
ದ್ಯಾರ್ಥಿಗಳಲ್ಲಿ ಬೇರೆ ಬೇರೆ ವರ್ಗಗಳನ್ನು ಮಾಡಿ, ಅ
ರಲ್ಲಿ ಬುದ್ಧಿವಂತರಾದವರನ್ನು ಆರಿಸಿ ತೆಗಿದು, ಅವರನ್ನ
ಆ ವರ್ಗಗಳ ಶಿಕ್ಷಕರಾಗಿ ನೇಮಿಸಿ, ಮಾಸ್ತರನು ಅವರ ಕ
ಸುವ ಕ್ರಮವನ್ನು ತಿದ್ದುತ್ತ, ಅವರಿಗೆ ಬರದಂಥ ವಿಷಯ
ಳನ್ನು ಅವರಿಗೂ ಅವರವರ ವರ್ಗಗಳಿಗೂ ತಾನೇ ಕಲಿಸ
ತ್ತ ಹೋಗುವನು. ಈ ಶಿಕ್ಷಕರು ತಮ್ಮ ತಮ್ಮ ವರ್ಗಗ
ಪಾಠಗಳನ್ನು ಸಿದ್ಧ ಪಡಿಸತಕ್ಕವರು. ಇವರ ಹೊರ್ತು ಹ
ಡುಗರೊಳಗಿಂದಲೇ ಆರಿಸಿ ತೆಗಿದಂಥ ಅಸಿಷ್ಟಾಂಟರು ಬೇ
ಇರುವರು. ಶಿಕ್ಷಕರು ಪಾಠ ಕಲಿಸುವಾಗ ಈ ಅಸಿಷ್ಟಾಂಟ
ಮೇಲ್ವಿಚಾರಕ್ಕಾಗಿ ಸಹಾಯ ಮಾಡಿ, ಪಾಠ ಮುಗಿದ ಬಳಿ
ತಮ್ಮ ತಮ್ಮ ವರ್ಗಗಳನ್ನು ಪರೀಕ್ಷಿಸುವರು. ಇವರಲ್ಲ
ಪರೀಕ್ಷಕರು ಬೇರೆ ಇರುವರು; ಅವರೂ ವಿದ್ಯಾರ್ಥಿಗಳೇ.
ಪರೀಕ್ಷಕರು ಎರಡು ಮೂರು ವರ್ಗಗಳನ್ನು ಸರತಿಯಿಂ
ಪರೀಕ್ಷಿಸಿ, ಮೇಲಿನ ವರ್ಗಕ್ಕೆ ಯೋಗ್ಯರಾದವರನ್ನು ಮೇ
ಕ್ಕೆ ಕಳಿಸುವರು. ಇದರಿಂದ ಶಿಕ್ಷಕರಿಗೂ ಅಸಿಷ್ಟಾಂಟರಿಗ
ಉತ್ತೇಜನ ಕೊಟ್ಟಂತೆ ಆಗುವದು. ಇಷ್ಟೆಲ್ಲ ಶಿಕ್ಷಣದ
ಮಗ್ರಿಯಾಯಿತು. ಇದರ ಹೊರ್ತು ವ್ಯವಸ್ಥಾಪಕ ವಿದ
ರ್ಥಿಗಳು ಬೇರೆ ಇರುವರು. ಅವರಲ್ಲಿಯೂ ಮುಖ್ಯ ವ್ಯ

ಸ್ಥಾಪಕರೆಂತಲೂ, ಕೈಕೆಳಗಿನ ವ್ಯವಸ್ಥಾಪಕರೆಂತಲೂ ಯೆರಡು ಭೇದಗಳು. ವರ್ಗಗಳನ್ನು ವ್ಯವಸ್ಥೆಯಿಂದ ಕೂಡ್ರಿಸುವದು, ಬಿಡುವದು, ಅವುಗಳಿಗೆ ಸ್ಲೇಟು, ಪೆನಸಿಲು, ಮುಂತಾದ ಸಾಹಿತ್ಯಗಳನ್ನು ಪೂರೈಸಿ ಕೊಡುವದು, ಇವೆಲ್ಲ ಕೆಲಸಗಳನ್ನು ಕೈ ಕೆಳಗಿನ ವ್ಯವಸ್ಥಾಪಕರು ಮಾಡುವರು. ಮುಖ್ಯ ವ್ಯವಸ್ಥಾಪಕನು ಇಡೀ ಶಾಲೆಯ ವ್ಯವಸ್ಥೆಯ ಮೇಲ್ವಿಚಾರಕನಾಗಿ ವರ್ತಿಸುವನು, ವಿದ್ಯಾರ್ಥಿಗಳಿಗೆ ಕವಾಯಿತು ಕಲಿಸುವನು. ಈ ಶಾಲೆಗಳು ಬಹು ದೊಡ್ಡವಿರುತ್ತಿದ್ದವು. ಮಾಸ್ತರನು ಬೇರೆ ಬೇರೆ ವರ್ಗಗಳನ್ನು ವಿಂಗಡಿಸುವಾಗ ವಿದ್ಯಾರ್ಥಿಗಳ ವಾಚನ ಶಕ್ತಿಯ ಅನುರೋಧದಿಂದ ವಿಂಗಡಿಸುವನು. ಈ ವರ್ಗಗಳು ಬಹು ದೊಡ್ಡವು. ಒಂದೊಂದು ವರ್ಗದ ವಿದ್ಯಾರ್ಥಿಗಳು ನಾಲ್ಕು ಭುಜಗಳುಳ್ಳ ವರ್ಗಾಕೃತಿಯಾಗಿ ಕೂಡ್ರುವರು. ಆ ವರ್ಗಾಕೃತಿಯ ನಡುವೆ ಶಿಕ್ಷಕನು ಕೂಡ್ರುವನು. ವಿದ್ಯಾರ್ಥಿಗಳು ಬರೆಯಬೇಕಾದಾಗ ತಮ್ಮ ಹಿಂದೆ ಗೋಡೆಗೆ ಆನಿಸಿಟ್ಟ ಮೇಜುಗಳ ಕಡೆಗೆ ತಿರುಗಿ ಕೂಡ್ರುವರು.

(ಬ) ಲಾಂಕಾಸ್ತರನ, ಅಂದರೆ ಬ್ರಿಟಿಶ ಪದ್ಧತಿಯು. ಜೋಜೆಫ ಲಾಂಕಾಸ್ತರನೆಂಬವನು ಸನ್ ೧೭೯೭ನೇ ವರ್ಷ ಮಾನಿಟರ ಪದ್ಧತಿಯನ್ನು ನಡಿಸಹತ್ತಿದನು. ಅವನ ಶಾಲೆಯಲ್ಲಿ ಶಿಕ್ಷಣದ ಕೆಲಸ ಮಾಡುವವರೂ ವ್ಯವಸ್ಥಾಪಕರೂ ಬಹುತರ ಮೇಲಿನಂತೆಯೇ ಇರುವರು. ಆದರೆ ವಿದ್ಯಾರ್ಥಿಗಳ ವರ್ಗೀಕರಣದಲ್ಲಿ ಅವನು ಮೇಲಾದ ಸುಧಾರಣೆಯನ್ನು ಮಾಡಿದನು. ಅವನು ತನ್ನ ಶಾಲೆಯಲ್ಲಿ ಎರಡು ವಿಭಾಗಗಳನ್ನು ಮಾಡಿ, ವಿದ್ಯದ ಮೂಲತತ್ವಗಳನ್ನು (ಓದೋಣ ಬರೆಯೋಣ,

ಇತ್ಯಾದಿ) ಕಲಿಯತಕ್ಕವರನ್ನೆಲ್ಲ ಕೆಳಗಿನ ವಿಭಾಗದೊಳ ಹಾಕಿದನು; ಮತ್ತು ಆ ಕೆಳಗಿನ ವಿಭಾಗದಲ್ಲಿ ಕಲಿತದ್ದನ್ನು ಟ್ಟಿನ ಜ್ಞಾನ ಪ್ರಾಪ್ತಿಗಾಗಿ ಪ್ರಯೋಗಿಸತಕ್ಕಂಥವರನ್ನು ಮೇ ನ ವಿಭಾಗದಲ್ಲಿ ಸೇರಿಸಿದನು. ಇದಲ್ಲದೆ ಲಾಂಕಾಸ್ಟರನು ಒ ದೊಂದು ವರ್ಗದೊಳಗೆ ಹತ್ತುಹತ್ತು ಹುಡುಗರ ಭಾಗಗಳನ್ನು ಮಾಡಿ, ಅವರವರಿಗೆ ಬೇರೆಬೇರೆಯಾಗಿ ಕಲಿಸುವ ಕ್ರಮವಿಟ್ಟ ನು. ಆವನ ಶಾಲೆಯಲ್ಲಿ ಎಲ್ಲ ವರ್ಗಗಳಿಗೆ ಅಂಕಗಣಿತವನ್ನು ಒಂದೇ ಕಾಲಕ್ಕೆ ಕಲಿಸುವರು. ಅದರಿಂದ ವಿದ್ಯಾರ್ಥಿಗಳ ಭ್ಯಾಸವಾಗಿದ್ದಂತೆ ಬೇರೆ ಬೇರೆ ವರ್ಗಗಳನ್ನು ಮಾಡಿ, ಯಾ ವರ್ಗಕ್ಕೆ ಗಣಿತವನ್ನು ಒಮ್ಮೇಲೆ ಕಲಿಸಲಿಕ್ಕೆ ಅನುಕ ಲವಾಗುತ್ತಿತ್ತು. ಈ ಶಾಲಾಗೃಹವು ಅಗಲಿನ ಇಮ್ಮಡಿಯ ಉದ್ದವಿತ್ತು; ಅದರ ನಡು ಭಾಗದಲ್ಲಿ ಮೇಜುಗಳನ್ನು ಉದ್ದಕ್ಕೆ ಸಾಲಾಗಿ ಇಟ್ಟು, ಅವುಗಳ ಯೆರಡೂ ದಿಗಳಲ್ಲಿ ವಿದ್ಯಾರ್ಥಿಗಳನ್ನು ಗೋಡೆಯ ಕಡೆಗೆ ಮೋ ಮಾಡಿ ಕೂಡ್ರಿಸುವರು. ಕೋಣೆಯ ಒಂದು ತುದಿಯಲ್ಲಿ ಮ ಡಿದ್ದೊಂದು ಉನ್ನತ ಸ್ಥಳದಲ್ಲಿ ಶಿಕ್ಷಕನು ಕೂಡ್ರುವನು.

ಈ ಮಾನಿಟರ ಪದ್ಧತಿಯ ಕೆಲವು ಕುರುಹುಗಳನ್ನು ಈ ನ ಶಾಲೆಗಳಲ್ಲಿ ಕಾಣಬಹುದು. ಈ ಶಾಲೆಗಳಲ್ಲಿ ಮಾನಿಟರರ ದಲೂ ಕ್ಯೂರೇಟರರಿಂದಲೂ ಯೆರಡು ಪ್ರಕಾರದ ಸಹಾಯ ಜನರಿರುವರು. ಅವರ ಕೆಲಸಗಳ ವಿವರ ಹ್ಯಾಗಂದರೆ—

(೧) ಮಾನಿಟರ ಜನರನ್ನು ವರ್ಗಗಳಿಗೆ ಕಲಿಸಲಿ ನೇಮಿಸುವರು. ತಮ್ಮ ಜತೆಗಾರರೊಳಗೆ ದೊಡ್ಡಸ್ತಿಕೆ, ಕ್ತಿ, ದೃಢ ನಿಶ್ಚಯ, ಆಸಕ್ತಿ, ನಿಯಮಿತತನ, ವಿಧೇ ತ್ವ, ಈ ಗುಣಗಳುಳ್ಳಂಥ ವಿದ್ಯಾರ್ಥಿಗಳನ್ನು ಆರಿಸಿ

ಲಸಕ್ಕೆ ನೇಮಿಸುವರು. ಈ ಮಾನಿಟರರು ತಮ್ಮ ಶಕ್ತಿ
ು ಮರ್ಯಾದೆಯೊಳಗೆ ಕಲಿಸಿದ್ದಕ್ಕೆ ಕೆಲವು ಬೆಲೆಯುಂಟು.
ವರು ಪಾಠಗಳನ್ನು ಕೇಳಿಕೊಳ್ಳಲಿಕ್ಕೂ ಆ ಪಾಠಗಳನ್ನು
ಳುಕೊಳ್ಳಲಿಕ್ಕಾಗಿ ಮಾಡತಕ್ಕಂಥ ಶಾರೀರ ವ್ಯಾಪಾರಗಳ
್ನು ತಮಗಿಂತ ಕಡಿಮೇ ಯೋಗ್ಯತೆಯ ಹುಡುಗರ ಕೈ
ುಂದ ಮಾಡಿಸಲಿಕ್ಕೂ ತಕ್ಕವರಾಗಿರುತ್ತಾರೆ. ಈ ಕೆಲಸ
ಲ್ಲಿ ದೊಡ್ಡವರಿಗೆ ಬರುವಂತೆ ಬೇಸರು ಆ ಮಾನಿಟರರಿಗೆ ಬರುವ
ಲ್ಲ. ಇದಲ್ಲದೆ ಅವರು ಕಲಿಸುವ ವಿಷಯಗಳನ್ನು ತಾವೇ
ಲ್ಪ ಕಾಲದ ಹಿಂದೆ ಕಲಿತುಕೊಂಡವರಾಗಿದ್ದದರಿಂದ ಅವು
ಳನ್ನು ಕಲಿಯುವದರಲ್ಲಿ ಬರುವ ತೊಂದರೆಗಳು ಅವರ
ನಪಿನಲ್ಲಿ ಸರನಾಗಿ ನಿಂತಿರುತ್ತವೆ. ಇದಲ್ಲದೆ ಕಲಿಸುವವ
ಕಲಿಯುವವನಿಗಿಂತ ಬಹಳ ಹೆಚ್ಚಿನ ಯೋಗ್ಯತೆಯವನಿ
ವಿಲ್ಲದ ಕಾರಣ ಕಲಿಯುವವನಿಗೆ ತನ್ನ ಪಾಠವನ್ನು ಕ
ುಲಿಕ್ಕೆ ಉತ್ಸಾಹ ಹುಟ್ಟಬಹುದು. ಆದರೆ ಶಾರೀರ ವ್ಯಾ
ರದ ಶಿಕ್ಷಣೆಯ ಹೊರ್ತು ಬೇರೆ ಯಾವ ತರದ ಶಿಕ್ಷಣೆಯೂ
ಮಾನಿಟರ ಜನರ ಕಡೆಯಿಂದ ಆಗತಕ್ಕಂತೆ ಆಗಲಾರದು.
ಕೆಂದರೆ ಅವರಿಗೆ ಮನುಷ್ಯನ ಮನಸಿನ ಜ್ಞಾನವಿರುವದಿಲ್ಲ,
ನವಿಧದ ಸಾಧನಗಳನ್ನು ಅವರು ಮಾಡಿಕೊಂಡಿರುವದಿಲ್ಲ, ಬ
ಳ ಹೊತ್ತು ಏಕ ಪ್ರಕಾರವಾಗಿ ವಿಚಾರ ಮಾಡುವದರಲ್ಲಿ
ರಿತಿರುವದಿಲ್ಲ, ತಮ್ಮ ಆಚರಣದ ಗೌರವವು ಅವರಿಗೆ ತಿ
ರುವದಿಲ್ಲ, ಮತ್ತೂ ತಮ್ಮ ಆಚರಣದ ಮಾದರಿಯನ್ನು
ರು ತಕ್ಕೊಳ್ಳುವಂತೆ ಮಾಡುವಷ್ಟು ಅಧಿಕಾರವು ಅವರಿಗಿ
ವದಿಲ್ಲ.

(೨) ಕ್ಯೂರೇಟರರು ವಿದ್ಯಾರ್ಥಿಗಳಿಗೆ ಬೇಕಾಗುವ ಪು

ಸ್ತಕ, ಸ್ಲೇಟು, ಮುಂತಾದ ಸಾಹಿತ್ಯಗಳನ್ನು ಪೂರೈಸಿ ಕೊಡತಕ್ಕವರು; ಶಾಲಾಗೃಹವನ್ನೂ ಕರಿ ಹಲಿಗೆ ಮುಂತಾದ ಉಪಕರಣಗಳನ್ನೂ ಯೋಗ್ಯ ವ್ಯವಸ್ಥೆಯಿಂದ ಇರಿಸುವ ಕೆಲಸವಾದರೂ ಅವರದೇ.

ಈ ಬಗೆಯಾಗಿ ಬೇರೆ ಬೇರೆ ಕೆಲಸಕ್ಕೆ ವಿದ್ಯಾರ್ಥಿಗಳನ್ನು ಆರಿಸಿ ನೇಮಿಸುವದರಿಂದ, ಬೇರೆ ಸಹಾಯಕರಿಲ್ಲದಲ್ಲಿ ಮಾಸ್ತರನಿಗೆ ಸಹಾಯವಾಗುತ್ತದೆ, ಸಣ್ಣ ಪುಟ್ಟ ಸಂಗತಿಗಳಿಗೆ ಮಾಸ್ತರನು ಲಕ್ಷ್ಯ ಕೊಡಬೇಕಾಗುವದಿಲ್ಲ, ಪ್ರಮುಖ ವಿದ್ಯಾರ್ಥಿಗಳು ಅವನಿಗೆ ಅನುಕೂಲರಾಗಿ ನಡಿಯಲಿಕ್ಕೆ ಕಲಿಯುವರು, ಚತಪಡಿಕೆಯುಳ್ಳ ವಿದ್ಯಾರ್ಥಿಗಳು ತಮ್ಮ ಚಡಪಡಿಕೆಯನ್ನು ಬೈಲಿಗೆ ತರಲಿಕ್ಕೆ ಆಸ್ಪದವಾಗುತ್ತದೆ, ಮತ್ತು ಕೆಲಸದ ಜವಾಬದಾರಿಯನ್ನು ವಹಿಸಲಿಕ್ಕೆ ಹುಡುಗರು ಕಲಿಯುತ್ತಾರೆ. ಈ ಮಾನಿಟರ ಪದ್ಧತಿಯಿಂದಲೇ ಪೂರ್ಣವಾಗಿ ನಡೆಸಂಥ ಶಾಲೆಯಲ್ಲಿ ಶಿಕ್ಷಕರೂ ವ್ಯವಸ್ಥಾಪಕರೂ ಇದ್ದಂತೆ ಶಾಲೆಯ ಕೆಲಸವು ನೆರವೇರುವದು. ಈ ಅಧಿಕಾರಿಗಳು ಪ್ರೌಢರಿರುವ
ಲ್ಲ, ಚಂಚಲ ಸ್ವಭಾವದವರಿರುತ್ತಾರೆ, ಮತ್ತು ಸ್ವೇಚ್ಛೆಯಿ
ಪ ಈ ಕೆಲಸಗಳನ್ನು ಕೈಕೊಂಡಿರುತ್ತಾರೆ, ಆ ಕಾರಣ ಇವ
ಸಮಾಚಾರವನ್ನು ಮಾಸ್ತರನು ಎಡೆ ಬಿಡದೆ ತಕ್ಕೊಳ್ಳುತ್ತಿ
ಲಿಕ್ಕೆ ಬೇಕು, ಮತ್ತು ಇವರ ಶಿಕ್ಷಣವನ್ನು ಆಗಾಗ್ಗೆ ತಿದ್ದಿ
ಅದಕ್ಕೆ ಹೊಸ ಭರತಿಯನ್ನು ಹಾಕುತ್ತಿರಲಿಕ್ಕೆಬೇಕು. ಅಂದ
ಇವರ ಶಿಕ್ಷಣದಿಂದ ತಕ್ಕ ಫಲವಾಗುವದು. ಇದಲ್ಲದೆ ದೊ
ವರ್ಗಗಳನ್ನು ಕೈಕೆಳಗೆ ನಡಿಸಿಕೊಳ್ಳುವ ಸಾಮರ್ಥ್ಯವು ಮ
ನಿಟರ ಜನರಿಗಿರುವದಿಲ್ಲ, ಮತ್ತು ಜಾಯಿಯ ಪಾಠಗಳ ಹೆ
ರ್ತು ಬೇರೆ ಪಾಠಗಳನ್ನು ಕಲಿಸಲಿಕ್ಕೆ ಅವರಿಗೆ ಬಹುತರ

ತ್ತಿರುವದಿಲ್ಲ. ಆದದರಿಂದ ಶಾಲೆಯ ಮುಖ್ಯ ಕೆಲಸವನ್ನು
ಾಸ್ತರನು ತಾನೇ ನೋಡಿಕೊಳ್ಳಲಿಕ್ಕೆಬೇಕು. ಒಂದೊಂದು
ರ್ಗದಲ್ಲಿ ಒಂದೇ ವಿಷಯವನ್ನು ಕಲಿಯುವಂಥವರ ಬೇರೆ
ರೆ ಗುಂಪುಗಳನ್ನು ಮಾಡಿ ಅವನು ಕಲಿಸುವನು, ಮತ್ತೂ
ನುಕೂಲವಿದ್ದಲ್ಲಿ ಯೆರಡು ಮೂರು ಗುಂಪುಗಳನ್ನು ಒತ್ತ
ಗೆ ಕೂಡಿಸುವನು.

Education and Improvement.

ವಿದ್ಯಾಸುಧಾರಣೆಯ ಸಂಬಂಧವಾದ ವೃತ್ತಾಂತಗಳು.

ಮದ್ರಾಸ ಇಲಾಖೆಯ ಹೋದವರ್ಷದ ವಾರ್ಷಿಕ ರಿಪೋ
ರ್ಟ ಹೊರಗಡೆಯಲ್ಲಿ ಪ್ರಸಿದ್ಧವಾಗಿರುತ್ತದೆ. ಅದರಿಂದ ಆ ಇ
ಖೆಯಲ್ಲಿ ಒಟ್ಟಿಗೆ ೧೭೩೫೫ ಶಾಲೆಗಳಿರುತ್ತವೆಂತಲೂ, ಆ
ಗಳಲ್ಲಿ ೫೦೫೭೫೮ ವಿದ್ಯಾರ್ಥಿಗಳು ಕಲಿಯುತ್ತಾರೆಂತ
ತಿಳಿಯುತ್ತದೆ. ಫೀ ವಸೂಲು ಒಟ್ಟಿಗೆ ೧೪೮೭೪೪೭ ರು
ಯಿಯಾಗಿರುತ್ತದೆ. ಇದರಿಂದ ಮದ್ರಾಸ ಇಲಾಖೆಯಲ್ಲಿ
್ಯಾಭಿವೃದ್ಧಿಯು ನಮ್ಮ ಇಲಾಖೆಗಿಂತ ಬಹಳ ಕಡಿಮೆಯುಂ
ದು ಸಿದ್ಧವಾಗುತ್ತದೆ.

* * *

ಈ ವರ್ಷದ ವಕೀಲೀ ಮುನಸಿಫೀ ಪರೀಕ್ಷೆಯು ಮುಂದಿನ
ಗಳಿನ ೪ನೇ ತಾರೀಖಿಗೆ ಮುಂಬಯಿಯಲ್ಲಿ ಆಗತಕ್ಕದ್ದಿ
ದೆ. ವಕೀಲಿಯ ಪರೀಕ್ಷೆಗೆ ೨೦೫ಜನ ಉಮೇದವಾರರು,
ನಸಿಫಿಯ ಪರೀಕ್ಷೆಗೆ ೪೮ಜನರು ಹೋಗಿರುತ್ತಾರೆ. ವಕೀ

ಲಿಯು ಪರೀಕ್ಷೆಗೆ ಮೊದಲಿನಂತೆ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟವರಿಗೆ ಮಾತ್ರ ಹೋಗಲಿಕ್ಕೆ ಅಪ್ಪಣೆಯುಂಟು.

—o—

ಪಂಡಿತಾ ರಮಾಬಾಯಿಯು ವಿಲಾಯತಿಯಿಂದ ತಿರಿಗಿ ಬಂದದ್ದನ್ನು ಹಿಂದೆ ತಿಳಿಸಿದ್ದೇವೆ. ಈ ಘಟ್ಟಿಗಳು ಶಾರದಾಸದನವೆಂಬ ಹೆಸರಿನ ವಿಧವಾಗ್ರಹವನ್ನು ಮುಂಬಯಿಯಲ್ಲಿ ಸ್ಥಾಪಿಸುವ ಸನ್ನಾಹವನ್ನು ಮಾಡಿದ್ದಾಳೆ. ಈ ಶಾರದಾಸದನದಲ್ಲಿ ಚಿಕ್ಕ ವಯಸ್ಸಿನ ವಿಧವೆಯರನ್ನು ಇಟ್ಟುಕೊಂಡು ಅವರಿಗೆ ವಿದ್ಯಾಭ್ಯಾಸ ಮಾಡಿಸುವ ಆಲೋಚನೆಯುಂಟು. ಈ ವಿದ್ಯಾರ್ಥಿನಿಯರ ಊಟಉಡಿಗೆ, ವಸ್ತ್ರಪ್ರಾವರಣಗಳ ಉಪಪತ್ತಿಯೆಲ್ಲ ಶಾರದಾಸದನದಲ್ಲಿಯೇ ಆಗತಕ್ಕದ್ದಿರುತ್ತದೆ. ಈ ಕೆಲಸಕ್ಕಾಗಿ ರಮಾಬಾಯಿಯು ಅಮೇರಿಕದಿಂದಲೂ ಇಂಗ್ಲಂಡದಿಂದಲೂ ತಕ್ಕಮಟ್ಟಿಗೆ ಹಣ ಸಂಪಾದಿಸಿಕೊಂಡು ಬಂದಿದ್ದಾಳೆಂದು ಕೇಳುತ್ತೇವೆ. ಇದಲ್ಲದೆ ಅಮೇರಿಕದಿಂದ ಪ್ರವೀಣಳಾದಂಥವಳೊಬ್ಬ ಶಿಕ್ಷಕಿಯನ್ನು ಸಹ ರಮಾಬಾಯಿಯು ಕರೆಕೊಂಡು ಬಂದಿದ್ದಾಳೆ. ಶಾರದಾಸದನದಲ್ಲಿ ಒಬ್ಬಳೇ ವಿದ್ಯಾರ್ಥಿನಿಯು ಬಂದರೂ ಸಹ ಯೆದೆಗುಂದದೆ ತನ್ನ ಕೆಲಸವನ್ನು ದೃಢನಿಶ್ಚಯದಿಂದ ನಡಿಸುವ ಆಲೋಚನೆಯನ್ನು ರಮಾಬಾಯಿಯು ಮಾಡಿದ್ದಾಳೆಂದು ಹೇಳುತ್ತಾರೆ. ಆದರೆ ರಮಾಬಾಯಿಯು ತನ್ನ ಕುಲ ಕೆಡಿಸದೆ ಹಿಂದೂ ಸ್ತ್ರೀಯರಲ್ಲಿ ಇರತಕ್ಕಂಥ ಮರ್ಯಾದೆಯಿಂದ ನಡೆದು ಈ ಕೆಲಸಕ್ಕೆ ಕೈಹಾಕಿದ್ದರೆ, ಆಕೆಯ ಪ್ರಯತ್ನಕ್ಕೆ ಬಹು ಬೇಗ ಫಲವಾಗುತ್ತಿತ್ತೆಂಬದಕ್ಕೆ ಸಂದೇಹವಿಲ್ಲ. ಈಗಿನ ಸ್ಥಿತಿಯಲ್ಲಿ ಕುಲಗೇಡಿಯ ಕೈಕೆಳಗೆ ಡಿಯಲಿಕ್ಕೆ ಯಾರು ಹೋಗುತ್ತಾರೆಂದು ನಮ್ಮ ಬಾಲವಿಧವೆ

ರು ಅನ್ನಬಹುದು; ಮತ್ತು ರಮಾಬಾಯಿಯು ಶಾಲೆಯಲ್ಲಿ ಕಲಿತವರೆಲ್ಲರು ಆಕೆಯಂತೆ ಕುಲಗೇಡಿಗಳಾಗುವರೆಂದು ವಿಧವೆಗಳ ಪಾಲಕರು ಸಂಶಯಪಡಬಹುದು. ಆದದರಿಂದ ರಮಾಬಾಯಿಯು "ಕೈತೋರಿಸಿ ಅವಲಕ್ಷಣ" ವೆನ್ನಿಸಿಕೊಂಡಂತೆ ಆಗುವ ಸಂಭವವಿರುತ್ತದೆ.

— ೦ —

ಹೆಸರಾದ ವಿಶ್ವನಾಥ ನಾರಾಯಣ ಮಂಡಲೀಕರಾಯರನ್ನು ಸರಕಾರದವರು ಯುನಿವರ್ಸಿಟಿಯ 'ಫ್ಯಾಕಲ್ಟಿ ಆಫ್ ಆರ್ಟ್ಸ' ಯೆಂಬ ವಿದ್ವಾಂಸರ ಸಭೆಯ 'ಡೀನ' ಯೆಂಬ ಮುಖ್ಯಾಧಿಕಾರಿಯಾಗಿ ಈ ತಿಂಗಳಲ್ಲಿ ನೇಮಿಸಿದ್ದಕ್ಕೆ ಸ್ವದೇಶ ಬಾಂಧವರೆಲ್ಲರು ಆನಂದ ಭರಿತರಾಗಿದ್ದಾರೆ. ನಮ್ಮ ದೇಶದವರಿಗೆ ಈ ಪದವಿ ದೊರಿದದ್ದು ಇದೇ ಮೊದಲು. ಇದರಿಂದ ಲಾರ್ಡ ರೇ ದೊರೆಗಳು ನಮ್ಮ ಜನರಿಗೆ ಬಹುಮಾನ ಮಾಡಿದಂತೆ ಆಯಿತು.

— ೦ —

ಮ್ಯಾಟ್ರಿಕ್ಯುಲೇಶನ್' ಪರೀಕ್ಷೆಯಲ್ಲಿ ವಾಚನದ ಪರೀಕ್ಷೆಯನ್ನು ಇದುವರೆಗೆ ತಕ್ಕೊಳ್ಳುತ್ತಿದ್ದರು; ಇನ್ನು ಮುಂದೆ ವಾಚನವನ್ನು ತಕ್ಕೊಳ್ಳಬಾರದೆಂದು ಗೊತ್ತಾಗಿದೆ. ಇದು ವಿಹಿತವೇ ಸರಿ. ಆದರೇ ಡಿಗ್ರೀಪರೀಕ್ಷೆಗಳಲ್ಲಿ ದೇಶಭಾಷೆಗಳ ಪರೀಕ್ಷೆಯನ್ನು ತಕ್ಕೊಳ್ಳಲಿಕ್ಕೆ ಬೇಕೆಂದು ಬಹು ಜನರು ಯುನಿವರ್ಸಿಟಿಯ ಅಧಿಕಾರಿಗಳಿಗೆ ಶಿಫಾರಸು ಮಾಡಿದ್ದರು. ನಿರ್ಣಯವು ಇನ್ನೂ ಆದಂತೆ ತೋರುವದಿಲ್ಲ. ಇದೊಂದು ಮಾತು ಯುನಿವರ್ಸಿಟಿಯವರು ಮಾನ್ಯ ಮಾಡಿದರೆ ದೇಶಭಾಷೆಗಳ ಅಭ್ಯಾಸಕ್ಕೆ ಅತ್ಯುತ್ತಮವಾದ ಆಶ್ರಯ ಕೊಟ್ಟಂತೆ ಆಗುವದು.

ಜ್ಞಾನಪ್ರಸಾರಕ ಸಮಾಜವೆಂಬದೊಂದು ಸಮಾಜವು ಮು ಬಯಿಯಲ್ಲಿ ಯೆಷ್ಟೋ ವರ್ಷಗಳ ಪೂರ್ವದಲ್ಲಿ ಇತ್ತು. ಅದ ಈಗ ಪುನಃ ಸ್ಥಾಪಿಸಲ್ಪಟ್ಟು, ಜ್ಞಾನಪ್ರಸಾರದ ಕೆಲಸವು ಆರಂಭ ವಾಗಿರುತ್ತದೆ. ಈ ಸಭೆಯಲ್ಲಿ ಈ ತಿಂಗಳಲ್ಲಿ ರತಿರಾಮ ದುರ್ಗಾ ರಾಮ ಬೀ. ಏ. ಯೆಂಬುವರು ಬೌದ್ಧ ಧರ್ಮದಲ್ಲಿ ಅತಿ ಪ್ರಖ್ಯಾತನಾದ ಅಶೋಕವರ್ಧನನೆಂಬ ಅರಸನನ್ನು ಕುರಿತು ವ್ಯಾಖ್ಯಾನ ಕೊಟ್ಟರು. ವ್ಯಾಖ್ಯಾನಕಾರರು ಹತ್ತೆಂಟು ವರ್ಷ ಶಿಲಾಲಿಪಿಗಳ ಅ ಭ್ಯಾಸಮಾಡಿದ್ದರಿಂದ ಅವರು ಈ ವಿಷಯವನ್ನು ಸರಸಾಗಿ ಬಲ್ಲ ಥವರಿದ್ದಾರೆ. ಅಶೋಕವರ್ಧನನು ಮಗಧ ದೇಶದ ಪ್ರಖ್ಯಾತ ಅ ರಸನಾದ ಚಂದ್ರಗುಪ್ತ ರಾಜನ ಮೊಮ್ಮಗನು; ಇವನು ಕ್ರಿಸ್ತ ಶಕದ ಪೂರ್ವದಲ್ಲಿ ೨೬೦ನೇ ವರ್ಷದಿಂದ ೨೩೦ನೇ ವರ್ಷ ವರೆಗೆ ಪಾಟಲಿ ಪುತ್ರ (ಪಾಟಣಾ) ಪಟ್ಟಣದಲ್ಲಿ ಆಳಿದನು ಇವನ ರಾಜ್ಯವು ಪಂಜಾಬದಿಂದ ಅಸಾಮು, ಒಡಿಯಾ, ಪ್ರ ತಗಳ ವರೆಗೂ, ಟಿಬೇಟದಿಂದ ಮಹಾರಾಷ್ಟ್ರ ದೇಶ ವರೆಗೂ ಹಬ್ಬಿತ್ತು. ಅಶೋಕವರ್ಧನನು ಧರ್ಮ ನೀ ಗಳ ವಿಷಯವಾಗಿ ಪ್ರಜೆಗಳಿಗೆ ಕೊಟ್ಟ ಶಾಸನಗಳು ಗುಡ್ಡ ಗಳಲ್ಲಿಯ ಬಂಡೆಗಳಲಿ ಕೊರಿಯಲ್ಪಟ್ಟು ಈಗ್ಗೂ ಬಹಳ ಡೆಯಲ್ಲಿ ದೃಷ್ಟಿಗೆ ಬೀಳುತ್ತವೆ. ಒಂದು ಶಾಸನವು ಕೊಂ ಣದಲ್ಲಿ ವಸಯಿಯ ಹತ್ತರ ಇರುತ್ತದೆ. ಈ ಅರಸು ಎದ ಧರ್ಮರಾಜನೆನಿಸಿಕೊಂಡನು.

—ooo—

ರಾವಬಹಾದ್ದೂರ ತಿರಮಲರಾವ ಇನಾಮದಾರ ಇ ಹುಕ್ಕೇರಿದ ನೀಲಕಂಠರಾವ ರುಕ್ಮಾಂಗದ ಎಂಬವರು ಇದ ಕೆಗೆ [illegible]ರಿದ್ದರು. ಅವರನ್ನು ಸರಕಾರದವರು ನಿ

ಸರ್ವಿಸಿನೊಳಗೆ ಏರಿಸಿ, ಸದ್ಯಕ್ಕೆ ಅಸಿಷ್ಟಂಟ ಕಲೆಕಟರರ ಕೆಲಸಕ್ಕೆ ನೇಮಿಸಿದ್ದು ಕೇಳಿ ಯಾರಿಗೆ ಆನಂದವಾಗಲಿಕ್ಕಿಲ್ಲ? ವೆಂಕಟರಾಯರು ಸ್ವಲ್ಪ ದಿವಸಗಳಲ್ಲಿ ಅಸಿಷ್ಟಾಂಟ ಜಡಜರಾಗತಕ್ಕವರೆಂದು ಕೇಳುತ್ತೇವೆ.

———oo———

ಎಡಿಸನ್ನೆಂಬ ಹೆಸರಾದ ಬುದ್ಧಿವಂತನು ಫೋನೋಗ್ರಾಫ (ಧ್ವನಿವಾಹಕ) ವೆಂಬದೊಂದು ಯಂತ್ರವನ್ನು ರಚಿಸಿದ್ದು ಹಿಂದೆ ತಿಳಿಸಿದ್ದೇವೆ. ಆ ಯಂತ್ರದಿಂದ ಒಂದು ವರ್ತಮಾನಪತ್ರವನ್ನು ತೆಗಿಯುವ ಆಲೋಚನೆಯಲ್ಲಿ ಎಡಿಸನ್ ಸಾಹೇಬರು ಇದ್ದಾರೆಂದು ತಿಳಿದದೆ. ಈ ವರ್ತಮಾನಪತ್ರವನ್ನು ಓದುವ ಪ್ರಯೋಜನವಿಲ್ಲ. ಇದನ್ನು ಯಂತ್ರದೊಳಗಿಟ್ಟು ಕಿವಿಗೊಟ್ಟರೆ ತೀರಿತು; ವರ್ತಮಾನಪತ್ರವು ತನ್ನಲ್ಲಿಯ ಯಾವತ್ತು ವರ್ತಮಾನಗಳನ್ನು ತನಗೆ ತಾನೇ ಓದಿ ಹೇಳುವದು!

———oo———

ನಮ್ಮ ದೇಶದಲ್ಲಿ ಹಿರಿಯರು ದಕ್ಷಿಣಕ್ಕೆ ಕಾಲು ಮಾಡಿ ಮಲಗಬಾರದೆಂದು ಹೇಳುತ್ತಾರೆ. ಇದರಂತೆ ಯುರೋಪದ ಶಾಸ್ತ್ರರು ದಕ್ಷಿಣಕ್ಕೆ ತಲೆ ಮಾಡಿ ಮಲಗುವದರಲ್ಲಿ ಬಹಳ ಹಿತ ಉಂಟೆಂದು ಬಳಗಡೆಯಲ್ಲಿ ಹೇಳ ಹತ್ತಿದ್ದಾರೆ. ಇದರ ಕಾರಣವನ್ನು ಅವರು ಹೇಳುವದು ಹ್ಯಾಗಂದರೆ— ಭೂಗೋಳವು ಒಂದು ದೊಡ್ಡ ಲೋಹಚುಂಬಕವಿರುತ್ತದೆ. ಅದರ ದಕ್ಷಿಣ ಧ್ರುವವು ಧನಚುಂಬಕವಿರುತ್ತದೆಂತಲೂ ಉತ್ತರ ಧ್ರುವವು ಋಣಚುಂಬಕವಿರುತ್ತದೆಂತಲೂ ತಿಳಿದದೆ. ಇದರಂತೆ ಮನುಷ್ಯರ ದೇಹದಲ್ಲಿಯೂ ಚುಂಬಕ ಗುಣವಿದ್ದು, ತಲೆಯು ಧನವೆಂತಲೂ ಕಾಲು ಋಣವೆಂತಲೂ ಸಿದ್ಧವಾಗಿದೆ. ಆ ಕಾರಣ ದಕ್ಷಿಣಕ್ಕೆ ತಲೆಮಾಡಿ ಮಲಗಿದರೆ ಶರೀರಕ್ಕೆ ಚುಂಬಕ ಗುಣವು ದೊ

ರಿವು ಆರೋಗ್ಯವಾಗುತ್ತದೆ; ಹಾಗೆ ಮಾಡದಿದ್ದರೆ ಜ್ವರ ಮುಂ
ತಾದ ರೋಗಗಳು ಬರುತ್ತವೆ.

— ooo —

ಮಿ. ಇನ್‌ಸ್ಪೆಕ್ಟರ ಸಾಹೇಬರು ಮುಂಬಯಿ ಕಡೆಯಿಂ
ದ ಬಂದು ಬೆಳಗಾವಿ ಧಾರವಾಡ ಜಿಲ್ಲೆಗಳಲ್ಲಿ ಸದ್ಯಕ್ಕೆ ತಿ
ರುಗಲಿಕ್ಕೆ ಹೋಗಿದ್ದಾರೆ.

— ooo —

ಮುಲಕೀ ಮುಂತಾದ ಪರೀಕ್ಷೆಗಳಲ್ಲಿ ಪರೀಕ್ಷಕರು ಉತ್ತ
ರದ ಕಾಗದಗಳನ್ನು ನೋಡಿ ಗುಣಕೊಟ್ಟ ಬಳಿಕ ಪ್ರತಿ ಒಂದ
ಕಾಗದದ ಮೇಲೆ ತಮ್ಮ ಸಹಿ ಮಾಡಲಿಕ್ಕೆ ಏನು ಅಡ್ಡಿಯುಂಟೆಂ
ದು ಸರಕಾರದಿಂದ ಒಂದು ಪ್ರಶ್ನವು ಬಂದಿರುತ್ತದೆಂದು ಕೇಳು
ತ್ತೇವೆ. ಇದರ ಉದ್ದೇಶವೇನು ತಿಳಿಯುವದಿಲ್ಲ. ಸಹಿ ಮಾಡು
ವ ಕೆಲಸ ಮಾತ್ರ ಬೆಳೆಯುವದು. ಅದರಿಂದ ಒಂದು ಕಟ್ಟು ಉಪಾ
ಬಗೆಯಿಂದಲೂ ಆಗದೆಂದು ನಮಗೆ ತೋರುತ್ತದೆ.

— ooo —

ಬರುವ ಏಪ್ರಿಲ ತಿಂಗಳಿನಲ್ಲಿ ಆಗತಕ್ಕ ಚಿತ್ರಕಲೆಯ ಪ
ರೀಕ್ಷೆಗೆ ಧಾರವಾಡದಲ್ಲಿ ಸುಮಾರು ೪೦ಕ್ಕಿಂತ ಹೆಚ್ಚು ಜನ
ರು ಕೂಡ್ರತಕ್ಕವರಿದ್ದಾರೆಂದು ಕೇಳುತ್ತೇವೆ.

— ooo —

Notices.

ನೋಟಿಸು

ಈ ನೋಟೀಸಿನಿಂದ ಪ್ರಸಿದ್ಧ ಪಡಿಸುವದೇನಂದರೆ:—
ಸನ್ನ ೧೮೭೯ನೇ ಇಸವಿಯ ಅಕ್ಟೋಬರ ತಿಂಗಳ

ಪತ್ರಿಕೆಯ ೧೪ರಿಂದ ೧೬ನೇ ಪಾನುಗಳಲ್ಲಿ ಛಾಪಿಸಿರುವ ಯಮಗಳಂತೆ " ವರ್ಧಪ್ರಾಯಜ " ಎಂಬ ಇನಾಮಿಗಾಗಿ ರೀಕ್ಷೆಯನ್ನು ಕನ್ನಡದಲ್ಲಿ ಕೆಳಗೆ ಸಹಿ ಮಾಡಿದವರು ಸನ್ ೮೮೯ನೇ ಇಸವಿಯ ಅಗ್ಟೋಬರ ತಿಂಗಳಿನ ೭ನೇ ತಾರೀ ಸೋಮವಾರ ದಿವಸ ಧಾರವಾಡ ಟ್ರೇನಿಂಗಕಾಲೇಜದ ತೆಗೆದು ಕೊಳ್ಳುವರು. ೪೦ ರುಪಾಯಿದ್ದು ಒಂದು ೩೦ ಪಾಯಿದ್ದು ಮತ್ತೊಂದು ಹೀಗೆ ಎರಡು ಇನಾಮುಗಳು ಕೊ ತಕ್ಕವಿರುತ್ತವೆ. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾ ರು ತಮ್ಮ ಅರ್ಜಿಗಳನ್ನು ಬರುವ ಸಪ್ಟಂಬರ ತಿಂಗಳಿನ ೧ ತಾರೀಖಿನ ಪೂರ್ವದಲ್ಲಿ ಅಥವಾ ಪರಮಾವಧಿ ಆ ತಾ ಖಿನ ದಿವಸ ಕೆಳಗೆ ಸಹಿ ಮಾಡಿದವರ ಕಡಿಗೆ ಕಳುಹಿಸಿ ಡಬೇಕು. ಪರೀಕ್ಷೆಯು ಬೆಳಗಿನ ೧೦॥ ಘಂಟೆಗೆ ಪ್ರಾರಂಭ ಗುವದು.

ರವಾಡ ತಾ.
೮ ಫೆಬ್ರುವರಿ
೧೮೮೯ ಇ.

(Signed) S. V. Patwardhan
Educational Inspector S. D.

—o—

Moral Training,
ನೀತಿ ಶಿಕ್ಷಣವು.

ಎಲ್ಲ ಶ್ವಾಪದಗಳಲ್ಲಿ ಹುಲಿಯು ಬಹು ಭಯಂಕರ ಪ್ರಾ ಯು. ಅದು ಅಡವಿಯಲ್ಲಿ ಮನುಷ್ಯ ಪಶು ಮೃಗಾದಿಗಳ ಕಂಡ ಕೂಡಲೆ ಆರ್ಭಟಿಸಿ ಗಪ್ಪನೆ ಹಿಡಿದು ಕೊಲ್ಲುವ ಆದಾಗ್ಯೂ ನಾವು ಇಂಥ ದುಷ್ಟ ಮೃಗವನ್ನು ಒಂದು

ಮೇಲೆ ಚಿಕ್ಕಂದಿನಲ್ಲಿ ಹಿಡಿತಂದು ಅದಕ್ಕೆ ಬುದ್ಧಿಗಲಿಸಿದರೆ
ದು ಹೇಳಿದಂತೆ ನಡೆಯುವದು. ಇನ್ನು ಮನುಷ್ಯನಂತೂ ಜ
ನ ಉಳ್ಳ ಪ್ರಾಣಿ ಆದದರಿಂದ ನೀತಿ ಅನೀತಿಗಳನ್ನು ನಿಶ್ಚ
ಬಲ್ಲನು. ಅಂದಮೇಲೆ ಮನುಷ್ಯನಿಗೆ ನೀತಿಯನ್ನು ಕಲಿ
ವದು ಅಸಾಧ್ಯವಲ್ಲ. ಕೆಲವರಲ್ಲಿ ನೀತಿಯ ನಡತೆಗಳನ್ನು
ಲವರಲ್ಲಿ ಅನೀತಿಯ ನಡತೆಗಳನ್ನು ನಾವು ನೋಡುತ್ತೇ
ಇವಕ್ಕೆ ಕಾರಣಗಳು ಬೇಕು. ಆ ಕಾರಣಗಳನ್ನು ಹೇಳ
ಮೊದಲು ನೀತಿ ಶಿಕ್ಷಣವೆಂದರೇನೆಂಬದನ್ನು ಹೇಳುವದು
ಶ್ಯವಾಗಿರುತ್ತದೆ. ನೀತಿಯಂದರೆ ಒಳ್ಳೇ ನಡತೆ, ಶಿಕ್ಷಣವೆಂ
ರೆ ಕಲಿಸೋಣವು, ಇದರಿಂದ ಮನುಷ್ಯನಿಗೆ ನೀತಿಯನ್ನು
ಲಿಸಬೇಕೆಂಬದು ಸ್ಪಷ್ಟವಾಗುತ್ತದೆ. ನೀತಿ ಸಂಪಾದನೆಗೆ ಮ
ರು ಮಾರ್ಗಗಳುಂಟು. ೧ನೇದು— ಆರಂಭದಲ್ಲಿ ತಾಯಿ
ದೆಗಳಿಂದ, ೨ನೇದು— ಗುರುಗಳಿಂದ, ೩ನೇದು— ಸಹ
ಸದಿಂದ, ಹಾಗು ಹಲವು ನೀತಿಯ ಗ್ರಂಥಗಳನ್ನು ಓದು
ರಿಂದ. ಚಿಕ್ಕಂದಿನಲ್ಲಿ ಯಾವ ಪ್ರಕಾರದ ಸಂಸ್ಕಾರವಾಗಿರು
ದೆಯೋ ಅದರಂತೆ ಮನುಷ್ಯರ ಸ್ವಭಾವವು ಇರುವದು
ಶ್ಚಯ. ತಾಯಿತಂದೆಗಳು ನೀತಿಯುಳ್ಳವರಿದ್ದರೆ ಮಕ್ಕಳ
ರೂ ನೀತಿಯುಳ್ಳವರಾಗುತ್ತಾರೆ. ಅವರು ಬಾಲ್ಯದಲ್ಲಿ 'ದೇ
ರು, ನಮಸ್ಕಾರ ಮಾಡು. ಅವನ ಸೇವೆ ಮಾಡಿದರೆ ನಿ
ಐಶ್ವರ್ಯ ಕೊಡುತ್ತಾನೆ. ಅಕ್ಕ, ಬೈಬೇಡ. ಮಾವ, ಒದಿಯ
ಡ, ನೊಣ, ಇರುವೆ, ಕೊಲ್ಲಬೇಡ.' ಮುಂತಾದ ನೀತಿಯ ವ
ನಗಳಿಂದ ಈಶಶ್ರದ್ಧೆ, ಪಿತೃಭಕ್ತಿ, ಭೂತದಯೆ ಮುಂತಾದ ನೀ
ತಿಯ ಅಂಕುರಗಳನ್ನು ಹುಡುಗರಲ್ಲಿ ಊರಿರುತ್ತಾರೆ. ಆ
ಡುಗರು ಐದು ವರ್ಷದವರಾಗಿ ಲೋಕದ ಹಿತಕರ್ತನೆನಿಸ

ಮಾಸ್ತರನ ವಶದಲ್ಲಿ ಬರುತ್ತಾರೆ. ಅಲ್ಲಿಂದ ತಾಯಿತಂದೆಗ
ಳು ಊರಿದ ನೀತಿಯ ಅಂಕುರಗಳನ್ನು ಬೆಳಿಸುವದು ಮಾಸ್ತ
ರ ಕರ್ತವ್ಯಕರ್ಮವಾಗಿರುತ್ತದೆ. ಸ್ವಂತ ಸಾಮಾಜಿಕ ರಾಜಕೀ
ಯ ಕಾರ್ಯಗಳಲ್ಲಿ ಯಾವ ರೀತಿಯಿಂದ ನಡೆಯಬೇಕೆಂಬದು
ಚಿಕ್ಕವರಿಗೆ ಗೊತ್ತಿರುವದಿಲ್ಲ. ಈ ನಡತೆಯು ಸಾಧಾರಣವಾ
ಮಾಸ್ತರರಿಂದ ಕಲಿಸಲ್ಪಡುತ್ತವೆ. ಎಂದೆನ್ನಲಿಕ್ಕೆ ಅಡ್ಡಿ ಇ
ಲ್ಲ. ಮನುಷ್ಯನು ಪ್ರೌಢಾವಸ್ಥೆಯಲ್ಲಿ ಸಜ್ಜನರ ಸಹವಾಸ
ಂದಲೂ, ಹಲವು ಗ್ರಂಥಗಳನು ಓದುವದರಿಂದಲೂ, ನೀ
ಯ ಸಂಬಂಧದ ಹಲವು ಉದಾಹರಣೆಗಳು ಮನದಲ್ಲಿ ನೆ
ಟ್ಟು ನೀತಿವಂತನಾಗುವನು. ಇಷ್ಟೆಲ್ಲ ಯಾತರಿಂದ? ಉತ್ತಮ
ಡತೆಯುಳ್ಳ ತಾಯಿತಂದೆಗಳು, ಲೋಕ ಸುಧಾರಕನಾದ ಮಾ
ಸ್ತರನು, ಸಜ್ಜನರ ಸ್ನೇಹವು ಮುಂತಾದವುಗಳಿಂದ. ಹಾಗಿ
ಗದೆ ನೀತಿಯನ್ನು ಕಲಿಸುವವರೇ ಕೆಟ್ಟ ನಡತೆಯವರಾದ
ಮೇಲೆ ಕಲಿಯುವವರು ಒಳ್ಳೇ ನಡತೆಯವರು ಹ್ಯಾಗಾಗುವ
ರು. ಬೇವಿನ ಅರ್ಕ ತೆಗೆದರೆ ಅದು ಮತ್ತಿಷ್ಟು ಕೈ ಆಗುವದಲ್ಲ
ತೀಯಾಗಲಾರದು. ಉದಾಹರಣಾರ್ಥವಾಗಿ—ಗಂಟಿಚೋರರು
ಮುಂತಾದ ಕೆಲವು ಕಸಬುದಾರ ಜನರು ತಮ್ಮ ಮಕ್ಕಳಿಗೆ ಮು
ದ್ದಾರಭ್ಯ ಸುಳ್ಳು ಹೇಳಲಿಕ್ಕೂ, ಪರರ ಒಡವೆಯನ್ನು ಕ
ಯಲಿಕ್ಕೂ, ಕಲಿಸುತ್ತಾರೆ. ಅಂದ ಮೇಲೆ ಅಂಥವರ ಮಕ್ಕ
ಳು ನೀತಿವಂತರಾಗುವ ಬಗೆ ಹ್ಯಾಗೆ? ಆದದರಿಂದ ಬೇವಿನ ಅ
ರ್ಕದಂತೆ ಹೆಚ್ಚಿಗೆ ಕಳ್ಳರಾಗುವರು. ಮನುಷ್ಯರ ಮನಸ್ಸೇ
ಮೊದಲು ಚಂಚಲವು. ಅದಕ್ಕೆ ಇಂಥ ಹಲವು ತರದ ವ್ಯಸನಗ
ಳು ಹತ್ತಿದರೆ ಅವಕ್ಕೆ ನೀತಿಯ ಸಂಪರ್ಕವು ಹ್ಯಾಗೆ ಆದೀತು,
ದವರಿಂದ ಅವರಿಗೆ ಚಿಕ್ಕಂದಿನಲ್ಲಿ ನೀತಿಯನ್ನು ಹೇಳಬೇಕು.

ಜನರು ನೀತಿಯಿಂದ ನಡೆಯ ಬೇಕೆಂದು ದೊಡ್ಡ ದೊಡ್ಡ
ಋಷಿಗಳು, ವಿಭೀಷಣ ವಿದುರ ಮುಂತಾದವರು ಪೂರ್ವ
ಲ್ಲಿ ಬರೆದು ಇಟ್ಟ ನೀತಿಯ ಹಲವು ಪುರಾಣಗಳ ಕಥೆಗ
ನ್ನು ಓದುವದರಿಂದ ತಕ್ಕ ಮಟ್ಟಿಗೆ ಪ್ರಯೋಜನವಾಗುವದು
ಆದರೆ ಇಂಥವುಗಳನ್ನು ಓದಲಿಕ್ಕೆ ತಕ್ಕಷ್ಟು ವಿದ್ಯೆಯೂ ಜಾ
ಣತನವೂ ಬೇಕು. ಇದಲ್ಲದೆ ಅವು ಪದ್ಯಾತ್ಮಕ ಗ್ರಂಥಗಳ
ಗಿರುವದರಿಂದ ಚಿಕ್ಕಂದಿನಲ್ಲಿ ಇಂಥವುಗಳನ್ನು ಓದುವದು
ಸಂಭವವು. ಇದನ್ನೇ ಅವಲಂಬಿಸಿ ಕೂತರೆ ಎಳೇದಿದ್ದಾಗ
ದ್ದಬೇಕೆಂಬ ನಮ್ಮ ಅಪೇಕ್ಷೆಗೆ ಕೊರತೆ ಬರುತ್ತದೆ.

ಈಗ ಎಷ್ಟೋ ಪರೀಕ್ಷೆಗಳನ್ನು ಕೊಟ್ಟಂಥ ನಮ್ಮ ಬಾಂ
ವರನ್ನು ನೋಡಿದರೆ ಆನಂದವಾಗುವದಕ್ಕೆ ಬದಲು ಖೇದವ
ಗುತ್ತದೆ. ಯಾಕಂದರೆ-ನೀತಿಯೆಂಬುವದು ಅವರಲ್ಲಿ ಇಲ್ಲ
ಎಷ್ಟು ಕಲಿತರೂ ಏನು ಫಲವು. ಈಗಿನ ರಾಷ್ಟ್ರ ಸುಧಾರಕರ
ವ ಜನರು, ವಿದ್ವಾಂಸನಾದಾಗ್ಯೂ ನೀತಿಯನ್ನು ಕಲಿಯದಿದ್ದ
ಮೇಲೆ ಅವನು ಕೆಲಸಕ್ಕೆ ಬಾರದವ, ನೆಂದು ತಿಳಿದು ಎಲ್ಲ ಜ
ರಿಗೆ ನೀತಿ ಶಿಕ್ಷಣವನ್ನು ಕೊಡಬೇಕೆಂಬ ಕಾಂಕ್ಷೆಯುಳ್ಳವರಾ
ತಮ್ಮ ಉದ್ಗಾರವನ್ನು ಹೊರಗೆ ಹಾಕುತ್ತಾರೆ. ಬಂಗಾರವ
ಪುಟಕ್ಕೆ ಹಾಕದೆ ಹ್ಯಾಗೆ ಚೊಕ್ಕವಾಗುವದಿಲ್ಲವೋ ಹಾಗೆ ಮ
ನುಷ್ಯನು ನೀತಿ ಕಲಿಯದೆ ಜಾಣನಾಗುವದಿಲ್ಲೆಂದೂ ಯೋಗ್ಯ
ವಯಸ್ಸಿನಲ್ಲಿ ಕಲಿತ ಹೊರ್ತು ನೀತಿಯು ಬರುವದಿಲ್ಲೆಂದು
ತಿಳಿಕೊಂಡು ಶಾಲೆಯಲ್ಲಿ ನೀತಿಯನ್ನು ಕಲಿಸಬೇಕೆಂಬ
ವು ಅಭಿಪ್ರಾಯವನ್ನು ಪ್ರಕಟಿಸುತ್ತಾರೆ ಈ ವಿಷಯದಲ್ಲಿ
ಹಲವು ಜನರ ಮತಗಳು ಬೇರೆ ಬೇರೆಯುಂಟು. ಅವುಗಳಲ್ಲಿ
ಎಲ್ಲಕ್ಕೂ ಹೆಚ್ಚು ಸಯುಕ್ತಿಕವಾದದ್ದು ಯಾವದೆಂದರೆ-ಈ

ಲೆಗಳಲ್ಲಿ ನೀತಿಯ ಶಿಕ್ಷಣವು ತಕ್ಕಮಟ್ಟಿಗೆ ನಡೆದೇ ಇರು
ಡೆ ಅದು ಹುಡುಗರು ತಪ್ಪು ಮಾಡಿದಾಗಲೂ ಅಯೋಗ್ಯತ
ದಿಂದ ನಡೆದಾಗಲೂ ಅವರ ಗುರುಗಳು ಆಗಾಗ್ಗೆ ಬುದ್ಧಿಹೇ
ವವರ ಮೇಲಿಂದ ಕಂಡು ಬರುತ್ತದೆ. ಇದರಿಂದ ಎಷ್ಟು
ತಿ ಶಿಕ್ಷಣವು ದೊರೆಯಬೇಕು ಅಷ್ಟು ದೊರೆಯುವದಿಲ್ಲ.
ನಕಾರಣ ಹಲವು ಗ್ರಂಥಗಳೊಳಗಿನ ಹಲವು ಭಾಷೆಯೊಳ
ನ ಸರ್ವಮತಕ್ಕೂ ಮಾನ್ಯವಾದ ನೀತಿಯ ಮಾತುಗಳಿಂದ
ಡಿದ ಒಂದು ಗ್ರಂಥವನ್ನು ರಚಿಸಿ ವರ್ಗದಲ್ಲಿ ಎಲ್ಲ ವಿಷ
ಗಳನ್ನು ಕಲಿಸುವಂತೆ ಈ ವಿಷಯವನ್ನಾದರೂ ಒಂದು
ಸು ಕಲಿಸಬೇಕು. ಇದಲ್ಲದೆ ಮಾಸ್ತರನು ನೀತಿ ಮಾರ್ಗ
ದ ನಡೆಯುವದರಿಂದ ಅವನ್ನೇ ಎಲ್ಲ ವಿದ್ಯಾರ್ಥಿಗಳು ಕ
ಲಿಕ್ಕೆ ಹವಣಿಸುವರು. ಈ ಪ್ರಕಾರ ನೀತಿ ಶಿಕ್ಷಣವು ನ
ಯುವದರಿಂದ ನಮ್ಮ ದೇಶದವರು ಚತುರರಾಗುವರು. ದೇ
ಕ್ಯ ಸಾಧಿಸಿ ನಮ್ಮಲ್ಲಿ ಒಕ್ಕಟ್ಟು ಬೆಳೆಯುವದು. ಮತ್ತು
ಮ್ಮ ಧರ್ಮವು ನೆಲೆಗೊಂಡು ನಾವು ಪರಮೇಶ್ವರ ಕೃಪೆಯು
ಸೇರಲಿಕ್ಕೆಲ್ಲೆಂದು ಆಶಿಸುತ್ತೇವೆ.

ಬಾಂದೋ ಕೃಷ್ಣ ಗೋರೆ. ತಾರೀಖು ೯ | ೨ | ೧೮೮೯.

* * *

(೧೫ನೇ ಪುಟದಿಂದ ಮುಂದೆ ಸಾಗಿದ್ದು.)

ದರಿಂದ ಸರಕಾರದ ಚಾಕರರ ಬುದ್ಧಿಯು ಹೆಚ್ಚೆಂದು ಅ
ತ್ತಿರುವರು. ನಮ್ಮ ದೇಶದಲ್ಲಿ ಸರಕಾರದ ಚಾಕರಿಗಳ
ವಿಶೇಷವಾಗಿ ಬ್ರಾಹ್ಮಣರೇ ಸ್ವೀಕರಿಸಿರುವದರಿಂದ ಅವ
ದ್ಧಿಯೇ ಹೆಚ್ಚೆಂದು ಉಳಿದ ಯಾವತ್ತರೂ ತಿಳಿಯುವ

ಕು. ಬುದ್ಧಿಯ ತುಲನೆಯನ್ನು ನಾವು ಯಥಾರ್ಥವಾಗಿ ಮಾ
ಹೋದರೆ ರಾಧಿಯಲ್ಲಿ ಶ್ರೇಷ್ಠನೆನಿಸಿದ ಸರಕಾರದ ಉದ್ಯೋ
ಗಸ್ಥನ ಬುದ್ಧಿಯಕಿಂತಲೂ ಒಬ್ಬ ಕಲಾಕೌಶಲ್ಯದ ಉದ್ಯೋ
ಗ ಮಾಡುವವನ ಬುದ್ಧಿಯು ಶ್ರೇಷ್ಠವೆಂದು ಸಹ ಕಂಡುಬ
ಬಹುದು. ಇದರಂತೆ ಹೆಂಗಸರು ಕಡಿಮೆ ಬುದ್ಧಿಯುಳ್ಳವರೆ
ದು ನಾವು ಅನ್ನುತ್ತೇವಷ್ಟೇ ಅವರಲ್ಲಿ ಕೆಲವರ ಬುದ್ಧಿಯ
ಚನ್ನಾಗಿರುತ್ತದೆ. ಆದರೂ ಅವರ ಬುದ್ಧಿಯು ಪರೀಕ್ಷೆಯನ
ನಾವು ಶ್ರೇಷ್ಠರೆಂದೆಣಿಸಿದ ಸರಕಾರದ ಚಾಕರರ ಕೆಲಸಕ
ಸಹಾಯಭೂತವಾದ ಓದೋಣ ಬರೆಯೋಣ ಮುಂತಾದದ್ದ
ಲ್ಲಿ ತುಲನೆ ಮಾಡುತ್ತಿರುವವರಿಂದ ಶಾಗೋಲಿ ಡಾಕ್ಟೋ
ಮುಂತಾದ ಕೆಲಸಗಳಲ್ಲಿ ಕಂಡುಬರುತ್ತಿರುವ ಬುದ್ಧಿ ಕೌ
ಲ್ಯಕ್ಕೆ ಸಹ ಲಘುತ್ವ ಬರುತ್ತದೆ. ಆದದರಿಂದ ಮುಖ್ಯವಾ
ನಾವು ಹೇಳುವದೇನಂದರೆ ಮಿದುಡಿನ ಉಪಯೋಗವನ್ನು
ಚ್ಚಿಗೆ ಮಾಡಿಕೊಳ್ಳುವಂಥ ಒಕ್ಕಲುತನದವರು ಹಾಗಿರಲಿ.
ದ್ಧಿಯುಳ್ಳ ಕಲಾಕೌಶಲ್ಯದವರು ಮುಂತಾದವರು ಸಹ
ಕಾರದ ಚಾಕರರ ಸಂಬಂಧದಿಂದ ಕಡಿಮೆ ಬುದ್ಧಿಯುಳ್ಳವ
ದು ಎಣಿಸಲ್ಪಡುತ್ತಾರೆ. ಯಾಕಂದರೆ ಕೈಗಾರಿಕೆಯವರ
ತ್ತು ಒಕ್ಕಲುತನದವರ ಬುದ್ಧಿಯು ಬೇರೆ ಮಾರ್ಗವನ್ನು ಹಿ
ದಿರುವದರಿಂದ ಆ ಮಾರ್ಗದ ಎಳತದ ಮೂಲಕ ವಾ
ನದಿಯು ಪ್ರವಾಹದಂತೆ ಅತ್ತ ಕಡಿಗೆ ಒಲಿಯುತ್ತಿ
ವದು ಸಹಜವೇ. ಇತ್ತ ಕಡೆ ಒಲಿಯುವ ಮೂಲಕ ಅವರು ಪ
ದ ಬುದ್ಧಿಯವರೆಂದೆಣಿಸಲ್ಪಡುವರು. ಇಲ್ಲಿಯ ತನಕ ಜನ
ಬುದ್ಧಿಯಲ್ಲಿ ಭೇದವಾಗುವ ರೀತಿಯನ್ನು ವಿವರಿಸಿದೆನ
ಇದಕ್ಕೆ ಬೇರೆಬೇರೆ ಹುಡುಗರಲ್ಲಿ ಬುದ್ಧಿಯು ಹೆಚ್ಚು ಕಡಿ

ಗಿರುವದರ ಕಾರಣವನ್ನು ಕುರಿತು ಬರೆಯುವದು ಈಗಿನ
ದ್ದೇಶವಿರುವದರಿಂದ ಅದನ್ನು ಕುರಿತು ವಿಚಾರಿಸುವಾ—
ಮೇಲೆ ಬರೆದಂತೆ ಬೇರೆ ಬೇರೆ ಉದ್ಯೋಗಗಳನ್ನು ಹಿಡಿ
ಅದಕ್ಕೆ ತಾಗುವಷ್ಟು ಬುದ್ಧಿಯನ್ನು ಪಡೆದು ಜೀ
ವವರ ಮಕ್ಕಳಾದರೂ ತಮ್ಮ ಹಿರಿಯರ ಮಾರ್ಗವನ್ನೇ
ಯುವವರು. ಹ್ಯಾಗೆಂದರೆ — ಹುಡುಗರಿಗೆ ಹತ್ತುವ ಬುದ್ಧಿ
ಅವರು ಮಾಡುವ ಸಹವಾಸವನ್ನೂ, ಊಟವನ್ನೂ ಅವಲಂ
ರುತ್ತದೆ. ಹುಡುಗರಿಗೆ ವಿಶೇಷ ಸಹವಾಸಿಕರೆಂದರೆ ತಂದೆ
ಯಿಗಳೇ ಆದದರಿಂದ ಅವರು ಮಾಡುವ ಕೆಲಸಗಳನ್ನೇ ಹು
ಗರು ಸರ್ವದಾ ಮಾಡಲಿಕ್ಕೆ ಯತ್ನಿಸುತ್ತಿರುತ್ತಾರೆ. ಒ
ಲಿತನದವರ ಮಕ್ಕಳು ತಮ್ಮವರು ಮಾಡುವ ಕೆಲಸಗಳನ್ನೇ
ಡಲಿಕ್ಕೆ ಹವಣಿಸುತ್ತಿರುತ್ತಾರೆ. ಬುದ್ಧಿಯನ್ನು ಬೆಳಿಸುವ ಚ
ಂತೂ ಹತ್ತುವದೇ ಇಲ್ಲ. ಕಲಾಕೌಶಲ್ಯಗಾರಮುಂತಾದವರ
ಕ್ಕಳಾದರೂ ತಮ್ಮ ಹಿರಿಯರು ಮಾಡುವ ಕೆಲಸಗಳಕಡೆಗೇ
ನಸ್ಸನ್ನು ಒಲಿಸುತ್ತಿರುತ್ತಾರೆ. ಉಳಿದ ಮಾತಿನ ಕಡೆಗೆ
ರ ಲಕ್ಷ್ಯವು ಹತ್ತುವದು ಕಡಿಮೆ. ಬ್ರಾಹ್ಮಣರ ಮ
ಳು ತಮ್ಮ ಹಿರಿಯರು ಸರ್ವದಾ ಮಾಡುತ್ತಿರುವ ಕೆಲಸಗ
ಓದೋಣ, ಬರಿಯೋಣ ಮುಂತಾದ್ದರಲ್ಲಿಯೇ ತೊಡ
ತ್ತಾರೆ. ಆದದರಿಂದ ಈ ಯಾವತ್ತರನ್ನು, ನಾವು ಬು
ಯನ್ನು ಪರೀಕ್ಷಿಸುವ ಸ್ಥಳವಾದ ಶಾಲೆಗೆ ತಂದು ಹಾಕಲು,
ರು ತಮ್ಮ ತಮ್ಮ ಬುದ್ಧಿಯು ಮೊದಲು ಎಳಿಯುತ್ತಿದ್ದ
ರ್ಗವನ್ನೇ ಹಿಡಿಯುವರು ಅಂದರೆ ಬ್ರಾಹ್ಮಣರ ಹುಡುಗರ
ಯು ಶಾಲೆಯಕಡೆಗೂ ಉಳಿದವರ ಹುಡುಗರ ಬುದ್ಧಿ
ಅವರವರ ಕುಲ ಉದ್ಯೋಗಗಳ ಕಡೆಗೂ ಎಳೆಯುತ್ತಿ

ಕು. ಬುದ್ಧಿಯ ತುಲನೆಯನ್ನು ನಾವು ಯಥಾರ್ಥವಾಗಿ ಮಾಡಹೋದರೆ ರೀತಿಯಲ್ಲಿ ಶ್ರೇಷ್ಠನೆನಿಸಿದ ಸರಕಾರದ ಉದ್ಯೋಗಸ್ಥನ ಬುದ್ಧಿಯಕಿಂತಲೂ ಒಬ್ಬ ಕಲಾಕೌಶಲ್ಯದ ಉದ್ಯೋಗ ಮಾಡುವವನ ಬುದ್ಧಿಯು ಶ್ರೇಷ್ಠವೆಂದು ಸಹ ಕಂಡುಬರಬಹುದು. ಇದರಂತೆ ಹೆಂಗಸರು ಕಡಿಮೆ ಬುದ್ಧಿಯುಳ್ಳವರೆಂದು ನಾವು ಅನ್ನುತ್ತೇವಷ್ಟೇ ಅವರಲ್ಲಿ ಕೆಲವರ ಬುದ್ಧಿಯು ಚೆನ್ನಾಗಿರುತ್ತದೆ. ಆದರೂ ಅವರ ಬುದ್ಧಿಯ ಪರೀಕ್ಷೆಯನ್ನು ನಾವು ಶ್ರೇಷ್ಠರೆಂದೆಣಿಸಿದ ಸರಕಾರದ ಚಾಕರರ ಕೆಲಸಕ್ಕೆ ಸಹಾಯಭೂತವಾದ ಓದೋಣ ಬರಿಯೋಣ ಮುಂತಾದದ್ದರಲ್ಲಿ ತುಲನೆ ಮಾಡುತ್ತಿರುವವರಿಂದ ರಾಗೋಲಿ ಹಾಕೋಣ ಮುಂತಾದ ಕೆಲಸಗಳಲ್ಲಿ ಕಂಡು ಬರುತ್ತಿರುವ ಬುದ್ಧಿಕೌಶಲ್ಯಕ್ಕೆ ಸಹ ಲಘುತ್ವ ಬರುತ್ತದೆ. ಆದದರಿಂದ ಮುಖ್ಯವಾಗಿ ನಾವು ಹೇಳುವದೇನಂದರೆ ಮಿದುಳಿನ ಉಪಯೋಗವನ್ನು ಹೆಚ್ಚಿಗೆ ಮಾಡಿಕೊಳ್ಳದಂಥ ಒಕ್ಕಲುತನದವರು ಹಾಗಿರಲಿ. ಬುದ್ಧಿಯುಳ್ಳ ಕಲಾಕೌಶಲ್ಯದವರು ಮುಂತಾದವರು ಸಹ ಸರಕಾರದ ಚಾಕರರ ಸಂಬಂಧದಿಂದ ಕಡಿಮೆ ಬುದ್ಧಿಯುಳ್ಳವರೆಂದು ಎಣಿಸಲ್ಪಡುತ್ತಾರೆ. ಯಾಕಂದರೆ ಕೈಗಾರಿಕೆಯವರ ಮತ್ತು ಒಕ್ಕಲುತನದವರ ಬುದ್ಧಿಯು ಬೇರೆ ಮಾರ್ಗವನ್ನು ಹಿಡಿದಿರುವದರಿಂದ ಆ ಮಾರ್ಗದ ಎಳತದ ಮೂಲಕವಾಗಿ ನದಿಯ ಪ್ರವಾಹದಂತೆ ಅತ್ತ ಕಡೆಗೆ ಒಲಿಯುತ್ತಿರುವದು ಸಹಜವೇ. ಇತ್ತ ಕಡೆ ಒಲಿಯದ ಮೂಲಕ ಅವರು ಮಂದ ಬುದ್ಧಿಯವರೆಂದೆಣಿಸಲ್ಪಡುವರು. ಇಲ್ಲಿಯ ತನಕ ಜನರ ಬುದ್ಧಿಯಲ್ಲಿ ಭೇದವಾಗುವ ರೀತಿಯನ್ನು ವಿವರಿಸಿದೆನು. ಅದಕ್ಕೆ ಬೇರೆಬೇರೆ ಹುಡುಗರಲ್ಲಿ ಬುದ್ಧಿಯು ಹೆಚ್ಚು ಕಡಿಮೆ

ಯಾಗಿರುವವರ ಕಾರಣವನ್ನು ಕುರಿತು ಬರೆಯುವುದು ಈಗಿನ ಉದ್ದೇಶವಿರುವದರಿಂದ ಅದನ್ನು ಕುರಿತು ವಿಚಾರಿಸುವಾ—

ಮೇಲೆ ಬರೆದಂತೆ ಬೇರೆ ಬೇರೆ ಉದ್ಯೋಗಗಳನ್ನು ಹಿಡಿದು ಅದಕ್ಕೆ ತಾಗುವಷ್ಟು ಬುದ್ಧಿಯನ್ನು ಪಡೆದು ಜೀವಿಸುವವರ ಮಕ್ಕಳಾದರೂ ತಮ್ಮ ಹಿರಿಯರ ಮಾರ್ಗವನ್ನೇ ಹಿಡಿಯುವರು. ಹ್ಯಾಗಂದರೆ — ಹುಡುಗರಿಗೆ ಹತ್ತುವ ಬುದ್ಧಿಯು ಅವರು ಮಾಡುವ ಸಹವಾಸವನ್ನೂ, ಊಟವನ್ನೂ ಅವಲಂಬಿಸಿರುತ್ತದೆ. ಹುಡುಗರಿಗೆ ವಿಶೇಷ ಸಹವಾಸಿಕರೆಂದರೆ ತಂದೆತಾಯಿಗಳೇ ಆದದರಿಂದ ಅವರು ಮಾಡುವ ಕೆಲಸಗಳನ್ನೇ ಹುಡುಗರು ಸರ್ವದಾ ಮಾಡಲಿಕ್ಕೆ ಯತ್ನಿಸುತ್ತಿರುತ್ತಾರೆ. ಒಕ್ಕಲತನದವರ ಮಕ್ಕಳು ತಮ್ಮವರು ಮಾಡುವ ಕೆಲಸಗಳನ್ನೇ ಮಾಡಲಿಕ್ಕೆ ಹವಣಿಸುತ್ತಿರುತ್ತಾರೆ. ಬುದ್ಧಿಯನ್ನು ಬೆಳಿಸುವ ಚಟವಂತೂ ಹತ್ತುವದೇ ಇಲ್ಲ. ಕಲಾಕೌಶಲ್ಯಗಾರರಮುಂತಾದವರ ಮಕ್ಕಳಾದರೂ ತಮ್ಮ ಹಿರಿಯರು ಮಾಡುವ ಕೆಲಸಗಳಕಡೆಗೇ ಮನಸ್ಸನ್ನು ಒಲಿಸುತ್ತಿರುತ್ತಾರೆ. ಉಳಿದ ಮಾತಿನ ಕಡೆಗೆ ಅವರ ಲಕ್ಷ್ಯವು ಹತ್ತುವದು ಕಡಿಮೆ. ಬ್ರಾಹ್ಮಣರ ಮಕ್ಕಳು ತಮ್ಮ ಹಿರಿಯರು ಸರ್ವದಾ ಮಾಡುತ್ತಿರುವ ಕೆಲಸಗಳಲ್ಲಿ ಓದೋಣ, ಬರೆಯೋಣ ಮುಂತಾದ್ದರಲ್ಲಿಯೇ ತೊಡಗಿರುತ್ತಾರೆ. ಆದದರಿಂದ ಈ ಯಾವತ್ತರನ್ನು, ನಾವು ಬುದ್ಧಿಯನ್ನು ಪರೀಕ್ಷಿಸುವ ಸ್ಥಳವಾದ ಶಾಲೆಗೆ ತಂದು ಹಾಕಲು, ಅವರು ತಮ್ಮ ತಮ್ಮ ಬುದ್ಧಿಯು ಮೊದಲು ಎಳೆಯುತ್ತಿದ್ದ ಮಾರ್ಗವನ್ನೇ ಹಿಡಿಯುವರು ಅಂದರೆ ಬ್ರಾಹ್ಮಣರ ಹುಡುಗರ ಬುದ್ಧಿಯು ಶಾಲೆಯಕಡೆಗೂ ಉಳಿದವರ ಹುಡುಗರ ಬುದ್ಧಿಯು ಅವರವರ ಕುಲ ಉದ್ಯೋಗಗಳ ಕಡೆಗೂ ಎಳೆಯುತ್ತಿ

ರುವದು. ಆದದರಿಂದ ಒಕ್ಕಲತನದವರ ಮತ್ತು ಕಲಾಕೌಶಲ್ಯಗಾರರ ಹುಡುಗರ ಇಚ್ಛೆಯು ಶಾಲೆಯ ಕಡೆಗೆ ಚನ್ನಾಗಿ ಹತ್ತದರಿಂದ ಪೂರ್ಣ ಲಕ್ಷ್ಯವಿಟ್ಟು ಕಲಿಯುವ ಬ್ರಾಹ್ಮಣ ಹುಡುಗರೇ ಬುದ್ಧಿವಂತರೆನಿಸುವರು. ಈ ಯಾವತ್ತು ಸಂಗತಿಗಳಿಲ್ಲದೆ ಬುದ್ಧಿಯು ಹೆಚ್ಚು ಕಡಿಮೆಯಾಗಲಿಕ್ಕೆ ಬೇರೊಂದು ಕಾರಣವು ಊಟವು. ಆಹಾರದಲ್ಲಿ ತಾಮಸ ಆಹಾರವೆಂತಲೂ, ಸಾತ್ವಿಕ ಆಹಾರವೆಂತಲೂ ಎರಡು ಭಾಗಗಳನ್ನು ಮಾಡುವ. ತಾಮಸ ಆಹಾರದಿಂದ ಬುದ್ಧಿಗೆ ಮಂದತ್ವ ಬರುತ್ತಿರುವದರಿಂದ ಬುದ್ಧಿಯು ಬೇರೆ ಬೇರೆ ಕಡೆಗೆ ಹರಿದಾಡಲಿಕ್ಕೆ ಮಾರ್ಗವಿರುವದಿಲ್ಲ. ಅದು ಇದ್ದಲ್ಲಿಯೇ ಇರುವದು. ಅಂದರೆ ಬೆಳೆಯುವದಿಲ್ಲೆಂಬರ್ಥವು. ಸಾತ್ವಿಕ ಆಹಾರ ತಿನ್ನುವವರ ಬುದ್ಧಿಗೆ ಮಂದತ್ವ ಬಾರದ್ದರಿಂದ ಅವರ ಬುದ್ಧಿ ಬೆಳೆಯಲಿಕ್ಕೆ ಮಾರ್ಗವಿರುತ್ತದೆ. ಸಾತ್ವಿಕ ಆಹಾರವೇ ಬ್ರಾಹ್ಮಣರ ಊಟವು. ಆದದರಿಂದ ಬ್ರಾಹ್ಮಣ ಹುಡುಗರ ಬುದ್ಧಿಯು ವಿಶೇಷ ಬೆಳೆಯಲಿಕ್ಕೆ ಇದೊಂದು ಕಾರಣವಿರುತ್ತದೆ ಮತ್ತು ಮೇಲೆ ಹೇಳಿದಂತೆ ಶ್ರೇಷ್ಠರೆನಿಸಿಕೊಂಡ ಬ್ರಾಹ್ಮಣ ಹುಡುಗರ ಬುದ್ಧಿಯೇ ಉಳಿದವರಿಗಿಂತ ಮೇಲೆಂಬ ರೂಢಿಯೊಂದು ಬಲವತ್ತರವಾದ ಕಾರಣವಿರುತ್ತದೆ ಈ ಮೇಲೆ ಹೇಳಿದ ಯಾವತ್ತು ಸಂಗತಿಗಳಿಂದ ಬುದ್ಧಿ ಹೆಚ್ಚು ಕಡಿಮೆ ಇರುವದಕ್ಕೆ ಕಾರಣವಾದ ತತ್ವಗಳನ್ನೇ ಅನುಸರಿಸಿ ಜಾತಿಯ ಸಂಬಂಧದಿಂದ ಒಂದು ವಿಶೇಷ ಸಂಗತಿಯನ್ನು ವಿವರಿಸಿದೆವು. ಸಾಧಾರಣ ಸಂಗತಿಯಾದರೂ ಹೀಗೇ ಇರುತ್ತದೆ.

ತಾ. ೧೯।೧।೪೯	ಮಾಧ್ವ ಬಂಕಟೇಶ ಕು. ಯ. ಇನೇ ದ. ವಿ. ಟ್ರೇನಿಂಗ ಕಾಲೇಜ ಧಾರವಾಡ.

History of the Middle Ages.
ಯುರೋಪದ ಮಧ್ಯಕಾಲದ ಇತಿಹಾಸವು.

(೩೧ನೇ ಪುಟದಿಂದ ಮುಂದೆನಾಗಿದ್ದು·)

ಪನೆಂದು ಒಪ್ಪಿಕೊಳ್ಳಬೇಕಾಯಿತು. ಸಾಕ್ಸನಿ, ಬವೇರಿಯಗಳ ಡ್ಯೂಕನಿಗೂ ಫ್ರೆಡರಿಕನಿಗೂ ಯೆಡೆ ಬಿಡದೆ ಜಗಳಗಳು ನಡಿದು, ಮುಂದೆ ೫೦ ವರ್ಷಗಳ ನಂತರ ಈ ಪ್ರಾಂತಗಳು ಚಕ್ರವರ್ತಿಯ ಅಧಿಕಾರಕ್ಕೆ ಶೇರಿದವು.

ಸಾಲಾದೀನನು ಜರುಸಿಲೆಮುವನ್ನು ತಕ್ಕೊಂಡದರಿಂದ ಕ್ರೂಸೇಡರ ಯುದ್ಧವುಂಟಾಗಿ ಫ್ರೆಡರಿಕನು ಆ ಯುದ್ಧಕ್ಕೆ ಹೊರಟು ಮಾರ್ಗದಲ್ಲಿ ಮರಣ ಹೊಂದಿದನು, ೧೧೮೮

ಆವನ ತರುವಾಯ ಇವನ ಮಗ ೬ನೇ ಹೆನರಿಯು ಚಕ್ರವರ್ತಿಯಾದನು ೧೧೯೦, ಇವನು ಬಹಳ ಸಾಮರ್ಥ್ಯವನ್ನು ಪಡಿದು, ತನ್ನ ವಂಶದವರೇ ಮುಂದೆ ಚಕ್ರವರ್ತಿಗಳಾಗಬೇಕೆಂಬ ಬಗ್ಗೆ ಯತ್ನಿಸುತ್ತಿದ್ದನು. ಆದರೆ ಸಾಕ್ಸನಿಯ ಜನರು ಅದನ್ನು ಸಾಗಗೊಡಲಿಲ್ಲ. ಇವನು ಸ್ವಲ್ಪ ಕಾಲ ಆಳಿ, ನೇಪಲ್ಸ್, ಸಿಸಿಲಿ ಈ ಯೆರಡು ಶೀಮೆಗಳನ್ನು ಪೂರ್ಣವಾಗಿ ತನ್ನ ಅಧಿಕಾರದೊಳಗೆ ತಂದನು

ಯೆರಡನೇ ಫ್ರೆಡರಿಕನು ತಂದೆ ತೀರಿದಾಗ ಯೆರಡು ವರ್ಷದವನಿದ್ದನು. ಆದರೆ ರಾಜ್ಯಾಧಿಕಾರದ ಸಲುವಾಗಿ ವ್ಯಾಜ್ಯಗಳು ಹುಟ್ಟಿ, ಹಿಂದಿನ ಚಕ್ರವರ್ತಿಯ ತಮ್ಮನಾದ ಫಿಲಿಪ್ಪನೆಂಬವನು ಜಯ ಹೊಂದಿ ಚಕ್ರವರ್ತಿಯಾದನು. ಆದಾಗ್ಯೂ ಅವನು ಬೇಗ ಕೊಲ್ಲಲ್ಪಟ್ಟು ೪ನೇ ಓಥೋಯೆಂಬವನು ಚಕ್ರವರ್ತಿಯಾಗಿ ಫಿಲಿಪ್ಪನ ಮಗಳನ್ನು ಲಗ್ನ ಮಾ

ಡಿಕೊಂಡನು, ತರುವಾಯ ಒಥೋನು ಪೋಪನ ಅಧಿಕಾರವು ತನಗೆ ಆಗತಕ್ಕದ್ದೆಂದು ನ್ಯಾಯ ಹೂಡಲಾಗಿ ಪೋಪನು ಮೇಲೆ ಹೇಳಿದ ಫ್ರೆಡರಿಕನನ್ನು ಪುನಃ ಮುಂದಕ್ಕೆ ತಂದು ಅವನಿಗೆ ಸಹಾಯಮಾಡಿ ಪುನಃ ಅವನಿಗೆ ರಾಜ್ಯಾಭಿಷೇಕ ಮಾಡಿಸಿದನು ೧೨೧೫ ತರುವಾಯ ಮೂರು ವರ್ಷಗಳ ನಂತರ ಒಥೋನು ಮರಣ ಹೊಂದಿದನು.

ಫ್ರೆಡರಿಕನೆಂಬ ಚಕ್ರವರ್ತಿಯು ಜರ್ಮನಿಯ ಪಟ್ಟವೇರಿದ ಕೂಡಲೆ ಜರೂಸಲೇಮದ ಯಾತ್ರೆಗೆ ಹೋಗುವೆನೆಂದು ಹರಿಕೆ ಹೊತ್ತು ಬಹಳ ದಿವಸ ಹೋಗದ ಕಾರಣ ಅವನಿಗೂ ಪೋಪನಿಗೂ ಜಗಳ ಹುಟ್ಟಿ ಹತ್ತು ವರ್ಷಗಳ ವರೆಗೆ ಯುದ್ಧಗಳೂ ಕೊಲೆಗಳೂ ಏಕಪ್ರಕಾರವಾಗಿ ಸಾಗಿದವು. ಕಡೆಯಲ್ಲಿ ಪೋಪನು ಫ್ರೆಡರಿಕನಿಗೆ ಬಹಿಷ್ಕಾರ ಹಾಕಿ ಶುದ್ಧನಾಗುವ ವರೆಗೂ ಯಾತ್ರೆಗೆ ಹೋಗಕೂಡದೆಂದು ಅಡ್ಡಿಯು ಮಾಡಿದಾಗ್ಯೂ, ಅವನು ಅವನನ್ನು ಧಿಕ್ಕರಿಸಿ. ಜರೂಸಲೇಮಕ್ಕೆ ಹೋದನು. ಅಲ್ಲಿ ಅವನು ಇಜಿಪ್ತದವರ ಸೈನ್ಯದ ಸಂಗಡ ಯುದ್ಧ ಮಾಡಿ ಬಹು ಶೌರ್ಯದಿಂದ ಆ ಪವಿತ್ರ ಪಟ್ಟಣವನ್ನೂ ಅದರ ಕೆಳಗಿನ ಪ್ರಾಂತವನ್ನೂ ಕೈವಶ ಮಾಡಿ ಕೊಂಡನು

ಮುಂದೆ ಸಹ ಪೋಪನಿಗೂ ಫ್ರೆಡರಿಕನಿಗೂ ಜಗಳಗಳು ಯಥಾಪ್ರಕಾರವಾಗಿ ನಡೆದವು. ಮುಂದಿನ ಇಬ್ಬರು ಪೋಪಗಳು ಹಿಂದಿನಂತೆಯೇ ಫ್ರೆಡರಿಕನ ಮಗನಿಗೆ ಆಶ್ರಯ ಕೊಟ್ಟು ಅವನ ಸಂಗಡ ಜಗಳ ನಡಿಸಿದನು. ಆ ಚಿಕ್ಕವನು ತೀರಲಾಗಿ ೪ನೇ ಇನೋಸೆಂಟನೆಂಬ ಪೋಪನು ಫ್ರೆಡರಿಕನನ್ನು ಸಿಂಹಾಸನದಿಂದ ತಳ್ಳಿ, ಹಾಲಂಡದ ಕಾವುಂಟನಾದ

ವೃಷ್ಟಿಲಿಯಂ ಎಂಬವನನ್ನು ಪಟ್ಟಕ್ಕೆ ಕುಳ್ಳಿರಿಸಿದನು; ೧೨೪೮ ತರುವಾಯ ಫ್ರೆಡರಿಕನು ಪಾರ್ಮಾ ಪಟ್ಟಣದಲ್ಲಿ ಪರಾಜಯ ಪಟ್ಟು, ನೇಪಲ್ಸಕ್ಕೆ ಹೋಗಿ ಜ್ವರದಿಂದ ಮರಣ ಹೊಂದಿದನು.

(ಮುಂದೆನಾಗುವದು.)

* * *

ವಾಕ್ಸಂಜೀವನೀ ಗುಳಿಗೆ.

ಒಮ್ಮೆ ಅನುಭವ ತೆಗೆದುಕೊಂಡು ನೋಡಿರಿ!

ಉಗ್ಗು ಮಾತಿನ ಮೇಲೆ ಔಷಧವು (“ ಕ್ ಕ್ ಕ್ ಕಳ್ಳತನ ಪ್ ಪ್ ಪ್ ಮಾಡಬಾರದು ” ಈ ತರದ ವಾಚಾ ಶುದ್ಧವಾಗುವದಕ್ಕೆ ಔಷಧವು)

ಉಗ್ಗುಸುತ್ತಾ ಮಾತಾಡುವದು. ನಾಲ್ಕು ಪ್ರಕಾರವಾಗಿರುತ್ತದೆ. ಈ ಎಲ್ಲ ಪ್ರಕಾರಗಳು ಪ್ರಕೃತಿ ಸ್ವಭಾವದವೇ ಅಲ್ಲ. ಇವುಗಳಲ್ಲಿ ಔಷಧದಿಂದ ಗುಣವಾಗುವಂಥವೇ ಹೆಚ್ಚು. ಹನ್ನೆರಡು ವರ್ಷ ಪರಿಶ್ರಮ ಮಾಡಿ ಈ ಔಷಧ ಶೋಧ ಮಾಡಿದ್ದಾಗಿರುತ್ತದೆ ಐದು ವರ್ಷದ ಮೇಲಿನ ಯಾವ ಪ್ರಾಯದವರಾದರೂ ತೆಗೆದುಕೊಳ್ಳಬಹುದು. ಔಷಧ ೪೦ ದಿವಸ ತೆಗೆದುಕೊಳ್ಳಬೇಕು. ಕ್ರಯ ೪೦ ದಿವಸಕ್ಕೆ ೨-೪-೦ ಎರಡು ರುಪಾಯಿ, ನಾಲ್ಕು ಆಣೆ, ಬಾಂಗಿ ನಾಟ್‌ಪೈಡು “ ವ್ಯಾಲ್ಯುಪೇಬಲ್ ” ದಿಂದ ಕ್ರಯ ವ ಖರ್ಚ ಕೂಡಿ ರು. ೨-೧೦-೦ ಔಷಧ ಸೇವಿಸುವವರ ವಯಸ್ಸು ತಿಳಿಸಬೇಕು. ಅನುಪಾನ ಪತ್ರಕ ಔಷಧದ ಸಂಗಾತವೇ; ವಿಳಾಸ ಸ್ಪಷ್ಟ ಬರೆಯಿರಿ. ಸರಕಾರಿ ಸ್ಕೂಲಿನ ಹಾಗು ಗಾವಟಿ ಶಾಲೆಗಳ ಮಾಫಿ ಮತ್ತು ಬಡಹುಡುಗರ

ಬಗ್ಯೆ ಯೋಗ್ಯ ದಾಖಲೆ ಕಳುಹಿಸಿ ಅದರೊಂದಿಗೆ ಬರಕೊಂಡರೆ ಅಂಥವರಿಗಾಗಿ ೪೦ ದಿವಸದ ಔಷಧದ ಕ್ರಯ ೧ ವ ಟಪಾಲ ಖರ್ಚು ೬ ಆಣೆ.

ಶಿರ್ಶಿ, ಕೊಲ್ಹಾಪೂರ, ನಿಪಾಣಿ, ಸಾತಾರಾ, ಮುಂಬ್ಯೆ, ಬಡೋದಾ, ನಾಗಪೂರ ಮುಂತಾದ ಕಡೆಯ ಪ್ರಾಯ ವರ್ಷ ೧೨ । ೧೩ । ೧೫ । ೧೮ । ೨೬ । ೨೯ । ೩೪ ಈ ಪ್ರಕಾರ ಬೇರೆಬೇರೆ ವಯಸ್ಸಿನವರು ಈ ಗುಳಿಗೆಯಿಂದ ಗುಣ ಹೊಂದಿದ ಬಗ್ಯೆ ಪತ್ರಗಳು ಬಂದಿರುತ್ತವೆ.

ರಾಮಕೃಷ್ಣ ಪಾಂಡುರಂಗ, ಮಾಜಿ ಸ್ಕೂಲ್
ಮಾಸ್ತರ್ ಬೀಳಗಿ, ತಾಲೂಕ ಸಿದ್ದಾಪೂರ ಜಿ.
ಉತ್ತರ ಕಾನಡಾ.

—ooo—

ಜಾಹಿರಾತು.

(೧೦೦ ರುಪಾಯಿ ಇನಾಮು.)

ನೀತಿ ಮತ್ತು ಸದಾಚಾರ ಇವುಗಳನ್ನು ಕುರಿತು ಉತ್ತಮವಾದ ನಿಬಂಧವನ್ನು ಕನ್ನಡ ಭಾಷೆಯಲ್ಲಿ ಬರಿದವರಿಗೆ ಆನರೇಬಲ್ ಗುರುಸಿದ್ಧಪ್ಪಾ ಅಣ್ಣಾ ಗಿಲಗಂಚಿ ಇವರು ನೂರು ರುಪಾಯಿ ಇನಾಮು ಕೊಡುವರು. ನಿಬಂಧವು ಇಪ್ಪತ್ತು ಫೂಲಿಸ್ಕೇಪ ಹಾಳಿಗಳಿಗಿಂತ ಕಡಿಮೆ ಇರಬಾರದು, ಮತ್ತು ಯಾವತ್ತು ಹಿಂದೂಮತಗಳನ್ನು ಅನುಸರಿಸುವ ಜನರ ಉಪಯೋಗಕ್ಕೆ ಬರುವಂತೆ ಇರಲಿಕ್ಕೆ ಬೇಕು. ಈ ನಿಬಂಧ ಬರಿಯುವದರಲ್ಲಿ ಕನ್ನಡ ನೀತಿಗ್ರಂಥಗಳ ಸಹಾಯ ತಕ್ಕೊಳ್ಳಲಿಕ್ಕೆ ಅಡ್ಡಿ ಇಲ್ಲ.

ಈ ನಿಬಂಧವನ್ನು ಬೇಕಾದವರು ಬರಿಯಬಹುದು. ನಿಬಂಧಕಾರರು ತಮ್ಮ ತಮ್ಮ ನಿಬಂಧಗಳು ಬರುವ ಆಗಸ್ಟ ತಿಂಗಳಿನ ಅಖ್ಯೆರಿನೊಳಗೆ ನಮಗೆ ಮುಟ್ಟುವಂತೆ ಅವುಗಳನ್ನು ರವಾನೆ ಮಾಡಬೇಕು. ನಿಬಂಧಕಾರರು ತಮ್ಮ ನಿಬಂಧದ ಮುಖಪೃಷ್ಠದ ಮೇಲೆ ಒಂದು ಗುರುತಿನ ವಾಕ್ಯ ಬರಿದು, ಅದೇ ವಾಕ್ಯವನ್ನು ಬೇರೆ ಒಂದು ಕಾಗದದ ಮೇಲೆ ಬರಿದು ತಮ್ಮ ಸಹಿ ಮಾಡಿ ಆ ಕಾಗದವನ್ನು ಒಂದು ಲಖೋಟಿಯೊಳಗೆ ಹಾಕಿ ಮೊಹರು ಮಾಡಿ ನಮ್ಮ ಕಡಿಗೆ ಕಳಿಸಬೇಕು. ಈ ಲಖೋಟಿಯನ್ನು ನಿಬಂಧದ ಪುಸ್ತಕದೊಳಗೆ ಹಾಕದೆ ಬೇರೆಯಾಗಿ ಕಳಿಸಬೇಕು.

ಸದರೀ ಮುದ್ದತಿಗೆ ನಮ್ಮ ಕಡೆಗೆ ಬಂದ ನಿಬಂಧಗಳನ್ನು ಈ ಕೆಲಸಕ್ಕೆ ನೇಮಿಸಿದ ಕಮಿಟಿಯವರು ಪರೀಕ್ಷಿಸಿದ ಬಳಿಕ, ಅವರು ಪಾಸ ಮಾಡಿದಂಥ ನಿಬಂಧವನ್ನು ಬರಿದವರಿಗೆ ಸದರೀ ಇನಾಮು ಕೊಡಲ್ಪಡುವದು.

ಧಾರವಾಡ ೧ನೇ ಫೆಬ್ರು } Venkat Rango Katti.

ಕನ್ನಡ ಶಾಲಾಪತ್ರಿಕೆ

CANARESE SCHOOL PAPER.

ಪುಸ್ತಕ ೨೪) (ಸಂಚಿಕೆ ೩

(ಮಾರ್ಚ ೧೮೮೯)

ಅನುಕ್ರಮಣಿಕೆಯು.

ಪುಟ.

ಶಿಕ್ಷಣದ ಬೇರೆ ಬೇರೆ ಪದ್ಧತಿಗಳು…… …………… ೪೯
ವಿದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು …. ೫೭
ಉದ್ಯೋಗ…. ……… ……………… …. … ೬೩
ಯುರೋಪದ ಮಧ್ಯಕಾಲದ ಇತಿಹಾಸವು ……… ೬೬
ಪತ್ರವ್ಯವಹಾರವು. …. …. ………… . …… ೬೯

CONTENTS

Different systems………… ……………… 49
Education and Improvement. ……… .. 57
Industry ……………………………… .. 63
History of the Middle Ages………… 66
Correspondence………………………… 69

DHARWAR.

Printed at the Dnana Wardhaka Press

ಶಾಲಾಪತ್ರಿಕೆ

ಪುಸ್ತಕ ೨೪) (ಸಂಚಿಕೆ ೩

(ಮಾರ್ಚ ೧೮೮೯)

Different systems.
ಶಿಕ್ಷಣದ ಬೇರೆ ಬೇರೆ ಪದ್ಧತಿಗಳು

* * *

೧ ತ್ರಿಭಾಗ ಪದ್ಧತಿ—ಪೂರ್ವದಲ್ಲಿ ಶಾಲೆಗಳ ಇನ್‌ಸ್ಪೆಕ್ಟರನಾಗಿದ್ದ ಕ್ಯಾಪನ್ ಪೋಸೆಲಿ ಯೆಂಬವನು ಈ ಪದ್ಧತಿಯನ್ನು ಮೊದಲು ಸೂಚಿಸಿದನು. ಇದರ ಕ್ರಮ ಹ್ಯಾಗಂದರೆ, ಮುಖ್ಯ ಮಾಸ್ತರನು ತನ್ನ ಶಾಲೆಯ ವಿದ್ಯಾರ್ಥಿಗಳನ್ನು ಮೂರು ದೊಡ್ಡ ಭಾಗಗಳಾಗಿ ವಿಭಾಗಿಸಿ, ಒಂದೊಂದು ಭಾಗಕ್ಕೆ ಕೆಲವು ನಿಯಮಿತ ವಿಷಯಗಳನ್ನು ಯೆರಡೆರಡು ತಾಸುಗಳ ವರೆಗೆ ತಾನೇ ಕಲಿಸುವನು. ಪೋಸೆಲಿಯು ಈ ಪದ್ಧತಿಯ ವಿಷಯವಾಗಿ ಬರೆದದ್ದು ಹ್ಯಾಗಂದರೆ—"ಚಿಕ್ಕ ಬಾಲಕರಿಗೆ ತಕ್ಕಂತೆ ವಿದ್ಯಾಭ್ಯಾಸವಾಗಬೇಕಾದರೆ, ಒಳಿತಾಗಿ ಸುಧಾರಿಸಿದಂಥ ಶಿಕ್ಷಕನ ಬೋಧನೆಯ ಕಾರ್ಯವು ಪ್ರತಿ ಒಬ್ಬ ವಿದ್ಯಾರ್ಥಿಯ ಮನಸಿನ ಮೇಲೆ ನಡಿಯಲಿಕ್ಕೆ ಬೇಕು. ಆ ಶಿಕ್ಷಕನು ಪ್ರತಿ ಒಬ್ಬ ಹುಡುಗನ ಮನಸ್ಸನ್ನು ಬೇರೆಬೇರೆಯಾಗಿ ಅರಿತುಕೊಳ್ಳಲಿಕ್ಕೆ ಬೇಕು; ಆ ಮನಸಿಗೆ ಬೇಕಾದದ್ದನ್ನು ಅವನು ಪೂರೈಸಿ ಕೊಡಲಿಕ್ಕೆ ಬೇಕು; ಅದರ ಚಾಂಚಲ್ಯವನ್ನು ಪ್ರತಿಬಂಧಿಸಿ ಅದಕ್ಕೆ ಆಶ್ರಯ ಕೊಡಲಿಕ್ಕೆ ಬೇಕು, ಅದಕ್ಕೆ ಮಾರ್ಗ ತೋರಿಸಿ, ಅದರ ಆರಂಭದ ಯತ್ನಗಳಿಗೆ ಚಲನೆ ಕೊಡಬೇಕು; ಈ ಪ್ರಕಾರವಾಗಿ ಶಿಕ್ಷಕನು ಪ್ರತಿ ಒಬ್ಬ ಹುಡು

ಗನ ಮನಸ್ಸನ್ನು ರಚಿಸಿ ನೆಲೆಗೊಳಿಸ ಬೇಕಾಗಿರುತ್ತದೆ. ಈ ಪ್ರಕಾರದ ಬಾಯಿ ಶಿಕ್ಷಣಕ್ಕೆ ಒಂದು ಸ್ವತಂತ್ರವಾದ ಕೋಣೆಯು ಯೆಲ್ಲಕ್ಕೂ ಮೊದಲು ಅವಶ್ಯವಾಗಿರುತ್ತದೆ, ಮಾಸ್ತರನು ತನ್ನ ಶಿಕ್ಷಣದಲ್ಲಿ ತತ್ಪರನಾಗಿರಲಿಕ್ಕೆ ಬೇಕು. (ಆದರೆ ಪ್ರಸಂಗಾನುಸಾರವಾಗಿ ಅವನ ಕೆಲಸವನ್ನು ಯೆರಡನೇ ಮಾಸ್ತರನು ಇಲ್ಲವೆ ಒಬ್ಬ ವಿದ್ಯಾರ್ಥಿ ಶಿಕ್ಷಕನು ಸ್ವಲ್ಪ ಹೇಳಿ ಮಾಡಬಹುದು) ವಿದ್ಯಾರ್ಥಿಗಳ ಮೂರು ದೊಡ್ಡ ಭಾಗಗಳಲ್ಲಿ ಪ್ರತಿ ಒಂದು ಭಾಗದವರು ದಿವಸದೊಳಗೆ ಯೆರಡು ಸಾರಿ ಒಂದೊಂದು ತಾಸಿನಂತೆ ಆ ಕೋಣೆಯೊಳಗೆ ಹೋಗಿ ಮಾಸ್ತರನ ಕೈ ಕೆಳಗೆ ಕಲಿತು ಬರುತ್ತಿರಲಿಕ್ಕೆ ಬೇಕು. ಈ ವ್ಯವಸ್ಥೆಯಲ್ಲಿ ಯೆಷ್ಟು ಮಾತ್ರವೂ ಹೆಚ್ಚು ಕಡಿಮೆಯಾಗಕೂಡದು. ”

ಕ್ರಮಿಕ ಶಾಲೆಗಳು— ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯವು ನೂರರ ಗಣತಿಯಿಂದ ತುಂಬ ಹತ್ತಿದ ಕಾಲಕ್ಕೆ ಮೊದಲಿನದಕ್ಕಿಂತ ಮೇಲಾದ ಪದ್ಧತಿಯನ್ನು ಹುಡುಕಿಕೊಳ್ಳುವದು ಅವಶ್ಯವಾದ್ದರಿಂದ ಹಿಂದೆ ಹೇಳಿದ ಮಾನಿಟರ ಪದ್ಧತಿಯುಂಟಾಯಿತು. ಆದರೆ ಆ ಪದ್ಧತಿಯಿಂದ ಆಗ ತಕ್ಕಷ್ಟು ಉಪಯೋಗವಾಗುತ್ತಿದ್ದಿಲ್ಲ, ಮತ್ತೂ ಅದರಿಂದ ಒದಗಿದ ಪರಿಣಾಮವು ಬಹು ಕಾಲ ನಿಲ್ಲುತ್ತಿದ್ದಿಲ್ಲ. ಆದರೆ ಡೇವಿಡ್ ಸ್ಟೋ ಎಂಬವನು ಅದಕ್ಕಿಂತ ಮೇಲಾದ ಪದ್ಧತಿಯನ್ನು ಹುಡುಕಿ ತೆಗೆದನು. ಇವನ ಕ್ರಮಿಕ ಶಾಲೆಗಳ ಪದ್ಧತಿಯು ಮಾನಿಟರ ಪದ್ಧತಿಗೆ ವಿರುದ್ಧವಾದದ್ದು. ಆದದರಿಂದ ಸ್ಟೋನು ಈ ಪದ್ಧತಿಯನ್ನು ರೂಢಿಯೊಳಗೆ ತರಲಿಕ್ಕೆ ಬಹು ದಿವಸ ಮನಮುಟ್ಟಿ ಪ್ರಯತ್ನ ಮಾಡ ಬೇಕಾಯಿತು. ಇವನು ಪ್ರತಿಪಾದಿಸಿದ್ದೇನೆಂದರೆ, ವಿದ್ಯಾರ್ಥಿಗಳ ಬುದ್ಧಿಯೂ ನೀತಿಯೂ ವಿ

ಸ್ತಾರ ಹೊಂದಿ ಮೇಲಾದ ಶಾಲೆಯಲ್ಲಿ ಆಗ ತಕ್ಕಂಥ ಸುಧಾರಣೆಯು ಆಗ ಬೇಕಾದರೆ, ವಿದ್ಯಾರ್ಥಿಯ ಮನಸೂ ಶಿಕ್ಷಕನ ಮನಸೂ ಸರ್ವಕಾಲಕ್ಕೂ ಒಂದಕ್ಕೊಂದು ಸಂಲಗ್ನವಾಗಿರಲಿಕ್ಕೆ ಬೇಕು. ಈ ಕಾರ್ಯವನ್ನು ಸಾಧಿಸಿಕೊಳ್ಳುವದಕ್ಕೋಸ್ಕರ ಒಂದು ಶಾಲೆಯಲ್ಲಿ ವಿದ್ಯಾರ್ಥಿಗಳ ಯೋಗ್ಯತಾನುಸಾರವಾಗಿ ಹಲವು ಶಾಲೆಗಳನ್ನು ರಚಿಸಿ, ಒಂದೊಂದು ಶಾಲೆಯಲ್ಲಿ ಒಂದೊಂದೇ ವರ್ಗವನ್ನಿಟ್ಟು, ಆ ವರ್ಗಕ್ಕೆ ಒಬ್ಬ ಸ್ವತಂತ್ರ ಶಿಕ್ಷಕನನ್ನು ನೇಮಿಸುವದು ಅವಶ್ಯವಾಯಿತು. ಇದೇ ಈಗ ನಡಿಯುವ ಪದ್ಧತಿಯು [illegible]

ಮಿಶ್ರರಚನೆಯು, ಅಂದರೆ [illegible] ಶಿಕ್ಷಕ ಪದ್ಧತಿಯು—ಇವರಲ್ಲಿ ಮಾನಿಟರ ಪದ್ಧತಿಯೂ ಸೋನ ಕ್ರಮಿಕ ಶಾಲೆಗಳ ಪದ್ಧತಿಯೂ ಕೂಡಿ ನಡೆಯುತ್ತಿದ್ದ ಕಾರಣ ಇದಕ್ಕೆ ಈ ಹೆಸರು ಬಂತು. ಇದರಲ್ಲಿ ಮಾನಿಟರರ ಕೈಯಿಂದ ಆಗುವಂಥ ಕೆಲಸಗಳನ್ನು ಅವರು ಮಾಡುವರು. ಆದರೆ ಅಭ್ಯಾಸದಲ್ಲಿ ಒಂದಕ್ಕೊಂದು ಸಮೀಪವಾಗಿದ್ದಂಥ ವರ್ಗಗಳನ್ನು ಒತ್ತಟ್ಟಿಗೆ ಕೂಡಿಸಿ, ಮಾಸ್ತರನು ಅವುಗಳಿಗೆಲ್ಲ ಕೂಡಿ ಒಮ್ಮೇಲೆ ಪಾಠ ಹೇಳುವನು. ವಿದ್ಯಾರ್ಥಿ ಶಿಕ್ಷಕಪದ್ಧತಿಯಲ್ಲಿ ವಿದ್ಯಾರ್ಥಿಗಳು ಮಾಸ್ತರನಿಗೆ ಅಸಿಸ್ಟಾಂಟರಾಗಿ ಕೆಲಸ ಮಾಡುವರು. ಅವರಿಗೆ ಮಾಸ್ತರನು ಮನೆಯಲ್ಲಿ ಕಲಿಸುವನು; ಅವರು ಶಾಲೆಯಲ್ಲಿ ವರ್ಗಗಳಿಗೆ ಕಲಿಸುವರು. ಮಾನಿಟರ ಪದ್ಧತಿಯನ್ನೇ ಸುಧಾರಿಸಿದ್ದರಿಂದ ಇದು ಉಂಟಾಗಿದೆ. ಇದೇ ಪದ್ಧತಿಯಂತೆ ಇಂಗ್ಲಂಡದ ಪ್ರಾಥಮಿಕ ಶಾಲೆಗಳು ನಡಿಯುತ್ತವೆ. ಆದರೆ ಮಾಸ್ತರನ ಕೈಕೆಳಗೆ ಕೆಲವರು ಸಂಬಳದ ಅಸಿಸ್ಟಾಂಟರು ಸಹ ಇರುತ್ತಾರೆ.

ವರ್ಗೀಕರಣವು.

ಶಾಲೆಯ ವಿದ್ಯಾರ್ಥಿಗಳಲ್ಲಿ ಬೇರೆ ಬೇರೆ ವರ್ಗಗಳನ್ನು ಕಟ್ಟುವಾಗ ಈ ಕೆಳಗಿನ ತತ್ವಗಳನ್ನು ಸ್ಮರಣದಲ್ಲಿ ಇಡಲಿಕ್ಕೆ ಬೇಕು.

ವರ್ಗಗಳನ್ನು ಕಟ್ಟುವಾಗ ಎರಡು ಮುಖ್ಯ ಶರತ್ತುಗಳನ್ನು ಸಾಧಿಸಿಕೊಳ್ಳಲಿಕ್ಕೆ ಬೇಕು ಅವೇನಂದರೆ,

೧ ವರ್ಗದಲ್ಲಿ ಸೇರಿಸಿದಂಥ ವಿದ್ಯಾರ್ಥಿಗಳ ಬುದ್ಧಿಸಾಮರ್ಥ್ಯವೂ ಅಭ್ಯಾಸವೂ ಆದಷ್ಟು ಮಟ್ಟಿಗೆ ಸರಿಯಾಗಿರಲಿಕ್ಕೆ ಬೇಕು, ಅಂದರೆ ಅವರು ಒಬ್ಬರಿಗೊಬ್ಬರು ಸಹಾಯ ಮಾಡುವ ಹಾಗಿರಬೇಕು, ಅಡ್ಡಿಯನ್ನುಂಟು ಮಾಡುವಂತೆ ಇರಬಾರದು; ೨ ಒಂದು ವರ್ಗದಲ್ಲಿ ತಕ್ಕಷ್ಟು ವಿದ್ಯಾರ್ಥಿಗಳ ಸಂಖ್ಯೆಯಿರಲಿಕ್ಕೆ ಬೇಕು, ಅಂದರೆ ಅವರ ಬುದ್ಧಿಗೆ ಚಲನೆಯುಂಟಾಗಿ ಅಭ್ಯಾಸದ ಬಗ್ಗೆ ಈರ್ಷೆಯುಂಟಾಗಲಿಕ್ಕೆ ಸಾಕಾಗುವಷ್ಟು ಜನರಿರಲಿಕ್ಕೆ ಬೇಕು. ವರ್ಗಗಳು ಕೆಲವೊಂದು ನಿಯಮಿತ ಮಾನದಿಂದ ದೊಡ್ಡವಾಗಿರುವದು ಅವಶ್ಯವಿರುತ್ತದೆ; ತನ್ನ ಕೆಲಸದಲ್ಲಿ ಪ್ರವೀಣನಾದಂಥ ಶಿಕ್ಷಕನು ಸಣ್ಣ ವರ್ಗಕ್ಕಿಂತ ದೊಡ್ಡ ವರ್ಗಕ್ಕೆ ಕಲಿಸಲಿಕ್ಕೆ ಹೆಚ್ಚು ಮೆಚ್ಚುವನೆಂದು ನಮಗೆ ತೋರುತ್ತದೆ. ಬಹು ಜನರು ಒತ್ತಟ್ಟಿಗೆ ಕೂಡಿದಲ್ಲಿ ಸಹವಾಸದ ಮೂಲಕವಾಗಿಯೂ ಮನಸಿನ ಉಳತದ ಕಾರಣದಿಂದಲೂ ಕೆಲವು ಲಾಭಗಳಾಗುತ್ತವೆ. ಅವೇನೆಂದರೆ, ಬಹು ಜನರ ಕಣ್ಣೆದುರಿಗಿರುವಂಥ ಪ್ರತಿ ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಯೋಗ್ಯತೆಯ ಜ್ಞಾನವು ಒಳಿತಾಗಿ ಆಗುತ್ತದೆ, ವರ್ಗದೊಳಗಿನ ಮೇಲಾದ ಹುಡುಗರ

ಉದ್ಯೋಗವನ್ನು ನೋಡಿ, ಅವರ ಉತ್ತರಗಳನ್ನು ಕೇಳಿ ಮಂದ ಸ್ವಭಾವದ ಹುಡುಗರಿಗೆ ಈರ್ಷೆಯುಂಟಾಗುತ್ತದೆ. ಈ ಲಾಭಗಳು ಸಣ್ಣ ವರ್ಗದಲ್ಲಿ ಆಗಲಾರವು. ೧೦ ಹುಡುಗರ ವರ್ಗಕ್ಕೆ ಕಲಿಸುವಷ್ಟೇ ಸುಲಭವಾಗಿ ೨೦ ಹುಡುಗರ ವರ್ಗಕ್ಕೆ ಕಲಿಸಬಹುದೆಂದು ನಮಗೆ ತೋರುತ್ತದೆ. ಆದರೆ ಕೆಲವು ಅಂಶದಲ್ಲಿ ೨೦ ಹುಡುಗರ ವರ್ಗಕ್ಕೆ ಕಲಿಸುವವನಿಗೆ ಹೆಚ್ಚು ಉಲ್ಲಾಸ ಬರುತ್ತದೆಂದೆನ್ನಬಹುದು. ಆದದರಿಂದ ಶಾಲೆಯು ತಕ್ಕ ಮಟ್ಟಿಗೆ ದೊಡ್ಡದಿದ್ದ ಹೊರ್ತು ಮೇಲೆ ಹೇಳಿದ ಯೆರಡೂ ಶರತ್ತುಗಳು ಕೊನೆಗಾಣಲಾರವು. ನೂರಕ್ಕಿಂತ ಕಡಿಮೆ ವಿದ್ಯಾರ್ಥಿಗಳುಳ್ಳಂಥ ಶಾಲೆಯಲ್ಲಿ ಶಿಕ್ಷಣದ ಶಕ್ತಿಯೂ ಸಾಧನಗಳೂ ನಿರರ್ಥಕವಾಗುತ್ತವೆ; ೨೦,೩೦ ಹುಡುಗರ ಶಾಲೆಗಳಲ್ಲಂತೂ ಬಹಳ ದೊಡ್ಡ ಹಾನಿಯಾಗುತ್ತದೆ. ಇಂಥಾ ಶಾಲೆಗಳಲ್ಲಿ ಒಂದೇ ಸವನಾಗಿ ಕಲಿಸುವ ಪ್ರಣಾಲಿಕೆಯನ್ನು ಬಿಡಲಿಕ್ಕೆ ಬೇಕು, ಇಲ್ಲವೆ ೫,೬ ಹುಡುಗರಿಗೆ ಒಬ್ಬೊಬ್ಬ ಶಿಕ್ಷಕನನ್ನು ನೇಮಿಸಲಿಕ್ಕೆ ಬೇಕು. ಇಷ್ಟು ಸಣ್ಣ ವರ್ಗಗಳಲ್ಲಿ ಈರ್ಷೆ, ಆವೇಶಗಳು ಹುಡುಗರಲ್ಲಿ ಉಂಟಾಗುವ ಸಂಭವವು ಬಹು ಕಡಿಮೆ ಇರುತ್ತದೆ. ಈರ್ಷೆ ಆವೇಶಗಳನ್ನು ಹುಟ್ಟಿಸುವದಕ್ಕೋಸ್ಕರ, ಅಂದರೆ ವಿದ್ಯಾರ್ಥಿಗಳ ಬುದ್ಧಿಗೆ ಜೀವಕಳೆಯನ್ನು ತುಂಬಿಸುವದಕ್ಕೋಸ್ಕರ, ಇಂಥಾ ಶಾಲೆಗಳಲ್ಲಿ ಹೆಚ್ಚು ಕಲಿತಂಥ ಹುಡುಗರನ್ನು ಹಿಂದಕ್ಕೆ ಬೀಳಿಸು ಇಲ್ಲವೆ ಕಡಿಮೆ ಕಲಿತವರನ್ನು ಮುಂದಕ್ಕೆ ನೂಡಿ, ಇಂಥಾ ಶಾಲೆಗಳಲ್ಲಿ ಸಾಧಿಸಿದಷ್ಟು ಮಟ್ಟಿಗೆ ದೊಡ್ಡ ವರ್ಗಗಳನ್ನು ಕಟ್ಟುವದು ಲೇಸೆಂದು ನಮಗೆ ತೋರುತ್ತದೆ.

ಕೆಳಗಿನ ವರ್ಗಗಳನ್ನು ಕಟ್ಟುವಾಗ ಭಾಷೆ, ಅಂಕಗಣಿತ, ಇವುಗಳ ಅನುರೋಧದಿಂದ ಮಾಡಿಕೆಯಾಗಿ ವರ್ಗ ರಚನೆಯನ್ನು ಮಾಡ ಬಹುದು; ಮೇಲಿನ ವರ್ಗಗಳನ್ನು ಕಟ್ಟುವಾಗ ಈ ವಿಷಯಗಳಲ್ಲದೆ ಬೀಜಗಣಿತ, ಸಿದ್ಧಾಂತ, ಇವುಗಳ ಅನುರೋಧದಿಂದ ಕಟ್ಟ ಬಹುದು. ಅವಶ್ಯವಿದ್ದಲ್ಲಿ ವಿದ್ಯಾರ್ಥಿಗಳ ವಯಸ್ಸನ್ನು ಲಕ್ಷ್ಯಕ್ಕೆ ತರ ಬಹುದು. ವರ್ಗವನ್ನು ರಚಿಸಿದ ಬಳಿಕ ಅದರೊಳಗಿನ ಹುಡುಗರ ಯೋಗ್ಯತಾನುಸಾರವಾಗಿ ಸಾಧಿಸಿದಷ್ಟು ಹೆಚ್ಚಿನ ವಿಷಯಗಳನ್ನು ಕಲಿಸುವದು ಲೇಸು. ಯಾಕಂದರೆ ಹೆಚ್ಚಿಗೆ ಕಲಿತಂಥ ಬುದ್ಧಿಯುಳ್ಳ ಹುಡುಗರ ಸಂಘರ್ಷಣದಿಂದ ಕಡಿಮೆ ಕಲಿತವರಿಗೆ ಮುಂದಕ್ಕೆ ಹೋಗುವ ತಗಾದೆಯು ತನಗೆ ತಾನೇ ಹತ್ತಿ, ಅವರು ಶ್ರಮ ಪಟ್ಟು ಕಲಿಯ ತೊಡಗುವರು. ಆದರೆ ಕಡಿಮೆ ಕಲಿತಂಥವರನ್ನು ಬಹಳ ಮುಂದಕ್ಕೆ ಹೋದ ವರ್ಗದೊಳಗೆ ಹಾಕ ಬಾರದು. ಒಂದೊಂದು ವೇಳೆ ಒಂದು ವರ್ಗದ ಮೊದಲನೇ ಸ್ಥಳವನ್ನು ಆಕ್ರಮಿಸಿ ತನ್ನ ವರ್ಗದವರಲೆಲ್ಲ ಮೇಲನಿಸಿಕೊಂಡಂಥ ಹುಡುಗನನ್ನು ಮೇಲಿನ ವರ್ಗಕ್ಕೆ ಹಾಕಲಾಗಿ ಅವನಿಗೆ ಬಹಳ ಕೇಡಾಗುತ್ತದೆ. ಅವನು ಮೊದಲು ಕೆಲವು ದಿವಸ ಆ ಹೊಸ ವರ್ಗದ ಅಭ್ಯಾಸಗಳನ್ನು ಬಹಳ ಶ್ರಮ ಪಟ್ಟು ಮಾಡಿದಾಗ್ಯೂ ಆ ವರ್ಗದ ಸಂಗಡ ಅಭ್ಯಾಸ ನಡಿಸುವ ಯೋಗ್ಯತೆಯು ತನಗೆ ಬರುವದಿಲ್ಲೆಂದು ಮನಗಂಡನೆಂದರೆ ಮೊದಲು ಎದೆ ಒಡಕೊಂಡು ಆ ಮೇಲೆ ಉದಾಸೀನನಾಗಿ ಕಡೆಯಲ್ಲಿ ಸೋಮಾರಿಯಾಗುತ್ತಾನೆ. ಹೀಗೆ ಆಳದೊಂವಂಥ ಹುಡುಗನ ಜನ್ಮಕ್ಕೇ ಕೇಡು ಒದಗ ಬಹುದು. ಅವಸರಿಂದ ಹೀಗೆ ಆಗದಂತೆ ಯೆಚ್ಚರ ಪಡಲಿಕ್ಕೆ

ಬೇಕು. ಹಿಂದೆ ಬಿದ್ದ ಹುಡುಗನು ಶ್ರಮ ಪಡಲಾಗಿ ಮೇಲ ವರ್ಗದವರಿಗೆ ಸರಿಸಮನಾಗುವಂತೆ ಇದ್ದಲ್ಲಿ ಮಾತ್ರ ಅವನನ್ನು ಆ ವರ್ಗದೊಳಗೆ ಹಾಕಬೇಕು, ಅಂದರೆ ಅವನು ಶ್ರಮದಿಂದ ಅಭ್ಯಾಸ ಮಾಡಲಿಕ್ಕೆ ಕಲಿಯುವನು.

ಶಾಲಾ ವ್ಯವಸ್ಥೆಗೂ ಯಾವ ಯಾವ ವರ್ಗಗಳು ಎಷ್ಟು ದೊಡ್ಡವಿರತಕ್ಕವೆಂಬವಕ್ಕೂ ನಿಕಟ ಸಂಬಂಧವಿರುತ್ತದೆ. ಸಾಹಜಿಕವಾಗಿ ಮೇಲಿನ ವರ್ಗಗಳ ಶಿಕ್ಷಕರು ಶಿಕ್ಷಕರೆಂಬ ಸಂಬಂಧದಿಂದಲೂ, ವ್ಯವಸ್ಥಾಪಕರೆಂಬ ಸಂಬಂಧದಿಂದಲೂ ಹೆಚ್ಚಿನ ಯೋಗ್ಯತೆಯವರಿರುತ್ತಾರೆ. ಆದದರಿಂದ ಮೇಲಿನ ವರ್ಗಗಳ ಅಭ್ಯಾಸವೂ ವ್ಯವಸ್ಥೆಯೂ ಕೆಳಗಿನ ವರ್ಗಗಳ ಅಭ್ಯಾಸ ವ್ಯವಸ್ಥೆಗಳಿಗಿಂತ ಹೆಚ್ಚು ಸರಿಯಾಗಿ ನಡಿಯುತ್ತದೆ. ತಾತ್ಪರ್ಯವೇನಂದರೆ, ಶಿಕ್ಷಣವು ಸರಿಯಾಗಿ ನಡಿಯುತ್ತಿದ್ದಲ್ಲಿ ಸರಿಯಾದ ವ್ಯವಸ್ಥೆ ಇರುತ್ತದೆ, ಮತ್ತು ಸರಿಯಾದ ವ್ಯವಸ್ಥೆ ಇದ್ದಲ್ಲಿ ಶಿಕ್ಷಣವು ಸರಿಯಾಗಿ ನಡಿಯುತ್ತದೆ. ಮೇಲ್ತರದ ಶಿಕ್ಷಕರಾದವರು ಮೇಲಿನ ವರ್ಗಗಳನ್ನು ತಕ್ಕೊಳ್ಳುವ ರೂಢಿ ಇದ್ದಾಗ್ಯೂ, ಕೆಳಗಿನ ವರ್ಗಗಳಿಗೆ ಕಲಿಸುವದೂ ಅವುಗಳಲ್ಲಿ ವ್ಯವಸ್ಥೆಯನ್ನು ಕಾದುಕೊಳ್ಳುವದೂ ಮೇಲಿನ ವರ್ಗಗಳಿಗೆ [illegible] ಹೆಚ್ಚು ಕಠಿಣವಿರುತ್ತದೆಂಬ ಮಾತು, ಎಲ್ಲ ಮಾಸ್ತರ ಜನರಿಗೆ ಗೊತ್ತುಂಟು. ಹೀಗಿದ್ದು ಕೆಳಗಿನ ವರ್ಗಗಳಿಗೆ ಕಡಿಮೇ ಯೋಗ್ಯತೆಯ ಶಿಕ್ಷಕರನ್ನು ನೇಮಿಸುವ ರೂಢಿ ಇರುತ್ತದೆ. ಆದದರಿಂದ ಕೆಳಗಿನ ವರ್ಗಗಳು ದೊಡ್ಡವಿದ್ದರೆ, ಇವೇ ಶಾಲೆಯಲ್ಲಿ [illegible] ವ್ಯವಸ್ಥೆ ಇರಬಹುದೆಂಬುವದು ಸ್ವಾಭಾವಿಕವೇ. ಆದರೂ ಇವುಗಳಲ್ಲಿ ಒಂದೊಂದರೊಳಗೆ ಸುಮಾರು

೩೦ ಹುಡುಗರು ಇದ್ದರೆ ಮಾತ್ರ ಇವುಗಳಲ್ಲಿ ವ್ಯವಸ್ಥೆಯನ್ನು ಕಾಯುಕೊಳ್ಳಬಹುದೆಂದು ತೋರುತ್ತದೆ.

ಮೊದಲನೇ ವರ್ಗವು ಮುಖ್ಯ ಮಾಸ್ತರನ ಕೈಯಲ್ಲಿ, ಅದರ ಕೆಳಗಿನ ೨, ೩ ವರ್ಗಗಳು ಮೇಲಾದ ಶಿಕ್ಷಕರ ಕೈಯಲ್ಲಿ ಇರುವ ಕಾರಣ ಆ ವರ್ಗಗಳಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದರೂ ಅವ್ಯವಸ್ಥೆಯ ಭಯವಿರುವದಿಲ್ಲ. ಆದರೂ ಮೂವತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಯಾವ ವರ್ಗದಲ್ಲಿಯೂ ಇರಕೂಡದು. ಮದ್ರಾಸ ಸರಕಾರದವರು ಈ ಸಂಬಂಧದಲ್ಲಿ ಮಾಡಿದ ಹುಕುಮು ಹ್ಯಾಗಂದರೆ —

ಶಿಕ್ಷಕರ ಯೋಗ್ಯತೆಯನ್ನೂ ಆಯಾ ಕಡೆಯಲ್ಲಿಯ ಜನರ ಸ್ಥಿತಿಯನ್ನೂ ಅನುಸರಿಸಿ ವರ್ಗಗಳು ದೊಡ್ಡವು ಇಲ್ಲವೆ ಸಣ್ಣವು ಇರತಕ್ಕವು. ಅನುಭವವುಳ್ಳಂಥ ಸಮರ್ಥ ಶಿಕ್ಷಕನು ೪೦ ಹುಡುಗರುಳ್ಳಂಥ ವರ್ಗವನ್ನು ತನ್ನ ಕೈಕೆಳಗೆ ನಡಿಸಿಕೊಳ್ಳಬಹುದು. ಆದರೆ ಬೇನೆ ಬೇಸಂಕೆ ಮುಂತಾದ ಕಾರಣಗಳಿಂದ ಕೆಲ ಹುಡುಗರು ಶಾಲೆಗೆ ಬರುವದಿಲ್ಲ, ಬೇರೆ ಕೆಲವರು ವರ್ಷ ಮುಗಿಯುವದರೊಳಗೆ ಶಾಲೆಯನ್ನು ಬಿಟ್ಟು ಹೋಗುವರು; ಆದದರಿಂದ ಯೆಲ್ಲ ಮಾತಿನ ಅನುಕೂಲವಿದ್ದಲ್ಲಿ ಒಂದು ವರ್ಗದೊಳಗೆ ಪರಮಾವಧಿ ೪೫ ಜನ ಹುಡುಗರನ್ನು ಹಾಕಬಹುದು. ಸಾಧಾರಣ ಶಿಕ್ಷಕರ ವರ್ಗಗಳಲ್ಲಿ ೩೦ ಜನ ಹುಡುಗರು ಸಾಕು. ಆದದರಿಂದ ವಾಡಿಕೆಯಾಗಿ ಇಷ್ಟಕ್ಕಿಂತ ಹೆಚ್ಚು ಹುಡುಗರನ್ನು ಒಂದು ವರ್ಗದೊಳಗೆ ಇಡಬಾರದು.

Education and Improvement.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಮುಂಬಯಿ ಯುನಿವರ್ಸಿಟಿಯಲ್ಲಿ ಪರೀಕ್ಷೆಯ ವಿಷಯಗಳ
ಲ್ಲಿ ಹೆಚ್ಚು ಕಡಿಮೆ ಮಾಡುವ ವಿಚಾರವು ಕೆಲವು ತಿಂಗಳುಗ
ಳಿಂದ ನಡೆದಿರುತ್ತದೆ. ಇದೇ ಸಂಧಿಯ ಸದರೀ ಪರೀಕ್ಷೆಗಳಲ್ಲಿ
ೇಶಭಾಷೆಗಳ ಪ್ರವೇಶವಾಗಲೆಂಬುದಾಗಿ ಬಹಳ ಕಡೆಯಿಂದ
ಯುನಿವರ್ಸಿಟಿಯವರಿಗೆ ಅರ್ಜಿಗಳು ಹೋಗಿದ್ದವು. ಧಾರವಾ
ಡದಿಂದಲೂ “ ಕ್ಯಾನರೀ ಅಸೋಸಿಯೇಶನ್ ”ಎಂಬ ಸಭೆಯ
ರ ಕಡೆಯಿಂದ ಒಂದು ಅರ್ಜಿ ಹೋಗಿತ್ತು. ಆದದರಿಂದ ಯು
ವರ್ಸಿಟಿಯವರು ಪಿ. ಇ ಪರೀಕ್ಷೆಗೆ ದೇಶಭಾಷೆಗಳನ್ನು ಇಟ್ಟಿ
ದ್ದು ಕೇಳಿ ನಮಗೆ ಅಲ್ಪ ಸ್ವಲ್ಪ ಸಂತೋಷವಾಗುತ್ತದೆ. ಬಿ.
. ಪರೀಕ್ಷೆಯಲ್ಲಿ ಸಹ ದೇಶಭಾಷೆಗಳನ್ನು ಇಡಿಸುವ ಬಗ್ಗೆ ಇ
ನ್ನೂ ಪ್ರಯತ್ನ ನಡೆದದೆ.

—ooo—

ಅಹಮ್ಮದ ನಗರದ ಹಾಯಸ್ಕೂಲನ್ನು ಅಲ್ಲಿಯ “ ಎಜು
ಕೇಶನ್ ಸೋಸಾಯಿಟಿ ” ಯೆಂಬ ಸಮಾಜದವರ ವಶಕ್ಕೆ
ಕೊಡುವ ಠರಾವು ಸರಕಾರದವರು ಮಾಡಿದರು. ರತ್ನಾಗಿರಿ,
ಕಾರವಾರಗಳಲ್ಲಿಯ ಹಾಯಸ್ಕೂಲುಗಳ ಫೀಯನ್ನು ಅನು
ಕ್ರಮವಾಗಿ, ೩, ೫ ರುಪಾಯಿ ಮಾಡಿದರೆಂದೂ ವರ್ತಮಾ
ನಪತ್ರಗಳಿಂದ ತಿಳಿಯುತ್ತದೆ. ಆದರೆ ಧಾರವಾಡಕ್ಕೆ ಫೀ ಬೆ
ಸಿನ ಹುಕುಮು ಬಂದದ್ದು ಕೇಳಿಲ್ಲ.

—ooo—

ಈ ವರ್ಷದ ವಕೀಲಿಯ ಪರೀಕ್ಷೆಗೆ ೩೮೫ ಜನ ಉಮೇದ ರರು ಹೋಗಿದ್ದರು. ಅವರಲ್ಲಿ ೧೧ ಜನ ಮಾತ್ರ ಪಾಸಾದ ರು. ಮುನಸೀಫಿಯ ಪರೀಕ್ಷೆಯಲ್ಲಿ ೬ ಮಂದಿ ಪಾಸಾದರು.

—ooo—

ಹೋಳೀ ಹುಣ್ಣಿವೆಯಲ್ಲಿ ಬೀಭತ್ಸ ಶಬ್ದಗಳನ್ನು ನುಡಿ ಯದೆ ಹೊಲಸು ಆಟಗಳನ್ನಾಡದೆ ಸಭ್ಯತನದಿಂದ ವರ್ತಿಸು ಬಗ್ಗೆ ನಾಸಿಕದೊಳಗಿನ ಯಾವತ್ತು ಶಾಲೆಗಳಲ್ಲಿಯೂ ಧಾರ ಡದ ಹಾಯಸ್ಕೂಲು ಟ್ರೇನಿಂಗ ಕಾಲೇಜಗಳಲ್ಲಿಯೂ ಶಾ ಸ್ತ್ರರ ಜನರು ವಿದ್ಯಾರ್ಥಿಗಳಿಗೆ ಬಹಳ ಉಪದೇಶ ಮಾಡಿದ್ದ ಂದ ಅದರ ಪರಿಣಾಮವು ಬಹಳ ಸರಸಾಗಿ ಆಯಿತೆಂದು ತಿ ದೆ. ಯಾವತ್ತು ಮಾಸ್ತರ ಜನರು ಮನಸಿನ ಮೇಲೆ ತಕ್ಕೊಂ ತರೆ, ಎಲ್ಲ ಕಡೆಯಲ್ಲಿ ಬೀಭತ್ಸವಾದಂಥ ಆಟ ನೋಟಗಳು ವೃಟ್ಟುಪವೆಂಬವಕ್ಕೆ ಸಂಶಯವಿಲ್ಲ.

—ooo—

ವಿಕ್ಟೋರಿಯಾ ಮಹಾರಾಣಿಯವರು ಹಿಂದುಸ್ತಾನೀ ಭಾ ಷೆಯ ಅಭ್ಯಾಸವನ್ನು ಕೆಲವು ದಿವಸದಿಂದ ನಡಿಸಿದ್ದು [illegible] ರ್ಷದಲ್ಲಿ ತಿಳಿಸಿದ್ದೇವೆ. ಅವರು ಈಗ ಆ ಭಾಷೆಯನ್ನು ತಕ್ಕ ಷ್ಟುಗೆ ಸರಸಾಗಿ ಆಡುತ್ತಾರೆಂದು ಕೇಳಿ ಸಂತೋಷವಾಗುತ್ತ ದೆ. ಇದು ಹಿಂದುಸ್ತಾನ ದೇಶವನ್ನು ನೋಡಲಿಕ್ಕೆ ಬರುವ ಸಿ ದ್ಧತೆಯೋ!

—ooo—

ಬೆಳಗಾವಿಯಲ್ಲಿ ಶೆಹರಿಗೆ ಬಂದ [illegible] ಬ್ಯಾ [illegible] ಈ ದಿನಗಳಲ್ಲಿ [illegible] ಹೋದಳು. [illegible] ಯು ಒಬ್ಬ ದೊಡ್ಡ

ಗೃಹಸ್ಥನ ಹೆಂಡತಿಯು ಆಕೆಗೆ ದುಡ್ಡಿನ ಸಹಾಯ ಕೊಡುವರೆಂದು ಕೇಳುತ್ತೇವೆ. ರಖುಮಾಬಾಯಿಯು ಗಂಡನು ಮತ್ತೊಂದು ಲಗ್ನ ಮಾಡಿಕೊಂಡದ್ದರಿಂದ ರಖುಮಾಬಾಯಿಯು ಬೇಕಾದಲ್ಲಿ ಬೇಕಾದ ಹಾಗೆ ಅಡ್ಡಾಡಲಿಕ್ಕೆ ಸ್ವತಂತ್ರಳಾದಳು.

—೦೦೦—

ಈ ವರ್ಷದ ರಾಷ್ಟ್ರೀಯ ಸಭೆಯು ಮುಂಬಯಿಯಲ್ಲಿ ಆಗತಕ್ಕದ್ದಿರುತ್ತದೆ

—೦೦೦—

ಸರಕಾರದ ನೌಕರಿಯಲ್ಲಿ ಸೇರಲಿಕ್ಕೆ ೨೫ ವರ್ಷದ ವಯಸ್ಸಿನ ಅಡ್ಡಿಯು ಇದು ವರೆಗೆ ಬಹಳ ಇತ್ತು. ಮುಂದೆ ಯೋಗ್ಯ ತೋರಿದಲ್ಲಿ ಹೆಚ್ಚಿನ ವಯಸ್ಸಿನವರಿಗೆ ನೌಕರಿಯನ್ನು ಕಲೆಕ್ಟರರು ಕೊಡಬಹುದೆಂದು ಸರಕಾರದವರು ಠರಾವು ಮಾಡಿದ್ದಾರೆ.

—೦೦೦—

ರಾ. ಬ. ವೆಂಕಟರಾವ ರುಕ್ಮಾಂಗದ ಇವರನ್ನು ಸಿವಿಲ್ ಸರ್ವೀಸಿನಲ್ಲಿ ತಕ್ಕೊಂಡದ್ದನ್ನು ಹಿಂದೆ ತಿಳಿಸಿದ್ದೇವೆ. ಇವರಿಗೆ ಈಗ ಅಮದಾಬಾದಿನಲ್ಲಿ ಅಸಿಸ್ಟಾಂಟ ಜಡಜರಾಗಿ ನೇಮಿಸಿದ್ದನ್ನು ಕೇಳಿ ಸಂತೋಷ ಪಡುತ್ತೇವೆ.

—೦೦೦—

ಅಮೇರಿಕದ ನ್ಯೂಯಾರ್ಕ ಸಂಸ್ಥಾನದಲ್ಲಿ ಎಲ್ಮಿರಾಯೆಂಬಲ್ಲಿ ಶೆರೆಮನೆಯಲ್ಲಿ ಬಿದ್ದ ಕೈದೀ ಜನರು ಒಂದು ವರ್ತಮಾನ ಪತ್ರವನ್ನು ಪ್ರಸಿದ್ಧಿಸುತ್ತಾರೆ. ಆ ಪತ್ರಕ್ಕಾಗಿ ನಿಬಂಧಗಳನ್ನು ಬರಿಯುವವರು, ಮೊಳೆ ಜೋಡಿಸುವವರು, ಛಾಪಿಸುವವರು, ಬಟವಾಡೆ ಮಾಡುವವರು, ಎಲ್ಲರೂ ಕೈದೀ ಜನರೇ.

ಆದರೆ ಪತ್ರವು ಬಹು ಸರಸಾಗಿ ಹೊರಡುತ್ತದೆಂದು ಹೇಳುತ್ತಾರೆ.

* * *

ಅಮೇರಿಕದ ಸಂಯುಕ್ತ ಸಂಸ್ಥಾನಗಳ ವಾಯುವ್ಯ ಶೀಮೆಯಲ್ಲಿ ಒಳಗಡೆಯಲ್ಲಿ ಮಳೆಯು ಅಪರಿಮಿತವಾಗಿ ಬೀಳ ಹತ್ತಿದ್ದರಿಂದ ಅಲ್ಲಿಯ ಶಾಸ್ತ್ರಜ್ಞರು ಶೋಧ ಮಾಡಲಾಗಿ, ಆ ಶೀಮೆಯಲ್ಲಿ ಉಗಿಯಂತ್ರಗಳಿಂದ ಉಗಿಯು ಆಕಾಶದಲ್ಲಿ ಅತಿಶಯವಾಗಿ ಹೋಗುತ್ತಿರುವ ಕಾರಣ ಮಳೆ ಹೆಚ್ಚಾಗಿದೆಂದು ಗೊತ್ತಾಯಿತು. ಆ ಶೀಮೆಯಲ್ಲಿ ೩೦೦೧೦ ಉಗಿಯಂತ್ರಗಳಿದ್ದು, ಅವುಗಳಿಂದ ಒಂದು ವಾರದಲ್ಲಿ ೫೩ ಅಬ್ಜ ಘನಯಾರ್ಡ್ ಉಗಿಯು ಆಕಾಶದಲ್ಲಿ ಹೋಗುತ್ತಿರುತ್ತದೆ! ಆ ಉಗಿಯಿಂದ ಪ್ರತಿ ದಿವಸ ಸುಮಾರು ೨ ಚಚ್ಚೌಕ ಮೈಲು ನೆಲ ತೊಯ್ಯುವಷ್ಟು ಮಳೆ ಬೀಳಲಿಕ್ಕೆ ಬೇಕೆಂದು ಸೃಷ್ಟಿ ಶಾಸ್ತ್ರಜ್ಞರು ಹೇಳುತ್ತಾರೆ. ಈ ಯುಕ್ತಿಯಿಂದ ನಮ್ಮ ದೇಶದಲ್ಲಿ ಬೇಕಾದಾಗ ಮಳೆ ಕೆಡವುವ ಹಂಚಿಕೆಯನ್ನು ಮಾಡಿದರೆ ಯೆಷ್ಟು ಲಾಭವಾಗುವದು?

* * *

ಲಂಡನ ಪಟ್ಟಣದಲ್ಲಿ ೨೦ ಜನ ಹೆಂಗಸರು ಕೆತ್ತಕರ ಹೋರೆಯನ್ನು ಮಾಡುತ್ತಾರಂತೆ!

* * *

ಪೃಶ್ಚಿಕ ರಾಜನ–ವರ್ತಮಾನ ಪತ್ರಗಳಲ್ಲಿ ಈ ಕೆಳಗಿನ ಬಹು ಚಮತ್ಕಾರವಾದ ಕಥೆಯು ಪ್ರಸಿದ್ಧವಾಗಿರುತ್ತದೆ.

ಪಂಜಾಬದ ಶೀಮೆಯಲ್ಲಿ ಮಾಯಾಪುರವೆಂಬ ಗ್ರಾಮದ ಸೆರೆಯಲ್ಲಿ ಒಬ್ಬ ಒಕ್ಕಲಿಗನು ಮಧ್ಯಾಹ್ನದಲ್ಲಿ ಹೊ

ನಿಂದ ಮನೆಗೆ ಹೋಗುವಾಗ ಒಂದು ಮಾವಿನ ಮರದ ಕೆಳಗೆ ವಿಶ್ರಾಂತಿಗಾಗಿ ಕೂತನು. ಅಲ್ಲಿ ಒಂದು ಹುತ್ತಿನೊಳಗಿಂದ ಲೆಕ್ಕಿಲ್ಲದಷ್ಟು ಚೇಳುಗಳು ಹೊರಟು ಸಾಲು ಹಿಡಿದು ಮುಂದಕ್ಕೆ ಸಾಗಿದವು. ಅವುಗಳ ಬಣ್ಣಗಳು ನಾನಾ ಪ್ರಕಾರವಿದ್ದವು. ಈ ದಂಡಿನ ಹಿಂದುದಿಯಲ್ಲಿ ಒಂದು ಅಚ್ಚ ಕರೇ ಬಣ್ಣದ ದೊಡ್ಡ ಚೇಳಿನ ಮೇಲೆ ಮಾಣಿಕದಂತೆ ಹೊಳೆಯುವಂಥಾದೊಂದು ಬಹು ಸಣ್ಣದಾದ ಕೆಂಪು ಚೇಳು ಯೇರಿಕೊಂಡು ಬರುತ್ತಿತ್ತು. ಅದು ಆ ಯಾವತ್ತು ದಂಡಿನ ನಾಯಕನಂತೆ ತೋರುತ್ತಿತ್ತು. ವೃಶ್ಚಿಕ ಸೈನ್ಯವು ಸಾಲು ಹಿಡಿದು ನಡಿಯಲಾಗಿ ಮಾರ್ಗದಲ್ಲಿ ಒಂದು ದೊಡ್ಡ ಬಂಡೆ ಬಂದು ಮಾರ್ಗಕ್ಕೆ ಅಡ್ಡಿಯಾದ ಕಾರಣ ಯೆಲ್ಲಕ್ಕೂ ಮುಂದೆ ನಡೆದಿದ್ದ ಚೇಳು ಹಿಂದಿರುಗಿತು; ಆ ಕೂಡಲೆ ಅದರ ಹಿಂದಿನ ಯಾವತ್ತು ಚೇಳುಗಳು ಕವಾಯತು ಕಲಿತವರಂತೆ ಅಲ್ಲಿಂದಲ್ಲೇ ಸ್ತಬ್ಧವಾಗಿ ನಿಂತುಕೊಂಡವು. ಆ ಹಿಂದುರಿಗಿದ ಚೇಳು ಕಟ್ಟ ಕಡೆಯಲ್ಲಿ ಬರುತ್ತಿದ್ದ ನಾಯಕನ ಬಳಿಗೆ ಹೋಗಿ ತನ್ನ ಕೊಂಡಿಯನ್ನು ಬಹಳ ಯೆತ್ತರವಾಗಿ ಯೆತ್ತಿ ಮುಜುರೆ ಮಾಡಿದಂತೆ ತೋರಿಸಿದ ಬಳಿಕ ಆ ಕೆಂಪು ಚೇಳಿನ ಮೋರೆಗೆ ಮೋರೆ ಹಚ್ಚಿ ಯೇನೋ ಹೇಳಿದ ಹಾಗೆ ಮಾಡಿತು. ಅದರಿಂದ ಆ ಕೆಂಪು ಚೇಳು ತನ್ನ ಕುದುರೆಯನ್ನು (ಕರೆ ಚೇಳನ್ನು) ಮುಂದಕ್ಕೆ ನಡಿಸಿ ಆ ಹೇಳಬಂದ ಚೇಳನ್ನು ಹಿಂಬಾಲಿಸಿ ಬಂಡೆಯ ಹತ್ತರ ಹೋಯಿತು; ಅಲ್ಲಿ ಹೋದ ಕೂಡಲೆ ಅದು ಕರೆ ಚೇಳಿನ ಮೇಲಿಂದ ಕೆಳಗಿಳಿದು ಬಂಡೆಯ ಸಮೀಪಕ್ಕೆ ಹೋಗಿ, ಕೊಂಡಿಯನ್ನು ಒಳಿತಾಗಿ ತ್ತರಿಸಿ ಬಂಡೆಯ ಮೇಲೆ ಹೊಡಿದ ಕೂಡಲೆ ಬಂಡೆ ಬಿಚ್ಚಿ ಹೋಳಾಯಿತು! ಅದರಿಂದ ಆ ದಂಡಿಗೆ ಮಾರ್ಗವಾಯಿತು. ಬ

ಳಿಕ ದಂಡು ನಿರಾತಂಕವಾಗಿ ಮುಂದಕ್ಕೆ ಸಾಗಿದ್ದು ನೋಡಿ ಅರಸುಜೇನು ಹಿಂದಿರುಗಿ ತನ್ನ ಸ್ಥಳದಲ್ಲಿ ಬೋರಾಲಿಸುತ್ತ ಸಾಗಿತು.

— ೦೦೦ —

ಮುದಿ ಹೆಂಗಸರು ಇಂಥಾವೇ ಅರಸು ಜೇನಿನ ಕಥೆಗಳನ್ನು ಹೇಳುತ್ತಿರುತ್ತಾರೆ. ಅವೆಲ್ಲ ನಿಜವಿದ್ದರೆ ಇದೂ ನಿಜವಿರಬಹುದು.

— ೦೦೦ —

ಡೆ. ಇನ್‌ಸ್ಪೆಕ್ಟರ ಸಾಹೇಬರು ಮುಂದಿನ ತಿಂಗಳಿನ ೧೫ನೇ ತಾರೀಖಿನ ಸುಮಾರಿನಲ್ಲಿ ಧಾರವಾಡಕ್ಕೆ ಬರತಕ್ಕವರಿದ್ದಾರೆಂದು ಕೇಳುತ್ತೇವೆ.

— ೦೦೦ —

ಟ್ರೇನಿಂಗ ಕಾಲೇಜದಲ್ಲಿ ಬಡಿಗಿ ಕಮ್ಮಾರರ ವಿದ್ಯೆಗಳನ್ನು ಕಲಿಸುವ ಶಿಕ್ಷಕರನ್ನಿಟ್ಟು ಕಾಲೇಜದ ವಿದ್ಯಾರ್ಥಿಗಳಿಗೆ ಆ ವಿದ್ಯೆಗಳನ್ನು ಕಲಿಸುವವರಿದ್ದಾರೆಂದು ತಿಳಿದಿದೆ. ಸ್ವಲ್ಪ ದಿವಸದಲ್ಲಿ ಈ ಅಭ್ಯಾಸವು ಆರಂಭವಾಗತಕ್ಕದ್ದಿರುತ್ತದೆಂದು ಕೇಳುತ್ತೇವೆ.

— ೦೦೦ —

ಧಾರವಾಡದಲ್ಲಿ ಇನ್ನೂ ಮಳೆ ಇಲ್ಲ. ನೀರಿನ ತಾಪತ್ರಯವು ಇಷ್ಟೆಂದು ಹೇಳಕೂಡದು. ಅಣೆಗೆ ೧ ಕೊಡ ಕುಡಿಯುವ ನೀರು ದೊರಿಯುವದು ದುರ್ಲಭವಾಗಿದೆ. ಆದರೂ ಬೇನೆ ದೇಸರಿಕೆಯು ಉಪದ್ರವವು ಬಹಳ ಇಲ್ಲೆಂಬುವದೊಂದು ಸುದೈವವೆಂದು ಎಣಿಸತಕ್ಕದ್ದು.

— ೦೦೦ —

Industry.

ಉದ್ಯೋಗ.

ಉದ್ಯೋಗ ಈ ಶಬ್ದವು ಯುಜ್ ಧಾತುವಿಗೆ ಭಾವವಾಚಕ 'ಅ' ಪ್ರತ್ಯಯ ಹತ್ತಿ ಯೋಗ ಎಂದು ಆಗಿರುತ್ತದೆ. ಇದಕ್ಕೆ ' ಉತ್ ' ಉಪಸರ್ಗ ಹತ್ತಿ ಉದ್ಯೋಗವೆಂಬ ಶಬ್ದವು ಹುಟ್ಟಿರುತ್ತದೆ. ಇದರ ಅರ್ಥವು ಯುಜ್ ಅಂದರೆ ಕೂಡಿಸು ಯೋಗ ಅಂದರೆ ಕೂಡಿಸೋಣ ' ಉತ್ ' ಉಪಸರ್ಗದ ಅರ್ಥ ಬಹಳವೆಂದಿರುತ್ತದೆ. ಉದ್ಯೋಗವೆಂದರೆ ಬಹಳ ಕೂಡಿಸುವಿಕೆ ಇದರ ಮೇಲಿಂದ ಶ್ರಮವೆಂಬ ಅರ್ಥ ಉಂಟಾಗುತ್ತದೆ.

ಸೃಷ್ಟಿಕರ್ತನು ಪ್ರಾಣಿಗಳಿಗೆ ಸುಖ ದುಃಖಗಳನ್ನು ಸಮನಾಗಿ ಇಟ್ಟಿರುವನೆಂಬ ನಮ್ಮ ಜನರ ತಿಳುವಳಿಕೆಯಲ್ಲಿ ತಪ್ಪು ಇರುತ್ತದೆ. ಹ್ಯಾಗೆಂದರೆ ಪ್ರತಿಯೊಂದು ಪ್ರಾಣಿಗೆ ಆಹಾರವು ಕೂತಲ್ಲೇ ದೊರೆಯುವದಿಲ್ಲ; ಎಷ್ಟಾದರೂ, ಶ್ರಮ ಮಾಡಬೇಕಾಗುತ್ತದೆ. ಆ ಶ್ರಮಕ್ಕೆ ಇವರು ದುಃಖವೆಂತಲೂ, ಸುಮ್ಮನೇ ಕೂಡ್ರುವದಕ್ಕೆ ಸೌಖ್ಯವೆಂತಲೂ ತಿಳಿಯುತ್ತಾರೆ. ಇದೇ ಅವರ ತಪ್ಪು ತಿಳುವಳಿಕೆಗೆ ಕಾರಣವಾಗಿರುತ್ತದೆ; ಇದರಿಂದ ನಮ್ಮ ದೇಶದ ಜನರಲ್ಲಿ ದುಡಿಯುವದನ್ನು ತಪ್ಪಿಸಬೇಕೆಂಬ ಭಾವನೆಯು ಯಾವಾಗಲೂ ನೆಲಸಿರುವದು ತೋರುತ್ತದೆ. ಮನುಷ್ಯನಿಗೆ ಆಲಸ್ಯವು ದೊಡ್ಡ ವೈರಿಯಾಗಿರುತ್ತದೆ. ಶ್ರೀಮಂತ ಸ್ಥಿತಿಯೊಳಗೆ ಸಿಕ್ಕ ಮನುಷ್ಯನ ಅವಸ್ಥೆಯು ಏನಾಗುತ್ತದೆಂಬದನ್ನು ನಮ್ಮ ಪ್ರಿಯ ಮಿತ್ರರು ಓದಿ, ನೋಡಿ, ಕೇಳಿ, ಬಲ್ಲರು. ಹೀಗಿದ್ದು ಆಲಸ್ಯವೆಂಬ

ಸ್ತ್ರೀಯು ಮೋಹ ಜಾಲವೋ ಅಥವಾ ದೇವ ನಿರ್ಮಿತ ಶಿಕ್ಷೆಯೋ ತಿಳಿಯದು. ಬೆಂಕಿ ಎಂಬುದನ್ನು ಅರಿಯದೆ ಸುಟ್ಟುಕೊಂಡು ಸಾಯುವ ಪತಂಗದಂತೆ ಈ ಜನರು ಆಲಸ್ಯಕ್ಕೆ ಮೈಗೊಟ್ಟು ಕೆಟ್ಟು ಹೋಗುತ್ತಾರೆ. ಆದರೆ ಹೀಗೆ ಮಾಡದ "ನಾಸ್ತ್ಯುದ್ಯಮ ಸಮೋಬಂಧು: ಕೃತ್ವಾಯನ್ನಾವಸೀದತಿ" ಎಂಬ ವಾಕ್ಯಕ್ಕನುಸರಿಸಿ, ನಾವೆಲ್ಲರೂ ಉದ್ಯೋಗವನ್ನು ಕೈಕೊಂಡರೆ ಜನ್ಮದ ಸಾಫಲ್ಯವು ಬೆಳೆಯುತ್ತದೆ. ಸೋಮಾರಿತನವು ಅಂಜಿ ಹಿಂದುಳಿಯುತ್ತದೆ ಜನರ ಕೆಟ್ಟ ಸ್ಥಿತಿಯು ಅಳಿಯುತ್ತದೆ. ಕೀರ್ತಿಯು ಮುಂದೆಳೆಯುತ್ತದೆ. ಈ ವೈಭವವು ಉದ್ಯೋಗದಿಂದ ಒದಗುವದರಿಂದ ಅದನ್ನು ಎಲ್ಲರೂ ಯಾವಾಗಲೂ ಎಡೆಬಿಡದೆ ಕೈಕೊಳ್ಳಬೇಕೆಂದು ನನ್ನ ಅಪೇಕ್ಷೆಯುಂಟು. ಇದರ ಮೇಲಿಂದ ಯಾವದಾದರೊಂದು ಉದ್ಯೋಗವಾದರೆ ತೀರಿತು ಅದನ್ನು ಮಾಡುವದಕ್ಕೆ ಅಡ್ಡಿಯಿಲ್ಲವೆಂಬ ಅಭಿಪ್ರಾಯವಲ್ಲ. ಉದ್ಯೋಗದಲ್ಲಿ ಎರಡು ಮುಖ್ಯ ಭೇದಗಳಿರುತ್ತವೆ ಅವು ಯಾವವೆಂದರೆ—(೧) ದುರುದ್ಯೋಗ (೨) ಸದುದ್ಯೋಗ.

— ದುರುದ್ಯೋಗ —

ದುರುದ್ಯೋಗವು ಆಯಾಸವೂ ವೇಳೆಯು ವ್ಯಯವೂ ಇಲ್ಲದೆ ಕ್ಷಣಮಾತ್ರದೊಳಗೆ ಅಗಣಿತ ಲಾಭವನ್ನು ಉಂಟು ಮಾಡುತ್ತದೆ. ಇದು ಸತ್ಯವಿದ್ದರೂ ಇದನ್ನು ಮಾಡಬಾರದು ಯಾಕಾದರೆ—ಈ ಉದ್ಯೋಗದಿಂದ ಆದ ಲಾಭದ ಇಮ್ಮಡಿ ಲುಕಸಾನವಿರುವದಲ್ಲದೆ ಮಾನದ ಹಾನಿಯೊಂದು ಹೆಚ್ಚಾಗುವದು ಹ್ಯಾಗೆಂದರೆ—ಒಬ್ಬ ಮನುಷ್ಯನು ಕಳವು ಕೊಲೆ

ಗಳನ್ನು ಮಾಡಿ ತನ್ನ ನಿರ್ವಾಹ ಸಾಗಿಸಹತ್ತಿದನೆಂದು ಕಲ್ಪಿಸುವ. ಇವನು ತನ್ನ ಉದ್ಯೋಗವನ್ನು ಬಹುಶಃ ರಾತ್ರಿ ನಡಿಸುವನು. ಒಂದು ದಿವಸ ಈತನ ಕಾರ್ಯ ಸಾಧಿಸಿ ತಕ್ಕ ಮಟ್ಟಿಗೆ ಫಲವಾಯಿತೆಂದು ತಿಳಿಯುವದಕ್ಕೆ ಸಂಶಯವಿಲ್ಲ. ಇಷ್ಟರೊಳಗೆ ಊರೊಳಗಿನ ಜನರೆಲ್ಲರು ತಮ್ಮ ತಮ್ಮೊಳಗೆ ಇಂಥವರ ಮನೆಯನ್ನು ನಿನ್ನಿನ ರಾತ್ರಿ ಒಡೆದಿರುವರು. ಆದದರಿಂದ ನೀವು ಎಚ್ಚರದಿಂದ ಇರ್ರಿ ಎಂದು ಮಾತಾಡಿಕೊಂಡು ಆನಷ್ಟು ಮಟ್ಟಿಗೆ ಎಚ್ಚರದಿಂದಿರುವರು.. ಈ ಕಳ್ಳನು ತನ್ನ ಮನಸಿನಲ್ಲಿ ನಿನ್ನಿನ ದಿವಸ ನನಗೆ ಬಹಳ ಹಣ ಸಿಕ್ಕಲಿಲ್ಲ. ಇವತ್ತಿನ ದಿವಸ ಇಂಥ ಸಾವಕಾರನ ಮನೆಯನ್ನು ಒಡೆದರೆ ನಾನು ಧನ್ಯನಾಗಬಹುದೆಂದು ಯೋಚಿಸುತ್ತಾ ಅದೇ ಸಾವಕಾರನ ಮನೆಯು ಒಡೆಯಲಿಕ್ಕೆ ಹೋಗುವನು. ಆ ಸಾವಕಾರನು ಕಷ್ಟ ಪಟ್ಟು ಗಳಿಸಿದ ಪದಾರ್ಥವನ್ನು ವ್ಯರ್ಥ ಕಳಕೊಳ್ಳಬಾರದೆ ಎಚ್ಚರದಿಂದಿರುವನು. ಹೀಗಾದ ಮೇಲೆ ಕೇಳುವದೇನು. ಸಾವಕಾರನು ಕಳ್ಳನು ಬಂದನು ಅವನನ್ನು ಹಿಡಿಯದೆ ಬಿಡಬಾರದೆಂದು ಒಳಗೆ ಬರುವವರೆಗೆ ಜಪ್ಪಿಸಿ ಕೂತು ಬಂದಾಕ್ಷಣಕ್ಕೆ ಅವನನ್ನು ಹಿಡಿದು ಮುಸಿಗಿಯು ಕಟ್ಟಿ ತನ್ನ ಸಿಟ್ಟು ತೀರುವವರೆಗೂ ದಣಿಸಿ ಮರದಿವಸ ಪ್ರಾತಃಕಾಲಕ್ಕೆ ಸರಕಾರದವರ ಸ್ವಾಧೀನ ಮಾಡುವರು. ಇನ್ನು ಮೇಲೆ ಗುವದು ಏನು? ಏನಿಕೇ ವರ್ಷ ಶಿಕ್ಷೆ, ಕೆಲವು ರೂಪಾಯಿಗ ದಂಡ. ಮುಂದೆ ಆತನ ಹೆಂಡರ ಮಕ್ಕಳ ಗತಿ ಯೇನು? ಕ್ಷೆಯೇ ಗತಿಯು. ಒಂದು ವೇಳೆ ಕೊಲೆ ಮಾಡಿ ಸಿಕ್ಕರಂತು ರೇ ಹೋಯಿತು ತಾನೂ ತೀರುವನು. ಇಂಥ ಪ್ರಸಂಗಗಲ್ಲಿ ಸಿಕ್ಕದೇ ಸ್ವಸ್ಥ ಇದ್ದಾಗ್ಯೂ ಊರ ಜನರು ಇವನನ್ನು

ನಂಬುವದಿಲ್ಲ, ಮತ್ತು ಇವನಿಗೆ ಮಾನ ಕೊಡುವದಿಲ್ಲ. ಬುದ ಸಂಕಟ ದೂರ ಮಾಡಲಿಕ್ಕೆ ಯಾರೂ ಅನುಕೂಲರಾಗುವದಿಲ್ಲ, ಇದಲ್ಲದೆ ಅದಷ್ಟು ಕೇಡು ಬಗೆಯುವ ಹವಣಿಕೆಯಲ್ಲಿರುವರು. ಇವೆಲ್ಲ ದುರುದ್ಯೋಗದ ಫಲಗಳು ಆದದರಿಂದ್ದ ಇವರ ಹಾದಿಗೆ ಸರ್ವಥಾ ಹೋಗಬೇಡಿರಿ.

—•×•—

History of the Middle Ages.

ಯುರೋಪದ ಮಧ್ಯಕಾಲದ ಇತಿಹಾಸವು.

(೪೭ನೇ ಪುಟದಿಂದ ಮುಂದೆ ಸಾಗಿದ್ದು)

ಅವನು ಒಳ್ಳೇ ಸದ್ಗುಣಿಯಾಗಿ ವಿದ್ಯಕ್ಕೆ ಬಹಳ ಆಶ್ರಯ ಕೊಡುವನು.

ತರವಾಯ ವಿಲಿಯಂ ಚಕ್ರವರ್ತಿಗೂ, ಫ್ರೆಡರಿಕನ ಭೋರತನೇ ಮಗನಾದ ಕಾನರಾಡನೆಂಬವನಿಗೂ ಜಗಳ ನಡೆದು, ಅವರಿಬ್ಬರೂ ಬೇಗ ತೀರಿದರು. ಆ ಬಳಿಕ ಯೆರಡು ಬಲವುಳ್ಳ ಪಕ್ಷಗಳಾಗಿ, ಅವರೊಬ್ಬನನ್ನು ಇವರೊಬ್ಬನನ್ನು ಚಕ್ರವರ್ತಿಯನ್ನು ಮಾಡುತ್ತ ನಡೆದಾಗ್ಯೂ, ಮುಂದಿನ ೨೪ ವರ್ಷಗಳಲ್ಲಿ ಯಾರೂ ನಿಜವಾಗಿ ಆಳುವ ಪ್ರಭುವಿದ್ದಿಲ್ಲವೆಂದು ಹೇಳಬಹುದು. ಈ ಅವ್ಯವಸ್ಥೆಯ ಕಾಲದಲ್ಲಿ ಹ್ರೈನ ಹೊಳೆಯ ಮೇಲಿನ ಪಟ್ಟಣಗಳ ನಿವಾಸಿಗಳು ಪರಸ್ಪರರನ್ನು ಸಂರಕ್ಷಿಸುವದರ ಸಲುವಾಗಿ ಒಡಂಬಡಿಕೆಗಳನ್ನು ಮಾಡಿಕೊಂಡರು.

—ಫ್ರಾನ್ಸವು—

೭ನೇ ಲುಯಿಯು ತನ್ನ ಮಂತ್ರಿಯ ಮಾತು ಕೇಳದೆ ೩ನೇ ಕಾನರಾಡನೆಂಬ ಚಕ್ರವರ್ತಿಯು ಕೂಡಿ ಜರೂಶಲೇಮಿನ ಯುದ್ಧಕ್ಕೆ ಹೋಗಿ, ಇಬ್ಬರೂ ಯೇನು ಲಾಭ ಹೊಂದದೆ ತಿರಿಗಿ ಬಂದರು. ಈ ಯಾತ್ರೆಯಲ್ಲಿ ಲುಯಿಯ ರಾಣಿಯಾದ ಇಲಿನಾರೆಂಬವಳು ವೊಬ್ಬ ತುರ್ಕನ ಸ್ನೇಹಕ್ಕೆ ಮೆಚ್ಚಿದ ಕಾರಣ ಲುಯಿಯು ಅವಳನ್ನು ಬಿಟ್ಟು ಕೊಡಲಾಗಿ, ಇಂಗ್ಲಂಡಿನ ಯೆರಡನೇ ಹೆನ್ರಿಯು ಅವಳನ್ನು ಮದುವೆ ಮಾಡಿಕೊಂಡನು; ೧೧೫೨—

ಲೂಯಿಯ ಮಗನಾದ ಯೆರಡನೇ ಫಿಲಿಪ್ಪನೆಂಬ ಅರಸನು ಶಾರ್ಲಮೇನನ ಹಾಗೆ ಬಲಶಾಲಿ ಯಿದ್ದನು, ೧೧೮೦— ಅವನು ಹಲವು ಯುಕ್ತಿಪ್ರಯುಕ್ತಿಗಳಿಂದ ತನ್ನ ರಾಜ್ಯದ ಯೋಗ್ಯತೆಯನ್ನು ಬೆಳಿಸಿದನು. ಇಂಗ್ಲಂಡಿನ ಜಾನರಾಜನು ಬಹು ಕ್ರೂರತನದಿಂದ ತನ್ನ ಅಣ್ಣನ ಮಗನನ್ನು ಕೊಂದದ್ದು ಕೇಳಿ, ಫಿಲಿಪ್ಪನು ಅವನನ್ನು ತನ್ನ ಕೈ ಕೆಳಗಿನ ಮಾಂಡಲಿಕನ ಹಾಗೆ ವಿಚಾರಣೆಯ ಸಲುವಾಗಿ ತನ್ನ ದರ್ಬಾರಿಗೆ ಕರೆದನು. ಆದರೆ ಜಾನನು ಬರದ ಕಾರಣ ಫಿಲಿಪ್ಪನು ನಾರ್ಮಂಡಿ, ಮೇನ, ಅಂಜೂ, ಯೆಂಬ ಸೀಮೆಗಳನ್ನು ಕಸುಕೊಂಡನು. ಫಿಲಿಪ್ಪನು ಇಂಗ್ಲಂಡಿನ ೧ನೇ ರಿಚರ್ಡನ ಸಂಗಡ ಜರೂಸಲೇಮಿನ ಯಾತ್ರೆಗೆ ಹೋಗಿ, ಅವನಿಗೆ ದ್ರೋಹ ಮಾಡಿದನು.

ಫಿಲಿಪ್ಪನ ಮಗನಾದ ೮ನೇ ಲೂಯಿಯನ್ನು ಇಂಗ್ಲಿಷರು ತಮ್ಮ ಜಾನರಾಜನನ್ನು ತಳ್ಳುವದಕ್ಕೋಸ್ಕರವಾಗಿ ಕರೆದ್ದ

ಷರಿಂದ ಲೂಯಿಯು ಇಂಗ್ಲಂಡಕ್ಕೆ ಹೋಗಿ ಬಹಳ ಪ್ರಯತ್ನ ಮಾಡಿದಾಗ್ಯೂ ಹೇಳತಕ್ಕಷ್ಟು ಫಲವೇನು ಆಗಲಿಲ್ಲ. ಫ್ರಾನ್ಸದೊಳಗಿನ ಇಂಗ್ಲಿಷರ ಶೀಮೆಗಳು ಮಾತ್ರ ಬಹುತರವಾಗಿ ಯೆಲ್ಲ ಫ್ರೆಂಚರಿಂದ ಆಕ್ರಮಿಸಲ್ಪಟ್ಟವು. ಮುಂದೆ ೧೦ ವರ್ಷಗಳ ವರೆಗೆ ಲೂಯಿಯು ಪೋಪನ ಆಜ್ಞೆಯಿಂದ ಧರ್ಮಸಂಬಂಧವ ಯುದ್ಧಗಳಲ್ಲಿ ತೊಡಗಿ ಮರಣ ಹೊಂದಿದನು; ೧೨೨೬—

೮ನೇ ಲೂಯಿಯು ತೀರಿದಾಗ ಅವನ ಮಗ ೯ನೇ ಲೂಯಿಯು ೧೨ ವರ್ಷದವನಿದ್ದನು. ಅವನು ಪ್ರೌಢನಾಗುವ ವರೆಗೆ ಅವನ ತಾಯಿಯು ಬಹು ಶೌರ್ಯದಿಂದಲೂ ಚಾತುರ್ಯದಿಂದಲೂ ಕಾರಭಾರವನ್ನು ನಡಿಸಿದಳು. ಲೂಯಿಯು ದೊಡ್ಡವನಾದ ಬಳಿಕ ಅವನ ಸದ್ಗುಣಗಳನ್ನು ನೋಡಿ ಜನರು ಅವನಿಗೆ ಸೇಂತ ಲೂಯಿ (ಸಾಧುಲೂಯಿ) ಯೆಂದು ಹೆಸರಿಟ್ಟರು. ಅವನು ಪರರ ಶೀಮೆಗಳನ್ನು ಆಕ್ರಮಿಸುವ ಪ್ರಯತ್ನವನ್ನು ಯೆಂದೂ ಮಾಡಲಿಲ್ಲ. ಇಷ್ಟೇ ಅಲ್ಲ, ತನ್ನ ಪೂರ್ವಜರಿಂದ ಅನ್ಯಾಯವಾಗಿ ಅಪಹರಿಸಲ್ಪಟ್ಟ ಪ್ರದೇಶಗಳನ್ನು ಅವನು ಔದಾರ್ಯದಿಂದ ಅವುಗಳೊಡೆಯರಿಗೆ ಹಿಂದಕ್ಕೆ ಕೊಡುವನು; ಫ್ರಾನ್ಸದೊಳಗಿನ ಇಂಗ್ಲಿಷರ ಶೀಮೆಗಳನ್ನು ಅವರಿಗೆ ತಿರುಗಿ ಕೊಟ್ಟನು. ಇಂಗ್ಲಂಡದ ಅರಸನಿಗೂ, ಅವನ ದರ್ಬಾರದವರಿಗೂ ವ್ಯಾಜ್ಯಗಳು ನಡಿದರೆ ಲೂಯಿಯು ತಾನು ಮಧ್ಯಸ್ಥನಾಗಿ ಅವರ ವ್ಯಾಜ್ಯವನ್ನು ಮುರಿಯುವ ಪ್ರಯತ್ನ ಮಾಡುವನು. ಅವನು ತನ್ನ ದರ್ಬಾರಿನಲ್ಲಿ ನ್ಯಾಯದ ಕೆಲಸವನ್ನು ತಾನೇ ಸ್ವತಃ ಮಾಡುವನು. ಇದಲ್ಲದೆ ಅವನು ಕೆಲವು ಹೊಸ ವ್ಯವಸ್ಥೆ

ನ್ನು ನೆಲಿಗೊಳಿಸಿ ಕಾಯ್ದೆಗಳನ್ನು ಮಾಡಿದನು. ಅವನ ಮು ್ಯ ದೋಷಗಳೇನಂದರೆ, ಅವನು ತನ್ನ ತಾಯಿಗೆ ಮಿತಿ ಾರಿ ಮಾನ ಕೊಡುವನು; ಮತ್ತು ಅವನಲ್ಲಿ ಧರ್ಮ ೀನತನವು ಬಹಳವಿತ್ತು. ಅವನು ಯೆರಡು ಸಾರಿ ಜ ರೂಸಿಲೇಮಿನ ಯಾತ್ರೆಗೆ ಹೋಗಿ, ಮೊದಲಿನ ಸಾರಿ ಅವ ಂಬು ಪಟ್ಟನು; ಯೆರಡನೇ ಸಾರಿ ಆಫ್ರಿಕದ ಘಟದಲ್ಲಿ ಕೆಂಯೊಳಗೆ ಬಿದ್ದು ಮರಣ ಹೊಂದಿದನು, ೧೨೭೦ ಇದಾ ಭ್ಯ ಈ ಸಾಧು ಲೂಯಿಯಿಂದ ಆಳಲ್ಪಟ್ಟ ಬಗ್ಗೆ ಫ್ರಾನ್ಸ ಶವು ಅಭಿಮಾನವನ್ನು ವಹಿಸ ಬಹುದು. ಯಾಕಂದರೆ ಅ ನಿಗೆ ಸರಿಯಾದ ಅರಸನಿಂದ ಯಾವ ರಾಜ್ಯದ ಸಿಂಹಾಸ ವೂ ಯೆಂದೂ ಭೂಷಿತವಾಗಲಿಲ್ಲ

ಮುಂದೆ ಸಾಗುವದು.

—೦—

Correspondence.

ಪತ್ರವ್ಯವಹಾರವು.

ರಾವಸಾ. ಕಂನಡ ಶಾಲಾ ಪತ್ರಕರ್ತ ಎಡಿಟರ ಮಹಾರಾಯರ ಚರಣ ಸನ್ನಿಧಿಗೆ—

ವಿ. ಪತ್ರಕರ್ತ ಮಹಾರಾಯರೇ ಈ ಕೆಳಗಿನ ಪದ್ಯವನ್ನು ಮು ಅಂದವಾದ ಸುಂದರ ಶಾಲಾ ಪತ್ರದಲ್ಲಿ ಮುದ್ರಿಸ ಬ ದೆಂದು ಮಂಡವಾತಿಯು ವಂದಿಸುತ್ತೇನೆ.

“ ವಿಕ್ಟೋರಿಯ ಮಹಾರಾಣಿಯವರ ಒಳ್ಳೇ ಆಳಿಕೆ ”

ಪದ ॥ ರಾಗ ಕಲ್ಯಾಣಿ ॥ ತಾಳ ರೂಪಕ ॥

ಳಿ ನಾಥನ್ಯನಾದೆ, ಈ ಲೋಕದೋಳ್ । ಹೇಳಲ ಸಾಧ್ಯ

ಣದೆ || ಇಳೆಯನಾಳ್ ಮಹಾರಾಣಿಯವರತಿ | ಕಳೆಗಳನು
ಬಲ್ಲಷ್ಟು ಪೇಳುವೆ | ತಿಳಿಸು ನೋಡಲು ಇವರ ಚರಿತವು |
ತುಲನೆಗಸದಳ ವಾಗುದನು || ಪಲ್ಲ || ಭರತ ಖಂಡವನೆ
ಲ್ಲವನೂ, ಬಹು ವೇಗದಿ | ಅರಸು ಕೊಂಡಿರುವನೂ | ಸ್ವ
ತದಿ ಭಾಗವನೂ, ಅಲ್ಲಲ್ಲಿಗೆ | ಸರಸ ಕಾಯಿದೇ ಕಾನು ||
ಪಿರಿದು ಸಾಧನವೆಂಬ ಲಕ್ಷ್ಯವು | ಮೆರೆವ ಖಾತೆಗಳಿಟ್ಟು ಇವರ
ಲಿ | ಪರಮ ಪುರುಷರನೆಲ್ಲ ಆರಿಸಿ | ಹರುಷದಿಂದಲಿ ನೇಮಿ
ಸಿದರೂ || ೧ || ಮೇಲಾದ ಗವರ್ನರರೂ, ಬಾರಿಸ್ಟರ |
ಕೀಲ ಜಡ್ಜ ಸಾಹೇಬರೂ | ಕಾಲೇಜಧ್ಯಕ್ಷರೂ, ಅತ್ಯದ್ಭು
ತ | ಪೋಲಿಸರೆಂಬುವರೂ || ಮೇಲೆ ತೋರ್ಪ ಇವರ ಕ
ದರ್ಪವ | ಅಲಿಸಿವಗಳಲಿರ್ಪ ಲಾಭವ | ಹೇಳಲೊಲ್ಲದರೆ ಮ
ನುಜ ಜನ್ಮಕೆ | ಸಾಲಲೊಲ್ಲದು ಬುದ್ಧಿಯೊಳೆ || ೨ ||
ಮೂಢಜನವ ನಳಿಸೀ, ಸುಜ್ಞಾನದ | ರೂಢಿ ಯುವಗೆ ತಿಳಿ
ಸೀ | ಪ್ರೌಢಶಾಲೆಯ ಸ್ಥಾಪಿಸೀ, ಸದ್ವಿದ್ಯವ | ನಾಡಜನ
ರೊಳ್ ಬರಸೀ || ಕಾಡಿನಲಿ ರವಿಕಿರಣಗಳು ಇವು | ಮೂಡಿ
ದಾಕ್ಷಣ ಕತ್ತಲೆಯು ತಾ | ಓಡಿಹೋಯಿತೆಂಬ ತೆರದಿ
ನೋಡುತಿರ್ಪರು ಜನರ ಸುಖವನು || ೩ || ವಿದ್ಯಾ ಶಿಕ್ಷ
ರೆಲ್ಲರೂ, ಶಾಲೆಗಳಲ್ಲಿ | ಬುದ್ಧಿ ಬೋಧಿಸುತಿರ್ಪರೂ
ಬುದ್ಧಿಯಿಲ್ಲದ ಬಾಲೆಯರೂ, ಸಂತೋಷದಿ | ವಿದ್ಯಕ್ಕೆ ಜೆ
ಟ್ಟಿಹರೂ || ಬುದ್ಧಿಗಲಿಸಿದ ಆಂಗ್ಲ ಭೌಮರು | ತಿದ್ದಿದಂ
ಸೇನೆಯಿಂದವಿ | ರುದ್ಧ ನೃಪರನೆಲ್ಲ ಜಯಿಸೀ | ಯುದ್ಧದ
ಕಡುಜಾಣರೆನಿಪರು || ೪ || ಹೊಗೆಗಾಡಿ ನಡಿಸುವರೂ, ಬ
ಹು ವೇಗದಿ | ಉಗಿಯಿಂದ ನುಗಿಸುವರೂ | ಸೊಗಸಿಲಿ ಜ
ರೆಲ್ಲರೂ, ದೇಶಾಂತರಕೆ | ಹೊಗಳುತ ಪೋಗುವರೂ || ಬ

ಬಗೆಯ ಜನಸಮುಗಳೆಲ್ಲವ | ತೆಗೆದುಕೊಂಡು ಜ್ಯೋಗದಲಿ ಬಪ್ಪ | ಮಿಗಿಲರಿನಿಸೀ ಪ್ರಾಣ ಸೌಖ್ಯದ | ಉಪಾಯವನು ಶೋಧಿಸುತಲಿರ್ಪರೂ || ೫ || ದೇಶದ ವಾರ್ತವನೂ, ಯಂತ್ರಗಳಿಂದ | ನೋಡಿ ತರಿಸುವವನನೂ | ಲೇಸು ಸಂಗತಿಗಳನೂ, ಪತ್ರಗಳಿಂದ | ಸೂಸ್ಯಾಡುತಿರುವವನ್ನೂ || ಪಸುಪಾಪತಿನ್ನೇನು ಹೇಳಲಿ | ಈಶನಿವರಲಿ ವಾಸನಾಗಿಹ | ಶ್ವೇತ ದ್ವೀಪವ ನಳಿದು ಪ್ರಜೆಗಳ | ಲೇಸು ಕರ್ಮವ ಬಯಸುತಿರ್ಪರು || ೬ || ಸತ್ಯ ಧೊರೆ ರಾಣಿಯರೂ, ನ್ಯಾಯದಿ ಐವತ್ತು ವರುಷವಾಳಿದರೂ | ಉತ್ತಮರೆನಿಸಿದರೂ, ಜನನಿಯಂತೆರ | ದಿತ್ತು ಸಂರಕ್ಷಿಪರೂ || ಮತ್ತೆ ವಿಮಾನವೆಂಬ ಗಮನದ | ತತ್ವವನು ಕಡುಶೋಧದಿಂದಲಿ | ಗೊತ್ತು ಹಚ್ಚಿ ಇದರ ಬೀಜವ | ಬಿತ್ತಿ ಬೆಳೆಯಲು ಬೇಕು ಎಂಬರು || ೭ || ಹಿಂದು ದೇಶದಲಿವರೂ, ಬಹು ಪ್ರೇಮದಿ | ಒಂದೇ ವಿಧದಿ ಆಳ್ವರೂ | ಹಿಂದು ಮಹಾರಾಣಿಯರೂ, ಭುವನದೊಳೆಲ್ಲ | ತಂದೆ ತಾಯೆನಿಸಿದರೂ || ಚಂದದಿಂದಲೆ ತಿಳಿಯು ನೋಡಲು | ಹಿಂದಕಾಳಿದ ಸಾರ್ವಭೌಮರು | ಅಂಪದಾದಂಥವರ ಖ್ಯಾತಿಯು | ಒಂದೇ ಗುಣವನು ಹೊಂದಲರೆಂದೂ || ೮ || ಬಡತನವನು ಪೋದಿಸೀ, ಅಷ್ಟೈಶ್ವರ್ಯ | ಕಡಗರವನು ಬೆಳೆಸೀ | ವಡವೆ ವೈದ್ಯರ ನಿರಿಸೀ, ಈ ದೇಶದ | ಕಡು ರೋಗವ ಛೇದಿಸೀ || ಪೊಡವಿಯೊಳ್ ನಿಡುಗುಂದ ವಾಸನು | ಒಡೆಯ ಶ್ರೀಗುರುಸಿದ್ಧ ರಾಮನ | ಅಡಿಗೆ ನಮಿಸೀ ಸ್ತೋತ್ರ ಆಳಿಕೆ | ಬಿಡದೆ ನಡೆಯುವದೆಂದು ಪೊಗಳುವೆ || ೯ ||

ವಿನಯಾನ್ವಿತ || ಕಂದ || ಇದರೊಳ್ ಬೆರಸಿದ ದೋಷವ | ಹದುಳಂಪದಿಂ ಕ್ಷಮಿಸಿ ಯಾನ ತಿದ್ದುವಿರೆಂದೂ || ಸದಮಲ

ಣಾದೆ || ಇಳೆಯನಾಳ್ ಮಹಾರಾಣಿಯಚರಿತೆ | ಕಳೆಗಳನು ಬಲ್ಲಷ್ಟು ಪೇಳುವೆ | ತಿಳಿದು ನೋಡಲು ಇವರ ಚರಿತವು | ತುಲನೆಗಸದಳ ದಾನದಂನು || ಪಲ್ಲ || ಭರತ ಖಂಡವನೆಲ್ಲವನೂ, ಬಹು ವೇಗದಿ | ಅರಿತು ಕೊಂಡಿಹರಿವನೂ | ತ್ವರಿತದಿ ಭಾಗವನೂ, ಅಲ್ಲಲ್ಲಿಗೆ | ಸರಸ ಕಾಯಿದೇ ಕಾನು || ಹಿರಿದು ಸಾಧನವೆಂಬ ಅಕ್ಷಯು | ಮೆರೆವ ಖಾತೆಗಳಿಟ್ಟು ಇವರರಿ | ವರವು ಪುರುಷರನೆಲ್ಲ ಅರಿಸಿ | ಹರುಷದಿಂದಲಿ ನೇಮಿಸಿಹರೂ || ೧ || ಮೇಲಿಂದ ಗವ್ಹರ್ನರರೂ, ಬಾರಿಸ್ಟರ | ಕೀಲ ಜಡ್ಜಸಾಹೇಬರೂ | ಕಾಲೇಜಧ್ಯಕ್ಷರೂ, ಅತ್ಯದ್ಭುತ | ಪೋಲಿಸರೆಂಬುವರೂ || ಮೇಲೆ ತೋರ್ಪ ಇವರ ದರ್ಬಾರ | ಅಲಿಸಿವಗಳಲಿರ್ಪ ಅನುಭವ | ಹೇಳಲೋದರೆ ಮನುಜ ಜನ್ಮಕೆ | ಸಾಲಲೊಲ್ಲದು ಬುದ್ಧಿಯೊಳೆ || ೨ || ಮೂಢಜನವ ನಳಿಸೀ, ಸುಜ್ಞಾನದ | ರೂಢಿ ಯುವಗೆ ತಿಳಿಸೀ | ಪ್ರೌಢಶಾಲೆಯು ಸ್ಥಾಪಿಸೀ, ಸದ್ವಿದ್ಯವ | ನಾಡಜನರೊಳ್ ಹರಸೀ || ಕಾಡಿನಲಿ ರವಿಕಿರಣಗಳು ಇವು | ಮೂಡಿದಾಕ್ಷಣ ಕತ್ತಲೆಯು ತಾ | ಓಡಿಹೋಯಿತೆಂಬ ತೆರದಿ ನೋಡುತಿರ್ಪರು ಜನರ ಸುಖವನು || ೩ || ವಿದ್ಯಾ ಶಿಕ್ಷಕರೆಲ್ಲರೂ, ಶಾಲೆಗಳಲ್ಲಿ | ಬುದ್ಧಿ ಬೋಧಿಸುತಿರ್ಪರೂ | ಬುದ್ಧಿಯಿಲ್ಲದ ಬಾಲೆಯರೂ, ಸಂತೋಷದಿ | ವಿದ್ಯಕ್ಕೆ ಮೆಚ್ಚಿಹರೂ || ಬುದ್ಧಿಗಲಿಸಿದ ಆಂಗ್ಲ ಭೌಮರು | ತಿದ್ದಿದಂಥ ಸೇನೆಯಿಂದವಿ | ರುದ್ಧ ನೃಪರನೆಲ್ಲ ಜಯಿಸೀ | ಯುದ್ಧದಲಿ ಕಡುಜಾಣರೆನಿಪರು || ೪ || ಹೊಗೆಗಾಡಿ ನಡಿಸುವರೂ, ಬಹು ವೇಗದಿ | ಉಗಿಯಿಂದ ನಗಿಸುವರೂ | ಸೊಗಸಿಲಿ ಜನರೆಲ್ಲರೂ, ದೇಶಾಂತರಕೆ | ಹೊಗಳುತ ಪೋಗುವರೂ || ಜಗೆ

ಬಗೆಯ ಜೀವನಗಳಿಲ್ಲದ | ತೆಗೆದುಕೊಂಡು ಬೊಕ್ಕಸದಿ ಬ
ಹ್ರ | ಖಾಲರಿಸಿಸೀ ಪ್ರಾಣ ಸೌಖ್ಯದ | ಉಪಾಯವನು ನೋ
ಡಿಸುತಲಿರ್ಪರೂ || ೫ || ದೇಶದ ವಾರ್ತೆವನೂ, ಯಂತ್ರಗ
ಿಂದ | ಸೋಸಿ ತರಿಸುವವನೂ | ಲೇಸು ಸಂಗತಿಗಳನೂ,
ಪತ್ರಗಳಿಂದ | ಸುಸ್ವಾದುತಿರುವವನ್ನೂ || ಪಸುಪಾಡಿತನ್ನೇ
ು ಹೇಳಲಿ | ಈಶನಿವರಲಿ ವಾಸನಾಗಿಹ | ಕ್ಲೇಶ ದೋಷ
ನಳಿದು ಪ್ರಜೆಗಳ | ಲೇಸು ಕರ್ಮವ ಬಯಸುತಿರ್ಪ
|| ೬ || ಸತ್ಯ ಧೊರೆ ರಾಣಿಯರೂ, ನ್ಯಾಯದಿ [illegible]
ವರುಷವಾಳಿಹರೂ | ಉತ್ತಮರೆನಿಸಿಹರೂ, ಜನನಿಯ
ರ | ದಿತ್ತು ಸಂರಕ್ಷಿಪರೂ || ಮತ್ತೆ ವಿಜ್ಞಾನವೆಂಬ ಗಮನ
ತತ್ವವನು ಕಸುಶೋಧದಿಂದಲಿ | ಗೊತ್ತು ಹಚ್ಚೀ ಆ
ಬೀಜವ | ಬಿತ್ತಿ ಬೆಳೆಯಲು ಬೇಕು ಎಂಬರು || ೭ ||
ಜು ದೇಶದಲಿಪರೂ, ಬಹು ಪ್ರೇಮದಿ | ಒಂದೇ ವಿಧದಿ
ರೂ | ಹಿಂದು ಮಹಾರಾಣಿಯರೂ, ಭುವನದೊಳೆಲ್ಲ |
ನೆ ತಾಯೆನಿಸಿಹರೂ || ಚಂದದಿಂದಲೆ ತಿಳಿದು ನೋಡಲು |
ದಕಾಲದ ಸಾರ್ವಭೌಮರು | ಅಂದವಾದಂಥವರ ಖ್ಯಾತಿ
| ಒಂದೇ ಗುಣವನು ಹೋಲರೆಂದೂ || ೮ || ಬಡತನ
ಪೋದಿಸೀ, ಅಷ್ಟೈಶ್ವರ್ಯ | ಸಡಗರವನು ಬೆಳ
ಳ | ವಡವೆ ವೈದ್ಯರ ನಿರಿಸೀ, ಈ ದೇಶದ | ಕಡು ರೋಗವ
ಛೇದಿಸೀ || ಪೊಡವಿಯೊಳ್ ನಿಡಗುಂದ ವಾಸನು | ಪಡಿಯು
ಶ್ರೀಗುರುಸಿದ್ಧ ರಾಮನ | ಅಡಿಗೆ ನಮಿಸೀ ಸ್ತುತ್ಯ ಅಳಿಕೆ |
ಬಿಡದೆ ನಡಿಯುವದೆಂದು ಪೊಗಳುವೆ || ೯ ||

ವಿನಯಾನ್ವಿತ || ಕಂದ || ಇದರೊಳ್ ಬೆರಸಿದ ದೋಷವ |
ಓದುಂವದರಿ ಕ್ಷಮಿಸಿ ಯಾನ ತಿದ್ದುವಿರೆಂದೂ || ಸದಮಲ

ಣಾದೆ ॥ ಆಳುವಾಲ್ ಮಹಾರಾಣಿಯವರತಿ | ಕಳೆಗಳನು
ಬಲ್ಲಷ್ಟು ಹೇಳುವೆ | ತಿಳಿವು ನೋಡಲು ಇವರ ಚರಿತವು |
ತುಲನೆಗಸದಳ ವಾದುದಂನು ॥ ಪಲ್ಲ ॥ ಭರತ ಖಂಡವನೆ
ಲ್ಲಾನೂ, ಬಹು ಬೇಗದಿ | ಅರಿತು ಕೊಂಡಿಹರಿವನೂ | ಶ್ವೇ
ತದಿ ಭಾಗವನೂ, ಅಲ್ಲಲ್ಲಿಗೆ | ಸರಸ ಕಾಯಿದೇ ಕಾನು ॥
ಹಿರಿದು ಸಾಧನವೆಂಬ ಅಕ್ಷಯ | ಮೆರೆವ ಖಾತೆಗಳಿಟ್ಟು ಇವರ
ಲಿ | ಪರಮ ಪುರುಷರನೆಲ್ಲ ಅರಿಸಿ | ಹರುಷದಿಂದಲಿ ನೇಮಿ
ಸಿಹರೂ ॥ ೧ ॥ ಮೇಲಿಹ ಗವರ್ನರರೂ, ಬಾರಿಸ್ಟವ |
ಕೀಲ ಜಡ್ಜ ಸಾಹೇಬರೂ | ಕಾಲೇಜಧ್ಯಕ್ಷರೂ, ಅತ್ಯದ್ಭು
ತ | ಪೋಲಿಸರೆಂಬುವರೂ ॥ ಮೇಲೆ ತೋರ್ವ ಇವರ ಕ
ರ್ತವ | ಅಲಿಸಿವಗಳಲಿರ್ವ ಲಾಭವ | ಹೇಳಲೊಲ್ಲೆದರೆ ಮ
ನುಜ ಜನ್ಮಕೆ | ಸಾಲಲೊಲ್ಲದು ಬುದ್ಧಿಯೊಳಿ ॥ ೨ ॥
ಮೂಢಜನವ ನಳಿಸೀ, ಸುಜ್ಞಾನದ | ಬೋಧೆ ಯುಮಗೆ ತಿಳಿ
ಸೀ | ಪ್ರೌಢಶಾಲೆಯ ಸ್ಥಾಪಿಸೀ, ಸದ್ವಿದ್ಯೆವ | ನಾಡಜನ
ರೊಳ್ ಹರಸೀ ॥ ಕಾಡಿನಲಿ ರವಿಕಿರಣಗಳು ಇವು | ಮೂಡಿ
ದಾಕ್ಷಣ ಕತ್ತಲೆಯು ತಾ | ಓಡಿಹೋಯಿತೆಂಬ ತೆರದಿ
ನೋಡುತಿರ್ಪರು ಜನರ ಸುಖವನು ॥ ೩ ॥ ವಿದ್ಯಾ ಶಿಕ್ಷಕ
ರೆಲ್ಲಾರೂ, ಶಾಲೆಗಳಲ್ಲಿ | ಮುದ್ದು ಪೋಷಿಸುತಿರ್ಪರೂ |
ಬುದ್ಧಿಯಿಲ್ಲದ ಬಾಲೆಯರೂ, ಸಂತೋಷದಿ | ವಿದ್ಯಕ್ಕೆ ಮೆ
ಚ್ಚಿಹರೂ ॥ ಬುದ್ಧಿಗಲಿಸಿದ ಆಂಗ್ಲ ಭೌಮರು | ತಿದ್ದಿದಂಥ
ಸೇನೆಯಿಂದವಿ | ರುದ್ಧ ನೃಪರನೆಲ್ಲ ಜಯಿಸೀ | ಯುದ್ಧದಲಿ
ಕದುಬಾಣರೆನಿಪರು ॥ ೪ ॥ ಹೊಗೆಗಾಡಿ ನಡಿಸುವರೂ, ಬ
ಹು ವೇಗದಿ | ಉಗಿಯಿಂದ ನಗಿಸುವರೂ | ಸೊಗಸಿಲಿ ಜನ
ರೆಲ್ಲರೂ, ದೇಶಾಂತರಕೆ | ಹೊಗಳುತ ಪೋಗುವರೂ ॥ ಜಗ

ಬಗೆಯ ಜೀವನಸುಖಗಳಿಲ್ಲದ | ತೆಗೆದುಕೊಂಡು ದೊಣ್ಣೆಗಳಿಂ ಬದ್ರ | ಮಿಗಿಲರಿಸಿಸೀ ಪ್ರಾಣ ಸೌಖ್ಯದ | ಉಪಾಯವನು ಶೋಧಿಸುತಲಿರ್ಪರೂ || ೫ || ದೇಶದ ವಾರ್ತವನೂ, ಯಂತ್ರಗಳಿಂದ | ಸೋಸಿ ತರಿಸುವವರನೂ | ಲೇಸು ಸಂಗತಿಗಳನೂ, ಪತ್ರಗಳಿಂದ | ಸೂಸ್ಯಾಡುತಿರುವವರನ್ನೂ || ಪಸುಪಾತಿನ್ನೇನು ಹೇಳಲಿ | ಈಶನಿವರಲಿ ವಾಸನಾಗಿಹ | ಕ್ಲೇಶ ದೋಷವ ನಳಿದು ಪ್ರಜೆಗಳ | ಲೇಸು ಕರ್ಮವ ಬಯಸುತಿರ್ಪರು || ೬ || ಸತ್ಯ ಧೊರೆ ರಾಣಿಯರೂ, ನ್ಯಾಯದಿ ಐವತ್ತು ವರುಷವಾಳಿದರೂ | ಉತ್ತಮರೆನಿಸಿದರೂ, ಜನನಿಯ ತೆರ | ದಿತ್ತು ಸಂರಕ್ಷಿಪರೂ || ಮತ್ತೆ ವಿಮಾನವೆಂಬ ಗಮನದ | ತತ್ತ್ವವನು ಕಡುಶೋಧದಿಂದಲಿ | ಗೊತ್ತು ಹಚ್ಚೀ ಇದರ ಬೀಜವ | ಬಿತ್ತಿ ಬೆಳೆಯಲು ಬೇಕು ಎಂಬರು || ೭ || ಹಿಂದು ದೇಶದಲಿವರೂ, ಬಹು ಪ್ರೇಮದಿ | ಒಂದೇ ವಿಧದಿ ಆಳ್ವರೂ | ಹಿಂದು ಮಹಾರಾಣಿಯರೂ, ಭುವನದೊಳಿಲ್ಲ | ತಂದೆ ತಾಯೆನಿಸಿಹರೂ || ಚಂದದಿಂದಲೆ ತಿಳಿದು ನೋಡಲು | ಹಿಂದಕಾಳಿದ ಸಾರ್ವಭೌಮರು | ಅಂದವಾದಂಥವರ ಖ್ಯಾತಿಯು | ಒಂದೇ ಗುಣವನು ಹೋಲರೆಂದೂ || ೮ || ಬಡತನವನು ಬೋಧಿಸೀ, ಅಷ್ಟೈಶ್ವರ್ಯ | ಕಡಗರವನು ಬೆಳೆಸೀ | ವಡವೆ ವೈದ್ಯರ ನಿರಿಸೀ, ಈ ದೇಶದ | ಕಡು ರೋಗವ ಛೇದಿಸೀ || ಪೊಡವಿಯೊಳ್ ನಿಡಗುಂದ ವಾಸನು | ವಡೆಯ ಶ್ರೀಗುರುಶಿದ್ಧ ರಾಮನ | ಅಡಿಗೆ ನಮಿಸೀ ಸ್ತುತ್ಯ ಆಳಿಕೆ | ಬಿಡದೆ ನಡೆಯುವದೆಂದು ಪೊಗಳುವೆ || ೯ ||

ವಿನಯಾನ್ವಿತ || ಕಂದ || ಇದರೊಳ್ ಬರೆಸಿದ ದೋಷವ | ಮುದದಿಂದಲಿ ಕ್ಷಮಿಸಿ ಜನ ತಿದ್ದುವಿರೆಂದೂ || ಸದಮಲ

ಸುಜ್ಞಾನೋದಯ ಪದಕಮಲಕ್ಕೆರಗಿ ಬೇಡಿಕೊಳ್ಳುವೆ ನಾನು ॥ ೧ ॥

ನಾನು ಈ ಪದ್ಯವನ್ನು ಸ್ವಂತ ಪ್ರಕಾಶಾರ್ಥವಾಗಿ ರಚಿಸಿದವನಲ್ಲ; ಸ್ವರಾಜ್ಯನಿಷ್ಠೆಯು ಸದ್ಭಕ್ತಿಯು ಯಾವತ್ತೂ ಪ್ರಜೆಗಳಲ್ಲಿ ನೆಲೆಗೊಂಡು, ಈ ನಮ್ಮ ಮಹಾರಾಣಿಯವರೇ ಚಿರಕಾಲ ಆಳಲೆಂದು, ಎಲ್ಲರೂ ದೇವರನ್ನು ಕುರಿತು ಪ್ರಾರ್ಥಿಸಬೇಕೆಂಬದಿಷ್ಟೇ ಉದ್ದೇಶದಿಂದ ರಚಿಸಿರುತ್ತೇನೆ.

ಅಯ್ಯಾ ವಿದ್ವಜ್ಜನರೇ! ಅಲ್ಪಜ್ಞನಾಗಿಯೂ, ಅನನುಭವಿಜ್ಞನಾಗಿಯೂ ಇರುವ, ನಾನು ಮಾಡಿದ ಈ ಪದ್ಯದಲ್ಲಿ ಅನೇಕ ದೋಷಗಳು ಇರಬಹುದು; ಆ ದೋಷಗಳನ್ನೆಲ್ಲ ತಾವು ಕ್ಷಮಿಸಿ ಗುಣವನ್ನಷ್ಟೇ ಕೈಲಿಗೆ ತರುವ ಸ್ವಭಾವವುಳ್ಳವರಾದ್ದರಿಂದ ನಾನು ನಿರ್ಭಯನಾಗಿದ್ದೇನೆ. ಇನ್ನು ನನಗಿಂತ ಅಲ್ಪಜ್ಞರು ಮಾತ್ಸರ್ಯದಿಂದ ದೂಷಿಸಿದರೆ ಅವರಿಗೆ ನಾನು ಹೆದರುವದಿಲ್ಲ. ಆದ್ದರಿಂದ ನನ್ನಲ್ಲಿ ದಯೆ ಇಟ್ಟು ಸರ್ವರೂ ಸಂತೋಷದೊಂದಿಗೆ ಇದನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಎಡಿಟರ ಪ್ರಭುಗಳೇ ಪತ್ರವಿಸ್ತಾರಕ್ಕೂ, ಹಸ್ತದೋಷಕ್ಕೂ ಕ್ಷಮಾ ಮಾಡುವಿರೆಂದು ಬಯಸುತ್ತೇನೆ.

ತಾರೀಖು ೨೪।೩।೮೯ ಇ.
ಶಾಲಾ ಒಬಲೇಶ್ವರ
ತಾ. ವಿಜಾಪೂರ

ಶಿದರಾಮಗೌಡಾ ಶಿದ್ದನಗೌಡಾ
ನಿಡಗುಂದಿ ಅ ಮಾಸ್ತರ

* * *

ಕನ್ನಡಶಾಲಾಪತ್ರ

CANARESE SCHOOL PAPER.

ಪುಸ್ತಕ ೨೪) (ಸಂಚಿಕೆ ೪

(ಏಪ್ರೀಲ ೧೮೮೯)

ಅನುಕ್ರಮಣಿಕೆಯು.

ಪುಟ.

ವರ್ಗೀಕರಣವು..... ೭೩
ವಿದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು ೮೦
ಉದ್ಯೋಗ.... ೮೬
ನೋಟೀಸು.... ೮೯
ಯುರೋಪದ ಮಧ್ಯಕಾಲದ ಇತಿಹಾಸವು ೯೦
ಪತ್ರವ್ಯವಹಾರವು.... ೯೩

CONTENTS

Classification.... 73
Education and Improvement. 80
Industry 86
Notices.... 89
History of the Middle Ages.... 90
Correspondence 93

DHARWAR.

Printed at the Dnana Wardhaka Press

ಶಾಲಾಪತ್ರಕವು

ಪುಸ್ತಕ ೨೪) (ಸಂಚಿಕೆ ೪

(ಎಪ್ರೀಲ ೧೮೮೯)

Classification.

ವರ್ಗೀಕರಣವು.

(ಮುಂದಕ್ಕೆ ಸಾಗಿದ್ದು)

ಮೂವತ್ತು ಹುಡುಗರ ವರ್ಗದಲ್ಲಿ ತಕ್ಕ ವ್ಯವಸ್ಥೆಯನ್ನು ಕಾಯುಕೊಂಡು ಚನ್ನಾಗಿ ಕಲಿಸಲಿಕ್ಕೆ ಬಲ್ಲಂಥ ಶಿಕ್ಷಕನು ನಮಗೆ ಗೊತ್ತಿದ್ದಂಥ ಸಾಧಾರಣ ತರದ ಶಿಕ್ಷಕರಿಗಿಂತ ಮೇಲಾದವನೆನ್ನಲಿಕ್ಕೆ ಅಡ್ಡಿ ಇಲ್ಲ. ೪೫ ಹುಡುಗರ ವರ್ಗವು ಯೆಂಥಾ ಶಿಕ್ಷಕನನ್ನಾದರೂ ಗತಿಗೆಡಿಸ ಬಹುದು. ಒಂದು ವರ್ಗದಲ್ಲಿ ೩೦ ಹುಡುಗರೆಂದರೆ ಪರಮಾವಧಿಯಾಯಿತೆಂದು ನಾವು ಯೆಣಿಸುತ್ತೇವೆ; ಇಂಥಾ ವರ್ಗದ ಸರಾಸರೀ ಹಾಜರಿಯು ೨೫ಕ್ಕಿಂತ, ಇಲ್ಲವೆ ಮೇಲಾದ ವ್ಯವಸ್ಥೆ ಇದ್ದಲ್ಲಿ ೨೮ಕ್ಕಿಂತ ಹೆಚ್ಚು ಇರಲಾರದು.

ಅನುಭವವುಳ್ಳಂಥ ಮಾಸ್ತರ ಜನರಲ್ಲಿ ಶ್ರೇಷ್ಠನಾದ ಥ್ರಿಂಗ ದೊರೆಯು ಶಾಲೆಯ ಕೆಲಸದ ಸಂಬಂಧದಲ್ಲಿ ಸೊಗಸಾದ ಲೇಖಗಳನ್ನು ಬರೆದದ್ದರಿಂದ ಅವನ ಶಬ್ದಗಳನ್ನು ಹಿಂದೆ ಬಹಳ ಕಡೆಯಲ್ಲಿ ಅವತರಿಸಿಕೊಂಡದ್ದೇವೆ. ಅವನು ವರ್ಗೀಕರಣದ ಸಂಬಂಧದಲ್ಲಿ ಈ ಪ್ರಕಾರ ಬರೆಯುತ್ತಾನೆ—

“ ಶಿಕ್ಷಕನು ಒಂದು ತಾಸಿನಲ್ಲಿ ಯೆಷ್ಟು ಹುಡುಗರನ್ನು ಕೆಲಸಕ್ಕೆ ಹಚ್ಚಿ, ಪ್ರಶ್ನೆ ಕೇಳಿ ಒಬ್ಬೊಬ್ಬನನ್ನು ಕುರಿತು

ಬೇರೆ ಬೇರೆಯವಾಗಿ ವಿಚಾರಿಸಬಹುದೋ, ಅಷ್ಟು ಜನ ಹುಡುಗರಿಗೆ ಅವನು ಒಂದು ತಾಸಿನಲ್ಲಿ ಕಲಿಸಬಹುದು. ಆದರೆ ವ್ಯಾಖ್ಯಾನ ರೂಪದಿಂದ ಕಲಿಸುವವನು ತನ್ನ ಮಾತು ಕೇಳಬರುವಷ್ಟು ಅಂತರದೊಳಗೆ ಕೂತವರಿಗೆಲ್ಲ ತಾನು ಪ್ರತಿಪಾದಿಸುವ ವಿಷಯವನ್ನು ತಿಳಿಸುತ್ತಾನೆ. ವ್ಯಾಖ್ಯಾನ ಕೇಳುವವರು ಹೆಚ್ಚು ಹೆಚ್ಚು ನೆರೆದಂತೆ ವ್ಯಾಖ್ಯಾನಕಾರನಿಗೆ ಹೆಚ್ಚು ಉಲ್ಲಾಸ ಬರುತ್ತದೆ. ಒಬ್ಬನಿಗೆ ವ್ಯಾಖ್ಯಾನ ಕೊಡುವದು ಅಸಂಬದ್ಧವು. ಆದರೆ ಒಬ್ಬನಿಗೆ ಕಲಿಸುವ ಶಿಕ್ಷಕನ ಪ್ರಯತ್ನದಿಂದ ಪೂರ್ಣತ್ವವೇ ಬರಬಹುದು. ವ್ಯಾಖ್ಯಾನದಲ್ಲಿ ಸಭಾಸದರ ಸಂಖ್ಯವು ಬೆಳೆಯುವದರಿಂದ ವ್ಯಾಖ್ಯಾ ಕಾರನ ಮಹತ್ವಾಕಾಂಕ್ಷೆಯು ಬೆಳೆದು ಅವನ ವ್ಯಾಖ್ಯಾನ ವಿಷಯವು ಕಳೆಯೇರುವದು. ಆದರೆ ದೊಡ್ಡ ವರ್ಗಕ್ಕೆ ಒಬ್ಬನೇ ಶಿಕ್ಷಕನು ಕಲಿಸಬೇಕಾಗಿದ್ದಲ್ಲಿ ಅವನು ಮಿತಿ ಮೀರಿ ಶ್ರಮಪಟ್ಟಾಗ್ಯೂ ತಕ್ಕ ಫಲವಾಗುವದಿಲ್ಲ.

ಉದಾಹರಣರೂಪವಾಗಿ ಹೇಳಿದರೆ ಈ ತಾಳೆಯು ಹೆಚ್ಚು ಸ್ಪಷ್ಟವಾಗಿ ತಿಳಿಯುವದು, ಈ ಎರಡ ಪ್ರಕಾರಗಳಲ್ಲಿರುವ ಭೇದವು ವ್ಯಕ್ತವಾಗಿ ಕಾಣಿಸುದು. ವ್ಯಾಖ್ಯಾನಕಾರನು ಒಂದು ತಾಸಿನಲ್ಲಿ ಇನ್ನೂರ ಮುನ್ನೂರು, ಅಥವಾ ಬೇಕಾದಷ್ಟು ಜನರಿಗೆ ವ್ಯಾಖ್ಯಾ ಕೊಡಬಹುದು. ಆ ಜನರು ಸುಮ್ಮನೆ ಕೂತು ವ್ಯಾಖ್ಯಾನ ಕೇಳುವರು; ಇಷ್ಟಕ್ಕಿಂತ ಹೆಚ್ಚೇನು ಮಾಡಲಾರರು. ಆದರೆ ಕ್ಷಕನು ಅಷ್ಟೇ ವೇಳೆಯಲ್ಲಿ ಪರಮಾವಧಿ ೩೫ ಜನ ವಿದ ರ್ಥಿಗಳಿಗೆ ಕಲಿಸುವನು. ವ್ಯಾಖ್ಯಾನಕ್ಕೆ ಹೋದವನು ಅ ನ್ನು ತಿಳಕೊಳ್ಳುವಷ್ಟು ಯೋಗ್ಯತೆಯವನಿರದಿದ್ದರೆ, ಯೋಗ

ಕಲಿಯದೆ ತಿರುಗಿ ಬರುವನು. ಇದೇ ಪ್ರಕಾರ ಶಾಲೆಯ ರಜಿಸ್ಟರಿನಲ್ಲಿ ಸಂಖ್ಯವನ್ನು ಬೆಳಿಸಲಿಕ್ಕೆ ವರ್ಷವರ್ಷಕ್ಕೆ ಕಳಿಸಲ್ಪಡುವ ಹುಡುಗರಲ್ಲಿ ನೂರಕ್ಕೆ ಹತ್ತರಂತೆ ಹುಡುಗರು ಒಳಿತಾಗಿ ಕಲಿತು ಬುದ್ಧಿವಂತರಾಗುವರು; ನೂರರಲ್ಲಿ ೨೦ ಜನರು ಅರ್ಧಾಪೂರ್ಧಾ ಕಲಿಯುವರು; ಉಳಿದ ೭೦ ಜನರು ಯೇನೂ ಕಲಿಯದೆ ಅಜ್ಞಾನಿಗಳೇ ಉಳಿಯುವರು. ಜ್ಞಾನಾಮೃತದ ಭೋಜನಕ್ಕೆ ಹೋಗಿ ಉಪವಾಸ ತಿರುಗಿ ಬಂದಂಥ ಈ ೭೦ ಜನರು ಆ ಅಮೃತವನ್ನು ಆ ಸ್ವಾದಿಸಿದಂಥ ೩೦ ಜನರಿಗಾಗಿ ತಮ್ಮ ಹಣ ವೆಚ್ಚ ಮಾಡಿದ ಹಾಗಾಯಿತು. ನೂರು ಜನರ ಹಣದಿಂದ ಮೂವತ್ತು ಜನರಿಗೆ ಭೋಜನ ದೊರಿವದ್ದರಿಂದ ಅವರ ವೆಚ್ಚವು ಕಡಿಮೆಯಾಗುತ್ತದೆ. ಕೆಲವು ದಿವಸಗಳ ನಂತರ ಯೇನೂ ಕಲಿಯದಂಥ ಆ ೭೦ ಜನ ವಿದ್ಯಾರ್ಥಿಗಳು ಬಹುತರ ಯಾವ ಕೆಲಸಕ್ಕೂ ಬಾರದವರಾಗಿ ಶಾಲೆಯಿಂದ ಹೊರಬೀಳುವರು.”

ಮದ್ರಾಸ ಇಲಾಖೆಯಲ್ಲಿ ನಾನಾ ಪ್ರಕಾರದ ಸಾರ್ವಜನಿಕ ಪರೀಕ್ಷೆಗಳೂ, ಅಂಥಾ ಪರೀಕ್ಷೆಗಳನ್ನು ಹೋಲುವಂಥ ಬೇರೆ ಪರೀಕ್ಷೆಗಳೂ ಆಗಾಗ್ಗೆ ಆಗುತ್ತಿರುವದರಿಂದ ವರ್ಗೀಕರಣದಲ್ಲಿ ಮಾಸ್ತರ ಜನರಿಗೆ ಬಹು ಕಡಿಮೆ ಸ್ವಾತಂತ್ರ್ಯ ಉಳಿಯುತ್ತದೆ. ಪ್ರಥಮಾರಂಭದ ಅಭ್ಯಾಸದ ಯೆಲ್ಲಕ್ಕೂ ಕೆಳಗಿನ ವರ್ಗದಿಂದ ಮೇಲಕ್ಕೆ ಯೇರಬೇಕಾದರೆ, ಪ್ರತಿ ಒಬ್ಬ ಹುಡುಗನು ಕೆಲವೊಂದು ಪರೀಕ್ಷೆಯನ್ನು ಕೊಡಲಿಕ್ಕೇ ಬೇಕಾಗುತ್ತದೆ. ಆ ಸರಕಾರದವರ “ಚಾಲೂ ಹುಕುಮುಗಳೆಂ”ಬ ಲೇಖಗಳಿಂದ ತಕ್ಕೊಂಡ ಈ ಕೆಳಗಿನ ಅವತರಣವು ಈ ಸಂಬಂಧದ ಕಟ್ಟಳೆಗಳನ್ನು ವಿವರಿಸುತ್ತದೆ—

“ಸಾರ್ವಜನಿಕ ವಿದ್ಯಾಶಾಲೆಗಳೂ ಆರ್ಟ್ಸ್ ಕಾಲೇಜಗಳೆಂಬ ವಿದ್ಯಾಲಯಗಳೂ, ಅವುಗಳಲ್ಲಿಯ ವರ್ಗಗಳ ಅನುರೋಧದಿಂದ, ಒಂದರ ಮೇಲೊಂದು ಇರುತ್ತವೆಂದು ಯೆಣಿಸಲ್ಪಡುತ್ತವೆ. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾದವರೇ ಆರ್ಟ್ಸ್ ಕಾಲೇಜಗಳಲ್ಲಿ ಪ್ರವೇಶಿಸತಕ್ಕವರು. ಮಿಡಲ್ ಸ್ಕೂಲ ಪರೀಕ್ಷೆಯನ್ನು ಕೊಟ್ಟು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಅಭ್ಯಾಸ ಮಾಡುವವರೇ, ಅಥವಾ ಹೆಣ್ಣು ಮಕ್ಕಳ ಪ್ರಸಕ್ತಿಯಲ್ಲಿ, ಹೆಂಗಸರ ಮೇಲ್ತರದ ಪರೀಕ್ಷೆಯ ಅಭ್ಯಾಸ ಮಾಡುವವರೇ ಹಾಯಸ್ಕೂಲುಗಳಲ್ಲಿ ಪ್ರವೇಶಿಸತಕ್ಕವರು. ವಿದ್ಯಾರಂಭದ ಮೇಲ್ತರದ ಪರೀಕ್ಷೆಯನ್ನು ಕೊಟ್ಟು, ಮಧ್ಯಮ ಪ್ರತಿಯ ಶಾಲೆಗಳ ಅಭ್ಯಾಸ ಮಾಡುವವರೇ ಮಧ್ಯಮ ಪ್ರತಿಯ ಶಾಲೆಗಳಲ್ಲಿ ಪ್ರವೇಶಿಸತಕ್ಕವರು. ವಿದ್ಯಾರಂಭದ ಕೆಳಗಿನ ಪರೀಕ್ಷೆಯನ್ನು ಕೊಟ್ಟು ಮೇಲ್ತರದ ವಿದ್ಯಾರಂಭದ ಅಭ್ಯಾಸವನ್ನು ಮಾಡುವವರೇ ಆ ಮೇಲ್ತರದ ವಿದ್ಯಾರಂಭದ ಶಾಲೆಗಳಲ್ಲಿ ಪ್ರವೇಶಿಸತಕ್ಕವರು. ವಿದ್ಯಾರಂಭದ ಕೆಳಗಿನ ಪ್ರತಿಯ ಪರೀಕ್ಷೆಯನ್ನು ಕೊಡತಕ್ಕವರೇ ಆ ಕೆಳಗಿನ ಪ್ರತಿಯ ಶಾಲೆಗಳಲ್ಲಿ ಪ್ರವೇಶಿಸತಕ್ಕವರು.

* * *

ವೇಳಾಪತ್ರಕಗಳು.

ವೇಳಾಪತ್ರಕಗಳನ್ನು ರಚಿಸುವದು ಬಹು ಗೌರವದ ಕಾರ್ಯವು. ಕೆಲವು ಶಾಲೆಗಳ ಮಾಸ್ತರರು ಯೇನು ನಿಯಮವಿಲ್ಲದೆ ತಮಗೆ ಬೇಕಾದಹಾಗೆ ವೇಳಾಪತ್ರಕಗಳನ್ನು ಬರಿಯುವರು. ವೇಳಾಪತ್ರಕಗಳಿಗೆ ಸಂಬಂಧಿಸಿದಂಥ ಅತಿ ಸಾ

ಧಾರಣವಾದ ತತ್ವಗಳು ಕೆಲವಿರುತ್ತವೆ; ಅವುಗಳನ್ನು ಸ್ವಲ್ಪ ಶಬ್ದಗಳಲ್ಲಿ ಹೇಳಬಹುದು, ಮತ್ತೂ ಅವುಗಳ ಸಹಾಯದಿಂದ ವರ್ಗಗಳ ಅಭ್ಯಾಸವನ್ನು ಅತಿ ಸುಲಭವಾಗಿಯೂ ಸಫಲವಾಗಿಯೂ ನಡಿಸಬಹುದು. ಆ ತತ್ವಗಳು ಯಾವವೆಂದರೆ—

೧ ಶಿಕ್ಷಕನು ಇಲ್ಲವೆ ವಿದ್ಯಾರ್ಥಿಗಳು ಬೇಸರುವವರೆಗೆ ಒಂದೇ ಪಾಠವನ್ನು ನಡಿಸಬಾರದು.

೨ ವಿದ್ಯಾರ್ಥಿಗಳ ವಯಸ್ಸು ಕಡಿಮೆ ಇದ್ದಂತೆ ಪಾಠಗಳನ್ನು ಬೇಗ ಬೇಗ ಬದಲು ಮಾಡುವದು ಹೆಚ್ಚು ಅವಶ್ಯವಿರುತ್ತದೆ.

೩ ವಿಶೇಷವಾಗಿ ಬೆಳಗಿನಲ್ಲಿ ಶಾಲೆಯು ಆರಂಭವಾಗುವಾಗ ಕಲಿಸತಕ್ಕ ಪಾಠಗಳು ಹೆಚ್ಚು ಗೌರವವುಳ್ಳಂಥವೂ ಹೆಚ್ಚು ವಿಚಾರದಿಂದ ತಿಳಕೊಳ್ಳತಕ್ಕಂಥವೂ ಇರಬೇಕು.

೪ ಎಲ್ಲ ವರ್ಗಗಳಲ್ಲಿ ಸುಲಭ ವಿಷಯದ ಪಾಠವಾದ ಕೂಡಲೆ ಕಠಿಣ ವಿಷಯದ ಪಾಠವು ಬರಲಿಕ್ಕೆ ಬೇಕು.

೫ ಒಂದು ವರ್ಗದಲ್ಲಿ ಗಡಿಬಿಡಿಯ ಪಾಠ ನಡಿದರಲಾಗಿ ಅದರ ಸಮೀಪಕ್ಕಿರುವ ವರ್ಗದಲ್ಲಿ ಬಹಳ ಮಾತಾಡದೆ ಕೆಲಸ ನಡಿಯಬಹುದಾದಂಥ ಪಾಠವನ್ನು ಕಲಿಸಬೇಕು. ಗಡಿಬಿಡಿಯ ಪಾಠ ಕಲಿಯುವ ಯೆರಡು ವರ್ಗಗಳ ನಡುವಿನ ವರ್ಗದಲ್ಲಿ ಮಾತಾಡದೆ ಕೆಲಸ ಸಾಗುವಂಥ ಪಾಠವನ್ನು ಆ ಕಾಲಕ್ಕೆ ಕಲಿಸಬೇಕು. ಒಂದೇ ದೊಡ್ಡ ಕೋಣೆಯಲ್ಲಿ ಹಲವು ವರ್ಗಗಳು ಕೂಡ್ರುತ್ತಿದ್ದಲ್ಲಿ ಈ ವ್ಯವಸ್ಥೆಯು ಅತ್ಯವಶ್ಯವಾಗಿರುತ್ತದೆ

೬. ವರ್ಗಗಳ ಸ್ಥಳಗಳು ಮೇಲೆ ಮೇಲೆ ಬದಲಾಗುತ್ತಿರ

ಲಿಕ್ಕೆ ಬೇಕು; ಕೆಳಗಿನ ವರ್ಗಗಳಂತು ಬಹುತರ ಪ್ರತಿ ಒಂದು ಪಾಠ ಮುಗಿದ ಕೂಡಲೆ ಒಂದು ಸ್ಥಳ ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುತ್ತಿರಲಿಕ್ಕೆ ಬೇಕು.

೭ ಮುಖ್ಯ ಮಾಸ್ತರನು ನಿಕೃಷ್ಟ ಪಕ್ಷಕ್ಕೆ ವಾರದಲ್ಲಿ ಒಮ್ಮೆ ಪ್ರತಿ ಒಂದು ವರ್ಗವನ್ನು ತಕ್ಕೊಳ್ಳಲಿಕ್ಕೆ ಬೇಕು. ಇಂಥಾ ವ್ಯಾಳ್ಯಕ್ಕೆ ಇಂಥಾ ಶಿಕ್ಷಕನು ಇಂಥಾ ವರ್ಗಕ್ಕೆ ಕಲಿಸತಕ್ಕವನೆಂದು ವೇಳಾಪತ್ರಕದಲ್ಲಿ ಬರೆದಿರಲಿಕ್ಕೆ ಬೇಕು. (ಪ್ರತಿ ಒಂದು ವರ್ಗದಲ್ಲಿ ಈ ವಿವರವನ್ನು ತೋರಿಸುವಂಥ ಪತ್ರಕವನ್ನು ಬೇರೆಯಾಗಿ ಬರೆದು ಹಚ್ಚಿದರೆ ಗೊಂದಲವಾಗಲಿಕ್ಕಿಲ್ಲ.)

ಪಾಠಗಳ ಕಾಲಾವಧಿಯನ್ನು ಕುರಿತು ಮೊದಲು ವಿಚಾರಿಸುವ—ಯಾವ ಪಾಠವೂ ಯಾವ ವರ್ಗದಲ್ಲಿಯೂ ವಾಡಿಕೆಯಾಗಿ ಒಂದು ತಾಸಿಗಿಂತ ಹೆಚ್ಚು ವೇಳೆ ನಡಿಯಬಾರದು. ಗಣಿತದ ಉದಾಹರಣಗಳನ್ನು ಮಾಡುವಾಗ ಮಾತ್ರ ಅವಶ್ಯವಿದ್ದಲ್ಲಿ ಎರಡು ತಾಸುಗಳವರೆಗೆ ಆ ಕೆಲಸವು ನಡಿಯಬಹುದು. ಆದರೆ ವಿದ್ಯಾರ್ಥಿಗಳು ಪೂರ್ಣವಾಗಿ ಲಕ್ಷ್ಯವಿಟ್ಟು ಕೇಳಬೇಕಾಗಿದ್ದಂಥ ಪ್ರಶ್ನಗಳ ರೂಪದಿಂದ ನಡಿಯುವ ಪಾಠಗಳು ಒಂದು ತಾಸಿಗಿಂತ ಹೆಚ್ಚು ವೇಳೆ ಸರ್ವಥಾ ನಡಿಯಬಾರದು. ಮೇಲಾದ ಶಿಕ್ಷಣದಿಂದ ಮನಸಿಗೆ ತೀವ್ರವಾದ ಚಲನೆಯುಂಟಾಗುತ್ತದೆ; ಆದದರಿಂದ ಆ ಚಲನೆಗೆ ವ್ಯತ್ಯಾಸ ಪಡಿಸುವಂಥ ಸಂಗತಿಗಳನ್ನು ಎಚ್ಚರದಿಂದ ಪರಿಹರಿಸಲಿಕ್ಕೆ ಬೇಕು. ಪಾಠವನ್ನು ಬಹಳ ಹೊತ್ತು ನಡಿಸುವದರಿಂದ ವಿದ್ಯಾರ್ಥಿಗಳ ಮನಸಿನ ತೀವ್ರತೆಗೂ ಶಿಕ್ಷಕನ ಮನಸಿನ ತೀವ್ರತೆಗೂ ವ್ಯತ್ಯಾಸ ಬಂದಷ್ಟು ಬೇರೆ ಯಾತರಿಂದಲೂ ಬರುವದಿಲ್ಲ. ನಮ್ಮ

ಸ್ವಂತ ಅನುಭವದಿಂದ ನಾವು ಗೊತ್ತು ಮಾಡಿದ್ದೇನೆಂದರೆ,
ಹುತರ ಯಾವತ್ತು ವಿಷಯಗಳು ಮುಕ್ಕಾಲು ತಾಸಿಗಿಂತ
ಚ್ಚು ವೇಳೆ ನಡಿಯಬಾರದು; ಭಾಷೆಯ ಪಾಠಗಳನ್ನು ಮಾತ್ರ
ಒಂದುವರೆ ತಾಸು ನಡಿಸಿದರೆ ನಲ್ಲುವದು. ಶಿಕ್ಷಣದಲ್ಲಿ
ನರಾದ ಫಿಚ್ ಧೊರೆಯವರೂ ಮುಕ್ಕಾಲು ತಾಸಿಗಿಂತ ಹೆಚ್ಚು
ವೇಳೆಯನ್ನು ಒಂದು ಪಾಠಕ್ಕೆ ಹೇಳುವದಿಲ್ಲ. ತೀರ ಸಣ್ಣ
ಹುಡುಗರ ಪಾಠಗಳು ಅರ್ಧತಾಸು ಮಾತ್ರ ನಡಿಯ ಬೇಕೆ
ದು ಅವನು ಹೇಳುತ್ತಾನೆ. ಬೆಳಗಿನ ವೇಳೆಯಲ್ಲಿಯೂ ಮ
ಧ್ಯಾಹ್ನದ ವೇಳೆಯಲ್ಲಿಯೂ ಮುಕ್ಕಾಲು ತಾಸಿನ ನಾಲ್ಕು
ರಿಯಾದ ಭಾಗಗಳಾಗುತ್ತವೆ. ಹೀಗೆ ವೇಳೆಯ ವಿಭಾಗ ಮಾ
ಡುವದರಿಂದ ಮೇಲಿನ ವರ್ಗಗಳಿಗೆ ಪಾಠಗಳು ಬಹಳ ಸಣ್ಣ
ವಾಗುವದಿಲ್ಲ, ಕೆಳಗಿನ ವರ್ಗಗಳಿಗೆ ಬಹಳ ದೊಡ್ಡವಾಗು
ವದಿಲ್ಲ, ಮತ್ತು ಯೆಲ್ಲ ವರ್ಗಗಳ ಪಾಠಗಳು ಒಮ್ಮೆಲೆ
ವಲಾಗುತ್ತವೆ.

ಚಿಕ್ಕ ಪ್ರಾಯದ ವಿದ್ಯಾರ್ಥಿಗಳ ಪಾಠಗಳು ಬೇಗ ಬೇ
ಬದಲಾಗುತ್ತಿರಲಿಕ್ಕೆ ಬೇಕೆಂದು ಮೇಲೆ ಹೇಳಿದ್ದೇವೆ; ಮೇಲಿ
ನ ವರ್ಗಗಳ ಅಭ್ಯಾಸಕ್ಕೆ ವಿಘ್ನ ಬರದಿದ್ದರೆ, ಅರ್ಧರ್ಧ ತಾ
ಸಿಗೆ ಕೆಳಗಿನ ವರ್ಗಗಳ ಪಾಠಗಳನ್ನು ಬದಲು ಮಾಡುವದ
ಲೇಸು. ಆದರೂ ಇಡೀ ಶಾಲೆಯ ಹಿತವನ್ನು ಅನುಲಕ್ಷಿಸಿ ಮು
ಕ್ಕಾಲು ತಾಸಿನ ಭಾಗಗಳನ್ನು ಕೆಳಗಿನ ವರ್ಗಗಳಿಗೂ ಇಡ
ಲಾಗಿ ಬಹಳ ಕೆಟ್ಟ ಪರಿಣಾಮವಾದೀತೆಂಬ ಭಯವಿಲ್ಲ. ಆ
ದಾಗ್ಯೂ ವಿಶೇಷವಾಗಿ ವ್ಯಾಕರಣ, ಭೂಗೋಲ, ಲೇಖನ,
ದ್ಧಬರಹ, ಈ ವಿಷಯಗಳನ್ನು ಕಲಿಸುವಾಗ ಕೆಳಗಿನ ವ
ರ್ಗಗಳಿಗೆ ಅರ್ಧತಾಸಿನ ಪಾಠವೇ ಸರಿಯಾದದ್ದೆಂದು ನಾವು

ಮಾತ್ರವ್ಮ ಹೇಳುತ್ತೇವೆ. ಪ್ರವೀಣನಲ್ಲದಂಥ ಶಿಕ್ಷಕನು ಕೆಳಗಿನದೊಂದು ವರ್ಗಕ್ಕೆ ವ್ಯಾಕರಣವನ್ನು ಇಲ್ಲವೆ ಭೂಗೋಲವನ್ನು ಇವೇ ಒಂದು ತಾಸು ಕಲಿಸುವದರಿಂದ ಆ ಹುಡುಗರಿಗೆ ಆಗುವ ಭಯಂಕರವಾದ ಸ್ಥಿತಿಯನ್ನು ನಾವು ನೋಡಿದ್ದೇವೆ. ಪ್ರವೀಣನಾದ ಶಿಕ್ಷಕನು ಸಹ ಈ ವಿಷಯಗಳ ಪಾಠವನ್ನು ಇಷ್ಟು ಹೊತ್ತು ಹಿತಕರವಾಗುವಂತೆ ನಡಿಸಲಾರನು. ಆದರೆ ಹೆಚ್ಚು ಕಲಿತಂಥ ವರ್ಗಕ್ಕೆ ಭಾಷೆಯ ಪಾಠವನ್ನು ತಕ್ಕಂಥ ವೈಚಿತ್ರ್ಯದಿಂದ ಕಲಿಸ ಬಲ್ಲಂಥವನು ಅದನ್ನು ಒಂದೂವರೆ ತಾಸಿನವರೆಗೆ ಕಲಿಸ ಬಹುದು.

—೦—

Education and Improvement.

ವಿದ್ಯಾಸುಧಾರಣೆಯ ಸಂಬಂಧವಾದ ವೃತ್ತಾಂತಗಳು.

ಮಿ. ಡಾಯರೆಕ್ಟರ ಧೊರೆಗಳು ಮೂರು ತಿಂಗಳಿನ ಹಕ್ಕಿನ ರಜಿ ತಕ್ಕೊಂಡು ಈ ತಿಂಗಳಲ್ಲಿ ವಿಲಾಯತಿಗೆ ಹೋದರು. ಅವರ ಕೆಲಸಕ್ಕೆ ಪುಣೆಯ ಸಾಯನ್ಸ ಕಾಲೇಜದ ಪ್ರಿನ್ಸಿಪಾಲರಾದ ಮಿ. ಕುರ್ ಧೊರೆಗಳನ್ನು ನೇಮಿಸಿದ್ದಾರೆ.

—೦—

ಧಾರವಾಡ ಹಾಯಸ್ಕೂಲ ಹೆಡ್ ಮಾಸ್ತರರಾದ ರಾ. ರಾ. ಮಹಾದೇವ ವಿಷ್ಣು ಕಾಣೆ ಇವರನ್ನು ಪುಣೆಯ ಹಾಯಸ್ಕೂಲಿನ ಆಕ್ಟಿಂಗ ಹೆಡ್‌ಮಾಸ್ತರರಾಗಿ ನೇಮಿಸಿದ್ದರಿಂದ ಅವರ ಸ್ಥಳಕ್ಕೆ ಕನ್ನಡ ತ್ರಾನ್ಸಲೇಟರರಾದ ರಾ. ರಾ. ರಾಮಜೀ ಬಾಳಾಜೀ ಕರಂದೀಕರರನ್ನೂ, ಅವರ ಸ್ಥಳಕ್ಕೆ ಕಾನಡಾ ಜಿಲ್ಲೆ

ಯ ಡೆಪ್ಯುಟೀ ಇನಸ್ಪೆಕ್ಟರರಾದ ರಾ. ಸಾ. ರಾಮಚಂದ್ರ ಹನುಮಂತ ದೇಶಪಾಂಡೆ ಇವರನ್ನೂ, ಅವರಸ್ಥಳಕ್ಕೆ ಬೆಳಗಾವಿಯ ಅಸಿಸ್ಟಾಂಟ ಡೆಪ್ಯುಟೀ ಇನಸ್ಪೆಕ್ಟರರಾದ ರಾ. ರಾ. ಬಾಬಾಚಾರ್ಯ ಕೆರೂರ ಇವರನ್ನೂ ನೇಮಿಸಿದ್ದು ಸರಕಾರ ಗ್ಯಾಝೆಟಿನಲ್ಲಿ ಪ್ರಸಿದ್ಧವಾಗಿರುತ್ತದೆ. ಬಾಬಾಚಾರ್ಯರ ಸ್ಥಳಕ್ಕೆ ನೇಮಣೂಕು ಇನ್ನೂ ಆಗತಕ್ಕದ್ದಿರುತ್ತದೆ.

—— ೦೦೦ ——

ರಾವಸಾ. ಪಟವರ್ಧನ ಸಾಹೇಬರು ಧಾರವಾಡಕ್ಕೆ ನಿನ್ನೆ ಬಂದರು. ರಾವಸಾಹೇಬರವರು ವರಾಡ ಪ್ರಾಂತದ ಡಾಯರೆಕ್ಟರರಾಗತಕ್ಕವರಿದ್ದಾರೆಂದು ಹಾರ ಸುದ್ದಿಯುಂಟು.

—— ೦೦೦ ——

ರಾವಸಾ. ರೊದ್ದ ಶ್ರೀನಿವಾಸರಾಯರಿಗೆ ವಾತವಿಕಾರದಿಂದ ಮಧ್ಯದಲ್ಲಿ ಸ್ವಲ್ಪ ಅಸಮಾಧಾನವಾಗಿತ್ತು; ಈಗ ಆರೋಗ್ಯವಾಗಿದೆ.

—— ೦೦೦ ——

ಪಂಜಾಬ ಯುನಿವರ್ಸಿಟಿಯು ಸ್ಥಾಪನೆಯಾಗಿ ನಾಲ್ಕೈವು ವರ್ಷವಾಯಿತು. ಆದರೆ ಇದುವರೆಗೆ ಶೀಕ ಕುಲದ ಜನರಲ್ಲಿ ಇಬ್ಬರಿಗಿಂತ ಹೆಚ್ಚು ಜನರು ಬೀ. ಏ. ಪದವಿಯನ್ನು ಪಡೆದಿದ್ದಿಲ್ಲ. ಈ ವರ್ಷ ಮಾತ್ರ ಮೂವರು ಈ ಪದವಿಯನ್ನು ಪಡೆದರು. ಶೀಕ ಜನರು ಉಬ್ಬಾಳುತನದಲ್ಲಿ ಹೆಸರಾದವರಾದಾಗ್ಯೂ ಅಕ್ಷರ ಶತ್ರುಗಳೆನಿಸಿಕೊಳ್ಳುತ್ತಿದ್ದರು. ಅವರಲ್ಲಿ ವಿದ್ಯಾಪ್ರಸಾರವಾಗುತ್ತ ನಡೆದದ್ದು ನೋಡಿ ಯಾರಿಗೆ ಸಂತೋಷವಾಗಲಿಕ್ಕಿಲ್ಲ?

—— ೦೦೦ ——

ಪುಣೆಯಲ್ಲಿ ಮಧುಕರಿಯನ್ನು ಬೇಡಿಕೊಂಡು ವಿದ್ಯಾಭ್ಯಾಸ ಮಾಡುವ ಹುಡುಗರಿಗೆ ಈಗ ಎರಡು ವರ್ಷಗಳಿಂದ ಬೇಸಿಗೆಯಲ್ಲಿ ಅಲ್ಲಿಯ ವಿದ್ಯಾಭಿಮಾನಿಗಳಾದ ಪ್ರಮುಖ ನಿವಾಸಿಗಳು ತಮ್ಮ ಮನೆಯಲ್ಲಿ ಅವರನ್ನು ಊಟಕ್ಕೆ ಕರೆದು ಇಲ್ಲವೆ ಹಣಕೊಟ್ಟು ಅವರ ಊಟದ ತರ್ತೂದು ಮಾಡಿ ಆಶ್ರಯ ಕೊಡುತ್ತಲಿದ್ದಾರೆ. ಪುಣ್ಯಪಟ್ಟಣದ ನಿವಾಸಿಗಳು ನಿಜವಾಗಿ ಪುಣ್ಯಪಾತ್ರರೇ ಅನ್ನಲಿಕ್ಕೆ ಅಡ್ಡಿ ಇಲ್ಲ. ಎಲ್ಲ ಪ್ರಕಾರದ ಸುಧಾರಣೆಯಲ್ಲಿ ಅವರ ಹೆಜ್ಜೆ ಮುಂದೆ ಇರುತ್ತದೆ.

— o —

ಬಂಗಾಲದಲ್ಲಿ ಬಾಬೂ ಸುಗೋರದತ್ತನೆಂಬ ಧನವಂತನು ಮರಣಕಾಲಕ್ಕೆ ೩೦ ಲಕ್ಷ ರೂಪಾಯಿಗಳನ್ನು ಧರ್ಮಕೃತ್ಯಕ್ಕೆ ತೆಗೆದು ಇಟ್ಟಿದ್ದಾನೆ. ಈ ಹಣದಿಂದ ಫೀ ತಕ್ಕೊಳ್ಳದೆ ವಿದ್ಯಾಭ್ಯಾಸ ಮಾಡಿಸುವದೊಂದು ಕಾಲೇಜವನ್ನೂ ಒಂದು ದೊಡ್ಡ ಔಷಧಾಲಯವನ್ನೂ ಕಲಕತ್ತೆಯ ಹತ್ತರ ಕಮರಹಟ್ಟಿಯೆಂಬಲ್ಲಿ ತನ್ನ ತೋಟದೊಳಗೆ ಕಟ್ಟಿಸುವ ಬಗ್ಗೆ ಅವನು ಮೃತ್ಯುಲೇಖವನ್ನು ಬರೆದು ಇಟ್ಟಿದ್ದಾನೆ. ಇಂಥಾ ಸುಗೋರದತ್ತನು ನಮ್ಮ ಇಲಾಖೆಯಲ್ಲಿ ಯೆಂದಾದರೂ ಉದಯ ಹೊಂದುವನೋ?

— o —

ಅಮೇರಿಕದಲ್ಲಿ ೧೨ ವರ್ಷದವನೊಬ್ಬ ಹುಡುಗನು ಒಂದು ಮಾಸಿಕ ಪುಸ್ತಕವನ್ನು ಛಾಪಿಸುತ್ತಾನೆ. ಅದರೊಳಗೆ ತನ್ನ ವಯಸ್ಸಿನ ಹುಡುಗರಿಗೆ ತಕ್ಕಂಥ ವಿಷಯಗಳನ್ನೇ ಅವನು ಹಾಕುತ್ತಿರುವ ಕಾರಣ ಅವನ ಪುಸ್ತಕಕ್ಕೆ ಬಹಳವಾಗಿ ಆಶ್ರಯ ದೊರೆಯಿತೆಂದು ಹೇಳುತ್ತಾರೆ.

ಕೊಲ್ಲಾಪುರದ ಮಹಾರಾಜರು ಇದುವರೆಗೆ ರಾಜಕೋಟದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಆದರೆ ಇನ್ನು ಮುಂದೆ ಅವರನ್ನು ಧಾರವಾಡದಲ್ಲಿ ಇಡುವ ವಿಚಾರವನ್ನು ಸರಕಾರದವರು ಗೊತ್ತು ಮಾಡಿದ್ದಾರೆ. ಅವರ ಕಾರಕೂನನು ಧಾರವಾಡಕ್ಕೆ ಬಂದು ಮಹಾರಾಜರಿಗಾಗಿ ಬಿಡಾರವನ್ನು ಗೊತ್ತು ಮಾಡಿಟ್ಟು ಹೋದನು. ಸ್ವಲ್ಪ ದಿವಸಗಳಲ್ಲಿ ಮಹಾರಾಜರು ಇಲ್ಲಿಗೆ ಬರುವರೆಂದು ಕೇಳುತ್ತೇವೆ.

—oo—

ಪಾದ್ರೀಜನರು ಬ್ರಾಹ್ಮಣರ ಮೇಲೆ ಚಟಕು ಮುರಿದು ಹತ್ತಿದ್ದಾರೆ. ಈ ಜನರು ಆರಂಭದಲ್ಲಿ ಬೀದಿಗಳಲ್ಲಿ ನಿಂತು ಉಪದೇಶ ಮಾಡಿ ಹಿಂದೂ ಜನರನ್ನು ಖ್ರಿಸ್ತೀ ಧರ್ಮದೊಳಗೆ ಯೆಳಕೊಳ್ಳುವ ಪ್ರಯತ್ನವಷ್ಟೇ ನಡಿಸಿದ್ದರು. ಆದರೆ ಸುಮಾರು ೫೦ ವರ್ಷಗಳ ಪೂರ್ವದಲ್ಲಿ ರೆವರೆಂಡ ಡಫ್ ಯೆಂಬ ಮಿಶನರಿಯು ಆಲೋಚಿಸಿದ್ದೇನಂದರೆ, ಬೀದಿಗಳಲ್ಲಿ ಉಪದೇಶ ಕೇಳಿ ಕೀಳು ಜಾತಿಗಳ ಜನರು ಮಾತ್ರ ಅಲ್ಪ ಸ್ವಲ್ಪವಾಗಿ ಖ್ರಿಸ್ತನ ಭಕ್ತರಾಗುತ್ತಾರೆ. ಇದರಿಂದ ದೇಶದಲ್ಲಿ ಖ್ರಿಸ್ತೀ ಧರ್ಮದ ದೀಕ್ಷೆಯನ್ನು ತಕ್ಕೊಳ್ಳಲಿಕ್ಕೆ ಬಹಳ ತಡವಾಗುವದು. ಆದರೆ ಬ್ರಾಹ್ಮಣರನ್ನೇ ಮೊದಲು ಖ್ರಿಸ್ತನ ಕಾಲಿಗೆರಗಿಸಿದರೆ, ಉಳಿದ ಜನರೆಲ್ಲರೂ ಸಹಜವೇ ಅವರನ್ನು ಅನುಸರಿಸುವರು. ಹೀಗೆ ಆಲೋಚಿಸಿ, ಬ್ರಾಹ್ಮಣರ ಜಾತಿಯನ್ನು ಕೆಡಿಸುವ ಉದ್ದೇಶದಿಂದ ಅವನು ಶಾಲೆಗಳನ್ನು ಸ್ಥಾಪಿಸುವ ಯುಕ್ತಿಯನ್ನು ತೆಗೆದು ಒಂದು ಕಾಲೇಜವನ್ನು ಸಹ ಸ್ಥಾಪಿಸಿದನು. ಆದರೆ ಈ ಉಪಾಯದಿಂದ ಬ್ರಾಹ್ಮಣರು ಖ್ರಿಸ್ತಭಕ್ತರಾಗುವದಕ್ಕೆ ಬದಲಾಗಿ ಖ್ರಿಸ್ತನ

ವಿರೋಧಿಗಳಾದರು. ಯಾಕೆಂದರೆ ಅವರಿಗೆ ಕ್ರಿಸ್ತೀ ಧರ್ಮದ ತತ್ವಗಳೂ ಹಿಂದೂ ಜನರನ್ನು ತಮ್ಮೊಳಗೆ ಸೆಳೆದು ಕೊಳ್ಳುವದಕ್ಕೋಸ್ಕರ ಮಿಶನರಿಗಳು ಪ್ರಯೋಗಿಸುವ ನೀಚತನದ ಉಪಾಯಗಳೂ ಚನ್ನಾಗಿ ತಿಳಿದವು. ಈಗ ಮಿಶನರಿಗಳ ಶಾಲೆಗಳಲ್ಲಿ ಇತರ ಯಾವತ್ತು ಜಾತಿಗಳಿಗಿಂತ, ಕ್ರಿಸ್ತೀ ಧರ್ಮದವರಿಗಿಂತ ಸಹ, ಹತ್ತೆಂಟು ಪಾಲು ಹೆಚ್ಚು ಬಾಹ್ಮಣರ ಹುಡುಗರೇ ಕಲಿಯುತ್ತಿದ್ದಾಗ್ಯೂ ಇಡೀ ವರ್ಗದೊಳಗೆ ಒಬ್ಬನು ಸಹ ಜಾತಿ ಕೆಡುವದಿಲ್ಲೆಂದು ನೋಡಿ ಅವರು ಗೋಳಾಡುತ್ತಾರೆ. ಬ್ರಾಹ್ಮಣರ ರಾಜ್ಯವನ್ನು ಆಕ್ರಮಿಸಿದಂತೆ ಬ್ರಾಹ್ಮಣರ ಧರ್ಮವನ್ನು ಕೆಡಿಸುವದು ಸುಲಭವಲ್ಲೆಂಬ ಮಾತು ಕೊರಳಿಗೆ ಚೂರಿಯು ಹಾಕಿ ಕುರಾಣ ಕೊಡುವ ಮುಸಲ್ಮಾನರಿಗೆ ಬಹು ಕಾಲದ ಅನುಭವದ ನಂತರ ತಿಳೀತು. ಬಾಯಿ ಮಾತಿನಿಂದ ಬೋಧ ಮಾಡುವಂಥ ಕ್ರಿಸ್ತೀ ಮಿಶನರಿಗಳಿಗೆ ಅದು ಇಷ್ಟು ಬೇಗ ತಿಳಿಯುವ ಬಗೆಯೇನು?

— ೦ —

ಹಳ್ಳಿಗಳ ಆರೋಗ್ಯ ರಕ್ಷಣಕ್ಕಾಗಿ ಸರಕಾರದವರು ಹೊಸ ಕಾಯಿದೆಯನ್ನು ಮಾಡ ಹತ್ತಿದ್ದಾರೆ. ಇದು ದೇಶಕ್ಕೆ ಅತ್ಯಂತ ಹಿತಕರವಾದ ಉಪಾಯವೆಂಬದಕ್ಕೆ ಸಂಶಯವಿಲ್ಲ. ಆದರೆ ಈ ಸುಧಾರಣೆಯನ್ನು ಮಾಡುವ ತಕ್ಕ ಮಾರ್ಗವು ಕಾಯಿದೆಯನ್ನು ಮಾಡುವವರಿಗೆ ತಿಳಿಯಲಿಕ್ಕೆ ಮಾತ್ರ ಬೇಕು. ಇಲ್ಲದಿದ್ದರೆ ಹಳ್ಳಿಗಾಡ ಜನರ ಆರೋಗ್ಯ ಬೆಳೆಯುವದು ಒಂದು ಬದಿಗೆ ನಿಂತು ಅವರಿಗೆ ನಾನಾ ಪ್ರಕಾರದ ಬಾಧೆಗಳು ಮಾತ್ರ ಆಗುವ ಸಂಭವವಿರುತ್ತದೆ.

ಸೂರತ ಪಟ್ಟಣಕ್ಕೆ ಈ ತಿಂಗಳಲ್ಲಿ ಬೆಂಕಿ ಹತ್ತಿ ೩೬೩
ಮನೆಗಳು ಸುಟ್ಟವು, ಸಾವಿರಾರು ಜನರು ನೆರಳಿಲ್ಲದ ಕ
ಳಿಲ್ಲದೆ ಬಳಲುತ್ತಾರೆ. ಆದರೆ ಇವರ ಸಹಾಯಕ್ಕಾಗಿ ಇದ
ವರೆಗೆ ಸುಮಾರು ಒಂದು ಲಕ್ಷ ರೂಪಾಯಿಯು ಫಂಡ
ಮುಂಬೈ ಮುಂತಾದ ಕಡೆಯಲ್ಲಿ ಕೂಡಿರುತ್ತದೆಂದು ಕೇ
ಬಹಳ ಸಂತೋಷ ಪಡುತ್ತೇವೆ.

— ○ —

ಗಂಜಾಮು ಪ್ರಾಂತದಲ್ಲಿ ಬರ ಬಿದ್ದ ಸುದ್ದಿಯು ವರ್ತ
ಮಾನ ಪತ್ರಗಳಲ್ಲಿ ಪ್ರಸಿದ್ಧವಾಗಿರುತ್ತದೆ.

— ○ —

ಲೆಪ್ಸಿಕ ಪಟ್ಟಣದಲ್ಲಿ ಒಂದು ಚಮತ್ಕಾರದ ಪ್ರಯೋ
ವನ್ನು ಡಾಕ್ಟರ ಜನರು ಮಾಡಿದ್ದು ಪ್ರಸಿದ್ಧವಾಗಿರುತ್ತದೆ
ಅಚ್ಚ ಕಪ್ಪು ಮೈ ಬಣ್ಣದವನೊಬ್ಬ ಸಿದ್ದೀ ಜಾತಿಯ ಮ
ನುಷ್ಯನ ತೊಗಲು ಬೇರೆ ಬೇರೆ ಕಡೆಯಲ್ಲಿ ಕತ್ತ್ರಿ ತೆ
ದು ಅದರ ಸ್ಥಳದಲ್ಲಿ ಬಿಳೀ ಜನರ ಮೈ ಮೇಲಿನ ತೊ
ಗಲು ಕತ್ತ್ರಿ ತೆಗೆದು ಕೂಡ್ರಿಸಿದರು. ಈ ಪ್ರಯೋಗವು ಕ
ಲವು ವರ್ಷಗಳಿಂದ ನಡೆದದೆ. ಆದರೆ ಕಡೆಯಲ್ಲಿ ಆ ಕಪ್ಪು
ಮನುಷ್ಯನ ಮೈ ಮೇಲೆ ಕೂಡ್ರಿಸಿದ ಬಿಳಿದೊಗಲಿನ ತು
ಡುಗಳೆಲ್ಲ ಅವನ ಮೈಯಂತೆ ಕಪ್ಪಾದವು. ಇದೇ ಮೇ
ರೆಗೆ ಒಬ್ಬ ಬಿಳಿ ಮನುಷ್ಯನ ಮೈ ಮೇಲಿನ ತೊಗಲು
ಕತ್ತ್ರಿ ತೆಗೆದು ಅದರ ಸ್ಥಳದಲ್ಲಿ ಕಪ್ಪು ಮನುಷ್ಯನ ತೊ
ಗಲು ಕೂಡ್ರಿಸಿ ಪರೀಕ್ಷಿಸಲಾಗಿ, ಅದು ಕೆಲವು ಕಾಲಾವ
ಧಿಯಿಂದ ಬೆಳ್ಳಗಾಯಿತು. ಇದರಿಂದ ಮನುಷ್ಯರ ರಕ್ತದೊ
ಳಗೇ ಅವರ ಮೈ ಬಣ್ಣದ ತತ್ವವಿರುತ್ತದೆಂದು ಸಿದ್ಧವಾಗು

ತ್ತದೆ ಆದರೆ ಕಪ್ಪು ಮನುಷ್ಯನು ಚಳಿಯ ದೇಶದಲ್ಲಿ ಹೋಗಿ ನಿಂತರೆ ಅವನ ಮೈ ಬಣ್ಣಕ್ಕೆ ಬಿಳಿ ಛಾಯೆ ಹೊಡೆಯುತ್ತದೆ; ಇವರಂತೆ ಕೆಂಪು ಮನುಷ್ಯರ ಮೈ ಬಣ್ಣವು ಬಿಸಿಲಿನಿಂದ ಕಪ್ಪಾಗುತ್ತದೆಂಬದಾದರೂ ಬಹು ಜನರಿಗೆ ಗೊತ್ತುಂಟು.

—೦—

Industry·

ಉದ್ಯೋಗ·

ಸದುದ್ಯೋಗ·

(೬೬.ನೇ ಪುಟದಿಂದ ಮುಂದಕ್ಕೆ ಸಾಗಿದ್ದು·)

ಉದ್ಯೋಗವೆಂದರೆ ಶ್ರಮವೆಂಬದನ್ನು ಮೇಲೆ ಹೇಳಿದ್ದೇನೆ. ಶ್ರಮದಿಂದ ಫಲ, ತಪದಿಂದ ರಾಜ್ಯವೆಂಬ ಗಾದಿಗಳನ್ನು ಎಲ್ಲರೂ ಕೇಳಬಲ್ಲರು. ಬಿತ್ತಿದ್ದು ಬೆಳೆಯುವದು ಇದಕ್ಕೆ ವಿಪರೀತವಾಗಿ ಗೋದಿಯನ್ನು ಬಿತ್ತಿ ಜೋಳವನ್ನಾರಾದರೂ ಒಕ್ಕುವರೋ? ಇಲ್ಲ· ಇಲ್ಲ· ಇದರಂತೆ ಸದುದ್ಯೋಗ ಮಾಡಿದರೆ ಕೆಟ್ಟ ಫಲವೆಂದಿಗೂ ಪ್ರಾಪ್ತವಾಗಲಾರದು.

ಮನುಷ್ಯನಿಗೆ ಈ ಉದ್ಯೋಗದ ಸ್ವಭಾವ ಹತ್ತುವದೇ ಕಠಿಣವು ಆದರೆ ಕೆಲವರು ಸ್ವತಃ ಉದ್ಯೋಗಿಗಳೇ ಇರುತ್ತಾರೆ· ಆದರೆ ಯಾರಲ್ಲಿ ಈ ಗುಣವಿಲ್ಲ, ಅವರು ಇದನ್ನು ಕಲಿಯುವದು ಅಸಾಧ್ಯವಲ್ಲ· ಯಾಕಂದರೆ ಈ ಗುಣವನ್ನು ಹೊಟ್ಟೆಯು ತಾನೇ ಕಲಿಸುತ್ತದೆ· ಮನಸ್ಸಿಗೆ ನಾವು ಉತ್ತೇಜನ ಕೊಟ್ಟರೆ ತೀರಿತು. ಒಮ್ಮೆ ನಾವು ಹಿಡಿದ ಕಾರ್ಯ ಕೈಗೂಡಿತಂದರೆ ನಮ್ಮ ಮನಸು ಉದ್ಯೋಗ ಮಾಡುವ ಸ್ವಭಾವವುಳ್ಳದ್ದಾಗುತ್ತದೆ· ಈಪ್ರಕಾರ ಎಲ್ಲರೂ ಉದ್ಯೋಗಿಗಳಾ

ಗುವದರಿಂದ ಬಡತನವು ತನಗೆ ಸ್ಥಳಸಿಕ್ಕದ ಮೂಲಕ ಪಲಾಯನ ಹೇಳಿಸುವದು. ದೇಶದ ಸಂಪತ್ತು ಹೆಚ್ಚಾಗುವದು. ಜನರು ಸದಾ ಸುಖಿಗಳಾಗುವರು, “ಚಿಂತೆಯೇ ಮುಪ್ಪು ಸಂತೋಷವೇ ಯೌವನ” ಎಂಬ ಗಾದೆಗನುಸಾರವಾಗಿ ಮನುಷ್ಯನಲ್ಲಿ ಧೈರ್ಯಶಕ್ತಿಗಳು ಬೆಳೆಯು ಹತ್ತುತ್ತವೆ. ನಡಾವಳಿಗಳು ಸುಧಾರಿಸಲ್ಪಡುವವು. ವಿಚಾರ ಶಕ್ತಿಯು ವಿಸ್ತಾರವಾಗುವದು. ಆದದರಿಂದ ಸಮುದ್ಯೋಗವನ್ನು ಎಲ್ಲರೂ ಕೈಕೊಳ್ಳತಕ್ಕದ್ದು.

ಸಮುದ್ಯೋಗದಲ್ಲಿ ಶಾರೀರ ಶ್ರಮ, ಮಾನಸಿಕ ಶ್ರಮವೆಂದು ೨ ಭಾಗಗಳಾಗುತ್ತವೆ.

ಶಾರೀರಶ್ರಮ— ಮನುಷ್ಯನಿಗೆ ಕೈಕಾಲು ಮುಂತಾದ ಇಂದ್ರಿಯಗಳನ್ನು ದೇವರು ಶೋಭಿಗಾಗಿಯು ಎರಡನೆ ಪ್ರಾಣಿಗಳನ್ನು ಹೊಡೆಯುವದಕ್ಕಾಗಿಯು ಕೊಟ್ಟಿಲ್ಲಾ. ಈ ಅವಯವಳಿಂದ ಸ್ವಲ್ಪಾದರು ಶ್ರಮ ಮಾಡಿಕೊಂಡು ತನ್ನ ನಿರ್ವಾಹ ಸಾಗಿಸಿಕೊಳ್ಳಲೆಂಬ ಅಭಿಪ್ರಾಯದಿಂದ ಕೊಟ್ಟಿರುವನು. ಆದದರಿಂದ ನಾವು ಈ ಅವಯವಗಳನ್ನು ಸ್ವಸ್ಥ ಇಟ್ಟುಕೊಂಡು ಕೊಡ್ರುವದು ಸರಿಯಲ್ಲ. ಶಾರೀರ ಶ್ರಮದಿಂದ ಆಗತಕ್ಕ ಕೆಲಸಗಳು ಅನೇಕ ಉಂಟು. ಅವುಗಳನ್ನು ಮಾಡಿ ಸುಖ ಪಡೆಯಬಹುದು, ಅವೆಲ್ಲ ಕೆಲಸಗಳು ಮಾನಸಿಕ ಶ್ರಮದಸಹಾಯದ ಹೊರತು ಆಗುತ್ತವಂತಿಲ್ಲ ಮತ್ತು ಮಾನಸಿಕ ಶ್ರಮದಿಂದಾಗುವ ಕೆಲಸಗಳು ಶಾರೀರಶ್ರಮದ ಸಹಾಯದ ಹೊರತು ಆಗುವದಿಲ್ಲ. ಒಂದು ಶ್ರಮದ ಕೆಲಸಕ್ಕೆ ಎರಡನೇ ಶ್ರಮದ ಸಹಾಯ ಬೇಕೇ ಬೇಕು. ಹೀಗಿದ್ದು ಬೇರೆ ಬೇರೆ ಭಾಗಗಳನ್ನು ಮಾಡಿರುವದರ ಮುಖ್ಯ ತಾತ್ಪರ್ಯವಿಷ್ಟೇ ಯಾವ ಉದ್ಯೋಗಗಳಿಗೆ ಯಾವ ಶ್ರಮ ಹೆಚ್ಚು ಹತ್ತುವದೋ ಆ ಉ

ದ್ಯೋಗವು ಆ ಶ್ರಮದ್ದು ಎಂದು ತಿಳಿಯತಕ್ಕದ್ದು. ಮನೆಯನ್ನು ಕಟ್ಟುವದು; ಬಡಿಗತನ ಮಾಡುವದು; ಒಕ್ಕಲತನ ಮಾಡುವದೂ, ಖಣಿಗಳಲ್ಲಿ ಕೆಲಸ ಮಾಡುವದು ಇತ್ಯಾದಿ ಉದ್ಯೋಗಗಳೆಲ್ಲಾ ಶಾರೀರಶ್ರಮದೊಳಗೆ ಬರುತ್ತದೆ.

ಮಾನಸೀಕ ಶ್ರಮ—ದೇವರು ಯಾವತ್ತು ಪ್ರಾಣಿಗಳಿಗೆ ತಮ್ಮ ತಮ್ಮ ಆಹಾರವನ್ನು ದೊರಕಿಸಿಕೊಳ್ಳಲಿಕ್ಕೆ ಸಹಾಯವಾಗುವ ಇಂದ್ರಿಯಗಳನ್ನು ಕೊಟ್ಟದ್ದಲ್ಲದೆ, ಬುದ್ಧಿಯನ್ನು ಮನುಷ್ಯನಿಗೇ ಕೊಟ್ಟಿರುತ್ತಾನೆ, ಆದದರಿಂದ ಮನುಷ್ಯನು ಎಲ್ಲ ಪ್ರಾಣಿಗಳಲ್ಲಿ ಶ್ರೇಷ್ಠನು ಇರುತ್ತಾನೆ ಈ ಬುದ್ಧಿಯ ಸಹಾಯದಿಂದ ಆಗತಕ್ಕ ಕೆಲಸಗಳೆಲ್ಲಾ ಮಾನಸೀಕ ಶ್ರಮದ ಕೆಲಸಗಳೆನಿಸಿಕೊಳ್ಳುತ್ತವೆ. ಬುದ್ಧಿಯಿಂದ ಮನುಷ್ಯನು ಶ್ರೇಷ್ಠತ್ವ ಪಡೆದಂತೆ ಬುದ್ಧಿಯ ಸಹಾಯದಿಂದ ಆಗತಕ್ಕ ಕೆಲಸಗಳು ಶಾರೀರ ಶ್ರಮದಿಂದ ಆಗತಕ್ಕ ಕೆಲಸಗಳಿಗಿಂತಾ ಹೆಚ್ಚು ಗೌರವವುಳ್ಳವಿರುತ್ತವೆ. ಗಿರಣಿ ತಂತಿ ಟಪಾಲು ಆಗಗಾಡಿ ಮುಂತಾದ ಯಂತ್ರಗಳೇ ಈ ಗುರುತ್ವದ ಉದಾಹರಣೆಗಳಾಗಿರುತ್ತವೆ. ಪ್ರಿಯ ಮಿತ್ರರೇ ಈಗ ನಾವೆಲ್ಲರು ಮಾಡತಕ್ಕ ಉದ್ಯೋಗವು ಮಾನಸೀಕ ಶ್ರಮದ್ದಿರುತ್ತದೆ. ನಾವು ಎಚ್ಚರದಿಂದ ಶ್ರಮ ಮಾಡಿದರೆ ಫಲವಾಗದೆ ಇರದು ಆದದರಿಂದ ಎಲ್ಲರೂ ಆಲಸ್ಯವನ್ನು ಹೊರಗೆ ಹಾಕಿ ನಮ್ಮ ಹಿತವನ್ನು ಸಾಧಿಸಿಕೊಳ್ಳಲಿಕ್ಕೂ ಗುರುಗಳಿಗೆ ಕೀರ್ತಿ ಬರುವಂತೆ ವರ್ತಿಸಲಿಕ್ಕೂ ನಾವು ಸದುದ್ಯೋಗಿಗಳಾಗಿರುವದು ತಕ್ಕದ್ದು.

ಜ. ಲಿ. ಕೊಪ್ಪದ.

* * *

Notices.

ನೋಟೀಸು.

ಜಾವಕನಂಬರ ೬೩

ಅಂ ಕಾನಡಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರ ಜನರಿಗೆ—

ಎ. ಇನಸ್ಪೆಕ್ಟರ ಕಾನಡಾ ಇವರ ಕಡೆಯಿಂದ—

ಕಳೆದ ನವಂಬರ ತಿಂಗಳಲ್ಲಿ ಧಾರವಾಡ ವಿದ್ಯಾಲಯ
ಲ್ಲಿ ಆದ ವರ್ಷ್ನರಪಾಯಿಜ ಪರೀಕ್ಷೆಯಲ್ಲಿ ಅವಂ ಲಕ್ಷ್ಮಣ
ವಾಲಿ ಖಾನಾಪೂರಕರ ಹೆಡ್ಡ ಮಾಸ್ತರ ಗೆರ್ಲ ಸ್ಕೂಲ ಕ
ವಸ್ಥಾಳ ಇವರು ತೇರ್ಗಡೆಯನ್ನು ಹೊಂದಿದಕಾರಣ ಇ
ರಿಂಗೆ ೪೦ ರೂಪಾಯಿಯ ೧ನೇ ಇನಾಮು ದೊರೆದದ್ದನ್ನು
ೀಳಿ ನಾವು ಬಹಳ ಸಂತೋಷ ಪಡುತ್ತೇವೆ. ಇವರಂತೆ
ತರ ಮಾಸ್ತರರಾದವರೂ ಮನಸ್ಸುಗೊಟ್ಟು ಅಭ್ಯಾಸವನ್ನು
ಾಡಿ ಇನಾಮು ಪಡೆಯುವದಕ್ಕೆ ಯತ್ನ ಮಾಡತಕ್ಕದ್ದು.

ಟ್ರೇಂಡಮಾಸ್ತರ ಜನರು ಪರೀಕ್ಷೆಯ ಕಾಲಕ್ಕೆ ಪಡೆದ ಜ್ಞಾ
ವನ್ನು ಜಾಗ್ರತೆಯಲ್ಲಿಡದೆ ತಮ್ಮ ಸರಟಿಫಿಕೇಟಿನನುಸಾರವಾ
ಯೂ, ನೌಕರಿ ಮುದತಿಗನುಸಾರವಾಗಿಯೂ, ತಮ್ಮ ಪ
ಾರ ಹೆಚ್ಚಿಸಬೇಕೆಂಬದಾಗಿ ಬೇಡುತ್ತಾರೆ. ಆದರೆ ಅವರು
ಗ್ರಂಥಗಳನ್ನು ಮನಮುಟ್ಟಿ ಓದಿ ತಾವು ಜ್ಞಾನವನ್ನು ವೃ
ದ್ಧಿಪಡಿಸದಹೊರ್ತು ಬಡತಿಗೆ ಯೋಗ್ಯರಾಗರೆಂದು ತಿಳಿಯು
ತ್ತಿಲ್ಲ. ತಿಳಿಯುವದು ತಾ. ೨೩|೪|೮೯ ಇಸವಿ.

R. H. Desapande.

ಡಿ. ಎ. ಇನಸ್ಪೆಕ್ಟರ ಕಾನಡಾ

—o—

History of the Middle Ages.

ಯುರೋಪದ ಮಧ್ಯ ಕಾಲದ ಇತಿಹಾಸವು

(೮೯ನೇ ಪುಟದಿಂದ ಮುಂದೆ ಸಾಗಿದ್ದು)

ಇಂಗ್ಲಂಡವು — ಪ್ಲಾಂಟಾಜನೆಟ ಅರಸರು ಎರಡನೇ ಹೆನರಿಯು ತನ್ನ ಸ್ವಂತ ಬಾಧ್ಯತೆಯಿಂದ ಇಂಗ್ಲಂಡದ ರಾಜ್ಯವನ್ನು ಪಡೆದು, ತಾಯಿಯ ಬಾಧ್ಯತೆಯಿಂದಲೂ, ಹೆಂಡತಿಯ ಬಾಧ್ಯತೆಯಿಂದಲೂ ನಾರ್ಮಂಡಿ ಮುಂತಾದ ಹಲವು ದೊಡ್ಡ ಶೀಮೆಗಳನ್ನು ಪಡೆದನು; ೧೧೫೪ ಅವನು ನ್ಯಾಯವಂತನೂ, ಶೂರನೂ, ಬುದ್ಧಿವಂತನೂ, ಜನರ ಮೆಚ್ಚಿಕೆಯುಳ್ಳವನೂ ಅಲ್ಲದೆ ಫ್ರಾನ್ಸದ ಅರಸನಿಗೆ ಬಲಿಷ್ಟನಾದ ವೈರಿಯಾಗಿದ್ದನು. ಅವನು ನಾಯಿಟರೆಂಬ ಸರದಾರರ ಚಾಕರಿಗೆ ಬದಲಾಗಿ ಅವರ ಮೇಲೆ ತೆರಿಗೆ ಕೂಡ್ರಿಸಿದನು. ಇದಲ್ಲದೆ ಅವನು ಅರಸನ ಸಮ್ಮತಿಯ ಹೊರತಾಗಿ ಪೋಪನ ಯಾವ ಆಜ್ಞೆಯೂ ನಡೆಯಬಾರದೆಂದು ನಿಯಮವನ್ನು ಸ್ಥಾಪಿಸಲಾಗಿ, ಆ ವ್ಯಾಜ್ಯದಲ್ಲಿ ಕ್ಯಾಂಟರ್ಬರಿಯ ಅರ್ಚಬಿಶಪನಾದ ಥಾಮಸ ಆ ಬೆಕೆಟನೆಂಬವನು ಮೋಸದಿಂದ ಕೊಲ್ಲಲ್ಪಟ್ಟನು; ೧೧೭೦ ಹೆನರಿಯು ಆಯರ್ಲಂಡದ ಕೆಲವು ಭಾಗಗಳನ್ನು ಕೈವಶ ಮಾಡಿಕೊಂಡನು. ಆದರೆ ಅವನ ಆಳಿಕೆಯ ಕಡೆ ಭಾಗದಲ್ಲಿ ಅವನ ಮಕ್ಕಳು ಫ್ರೆಂಚ ಅರಸನ ಹೇಳಿಕೆಯಿಂದ ಅವನಮೇಲೆ ಬಹಳ ತಳ್ಳಿಗಳನ್ನು ನಡಿಸಿದರು.

ಅವನ ತರುವಾಯ ಮೊದಲನೇ ರಿಚರ್ಡನು ಅರಸನಾಗಿ (೧೧೮೯) ಫ್ರಾನ್ಸದ ಫಿಲಿಪ್ಪ ರಾಜನ ಸಂಗಡ ಜರೂಸಿಲೇಮದ ಯಾತ್ರೆಗೆ ಹೊರಟನು. ಅಲ್ಲಿ ಮುಸಲ್ಮರ ಸಂಗಡ

ಬಹು ಶೌರ್ಯದಿಂದ ಖ್ಯಾತಿ ಕೀರ್ತಿ ಪಡೆದಾಗ್ಯೂ, ಬರುವಾಗ ಮಾರ್ಗದಲ್ಲಿ ಆಸ್ಟ್ರಿಯಾದ ಡ್ಯೂಕನಿಂದ ಸೆರೆ ಹಿಡಿಯಲ್ಪಟ್ಟನು. ಅವನ ಪ್ರಜೆಗಳು ಹಣ ಕೊಟ್ಟು ಅವನನ್ನು ಬಿಡಿಸಿಕೊಂಡಾಗ್ಯೂ ಮುಂದೆ ಅವನು ಬಹಳ ವರ್ಷ ಬದುಕಲಿಲ್ಲ. ಇವನ ಶೂರತನಕ್ಕಾಗಿ ಜನರು ಇವನಿಗೆ ಕ್ಯೂರ್ ಡಿ ಲಾಯನ (ಸಿಂಹದ ಯೆದೆಯವನು) ಯೆಂದೆನ್ನುವರು.

ತರುವಾಯ ಅವನ ತಮ್ಮ ಜಾನನೆಂಬವನು ಅರಸನಾದನು; ೧೧೯೯ ಆದರೆ ಅವನಿಗೆ ಪ್ರಜೆಗಳು ಬಿಟ್ಟದೆ ಅವನ ಅಣ್ಣನ ಮಗನಾದ ಆರ್ಥರೆಂಬ ಬಾಲಕನಿಗೆ ಆಶ್ರಯ ಕೊಡಲಾಗಿ, ಜಾನನು ಆ ಹುಡುಗನನ್ನು ಸೆರೆಯಿಟ್ಟು ಅತಿ ಕ್ರೂರತನದಿಂದ ತನ್ನ ಕೈಯಿಂದಲೇ ಕೊಂದನು. ಈ ಸಂಬಂಧದಿಂದ ಫ್ರಾನ್ಸದ ಅರಸನು ಜಾನನನ್ನು ವಿಚಾರಣೆಯ ಸಲುವಾಗಿ ಕರೆದ ಸಂಗತಿಯನ್ನು ಹಿಂದೆ ಹೇಳಿರುತ್ತೇವೆ. ಜಾನನು ಪೋಪನ ಸಂಗಡ ಜಗಳ ತೆಗೆಯಲಾಗಿ, ಪೋಪನು ಇವನನ್ನು ತಳ್ಳಿ ಫ್ರಾನ್ಸದ ಅರಸನಿಗೆ ಇವನ ರಾಜ್ಯವನ್ನು ಕೊಟ್ಟನು. ಆದ್ದರಿಂದ ಜಾನನು ಕಪ್ಪ ಕೊಡಲೊಡಂಬಟ್ಟು ಪುನಃ ರಾಜ್ಯಾಧಿಕಾರವನ್ನು ಸಂಪಾದಿಸಿದ ಕಾರಣ, ಪ್ರಜೆಗಳು ಒಟ್ಟಾಗಿ ಜಾನನನ್ನು ನಿರ್ಬಂಧಿಸಿ, ಅವನಿಂದ ಮ್ಯಾಗ್ನಾಚಾರ್ಟಾ ಯೆಂಬ ಪ್ರಖ್ಯಾತ ಸನದನ್ನು ಪಡೆದರು; ೧೨೧೫ ಇದರಿಂದ ಇಂಗ್ಲಂಡದ ಅರಸರ ಅಧಿಕಾರವು ಬಹಳ ಕಡಿಮೆಯಾಗಿ ಯಾವತ್ತೂ ಪ್ರಜೆಗಳಿಗೆ ಬಹಳ ಸ್ವಾತಂತ್ರ್ಯವುಂಟಾಯಿತು. ತರುವಾಯ ಜಾನನು ಆ ಸನದನ್ನು ಕಸುಕೊಳ್ಳುವ ಪ್ರಯತ್ನ ನಡಿಸಿದರಿಂದ ದರ್ಬಾರಿನವರು ಫ್ರಾನ್ಸ ಲೂಯಿಸನೆಂಬ ರಾಜ ಪುತ್ರನನ್ನು ರಾಜ್ಯಾಧಿಕಾರಕ್ಕೆ

ರಿದಾಗ್ಯೂ, ಜಾನನು ಬೇಗ ತೀರಿ, ಅವನ ಮಗ ಹೆನ್ರಿಯೆಂಬ ಕೂಸಿಗೆ ಪಟ್ಟಾಭಿಷೇಕವಾಯಿತು, ೧೨೧೬

ಹೆನ್ರಿಯು ದೊಡ್ಡವನಾದ ಬಳಿಕ ಅವನು ಕೇವಲ ದುರ್ಬಲನೂ, ಆಲಸ್ಯಗಾರನೂ, ಅವಿವೇಕಿಯೂ ಎಂದು ತಿಳಿದು ಬಂತು. ಅವನು ಹಲವು ಬಗೆಯಾಗಿ ಹಣವನ್ನು ಗೊತ್ತಿಲ್ಲದೆ ಹಾಳು ಮಾಡುವದು ನೋಡಿ, ಪ್ರಜೆಗಳು ಶಸ್ತ್ರ ಹಿಡಿದರು. ಆದರಿಂದ ಅರಸನು ಬಹಳ ಹೆದರಿಕೊಂಡು ಆವರು ಹೇಳಿದಂತೆ ಆಕ್ಸಫೋರ್ಡಿನಲ್ಲಿ ಹೊಸ ಸನದು ಮಾಡಿ ಕೊಟ್ಟು (೧೨೫೮) ೨೪ ಮಂದಿ ಜಮೀದಾರರಿಗೆ ಅಪರಿಮಿತ ಅಧಿಕಾರವನ್ನು ಕೊಟ್ಟನು. ಆದರೆ ಆ ಜನರಿಂದ ಅರಸನಿಗೂ, ಪ್ರಜೆಗಳಿಗೂ ಸರಿಯಾಗಿ ತೊಂದರೆಯುಂಟಾಯಿತೆಂದು ನೋಡಿ, ಅವರೆಲ್ಲ ಪುನಃ ಒಂದಾಗಿ, ಪೋಪನ ಕೈಯಿಂದ ಅರಸನು ಆಣೆ ಬಿಡಿಸಿಕೊಂಡು ಆ ಜಮೀದಾರರ ಹೆಮ್ಮೆಯನ್ನು ತಗ್ಗಿಸುವ ಯತ್ನಗಳ ಮಾಡಿದರು. ಆ ಜಮೀದಾರರ ಮುಖ್ಯಸ್ಥನಾದ ಲೇಸ್ಟರನೆಂಬವನು ವೇಲ್ಸ ಪ್ರಾಂತದವರ ಸಹಾಯ ಪಡೆದು ದಂಡು ಕೂಡಿಸಿ ಲೂಸಿ ಬಳಿ ಯುದ್ಧ ಮಾಡಿ, ಅರಸನನ್ನೂ ಅವನ ಮಗ ಎಡ್ವರ್ಡನನ್ನೂ ಸೆರೆ ಹಿಡಿದನು, ೧೨೬೪ ಆದರೆ ಎಡ್ವರ್ಡನು ಯುಕ್ತಿಯಿಂದ ಮುಂದಿನ ವರ್ಷ ಪಾರಾಗಿ, ಯುದ್ಧದಲ್ಲಿ ಲೇಸ್ಟರನನ್ನು ಕೊಂದು ಆ ಜಮೀದಾರರ ತಲೆ ಬಗ್ಗಿಸಿದನು. ಈ ೩ನೇ ಹೆನ್ರಿ ರಾಜನು ಮುಂದೆ ಶಾಂತತೆಯಿಂದ ಆಳಿದನು. ಇವನ ಆಳಿಕೆಯಲ್ಲಿ ಪಾರ್ಲಿಮೆಂಟಿನ ಹೌಸ ಆಫ್ ಕಾಮನ್ಸೆಂಬ ಸಭೆಯು ಆರಂಭವಾಯಿತು. ಲೇಸ್ಟರನು ಕ್ರಿಸ್ತ ೧೨೬೫ನೇ ವರ್ಷ ಆ ಸಭೆಯನ್ನು ಸ್ಥಾಪಿಸಿದನು.

— ಐಯರ್ಲಂಡವು —

ಈ ದ್ವೀಪದಲ್ಲಿ ಮೊದಲು ಕೆಲ್ಟ ಕುಲದ ಜನರು ವಾಸಿಸುತ್ತಿದ್ದರು. ಇಲ್ಲಿ ಯಾವಾಗಲೂ ಹಲವು ಸ್ವತಂತ್ರ ಸಂಸ್ಥಾನಗಳಿದ್ದು, ಜಗಳ, ಕೊಲೆ, ಹೆಂಗಸರನ್ನು ಕದಿಯುವದು, ಮುಂತಾದ ದುರಾಚಾರಗಳು ನಡೆಯುತ್ತಿದ್ದವು. ಇಂಗ್ಲಿಷರ ಸಹವಾಸದಿಂದ ಇಲ್ಲಿಯ ನಿವಾಸಿಗಳು ಕ್ರಿಸ್ತೀ ಧರ್ಮವನ್ನು ಸ್ವೀಕರಿಸಿದರು. ಉತ್ತರದ ಜನರು ಬೇರೆ ದೇಶಗಳನ್ನು ಹಿಡಿಸಿದಂತೆ ಇಲ್ಲಿ ಸಹ ದಾಳಿಗಳನ್ನು ತಂದು ಕೆಲವು ಪ್ರದೇಶವನ್ನು ಆಕ್ರಮಿಸಿದರು. ಎರಡನೇ ಹೆನರಿಯು ಐಯರ್ಲಂಡವನ್ನು ಕೈವಶ ಮಾಡಿಕೊಳ್ಳುವ ಹವಣಿಕೆಯಲ್ಲಿರುವಷ್ಟರಲ್ಲಿ ಇಲ್ಲಿಯ ಜನರು ಪೋಪನ ಆಜ್ಞೆಗಳಿಗೆ ಪ್ರತಿಕೂಲವಾಗಿ ನಡೆದದರಿಂದ,

(ಮುಂದೆ ಸಾಗುವದು)

* * *

Correspondence.

ಪತ್ರವ್ಯವಹಾರವು.

'ಹೊಸ ಕವಿತೆ' (ಬೇಸಿಗೆಯ ವರ್ಣನೆ)

ಕಂ ॥ ಪೊಡಮಡುವರೆ ಡರಪಡಗಿಪ । ಕಡುಭಕ್ತಿಯೊಳೆರ
ಗಿನುತಿಸಿದರ್ಗೆ ಮುಕುತಿಯಂ । ಕೊಡುವಗಿರಿಯಣುಗೆಯಣುಗಂ ।
ತದೊಲವಿಂತೀಳ್ಗೆ ಪೊಳೆವವಿಘ್ನಾಂಕುರಮಂ ॥ ೧ ॥ ವೃ ॥
ತ್ರಿಯಗೋತ್ರದೊಳ್ ಜನಿಸಿ ಪೆರ್ಮೆಯ ನಾಳ್ದಳಿಂದ್ರಲೋ
ದೊಳ್ । ಪಾತ್ರನೆನಿಪ್ಪ ಮಂತ್ರಿಮಲನೆಂಬವನೆನ್ನಯ ತಂದೆನಾ

ಡೆನ್ ॥ ಮಿತ್ರಯಿದೆನ್ನನಾಮ ಮೆಸೆಗುಂ ಸುಪಕ್ಷದೇಪನಿ
ಲ್ರೈಯಿಂ । ಧಾತ್ರಿಪೊಗಳ್ವಸಂಕವಿತೆಗೆಯ್ವರವಾಂತ್ಲೆದೇಂಕೃತಾ
ರ್ಥನೆಂ ॥ ೨ ॥ ಕಂ ॥ ನಾಂಗೆಯ್ದೀಕವಿತೆಗಳಂ । ಪಿಂಗ
ಮುದ್ರಿಸಿ ಮುದಿಷ್ಟಪುಂಪೂರಿಪ್ಪುದೀ ॥ ತಿಂಗಳೊಳೆನಿಪ್ಪ ಪದಕಂ
ಜಂಗಳಮಾಣಿಪೆಂ ಸುಪತ್ರಿಕಾಧಿಪತಿಗಳೇ ॥ ೩ ॥ ವೃ ॥ ಗಿರಿಪ್ಪ
ಬಂಸೀಳ್ದಿದಿಂಗಿತ್ತುಪಥಿಸಮುದಯಂ ಬೇಗೆಗೊಂಡತ್ತರಣ್ಯಂ
ಧರಣೀಭಾಗರಿಮುರುಂಟಿತ್ತ ತುಲದಿಭ ಸಂತಾನಮುಳ್ಕಿತ್ತು ಸನ್ನಿ
॥ ಜರ್ಜರಜಾಲಂಬೆಚ್ಚ ತಂಭೋಜಭವನಸಮಚಿಂತೋಗ್ರಮಂತ
ಳ್ವಿದಂಭೀ । ಕರಕೂರ್ಮಂಕುಗ್ಗಿದಂಕಾಯ್ದರ್ಣಸ್ತರಕಟಾಹ
ಬೆಂಲಿಂಬಾಯ್ತುದಗ್ರಂ ॥ ೪ ॥ ಕಂ ॥ ತೊಳಗಿದುವಭ್ರಂದಿ
ಪೋ । ಜ್ವಳಬಿಂಬಂ ತಪ್ತಕನಕಪಿಂಡದವೋಲ್ ಪ್ರ ॥ ಜ್ವಳಿ
ಪುದುತಟ್ಟಿ ಖಾಸಂ । ಕುಳಿದೆನಲ್ ಪೋಕ್ವಿಪಕಿರಣ ಸಂತತಿ ಪ
ರೆಗುಂ ॥ ೫ ॥ ನೆಲಗಾಯೆ ಪಗಲ್ ಬಿಸಿಲು । ಜ್ವಲಶಿಖಿಯಿಂ
ರೊಳಪರಬಿಸುಪೆಲರಭ್ರ ॥ ಸ್ಥಲದೊಳ್ ಪರಿಯೆ ವಿಪಾನಾ । ಪ
ಲಿಯಿಂ ಚರಿಪಮರನಾರಿಯರ್ ಬೆಮರ್ವಡೆಗುಂ ॥ ೬ ॥ ಗಿರಿಪ್ಪೆ
ರಿಯುಃಭಿದಾಸ್ತ್ರಪ । ಬಿರುಪ್ರೊಯ್ಲಸುರ್ಗಿವಾರ್ವ ಕಂಡಂಗಳೆ ನ
ಲ್ ॥ ಪರಿದ ಕಡುಬೇಗೆಯಿಂ ಕಾ । ಯ್ದುರೆ ಘಳಘಳಿಲೆನೆ ಕ್ಷಮಂತ
ಗಿರಿಪುಡಿವಡೆಗುಂ ॥ ೭ ॥ ಸ್ರ ॥ ಘನಂಜಂಜುಂ ತೊಟ್ಟನಲಾಸ್ತ್ರ
ಮುಂಡುಕಾ । ಯ್ಮೀದೆಸಟ್ಟಂತಿರೆತನ್ನಿದಾಘದೊಳ್ ॥ ಘನ
ಪೋವಿಸ್ಫೂತ ಬ್ರಹದ್ಧಸಂಜಯುಂ । ಪನಾಳಿಯಂತೆಕ್ಕನೆ ಜಬ
ತಪ್ಫಿತಂ ॥ ೮ ॥ ಕಂ ॥ ಬುವಿಗಾಯ್ದೀಳ್ವರಿಯುತಿರೆ
ಕವಿದ ಬಿಸಿಲ್ ಕೆಂಡ ಬೂದಿಯುಂತಿರೆ ನೆಲಮು ॥ ಘವಿಸಿದ ಜ
ದಂತಿರೆತೀ । ಡುಪಬಿಸ-ಪೆಲರುರಿಸಿದಾಘಮೇನ್ಸುರ್ಚಿದುದೋ ॥
॥ ಕಂವ ॥ ಬಿಸಲುರಿದಾಳದೆ ಬೆಂಪುಂ । ಬಿಸಜದೊಳೇ

ನೆಯ್ದ ಪಾಲ್ಗಡಲೊಳ್ ಸಂ | ತಸದಿಂ ಪಿಪ್ಪ ಮುಕುಂದನ |
ಸದ್ವೃತ ಹಿಮಗಿರಿಯನೇರಿದಂ ಗಿರೀಶಂ ॥ ೧೦ ॥ ಸುರನದಿ
ತ್ರಿಂತ್ರಬ್ಬ | ಕರ ನಿಕರಮದಿಂಗಿದತ್ತೊಳಗಣ ಬುಜಂಗಳ್ ॥
ರಕುಪಡೆಯುವ್ವಸು ಲೋಕಾಂ | ತರದನುಪಮ ಜೀವಿ ನಣೆದುದ
ಕಮ ಪಸಿಲಿಂ ॥ ೧೧ ॥ ಜಳಮಿಲ್ಲ ಮಿಂಗಿದತ್ತಿ | ಷ್ಣಿ ಳಜ
ಮುದೊತೆನ್ನತ್ತ್ರಜಂ ನಿರ್ಮಿಸಿದ ॥ ಗ್ಗಳದ ಪೊಳೆಗಳಿವಸಲ
ಸಂ | ಗಳಿಸಿರೆ ಸು ಮರೀಚಿಕಾಜಲಂ ಕಂಗೊಳಿಸಂ ॥ ೧೨ |
ಬಳಗಣ ಜಲಪೂರಲ್ಪ | ಜ್ವಳಿಪ ಮರೀಚಿಕೆಯು ಕುಡಿದೆನೆಂ
ಸಪಸದಿಂ ॥ ದಳಿತನ್ನನೇಕ ಮುಖಸಂ | ಕುಳಮಂ ತೆರಪಂತ
ಬರಿದ ಬೀಡಿಗಳೆಸೆಗುಂ ॥ ೧೩ ॥ ಮರುವಳ್ಳಿ ಬೆಂದುಮಪಕೂ|
ಶ್ಚರಂ ಬಳಲ್ದತ್ತು ಪಕ್ಷಿಸಂತಾನದಸು | ಣ್ಗರಿಯಿಲ್ಲಂ ನೀರಸ
ಕೇ| ಸರಿ ಕೇಸರ ಮುದಿದ್ದುರ್ದಂಪರಣ್ಯಸ್ಥಲದೊಳ್ ॥ ೧೪
ಂಡಗೆ ಸಂಪು ಮರ್ಚಿದುದಿ ಭಾಳಿಯು ಕುಂಭದ ಪರ್ಶ್ವಕ್ತಿ ಸೋ
ರಂ | ಕಂಡಿಸಿಪಂತೆ ತೆಕ್ಕನುಗಿದತ್ತೊಗೆದತ್ತು ಮಗುಳ್ದಿರಳ್ಕಿ
ತು ॥ ಸ್ದಂಡಲುಲಾಯಿಯಂಗ ಕಹಿಪ್ರಂದ ಶಿರೋಮಣಿ ರ
ಗ್ನುಜ್ಜ್ವಳಂ | ಗೊಂಪುದು ಬೆಂದುಗಟ್ಟಿದುದು ಪುಲ್ಲಿಯು ನಾಲಿ
ಯುಗ್ರತಾಪದಿಂ ॥ ೧೫ ॥ ಕಂ ॥ ತನುವಾರಿ ತೃಷೋ
ತೆಯಿಂ | ಘನ ದಂತಿ ಕುಲಂಬಳಲ್ದು ಸೊಂಡಿಲ್ದುದಿಯಿಂ ॥
ತಿಸಿಸಿ ಬಸುಯಿಕ್ಕಿ ಪೊಣ್ಮಿದು | ಪೆಸೆಪುಗುಳ್ಗಳಪಲ್ಲಿ ಜಸಿಲದೇಂ
ಪಳವೋ ॥ ೧೬ ॥ ತೋರುವಬಿಸಿಲ್ಗುರಿಯಂ | ಪಾರೆ
ನಂ ನೋಡಿಯೊಂದು ಸಿಂಧುರಪೋಲವಿಂ ॥ ನಾರೆ ಪರಿತಂದು
ಳಲನೆ | ಚಾರು ಕರು ನೀಡಿ ನೀಡಿ ನೋದಿತ್ತಾಗಳ್ ॥ ೧೭॥
ತ್ತ್ರೀರ ಕಾಯು ಸಲೆಗೊಡ | ನ್ನಾಹಿ ಕೆಲದೊಡನೆ ಮೇಲೆ
ದು ಕಮುಪಿಸಿಲ್ ॥ ಬಿತ್ತರಿಸಿ ಪತ್ತೆ ಕಳಪಳ | ಸುತ್ತಂ ಮಿಗೆ

ಬೆಂದು ನೊಂದು ಬಾಡಿತ್ತಾದಂ ॥ ೧೮ ॥ ನೆರೆ ಸೀಳ್ದು ಭವಲೆಯಂಪಾ । ಯ್ತಾರುತಿರೆ ಮುಕ್ತಾಳಿ ಮಳೆವನಿ ಯಿವೆನುತೆನವಿಲ್ ॥ ಭರದಿಂದ ನುಂಗೆ ಸುಟ್ಟಿ । ತ್ತಾರೆ ತಚ್ಚುಂಚುವೆನಲದನದಾರ್ ಪೊಡಕರಿಪರ್ ॥ ೧೯ ॥ ಬಿಸಿಲಿಂ ಬಸವಳಿಯುತ್ತಂ ಪೊಸ ಪುಲ್ಲೆಯ ಮರಿಯದೊಂದು ಬಾಯ್ವಿತೆಯುತ್ತಂ ॥ ದೊಸೆವು ನಿಲೆ ತಾಯೊಡೆಗೆ ನೆರೆ । ಬಿಸು ನಾಲಗೆಯಿಂದ ನೆಕ್ಕಿತದದರ ಮೊಗಮಂ ॥ ೨೦ ॥ ಅಡಿಯಿಡಲಾರದೆ ನೆಲದೊಳ್ । ಕಡು ಪಳಿದು ಶಿಬ್ರಜಂಧರಾಭವದೆಡೆಯೊಳ್ ॥ ಬಿಡದಿರ್ಪುದು ದಂತಿ ಕುಳಂ । ಜಡವಿಂಗಿದ ಕೊಳದ ಕೆಸರೊಳ್ದಿರುತಿರ್ಕುಂ ॥ ೨೧

(ಮುಂದೆ ಸಾಗುವದು.)

ಹಳಿಯಾಳ { ಲಕ್ಷ್ಮಣ ತ್ರಿಮಲ ಖಾನಾಪೂರಕರ
ತಾ॥ ೨೧।೪।೮೯ } ಹೆ. ಮಾ. ಗರ್ಲ್ಸ ಸ್ಕೂ. ಹಳಿಯಾಳ

◆

ಕನ್ನಡ ಶಾಲಾಪತ್ರಕವು

CANARESE

SCHOOL PAPER.

ಪುಸ್ತಕ ೩೪) (ಸಂಚಿಕೆ ೫

(ಮೇ ೧೮೮೯)

ಅನುಕ್ರಮಣಿಕೆಯು.

ಪುಟ.

ಲಾಪತ್ರಕವು.. ೯೭
ದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು ೧೦೫
ಟೀಸು.. ೧೧೨
. ನಾ. ಕೈಲಾಸವಾಸಿ ವಿಶ್ವನಾಥ ನಾರಾಯಣ
ಡಲಿಕ ಶಿಯಾಸ್ ಆಯ್ ಇ. ರಬಗ್ಗೆ ದುಃಖ ಪ್ರ } ೧೧೬
ನದ ನಿಬಂಧವು..
ರೋಪದ ಮಧ್ಯಕಾಲದ ಇತಿಹಾಸವು ೧೧೯

CONTENTS

me Tables.. 97
lucation and Improvement. 105
otices... 112
istory of the Middle Ages............ 119

DHARWAR.

ಶಾಲಾಪತ್ರಿಕವು

ಪುಸ್ತಕ ೩೪) (ಸಂಚಿಕೆ ೫

(ಮೆ ೧ ೧೮೮೯)

Time Tables.

ವೇಳಾಪತ್ರಕವು.

(ಹಿಂದಿನ ಅಂಕದಿಂದ ಸಾಗಿದ್ದು)

ಶಾಲೆಯ ಆರಂಭದಲ್ಲಿ ಗೌರವದ ವಿಷಯವನ್ನು ಕಲಿಸ ೀಕೆಂಬ ಬಗ್ಗೆ ೧೮ನೇ ಭಾಗದಲ್ಲಿ ಹೇಳಿದ್ದೇವೆ. ಆದದ ಂದ ಭಾಷೆ, ಗಣಿತ, ಕೈ ಬರಹ (ಜನರ ಪ್ರೀತಿ ಇದ್ದಲ್ಲಿ), ವಿಷಯಗಳು ಆರಂಭಕ್ಕೆ ಬರತಕ್ಕವು. ಉಳಿದ ವಿಷಯ ಳನ್ನು ಅವುಗಳ ಯೋಗ್ಯತೆಯ ಪ್ರಕಾರ ೩ನೇ ೪ನೇ ಸುಗಳಲ್ಲಿ ಕಲಿಸಬಹುದು. ಆದರೆ ಯಾವದೊಂದು ವಿಷ ಯದ ಗೌರವವು ಕಲಿಸುವವನ ಚಾತುರ್ಯವನ್ನೂ ಜನರ ಳುವಳಿಕೆಯನ್ನೂ ಅವಲಂಬಿಸಿರುತ್ತದೆ. ಈ ಸಂಬಂಧದಲ್ಲಿ ಮಾಸ್ತರನಿಗೆ ಗೌರವದ್ದೆಂದು ತೋರಿದಂಥ ವಿಷಯವನ್ನು ೊದಲಿಗೆ ಇಡಬೇಕು.

ನಾಲ್ಕನೇ ಸೂಚನೆಯನ್ನು ಕುರಿತು ಹೆಚ್ಚಿಗೆ ಬರೆಯುವ ಪ್ರಯೋಜನವಿಲ್ಲ. ವ್ಯಾಕರಣದ ನಂತರ ಕೈ ಬರಹ, ಇತಿ ಹಾಸದ ಇಲ್ಲವೆ ಭೂಗೋಲದ ನಂತರ ಶುದ್ಧ ಬರಹ, ಂಕಗಣಿತದ ನಂತರ ವಾಚನ, ಈ ಪ್ರಕಾರ ವಿಷಯಗಳ ದಬದಲೆಂದು [illegible]

ಐದನೇ ಸೂಚನೆಯು ಕಾರಣವನ್ನಾದರೂ ಅನುಭವವುಳ್ಳ ಮಾಸ್ತರರಿಗೆ ಹೇಳುವ ಪ್ರಯೋಜನವಿಲ್ಲ.

ಹುಡುಗರನ್ನು ಮೊದಲಿನಿಂದ ಕಡೆತನಕ ಒಂದೇ ಸ್ಥಳದಲ್ಲಿ ಕೂಡ್ರಿಸಿದರೆ ಅವರು ಬೇಸರುವರು. ಒಂದು ಪಾಠ ಮುಗಿದ ಬಳಿಕ ಮೊದಲಿನ ಸ್ಥಳ ಬಿಡಿಸಿ ಅವರನ್ನು ಮತ್ತೊಂದು ಸ್ಥಳಕ್ಕೆ ಕಳಿಸಿದರೆ ಅವರ ಬೇಸರಿಕೆ ಕಡಿಮೆಯಾಗಿ ಶಾಲೆಯಲ್ಲಿ ವ್ಯವಸ್ಥೆಯು ಉಳಿಯುತ್ತದೆ. ಬೇಸರಿಕೆಯಿಂದ ಅವ್ಯವಸ್ಥೆಯುಂಟಾಗುವದು ಅಪರೂಪವಲ್ಲ. ಬೆಳಗಿನಲ್ಲಿಯೂ ಮಧ್ಯಾನ್ಹದ ಮೇಲೆಯೂ ಅರ್ಧ ವ್ಯಾಳ್ಯವಾದ ಬಳಿಕ ಹುಡುಗರಿಗೆ ಸುಮಾರು ೧೦ ಮಿನಿಟು ವಿಶ್ರಾಂತಿಯನ್ನು ಕೊಡಲಿಕ್ಕೆ ಬೇಕು*.

ಏಳನೇ ಸೂಚನೆಯು ಹಿಂದೆ ಹೇಳಿದ್ದೊಂದು ಅತಿ ಗೌರವದ ತತ್ವವನ್ನು ಅನುಸರಿಸಿ ಇರುತ್ತದೆ. ಮಾಸ್ತರನು ಇಡೀ ಶಾಲೆಗೆ ಜವಾಬದಾರನಿರುತ್ತಾನೆ, ಕೆಲವೊಂದು ವರ್ಗಕ್ಕೆ ಮಾತ್ರವಲ್ಲ. ಆದದರಿಂದ ಪ್ರತಿ ಒಂದು ವರ್ಗದ ಅಭ್ಯಾಸವನ್ನು ಅವನೇ ಗೊತ್ತು ಮಾಡಿ, ಅದನ್ನು ಆಗಾಗ್ಗೆ ಪರೀಕ್ಷಿಸುತ್ತಿರಲಿಕ್ಕೆಬೇಕು. ಮೇಲಿನ ವರ್ಗಗಳ ಪರೀಕ್ಷೆಯು

---

* ಪ್ರೊಫೆಸರ ಬೇನೆಂಬವನು ಈ ಪ್ರಕಾರ ಬರಿಯುತ್ತಾನೆ—ಒಬ್ಬ ಮಾಸ್ತರನನ್ನು ಬಿಟ್ಟು ಮತ್ತೊಬ್ಬನ ಕಡೆಗೆ ಹೋಗುವದರಿಂದ ಬಹಳ ಹಿತವಾಗುತ್ತದೆ. ಕೋಣೆಯನ್ನು ಬದಲು ಮಾಡುವದರಿಂದ, ಕೂತ ಸ್ಥಳವನ್ನು ಬದಲು ಮಾಡುವದರಿಂದ, ಕೂಡ್ರುವ ಪ್ರಕಾರವನ್ನು ಬದಲು ಮಾಡುವದರಿಂದ ಸಹ ಬೇಸರಿಕೆಯು ಕಡಿಮೆಯಾಗುತ್ತದೆ.

ನ್ನು ಕಾಗದದ ಮೇಲೆ ತಕ್ಕೊಳ್ಳಬಹುದು. ಆದರೆ ಮಾಸ್ತರನ ಸ್ವಂತ ಶಿಕ್ಷಣದ ಲಾಭವು ಹುಡುಗರಿಗೆ ಆಗಾಗ್ಗೆ ಆಗುತ್ತಿದ್ದರೆ, ಮೇಲಾದ ತಿದ್ದುಪಡಿಯುಂಟಾಗಿ ಕೆಲಸವು ಸರಸಾ ಸಾಗುತ್ತದೆ.

ಮದ್ರಾಸದ ಡಾಯರೆಕ್ಟರ ಧೊರೆಗಳು ಕೆಲವು ವರ್ಷಗಳ ಹಿಂದೆ ಪ್ರಕಟಿಸಿದ ಹುಕುಮಿನಲ್ಲಿ ಪ್ರಾವಿನ್ಸಿಯಲ್ ಮತ್ತು ಜಿಲ್ಲಾ ಶಾಲೆಗಳ ಅಭ್ಯಾಸದ ಬಗ್ಗೆ ವೇಳೆಯ ಭಾಗವನ್ನು ಈ ಪ್ರಕಾರ ಮಾಡಿದ್ದಾರೆ— ೬ನೇ, ೫ನೇ, ನೇ ವರ್ಗಗಳಿಗೆ ವಾರದಲ್ಲಿ ಇಂಗ್ಲಿಷಕ್ಕೆ ೧೦ ತಾಸು, ಶ ಭಾಷೆಗೆ ೬, ಗಣಿತ ಜ್ಯೋತಿಷ ಶಾಸ್ತ್ರಗಳಿಗೆ ೯, ಇತಿಹಾಸ ಭೂಗೋಲಗಳಿಗೆ ೫— ೩ನೇ, ೨ನೇ, ೧ನೇ ವರ್ಗಳಿಗೆ ವಾರದಲ್ಲಿ ಇಂಗ್ಲಿಷಕ್ಕೆ ೧೦ ತಾಸು, ದೇಶ ಭಾಷೆ ೭||, ಅಂಕಗಣಿತಕ್ಕೆ ೭||, ಇತಿಹಾಸ ಭೂಗೋಲಗಗೆ ೫—

ಈ ಧೊರೆಗಳು ಕಾಲೇಜಗಳಲ್ಲಿಯೂ ಹಾಯಸ್ಕೂಲುಗಳಲ್ಲಿಯೂ ಒಬ್ಬೊಬ್ಬ ಶಿಕ್ಷಕನು ಕೆಲಕೆಲವು ನಿಯಮಿತ ವಿಷಯಗಳನ್ನು ಎಲ್ಲ ವರ್ಗಗಳಿಗೆ ಕಲಿಸುತ್ತಿರಬೇಕೆಂತಲೂ, ಣ್ಣವು ಪ್ರತಿಯು ಶಾಲೆಗಳಲ್ಲಿಯೂ ದೇಶ ಭಾಷೆಯ ಶಾಗಳಲ್ಲಿಯೂ ಒಬ್ಬನೇ ಶಿಕ್ಷಕನು ಒಂದು ವರ್ಗಕ್ಕೆ ಎ ವಿಷಯಗಳನ್ನು ಕಲಿಸುತ್ತಿರಬೇಕೆಂತಲೂ ವಿಧಿಸಿದರು.

ಈ ಸಂಬಂಧದಲ್ಲಿ ಲ್ಯಾಂಡನ್ನೆಂಬವನು ಬರೆಯುವದೇಂದರೆ— " ಅಮೇರಿಕದಲ್ಲಿಯೂ ಬೇರೆ ಕಡೆಯಲ್ಲಿಯೂ ಾವ ಶಿಕ್ಷಕನು ಯಾವ ವಿಷಯಗಳನ್ನು ಒಳಿತಾಗಿ ಬಲ್ಲೋ, ಅವೇ ವಿಷಯಗಳನ್ನು ಕಲಿಸಲಿಕ್ಕೆ ಅವನಿಗೆ ಹೇ

ಳುವ ವಹಿವಾಟವುಂಟು, ವರ್ಗಗಳು ಒಂದು ತಾಸು ಮು
ದ ಕೂಡಲೆ ಮುಂದಿನ ಪಾಠ ಕಲಿಸಲಿಕ್ಕೆ ಶಿಕ್ಷಕನಿದ್ದಲ್ಲಿ
ಹೋಗುತ್ತಿರುತ್ತವೆ. ಈ ಪದ್ಧತಿಯಿಂದ ಶಿಕ್ಷಣವು ಹೆಚ್ಚು
ಬೆಲೆಯುಳ್ಳದ್ದಾಗುತ್ತದೆಂತಲೂ, ಬೇರೆ ಬೇರೆ ಶಿಕ್ಷಕರ ಕೈ
ಕೆಳಗೆ ಕಲಿಯುವದರಿಂದ ಹುಡುಗರ ಮನಸ್ಸು ಹೆಚ್ಚು ಬೇ
ವಿಸ್ತಾರ ಹೊಂದುತ್ತದೆಂತಲೂ, ಬೇರೆ ಬೇರೆ ಶಿಕ್ಷಕರು ಕ
ಲಿಸತಕ್ಕ ವಿಷಯಗಳು ಸ್ವಲ್ಪವೇ ಇರುವದರಿಂದ ಅವರು
ತಮ್ಮ ತಮ್ಮ ವಿಷಯಗಳನ್ನು ಹೆಚ್ಚು ಪೂರ್ಣವಾಗಿ ಕಲಿ
ಸುವಂತೆ ಪೂರ್ವದ ಸಿದ್ಧತೆಯನ್ನು ಮಾಡಿ ಕೊಳ್ಳುತ್ತಾರೆಂ
ತಲೂ ಕೆಲವರ ಅಭಿಪ್ರಾಯವದೆ. ಆದರೆ ಈ ಪದ್ಧತಿಯಲ್ಲಿ
ಶಿಕ್ಷಕರು ಒಮ್ಮೆ ಕಲಿಸಿದ ಬಳಿಕ ಮುಂದೆ ಅದೇ ವಿಷಯ
ವನ್ನು ಯಾವಾಗಲೂ ಕಲಿಸಲಿಕ್ಕೆ ಅವರು ಬೇಸರುವರು
ಅದರಿಂದ ಅವರು ತಮ್ಮ ಕೆಲಸದಲ್ಲಿ ಒಳಿತಾಗಿ ಮನಗ
ಹಾಕದೆ ಯಂತ್ರದಂತೆ ನಿತ್ಯದ ಕೆಲಸವನ್ನು ಮುಗಿಸುವರು.
ಈ ಪದ್ಧತಿಯಲ್ಲಿ ಶಿಕ್ಷಕನು ತನ್ನ ಶಿಕ್ಷಣದ ಕೆಲಸಕ್ಕೆ ಮಾ
ತ್ರ ಲಕ್ಷ್ಯ ಕೊಡತಕ್ಕವನಷ್ಟೇ ಹೊರ್ತು ವಿದ್ಯಾರ್ಥಿಗಳ
ಗುಣ ಸ್ವಭಾವಾದಿಗಳನ್ನು ಅವನು ತಿಳಿದು ಕೊಳ್ಳುವ ಪ್ರ
ಯೋಜನವು ಬಹುತರ ಇಲ್ಲವೇ ಇಲ್ಲ. ವಿದ್ಯಾರ್ಥಿಗಳ
ನಡತೆಯ ಸುಧಾರಣೆಯು ಯಾವತ್ತು ಶಿಕ್ಷಕರನ್ನು ಅವಲಂ
ಬಿಸಿರುವದು; ಅದರಿಂದ ಯಾವನೂ ಅದಕ್ಕೆ ಜವಾಬದಾರನಾ
ಗುವದಿಲ್ಲ. ಒಬ್ಬನೇ ಶಿಕ್ಷಕನು ತನ್ನ ವರ್ಗಕ್ಕೆ ಯಾವತ್ತು
ವಿಷಯಗಳನ್ನು ಕಲಿಸುತ್ತಿದ್ದಲ್ಲಿ ಅವನು ಆ ವರ್ಗದ ಅ
ಭ್ಯಾಸಕ್ಕೂ ನಡತೆಗೂ ನೀತಿಗೂ ಸರಿಯಾಗಿ ಜವಾಬದಾರ
ನಾಗುತ್ತಾನೆ; ಅವನಿಗೂ ಅವನ ವರ್ಗಕ್ಕೂ ಪ್ರೇಮದ ಬ

ಧನವುಂಟಾಗಿ ಉಭಯ ಪಕ್ಷದಲ್ಲಿಯೂ ಚುರುಕತನವು ಬೆಳೆದು ತೊಂದರೆಗಳು ಅಳಿದು ಹೋಗುತ್ತವೆ. ಆದರೆ ಮೇಲೆ ಹೇಳಿದ ಪದ್ಧತಿಯಲ್ಲಿ ಯಾವ ಶಿಕ್ಷಕನಿಗೂ ಯಾವ ವರ್ಗದ ಅಭಿಮಾನವೂ ಉಳಿಯುವದಿಲ್ಲ. ಹುಡುಗರಿಗೆ ಕಲಿಯುವದಷ್ಟೇ ಬೇಕಾಗಿದ್ದರೆ ಮಾತ್ರ ಈ ಪದ್ಧತಿಯು ಹಿತಕರವಾದದ್ದೆಂದು ಹೇಳ ಬಹುದು.”

ಸಾಧಾರಣ ಶಾಲೆಗಳಲ್ಲಿ ಒಂದೊಂದು ವರ್ಗಕ್ಕೆ ಒಬ್ಬನೇ ಶಿಕ್ಷಕನು ಯೆಲ್ಲ ವಿಷಯಗಳನ್ನು ಕಲಿಸುವದೇ ಹಿತಕರವೆಂದು ನಮ್ಮ ಅಭಿಪ್ರಾಯವದೆ. ಈ ಬಗ್ಗೆ ಮೇಲೆ ಹೇಳಿದ ಕಾರಣಗಳನ್ನು ಇಲ್ಲಿ ಮತ್ತೊಮ್ಮೆ ಹೇಳುವ ಪ್ರಯೋಜನವಿಲ್ಲ.

ವೇಳಾಪತ್ರಕದ ನಮೂನೆಯನ್ನು ನಾವು ಕೊಡುವದಿಲ್ಲ. ಪ್ರತಿ ಒಬ್ಬ ಮಾಸ್ತರನು ತನ್ನ ಶಾಲೆಯ ಸ್ಥಿತಿಗತಿಗೆ ತಕ್ಕಂತೆ ತನ್ನ ವೇಳಾಪತ್ರಕವನ್ನು ತಾನೇ ಮಾಡಿಕೊಳ್ಳಲಿಕ್ಕೆ ಬೇಕು. ಹಿಂದೆ ಹೇಳಿದ ತತ್ವಗಳನ್ನು ಚನ್ನಾಗಿ ಅರಿತುಕೊಂಡಂಥ ಮಾಸ್ತರನು ತನ್ನ ವೇಳಾಪತ್ರಕವನ್ನು ಸುಲಭವಾಗಿ ಮಾಡಿ ಕೊಳ್ಳುವನೆಂದು ಯೋಚಿಸುತ್ತೇವೆ. ಆದರೂ ನಮ್ಮ ಮಾಡಿದ ವೇಳಾಪತ್ರಕವು ಕುಂದಿಲ್ಲದ್ದೇ ಆಗತಕ್ಕದ್ದೆಂದು ನಾವು ಹೇಳುವದಿಲ್ಲ. ಮೊದಲು ವಿಚಾರದಿಂದ ಇದನ್ನು ಮಾಡಿಕೊಂಡು, ಮುಂದೆ ಅನುಭವಕ್ಕೆ ಬಂದಂತೆ ಇದರಲ್ಲಿ ಹೆಚ್ಚು ಕಡಿಮೆಗಳನ್ನು ಮಾಡಲಿಕ್ಕೆ ಅಡ್ಡಿ ಇಲ್ಲ.

ರಜಿಸ್ಟರು.

ಮದ್ರಾಸ ಇಲಾಖೆಗಾಗಿ ಮಾಡಿದ ಗ್ರಾಂಟ ಇನ್ ಏಡ್

ಕೋಡೆಂಬ ಕಟ್ಟಳೆಗಳಲ್ಲಿ ಯಾವತ್ತು ಶಾಲೆಗಳಿಗಾಗಿ, ವಿಶೇಷವಾ
ಗಿ ಗ್ರಾಂಟ ಇನ್ ಏಡ್ ಶಾಲೆಗಳಿಗಾಗಿ ರಜಿಸ್ತರಿನ ನಮೂನೆಗ-
ಗೊತ್ತು ಮಾಡಲ್ಪಟ್ಟವೆ. ಅವುಗಳಂತೆ ಯಾವತ್ತು ಶಾಲೆಗಳ
ರಜಿಸ್ತರುಗಳನ್ನು ಇಡಬಹುದು. ಅವುಗಳ ಕಟ್ಟಳೆಗಳು ಏ
ನೆಂದರೆ —

“ ಹುಡುಗರನ್ನು ಶಾಲೆಯಲ್ಲಿ ತಕ್ಕೊಂಡದ್ದು, ಅವ
ಹಜಿರಿ, ಫೀ ವಸೂಲು, ಇವುಗಳ ರಜಿಸ್ತರುಗಳನ್ನು ವಗ
ಕ್ರಮದಂತೆ ಇಡಲಿಕ್ಕೆ ಬೇಕು; ಅವುಗಳನ್ನು ಯಾರಾದರ
ನೋಡಲಿಕ್ಕೆ ಬೇಡಿದರೆ ತೋರಿಸಬೇಕು. ಹಜಿರಿಯು ರಜಿ
ರಿನಲ್ಲಿ ಶಾಲೆಯು ಕೆಲಸ ನಡಿದ ವ್ಯಾಳ್ಯಗಳಲ್ಲಿ ಹುಡು
ರ ಹಜಿರಿ ಗೈರ ಹಜಿರಿಗಳನ್ನು ಬರೆಯಲಿಕ್ಕೆ ಬೇಕು.

“ ಹುಡುಗರನ್ನು ತಕ್ಕೊಂಡ ಬಗ್ಗೆ ಅವರ ಹಜಿರಿ
ಬಗ್ಗೆ ಇಡತಕ್ಕ ರಜಿಸ್ತರುಗಳು (ಅಂದರೆ ಈ ಭಾಗ
ಕಡೆಯಲ್ಲಿ ಕೊಟ್ಟ ೧ನೇ, ೨ನೇ ನಮೂನೆಗಳು) ಗೊತ್ತು
ಮಾಡಿದ ಛಾಪೀ ನಮೂನೆಯ ಬುಕ್ಕುಗಳ ರೂಪದಿಂದ
ಪತಕ್ಕವು; ಅವುಗಳಲ್ಲಿ ಪುಟಗಳ ಅಂಕಿಗಳು ಮೊದಲೆ
ಹಾಕಲಿಕ್ಕೆ ಬೇಕು. ಯಾವತ್ತು ರಜಿಸ್ತರುಗಳಲ್ಲಿ ವಿದ್ಯಾರ್ಥಿ
ಗಳ ಅಡ್ಡ ಹೆಸರುಗಳನ್ನೂ ತಂದೆಗಳ ಹೆಸರುಗಳನ್ನೂ ಪೂ
ರಾ ಬರೆಯಬೇಕು. ರಜಿಸ್ತರಿನಲ್ಲಿ ಬರೆಯತಕ್ಕದ್ದನ್ನು ಮೊ
ದಲು ಪೆನ್ಸಿಲಿನಿಂದ ಬರೆದು ಮುಂದೆ ಬೇಕಾದಾಗ ಅದನ್ನು
ಮಸಿಯಿಂದ ತುಂಬುವದು ಯೆಷ್ಟು ಮಾತ್ರವೂ ಕೆಲಸವಲ್ಲ.
ರಜಿಸ್ತರಿನಲ್ಲಿ ತೆರವು ಸ್ಥಳವನ್ನು ಇಡಲಾಗದು; ಬರೆದದ್ದ
ನ್ನು ಅಳಿಸಿ ಇಲ್ಲವೆ ಕೆರೆದು ಹೊಸ ಲೇಖವನ್ನು ಬರೆ
ರಬಾರದು. ಏನಾದರೂ ತಪ್ಪಾದರೆ ಅದನ್ನು ಕೆಳಗೆ ಟಿಪ್ಪ

ಶೆ ಬರೆದು ತಿಳಿಸಬೇಕು. ರಜಿಸ್ತ್ರರನ್ನು ಹಾಜರು ಮಾಡಹೇಳಿದಾಗ ಅಸಲು ಪ್ರತಿಯನ್ನೇ ಹಾಜರು ಮಾಡಲಿಕ್ಕೆ ಬೇಕು, ಅದರ ನಕಲು ಸಲ್ಲದು. ಶಾಲೆಗಳ ವ್ಯವಸ್ಥಾಪಕರು ಪರೀಕ್ಷೆಯಾದ ಬಳಿಕ ಮೂರು ವರ್ಷಗಳ ವರೆಗೆ ಈ ರಜಿಸ್ತ್ರುಗಳನ್ನು ಇಡಲಿಕ್ಕೆ ಬೇಕು, ಮತ್ತು ಯೋಗ್ಯ ಅ ಕಾರಸ್ಥರು ಬೇಡಿದಾಗ ಇವುಗಳನ್ನು ಹಾಜರು ಮಾಡಲಿಕ್ಕೆ ಬೇಕು. ಲೋಕಲ್ ಬೋರ್ಡಿನವರು ಈ ರಜಿಸ್ತ್ರುಗಳನ್ನು ಗೊತ್ತಾದ ನಮೂನೆಯಂತೆ ಛಾಪಿಸಿ ಮಾಸ್ತ್ರರ ಜನರಿ ಮಾರುತ್ತಿರಬೇಕು; ಆ ನಮೂನೆಗಳನ್ನೇ ಉಪಯೋಗಿಸಬೇಕೆಂದು ಆ ಬೋರ್ಡಿನವರು ಕ್ರಮವು ಮಾಡಬಹುದು. ಇನ್ಸ್ಪೆಕ್ಟರರು ಶಾಲೆಯನ್ನು ತಪಾಸಿಸಲಿಕ್ಕೆ ಹೋದಾಗ ರಜಿಸ್ತ್ರುಗಳ ತುಂಬಿದ ಪುಟಗಳನ್ನು ತಪಾಸಿಸಿ, ಪ್ರತಿ ಒಂದ ಮೇಲೆ ತಾರೀಖು ಹಾಕಿ ಸಹಿ ಮಾಡಬೇಕು.”

ಲ್ಯಾಂಡನ್ನನು ಸರಾಸರೀ ಹಜರಿ ಮುಂತಾದವುಗಳ ಬ ಬರೆದ ಲೇಖವು ಉಪಯುಕ್ತವಾಗಿ ತೋರಿದ್ದರಿಂದ ಅನ್ನು ಕೆಳಗೆ ಅವತರಿಸಿಕೊಂಡಿದ್ದೇವೆ—

“ **ಸರಾಸರಿಯು**—ಅಸಮಾನ ಸಂಖ್ಯೆಗಳ ಮಧ್ಯ ಪ್ರಮಾಣಕ್ಕೆ ಸರಾಸರಿಯೆಂಬ ಹೆಸರು ಕೊಡಲ್ಪಟ್ಟದೆ. ಆ ಸಂಖ್ಯೆಗಳ ಬೇರೀಜಿಗೆ ಅವುಗಳ ಸಂಖ್ಯದಿಂದ ಭಾಗಿಸಿದರೆ ಸರಾಸರಿಯು ಹೊರಡುತ್ತದೆ.

ಸರಾಸರಿ ಹಜರಿಯೆಂದರೆ ಕೆಲವೊಂದು ಮುದ್ದತಿನಲ್ಲಿ ಹಾಜರಿದ್ದ ಹುಡುಗರ ಸರಾಸರೀ ಸಂಖ್ಯವಿರುತ್ತದೆ. ಸರಾಸರಿ ಹಜರಿಗೂ ಹಾಜರಿಗಳ ಸರಾಸರಿ ಸಂಖ್ಯಕ್ಕೂ ಭೇದರುತ್ತದೆ. ಮೊದಲನೇದರಲ್ಲಿ ಹಜರಿಗಳನ್ನು ಇಂತಿಷ್ಟು ವೇ

ಳೆಗಳಲ್ಲಿ ಸಮನಾಗಿ ಮಾಡಿಕೊಳ್ಳುತ್ತೇವೆ; ಅದರಿಂದ ಆ ವೇಳೆಗಳಲ್ಲಿ ಹುಡುಗರ ಸಂಖ್ಯೆಯು ಹೊರಡುತ್ತದೆ. ಎರಡನೇದರಲ್ಲಿ ಯಾವತ್ತೂ ಹಜರಿಗಳನ್ನು ಕೂಡಿಸಿ ಹಾಜರಿದ್ದ ಹುಡುಗರೊಳಗೆ ಸರಿ ಪಾಲಾಗಿ ಹಂಚುತ್ತೇವೆ; ಅದರಿಂದ ವೇಳಾ ಪ್ರಕಾಶಕದ ಸಂಖ್ಯೆಯು ಹೊರಡುತ್ತದೆ.

ಸರಾಸರಿ ಹಜರಿಯನ್ನು ತೆಗೆಯಬೇಕಾದರೆ, ಹೇಳಿದ ಮುದ್ದತಿನಲ್ಲಿ ಹುಡುಗರ ಹಜರಿಗಳ ಬೇರೀಜು ಮಾಡಿ, ಶಾಲೆಯು ನಡೆದ ದಿವಸಗಳ ಸಂಖ್ಯೆದಿಂದ ಭಾಗಿಸಬೇಕು; ಭಾಗಾಕಾರವೇ ಸರಾಸರೀ ಹಜರಿಯು.

ಹಾಜರಿದ್ದ ಹುಡುಗರ ಹಜರಿಗಳ ಸರಾಸರೀ ಸಂಖ್ಯೆಯನ್ನು ತೆಗೆಯಬೇಕಾದರೆ, ಹೇಳಿದ ಮುದ್ದತಿನಲ್ಲಿ ಅವರ ಹಜರಿಗಳ ಬೇರೀಜಿಗೆ ಹಾಜರಿದ್ದ ಹುಡುಗರ ಸಂಖ್ಯೆದಿಂದ ಭಾಗಿಸಬೇಕು.

ತ್ರೈಮಾಸಿಕ ಸರಾಸರಿಯನ್ನೂ ವಾರ್ಷಿಕ ಸರಾಸರಿಯನ್ನೂ ಮಾಸಗಳ ಸರಾಸರಿಗಳ ಬೇರೀಜಿನಿಂದ ತೆಗೆಯಬಾರದು. ಅದರಿಂದ ಯಥಾರ್ಥವಾದ ಸರಾಸರಿಯು ಹೊರಡುವದಿಲ್ಲ.

ಹಾಜರಿದ್ದ ಹುಡುಗರ ಪತ್ರಕವೆಂದರೆ, ಹೇಳಿದ ಮುದ್ದತಿನಲ್ಲಿ ನಿಕೃಷ್ಟ ಪಕ್ಷಕ್ಕೆ ಅರ್ಧ ದಿವಸವಾದರೂ ಹಾಜರಿದ್ದಂಥ ಹುಡುಗರ ಪತ್ರಕವೆಂದು ತಿಳಿಯಬೇಕು.

ರಜಿಸ್ತರಿನ ಸಂಖ್ಯೆಯೆಂದರೆ, ಪತ್ರಕವನ್ನು ಕಳಿಸುವ ಪೂರ್ವದಲ್ಲಿ ತೆಗೆದು ಹಾಕಿದ ಹುಡುಗರನ್ನು ಬಿಟ್ಟು ಉಳಿದ ಯಾವತ್ತು ಹುಡುಗರ ಸಂಖ್ಯೆಯಿರುತ್ತದೆ.

ಹಿಂದಿನ ವರ್ಷದಲ್ಲಿ ಶಾಲೆಯನ್ನು ಬಿಟ್ಟ ಹುಡುಗರ ಸಂಖ್ಯೆಯು ವರ್ಷಾರಂಭದಲ್ಲಿ ಯಾವತ್ತು ವರ್ಗಗಳ ರಜಿಸ್ತ

ರುಗಳಲ್ಲಿಯು ಸಂಖ್ಯೆಗಳ ಬೇರೀಜಿನಲ್ಲಿ ಆ ವರ್ಷದೊಳಗೆ ಹೊಸದಾಗಿ ಬಂದ ಹುಡುಗರ ಸಂಖ್ಯೆಯನ್ನು ಕೂಡಿಸಿ ವರ್ಷದ ಕಡೆಯಲ್ಲಿ ಆ ರಜಿಸ್ತರುಗಳಲ್ಲಿ ಉಳಿದ ಸಂಖ್ಯೆಗಳ ಬೇರೀಜು ಅದರಲ್ಲಿ ಕಳಿ, ಉಳಿದದ್ದು ಇಚ್ಛಿತ ಸಂಖ್ಯೆಯಾಗುವದು.

—o—

Education and Improvement.

ವಿದ್ಯಾಸುಧಾರಣೆಗಳ ಸಂಬಂಧವಾದ ವೃತ್ತಾಂತಗಳು.

ಈ ತಿಂಗಳಿನ ೯ನೇ ತಾರೀಖಿನಲ್ಲಿ ಧಾರವಾಡದೊಳಗಿನ ತ್ರೀ ಶಾಲೆಗಳಲ್ಲಿ ಕಲಿಯುವ ಹೆಣ್ಣು ಮಕ್ಕಳಿಗೆ ಇನಾಮು ಡುವ ಸಮಾರಂಭವಾಯಿತು. ಈ ಸಮಾರಂಭಕ್ಕೆ ಆಕ್ಟಿಂ ರೆವಿನ್ಯೂ ಕಮಿಶನರರಾದ ಮಿ. ಮಿಡಲ್ಟನ್ ದೊರೆಗಳು ತ್ನಿ ಸಹಿತವಾಗಿ ಬಂದಿದ್ದರು. ಆದರೆ ಊರೊಳಗಿನ ಸಭ್ಯ ಹಸ್ಥರಿಗೆ ಆಮಂತ್ರಣವು ವ್ಯಾಳ್ಯಕ್ಕೆ ಮುಟ್ಟಲಿಲ್ಲೆಂದು ರುತ್ತದೆ. ರಾ. ಸಾ. ಪಟವರ್ಧನ ಸಾಹೇಬರಿಗೆ ಈ ಸಮಾ ಂಭದ ಸುದ್ದಿಯೇ ತಿಳಿಯಲಿಲ್ಲೆಂದು ಕೇಳುತ್ತೇವೆ. ಸಮಾರಂಭ ಆರಂಭದಲ್ಲಿ ರಾ. ಸಾ. ದೊಡ್ಡ ಶ್ರೀನಿವಾಸರಾಯರು ತಿಳಿಸಿ ಸಂಗತಿಗಳೇನಂದರೆ—ಈ ಊರೊಳಗಿನ ಹೆಣ್ಣುಮಕ್ಕಳ ಶಾ ಗಳು ಸನ್ ೧೮೮೫ನೇ ವರ್ಷ ಮ್ಯುನಸಿಪಾಲಿಟಿಯವರ ವ ಕ್ಕೆ ಹೋದಾಗ ಯೆಲ್ಲ ಶಾಲೆಗಳಲ್ಲಿ ಕೂಡಿ ೨೫೯ ನ ವಿದ್ಯಾರ್ಥಿನಿಯರು ಕಲಿಯುತ್ತಿದ್ದರು. ಆದರೆ ಈಗ ೮೭ ಜನ ವಿದ್ಯಾರ್ಥಿನಿಯರು ಕಲಿಯುತ್ತಾರೆ. ಅಂದರೆ ೪ ವ ಗಳಲ್ಲಿ ೧೩೮ ಜನರು ಹೆಚ್ಚಾದರು. ಹೋದ ವರ್ಷಕ್ಕಿಂತ

ಈ ವರ್ಷ ೪೦ ಜನರು ಹೆಚ್ಚಿರುತ್ತಾರೆ. ಸದ್ಯಕ್ಕೆ ಹಾಯಸ್ಕೂಲಿನಲ್ಲಿ ಜಡ್ಜರಾಗಿರುವ ಮಿ. ಬಾರ್ಡಾಯಿನ್ ಧೊರೆಗಳು ಇಲ್ಲಿಯ ಹೆಣ್ಣು ಮಕ್ಕಳ ವಿದ್ಯಾಭಿವೃದ್ಧಿಗಾಗಿ ಬ್ಯಾಂಕಿನಲ್ಲಿ ಇಟ್ಟ ೧೦೦೦ ರೂಪಾಯಿಯ ಬಡ್ಡಿಯೊಳಗಿಂದ ಇಬ್ಬರು ವಿದ್ಯಾರ್ಥಿನಿಯರಿಗೆ ಇಪ್ಪಿಪ್ಪತ್ತು ರೂಪಾಯಿಯ ಎರಡು ಇನಾಮುಗಳು ಪ್ರತಿ ವರ್ಷ ದೊರೆಯುತ್ತಿರುತ್ತವೆ. ಆ ಇನಾಮುಗಳಿಗಾಗಿ ೧೪ ಜನ ವಿದ್ಯಾರ್ಥಿನಿಯರು ಪರೀಕ್ಷೆಗೆ ಕೂತಿದ್ದರು. ಅವರಲ್ಲಿ ರಂಗೂಬಾಯಿ, ಅವ್ವಕ್ಕ, ಯೆಂಬವರಿಬ್ಬರು ಪಾಸಾದದ್ದರಿಂದ ಅವರಿಗೆ ಇನಾಮುಗಳು ಈ ಸಮಾರಂಭದಲ್ಲಿ ಕೊಡತಕ್ಕವವೆ. ಇದೇ ಮೇರೆಗೆ ಜುಬಲೀ ಕಮಿಟಿಯವರ ಕಡಿಂದ ವರ್ಷಕ್ಕೆ ೬ ರೂಪಾಯಿಯದೊಂದು, ೪ ರೂಪಾಯಿಯದೊಂದು, ಹೀಗೆ ಯೆರಡು ಇನಾಮುಗಳು ದೊರೆಯುತ್ತಿರುತ್ತವೆ. ಅವು ಈ ವರ್ಷ ಕುರುಬರ ಶಂಕರವ್ವ, ಬೂದವ್ವ, ಇವರಿಬ್ಬರಿಗೆ ಕೊಡತಕ್ಕವಿರುತ್ತವೆ. ಇದಾದ ಬಳಿಕ ಮಿ. ಮಿಡಲ್ಟನ್ ಧೊರೆಗಳು ಸ್ತ್ರೀಶಿಕ್ಷಣದ ಪ್ರಸಾರವು ಬೆಳೆಯುತ್ತ ನಡೆದದ್ದಕ್ಕೆ ಆನಂದವನ್ನು ಪ್ರಕಟಿಸಿ ಭಾಷಣ ಮಾಡಿದ ನಂತರ ಅವರ ಪತ್ನಿಯವರು ೫೭ ಜನ ಹೆಣ್ಣು ಮಕ್ಕಳಿಗೆ ವಾರ್ಷಿಕ ಇನಾಮುಗಳನ್ನೂ ಮೇಲೆ ಹೇಳಿದ ಇನಾಮುಗಳನ್ನೂ ಹಂಚಿದರು.

—ooo—

ರಾ. ಸಾ. ದೊಡ್ಡ ಶ್ರೀನಿವಾಸರಾಯರು ವಾತವಿಕಾರದಿಂದ ಸ್ವಲ್ಪ ಅಸ್ವಸ್ಥರಾಗಿದ್ದಾರೆಂದು ಹಿಂದೆ ತಿಳಿಸಿದ್ದೇವೆ. ಆ ಸಂಬಂಧದಿಂದ ಅವರು ೨೧ ದಿವಸದ ಹಕ್ಕಿನ ರಜೆಯನ್ನು ಬೇಡಿಕೊಂಡಿದ್ದಾರೆ. ಅವರ ಕೆಲಸವನ್ನು ಅಸಿಸ್ಟಂಟ ಡೆಪ್ಯುಟೀ

ಇನ್ಸ್ಪೆಕ್ಟರರಾದ ಮಿ॰ ಪಠಾಣಸಾಹೇಬರಿಗೆ ಅಕ್ಟಿಂಗ ಪ್ರಕಾರ ಕೊಡತಕ್ಕವರಿದ್ದಾರೆಂದು ತಿಳಿದದೆ.

* * *

ವಿಜಾಪುರದ ಕಾಯಿಮ್ ಡಿ. ಇ. ರಾದ ರಾ. ಸಾ. ರಾಮಚಂದ್ರ ವಿನಾಯಕ ಭಾನಪ ಇವರು ತಮ್ಮ ಆಜಾರೀ ರಜೆಯನ್ನು ಮತ್ತೆ ೬ ತಿಂಗಳು ಬೆಳಸಿಕೊಂಡರು.

* * *

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಬಡಿಗ ಕಂಮಾರರ ಕೆಲಸಗಳನ್ನು ಕಲಿಸುವ ಶಿಕ್ಷಕರನ್ನಿಡುವ ಉದ್ಯೋಗವು ನಡೆದದೆಂದು ಹಿಂದೆ ತಿಳಿಸಿದ್ದೇವೆ. ಆ ಉದ್ಯೋಗವು ಸಫಲವಾಗಿ ಒಬ್ಬ ಬಡಿಗ, ಒಬ್ಬ ಕಂಮಾರ, ಹೀಗೆ ಇಬ್ಬರು ಶಿಕ್ಷಕರನ್ನು ಇಡುವ ಬಗ್ಗೆ ವರಿಷ್ಟಾಧಿಕಾರಿಗಳ ಸಂಮತಿಯು ದೊರಿದದೆಂತಲೂ, ಈ ವಿಷಯಗಳ ಅಭ್ಯಾಸಗಳು ಮುಂದಿನ ೧೦ ನೇ ತಾರೀಖಿನಿಂದ ಆರಂಭವಾಗತಕ್ಕವಿರುತ್ತವೆಂತಲೂ ಕೇಳುತ್ತೇವೆ.

* * *

ಇಲ್ಲಿಯ ಅಸಿ. ಡೆ. ಇ. ರಾದ ರಾ. ರಾ. ಅಪ್ಪಾಜಿ ಬಾಬೂರಾವ ದಿದೇಕರ ಇವರನ್ನು ವಿಜಾಪೂರಕ್ಕೆ ನೇಮಿಸಿ, ಅಲ್ಲಿಯ ರಾ. ರಾ. ಯಜ್ಞೇಶ್ವರ ವೆಂಕಾಜೀ ಇವರನ್ನು ಧಾರವಾಡಕ್ಕೆ ನೇಮಿಸಿದರು.

* * *

ಈ ದಕ್ಷಿಣಭಾಗದ ನಾಲ್ಕು ಜಿಲ್ಲೆಗಳಲ್ಲಿ ವಿದ್ಯಾಭ್ಯಾಸವು ದಿನದಿನಕ್ಕೆ ಕಳೆಗುಂದುತ್ತ ನಡೆದದೆಂದು ಬಹಳ ಖೇದವನ್ನು ಪ್ರಕಟಿಸಿ ಒಬ್ಬ ಗೃಹಸ್ಥನು ನಮಗೆ ಪತ್ರವನ್ನು ಬರಿದಿದ್ದಾ

ನೆ. ಆದರೆ ಅದಕ್ಕೆ ಸಮರ್ಪಕವಾದ ಆಧಾರವನ್ನು ಅವನು ತೋರಿಸುವದಿಲ್ಲ. ಇದಲ್ಲದೆ ಅವನು ಅಧಿಕಾರಿಗಳನ್ನು ನಿರರ್ಥಕವಾಗಿ ಜರೆದಿದ್ದಾನೆ. ಆ ಕಾರಣ ಅವನ ಪತ್ರಕ್ಕೆ ನಾವು ಸ್ಥಳಕೊಡಲಾರೆವು. ವಿದ್ಯಾಖಾತೆಯ ಅಧಿಕಾರಿಗಳ ನಿಂದೆಗಳನ್ನು ಪ್ರಸಿದ್ಧಿಸತಕ್ಕ ಸ್ಥಳವು ಶಾಲಾಪತ್ರಕವಲ್ಲೆಂಬದನ ನಾವು ನಿಷ್ಠುರವಾಗಿ ತಿಳಿಸುತ್ತೇವೆ.

—○○○—

ಹೆಸರಾದ ಪಂಡಿತಾ ರಮಾಬಾಯಿಯು ಈ ತಿಂಗಳಲ್ಲಿ ಪುಣೆಯಲ್ಲಿ ಸ್ತ್ರೀ ಶಿಕ್ಷಣವನ್ನು ಕುರಿತು ಎರಡು ವ್ಯಾಖ್ಯಾನಗಳನ್ನು ಕೊಟ್ಟಳು. ರಮಾಬಾಯಿಯು ಸ್ವರ, ಭಾಷಾಸರಣಿ ಮಾಧುರ್ಯ, ವಿಷಯದ ಪ್ರತಿಪಾದನ, ಇವೆಲ್ಲ ವರ್ಣಸ ಕ್ಯಂಥವಿದ್ದವೆಂದು ಪುಣೆಯ ಪತ್ರಗಳು ಹೇಳುತ್ತವೆ. ಎ ಡೂ ವ್ಯಾಖ್ಯಾನಗಳಲ್ಲಿ ಬಹು ದೊಡ್ಡ ಸಮಾಜವು ಕೂ ತ್ತು. ವ್ಯಾಖ್ಯಾನದ ಸಾರಾಂಶವೇನಂದರೆ— ಸುಮಾರು ೫೦ ವರ್ಷಗಳ ಹಿಂದೆ ನಮ್ಮ ದೇಶದಲ್ಲಿಯಂತೇ ಅಮೇರಿಕದಲ್ಲಿ ಸ್ತ್ರೀ ಶಿಕ್ಷಣಕ್ಕೆ ವಿರೋಧಿಗಳಿದ್ದರು. ಆದರೆ ಅಲ್ಲಿಯ ಹೆಂಗಸರ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿ, ವಿರೋಧಿಗಳನ್ನು ಹೋಯ್ದು, ವಿದ್ಯಾಭ್ಯಾಸವನ್ನು ಪರಮಾವಧಿಯಾಗಿ ಬೆಳೆಸಿಕೊಂಡು ಈ ಹೊತ್ತಿಗೆ ಎಲ್ಲ ಮಾತಿನಲ್ಲಿ ಗಂಡಸರಿಗೆ ಸರಿಯಾಗಿ ನಾನಾ ಪ್ರಕಾರದ ಹೋರೆಗಳನ್ನು ಮಾಡುತ್ತಾರೆ. ಆದರಿಂದ ಅವರ ದೇಶಕ್ಕೆ ಬಹಳ ಕಲ್ಯಾಣವಾಗಿದೆ. ಅವರಂತೆ ನಮ್ಮ ದೇಶದ ಹೆಂಗಸರು ಮುಂದಕ್ಕೆ ಬಂದು ತಮ್ಮ ಹಕ್ಕುಗಳನ್ನು ಸ್ಥಾಪಿಸಿ ವಿದ್ಯದಲ್ಲಿ ಪ್ರವೀಣರಾಗಿ ಗಂಡಸರನ್ನು ನಾಚಿಸಬೇಕೆಂದು ವ್ಯಾಖ್ಯಾನಕರ್ತ್ರಿಯು ಪ್ರತಿಪಾದಿಸಿದಳು. ಈ ವ್ಯಾ

ಖ್ಯಾನವನ್ನು ಕುರಿತು ಚರ್ಚೆಯು ಸಭೆಯಲ್ಲಿ ನಡೆಯಲಿಲ್ಲ. ಆದರೆ ಅಧ್ಯಕ್ಷರು ತಮ್ಮ ಭಾಷಣದ ಕಡೆಯಲ್ಲಿ ಅಮೇರಿಕದ ಹೆಂಗಸರಂತೆ ವ್ಯಾಖ್ಯಾನ ಕರ್ತ್ರಿಯಾದರೂ ಪ್ರಖ್ಯಾತ ಸ್ತ್ರೀಯಾಗಿರುತ್ತಾಳೆ; ಆಕೆಯು ತನ್ನಂತೆ ತನ್ನ ದೇಶ ಭಗಿನಿಯರೆಲ್ಲರು ಖ್ಯಾತಿಯನ್ನು ಪಡೆಯಬೇಕೆಂದು ಬೋಧಿಸುವದು ಯಥಾ ಯೋಗ್ಯವಿರುತ್ತದೆ, ಯೆಂದು ಅಭಿಪ್ರಾಯವನ್ನು ಪ್ರಕಟಿಸಿದರು.

—೦೦೦—

ಬಂಗಾಲ ಇಲಾಖೆಯ ಹುಶಾರಪುರವೆಂಬಲ್ಲಿ ಒಬ್ಬ ವಿದ್ಯಾರ್ಥಿಯು ತನ್ನ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯು ಇಳಿಯಲಿಲ್ಲೆಂಬ ದುಃಖದಿಂದ ಹೊಗೆ ಬಂಡಿಯ ರೂಳಿನ ಮೇಲೆ ಬಂಡಿ ಹಾದು ಹೋಗುವಾಗ ತನ್ನ ತಲೆಯನ್ನಿಟ್ಟು ಮಲಗಿ ಜೀವಕೊಟ್ಟನು. ಈ ಬಗೆಯ ವಿದ್ಯಾವ್ಯಸನದ ಮಾದರಿಯು ಪರದೇಶಗಳಲ್ಲಿ ದೊರೆಯುವದೋ?

—೦೦೦—

ಚೀನಾ ದೇಶದಲ್ಲಿ ಕೆಲವು ದಿವಸಗಳ ಹಿಂದೆ ಆದ ದೊಡ್ಡ ಪರೀಕ್ಷೆಯಲ್ಲಿ ಅಸಂಖ್ಯ ಉಮೇದವಾರರು ಕೂಡಿದ್ದರು. ಅವರಲ್ಲಿ ೯೦ ವರ್ಷದ ವಯಸ್ಸಿನವರು ೭ ಜನ, ೮೦ ವರ್ಷದವರು ೧೩ ಜನ, ಈ ಪ್ರಕಾರ ಚಿಕ್ಕ ಚಿಕ್ಕ ಪ್ರಾಯದ ಬಾಲಕರು ಬಂದಿದ್ದರಂತೆ!

—೦೦೦—

ವಿದ್ವಾಂಸರೂ ದೇಶಾಭಿಮಾನಿಗಳೂ ಯೆಂದು ಹೆಸರು ಪಡೆದಂಥ ರಾ. ಸಾ. ವಿಶ್ವನಾಥ ನಾರಾಯಣ ಮಂಡಲೀಕ ಇವರು ಈ ತಿಂಗಳಿನ ೯ನೇ ತಾರೀಖಿನಲ್ಲಿ ಮುಂಬಯಿಯಲ್ಲಿ

ಮರಣ ಹೊಂದಿದ್ದು ಕೇಳಿ ಯಾರಿಗೂ ಕ್ಲೇಶವಾಗದೆ ಇರತಿ
ಕ್ಕಿಲ್ಲ. ಇವರ ಉದ್ಯೋಗ, ನೀತಿ, ಸುಶೀಲತನ, ಸರಳವಾ
ರ್ಗ, ವಿದ್ವತ್ವ, ಮುಂತಾದ ಸದ್ಗುಣಗಳು ಹೊಗಳತಕ್ಕಂಥವಿ
ದ್ದವು. ಒಳಗಡೆಯಲ್ಲಿ ಪ್ರಾಚೀನ ಧರ್ಮಶಾಸ್ತ್ರ ಗ್ರಂಥಗಳ
ನ್ನು ಪ್ರಸಿದ್ಧಿಸುವ ಕೆಲಸದಲ್ಲಿ ಇವರು ಬಹಳ ಶ್ರಮ ಮಾಡು
ತ್ತಿದ್ದರು. ಇವರಿಂದ ೭ ಟೀಕೆಗಳೊಂದಿಗೆ ಭಾಷಿಸಲ್ಪಟ್ಟ ಮ
ನುಸ್ಮೃತಿಯು ಚಿರಕಾಲವಾಗಿ ಇವರ ಹೆಸರನ್ನು ಅಲಂಕರಿ
ಸುವದೆಂಬದಕ್ಕೆ ಸಂದೇಹವಿಲ್ಲ. ಇನ್ನೊಬ್ಬ ಮಂಡಲೀಕನು
ಬೇಗ ಪ್ರಕಟವಾಗುವನೋ?

—ooo—

ಫ್ರೆಂಚ ದೇಶದಲ್ಲಿ ಅತ್ಯಂತ ಬೀಭತ್ಸವಾದಂಥ ನಾಟಕ
ಗಳನ್ನೂ ಕಾದಂಬರಿಗಳನ್ನೂ ಪ್ರಸಿದ್ಧಿಸುವ ನಡಾವಳಿಯುಂ
ಟು. ಅಂಥಾ ಗ್ರಂಥಗಳನ್ನು ಯಾರೂ ಭಾಷಾಂತರಿಸ ಬಾರದೆಂ
ದು ಮುಂಬಯಿ ಸರಕಾರದವರು ಹುಕುಮು ಮಾಡಿದ್ದಾರೆ.

—ooo—

ತಾರಾಪುರವೆಂಬಲ್ಲಿ ಒಬ್ಬ ಪಾರ್ಸೀ ಗೃಹಸ್ಥನು ಅಡವಿ
ಯಲ್ಲಿ ಹೋಗುತ್ತಿರುವಾಗ ಒಂದು ಘಟಸರ್ಪವನ್ನು ಕಂಡ
ನು. ಅವನು ಅದನ್ನು ಕೊಲ್ಲುವಷ್ಟರಲ್ಲಿ ಅದರ ತಲೆಯೊಳ
ಗಿಂದ ಒಂದು ಮಣಿಯು ಕೆಳಗೆ ಬಿತ್ತು. ಆ ಮಣಿಯು ಸರ್ಪ
ದಂಶಕ್ಕೆ ಅತ್ಯುತ್ತಮವಾದ ಔಷಧವಾಗಿದೆ. ಹಾವು ಕಡಿದ ಸ್ಥ
ಳಕ್ಕೆ ಆ ಮಣಿಯನ್ನು ಹಚ್ಚಲಾಗಿ, ಅದು ಅಲ್ಲೇ ಅಂಟಿಕೊಂ
ಡು ವಿಷವನ್ನೆಲ್ಲ ಹೀರಿಕೊಂಡ ಬಳಿಕ ಕೆಳಗೆ ಬೀಳುತ್ತದೆ.
ಇಂಥಾ ಕಥೆಗಳನ್ನು ಬಹು ಜನರು ಬಹಳ ಸಾರಿ ಕೇಳಿರಬಹು
ದು. ನಿಜವಿದ್ದರೆ ಈ ಮಣಿಯ ಪ್ರಕಾಶವು ಬೈಲಿಗೆ ಬರದೆ ಇ

ಳಲಿಕ್ಕಿಲ್ಲ.

—೦೦೦—

ಯುರೋಪದ ಜನರು ವಿಮಾನಗಳನ್ನು ಮಾಡಿ ಹಾರಿಸುವ ಪ್ರಯತ್ನವನ್ನು ನಡಿಸಿದ್ದಾರೆ. ಕೆಲವು ದಿವಸಗಳ ಹಿಂದೆ ಸ್ಪೆನ್ಸರನೆಂಬವನು ಮುಂಬಯಿಯಲ್ಲಿಯೂ ಕಲಕತ್ತೆಯಲ್ಲಿಯೂ ತನ್ನ ವಿಮಾನ ಹಾರಿಸಿದ ಸಂಗತಿಯನ್ನು ತಿಳಿಸಿದ್ದೇವೆ. ಅವನ ವಿಮಾನ ನೋಡಿ, ಅದನ್ನು ಹಾರಿಸುವ ಕ್ರಮಗಳನ್ನು ಅರಿತುಕೊಂಡು ಕಲಕತ್ತೆಯ ಬಾಬೂ ರಾಮಚಂದ್ರ ಚತರ್ಜಿಯೆಂಬ ಘಟ್ಟಿಗನು ಸ್ಪೆನ್ಸರನ ವಿಮಾನದಲ್ಲಿ ತಾನೊಬ್ಬನೇ ಕೂತು ಅದನ್ನು ಹಾರಿಸಿ ಬಹಳ ಯೆತ್ತರದವರೆಗೆ ಹೋಗಿ ಸುರಕ್ಷಿತವಾಗಿ ಕೆಳಗಿಳಿದು ಬಂದನು. ಬಾಬೂ ರಾಮಚಂದ್ರನು ತನ್ನ ಸ್ವಂತ ವಿಮಾನವನ್ನು ಮಾಡಿಕೊಂಡು ಪ್ರಯತ್ನ ನಡಿಸುವನೋ?

—೦೦೦—

ಮುಂಬಯಿಯಲ್ಲಿ ಪಟ್ಟಣತುಂಬ ವಿದ್ಯುದ್ದೀಪಗಳನ್ನು ಹಚ್ಚುವ ಆಲೋಚನೆಯನ್ನು ಅಲ್ಲಿಯ ಮ್ಯುನಿಸಿಪಾಲಿಟಿಯವರು ನಡಿಸಿದ್ದಾರೆ.

—೦೦೦—

ಪಕ್ಷಿಗಳಲ್ಲಿ ಶಹಾಮೃಗವೇ ಯೆಲ್ಲಕ್ಕೂ ದೊಡ್ಡದೆಂದು ಬಹು ಜನರ ನಂಬಿಗೆಯುಂಟು. ಆದರೆ ನ್ಯೂಝೀಲಂಡದಲ್ಲಿ ಒಂದು, ಮಾದಾಗಾಸ್ಕರದಲ್ಲಿ ಮತ್ತೊಂದು, ಹೀಗೆ ಯೆರಡು ಬಹು ದೊಡ್ಡ ಜಾತಿಯ ಪಕ್ಷಿಗಳಿರುತ್ತವೆ. ಮೊದಲನೇದರ ತತ್ತಿಯು ೧೩ ಇಂಚು (೧ ಗೇಣಿಗಿಂತ ಹೆಚ್ಚು) ಉದ್ದ, ೭ ಇಂಚು ಪಿಂಡ. ಉಳಿದ ದತ್ತದೊಂದು ಲೇಖವಿದೆ. ಈ ಪಕ್ಷಿಯು

ಹೆಸರು ಡಿನೋರ್ನಿಸ್, ಮಾದಾಗಾಸ್ಕರದ ಪಕ್ಷಿಯ ಹೆಸರು ಎಪಿಯೋರ್ನಿಯುಸ್, ಇದು ೧೬ ಫೂಟು, ಅಂದರೆ ಒಂದು ದೊಡ್ಡ ಆನೆಯಷ್ಟು, ಯೆತ್ತರವಿರುತ್ತದೆ ಇದರ ತತ್ತಿಯು ಶಹಾಮೃಗದ ೬ ತತ್ತಿಗಳಷ್ಟು, ಅಂದರೆ ೬ ತೆಂಗಿನಕಾಯಿಗಳಷ್ಟು ದೊಡ್ಡದಿರುತ್ತದೆ.

—೦೦೦—

Notices.

ನೋಟೀಸುಗಳು

ರಜೆಯ ಮೇಲೆ ಹೋಗುವಂಥ ಸರಕಾರೀ ನೌಕರರಿಗೆ
ವೈದ್ಯಖಾತೆಯ ಅಧಿಕಾರಸ್ಥರು ಸರ್ಟೀಫಿಕೇಟುಗಳನ್ನು ಕೊಡುವ ವಿಷಯದಲ್ಲಿ
ನಂಬರು ೩೮೨೬
ಜನರಲ್ ಖಾತೆ.

ಮುಂಬಯಿ ಕೋಟೆ, ತಾ. ೩೦ ಆಗಟಂಬರ ೧೮೮೮.

ಅಕೌಂಟಂಟ ಜನರಲ್ಲರು ತಮ್ಮ ಜಿ. ನಂಬರು-೧೫೫೩೩ ತಾರೀಖು ೩೦ ಅಗಷ್ಟ ೧೮೮೮ನೇ ಪತ್ರದಲ್ಲಿ ಬರೆದದ್ದು.

“ನಾವು ಜನರಲ್ ಖಾತೆಯ ನಂಬರು ೨೭೬೪, ತಾ. ೭ ನೇ ಅಗಷ್ಟ ೧೮೮೮ ಇ. ಯ ಠರಾವನ್ನು ಸರಕಾರದವರ ಲಕ್ಷ್ಯಕ್ಕೆ ತರುತ್ತೇವೆ. ಆ ಠರಾವಿನ ಪ್ರಕಾರ, ಸರಕಾರೀ ನೌಕರನು ತನ್ನ ಕಚೇರಿಯ ಅಥವಾ ಖಾತೆಯ ಮುಖ್ಯಸ್ಥನಿಂದ ಪತ್ರವನ್ನು ತಂದ ಹೊರ್ತು, ಆ ನೌಕರನು ಮುಂದೆ ಕೆಲಸ ಮಾಡಲಿಕ್ಕೆ ಪೂರ್ಣವಾಗಿಯೂ ಶಾಹೀವಾಗಿಯೂ ಅಸಮ

ರ್ಥನಿರುತ್ತಾನೆಂದು ವೈದ್ಯಖಾತೆಯ ಅಧಿಕಾರಸ್ಥರು ಸರ್ಟೀಫಿಕೇಟುಗಳನ್ನು ಕೊಡಲಾಗದು. ಆದರೆ ಈ ನಿಯಮದಿಂದ, ಯಾವನೊಬ್ಬ ನೌಕರನಿಗೆ ಔಷಧೋಪಚಾರವನ್ನು ಹೊಂದಲಿಕ್ಕೆ ಇರುವ ಹಕ್ಕಿಗೂ ರಜೆಗಾಗಿ ಸರ್ಟೀಫಿಕೇಟನ್ನು ಪಡೆಕೊಳ್ಳುವಬಗ್ಗೆ ಅರ್ಜಿ ಮಾಡಲಿಕ್ಕೂ ಅಡ್ಡಿ ಇರುವದಿಲ್ಲ."

೨ "ಆದರೆ ಸಿವ್ಹಿಲ್ ಲೀವ ಕೋಡಿನ ಕಲಮು ೧೪೩ (ಬ) ೧ನೇ ನೇಮದಂತೆ ರಜೆಯನ್ನು ಬೇಡುವವನು ತನ್ನ ಕಚೇರಿಯ ಮುಖ್ಯಸ್ಥನಿಂದ ಪತ್ರವನ್ನು ತಾರದೆ, ಒಂದು ವೇಳೆ ತಾನೇ ಮುಖ್ಯನಿದ್ದಲ್ಲಿ ತನ್ನ ಖಾತೆಯ ಮುಖ್ಯಸ್ಥನಿಂದ ಪತ್ರವನ್ನು ಪಡಕೊಳ್ಳದೆ, ತಾನಿರುವ ಸ್ಥಳದ ಇಲ್ಲವೆ ಜಿಲ್ಹೆಯ ಮುಖ್ಯ ವೈದ್ಯನ ಕಡೆಗಾಗಲಿ ಇಲಾಖೆಯ ಸರ್ಜನ್ನನ ಕಡೆಗಾಗಲಿ ಹೋಗಕೂಡದು."

೩ "ಒಳಗಡೆಯಲ್ಲಿ ಈ ಕಚೇರಿಯೊಳಗಿನ ಒಬ್ಬ ಕಾರಕೂನನು ನಮಗೆ ತಿಳಿಸದೆ ಇಲಾಖೆಯ ಸರ್ಜನ್ನನಿಗೆ ಭೇಟಿಯಾಗಿ, ರಜೆಗೆ ಪಾತ್ರನಿದ್ದಾನೆಂಬ ಸರ್ಟಿಫಿಕಿಟನ್ನು ಸಂಪಾದಿಸಿದನು. ನಾವು ಸಿವ್ಹಿಲ್ ಕೋಡಿನೊಳಗಿನ ಮೇಲಿನ ಕಲಮನ್ನು ಆ ಸರ್ಜನ್ನನ ಲಕ್ಷಕ್ಕೆ ತರಲು ಅವನು ತಿಳಿಸಿದ್ದು ಆಜಾರಿಯ ರಜೆಯ ಪೂರ್ತೆ ಸರ್ಟೀಫಿಕೇಟನ್ನು ದೊರಕಿಸಲಿಕ್ಕೆ ಇಲಾಖೆಯ ಸರ್ಜನ್ನನ ಕಡೆಗೆ ಯಾವನೊಬ್ಬ ನೌಕರನು ಅರ್ಜಿ ಮಾಡುವಾಗ್ಗೆ, ಅವನು ತನ್ನ ಕಚೇರಿಯ ಮುಖ್ಯಸ್ಥನಿಂದ ಪತ್ರವನ್ನು ತರಲಿಕ್ಕೆ ಬೇಕೆಂಬ ಸರಕಾರದ ಇರಾದೆ ನಿಂದ ವ್ಯಕ್ತವಾಗುವದಿಲ್ಲ."

೪ "ಅದರಿಂದ ಮೇಲಿನ ಠರಾವಿಗೂ ಸಿವ್ಹಿಲ್ ಲೀವ ಕೋಡಿನಂತೆ ರಜೆ ಸಿಗುವದಕ್ಕಾಗಿ ಅರ್ಜಿ ಮಾಡತಕ್ಕಬಗ್ಗೆ

ಳುವ ನಿಯಮಕ್ಕೂ ವ್ಯತ್ಯಾಸ ಬರುತ್ತದೆ. ಕಾರಣ ಈ ಷಯದಲ್ಲಿ ಸರಕಾರದವರು ಲಕ್ಷ್ಯ ಪೂರೈಸಿ, ತಮ್ಮ ಠರಾವಿಲ್ಲಿ ಅವಶ್ಯವಾದ ಸುಧಾರಣೆಗಳನ್ನು ಮಾಡಬೇಕು,,

ಠರಾವು:—ಜನರಲ್ ಖಾತೆಯ ಸರಕಾರದವರ ಠರಾ: ನಂಬರ ೨೭೬೪, ತಾ ೭ ಅಗಸ್ಟ ೧೮೮೬, ನೇದರ ನಕಲುಗಳನ್ನು ಹೊಂದಿರುವಂಥ ಅಧಿಕಾರಸ್ಥರಿಗೆ ತಿಳಿಸತಕ್ಕದ್ದೇನೆಂದರೆ, ಆ ಠರಾವು ಸಿವ್ಹಿಲ್ ಲೀವ್ಹ ಕೋಡಿನ ೧೪೩ನೇ ಕಲಮು (ಬ) ೧ನೇ ನಿಯಮಕ್ಕೆ ಭಿನ್ನವಾದದ್ದಾಗಲೀ, ಅದ್ದೀ ತರುವಂಥಾದ್ದಾಗಲೀ ಇಲ್ಲವೆಂತಲೂ, ಆ ನಿಯಮದೊಳಗಿನ ಎಲ್ಲ ಶರತುಗಳನ್ನು ತಪ್ಪದೆ ಪೂರ್ಣ ಮಾಡುತ್ತೇವೆಂತಲೂ ತಿಳಿಯ ಬೇಕು.

(Signed) John Nugent
Chief secretary to Government

* * *

ಪೆನಶನ್ ಪಡೆದ ಸರಕಾರೀ ನೌಕರರು ಇನಾಮುಗಳನ್ನು ತಕ್ಕೊಳ್ಳುವ ಬಗ್ಗೆ.

ನಂಬರು ೨೭೯

ಜನರಲ್ ಡಿಪಾರ್ಟಮೆಂಟ.

ಮುಂಬಯಿ ಕೋಟೆ, ತಾ. ೨೨ ಜಾನುವರಿ ೧೮೮೯

ಮದ್ರಾಸ ಇಲಾಖೆಯಲ್ಲಿ ಪೆನಶನ್ ಪಡೆದ ಸಿವಿಲ್ ಸರ್ವಂಟರಾದ ಮಿ. ಡಬ್ಲ್ಯೂ, ಎಸ್ ಫೋರ್ಸ್ಟರ ಇವರು ಮಹಾರಾಣೀ ಸಾಹೇಬರವರ " ಅಂಡರ ಸೆಕ್ರೆಟರಿ ಆಫ್ ಸ್ಟೇಟ ಫಾರ್ ಇಂಡಿಯಾ " ಇವರ ಕಡಿಗೆ ಬರೆದ ತಾ. ೨೭ನೇ ಅಗಸ್ಟ ಸನ್ ೧೮೮೮ನೇ ಪತ್ರವೇನಂದರೆ,—" ಮದ್ರಾಸ ಇಲಾಖೆಯ

ಗೋದಾವರಿ ಜಿಲ್ಹೆಗೆ ಸೇರಿದ ಪಿಠಾಪೂರ ರಾಣಿಯವರು ಶಾಲು, ಉಂಗರ, ಮುಂತಾದ ಕೆಲವು ಪದಾರ್ಥಗಳನ್ನು ನನ್ನ ಹೆಂಡತಿಗೆ ಕಳುಹಿಸಿ ಕೊಟ್ಟಿದ್ದಾಳೆ. ಅವುಗಳನ್ನು ಅಂಗೀಕರಿಸಲಿಕ್ಕೆ ಅಡ್ಡೀ ಉಂಟೆಂದು ನಾನು ತಿಳಿಯುವದಿಲ್ಲ. ಆದರೆ ಅವುಗಳನ್ನು ಅಂಗೀಕರಿಸುವ ಪೂರ್ವದಲ್ಲಿ ಇಂಥ ಇನಾಮುಗಳನ್ನು ಅಂಗೀಕರಿಸುವದರಿಂದ ಸರಕಾರೀ ನಿಯಮಗಳಿಗೆ ಏನಾದರೂ ಬಾಧಕ ಉಂಟೋ ಹ್ಯಾಗೆ ಎಂಬಬಗ್ಗೆ ವಿಚಾರಿಸುವದು ತಕ್ಕದ್ದಾಗಿದೆ. ನಾನು ಗೋದಾವರಿ ಜಿಲ್ಹೆಯ ಕಲೇಕ್ಟರನಾಗಿ ಕೆಲವು ವರ್ಷ ಕೆಲಸ ಮಾಡುತ್ತಿರುವಾಗ್ಗೆ, ನಾನು ಅಲ್ಲಿಯ ಅರಸನನ್ನೂ ನನ್ನ ಹೆಂಡತಿಯು ಅವನ ರಾಣಿಯನ್ನೂ ಚನ್ನಾಗಿ ಬಲ್ಲೆವು. ನಾನು ಶಿವ್ಹಿಲ್ ಸರ್ವಿಸ ಕೆಲಸ ಬಿಟ್ಟು ಕಳೆದ ಡಿಸೆಂಬರಕ್ಕೆ ಮೂರು ವರ್ಷಗಳಾದವು. ಈಗ್ಗೆ ಹವಾ ಬದಲಾಯಿಸುವದಕ್ಕಾಗಿ ಹಿಂದುಸ್ತಾನವನ್ನು ಬಿಟ್ಟು ಸ್ವದೇಶಕ್ಕೆ ಬಂದಿರುತ್ತೇನೆ ”

ಇದಕ್ಕೆ ಆನರೇಬಲ್ ಅಂಡರ ಸೆಕ್ರೆಟರಿಯವರು ತಮ್ಮ ಜ. ಪಿ. ನಂಬರ ೧೭೯೫, ಇಂಡಿಯಾ ಆಫೀಸ, ತಾ. ೪ನೇ ಅಕ್ಟೋಬರ ೧೮೮೮ನೇ ಪತ್ರದಲ್ಲಿ ಉತ್ತರ ಕೊಟ್ಟದ್ದೇನಂದರೆ —

“ ಇಂಥ ಇನಾಮುಗಳನ್ನು ಕೆಲಸ ನೋಡುತ್ತಿರುವಂಥ ನೌಕರರು ತೆಗೆದುಕೊಳ್ಳುವದಕ್ಕೆ ಅಡ್ಡಿ ಇರುತ್ತದೆ, ಆದರೆ ನೀವು ಕೆಲಸ ಬಿಟ್ಟ ಅಧಿಕಾರಸ್ಥರಿಗಾದರೂ ಹತ್ತುವದು. ಆದ್ದರಿಂದ ಸದರೀ ಇನಾಮುಗಳನ್ನು ನಿಮ್ಮ ಹೆಂಡತಿಯವರು ತೆಗೆದುಕೊಳ್ಳ ಕೂಡದು. ”

ಶೆರಾಪ:—ಈ ಪ್ರಕರಣದ ನಕಲನ್ನು ಸೆಕ್ರೆಟರಿಯವ

ಎಲ್ಲ ಖಾತೆಗಳಿಗೂ, ಆಯಾ ಖಾತೆಗಳ ವರಿಷ್ಟರಿಗೂ ಕಳುಹಿಸಿ ಕೊಡಬೇಕು.

(Sgd) J. De, C. Atkin
Under Secretary to Government.

* * *

ರಾವಸಾಹೇಬ ಕೈಲಾಸವಾಸಿ ವಿಶ್ವನಾಥ ನಾರಾಯಣ ಮಾಂಡಲಿಕ ಸಿ.ಯಸ್,ಆಯ್ ಇವರಬಗ್ಗೆ ದುಃಖ ಪ್ರದರ್ಶನದ ನಿಬಂಧವು.

* * *

ಧಾರವಾಡ ನಿವಾಸಿಗಳಿಗೆ ಸುಮಾರು ೪, ೫ ವರ್ಷಗಳಿಂದ ರಾ. ರಾ. ಕೈಲಾಸವಾಸೀ ಕೇಶವ ಬಾಪೂಜಿ ಬಾಳ ಹೈಸ್ಕೂಲ ಹೆಡ್ಮಾಸ್ತರ ಇವರ ವಿಷಯದಲ್ಲಿ ದುಃಖಪ್ರದರ್ಶನ ಸಭೆಯನ್ನು ಕೂಡಿಸುವ ಪ್ರಸಂಗ ಬಂದಿತ್ತು. ಅಮೇಲೆ ಸ್ವಲ್ಪ ದಿವಸಗಳಲ್ಲಿಯೇ ಪರೋಪಕಾರ ಧುರಂಧರರಾದ ಕೈಲಾಸವಾಸಿ ರಾವಸಾ. ಶ್ರೀನಿವಾಸರಾವಜೀ ಮಾಜೀ ಸರಕಾರೀ ವಕೀಲ ಇವರ ವಿಷಯದಲ್ಲಿ ದುಃಖ ಪ್ರದರ್ಶನ ಸಭೆಯನ್ನು ಕೂಡಿಸುವ ನಿಮಂತ್ರಣ ಕೊಡಬೇಕಾಯಿತು. ಇವತ್ತಿನ ದಿವಸ ಪುನಃ ರಾವಸಾ. ವಿಶ್ವನಾಥ ನಾರಾಯಣ ಮಂಡಲಿಕ ಸಿ, ಯಸ್ ಆಯ್ ಇವರ ವಿಷಯದಲ್ಲಿ ಅಂಥಾದ್ದೇ ಸಭೆಯನ್ನು ಕೂಡಿಸುವ ಅಗತ್ಯಬಿತ್ತು. ಇಂಥ ಪ್ರಸಂಗಗಳು ಮೇಲಿಂದಮೇಲೆ ಒದಗುವದು ಬಹಳ ಖೇದಕರ ಸಂಗತಿಯೇ ಸರಿ. ಉಪಾಯವಿ

ಲ್ಲ ಯಾವ ದೇಶದಲ್ಲಾದರೂ ಇಂಥ ದೇಶಸುಧಾರಕರು ಹುಟ್ಟುವದೇ ಅಪರೂಪ. ಹಿಂದುಸ್ಥಾನದಲ್ಲಂತೂ ಬಹಳೇ ಅಪರೂಪ ಹೀಗಿದ್ದದ್ದು ಕರ್ಮ ಧರ್ಮ ಸಂಯೋಗದಿಂದ ಅಂಥ ಮಹಾತ್ಮರು ಈ ಆರ್ಯ ಮಾತೆಯಿಂದ ಹುಟ್ಟಿದರೂ ಅವರು ಬಹು ದಿವಸ ಬಾಳುವದೇ ದುರ್ಲಭ. ಯಾಕಂದರೆ— ವಿಧಿಲಕ್ಷ್ಮಿಯು ನಡ ಕಟ್ಟಿಕೊಂಡು ಬಲಗೈಯಲ್ಲಿ ತನ್ನ ಇಷ್ಟ ಆಯುಧವಾದ "ಚವರಿಯನ್ನು" ಹಿಡಕೊಂಡು ಹಿಂದೆ ನಿಂತೇ ಇರುತ್ತಾಳೆ. ಅಯ್ಯೋ ದುರ್ಭಾಗ್ಯವೇ! ಕಳೆದ ೬|೭ ವರ್ಷಗಳಲ್ಲಿ ಹಿಂದು ಸಮಾಜಕ್ಕೆ ಮೃತ್ಯುವಿನಿಂದ ಒದಗಿದಂಥ ಕೇಡನ್ನು ಸ್ವಲ್ಪ ವಿಚಾರ ಮಾಡಿ ನೋಡಿದರೆ ಎಂಥ ಕಲ್ಲ ಮನಸಿನವನಿಗಾದರೂ ದುಃಖವಾಗದೇ ಇರದು. ಮುಂಬಯಿ, ಮದ್ರಾಸ, ಕಲಕತ್ತಾ ಈ ಮೂರು ಇಲಾಖೆಗಳಲ್ಲಿ ಇದ್ದಂಥ ಉತ್ತಮೋತ್ತಮ ಪಂಡಿತ ರತ್ನಗಳು ಒಂದರಹಿಂದೊಂದು ಆರ್ಯ ಮಾತೆಯನ್ನು ನಿರಾಕರಿಸಿ ಪರಲೋಕಾಪೇಕ್ಷೆ ಮಾಡಿದವು. ಇದನ್ನು ಕಂಡು ದೇಶಸೇವೆಯಲ್ಲಿ ತತ್ಪರರಾದ ಜನರು ಅಧೈರ್ಯ ಪಡಬಹುದು; ಅವರ ನಾಡಿಗಳು ಅಲ್ಲಿಂದಲ್ಲಿಯೇ ತಣ್ಣಗಾಗಬಹುದು. ನಮ್ಮ ಕರ್ನಾಟಕ ದೇಶವು ವಿದ್ಯಾಭಿವೃದ್ಧಿಯಲ್ಲಿ ಬಹು ಹಿಂದೆ ಬಿದ್ದದೆ. ಇಂಥಲ್ಲಿ ಸಹ ಅಲ್ಪಕಾಲದಲ್ಲಿ ಮೃತ್ಯುವಿಗೆ ತುತ್ತಾದ ಗೃಹಸ್ಥರ ಹೆಸರುಗಳನ್ನು ಇಲ್ಲಿ ಹೇಳಿದರೆ ಅಪ್ರಸಂಗಿಕವಾದೀತೆಂದು ನಾನು ನೆನಸುದಿಲ್ಲ:— ೧ ಗಣಿತಜ್ಞರಾದ ರಾವಸಾ. ಜನಬಸಪ್ಪ ಅಣ್ಣಾ ಡಿ. ಎ. ಇನಸ್ಪೆಕ್ಟರ ಧಾರವಾಡ, ೨ನೇ ಡೆಕನ್ ಕಾಲೇಜದಲ್ಲಿ ಸಂಸ್ಕೃತ ಸ್ಕಾಲರರೆಂಬ ಬಿರುದನ್ನು ಪಡೆದ ರಾವಸಾ. ಪಾಂಡುರಂಗ ಚಿಂತಾಮಣ ಪೇಠಕರ ಡಿ. ಎ. ಇನಸ್ಪೆಕ್ಟರ ಬೆಳ

ಗಾಂವ, ೩ ಶಾಂತ ಸ್ವಭಾವದವರಾದ ರಾ. ರಾ. ಕೇಶವ ಬಾಪೂಜಿ ಬಾಳ ಹೆಡ್ಡಮಾಸ್ತರ ಹೈಸ್ಕೂಲ ಧಾರವಾಡ, ೪ ಕರ್ನಾಟಕಭಾಷೆಯ ಉತ್ತೇಜಕರಾದ ಗಂಗಾಧರ ಶಾಸ್ತ್ರಿ ಆ. ಟ್ರಾನ್ಸಲೇಟರ ಮತ್ತು ಶೇಷಗಿರಿರಾವ ಚುರಮುರಿ; ವ ರುದ್ರಪ್ಪಂಣಾ ಬೀಳಗಿ ೫ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲ ರಾ. ಸಾ. ಭುಜಂಗರಾವ ಹೂಲಿಗೋಳ, ೬ ಕಾಲೇಜದ ಸಂಸ್ಕೃತ ಮತ್ತು ಕನ್ನಡ ಪಂಡಿತರಾದ ರಾಮಚಂದ್ರಶಾಸ್ತ್ರೀ ನರೇಗಲ್ ಅಂಣಾಶಾಸ್ತ್ರೀ ಅರವಲೀ, ಶಾಂತವೀರಯ್ಯಾ ಕಿತ್ತೂರ ಹಾಗು ಸಾರ್ವಜನಿಕ ಕೆಲಸಗಳಲ್ಲಿ ಮುಂದಾದ ಮತ್ತು ವಕ್ತೃತ್ವ ದಾತೃತ್ವ ಗುಣಗಳಿಂದ ಯುಕ್ತರಾದ ನಮ್ಮ ಪ್ರಿಯ ಕೈಲಾಸವಾಸೀ ರಾವಸಾ. ಶ್ರೀನಿವಾಸರಾವಜೀ ವಕೀಲ ಪಬ್ಲಿಕ್ ಪ್ರಾಸೀಕ್ಯೂಟರ ಈ ಯಾವತ್ತರ ಮೃತ್ಯುವಿನಿಂದ ನಮ್ಮ ದಕ್ಷಿಣ ಭಾಗದ ಹಾನಿಯು ಎಷ್ಟಾಗಿರಬಹುದು ಎಂಬದನ್ನು ಪ್ರತಿ ಒಬ್ಬ ದೇಶಾಭಿಮಾನಿಯು ನೆನಪಿನಲ್ಲಿ ತಂದರೆ ಅವನ ಹೃದಯವು ಒಡೆದು ನೀರಾಗದೆ ಇರದು. ಇದು ನಮ್ಮ ದಕ್ಷಿಣಭಾಗದ ಅವಸ್ಥೆ, ಅದರಂತೆ ಅನ್ಯ ಭಾಗಗಳಲ್ಲಿ ಸಹಾ ಆ ಚಾಂಡಾಲ ಪಂಚಮ ಶನಿಯು ತನ್ನ ಪ್ರಖರವಾದ ಹಾವಳಿಯನ್ನು ನಡಿಸೇ ಇದ್ದಾನೆ. ಬಂಗಾಲ ಪ್ರಾಂತದಲ್ಲಿ ಬಹು ಹೆಸರುವಾಸಿಯಾದ ಕೈಲಾಸವಾಸೀ ೧ ಕೃಷ್ಣದಾಸ ಪಾಲ ಹಿಂದೂ ಪೇಟ್ರಿಯಟದ ಪ್ರಸಿದ್ಧ ಎಡೀಟರ್ 'ಆದೀ ಸಮಾಜದ' ಪ್ರಧಾನ ಆಚಾರ್ಯರಾದ ೨ ಬಾಬೂ ಕೇಶವ ಚಂದ್ರಸೇನ, ೩ ಮುಂಬಯಿ ಇಲಾಖೆಯಲ್ಲಿ ವಿಷ್ಣುಶಾಸ್ತ್ರೀ ಚಿಪಳೂಣಕರ, ೪ ಆನರೇಬಲ್ ಶೇಟ ಮ್ಯಾರಾರಜೀ ಗೋಕುಳದಾಸ, ೫ ಪ್ರೊಫೇಸರ ಕೇರೋ ಲಕ್ಷ್ಮಣ ಛತ್ರೆ ೬ ರಾವಬ. ಮಾಧವ

ರಾವ ಕುಂತೆ, ನಿಝಾಮು ಸರಕಾರದಲ್ಲಿ ಜಗವಿಖ್ಯಾತ ಪ್ರಧಾನರಾದ "ಸರಸಾಲರಝಂಗ್" ಹಾಂಗು ಮದ್ರಾಸ ಇಲಾಖೆಯಲ್ಲಿ "ರಂಗಾಚಾರ್ಯ" ಇಂಥಿಂಥಾ ಪಂಡಿತ ಶಿರೋಮಣಿಗಳು ಸ್ವಲ್ಪ ಕಾಲದಲ್ಲಿ ಅಂದರೆ ೨।೭ ವರ್ಷಗಳ ಒಳಹೊರಗೆ ಯಮದೇವರ ತಡಾಕಿಗೆ ಶಿಕ್ಕಿ ಹೋದರು. ಉಪಾಯವಿಲ್ಲ. ನಮ್ಮ ದುರ್ದೈವವೇ ನಮಗೆ ಕಾಡುತ್ತದೆ. ಅದದ್ದೆಲ್ಲ ನೋಡುತ್ತ ಇಂಥ ದುಃಖ ಪ್ರದರ್ಶನ ಸಭೆಗಳನ್ನು ಪುನಃ ಪುನಃ ಮಾಡುತ್ತ ರೋದನಕ್ಕೊಳಗಾಗಿ ಕೂಡ್ರಬೇಕಾಗಿದೆ. ಅಸ್ತು.

(ಮುಂದೆ ಸಾಗುವದು.)

History of the Middle Ages.

ಯುರೋಪದ ಮಧ್ಯ ಕಾಲದ ಇತಿಹಾಸವು

(೯೩ನೇ ಪುಟದಿಂದ ಮುಂದೆ ಸಾಗಿದ್ದು)

ಆವನು ಆಯರ್ಲಂಡದ ರಾಜ್ಯವನ್ನು ಹೆನರಿಗೆ ಕೊಟ್ಟನು. ತರುವಾಯ ಆಯರ್ಲಂಡದವನೊಬ್ಬ ಸಂಸ್ಥಾನಿಕನ ಹೆಂಡತಿಯನ್ನು ಇಂಗ್ಲಂಡದ ಲೆಸ್ಟರ ಪ್ರಾಂತದ ಸಂಸ್ಥಾನಿಕನು ಬಲಾತ್ಕಾರದಿಂದ ಕಸುಕೊಳ್ಳಲಾಗಿ, ಹೆನರಿಯು ಆವಳ ಗಂಡನಿಗೆ ಸಹಾಯ ಮಾಡುವ ನೆವದಿಂದ ಆಯರ್ಲಂಡಕ್ಕೆ ಹೋಗಿ ಅಲ್ಲಿಯ ಯಾವತ್ತು ಸಂಸ್ಥಾನಿಕರಿಂದ ಕಪ್ಪ ತಕ್ಕೊಂಡನು. ಆದರೆ ಆಯರ್ಲಂಡವು ನಿಜವಾಗಿ ಇಂಗ್ಲಿಷ ರಾಜ್ಯಕ್ಕೆ ಶೇರಬೇಕಾದರೆ ಮುಂದೆ ಯೆಷ್ಟೋ ಶತಮಾನಗಳು ಕ್ರಮಿಸಿದವು.

--ಸ್ಪೇನವು—

ಮೊರಕ್ಕೋ ದೇಶದ ಸುಲ್ತಾನನಾದ ಮುಲಿಕ ನಾಸೀರ ಮಹಮ್ಮದನೆಂಬವನ ೧೬೦೦೦೦ ಸೈನ್ಯ ತಕ್ಕೊಂಡು ಬರಲಾಗಿ ಅಂದಾಲೂಶಿಯ ಪ್ರಾಂತದ ಮುಸಲ್ಮಾನರು ಅವನಿಗೆ ಕೂಡಿದರು. ಇತ್ತ ಕಾಸ್ತಿಯಿಲ ಪ್ರಾಂತದ ಅರಸನಾದ ೯ನೇ ಆಲ್ಫೊನ್ಸೋ ಯೆಂಬವನ ಕೈ ಕೆಳಗೆ ಸ್ಪೇನದ ಕ್ರಿಸ್ತೀ ಜನರ ದಂಡೆಲ್ಲ ಕೂಡಿ, ಉಬೆದೆಂಬ ಗ್ರಾಮದ ಹತ್ತರ ಕಾಡು ಕಾಳಗವೆಸಗಿ ಕ್ರಿಸ್ತೀ ಜನರು ಜಯ ಹೊಂದಿದರು., ೧೬ನೇ ಜುಲಾಯಿ ೧೨೧೨. ಇದರಿಂದ ಕ್ರಿಸ್ತೀ ಜನರು ಮುಸಲ್ಮಾನರ ಮೇಲೆ ಚಿರಕಾಲ ಶ್ರೇಷ್ಠತ್ವವನ್ನು ಪಡೆದರು. ಈ ಆಲ್ಫೊನ್ಸೋನ ಮೊಮ್ಮಗನು ಲಿಯಾನ, ಬಾಯಿಝಾ, ಕೋರ್ಡೋವಾ, ಸೆವಿಲ್, ಕೆಡಿಝ ಮುಂತಾದ ಶಹರಗಳನ್ನು ತಕ್ಕೊಂಡು ಮುಸಲ್ಮಾನರ ಅಧಿಕಾರವು ಗ್ರಾನಡಾ ಪ್ರಾಂತದ ಹೊರಗೆ ನಡೆಯುವಂತೆ ಮಾಡಿದನು, ೧೨೫೦. ಇದೇ ಮೇರೆಗೆ ಅರೇಗನ್ನದ ಅರಸನೂ ಕೆಲವು ಶಹರಗಳನ್ನು ತಕ್ಕೊಂಡು ಮೂರರ (ಸ್ಪೇನದೊಳಗಿನ ಮುಸಲ್ಮಾನರ) ಬಲವನ್ನು ಕಡಿಮೆ ಮಾಡಿದನು, ೧೨೩೮.

(ಮುಂದೆ ಸಾಗುವದು.)

—೦—

ಕನ್ನಡ ಶಾಲಾಪತ್ರಕವು
CANARESE
SCHOOL PAPER.

ಪುಸ್ತಕ ೩೪)　　　　　(ಸಂಚಿಕೆ ೬

(ಜೂನ ೧೮೮೯)

ಅನುಕ್ರಮಣಿಕೆಯು.

ಪುಟ.

ಪುಣೆಯ ಹೆಣ್ಣು ಮಕ್ಕಳ ಸರಕಾರಿ ಹೈಸ್ಕೂಲು.... ೨೧೧
ವಿದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು ೧೨೫
ನೋಟೀಸು. ೧೩೦
ಯುರೋಪದ ಮಧ್ಯಕಾಲದ ಇತಿಹಾಸವು ೧೩೨
ರಾ. ಸಾ. ಕೈಲಾಸವಾಸಿ ವಿಶ್ವನಾಥ ನಾರಾಯಣ
ಮಂಡಲಿಕ ಸಿಯಸ್ ಆಯ್ ಇವರಬಗ್ಗೆ ದುಃಖ ಪ್ರ
ದರ್ಶನದ ನಿಬಂಧವು........ ೧೩೪
ಪತ್ರವ್ಯವಹಾರವು. ೧೪೦

CONTENTS

The Poona Female High School.......... 211
Education and Improvement. 125
Notices.................. 130
History of the Middle Ages.......... 132
Correspondence 140

DHARWAR.

Printed at the Dnana Wardhaka Press

ಶಾಲಾಪತ್ರಕವು

ಪುಸ್ತಕ ೨೪)   (ಸಂಚಿಕೆ ೬

(ಜೂನ ೧೮೮೯)

The Poona Female High School.

ಪುಣೆಯಲ್ಲಿಯ ಹೆಣ್ಣು ಮಕ್ಕಳ ಸರಕಾರೀ ಹಾಯಸ್ಕೂಲು.

ಈ ಶಾಲೆಯು ಸನ್ ೧೮೮೪ನೇ ವರ್ಷ ಮುಖ್ಯವಾಗಿ ರಾವಬಹಾದೂರ ಶಂಕರ ಪಾಂಡುರಂಗ ಪಂಡಿತ ಇವರ ಪರಿಶ್ರಮದಿಂದ ಸ್ಥಾಪಿಸಲ್ಪಟ್ಟಿತು. ಇದನ್ನು ಕುರಿತು ಮಧ್ಯಭಾಗದ ಇನ್ಸ್ಪೇಕ್ಟರರಾದ ಮೆ. ಕರ್ಕಹಾಮ ಧೊರೆಗಳು ಬರಿದ ಲೇಖವು ವಿದ್ಯಾಖಾತೆಯ ವಾರ್ಷಿಕ ರಿಪೋರ್ಟಿನಲ್ಲಿ ಪ್ರಸಿದ್ಧವಾದದ್ದು ಹ್ಯಾಗಂದರೆ—

“ಈ ಶಾಲೆಯ ಅಭ್ಯಾಸವು ಈಗ ೫ನೇ ಸ್ಟ್ಯಾಂಡರ್ಡಿನ ವರೆಗೆ ಬೆಳೆದದೆ. ಯಾವತ್ತು ಸ್ಟ್ಯಾಂಡರ್ಡುಗಳಲ್ಲಿ ಕಲಿಯುವ ವಿದ್ಯಾರ್ಥಿನಿಯರ ಸಂಖ್ಯಗಳು ಯಥಾಯೋಗ್ಯವಾಗಿ ಇರುತ್ತವೆ. ಕಳಿದ ವರ್ಷದಲ್ಲಿ ಈ ಶಾಲೆಯ ಅಭ್ಯಾಸವು ಬಹು ಸರಸಾಗಿ ನಡಿದದ್ದರಿಂದ ವಾರ್ಷಿಕ ಪರೀಕ್ಷೆಯು ಅತ್ಯುತ್ತಮವಾಯಿತೆಂದು ನಾವು ಬಹು ಸಂತೋಷದಿಂದ ತಿಳಿಸುತ್ತೇವೆ. ಇದೇ ಪ್ರತಿಯ ಗಂಡು ಹುಡುಗರ ಮೇಲಾದ ಶಾಲೆಯ ವಾರ್ಷಿಕ ಪರೀಕ್ಷೆಗೂ ಈ ಶಾಲೆಯ ವಾರ್ಷಿಕ ಪರೀಕ್ಷೆಗೂ ಈ ವರ್ಷ ಯೇನೂ ಅಭ್ಯಂತರ ತೋರಲಿಲ್ಲವೆಂದು ನಮ್ಮ ಅಭಿಪ್ರಾಯವಿರುತ್ತದೆ. ಈ ವರ್ಷದ ಶಿಕ್ಷಣವು ಅತ್ಯುತ್ತಮವಾ

ಗಿ ಸಾಗಿತು; ವಿದ್ಯಾರ್ಥಿನಿಯರಿಗೂ ಶಿಕ್ಷಕಿಯರಿಗೂ ಅತಿ ಮನೋಹರವಾದ ಪ್ರೇಮದ ಬಳಿಕೆ ಇರುತ್ತದೆ. ಇಂಗ್ಲಿಷ ಕಲಿಯುವ ವಿದ್ಯಾರ್ಥಿನಿಯರ ಸಂಖ್ಯವು ೬೧ ಇರುತ್ತದೆ. ಇವರ ಜಾತಿಗಳ ವಿವರ ಹ್ಯಾಗಂದರೆ— ಬ್ರಾಹ್ಮಣಿಯರು ೨೦, ಪರಭೂಜಾತಿಯವರು ೭, ಮಹಾರಾಷ್ಟ್ರರು ೬, ಸೊನ್ನಗಾರರು ೩, ಬಣಜಗರು ೩, ಕಾಸಾರರು ೩, ಬೇರೆ ಹಿಂದೂ ಜಾತಿಗಳವರು ೬; ಯಹೂದಿಯರು ೧೦, ಕ್ರಿಸ್ತೀ ಜಾತಿಯವರು ೬. ಇವರಲ್ಲಿ ೪೩ ಜನರು ಪುಣೆಯವರೂ ೧೮ ಜನರು ಪರಸ್ಥಳದಿಂದ ಬಂದವರೂ ಇರುತ್ತಾರೆ. ೧೩ ಜನ ಲಗ್ನವಾದವರು, ೩೯ ಜನ ಅವಿವಾಹಿತರು, ೯ ಜನ ವಿಧವೆಯರು ಉಂಟು. ೩೨ ಜನ ಕನ್ನಿಕೆಯರು ಫೀ ಕೊಡುತ್ತಾರೆ, ೧೯ ಜನರಿಗೆ ಸಂಬಳ ದೊರೆಯುತ್ತದೆ, ೧೦ ಜನ ಮಾಫೀ ಇರುತ್ತಾರೆ. ಈ ಕನ್ನಿಕೆಯರ ವಯಸ್ಸುಗಳನ್ನು ನೋಡಿದರೆ ಬಹು ಕೌತುಕವಾಗುತ್ತದೆ. ೬೧ ಜನರಲ್ಲಿ ೧೨ ವರ್ಷಕ್ಕಿಂತ ಕಡಿಮೇ ವಯಸ್ಸಿನವರು ಯಾರೂ ಇಲ್ಲ. ೧೨ ವರ್ಷದವರು ೩೯ ಜನ, ೧೩ ವರ್ಷದವರು ೮ ಜನ, ೧೪ ವರ್ಷದವರು ೫ ಜನ, ೧೫ ವರ್ಷದವರು ೪ ಜನ, ೧೬ ವರ್ಷದವರು ೩ ಜನ ಇರುತ್ತಾರೆ. ಹೋದ ವರ್ಷದ ಅಂಕೆಗಳಿಗೂ ಈ ಮೇಲಿನ ಅಂಕೆಗಳಿಗೂ ಹೊಂದಿಸಿ ನೋಡಿದರೆ ಈ ವರ್ಷ ಮೇಲಾದ ಸುಧಾರಣೆಯಾಗಿದೆ ಯೆಂದು ಕಂಡು ಬರುತ್ತದೆ. ಈ ಶಾಲೆಗೆ ಜೋಡಿಸಿರುವ ಊಟದ ಮನೆಗೆ ಈ ವರ್ಷದಲ್ಲಿ ಉಲ್ಲಾಸದ ಜೀವಕಳೆ ಬಂದಿರುತ್ತದೆಂದು ಹೇಳಬಹುದು. ಮಿಸ್ ಹರ್ಟಫರ್ಡ ಯೆಂಬ ಈ ಶಾಲೆಯ ಮುಖ್ಯಾಧಿಕಾರಿಣಿಯು ಒಬ್ಬ ಶಿಕ್ಷಕಿಯ ಸಹಿತವಾಗಿ ೧೦ ಜನ ವಿದ್ಯಾರ್ಥಿನಿಯರೊಂದಿಗೆ ಈ ಶಾಲೆಯ

ಲ್ಲಿಯೇ ವಾಸಿಸುತ್ತಾಳೆ. ೭ ಜನ ಹಾಯಸ್ಕೂಲಿನ ಶಾಖೆಯಲ್ಲಿ, ೫೪ ಜನ ಅಂಗ್ಲೋವ್ಹರ್ನ್ಯಾಕ್ಯುಲರ ಶಾಖೆಯಲ್ಲಿ ಕಲಿಯುತ್ತಾರೆ. ”

ಮೇಲಿನ ಲೇಖದಿಂದ ತಿಳಿಯುವದೊಂದು ಅತಿ ಗೌರವದ ಸಂಗತಿ ಯೇನಂದರೆ, ಲಗ್ನವಾಗದಿದ್ದ ೩೯ ಜನ ವಿದ್ಯಾರ್ಥಿನಿಯರೆಲ್ಲರು ೧೨ ವರ್ಷದ ಮೇಲಿನ ವಯಸ್ಸಿನವರಿರುತ್ತಾರೆ. ಇದರಿಂದ ಈಗ ನಡಿಯುವ ವಿದ್ಯಾಭ್ಯಾಸದ ಪರಿಣಾಮವೂ ಇಂಗ್ಲಿಷ ಜನರ ಸಹವಾಸದ ಫಲವೂ ಬಹು ಸರಸಾಗಿ ವ್ಯಕ್ತವಾಗುತ್ತವೆ. ಹಿಂದಿನ ಕತ್ತಲೆಯ ಕಾಲದಲ್ಲಿ ಕೆಳಕೆಳಗೆ ಇಳಿಯುತ್ತ ನಡಿದಿದ್ದ ಹೆಣ್ಣು ಮಕ್ಕಳ ಲಗ್ನದ ವಯಸ್ಸು ಈ ಬಗೆಯಾಗಿ ಹಿಂದಿರುಗಿ ಮೆಲ್ಲ ಮೆಲ್ಲಗೆ ಮುಂದಕ್ಕೆ ಹೋಗುತ್ತ ನಡಿದಿದ್ದು ನೋಡಿ ಯಾರಿಗೆ ಸಂತೋಷವಾಗಲಿಕ್ಕಿಲ್ಲ? ಬಲಾತ್ಕಾರದ ಮೂಲಕವಾಗಿ ಇಲ್ಲವೆ ಅಜ್ಞಾನದ ಕಾರಣದಿಂದ ಉಂಟಾದ ಅಸ್ವಾಭಾವಿಕ ಸ್ಥಿತಿಯು ಚಿರಕಾಲವಾಗಿ ನೆಲೆಗೊಂಡು ಯೆಂದಿಗೂ ನಿಲ್ಲಲಾರದು. ಅದು ಒಂದಿಲ್ಲ ಒಂದು ದಿವಸ ತನ್ನ ಸ್ವಾಭಾವಿಕ ಸ್ಥಿತಿಗೆ ಬರಲಿಕ್ಕೇಬೇಕು. ಹನ್ನೆರಡು ವರ್ಷದ ವರೆಗೆ ಹೆಣ್ಣು ಮಕ್ಕಳ ಲಗ್ನವನ್ನು ಬಿಡುವ ನಡಾವಳಿಯು ಜಿಲ್ಲ ಕಡೆಯಲ್ಲಿಯೂ ಬಹು ಬೇಗ ಬೆಳೆಯುತ್ತ ನಡಿದದೆ. ಧಾರವಾಡದಲ್ಲಿ ಬ್ರಾಹ್ಮಣ ಜಾತಿಯಲ್ಲಿ ಪ್ರತಿ ವರ್ಷ ಆಗುವ ಲಗ್ನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹನ್ನೆರಡು ವರ್ಷದ ಕನ್ನಿಕೆಯರ ಲಗ್ನಗಳಿರುತ್ತವೆ. ದೊಡ್ಡ ದೊಡ್ಡ ಧರ್ಮಾಭಿಮಾನಿಗಳ ಮನೆತನಗಳಲ್ಲಿ ಸಹ ಈ ನಡಾವಳಿಯು ಕ್ರಮಕ್ರಮವಾಗಿ ಪ್ರವೇಶಿಸುತ್ತ ನಡಿದದೆ.

ಇದರ ಮುಂದಿನ ಮೆಟ್ಟು ಯಾವದೆಂದರೆ ಋತು ದರ್ಶ

ಸವಾದ ನಂತರ ಲಗ್ನ ಮಾಡುವದು. ಇದಾದರೂ ಈಗ ಹಲ ಕೆಲವು ಕಡೆಯಲ್ಲಿ ದೃಷ್ಟಿ ಗೋಚರವಾಗುತ್ತಿದ್ದಾಗ್ಯೂ, ಸ್ವಲ್ಪ ಮುಚ್ಚು ಮರ್ಯಾದೆಯಿಂದ ನಡೆಯುತ್ತದೆ. ಪ್ರೌಢ ಸ್ತ್ರೀಯಳಂತೆ ಮೈ ತುಂಬಿದಂಥ ಕನ್ನಿಕೆಯಳನ್ನು ನೋಡಿ ಬಹುತರ ಯಾರಿಗೂ ವ್ಯತ್ಯಾಸ ತೋರುವದಿಲ್ಲ; ಆ ಕನ್ನಿಕೆಯು ನೆರೆದಿದ್ದಾಳೆಂಬ ಸಂಶಯವು ಯಾರಿಗೂ ಬಾಧಿಸುವದಿಲ್ಲ. ಲಗ್ನವಾದ ಬಳಿಕ ಒಂದೆರಡು ತಿಂಗಳೊಳಗೇ ನೆರೆದಂಥ ಕನ್ನಿಕೆಯರನ್ನು ಬಹು ಜನರು ನೋಡಿರಬಹುದು. ಆದದರಿಂದ ನೆರೆದ ಕನ್ನಿಕೆಯರನ್ನು ಲಗ್ನ ಮಾಡಿಕೊಳ್ಳುವ ನಡಾವಳಿಗೆ ಸ್ವಲ್ಪ ಮಾತ್ರ ಪರದೆಯು ಉಳಿದಿರುತ್ತದೆಂದು ಹೇಳಬಹುದು. ಕೆಲವರು ಗಟ್ಟಿಗರು ಕೂಡಿ ಧೈರ್ಯದಿಂದ ಆ ಪರದೆಯನ್ನು ಮುರಿ ಬಡಿದರೆ, ಪ್ರಸಿದ್ಧವಾಗಿ ನೆರೆದಂಥ ಕನ್ನಿಕೆಯರನ್ನು ಲಗ್ನ ಮಾಡಿಕೊಳ್ಳುವ ನಡಾವಳಿಯು ಬಹು ಬೇಗ ಆರಂಭವಾಗುವದೆಂದು ತೋರುತ್ತದೆ.

ಹೋದ ವರ್ಷದಲ್ಲಿ ಈ ಶಾಲೆಗೆ ೧೧೩೫೫ ರೂಪಾಯಿಯು ವೆಚ್ಚವು ತಾಗಿತು. ಇದರಲ್ಲಿ ೯೮೮೯ ರುಪಾಯಿ ಸರಕಾರದಿಂದ, ೭೪೫ ರುಪಾಯಿ ಮ್ಯುನಸಿಪಾಲಿಟಿಯಿಂದ, ಉಳಿದದ್ದು ಫೀ ಮುಂತಾದ ದ್ವಾರದಿಂದ ಬಂತು.

ಕಾರವಾಡದಲ್ಲಿಯೂ ಒಂದು ಹೆಣ್ಣು ಮಕ್ಕಳ ಪುಟ್ಟ ಇಂಗ್ಲಿಷ ಶಾಲೆ ಇರುತ್ತದೆ. ಇದನ್ನು ಅಲ್ಲಿಯ ಮ್ಯುನಿಸಿಪಾಲಿಟಿಯವರು ಸ್ಥಾಪಿಸಿದ್ದಾರೆ. ಇದರ ವೆಚ್ಚವು ವರ್ಷಕ್ಕೆ ೩೦೦ ರುಪಾಯಿಗಿಂತ ಹೆಚ್ಚಿಲ್ಲ. ಇದರಲ್ಲಿ ಕೆಲವು ಹಣವು ಲೋಕಲ್ ಫಂಡಿನಿಂದ ದೊರೆಯುತ್ತದೆ. ಈ ಶಾಲೆಯ

ಲ್ಲಿ ಒಟ್ಟಿಗೆ ೩೩ ಜನ ವಿದ್ಯಾರ್ಥಿನಿಯರುಂಟು. ಅವರಲ್ಲಿ ೫ ಜನ ಹಾಯಸ್ಕೂಲಿನ ಅಭ್ಯಾಸವನ್ನೂ ಉಳಿದವರು ಮಧ್ಯಮ ಪ್ರತಿಯ ಇಂಗ್ಲಿಷ ಅಭ್ಯಾಸವನ್ನೂ ಮಾಡುತ್ತಾರೆ. ಧಾರವಾಡದ ಮ್ಯುನಸಿಪಾಲಿಟಿಯವರ ಉದಾಹರಣೆಯನ್ನು ಬೇರೆ ಜಿಲ್ಲೆಗಳ ಮುಖ್ಯ ಗ್ರಾಮಗಳ ಮ್ಯುನಸಿಪಾಲಿಟಿಯವರು ತಕ್ಕೊಳ್ಳುವರೋ?

—o—

Education and Improvement.

ವಿದ್ಯಾಸುಧಾರಣೆಗೆ ಸಂಬಂಧವಾ ವೃತ್ತಾಂತಗಳು.

ಮಿ. ಇನ್‌ಸ್ಪೆಕ್ಟರ ಸಾಹೇಬರು ಧಾರವಾಡದಲ್ಲಿ ಇರುತ್ತಾರೆ.

—o—

ರಾ. ಸಾ. ರೊದ್ದ ಶ್ರೀನಿವಾಸರಾಯರು ಆಜಾರೀ ರಜೆ ತಕ್ಕೊಂಡದ್ದರಿಂದ ಅವರ ಕೆಲಸವನ್ನು ಮಿ. ಪರಾಣಸಾಹೇಬರು ನೋಡುತ್ತಾರೆ.

—o—

ಹಿಂದೆ ತಿಳಿಸಿದಂತೆ ಹಾಯಸ್ಕೂಲಿನ ಕೆಲಸವನ್ನು ರಾ. ರಾ. ಕರಂದೀಕರರು ನೋಡುತ್ತಿದ್ದು, ಅವರ ತ್ರಾನ್ಸಲೇಟ ಕೆಲಸವನ್ನು ರಾ. ರಾ. ದೇಶಪಾಂಡೆ ಇವರು ನೋಡುತ್ತಾರೆ. ಅವರ ಕಾನಡಾ ಜಿಲ್ಲೆಯ ಡಿ.ಇ. ಕೆಲಸವನ್ನು ರಾ. ರಾ. ಕೆರೂರ ಬಾಬಾಚಾರ್ಯರು ಮಾಡುತ್ತಾರೆ.

—o—

ಧಾರವಾಡದಲ್ಲಿ ರಾ. ರಾ. ಗುರುನಾಥರಾವ ಘಾಟಕ ವ

ಕೀಲ ಇವರು ಬಹಳ ಶ್ರಮ ಮಾಡಿ ವರ್ಗಣಿಯಿಂದ ಹಣ ಕೂಡಿಸಿ, ಒಂದು ಸಂಸ್ಕೃತಶಾಲೆಯನ್ನು ಸ್ಥಾಪಿಸಿದ ವರ್ತಮಾನವನ್ನು ಪೂರ್ವದಲ್ಲಿ ತಿಳಿಸಿದ್ದೇವೆ. ಅವರ ಶಾಲೆಯು ದಿನ ದಿನಕ್ಕೆ ಉತ್ಕರ್ಷ ಹೊಂದುತ್ತ ನಡೆದದ್ದನ್ನು ನೋಡಿ ಇಲ್ಲಿಯ ಪ್ರಮುಖ ಲಿಂಗವಂತ ಜನರು ತಮ್ಮ ಜಾತಿಯ ವಿದ್ಯಾರ್ಥಿಗಳಿಗಾಗಿ ಮದೀ ಹಾಳದಲ್ಲಿ ಒಂದು ಸಂಸ್ಕೃತಶಾಲೆಯನ್ನು ಸ್ಥಾಪಿಸಿದ್ದಾರೆ. ಈ ಶಾಲೆಯ ವೆಚ್ಚವು ಲಿಂಗಾಯತ ಫಂಡಿನಿಂದ ದೊರೆಯತಕ್ಕದ್ದಿರುತ್ತದೆಂದು ಕೇಳುತ್ತೇವೆ.

* * *

ಲಿಂಗಾಯತ ವಿದ್ಯಾಭಿವೃದ್ಧಿ ಫಂಡು ಇದುವರೆಗೆ ೧೧೧೩೯೦ ಕೂಡಿದ್ದನ್ನು ಕೇಳಿ ನಮಗೆ ಪರಮಾನಂದವಾಗುತ್ತದೆ. ಈ ಫಂಡಿನ ಸಂಬಂಧದಿಂದ ರಾ. ಬ. ಗುರುಸಿದ್ದಪ್ಪಾ ಅಣ್ಣಾ ಗಿಲಗಂಚಿ, ರಾ. ಬ. ರುದ್ರಗೌಡಾ ಅಣ್ಣಾ, ಈ ಉಭಯತರ ಕೀರ್ತಿಯು ಚಿರಸ್ಥಾಯಿಯಾಗಿ ಮೆರೆಯುವದು.

* * *

ಧಾರವಾಡದಲ್ಲಿ ಸದ್ಯಕ್ಕೆ ಇರುವ ಪರಮಾವಧಿಯ ನೀರಿನ ದುರ್ಭಿಕ್ಷವನ್ನು ತೆಗೆದು ಹಾಕುವದಕ್ಕೋಸ್ಕರ ಹಿಂದಿನ ಕಲೆಕ್ಟರರಾದ ಮಿ. ಪ್ರಯಿಂಟ ಧೊರೆಗಳು ಮದೀ ಹಾಳದ ಬಳಿಯಲ್ಲಿ ತೆಗಿಸಿದ ದೊಡ್ಡ ಬಾವಿಯ ಕೆಲಸವೆಲ್ಲ ಮುಗಿದು, ಅಲ್ಲಿಂದ ನಡಊರಿನ ವರೆಗೆ ನಳಗಳನ್ನು ಸಹ ಹೂಗಿದರು. ಬಾವಿಯ ಮೇಲೆ ಉಗಿಯಿಂದ ನಡೆಯುವದೊಂದು ದೊಡ್ಡ ಪಂಪನ್ನು ನಿಲ್ಲಿಸಿದ್ದಾರೆ. ಊರು ಆ ಬಾವಿಗಿಂತ ಸಮಾರು ೮೦ ಫೂಟು ಯೆತ್ತರವಿದ್ದಾಗ್ಯೂ ಪಂಪಿನ ಕಸುವಿನಿಂದ ನಳದೊಳಗಿಂದ ನೀರು ಯೇರಿ ಊರೊಳಗೆ ನಿರಾ

ಕವಾಗಿ ಬರುತ್ತದೆ. ಇನ್ನು ಕೆಲವು ಹೌದುಗಳು ಹೊ ಕಟ್ಟತಕ್ಕವಿರುತ್ತವೆ. ಅವುಗಳ ಕೆಲಸವು ಮುಗಿದು ಸು ಾರು ಒಂದು ತಿಂಗಳೊಳಗೆ ಊರವರಿಗೆ ನಳದ ನೀರು ದೊ ಯುವದೆಂದು ತೋರುತ್ತದೆ.

—○—

ಕೊಲ್ಹಾಪುರದ ಮಹಾರಾಜರವರು ಕಾಗಲದ ಸಂಸ್ಥಾನಿ ರನ್ನೂ ಭಾವನಗರದ ಠಾಕೂರಸಾಹೇಬರ ತಮ್ಮಂದಿರನ್ನೂ ಗೊಂಡು ಈ ತಿಂಗಳಲ್ಲಿ ಧಾರವಾಡಕ್ಕೆ ಬಂದರು. ಅ ವ ಊರಿಗೆ ಒಂದು ಬಗೆಯು ಹೊಸ ಶೋಭೆಯು ಬಂ ತ್ತದೆಂಬೆನ್ನಲಿಕ್ಕೆ ಅಡ್ಡಿ ಇಲ್ಲ.

—○—

ಹೋದ ಅಮಾವಾಸ್ಯದ ಸೂರ್ಯಗ್ರಹಣವು ಇಲ್ಲಿ ಚ ಕಾಣಿಸಿತು. ಆದರೆ ಮೋಡವು ಬಹಳ ಇದ್ದದ್ದರಿಂ ಹಣ ಹಿಡಿದ ಕಾಲವು ನಿಷ್ಕರ್ಷವಾಗಿ ತಿಳಿಯಲಿಲ್ಲ. ಈ ಣವು ಹಿಡಿದದ್ದು ಪುಣೆ, ಕೊಲ್ಹಾಪುರ, ಸಾತಾರೆ, ತಾದ ಕಡೆಯಲ್ಲಿ ಕಾಣಿಸಲೇ ಇಲ್ಲವೆಂದು ವರ್ತಮಾ ಗಳಿಂದ ತಿಳಿಯುತ್ತದೆ.

—○—

ಳಿಯಲ್ಲಿ ಇಷ್ಟರೊಳಗೆ ಸಣ್ಣದೊಂದು ಟ್ರೇನಿಂಗಕಾ ವು ಸ್ಥಾಪನವಾಗತಕ್ಕದ್ದಿರುತ್ತದೆಂದು ಕೇಳುತ್ತೇವೆ.

—○—

ವರ್ಷದ ಕಲಕತ್ತೆಯ ಮ್ಯಾಟ್ರಿಕ್ಯುಲೇಶನ್ ಪರೀ ಲ್ಲಿ ೩೦ ಜನ ತರುಣಿಯರು ಪಾಸಾದರು.

ಹೊಸದಾಗಿ ಕಟ್ಟಲ್ಪಡುವ ಶಾಲಾಗೃಹಗಳ ಅರ್ಧ
ಚ್ಚವನ್ನು ಊರವರು ಕೊಟ್ಟರೆ ಉಳಿದ ಅರ್ಧ ವೆ
ವನ್ನು ಸರಕಾರದವರು ಇದುವರೆಗೆ ಕೊಡುತ್ತಿದ್ದರು.
ಸರೆ ಇನ್ನು ಮುಂದೆ ಚತುರ್ಥಾಂಶ ವೆಚ್ಚ ಮಾತ್ರ ಕೊ
ಲ್ಪಡುವದೆಂದು ಸರಕಾರದವರ ಠರಾವು ಆದದ್ದು ತಿಳಿದಿದೆ,

——o——

ಮೈಲೀ ತೆಗಿಯುವದರಿಂದ ಶರೀರಕ್ಕೆ ಅಪಾಯವಾ
ತ್ತದೆಂದು ಪ್ರತಿಪಾದಿಸುವದೊಂದು ಸಮಾಜವು ವಿಲಾ
ಯಲ್ಲಿ ಇರುತ್ತದೆ. ಆ ಸಮಾಜದವರು ಮೈಲೀ ತೆಗಿ
ನಡಾವಳಿಯನ್ನು ಮುರಿಯುವ ಪ್ರಯತ್ನ ನಡಿಸಿದ್ದಾರೆ.
ಕ್ಟೋರಿಯಾ ಮಹಾರಾಣಿಯವರು ಆ ಸಮಾಜದವರಿಗೆ ಪೂ
ಆಶ್ರಯವನ್ನು ಕೊಟ್ಟಿದ್ದಾರೆಂಬು ತಿಳಿದಿದೆ.

——o——

ಒಬ್ಬ ಮುಸಲ್ಮಾನ ಗೃಹಸ್ಥನು " ಗೋಜೀವನ "
ಬದೊಂದು ಪುಸ್ತಕವನ್ನು ಪ್ರಕಟಿಸಿದ್ದಾನೆ. ಅದರಲ್ಲಿ ಗ
ಮಾಂಸ ತಿನ್ನುವದನ್ನು ಬಿಡಿರೆಂದು ಅವನು ತನ್ನ ಜಾತಿ
ಧವರನ್ನು ಬೋಧಿಸುತ್ತಾನೆ. ಆದರೆ ಇದು ಧರ್ಮಸಂಬ
ದ ಬೋಧನೆಯಲ್ಲ; ಆಕಳು ಪ್ರಪಂಚಕ್ಕೆ ಅತ್ಯುಪಯ
ವಾಗಿರುತ್ತದೆಂಬ ಸಂಬಂಧದ್ದಿರುತ್ತದೆ.

——o——

ಶ್ರೀಮನ್ ಸ್ವಾಮಿಯೆಂಬವನೊಬ್ಬ ಸಾಧು ಪುರುಷನ
ರೂ ಗೋವಧ ಮಾಡಬಾರದೆಂಬ ಬಗ್ಗೆ ಮುಂಬಯಿಯ
ಯೂ ಪುಣೆದಲ್ಲಿಯೂ ವ್ಯಾಖ್ಯಾನಗಳನ್ನು ಕೊಡುತ್ತಲಿ
ನೆ. ಇದಲ್ಲದೆ ಬಂಗಾಲದಲ್ಲಿಯೂ ನಮ್ಮ ಇಲಾಖೆಯ

ಯೂ ಗೋರಕ್ಷಣೆ ಯೆಂಬ ಕೆಲವು ಸಭೆಗಳು ಜನ್ಮ ಹೊಂದಿರುತ್ತವೆ. ಈ ಯಾವತ್ತು ಪ್ರಯತ್ನದಿಂದ ಯೇನಾದರೂ ಉಪಯೋಗವಾಗುವದೋ?

—०—

ಇದರಂತೆ ಮದ್ಯ ಪಾನವನ್ನು ನಿಷೇಧಿಸುವ ಪ್ರಯತ್ನವಾ ರೂ ಬಹಳ ಕಡೆಯಲ್ಲಿ ನಡೆದಿರುತ್ತದೆ. ಸೋಲ್ಜರರಲ್ಲಿ ಹು ಜನರು ಸರಾಯಿಯನ್ನು ಬಿಡುತ್ತ ನಡೆದಿದ್ದಾರೆ. ಆ ಜಿಲ್ಲೆಯಲ್ಲಿಯೂ ಬೇರೆ ಕೆಲವು ಕಡೆಯಲ್ಲಿಯೂ ಮ ಪ್ರಾಶನ ಮಾಡಿದವರನ್ನು ಕುಲದಿಂದ ಹೊರಗೆ ಇಡು ಕಟ್ಟಳೆ ಮಾಡಿದ್ದಾರೆ. ದಕ್ಷಿಣ ಹೈದರಾಬಾದ ಪಟ್ಟಣದ ಸರಾಯಿ ಮಾರುವ ಅಂಗಡಿಗಳು ಹೆಸರಿಗೆ ಸಹ ಇಲ್ಲ.

—०—

ಚೀನಾದೇಶದಲಿ ಅತ್ಯಾಶ್ಚರ್ಯಕರವಾದಂಥ ಜಂತುಗಳು ರುತ್ತವೆಂಬು ಒಂದು ವರ್ತಮಾನಪತ್ರವು ತಿಳಿಸುತ್ತದೆ. ಗಂದರೆ —೧ ಕಾನಸೀ ಯೆಂಬ ಪ್ರಾಂತದಲ್ಲಿ ಒಂದು ಕ್ಕಿ ಇರುತ್ತದೆ; ಅದು ಬೇಕಾದಾಗ ಗಂಡು ಇಲ್ಲವೆ ಹೆಣ್ಣು ಗುತ್ತದೆ! ತೌನಸಿನ್'ಚೂಯೆಂಬ ಪ್ರಾಂತದಲ್ಲಿ ಜೇರೊಂ ಜಾತಿಯ ಪಕ್ಷಿ ಯುಂಟು; ಅದು ಒದರ ಹತ್ತಿದರೆ ಅದ ಬಾಯೊಳಗಿಂದ ಅತಿ ಸೂಕ್ಷ್ಮ ಕೀಟಕಗಳು ಕೆಳಗೆ ಬೀಳು ವೆ! ಕಾನಸೂ ಯೆಂಬ ಪ್ರಾಂತದಲ್ಲಿ ಕೊಬ್ಬೇರಿದ ಯೆ ನಂಥಾದ್ದೊಂದು ಪಶುವಿರುತ್ತದೆ; ಅದರ ಮೈ ಮೇಲಿನ ಮಾಂಸವನ್ನು ಕೊಯಿದು ತೆಗೆದರೆ, ಒಂದೇ ದಿವಸದೊಳಗೆ ಯ್ದ ಸ್ಥಳವು ಮೊದಲಿನಂತೆ ತುಂಬಿಕೊಳ್ಳುತ್ತದೆ! ಇ ತ್ಯಾದಿ ಇವೆಲ್ಲ ನಿಜವಿರಬಹುದ್ದೋ?

Notices.

ನೋಟೀಸುಗಳು.

ಧಾರವಾಡ ಟ್ರೆನಿಂಗ ಕಾಲೇಜದಲ್ಲಿ ಉಮೇದವಾರರನ್ನು ಪಗಾರಿ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳ ತಕ್ಕವಂದ್ದೇವೆ. ಸಂಬಂಧದ ಪ್ರವೇಶಪರೀಕ್ಷೆಯು ೭ನೇ ಸ್ಟ್ಯಾಂಡರ್ಡನಂತೆ ಬರುವ ನವಂಬರ ತಿಂಗಳ ೮ನೇ ತಾರೀಖಿಗೆ ಆಗುವದು. ಪರೀಕ್ಷೆಗೆ ಬರುವವರು ಮುಲಕೀ ಪರೀಕ್ಷೆಯಲ್ಲಿ ಪಾಸಾದವರೂ, ಸಶಕ್ತರೂ, ವ್ಯಂಗರಹಿತರೂ ೫ಫೂಟಿಗಿಂತ ಎತ್ತರಿರುವಂಥವರೂ ಇರಲಿಕ್ಕೆ ಬೇಕು. ಮತ್ತು ದೀಡನೂರು ರುಪಾಯಿಯ ಸ್ಥಾವರ ಆಸ್ತಿಯುಳ್ಳವರಾಗಿದ್ದ ಬಗ್ಗೆ ಗೌಡಶಾನಭೋಗರ ಸರ್ಟಿಫಿಕೇಟು (ಕೆಳಗಿನ ನಮೂನೆಯಂತೆ) ಮುಲ್ಕೀಸರ್ಟಿಫಿಕೇಟು ಮತ್ತು ವಯಸ್ಸಿನ ದಾಖಲೆ, ಈಪ್ರಕಾರ ಮೂರು ಸರ್ಟಿಫಿಕೇಟುಗಳನ್ನು ತೆಗಿದುಕೊಂಡು ಸದರಿ ಮುದ್ದತಿನ ಒಳಗಾಗಿ ಬಂದು ನಮ್ಮ ಕಡಿಗೆ ಹಾಜರಾಗಬೇಕು. ಉಮೇದವಾರರ ವಯಸ್ಸು ೧೭ರ ಮೇಲೆ ೨೪ರ ಒಳಗೆ ಇರಲಿಕ್ಕೆ ಬೇಕು.

೨· ಮುಸಲ್ಮಾನ ಹುಡುಗರನ್ನು ಪ್ರ್ಯಾಕ್ಟೀಶಿಂಗ ಸ್ಕೂಲಿನಲ್ಲಿ ಪಗಾರಿ ವಿದ್ಯಾರ್ಥಿಗಳಾಗಿ ಈ ವರ್ಷ ತೆಗೆಯುಕೊಳ್ಳುವ ಪ್ರವೇಶ ಪರೀಕ್ಷೆಯು ಕನ್ನಡದಲ್ಲಿ ೫ನೇ ಇಯತ್ತೆಯಂತೆಯೂ ಹಿಂದುಸ್ಥಾನಿಯಲ್ಲಿ ೪ನೇ ಇಯತ್ತೆಯಂತೆಯೂ ಆಗುವದು. ವಯಸ್ಸು ೧೬ರ ಮೇಲೆ ೨೨ರವಳಗೆ ಇರತಕ್ಕದ್ದು. ವಯಸ್ಸಿನ ದಾಖಲೆ, ಆಸ್ತಿಯ ಸರ್ಟಿಫಿಕೇಟು, ಇವನ್ನು ಅರ್ಜದಾರರೂ ತರಲಿಕ್ಕೆ ಬೇಕು.

೩· ಕಾಲೇಜದಲ್ಲಿ ತೆಗೆದುಕೊಳ್ಳಲ್ಪಟ್ಟವರು ಬೋರ್ಡಿಂಗಿನ ಸಂಬಂಧದಿಂದ ನಾಲ್ಕು ರುಪಾಯಿ ಅಡ್ವಾನ್ಸ ಇಡಬೇ

ಾಗುವದು.

(ಆಸ್ತಿಯ ಸರ್ಟಿಫಿಕೇಟಿನ ನಮೂನೆ.)

ಮೌಜಿ ತಾಲೂಕ ಜಿಲ್ಲಾ ಇಲ್ಲಿ ರು ಗ್ರಾಮಸ್ಥರು ಬರಕೊಡುವ ಸರ್ಟಿಫಿಕೇಟು ಯೇನಂದ :—(ಉಮೇದವಾರನ ಹೆಸರು ತಂದೆಯ ಹೆಸರು ಅಡ್ಡಹೆ ರು ಇರುವ ಊರು ತಾಲೂಕ) ಈತನ ಸ್ಥಾವರ ಆಸ್ತಿಯು ದೇ ಊರಲ್ಲಿ ೧೫೦ ಒಂದನೂರಾಐವತ್ತು ರುಪಾಯಿದ್ದು ಇರು ದೆ. ತಾ. ತಿಂಗಳ ಇ.

×

*

ಗೌಡ ಕುಲಕರ್ಣೀರ ಸಹಿಗಳು.

ರವಾಡ
ತಾ. ೫|೭|೮೯.

V R. Katti.
ಪ್ರಿನ್ಸಿಪಾಲ ಟ್ರಿ. ಕಾಲೇಜ ಧಾರವಾಡ.

—coo—

ಕಾನಡಾ ಜಿಲ್ಲೆಯೊಳಗಿನ ಯಾವತ್ತು ಶಾಲಾ ಮಾಸ್ತರಿಗೆ:—

ಳಗೆ ಸಹಿ ಮಾಡುವವರಿಂದ ತಿಳಿಸಲ್ಪಡುವದೇನಂದರೆ:—

ಪೋಸ್ಟ ಖಾತೆಯಿಂದ ಸಂಬಳ ಪಡೆಯುತ್ತಿದ್ದ ಯಾವ ತ್ತು ಮಾಸ್ತರರು, ಯಾವದೇ ಪ್ರಕಾರದ ರಜೆಯ ಮೇಲೆ ೋಗುವದಾದರೆ, ಸದರ ಖಾತೆಯ ಅಧಿಕಾರಿಗಳ ಕಡಿಂದ ುಂಚಿತವಾಗಿ ಅಪ್ಪಣೆ ಪಡಕೊಂಡು ಹೋಗಬೇಕು. ಹೀ ವರ್ತಿಸದೆ, ನಮ್ಮ ಕಡಿಂದ ಮಾತ್ರ ಅಪ್ಪಣೆ ಪಡಕೊಂ ೈರ ಹಾಜರ ಆಗುವ ಮಾಸ್ತರರನ್ನು ಪೋಸ್ಟ ಕೆಲಸ ಲ್ಲದ ಶಾಲೆಗೆ ವರ್ಗ ಮಾಡುವೆವು. ತಾರೀಖು ೩ ನೇ

ಜುಲೈ ಸನ್ನ ೧೮೮೯ ಮುಕ್ಕಾಂ ಕಾರವಾರ.

Babacharya Kerur

(Ag.) ಡಿ. ಎ. ಇ. ಇನಸ್ಪೆಕಟರ ಕಾನಡಾ

—o—

History of the Middle Ages
ಯುರೋಪದ ಮಧ್ಯಕಾಲದ ಇತಿಹಾಸವು.

(೧೨೦ನೇ ಪುಟದಿಂದ ಮುಂದೆ ಸಾಗಿದ್ದು.)

— ಪೊರ್ತುಗಾಲವು —

ಬರ್ಗಂಡಿಯವನೊಬ್ಬ ಸರದಾರ ಹೆನರಿ ಯೆಂಬವನ ಪೋಲೀದೋ ಪಟ್ಟಣದ ಮುತ್ತಿಗೆಯಲ್ಲಿ ಪ್ರಖ್ಯಾತಿ ಪಡೆದುದರಿಂದ ಆವನಿಗೆ ಪೋರ್ತುಗಾಲದ ಅರಸನು ತನ್ನ ಮಗಳನು ಕೊಟ್ಟು ಕೆಲವು ಶೀಮೆಯ ಅಧಿಕಾರ ಕೊಟ್ಟನು, ೧೦೯೫. ಹೆನರಿಯು ಮೂರರನ್ನು ಯಾವಾಗಲೂ ಪೀಡಿಸುತ್ತ ಪೋರ್ತೋ ಪಟ್ಟಣವನ್ನು ಗೆದ್ದು ಕೊಂಡನು. ಅವನ ಮಗ ಅಲ್ಫಾನ್ಸೋ ಯೆಂಬವನು ಮೂರರನ್ನು ಪೀಡಿಸಲಾಗಿ ಅವರ ಸರದಾರರೆಲ್ಲರು ದೊಡ್ಡ ದಂಡು ಕೂಡಿಸಿ ಓರಿಕ ಪಟ್ಟಣದ ಹತ್ತರ ಯುದ್ಧಕ್ಕೆ ನಿಂತರು. ಆಗ ಅಲ್ಫಾನ್ಸೋನ ಸೈನ್ಯವು ಚಿಕ್ಕದಿದ್ದಾಗ್ಯೂ ಅವನು ಶೌರ್ಯದಿಂದ ಮೂರರನ್ನು ಜಯಿಸಿ, ಅದೇ ರಣಾಂಗಣದಲ್ಲಿ ಪೋರ್ತುಗಾಲದ ಅರಸುತನವನ್ನು ಪಡೆದನು, ೧೩೩೯. ಇವನ ಮಗ ಸಾಂಕೋ ಎಂಬ ಅರಸನಾದರೂ ಇವನಂತೆ ಶೂರನಿದ್ದನು. ಆವನು ಲಿಸಬನ್ ಪಟ್ಟಣವನ್ನು ತಕ್ಕೊಂಡು ಅದನ್ನು ತನ್ನ ರಾಜಧಾನಿಯ ಮಾಡಿಕೊಂಡನು, ೧೪೪೭.

ಇರಾಣವು.

ಸಲ್ಜೂಕ ಮನೆತನದ ಸುಲ್ತಾನರು ದುರ್ಬಲರಾಗುತ್ತ ನಡೆಯಲಾಗಿ, ಚಿಕ್ಕ ದೊಡ್ಡ ಪ್ರಾಂತಗಳ ಅಧಿಕಾರಸ್ಥರು ಸ್ವತಂತ್ರರಾಗಿ ಅತ್ತಾಬೇಗೆಂಬ ಪದವಿಯನ್ನು ಧರಿಸಿದರು. ಅತ್ತಾಬೇಗ ಅಂದರೆ ಅರಸು ತಂದೆ ಇವರು ಆದರ್ಬಿಜಾನ, ಫಾರ್ಸ, ತಾರಿಸ್ತಾನ, ಯೆಂಬ ಪ್ರಾಂತಗಳನ್ನು ಕೆಲಕಾಲ ಆಳಿದರು. ಇವರ ಸ್ವಾತಂತ್ರ್ಯವನ್ನು ಜಂಗಿಸಖಾನನ ಮೊಮ್ಮಗನು ಕಡೆಯಲ್ಲಿ ಮುರಿದನು.

ಸಾಲಾದೀನನು.

ಫಾತಿಮನ ವಂಶದ ದುರ್ಬಲವಾದ ಖಲೀಫಗಳ ವಜೀರನೊಬ್ಬನು ಇಜಿಪ್ತದವರಿಂದ ಬಾಧಿಸಲ್ಪಟ್ಟು ಮೋಸಲದ ಅತ್ತಾಬೇಗನಾದ ನೂರ ಉದ್ದೀನ ಮಹಮ್ಮದನೆಂಬವನನ್ನು ಸಹಾಯಕ್ಕೆ ಕರೆದನು. ಅವನಿಂದ ಕಳುಹಲ್ಪಟ್ಟ ತುರ್ಕೀ ಸೈನ್ಯದವರು ಇಜಿಪ್ತವನ್ನು ಸ್ವವಶ ಮಾಡಿಕೊಂಡದರಿಂದ (೧೧೭೧) ಆ ಸೈನ್ಯದ ಮುಖ್ಯಸ್ಥನಾದ ಶಿರ್ಕೂ ಎಂಬವನು ಆ ದೇಶದ ಅಧಿಕಾರ ಪಟ್ಟು, ಅವನ ತರುವಾಯ ಆವನ ತಮ್ಮನ ಮಗ ಸಾಲೆ ಉದ್ದೀನನೆಂಬವನು ಆ ಅಧಿಕಾರ ಹೊಂದಿದನು. ಸಾಲಾ ಉದ್ದೀನನು (ಸಾಲೆ ಉದ್ದೀನ) ಕುರ್ದಿಸ್ತಾನದವನಿದ್ದ ಕಾರಣ ಫಾತಿಮೈತ ಖಲೀಫಗಳ ವಂಶವು ಮುಗಿದ ಬಳಿಕ ತಾನೇ ಖಲೀಫನಾಗಿ ಅಯುಬೈಟೆಂಬ ರಾಜವಂಶವನ್ನು ಸ್ಥಾಪಿಸಿದನು. ಇವನು ಅರೆಬಿಯ, ಸಿರಿಯ, ಮುಂತಾದ ಪ್ರಾಂತಗಳನ್ನು ಗೆದ್ದುಕೊಂಡು ಜರೂಸಲೇಮಕ್ಕೆ ತೆರಳಲಾಗಿ, ಗೀದೀ ಲುಶಿಗ್ನನೆಂಬ ಕ್ರಿಸ್ತೀ ಸರ

ದಾರನಿಗೂ ಅವನಿಗೂ ಯುದ್ಧವಾಗಿ, ಗೈಯು ಸೆರೆ ಹಿ ಯಲ್ಪಟ್ಟನು, ೧೧೮೭. ತರುವಾಯ ಅವನು ಜರೂಸಲೆಮವನ್ನು ತಕ್ಕೊಂಡಾಗ್ಯೂ, ಅಲ್ಲಿಯ ಕ್ರಿಸ್ತೀ ಜನರಿಗೆ ತಿಶಯ ದಯ ತೋರಿಸಿದನು. ಅವರ ದೇವಾಲಯವನ್ನು ಅವ ವಶದಲ್ಲಿಯೇ ಇರಗೊಟ್ಟು ಸ್ವಲ್ಪ ಹಣ ಕೊಟ್ಟವರನ್ನು ಸುಮ್ಮನೇ ಹೋಗಗೊಟ್ಟನು. ಈ ಸುದ್ದಿಯು ಯುರೋಪದಲ್ಲಿ ಹಬ್ಬಲಾಗಿ, ಇಂಗ್ಲಂಡದ ಮೊದಲನೇ ರಿಚರ್ಡನೂ, ಫ್ರಾನ್ಸಿ ಫಿಲಿಪರಾಜನೂ ಕೂಡಿದೊಡ್ಡ ಸೈನ್ಯ ತಕ್ಕೊಂಡು ಸಾಲಾದಿನನ ಸಂಗಡ ಯುದ್ಧಕ್ಕೆ ಹೋದರು. ಆದರೆ ಸಾಲಾದೀನ ಚಾತುರ್ಯದಿಂದಲೂ ಕ್ರಿಸ್ತೀ ಜನರಲ್ಲಿ ಐಕ್ಯವಿಲ್ಲದ್ದರಿದಲೂ ಅವರ ಹವಣಿಕೆಯೂ ನೆರವೇರಲಿಲ್ಲ. ಸಾಲಾದೀನನು ೫೭ನೇ ವರ್ಷದ ವಯಸ್ಸಿನಲ್ಲಿ ದಮಾಸ್ಕಸದಲ್ಲಿ ತೀರಿದನು. ೧೧೯೩. ಇವನ ಸದ್ಗುಣಗಳು ಯುರೋಪದಲ್ಲಿಯೂ ಏಶಿಯದಲ್ಲಿಯೂ ಸರಿಯಾಗಿ ಪ್ರಸಿದ್ಧವುಂಟು

(ಮುಂದೆ ಸಾಗುವದು.)

* * *

(೧೧೯ನೇ ಪುಟದಿಂದ ಮುಂದೆ ಸಾಗಿದ್ದು.)

ಇವತ್ತಿನ ಸಭೆಗೆ ಕಾರಣರಾದ ರಾವಸಾ. ವಿಶ್ವನಾಥ ನಾರಾಯಣ ಮಂಡಲಿಕ ಸಿ, ಯಸ್, ಆಯ್, ಇವರ ವಿಷಯದಲ್ಲಿ ನಾಲ್ಕು ಮಾತುಗಳನ್ನಾಡಿ ನನ್ನ ಮುಕ್ತುವನ್ನು ಶಾಂತಪಡಿಸುತ್ತೇನೆ. ಈ ಮಹಾ ಪುರುಷರ ಜನ್ಮ ೧೮೩೩ನೇ ಇಸ್ವಿಯಲ್ಲಿ ರತ್ನಾಗಿರಿ ಜಿಲ್ಹೆಯ " ಹರಣ ಮುರುಡ " ವೆಂಬ ಗ್ರಾಮದಲ್ಲಿ ಆಯಿತು. ಇವರ ಮನೆತನಕ್ಕೂ ಶ್ರೀಮಂತ ಬಾಜೀರಾವ ಪೇಶ್ವೆ ಇವರ ಮನೆತನಕ್ಕೂ ನಿಕಟ ಸಂಬಂಧ ಉಂ

ಖು. ಅಂಥಾ ದೊಡ್ಡ ಮನೆತನದಲ್ಲಿ ಹುಟ್ಟಿದ ಈ ಸತ್ಕುಲೀನ 'ಮಂಡಲಿಕರು' ತಮ್ಮ ಹುಟ್ಟುಗುಣ ಸ್ವಭಾವದಿಂದಲೂ, ವಿದ್ವತ್ವದಿಂದಲೂ, ದೀರ್ಘ ಪ್ರಯತ್ನದಿಂದಲೂ ತಮ್ಮ ಮನೆತನದ ಕೀರ್ತಿಯನ್ನು ಬರೆ ಮಹಾರಾಷ್ಟ್ರ ದೇಶದಲ್ಲಿ ಅಲ್ಲ ಹಿಮಾಲಯದಿಂದ ಕನ್ಯಾಕುಮಾರಿ ತನಕ, ಸಿಂಧು ನದಿಯಿಂದ ಬ್ರಹ್ಮಪುತ್ರ ನದಿಯತನಕ ಅಂದ್ರೆ ಇಡೀ ಹಿಂದುಸ್ತಾನದಲ್ಲಿ ಮಾತ್ರವಲ್ಲ, ಆದರೆ ಏಳು ಸಮುದ್ರಗಳಾಚೆ ಇರುವಂಥ ಆಂಗ್ಲ ಭೂಮಿಯಲ್ಲಿ ಸಹಾ ಸೂರ್ಯ ಚಂದ್ರರು ಇರುವವರೆಗೆ ಸ್ಥಿರಗೊಳಿಸಿದರೆಂದು ಹೇಳಿದರೂ ಅತಿಶಯೋಕ್ತಿಯಾಗದು. ಮುಂಬಯಿ ಇಲಾಖೆಯಲ್ಲಿ ಇಂಗ್ಲಿಷ ಅಮಲು ಆದಂದಿನಿಂದ ಇವತ್ತಿನವರೆಗೆ ಇಂಥ ಪುರುಷರು ಆಗಿಲ್ಲೆಂದರೂ ಸಲ್ಲುವದು. ಕೃಷ್ಣದಾಸ ಪಾಲರ ಕೀರ್ತಿಯು ಬಂಗಾಲ ಇಲಾಖೆಯಲ್ಲಿ ಹಬ್ಬಿದಂತೆ ಇವರ ಕೀರ್ತಿಯು ಮುಂಬಯಿ ಇಲಾಖೆಯಲ್ಲಿ ಹಬ್ಬಿ ಅನೆ. ಇಂಥಾ ಯೋಗ್ಯತೆಗೆ ಏರಬೇಕಾದರೆ ಬರೇ ವಿದ್ವತ್ವದಿಂದ, ಬರೇ ವಾಕ್ಚಾಪಲ್ಯದಿಂದ, ಬರೇ ಐಶ್ವರ್ಯದಿಂದ ಏರುವದಿಲ್ಲ; ಆದರೆ ಈ ಮೂರಕ್ಕೂ ವಿಚಾರ ಸ್ವಾತಂತ್ರ್ಯ, ಉದಾರ ಮನಸು, ದೃಢ ನಿಶ್ಚಯ, ನಿಸ್ಪೃಹತಾ, ಗಾಂಭೀರ್ಯ, ಅನಾಲಶ್ಯ ಮುಂತಾದ ಗುಣಗಳು ಬೆರೆತುಕೊಂಡಿರಲಿಕ್ಕೆ ಬೇಕು. ಈ ಯಾವತ್ತು ಗುಣಗಳು ಈ ಗೃಹಸ್ಥರಲ್ಲಿ ಪೂರ್ಣವಾಗಿ ನೆಲೆಗೊಂಡಿದ್ದರಿಂದ ಇಷ್ಟು ಯೋಗ್ಯತೆಗೆ ಏರಲಿಕ್ಕೆ ಅವರಿಗೆ ಆಸ್ಪದವಾಯಿತು. ಇಂಥಾ ಅಮೌಲ್ಯ ಗುಣಗಳುಳ್ಳ ರಾವಸಾ. ಮಂಡಲಿಕರು ಕಳೆದ ೯ನೇ ತಾರೀಖು ಗುರುವಾರ ದಿವಸ ಒಮ್ಮಿಂದೊಮ್ಮೆ ನಮ್ಮೆಲ್ಲರನ್ನು ದುಖ್ಖ ಸಾಗರದಲ್ಲಿ ಮುಳುಗಿಸಿ ಸ್ವರ್ಗಸ್ಥರಾದರು. ಈ ರಾವಸಾಹೇ

ಬರ ಮೃತ್ಯುವಿನಿಂದ ನಮ್ಮ ಮುಂಬಯಿ ಇಲಾಖೆಯ ಹಾನಿಯು ಮಾತ್ರವಲ್ಲ ಆದರೆ ಇಡೀ ಹಿಂದುಸ್ತಾನದ್ದೇ ಹಾನಿ ಆಯಿತು ಎಂದು ಹೇಳಬಹುದು.

ಇವರು ಅಭ್ಯಾಸ ಮಾಡುತ್ತಿರುವಾಗ್ಗೆ ತಮ್ಮ ಅಲೌಕಿಕ ಬುದ್ಧಿಚಾತುರ್ಯ ಗುಣಗಳಿಂದ ತಮ್ಮ ಗುರುಗಳನ್ನು ಆಶ್ಚರ್ಯಪಡಿಸಿದರು. ಅನೇಕ ಪರೀಕ್ಷೆಗಳಲ್ಲಿ ೧ನೇ ನಂಬರು ಪಡೆದದ್ದಲ್ಲದೆ ೨|೩ ಸ್ಕಾಲರಶಿಪ್ಪುಗಳನ್ನು ದೊರಕಿಸಿದರು. ಅಭ್ಯಾಸವು ಪೂರ್ಣವಾದ ಮೇಲೆ ಸನ್ ೧೮೫೨ನೇ ಇಸ್ವಿಯಲ್ಲಿ ಸರಕಾರೀ ಉದ್ಯೋಗದಲ್ಲಿ ಶೇರಿದರು ಮುಂದೆ ೧೧ ವರ್ಷಗಳವರೆಗೆ ದೊಡ್ಡ ದೊಡ್ಡ ಉದ್ಯೋಗಗಳನ್ನು ಮಾಡಿದರು ಆದರೆ ಪರತಂತ್ರದ ಕೆಲಸ ಮಾಡುವದು ಇವರಿಗೆ ಸೇರದೆ ಇದ್ದದರಿಂದ, ಇವರು ಪರತಂತ್ರವೆಂಬ ಸಂಕೋಲೆಯನ್ನು ತೆಗೆದು ಹಾಕಿ ಹೈಕೋರ್ಟಿನ ವಕೀಲಿಯ ಪರೀಕ್ಷೆಯನ್ನು ಕೊಟ್ಟು ಸ್ವತಂತ್ರ ಉದ್ಯೋಗವನ್ನು ಕೈಕೊಂಡರು. ಅಂದಿನ ಬೂದಿಯಲ್ಲಿ ಮುಚ್ಚಿಟ್ಟ ಕೆಂಡದಂತೆ ಇದ್ದ ಇವರ ಸದ್ಗುಣದ ಕಾಂತಿಯು ನಿರಾತಂಕವಾಗಿ ಬೈಲಿಗೆ ಬರಲಿಕ್ಕೆ ವಿಶೇಷ ಅನುಕೂಲವಾಯಿತು. ಈ ವಕೀಲೀ ಕೆಲಸದಲ್ಲಿ ಬಹು ಕೀರ್ತಿಯನ್ನು ಸಂಪಾದಿಸಿದ್ದಲ್ಲದೆ, ಅವರು ಕ್ರಮೇಣ ೧೮೬೫ನೇ ಇಸ್ವಿಯಲ್ಲಿ ಮುಂಬಯಿ ಜಸ್ಟೀಸ ಆಫದಿಪೀಸ, ೧೮೭೦ರಲ್ಲಿ ಮುಂಬಯಿ ಮ್ಯುನಿಸಿಪಾಲಿಟಿ ಕಾರ್ಪೋರೇಶನ್ದ ಚೇರಮನ್, ೧೮೭೪ರಲ್ಲಿ ಮುಂಬಯಿ ಕಾಯಿದೆ ಕೌನ್ಸಿಲ್ಲಿನಲ್ಲಿ ಮೆಂಬರರು ಆದರು. ಇದಲ್ಲದೆ ಇಷ್ಟು ದಿವಸಗಳವರೆಗೆ ನೇಟಿವ್ಹ ಜನರಿಗೆ ಶಿಕ್ಕದೇ ಇರದಂಥ ಗೌರವದ ಸ್ಥಳವು ಅಂದರೆ ಕಲಕತ್ತೆಯ ಕಾಯದೇ ಕೌನ್ಸಿ

ಯಲ್ಲಿ ಮೆಂಬರರ ಸ್ಥಲವು ಸಿಕ್ಕಿತು. ಆಕಾಲಕ್ಕೆ ನಮ್ಮ ಪರಮದಯಾಳುಗಳೂ ಹಿಂದುಸ್ಥಾನದ ಹಿತಚಿಂತಕರೂ ನಮ್ಮ ಪೂಜ್ಯ ಕೃತಗ್ನತೆಗೆ ಪಾತ್ರರೂ ಆದ “ ದಿ ಆನರೇಬಲ್ ಲಾರ್ಡ ರಿಪನ್ ” ಪ್ರಭುಗಳು ಹಿಂದುಸ್ತಾನದ ಗೌರ್ನರ ಜನರಲ್ ಇನ್ ಕೌನಸಿಲ್‌ರಾಗಿದ್ದರು. (ಆ ಧೊರೆಗಳಿಗೆ ಹಾಗು ಅವರ ಸಂತತಿಗೆ ಕಲ್ಯಾಣವೂ ಶಾಂತತೆಯೂ ಇರಲಿ) ಈ ಕೆಲಸದಲ್ಲಿ ರಾವಸಾಹೇಬ ಮಾಂಡಲಿಕರು ಬಂಗಾಲದ “ ಟಿನೆನ್ಸೀಬಿಲ್ ಹಾಗು ಇನ್‌ಕಮಟಾಕ್ಸ ” ಈ ವಿಷಯಗಳ ಬಗ್ಗೆ ಮಾಡಿದಂಥ ಭಾಷಣಗಳು ಲೋಕಪ್ರಸಿದ್ಧ ಉಂಟು. ಅವರು ತಮ್ಮ ವಿದ್ಯದ ಮತ್ತು ವಕ್ತೃತ್ವಶಕ್ತಿಯ ಪ್ರಭಾವದಿಂದ ಬಂಗಾಲ ಇಲಾಖೆಯಲ್ಲಿರುವ ಬಾಬೂ ಜನರನ್ನು ಸಹಾ ದಂಗುಪಡಿಸಿದರು.

ಅವರು ಮುಂಬಯಿ ಇಲಾಖೆಯಲ್ಲಿಯ ವಸೂಲಿಯ ಪದ್ಧತಿ ರತ್ನಾಗಿರಿ ಜಿಲ್ಹೆಯಲ್ಲಿಯ ಖೋತೀ ವತನದಾರ ಮುಂತಾದ ಸಾರ್ವಜನಿಕ ವಿಷಯಗಳ ಮೇಲೆ ನಿಬಂಧಗಳನ್ನು ಬರೆದು ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಿದರು. ಹಾಗು ಈ ವಿಷಯವಾಗಿ ಅಶ್ರಾಂತ ಶ್ರಮ ಪಟ್ಟರು. ಅವರು ರೈತ ಜನರಿಗೆ ಹಿತವಾಗಬೇಕೆಂದು ತಮ್ಮ ಕೈಲಾದ ಮಟ್ಟಿಗೆ ನಿರಂತರ ಹವಣಿಸುತ್ತಿದ್ದರು. ಈ ರಾಸಾಹೇಬರು ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ಕೊಟ್ಟಿದ್ದಲ್ಲದೆ ಅವರು ಸ್ವತಃ ಶಾಲೆಗೆ ಹೋಗಿ ಕೆಲಹೊತ್ತಿನ ವರೆಗೆ ಕಲಿಸುತ್ತಿದ್ದರು. ಈ ಪ್ರಕಾರದ ಜನರನ್ನು ಕಾಣುವದು ಅಪರೂಪ. ಬಾಯಿಲೆ ಬಡಬಡಿಸುವ ಜನರು ಬಹು ಮಂದಿ; ಆದರೆ ಸ್ವತಃ ಮೈ ಮುರಿದು ಕೆಲಸ ಮಾಡುವರು ಬಹು ಸ್ವಲ್ಪ ಜನರು. ಇವರು ವಿಶ್ವವಿದ್ಯಾ

ಲಯದ ಪರೀಕ್ಷಕರು ಇದ್ದದ್ದಲ್ಲದೆ " ಡೀನ " ವೆಂಬ ಬಹುಮಾನದ ಬಿರುದು ಅವರಿಗೆ ಕೊಡಲ್ಪಟ್ಟಿತ್ತು.

ಇವರ ಗುಣಗಳನ್ನು ಎಷ್ಟು ಕೊಂಡಾಡಿದರೂ ತೀರದು. ಈ ವರ್ಷ ಆಗತಕ್ಕ ರಾಷ್ಟ್ರೀಯ ಸಭೆಗೆ ಈ ಬಹುಮಾನ ಪಟ್ಟ ರಾವಸಾ. ಮಂಡಲೀಕರನ್ನು ಅಧ್ಯಕ್ಷರಾಗಿ ನೇಮಿಸಬೇಕೆಂದು ಕೆಲವು ವಿದ್ವಾನ್ ಜನರ ಅಭಿಪ್ರಾಯವಿತ್ತು; ಆದರೆ ಆದು ಕೊನೆಗಾಣಲಿಲ್ಲ. Man proposes God isposesd ಎಂಬ ಇಂಗ್ಲಿಷ ಗಾದಿಯಂತೆ ಮನುಷ್ಯ ಯೋಚಿಸುವದು ಒಂದು ದೇವರು ಮಾಡುವದು ಮತ್ತೊಂದು ಹೀಗಾಗಿ ನಮ್ಮ ಹವಣಿಕೆಗಳು ಅಲ್ಲಿಂದಲ್ಲಿಯೇ ನಿಂತು ಹೋಗುತ್ತವೆ. ಈ ರತ್ನವನ್ನು ಇಟ್ಟುಕೊಳ್ಳುವಷ್ಟು ಪುಣ್ಯವು ನಮ್ಮ ಆರ್ಯಮಾತೆಯದೂ ನಮ್ಮದೂ ಇಲ್ಲದ್ದರಿಂದ ನಾವು ದುರ್ಭಾಗ್ಯಗಳೆಂದು ಸಿದ್ಧವಾಗುತ್ತದೆ.

ರಾವ ಸಾ. ಮಂಡಲೀಕ ಇವರ ಚರಿತ್ರವನ್ನು ಮೊದಲಿನಿಂದ ಕಡೆತನಕ ಲಕ್ಷಪೂರ್ವಕ ಓದಿದರೆ, ಸ್ವತಂತ್ರತೆ, ಸರಳತನ, ಬಹುಶ್ರುತತ್ವ, ನಿಸ್ಪೃಹತೆ ಮುಂತಾದ ಗುಣಗಳು ಅವರಲ್ಲಿ ಪೂರ್ಣವಾಗಿ ನೆಲೆಗೊಂಡಿದ್ದವೆಂದು ಒಡಂಬಡಬೇಕಾಗುತ್ತದೆ ಇದಲ್ಲದೆ ಅವರಲ್ಲಿ ಇನ್ನೊಂದು ಮಹತ್ವದ ಗುಣವಿತ್ತು; ಅದ್ಯಾವದಂದರೆ— ನಿಯಮದಿಂದ ಕೆಲಸ ಮಾಡುವದು. ಈ ಗುಣದ ಪರಿಣಾಮ ವೇನಾಯಿತಂದರೆ— ಅವರು ತಮ್ಮ ಸರಕಾರೀ ಕೆಲಸವನ್ನು ತೀರಿಸಿಕೊಂಡು ಮಿಕ್ಕ ವೇಳೆಯಲ್ಲಿ ಎಲ್‌ಫಿನಿಸ್ಟನ್ ಕೃತ ಇತಿಹಾಸದಂಥ ದೊಡ್ಡ ಗ್ರಂಥವನ್ನು ಮಹಾರಾಷ್ಟ್ರ ಮತ್ತು ಗುಜರಾಥ ಭಾಷೆಗಳಲ್ಲಿ ಭಾಷಾಂತರಿಸಲಿಕ್ಕೂ, ಹಿಂದು ಧರ್ಮಶಾಸ್ತ್ರ, ಹಾಯ್ಕೋ

ರ್ಟಿನ ತೀರ್ಪ ಮುಂತಾದವುಗಳನ್ನು ಬರೆಯಲಿಕ್ಕೂ ಯಾಜ್ಞವಲ್ಕ್ಯಸ್ಮೃತಿ, ಮನುಸ್ಮೃತಿ ಮುಂತಾದ ಮಹತ್ವದ ಗ್ರಂಥಗಳನ್ನು ಟೀಕಿಸಲಿಕ್ಕು ಯಥಾರ್ಥ ದೀ ಟೀಕಾ ಎಂಬ ಧರ್ಮಾರ್ಥ ಗ್ರಂಥವನ್ನು ಛಾಪಿಸಲಿಕ್ಕೂ ಅನುಕೂಲವಾಯಿತು. ನೇಟೀವ್ಹ ಓಪೀನಿಯನ್ ಎಂಬ ವರ್ತಮಾನಪತ್ರದ ಉತ್ಪಾದಕರು ಇವರೇ ಇದ್ದರಿಂದ ತಿಳಿಯುತ್ತದೆ. ಪದ್ಮಪುರಾಣವೆಂಬ ಪ್ರಖ್ಯಾತ ಗ್ರಂಥವನ್ನು ಛಾಪಿಸುವ ಕೆಲಸವನ್ನು ಕೈಕೊಂಡಿದ್ದರು. ಅಷ್ಟರಲ್ಲಿಯೇ ಇದು ಯಮದೇವರಿಗೆ ಸಮರ್ಪಕ ಕಾಣದ್ದರಿಂದ ಅವನು ಅವರನ್ನು ಈ ಲೋಕದಿಂದ ಎತ್ತಿಕೊಂಡು ಹೋದನು.

ಇಂಥಾ ಲೌಕಿಕ ಪುರುಷರು ತೀರಿದ್ದರಿಂದ ಹಿಂದು ಸಮಾಜದ ಒಂದು ಕೈಯು ಮುರದಂತೆ ಆಯಿತು. ಇಂಥಾ ನೂನತೆಯು ಪೂರ್ಣವಾಗಲಿಕ್ಕೆ ಬಹು ಕಾಲ ಬೇಕಾಗುವದು. ಈಶಸಂಕೇತಕ್ಕೆ ಉಪಾಯವಿಲ್ಲ. ಆದರೆ ಆ ಅಂತರಾತ್ಮಕನಾದ, ದಯಾಪರನಾದ ಪರಮೇಶ್ವರನು ಈ ಧೀರೋದಾತ್ತ ಗಂಭೀರ ವೀರರಾದ ಹಾಗು ನಿರಂತರ ಶ್ರಮ ಮಾಡಿ ಮಾಡಿ ದಣಿದಂಥ ಈ ಮಹಾತ್ಮರಿಗೆ ವೀರಲೋಕದಲ್ಲಿ ಉತ್ತಮ ಗತಿಯನ್ನು ಕೊಟ್ಟು ಅವರಿಗೆ ಚಿರಕಾಲ ವಿಶ್ರಾಂತಿ ನೀಯಲಿ ಎಂದು ಬೇಡಿಕೊಳ್ಳುತ್ತೇನೆ, ಮತ್ತು ಅವರ ವಿಯೋಗ ಜನ್ಯದುಃಖದಿಂದ ಪೀಡಿತರಾದ ಅವರ ಆಪ್ತ ಇಷ್ಟರನ್ನೂ ಮಿತ್ರರನ್ನೂ ತೀವ್ರವಾಗಿ ತನ್ನ ದಯಾರದ್ರ ದೃಷ್ಟಿಯಿಂದ ನೋಡಿ ಸಮಾಧಾನ ಪಡಿಸಲೆಂದು ಪ್ರಾರ್ಥಿಸುವದಲ್ಲದೆ, ಈ ದೇಶ ಸೇವಾತತ್ಪರರಾದ ರಾವಸಾಹೇಬ ವಿಶ್ವನಾಥ ನಾರಾಯಣ ಮಂಡಲಿಕ ಇವರ ಹೆಸರು ಚಿರಕಾಲವಿರಬೇಕೆಂದು ಅವರ ಪ

ಮ ಮಿತ್ರರು ರಾವಸಾ, ಮಂಡಲಿಕರು ಜೀವದಿಂದ ಇರುವಾಗಲೇ ಮುಂಬಾಯಿಯಲ್ಲಿ ಕೂಡಿಸಿದ ಸ್ಮಾರಕ ಫಂಡಿಗೆ ದೇಶ ಹಿತ ಚಿಂತಕರಾದ ಯಾವತ್ತರು ತಮ್ಮ ಕೈಲಾದ ಮಟ್ಟಿಗೆ ವರ್ಗಣಿ ಕೊಟ್ಟು ಅವರ ಹೆಸರು ಅಮರವಾಗುವಂತೆ ಮಾಡುವರೆಂದು ನಂಬಿ, ಈ ದುಃಖಲೇಖವನ್ನು ಮುಗಿಸುತ್ತೇನೆ.

ಧಾರವಾಡ ತಾ. ೨೦|೫|೮೯ G. F. H.

Correspondence-

ಪತ್ರವ್ಯವಹಾರವು.

ರಾ. ಸಾ. ಕನ್ನಡ ಶಾಲಾಪತ್ರ ಕರ್ತ ಎಡಿಟರ ದಕ್ಷಿಣ ಭಾಗ ಖಾವಂದರವರ ಚರಣ ಸನ್ನಿಧಿಗೆ—

ವಿ. ವಿ. ಅಯ್ಯಾ ಎಡಿಟರ ಮಹಾರಾಯರೇ! ತಾವು ಈ ಕೆಳಗಿನ ಬೆಲೆಯುಳ್ಳ ಸಂಗತಿಯನ್ನು ಬಹು ಮೂಲ್ಯವಾದ ಶಾಲಾಪತ್ರಕದಲ್ಲಿ ಅಚ್ಚು ಹಾಕಿ ಸತ್ಕೀರ್ತಿಯನ್ನು ಪಡೆಯುವಿರೆಂಬ ಮಹತ್ಕಾಂಕ್ಷೆಯ ಪ್ರೇರಣೆಯಿಂದ ನಾನು ಪತ್ರಾಗಮನ ಮಾಡಿದ್ದೇನೆ.

" ವಿದ್ಯಾಭಿವೃದ್ಧಿಯನ್ನು ಆಲೋಚಿಸುವ ಸಭೆಯವ
ರಿಗೆ ಸುವಿನಯ ಪ್ರಾರ್ಥನೆಯು "

ಈ ನಮ್ಮ ವಿದ್ಯಾ ಖಾತೆಯಲ್ಲಿರುವ ಯಾವತ್ತು ಧೊರೆಗಳು ತಮ್ಮ ಕರ್ತವ್ಯ ಕರ್ಮವನ್ನು ಅನುಸರಿಸಿ, ತಾವು ಕೈಕೊಂಡಿರುವ ಈ ಲೋಕ ಹಿತಾರ್ಥವಾದ ಸತ್ಕರ್ಮದಲ್ಲಿ ತತ್ಪರರಾಗಿ ಶಾಲಾ ಖಾತೆಯಲ್ಲಿದ್ದ ನ್ಯೂನತೆಗಳನ್ನೆಲ್ಲ ಅಳಿದು, ಪ್ರತಿ ವರ್ಷ ತಿದ್ದುತ್ತ ಬಂದದರಿಂದ ಈಗ ದಕ್ಷಿಣ ಭಾ

ಗದಲ್ಲಿ ಎಷ್ಟೋ ಶಾಲೆಗಳು ಸುಧಾರಿಸಿ, ಬಹು ಜನರು ವಿದ್ಯಾವಂತರಾಗ ಹತ್ತಿದ್ದಾರೆ. ಆದರೂ ಇನ್ನೂ ಸುಧಾರಿಸತಕ್ಕ ಸಂಗತಿಗಳೆಷ್ಟೋ ಉಂಟು; ಸುಧಾರಿಸಿದ ರಾಷ್ಟ್ರದೊಳಗಿನ ಶಾಲೆಗಳಿಗೂ ನಮ್ಮ ದಕ್ಷಿಣ ಭಾಗದೊಳಗಿನ ಶಾಲೆಗಳಿಗೂ ಮಹದಂತರ ಉಂಟು. ಇರಲಿ, ಸಾಂಪ್ರತ ಕಾಲದ ಶಾಲಾಸ್ಥಿತಿ ರೀತಿಗಳಲ್ಲಿ ಕಂಡು ಬರುವ ಕುಂದುಗಳನ್ನೂ, ಹಾಗು ಅವುಗಳನ್ನು ಹೋಗಲಾಡಿಸುವದರಿಂದ ಆಗುವ ಲಾಭಗಳನ್ನೂ, ಮತ್ತೂ ಕೆಲವು ವಿದ್ಯಾಭಿವೃದ್ಧಿಯ ಮುಖ್ಯ ಸಂಗತಿಗಳನ್ನೂ ಕುರಿತು ನಾನು ಸ್ವಲ್ಪದರಲ್ಲಿ ವಿವೇಚನ ಮಾಡುತ್ತೇನೆ.

(೧) ಮಾಸ್ತರ ಜನರ ಸಂಬಳವು ತೀರ ಕಡಿಮೆ ಅಂದರೆ ೭, ೬, ೫ ರೂಪಾಯಿಗಳ ವರೆಗೆ ಸಾಲುಗೊಂಡಿರುವದಂತೂ ಎಲ್ಲರಿಗೂ ಗೊತ್ತುಂಟು. ಕೆಲ ಕೆಲವು ಶಾಲೆಗಳಲ್ಲಿ ೪ ರೂಪಾಯಿಯ ಸ್ಥಳಗಳು ಸಹ ಉಂಟೆಂದು ಹಲವರು ಹೇಳುತ್ತಾರೆ. ಇನ್ನು ಸಾಧಾರಣವಾಗಿ ಮಾಸ್ತರ ಜನರು ಬಡವರಿರುವದೇ ಬಹಳ, ಆದರಲ್ಲಿ ಮೇಲೆ ಬರೆದ ತಲಬಿಗೆ ಪಾತ್ರರಾದ ಶಿಕ್ಷಕರಂತೂ ಆಗ ಕಾಸಿ ಆಗ ಕುಡಿಯುವವರೇ ಇರುತ್ತಾರೆ. ಆದ್ದರಿಂದ ಇವರು ತಮಗೆ ದೊರಿಯುವ ಅಲ್ಪ ಸಂಬಳದಿಂದಲೇ ತಮ್ಮ ಯಾವತ್ತು ಕುಟುಂಬದ ಚಲಿತಾರ್ಥವನ್ನು ಸಾಗಿಸತಕ್ಕದ್ದು. ಅಂದಮೇಲೆ ಇಷ್ಟು ಕಡಿಮೆ ಪ್ರತಿಯ ತಲಬುಗಳಿಂದ ಮಾಸ್ತರ ಜನರ ಹೊಟ್ಟೆ ತುಂಬಲಾರದೆಂಬದು ಮೇಲೇ ಕಾಣುತ್ತದೆ ಈ ಮಾದರಿಯ ತಲಬುಗಳನ್ನು ಅನುಭೋಗಿಸುವ ಮಾಸ್ತರರೆಲ್ಲರೂ ಬಹಳ ಮಾಡಿ ಅಂಟ್ರಿಂಡರೇ ಇರುತ್ತಾರೆ. ಇಂಥ ಜನರು ತಮ್ಮ ಹೊಟ್ಟೇ ತುಂಬುವಷ್ಟು ಸಂಬಳವನ್ನು ನಾವು ಈ

ಜನ್ಮದಲ್ಲೀ ಬೇಡಿಬಂದಿಲ್ಲವೆಂದು, ಸಾಲಿ ಕೆಲಸದಲ್ಲಿ ಉದಾಸೀನ ಉಳ್ಳವರೂ, ಅಪ್ರೀತಿವಂತರೂ ಆಗಿರುತ್ತಾರೆ; ಇಷ್ಟೇ ಅಲ್ಲ, ಇವರು, ತಾವು ಕೈ ಕೊಂಡಿರುವ ಕೆಲಸವು ಮೇಲಾದದ್ದೆಂದು ತಿಳಿಯದೆ, ಅದು ಬಿಡಲಾರದ ಕರ್ಮವೆಂತಲೂ, ಬೇಸರದ ಕೆಲಸವೆಂತಲೂ ತಿಳುಕೊಂಡು ಅದನ್ನು ಅಂತೂ ಇಂತೂ ಸಾಗಿಸುತ್ತಾರೆ. ಅಂದಮೇಲೆ ಇವರಲ್ಲಿ ಶಾಲಾ ಸುಧಾರಣೆಯ ಮಾರ್ಗವು ಎಳ್ಳಕಾಳಷ್ಟಾದರೂ ಉಂಟೇ! ಇಲ್ಲ ಇಲ್ಲ. ಆದ್ದರಿಂದ ಈಗ ಶಾಲಾ ಖಾತೆಯಲ್ಲಿ ಕಂಡು ಬರುವ ಕಡಿಮೇ ಪ್ರತಿಯ ಸಂಬಳದ ಮಾದರಿಯನ್ನು ತೆಗೆದು ಹಾಕಿ, ನಿಧಾನ ಸ್ವತಂತ್ರ ಶಾಲಾ ಮಾಸ್ತರಿಗೆ (೧೦) ರೂಪಾಯಿಕ್ಕಿಂತ ಕಡಿಮೆ ಸಂಬಳವು ಇರಕೂಡದೆಂತಲೂ, ಅಸಿಸ್ಟಂಟ ಮಾಸ್ತರರಿಗೆ (೮) ರೂಪಾಯಿಕ್ಕಿಂತ ಕಡಿಮೆ ಇರಬಾರದೆಂತಲೂ ಗೊತ್ತು ಮಾಡಲ್ಪಡಬೇಕು. ಸ್ವಲ್ಪ ಹೆಚ್ಚು ಕಡಿಮೆ ಈ ನನ್ನ ಅಭಿಪ್ರಾಯಕ್ಕೆ ಅನುಸರಿಸಿ ಶಾಲಾ ಮಾಸ್ತರರ ಹೊಸ ಕಾಯಿದೆಲ್ಲಿ ಹೇಳಲ್ಪಟ್ಟಿರುತ್ತದೆಂದು ನನಗೆ ತೋರುತ್ತದೆ. ಆದಗ್ಯೂ ಈ ನಿಯಮವು ಇನ್ನೂ ಪ್ರಚಾರದಲ್ಲಿ ಬಂದಿಲ್ಲ ತೀವ್ರ ಬರಬೇಕು.

(೨) ಯಾವತ್ತು ಉದ್ಯೋಗಗಳಲ್ಲಿ ಶಿಕ್ಷಣದ ಉದ್ಯೋಗವೇ ಮೇಲಾದದ್ದು. ಈ ಉದ್ಯೋಗದಲ್ಲಿ ಪರಮಾರ್ಥ ಸೌಖ್ಯವೂ, ಪರೋಪಕಾರವೂ ಉಂಟು. ಈ ಸ್ತುತ್ಯ ಕರ್ಮವನ್ನು ಸ್ವೀಕರಿಸಿದವರೇ ಶಾಲಾ ಗುರುಗಳು. ಆದ್ದರಿದ ಶಾಲಾ ಮಾಸ್ತರರೆಂದರೆ ರಾಷ್ಟ್ರ ಸುಧಾರಣೆಗೆ ಕಾರಣಿಭೂತರು. ಈ ದೊಡ್ಡ ಗೌರವದ ಕೆಲಸವನ್ನು ಕೈ ಕೊ

ಶ ಈಗಿನ ಮಾಸ್ತರರಲ್ಲಿ, ತಮ್ಮ ಕರ್ತವ್ಯ ಕರ್ಮದ ನಿಜ ಸ್ವರೂಪವನ್ನು ತಿಳಿದವರು ಬಹು ಸ್ವಲ್ಪ ಜನರುಂಟು ಕೆಲ ಕೆಲವು ಮಾಸ್ತರರು ಹುಡುಗರು ಶಾಲೆಗೆ ಬರುವದಿಲ್ಲೆಂತಲೂ, ಫೀ ಕೊಡುವದಿಲ್ಲೆಂತಲೂ, ಊರ ಜನರು ತಮ್ಮ ಮರ್ಯಾದೆ ಮಾಡುವದಿಲ್ಲೆಂತಲೂ ಅಳುತ್ತಿರುತ್ತಾರೆಂಬ ಮಾತು, ವಿದ್ಯಾಭಿವೃದ್ಧಿಗೆ ಮಾತೃಸ್ಥಾನವಾಗಿರುವ ಈ ಕನ್ನಡ ಶಾಲಾ ಪತ್ರಿಕೆಗಳನ್ನು ಓದಿ ನೋಡಿದಲ್ಲಿ ಪೂರಾ ಮನನವಾಗುವದು. ಇಂಥ ಜನರು ತಾವು ಶಿಕ್ಷಣದ ಕೆಲಸಕ್ಕೆ ಅಯೋಗ್ಯರೂ, ಹೇಡಿಗಳೂ ಎಂಬ ಸಂಗತಿಗಳನ್ನೇ ವ್ಯಕ್ತಪಡಿಸುತ್ತಾರೆಂದು ನಾನು ಹೇಳುವ ಪ್ರಯೋಜನವಿಲ್ಲ. ಆದಕಾರಣ ವಿದ್ವಾಂಸರೂ, ಅನುಭಿಜ್ಞರೂ, ಸದಾಚರಣೆಯುಳ್ಳವರೂ, ಕೆಲಸದಲ್ಲಿ ತತ್ಪರರೂ, ಶಿಕ್ಷಣದ ತತ್ವಗಳನ್ನು ಪೂರಾ ಬಲ್ಲವರೂ ಆದ ಟ್ರೇಂಡ ಜನರೇ ಈ ಸಾಧಾರಣವಾದ ಶಾಲಾ ಮಾಸ್ತರ ಕೆಲಸಕ್ಕೆ ಯೋಗ್ಯರೆಂಬ ಮಾತು ವಸ್ತುತಃ ನಿಜವಿರುತ್ತದೆ ಆದರೆ ಇಂಥ ಟ್ರೇಂಡ ಜನರು ನಮ್ಮ ದಕ್ಷಿಣ ಭಾಗದ ಯಾವತ್ತು ಶಾಲೆಗಳಿಗೆ ಪೂರೈಸುವ ವರೆಗೆ, ಮುಲಕೀ ಪರೀಕ್ಷೆಯಲ್ಲಿ ಪಾಸಾದವರೂ, ಕೆಲಸದಲ್ಲಿ ಆಸಕ್ತಿಯುಳ್ಳವರೂ ಆದ ಹುಷಾರ ಜನರನ್ನು ನೌಕರಿಯಲ್ಲಿ ಸೇರಿಸಬಹುದು; ಪರಂತು ಇಂಥವರನ್ನು ಅಪಷ್ಟು ಅಸಿಸ್ಟಂಟ ಮಾಸ್ತರ ಕೆಲಸದ ಮೇಲೆ ನೇಮಿಸಬೇಕಲ್ಲದೆ ಸ್ವತಂತ್ರ ಶಾಲೆಯ ಹೆಡ್ಡ ಮಾಸ್ತರ ಕೆಲಸದ ಮೇಲೆ ಮಾತ್ರ ನೇಮಿಸ ಕೂಡದು. ಹಾಗು ಈ ಅಂಟ್ರೇಂಡರು ತಾವು ಶಿಕ್ಷಣದ ಕೆಲಸಕ್ಕೆ ಯೋಗ್ಯರೆಂಬ ಬಗ್ಗೆ ಹೊಸದೊಂದು ಪರೀಕ್ಷೆಯನ್ನು ಕೊಡಬೇಕಾಗುವದೆಂದು, ಕೆಳಗಿನ (೪) ಜೇ ನಿ

ಯಮದಲ್ಲಿ ಹೇಳಲ್ಪಟ್ಟಿರುತ್ತದೆ. ಈ ಪ್ರಕಾರ ಯೋಗ್ಯ ಜನರನ್ನೇ ಆರಿಸಿ, ವಿದ್ಯಾ ದಾನವೆಂಬ ಪರೋಪಕಾರದ ಕಾರ್ಯದಲ್ಲಿ ಪೂರಾ ತುಂಬಿ ಬಿಟ್ಟರೆ ಶಾಲಾ ಸುಧಾರಣೆ ಆಗದೇ ಉಳಿಯುವದೇ? ಉಳಿಯಲಾರದು.

(ಮುಂದೆ ಸಾಗುವದು.)

———o0o———

ಮೆಹೆರ್ಬಾನ ರಾವಸಾಹೇಬ ಕನ್ನಡ ಶಾಲಾಪತ್ರಕದ ಎಟಿರ ಮಹಾರಾಯರ ಚರಣ ಕಮಲಗಳ ಸನ್ನಿಧಿಗೆ—

ಕನ್ನಡ ಗಣಿತವಿದ್ಯ ಮಾರಾಟಕ್ಕೆ ಸಿದ್ಧ

ಕ್ರಯ ೧ ರೂ, ಟಪಾಲ ಹಾಸೀಲ ೧ ಪ್ರತಿಗೆ ೬೧, ೧೦ ಪ್ರತಿಗೆ ೬೮. ಇದರಲ್ಲಿ ರಾವಸಾಹೇಬ ಚನಬಸಪ್ಪಾ ಅಣ್ಣಾಮಾಜಿ ಡಿ. ಎ. ಇ. ಸಾ. ಇವರು ರಚಿಸಿದ ಅಂಕಗಣೀತ-ಭಾಗ ೨ ನೇದರೊಳಗಿನ ಎಲ್ಲ ಪ್ರಶ ಸಮುದಾಯಗಳು, ಅರುವತ್ತು ಮುಲ್ಕೀ ಪರೀಕ್ಷೆಯ ಉದಾಹರಣೆಗಳು ಮತ್ತು ಬೇರೆ ಕೆಲವು ಉದಾಹರಣೆಗಳು ಕೂಡಿ ೪೦೨ ಉದಾಹರಣೆಗಳಂನು ಸುಲಭವಾಗಿ ಬಿಡಿಸಿರುತ್ತದೆ.

ಇವನ್ನು ಬೇಡಲಪೇಕ್ಷಿಸುವವರು ಕೆಳಗೆ ಸಹಿ ಮಾಡಿದ ತ್ತೆಯ ಮೇಲೆ ರೋಖ ಹಣವನ್ನು ಕಳಿಸಿ ಬೇಡಬೇಕು. ಇಲ್ಲವೆ ವ್ಹಾಲ್ಯೂ ಪೇಯಬಲದಿಂದ ಬೇಡಬೇಕು. ಅಂದರೆ ತತ್ಕ್ಷಣವೆ ರವಾನಿಸಲಾದೀತು. ೯ ಪ್ರತಿಗಳಿಗೆ ೧ ಪ್ರತಿ ಕಮಿ ದೊರೆಯುವದು. ತಾ. ೨೩ ೫ ೧೮೮೯ ಇಸ್ವಿ.

ರಾಮಚಂದ್ರ ಬಾಳಕೃಷ್ಣ ಜೋಶಿ ಹೆಡ್‌ಮಾಸ್ತ
ಬೆಳಗಾಂವ ಕನ್ನಡ ಸಾಲಿ ನಂಬರ ೧.

——o0o——

ಕನ್ನಡ ಶಾಲಾಪತ್ರವು

CANARESE SCHOOL PAPER.

ಪುಸ್ತಕ ೩೪) (ಸಂಚಿಕೆ ೭

(ಜುಲೈ ೧೮೮೯)

ಅನುಕ್ರಮಣಿಕೆಯು.

ಪುಟ.

ಣೆಯ ಹೊಸ ಲಾಯಬ್ರರಿಯ ಪ್ರವೇಶ ಸಮಾರಂಭವು. ೧೪೫
ದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು... ೧೫೦
ೋಟೀಸು............................... ೧೫೪
ಕ್ಷಣದಲ್ಲಿ ವಿಷಯಕ್ಕೆ ಸುಲಭರೂಪ ಕೊಡೋಣ ವೆಂಬರೇನು?...... ೧೫೬
ಯುರೋಪದ ಮಧ್ಯಕಾಲದ ಇತಿಹಾಸವು ೧೬೨
ತ್ರವ್ಯವಹಾರವು.............................. ೧೬೫

CONTENTS

pening of the New Library at Poona...... 145
Education and Improvement. 150
otices.. 154
What is to simplify a subject............... 156
istory of the Middle Ages............ 162
orrespondence 165

DHARWAR.

Printed at the Dnana Wardhaka Press

ಶಾಲಾಪತ್ರಕವು.

ಪುಸ್ತಕ ೨೪) (ಸಂಚಿಕೆ ೭

(ಜುಲೈ ೧೮೮೯)

Opening of the New Library at Poona.

ಪುಣೆಯ ಹೊಸ ಲಾಯಬ್ರರಿಯ ಪ್ರವೇಶ ಸಮಾರಂಭವು.

ಸುಮಾರು ಹತ್ತು ವರ್ಷಗಳ ಪೂರ್ವದಲ್ಲಿ ಪುಣೆಯಲ್ಲಿ ವಿಶ್ರಾಮಭಾಗ, ಬುಧವಾರ ವಾಡಾ, ಯೆಂಬೆರಡು ಭವ್ಯವಾದ ಪೂರ್ವದ ಪೇಶವೆಯವರ ಅರಮನೆಗಳನ್ನು ಯಾರೋ ಸುಟ್ಟದ್ದು ಪ್ರಸಿದ್ಧವದೆ. ಬುಧವಾರ ವಾಡಾ ಯೆಂಬ ಇಮಾರತಿನಲ್ಲಿ ಊರವರ ಲಾಯಬ್ರರಿ ಇತ್ತು. ಅದು ಸುಟ್ಟು ಹೋದದ್ದರಿಂದ ಸುಮಾರು ೫೦೦೦ ಪುಸ್ತಕಗಳು ಅಗ್ನಿಗೆ ಆಹುತಿಯಾಗಿ ಊರವರಿಗೆ ಪುಸ್ತಕಾಲಯವಿಲ್ಲದ ಹಾಗಾಯಿತು. ಅಂದಿನಿಂದ ಹೊಸ ಪುಸ್ತಕಾಲಯವನ್ನು ಕಟ್ಟಿಸುವ ಪ್ರಯತ್ನವು ನಡಿದಿತ್ತು. ಈ ಕೆಲಸಕ್ಕೆ ಊರವರು ವರ್ಗಣಿಯಿಂದ ೧೨೫೦೦ ರೂಪಾಯಿ ಕೂಡಿಸಿ ಸರಕಾರಕ್ಕೆ ಸಹಾಯ ಬೇಡಿದ್ದರಿಂದ ಸರಕಾರದವರು ಅಷ್ಟೇ ಹಣ ಕೊಟ್ಟರು. ಹೀಗೆ ೨೫೦೦೦ ರೂಪಾಯಿ ವೆಚ್ಚ ಮಾಡಿ ಹೊಸ ಪುಸ್ತಕಾಲಯವನ್ನು ಕಟ್ಟುವ ಕೆಲಸವು ಯೆರಡು ಮೂರು ವರ್ಷದಿಂದ ನಡಿದಿತ್ತು. ಅದು

ಮುಗಿದದ್ದರಿಂದ ಆ ಹೊಸ ಇಮಾರತಿನಲ್ಲಿ ಲಾಯಬ್ರರಿಯುನ್ನು ಒಯ್ಯುವ ಸಮಾರಂಭವು ಈ ತಿಂಗಳಿನ ೩ನೇ ತಾರೀಖಿನಲ್ಲಿ ಆಯಿತು. ಈ ಸಮಾರಂಭಕ್ಕೆ ನಾಮದಾರ ಗವರ್ನರ ಸಾಹೇಬರವರು ಹೋಗಿದ್ದರು. ಅವರ ಸಂಗಡ ಲಾರ್ಡ ಬಿಶಪ್, ಮಧ್ಯಭಾಗದ ಕಮಿಶನರರು, ವಿದ್ಯಾಖಾತೆಯ ಡಾಯರೆಕ್ಟರ ಧೊರೆಗಳು, ಪುಣೆಯ ಜಡಜರು, ಕಲೆಕ್ಟರರು, ಮುಂತಾದ ದೊಡ್ಡ ದೊಡ್ಡ ಯುರೋಪಿಯನ್ ಹುದ್ದೇದಾರರು ಹೋಗಿದ್ದರು. ಇದಲ್ಲದೆ ನೇಟೀವ ಸರದಾರರೂ, ಪ್ರಮುಖ ಉದ್ಯೋಗಸ್ಥರೂ ಬಹು ಜನರು ಕೂಡಿದ್ದರು. ಅದದರಿಂದ ಸಮಾರಂಭವು ಅತ್ಯುತ್ತಮ ತರದ್ದಾಯಿತೆಂದು ಪುಣೆಯ ವರ್ತಮಾನ ಪತ್ರಗಳಿಂದ ತಿಳಿಯುತ್ತದೆ.

ಈ ಸಮಾರಂಭದಲ್ಲಿ ಲಾಯಬ್ರರಿಯ ಸೆಕ್ರೆಟರಿಯು ಈ ಲಾಯಬ್ರರಿಯ ಇತಿಹಾಸವನ್ನು ಸನ್ ೧೮೪೮ನೇ ವರ್ಷದಲ್ಲಿ ಇದು ಆರಂಭವಾದಂದಿನಿಂದ ಸಂಕ್ಷೇಪವಾಗಿ ಹೇಳಿ, ಲಾಯಬ್ರರಿಯಲ್ಲಿ ಪುಸ್ತಕಗಳ ಸಂಗ್ರಹವಿಲ್ಲೆಂದು ಖೇದವನ್ನು ಪ್ರಕಟಿಸಿ ಕೊತಬಳಿಕ ನಾಮದಾರ ಗವರ್ನರ ಧೊರೆಗಳು ಸಂಭಾಷಣ ಮಾಡಿದರು. ಆ ಭಾಷಣದ ಸಾರಾಂಶವೇನೆಂದರೆ—

ಪುಸ್ತಕಗಳಿಲ್ಲದಂಥ ಲಾಯಬ್ರರಿ ಯೆಂಬದೊಂದು ಚಮತ್ಕಾರವೆಂದೆಣಿಸಬಹುದು. ಈ ಲಾಯಬ್ರರಿಗಾಗಿ ಸಂಗ್ರಹ ಮಾಡತಕ್ಕ ಪುಸ್ತಕಗಳನ್ನು ಬಹು ಯೆಚ್ಚರದಿಂದ ಆರಿಸಿ ಕೊಳ್ಳಲಿಕ್ಕೆ ಬೇಕು. ಹಲವು ಅತ್ಯುಪಯುಕ್ತವಾದಂಥ ಪುಸ್ತಕಗಳನ್ನು ಓದಿದರಿಂದಲೇ ಕೀರ್ತಿಯನ್ನು ಸಂಪಾದಿಸಿದಂಥ ಬಕಲ್ ಯೆಂಬ ವಿದ್ವಾಂಸನು ಓದತಕ್ಕಂಥ ಪುಸ್ತಕಗಳ ಪಟ್ಟಿಯನ್ನು ಮಾಡಿ ನಮ್ಮ ಧೊರೆಸಾನಿಯವರಿಗೆ ಕೊಟ್ಟಿದ್ದಾ

ನೆ. ನನ್ನ ಗೆಳೆಯನಾದ ಸರ ಜಾನ ಲುಬಕ್ಕನೆಂಬವನು ನಾವು ಯೆಂಥಾ ಪುಸ್ತಕಗಳನ್ನು ಓದಬೇಕೆಂಬ ಬಗ್ಗೆ ತನ್ನ ಅಭಿಪ್ರಾಯವನ್ನು ಬರಿದು ಇಟ್ಟಿದ್ದಾನೆ. ಮಹಾ ಭಾರತ, ರಾಮಾಯಣ, ಈ ಪುಸ್ತಕಗಳನ್ನು ಯುರೋಪ ಖಂಡದವರು ಅವಶ್ಯವಾಗಿ ಓದಬೇಕೆಂದು ಅವನ ಅಭಿಪ್ರಾಯವದೆ. ಈ ಪುಸ್ತಕಾಲಯಕ್ಕೆ ಬರುವವರಿಗೆ ಯೇನು ಬೇಕಾಗಿರುತ್ತದೆ, ಯೆಂಥಾ ಪುಸ್ತಕಗಳನ್ನು ಓದುವದರಿಂದ ಅವರಿಗೆ ಆನಂದವಾಗುವದು, ಈ ಯೆರಡು ಪ್ರಶ್ನಗಳನ್ನು ನಾವು ವಿಚಾರಿಸಬೇಕಾಗಿದೆ. ಓದಿದ್ದು ಪೂರಾ ತಿಳಿದರೆ ಮಾತ್ರ ಮನುಷ್ಯನಿಗೆ ಆನಂದವಾಗುತ್ತದೆಂಬದಾತು ನಿಜವಷ್ಟೇ. ಆದರೆ ಓದುವವರು ಹಲವು ಪ್ರಕಾರದವರಿರುತ್ತಾರೆ. ಕೆಲವರು ತಾವು ಓದುವ ಲೇಖದ ಯೋಗ್ಯಾಯೋಗ್ಯ ಸ್ವರೂಪಗಳನ್ನು ವಿಚಾರಿಸುತ್ತ ಓದುತ್ತಾರೆ; ಕೆಲವರು ಮೇಲೇ ತೋರುವಂಥ ಅರ್ಥವನ್ನರಿತು ಕೊಂಡು, ಅಷ್ಟರಿಂದಲೇ ಸಂತುಷ್ಟರಾಗಿ ಮುಂದಕ್ಕೆ ಸಾಗುತ್ತಾರೆ; ಕೆಲವರು ತಮ್ಮ ಮನಸಿಗೆ ನಡುವಂಥ ಶಬ್ದಗಳನ್ನೂ ವಾಕ್ಯಗಳನ್ನೂ ತಮ್ಮ ಭಾಷಣದಲ್ಲಿ ಪ್ರಯೋಗಿಸುವದಕ್ಕೋಸ್ಕರ ಪಾಠ ಮಾಡುವ ಉದ್ದೇಶದಿಂದ ಓದುತ್ತಾರೆ; ಕೆಲವರು ತಮ್ಮ ಜ್ಞಾನವನ್ನು ಬೈಲಿಗೆ ಯೆಂದೆಂದು ತರುವದಿಲ್ಲ; ಅವರು ಸ್ವಾರ್ಥ ಬುದ್ಧಿಯವರಿರುತ್ತಾರೆಂದೆನ್ನಬಹುದು. ಲಾರ್ಡ ಅಕ್ಟನ್ ಧೊರೆಯು ಭೂಮಿಯಲ್ಲಿ ಬಹುಶ್ರುತರೆನಿಸುವಂಥ ಜನರಲ್ಲಿ ಶ್ರೇಷ್ಠನಿರುತ್ತಾನೆ. ಅವನು ಪ್ರತಿ ದಿವಸ ಒಂದಾಗಲಿ ಯೆರಡು ಪುಸ್ತಕಗಳನ್ನು ಓದಿ ಮುಗಿಸುತ್ತಿರುತ್ತಾನೆ! ಕೌಂಟ ಡಿ ಸರಕೋರ್ಟನೆಂಬ ಫ್ರೆಂಚ ಗೃಹಸ್ಥನಾದರೂ ಇಂಥವನೇ ಇರುತ್ತಾನೆ. ಯಾರದಾರೂ ಲಾ

ಯಬ್ರರಿಯು ಸುಟ್ಟು ಹಾಳಾದರೆ, ಹೊಸ ಪುಸ್ತಕಗಳನ್ನು ತಂದು ಸಂಗ್ರಹಿಸುವದಕ್ಕಿಂತ ಈ ಸಕೋರ್ಟನನ್ನು ತಂದು ಇಟ್ಟುಕೊಳ್ಳುವದು ಲೇಸೆಂದು ಒಬ್ಬ ವಿದ್ವಾಂಸನು ವಿನೋದದಿಂದ ನುಡಿದದ್ದು ನಾನು ಕೇಳಿದ್ದೇನೆ. ನಿಮ್ಮ ಲಾಯಬ್ರರಿಯಲ್ಲಿ ಪುಸ್ತಕಗಳೇ ಇಲ್ಲವಾದ್ದರಿಂದ ಅಪ್ರಯೋಜಕವಾದಂಥ ಪುಸ್ತಕಗಳು ಇದರಲ್ಲಿ ಇನ್ನೂ ಸೇರಿಲ್ಲವೆಂದು ನೋಡಿ ನನಗೆ ಸಂತೋಷವಾಗುತ್ತದೆ. ಆ ಪುಸ್ತಕಗಳು ಯಾವವೆಂದರೆ ಕಾದಂಬರಿಗಳು, ಅಥವಾ ಹೆಂಗಸರ ಕಲ್ಪಿತ ಕಥೆಗಳು. ಇಂಥಾ ಪುಸ್ತಕಗಳು ಈ ದೇಶದ ಇಂಗ್ಲಿಷ ಲಾಯಬ್ರರಿಗಳಲ್ಲಿ ಬಹಳ ಸೇರುತ್ತವೆ. ಯುರೋಪಖಂಡದಲ್ಲಿ ಮಿತಿಮೀರಿ ಓದಿ ಅಶಕ್ತರಾದಂಥವರಿಗೆ ಆರೋಗ್ಯೋಪಚಾರಕ್ಕೋಸ್ಕರವಾಗಿ ಕಾದಂಬರಿಗಳನ್ನು ಓದ ಹೇಳುವರು. ನೀವು ಸಂಗ್ರಹಿಸತಕ್ಕಂಥ ಪುಸ್ತಕಗಳು ಯಾವವೆಂದರೆ—ತತ್ವಜ್ಞಾನದ ಗ್ರಂಥಗಳು ಯೆಲ್ಲಕ್ಕೂ ಮೊದಲು ಬರತಕ್ಕವು, ನೀತಿಶಾಸ್ತ್ರದ ಪುಸ್ತಕಗಳು, ಹರ್ಬರ್ಟ ಸ್ಪೆನ್ಸರನೆಂಬ ಘನ ವಿದ್ವಾಂಸನು ಬರಿದ ಪುಸ್ತಕಗಳು, ಬೇರೆ ಬೇರೆ ಶಾಸ್ತ್ರಗಳ ಇತಿಹಾಸದ ಗ್ರಂಥಗಳು, ಧರ್ಮದ ಇತಿಹಾಸ ಗ್ರಂಥಗಳು, ಶಾಸ್ತ್ರೀಯ ಗ್ರಂಥಗಳು, ನಾಮಾಂಕಿತರಾದಂಥ ವಕ್ತೃತ್ವ ಸಾಮರ್ಥ್ಯವುಳ್ಳಂಥವರ ಸಂಭಾಷಣೆಗಳು, ಶಿಲ್ಪ ವಿದ್ಯೆಗಳ ಗ್ರಂಥಗಳು ವ್ಯಾಪಾರಕ್ಕೆ ಉಪಯುಕ್ತವಾದಂಥ ಗ್ರಂಥಗಳು, ಇತ್ಯಾದಿ. ವ್ಯಾಪಾರ ಕಲಾಕೌಶಲ್ಯಗಳು ನಿಮ್ಮ ದೇಶದಲ್ಲಿ ಬೆಳೆಯುತ್ತಾ ನಡೆದವೆ. ಆದರೆ ಶಿಲ್ಪಿಗಳೂ, ವರ್ತಕರೂ ಲಾಯಬ್ರರಿಗೆ ಹೋಗಿ ಪುಸ್ತಕಗಳನ್ನು ಇನ್ನೂ ಓದ ಹತ್ತಿರುವದಿಲ್ಲ. ಇಂಗ್ಲಂಡದ ಸ್ಥಿತಿಯು ಬೇರೆ ಇರುತ್ತದೆ. ವಿಕ್ಟೋರಿಯಾ ಮಹಾ

ರಾಣಿಯವರ ಆಳಿಕೆಯಲ್ಲಿ ಜನರೊಳಗೆ ಓದುವ ಅಭಿರುಚಿಯು ಬೆಳೆದಷ್ಟು ಹಿಂದೆ ಯೆಂದೂ ಬೆಳೆಯಲಿಲ್ಲ. ಬೆಳಗಿನಿಂದ ಸಂಜೆಯ ವರೆಗೆ ಅಲ್ಪ ಸ್ವಲ್ಪ ಕೂಲಿಗಾಗಿ ದುಡಿಯುವ ಮನುಷ್ಯನು ಸಂಜೆಯಲ್ಲಿ ಲಾಯಬ್ರರಿಯಲ್ಲಿ ತನ್ನ ಯಜಮಾನನಿಗೆ ಸರಿಯುವನಾಗಿ ಕೂತು ಪುಸ್ತಕಗಳನ್ನು ಓದುವನು. ಓದತಕ್ಕ ವಿಷಯಗಳಲ್ಲಿ ಸಹ ಒಳಗಡೆಯಲ್ಲಿ ಬಹಳ ಸುಧಾರಣೆಯಾಗಿದೆ. ನಿರುಪಯುಕ್ತ ಗ್ರಂಥಗಳೂ ಓದುವವನ ಮನಸು ಕೆಡಿಸುವಂಥ ಗ್ರಂಥಗಳೂ ಮೂಲೆಗೆ ಬೀಳುತ್ತ ನಡಿದವೆ. ಹೆಂಗಸರು ಬರೆದ ಗ್ರಂಥಗಳು ಬಹುತರ ಈ ಪ್ರಕಾರದವಿರುತ್ತವೆ. ಆದರೆ ಹೆಂಗಸರ ಜ್ಞಾನದಲ್ಲಿಯೂ ಒಳಗಡೆಯಲ್ಲಿ ಒಳಿತಾಗಿ ಸುಧಾರಣೆಯಾಗಿದೆ. ಮೇಲಾದ ಉಪಯುಕ್ತ ಗ್ರಂಥಗಳನ್ನು ಓದಿದ ಹೆಂಗಸರು ಸದ್ಯಕ್ಕೆ ಇಂಗ್ಲಂಡದಲ್ಲಿ ಇದ್ದಷ್ಟು ಬೇರೆ ಯಾವ ದೇಶದಲ್ಲಿಯೂ ಇರುವದಿಲ್ಲ. ಆದರೂ ಜರ್ಮನಿಯ ಹೆಂಗಸರು ಮುಂದಕ್ಕೆ ಬರುತ್ತ ನಡಿದಿದ್ದಾರೆ. ಈ ಮಾತಿಗೆ ಸ್ತ್ರೀ ಶಿಕ್ಷಣಾಭಿಮಾನಿಗಳು ಲಕ್ಷ್ಯ ಕೊಡಬೇಕು. ನಿಮ್ಮ ಲಾಯಬ್ರರಿಯ ವರ್ಗಣೀದಾರರು ಸನ್ ೧೮೫೦ ರಲ್ಲಿ ೯೦ ಜನರಿದ್ದರು; ಈಗ ೧೪೦ ಜನರಿಗಿಂತ ಹೆಚ್ಚಿಲ್ಲ; ಇವರಲ್ಲಿ ಸಹ ಕೆಲವರು ಹೋಗತಕ್ಕವರುಂಟೆಂದು ಕೇಳುತ್ತೇನೆ. ಸನ್ ೧೮೫೦ರಲ್ಲಿ ಇಂಗ್ಲಿಷ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ೩೦೦ಗಿಂತ ಹೆಚ್ಚಿದ್ದಿಲ್ಲ; ಆದರೆ ಈಗ ೨೫೦೦ ಜನ ವಿದ್ಯಾರ್ಥಿಗಳು ನಿಮ್ಮ ಪಟ್ಟಣದಲ್ಲಿ ಇಂಗ್ಲಿಷ ಭಾಷೆಯನ್ನು ಕಲಿಯುತ್ತಾರೆ. ಆದರೂ ಲಾಯಬ್ರರಿಯ ವರ್ಗಣೀದಾರರ ಸಂಖ್ಯೆಯು ಬಹುತರ ಇದ್ದಷ್ಟೇ ಇದ್ದದ್ದು ನೋಡಿ ನನಗೆ ಬಹಳ ಖೇದವಾಗುತ್ತದೆ. ವಿದ್ಯಾಭ್ಯಾಸದ ಉದ್ದೇಶವೇನಿರುತ್ತ

ದೆ! ಓದಲರಿಯದವನಿಗೆ ಓದುವ ಚಟ ಹಚ್ಚುವದೇ ಆದರ ಉದ್ದೇಶವು. ಸ್ಕಾಟಲಂಡದಲ್ಲಿ ಒಂದು ಪೌಂಡಿನ ಆದಾಯದಲ್ಲಿ ಒಂದು ಪೇನಿಯಂತೆ ಜನರು ಸ್ವಸಂತೋಷದಿಂದ ಲಾಯಬ್ರರಿಗಾಗಿ ಕೊಡುತ್ತಾರೆ. ಈ ಮುಂಬಯಿ ಇಲಾಖೆಯಲ್ಲಿ ಈ ಪ್ರಕಾರದ್ದೊಂದು ಕಾಯದೆ ಇದ್ದರೆ ಒಳ್ಳೇದಾಗುತ್ತಿತ್ತೆಂದು ನನಗೆ ತೋರುತ್ತದೆ.

——o——

Education and Improvement.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಮಿ. ಇನ್‌ಸ್ಪೆಕ್ಟರ ಸಾಹೇಬರು ಸದ್ಯಕ್ಕೆ ಧಾರವಾಡದಲ್ಲಿ ಇದ್ದಾರೆ.

——oo——

ರಾ. ರಾ. ಗುರುನಾಥರಾವ ಘಾಟಕ ವಕೀಲ ಇವರ ಸಂಸ್ಕೃತ ಶಾಲೆಯ ಸಂಬಂಧವಾಗಿ ಸಂಸ್ಕೃತ ಭಾಷೆಯಲ್ಲಿ ವಕ್ತೃತ್ವ ಮುಂತಾದವುಗಳ ಸಮಾರಂಭವು ನಾಗಪಂಚಮಿಯ ದಿವಸ ಆಯಿತು. ವೇದಪ್ರಾಮಾಣ್ಯವನ್ನು ಸಂಸ್ಕೃತದಲ್ಲಿ ಪ್ರತಿಪಾದಿಸಲಿಕ್ಕೆ ೬ ಜನ ಉಮೇದವಾರರೂ, ಕಾವ್ಯಪ್ರಕಾಶಿಕೆಯಲ್ಲಿ ಪರೀಕ್ಷೆಯನ್ನು ಕೊಡಲಿಕ್ಕೆ ೪ ಜನರೂ ಬಂದಿದ್ದರು. ಭಾಷಣ ಮಾಡುವವರು ಅರ್ಧ ತಾಸಿನ ವರೆಗೆ ತಮ್ಮ ವಿಷಯವನ್ನು ಬಹುತರ ಯೆಲ್ಲರೂ ಸರಸಾಗಿ ಪ್ರತಿಪಾದಿಸಿದರು. ಅವರಲ್ಲಿ ಕೃಷ್ಣಶಾಸ್ತ್ರೀ ಬೆಟಗೇರಿ ಯೆಂಬವರ ವಾಕ್ಪಾಟವವು ಹೊಗಳತಕ್ಕಂಥಾದ್ದಿತ್ತು. ಅವರಿಗೇ ಭಾಷಣದಲ್ಲಿ ಮೊದಲನೇ ಇನಾಮು ಇಪ್ಪತ್ತು ರುಪಾಯದ್ದು ದೊರೀತು. ಭಾಷಣದಲ್ಲಿ ಇನ್ನೊಬ್ಬರಿಗೆ ಯೆರಡನೇ ಇನಾಮು

೧೫ ರುಪಾಯುದ್ದು, ಕಾವ್ಯ ಪ್ರಕಾಶದಲ್ಲಿ ಇಬ್ಬರಿಗೆ ೨೫
೧೫ ರುಪಾಯಿಗಳ ಇನಾಮುಗಳು ದೊಂದವು. ಇದಲ್ಲ
ನೆಂದ ಸಭಾಸದರಲ್ಲಿ ಇಬ್ಬರು ಬೇರೆ ಇಬ್ಬರು ಉಮೇದವಾ
ರರಿಗೆ ಐದೈದು ರುಪಾಯಿಗಳ ಇನಾಮುಗಳನ್ನು ಕೊ
ಟ್ಟರು. ಸಮಾರಂಭವು ಯೆರಡ:ದಿವಸ ಸಂಜೇ ೫ ಘಂ
ಯಿಂದ ೮ರ ವರೆಗೆ ಒಳ್ಳೇ ಉಲ್ಲಾಸದಿಂದ ಸಾಗಿತ್ತು. ಕೂ
ಡಿದ ಜನರ ಸಂಖ್ಯವು ಒಂದು ಸಾವಿರಕ್ಕಿಂತ ಕಡಿಮೆಯಾ
ರಿಕ್ಕಿಲ್ಲ. ಧಾರವಾಡದಲ್ಲಿ ಇಷ್ಟು ದೊಡ್ಡ ಸಮಾಜವು
ಹುತರ ಯೆಂದು ಕೂಡುವದಿಲ್ಲ. ಬೇರೆ ಸಭೆಗಳ ಕಾಲಕ್ಕೆ ಚಿ
ಟಿಗಳನ್ನು ಕಳಿಸಿ ನಾಲ್ನಾಲ್ಕು ಬಾರಿ ಮನುಷ್ಯರನ್ನು
ಳಿಸಿದರೂ ಪ್ರಮುಖ ಜನರು ಸಹ ಸಭೆಗೆ ಹೋಗುವದು ದ
ಸ್ತಾರವಾಗುತ್ತದೆ. ಹೀಗಿದ್ದು ಈ ಸಮಾರಂಭಕ್ಕೆ ಕರಿಯ
ದೆ ಇಷ್ಟು ಜನ ಕೂಡಿದ್ದು ಆಶ್ಚರ್ಯವಲ್ಲವೇ? ಇದರಿಂ
ನಮ್ಮ ಜನರು ಸಂಸ್ಕೃತಭಾಷೆಗೆ ಯೆಷ್ಟು ಬಹುಮಾನ ಕೊ
ಡುತ್ತಾರೆಂಬುವದು ವ್ಯಕ್ತವಾಗುತ್ತದೆ. ಈ ಭಾಷೆಯು ಮಾ
ತೃಸ್ಥಾನವೆಂದು ಜನರ ನಂಬಿಗೆ ಯುಂಟು. ಆದದರಿಂದ ಹಿ
ಮಾಲಯದಿಂದ ರಾಮೇಶ್ವರದ ವರೆಗೆ ಪಟ್ಟಣಗಳಲ್ಲಿಯೂ,
ಗ್ರಾಮಗಳಲ್ಲಿಯೂ, ಹಳ್ಳಿಗಳಲ್ಲಿಯೂ ಯೆಲ್ಲಾದರೂ ಸಾ
ರ್ವಜನಿಕಸ್ಥಾನದಲ್ಲಿ ಯಾರಾದರೂ ಈ ತಾಯಿಯ
ಸೇವೆಯನ್ನು ಏಕನಿಷ್ಠೆಯಿಂದ ಮಾಡುತ್ತಾರೆಂದು ಕೇ
ಳಿದ ಕೂಡಲೆ ಆ ಸ್ಥಳದಲ್ಲಿ ಊರ ಜನರು ಹಿಂಡುಗಟ್ಟಿ
ಕೂಡುವದು ಸ್ವಾಭಾವಿಕವೇ. ಈ ಅಭಿಮಾನದಿಂದ ತಕ್ಕ ಪ್ರ
ಯೋಜನವಾಗುವಂತೆ ಗುರುನಾಥರಾಯರ ಪ್ರಯತ್ನವು ಬ
ಹುದಿವಸ ಸಾಗಿ ಅತ್ಯಾಶ್ಚರ್ಯಕರವಾದಂಥ ಫಲವು ಪ್ರ

ಷ್ಟಿಗೆ ಬೀಳುವದೆಂದು ಕೋರುತ್ತೇವೆ.

—೦—

ಬೆಳಗಾವಿಯ ನಾಮಾಂಕಿತ ವಕೀಲರಾದ ಹುಚ್ಚರಾಯರು ಅಲ್ಲಿಯ ಮ್ಯುನಿಸಿಪಾಲಿಟಿಯ ಚೆಯರಮನ್ನರಾಗಿ ಯೆರಡು ವರ್ಷ ಬಹು ಸರಸಾಗಿ ಕೆಲಸ ಮಾಡಿದ್ದರಿಂದ ಸರಕಾರದವರು ಅವರಿಗೆ " ರಾವಬಹಾದ್ದೂರ " ಯೆಂಬ ಬಿರುದನ್ನು ಹೋದ ತಿಂಗಳಲ್ಲಿ ಕೊಟ್ಟರು. ಹುಚ್ಚರಾಯರು ಧಾರವಾಡದಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸ ಮಾಡಿ ಹೆಸರಿಗೆ ಬಂದದ್ದರಿಂದ ಇಲ್ಲಿಯ ಪ್ರಮುಖ ಜನರು ಅವರಿಗೆ ಆಮಂತ್ರಣ ಮಾಡಿ ಕರಿಸಿಕೊಂಡು, ಊರವರ ಸಭೆಯನ್ನು ಈ ತಿಂಗಳಲ್ಲಿ ಮಾಡಿ ಹುಚ್ಚರಾಯರಿಗೆ ಬಹುಮಾನ ಮಾಡಿದರು. ಸಭೆಗೆ ಊರೊಳಗಿನ ಪ್ರಮುಖ ಜನರು ಬಹುತರ ಯೆಲ್ಲರೂ ಹೋಗಿದ್ದರು. ಆದರೆ ಒಟ್ಟಿಗೆ ಕೂಡಿದ ಜನರ ಸಂಖ್ಯೆಯು ಇನ್ನೂರಿಗಿಂತ ಹೆಚ್ಚು ಇದ್ದಿಲ್ಲ.

—೦೦೦—

ಬರುವ ಮುಲಖೀ ಪರೀಕ್ಷೆಯು ಸಪ್ಟಂಬರಿನ ೨೪ನೇ ತಾರೀಖಿನಲ್ಲಿ ಯೆಲ್ಲ ಕಡೆಯಲ್ಲಿ ಆಗತಕ್ಕದ್ದಿರುತ್ತದೆ. ಟ್ರೇನಿಂಗ ಕಾಲೇಜದ ವಾರ್ಷಿಕ ಪರೀಕ್ಷೆಯು ಅದೇ ತಿಂಗಳಿನ ೧೬ನೇ ತಾರೀಖಿನಲ್ಲಿ ಆರಂಭವಾಗತಕ್ಕದ್ದಿರುತ್ತದೆಂದು ಕೇಳುತ್ತೇವೆ.

—೦೦೦—

ಪುಣೆಯ ವೇದ ಶಾಲೆಯ ವಾರ್ಷಿಕ ರಿಪೋರ್ಟ ಪ್ರಸಿದ್ಧವಾಗಿರುತ್ತದೆ. ಅದರಿಂದ ಈ ಶಾಲೆಯ ಕೆಲಸವು ಬಹು ಸರಸಾಗಿ ನಡಿದದೆಂದು ತಿಳಿಯುತ್ತದೆ. ಶ್ರಾವಣಿಯ ದಿವಸ ಆ ಪಟ್ಟಣದ ಬ್ರಾಹ್ಮಣ ನಿವಾಸಿಗಳು ತಲೆಗೆ ಒಂದು ದುಡ್ಡಿನಂತೆ ಈ ಶಾಲೆಗೆ ದಕ್ಷಿಣೆಯನ್ನು ಕೊಟ್ಟರು! ಇದೇ ಪ್ರಕಾ

ವ ಆಶ್ರಯದಿಂದ ಈ ಶಾಲೆಯು ನಡಿದಿರುತ್ತದೆ.

— ೦೦೦ —

ಹಿಂದಿನ ಗವರ್ನರ ಜನರಲ್ಲರಾದ ಲಾರ್ಡ ಡಫರಿನ್ ಧೊರೆಗಳ ಪತ್ನಿಯವರು ವರ್ಗಣಿಯಿಂದ ಲಕ್ಷಾವಧಿ ರುಪಾಯಿ ಕೂಡಿಸಿ ಈ ದೇಶದ ಹೆಂಗಸರಿಗೆ ವೈದ್ಯ ವಿದ್ಯವನ್ನು ಕಲಿಸುವ ಶಾಲೆಗಳನ್ನು ಬಹಳ ಕಡೆಯಲ್ಲಿ ಸ್ಥಾಪಿಸಿ ಹೋಗಿದ್ದಾರೆ. ಈ ಫಂಡಿನಿಂದ ಕೊಲ್ಹಾಪುರದಲ್ಲಿ ಒಂದು ಶಾಲೆಯು ಒಳಗಡೆಯಲ್ಲಿ ಸ್ಥಾಪನವಾಯಿತೆಂದು ವರ್ತಮಾನಪತ್ರಗಳಿಂದ ತಿಳಿಯುತ್ತದೆ.

— ೦೦೦ —

ಹಳ್ಳಿಗಳಲ್ಲಿಯ ಕಶ್ಮಲವು ಬಹಳವಿರುವದರಿಂದ ಆ ಕಶ್ಮಲದಿಂದ ಹುಟ್ಟುವ ವಿಷದಿಂದ ಆಗಾಗ್ಗೆ ಮಹಾಮಾರಿ ಮುಂತಾದ ರೋಗಗಳು ಹುಟ್ಟಿ ದೇಶತುಂಬ ಪಸರಿಸುತ್ತವೆಂದು ನೋಡಿ ಸರಕಾರದವರು ಹೊಸದೊಂದು ಕಾಯಿದೆಯನ್ನು ಮಾಡುವ ವಿಚಾರದಲ್ಲಿ ಇದ್ದಾರೆ. ಈ ಕಾಯಿದೆಯ ಮಸೂದೆಯೊಂದು ಇಂಗ್ಲಿಷ ಪತ್ರಗಳಲ್ಲಿ ಪ್ರಶಿದ್ಧವಾಗಿರುತ್ತದೆ. ಊರ ಜನರೊಳಗಿಂದ ಪಂಚರನ್ನು ನೇಮಿಸಿ, ಆ ಪಂಚರ ಕೈಯಲ್ಲಿ ಕೆಲವು ಅಧಿಕಾರ ಕೊಟ್ಟು, ಅವರ ಮುಖಾಂತರವಾಗಿ ಹಳ್ಳಿಗಳಲ್ಲಿ ನಿರ್ಮಲತ್ವವನ್ನು ಉಂಟು ಮಾಡುವ ವಿಚಾರವೂ ಈ ಮಸೂದೆಯಲ್ಲಿ ಪ್ರಕಟವಾಗಿರುತ್ತದೆ. ಇದರಂತೆ ಕಾಯಿದೆಯಾದರೆ ನಮ್ಮ ಮಾಸ್ತರ ಜನರ ಕೈಯಲ್ಲಿ ಅಲ್ಪ ಸ್ವಲ್ಪ ಅಧಿಕಾರ ಬರಬಹುದು.

— ೦ —

ಕೊಲ್ಹಾಪುರದಲ್ಲಿ ಒಬ್ಬ ಬಡಿಗನು ಕೆಲವು ದಿವಸಗಳ

ಹಿಂದೆ ಕುಲಗೆಟ್ಟು ಕ್ರಿಸ್ತೀ ಆಗಿದ್ದನು. ಅವನು ಈಗ ಮುರಳಿ ತನ್ನ ಜಾತಿಯೊಳಗೆ ಶೇರಿ, ಕೊರಳಲ್ಲಿ ತುಳಸೀ ಮಾಲೆಯನ್ನು ಧರಿಸಿ ಪಂಢರಪುರಕ್ಕೆ ಹೋಗುತ್ತಿರುತ್ತಾನಂತೆ. ಇವು ನಿಜವಾದರೆ, ನಮ್ಮ ಜನರ ಸ್ವಧರ್ಮದ ವಿಚಾರಗಳು ವಿಸ್ತಾರ ಹೊಂದುತ್ತ ನಡಿದವೆಂದೆನ್ನಲಿಕ್ಕೆ ಅಡ್ಡಿ ಇಲ್ಲ.

—○—

ಒಬ್ಬ ಫ್ರೆಂಚ ಪ್ರೊಫೇಸರನು ಬಹು ದಿವಸದ ದೀರ್ಘ ಪ್ರಯತ್ನದಿಂದ ಒಂದು ಚಮತ್ಕಾರದ ಪ್ರಯೋಗವನ್ನು ಸಿದ್ಧ ಮಾಡಿದ್ದಾನೆಂದು ತಿಳಿದದೆ. ಅದೇನೆಂದರೆ, ಅಶಕ್ತರಾದಂಥ ಮುದಿ ಮನುಷ್ಯರ ಮೈಯಲ್ಲಿ ಕಸುವುಳ್ಳ ಪಶುಗಳ ಮೈಯೊಳಗಿನ ಮಜ್ಜಾ ತಂತುವನ್ನು ಯುಕ್ತಿಯಿಂದ ಶೇರಿಸಿದರೆ, ಆ ಮನುಷ್ಯನು ತರುಣನಾಗುತ್ತಾನೆ.

—○—

Notices.

ನೋಟೀಸು.

ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳು.

ದಕ್ಷಿಣಭಾಗ.

ಈ ನೋಟೀಸಿನಿಂದ ಪ್ರಸಿದ್ಧ ಪಡಿಸುವದೇನಂದರೆ —

ಕೆಳಗೆ ಬರೆದ ಪ್ರತಿ ಒಂದು ಸೆಂಟರಿನಲ್ಲಿ ಮೂರು ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಬಗ್ಗೆ ಪರೀಕ್ಷೆಯು ಸನ್ ೧೮೮೯ನೇ ಇ ಸಪ್ಟಂಬರ ತಿಂಗಳ ೧೬ನೇ ತಾರೀಖು ಸೋಮವಾರ (ಬೆಳಗಿನ ಮುದ್ರಾಕ ೧೧ ಘಂಟೆಗೆ) ಪ್ರಾರಂಭವಾಗುವದು.

(೧) ಧಾರವಾಡ ಹೈಸ್ಕೂಲ.
(೨) ಬೆಳಗಾವ ಹೈಸ್ಕೂಲ.
(೩) ಕಾರವಾಡ ಹೈಸ್ಕೂಲ.
(೪) ರತ್ನಾಗಿರಿ ಹೈಸ್ಕೂಲ.
(೫) ವಿಜಾಪುರ ೧ನೇ ಗ್ರೇಡ ಎಂಗ್ಲೋವ್ಹರ್ನ್ಯಾಕ್ಯೂಲರ ಸ್ಕೂಲ.

(೬) ಆಲೀಬಾಗ ಜಾನ್ ಎಲಫಿನಸ್ಟನ್ ಮಿಶನ್ ಹೈಸ್ಕೂಲ.

೨ ಈ ಮೂರರಲ್ಲಿ ಒಂದು ಸ್ಕಾಲರಶಿಪ್ಪು ಜಾತಿ ನಿರ್ಬಂಧವಿಲ್ಲದೆ ಬೇಕಾದವರಿಗೆ ಸಿಗುವದು. ೨ನೇದು ಇಂಗ್ಲಿಷ ಭಾಷೆಯ ಅಭ್ಯಾಸದಲ್ಲಿ ಹಿಂದೆ ಬಿದ್ದಂಥ ಜಾತಿಯವರಿಗೆ (ಅಂದರೆ ಯುಹೂದಿಯವರು, ಒಕ್ಕಲಿಗರು, ಒಕ್ಕಲಿಗರಿಗಿಂತ ಹಿಂದೆ ಬಿದ್ದಂಥ ಜಾತಿಯವರು ಇವರಿಗೆ) ಸಿಗುವದು. ೩ನೇದು ಮುಸಲ್ಮಾನರಿಗೆ ಸಿಗುವದು.

೩· ಪ್ರತಿ ಒಂದು ಸೆಂಟರಿನಲ್ಲಿ ಒಂದು ಕಮಿಟಿಯು ಪರೀಕ್ಷೆಗೆ ಕೂಡ್ರುವದು. ಮೊದಲಿನ ಐದು ಸೆಂಟರುಗಳಲ್ಲಿ ಸರಕಾರೀ ಹೈಸ್ಕೂಲ ಫಸ್ಟಗ್ರೇಡ ಅಥವಾ ಎಂಗ್ಲೋವರ್ನಾಕ್ಯೂಲರ ಸಾಲೆಯ ಹೆಡ್‌ಮಾಸ್ತರರು ಮತ್ತು ೬ನೇದರಲ್ಲಿ ಆಲೀಬಾಗದ ಮಿಶನ್ ಹೈಸ್ಕೂಲಿನ ವ್ಯವಸ್ಥಾಪಕರು ಆಯಾ ಕಮಿಟಿಗಳ ಪ್ರೆಸಿಡೆಂಟರಾಗಿರುವರು. ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆ ದೊರಿಯುವದಕ್ಕಾಗಿ ಅರ್ಜಿಗಳನ್ನು ನೇಮಕವಾದ ಛಾಪೀ ನಮೂನೆಗಳ ಮೇಲೆ ಮಾಡಬೇಕು. ಈ ನಮೂನೆಗಳು ಕೆಳಗೆ ಸಹಿ ಮಾಡಿದವರ ಕಡಿಗಾಗಲಿ. ಆಯಾ ಕಮಿಟಿಗಳ ಪ್ರೆಸಿ

ಡೆಂಟರ ಕಡಿಗಾಗಲಿ ಪುಗಶಟ್ಟೆ ಶಿಗುವವು. ಎಲ್ಲ ಅರ್ಜಿಗಳನ್ನು ಉಮೇದವಾರರು ತಮ್ಮ ತಮ್ಮ ಜಿಲ್ಹೆಯ ಕಮಿಟಿಗಳ ಪ್ರೆಸಿಡೆಂಟರ ಕಡಿಗೆ ಕಳುಹಿಸಬೇಕು. ಇಂಥ ಅರ್ಜಿಗಳನ್ನು ಕಮಿಟಿಯವರು ಅಗಸ್ಟ ೩೧ನೇ ತಾರೀಖಿನವರೆಗೆ ತೆಗೆದುಕೊಳ್ಳುವರು, ಆ ಮೇಲೆ ಬಂದ ಅರ್ಜಿಗಳನ್ನು ಅವರು ತೆಗೆದುಕೊಳ್ಳಲಿಕ್ಕಿಲ್ಲ.

೪. ಉಮೇದವಾರರ ವಯಸ್ಸು, ಪರೀಕ್ಷೆಯ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅದು ನಡಿಯುವ ಮುದ್ದತು, ಪರೀಕ್ಷೆಯ ಫೀ ಮುಂತಾದ ಮಾಹಿತಿಯು, ಸನ್ ೧೮೮೯. ಮೇ ೧೭ನೇ ತಾರೀಖಿಗೆ ಮುಂಬೈ ಸರಕಾರೀ ಗ್ಯಾಝೇಟಿನ ೧ನೇ ಭಾಗದ ೪೩೧ನೇ ಪೃಷ್ಠದಲ್ಲಿ ಪ್ರಸಿದ್ಧಿಸಲ್ಪಟ್ಟಿರುವಂಥ ಮತ್ತು ಸನ್ ೧೮೮೯. ಜುಲಾಯಿತಿಂಗಳ ಮುಂಬೈ ಎಜ್ಯುಕೇಶನಲ್ ರಿಕರ್ಡಿನ ೧೬೯ನೇ ಪೃಷ್ಠದಲ್ಲಿ ತಿರಿಗಿ ಪ್ರಸಿದ್ಧಿಸಲ್ಪಟ್ಟಿರುವಂಥ " ಸರಕಾರೀ ಕಟ್ಟಳೆಗಳನ್ನು " ನೋಡಿದರೆ ಶಿಗುವದು. ಈ ಕಟ್ಟಳೆಗಳ ಪ್ರತಿಗಳು ಕೆಳಗೆ ಸಹಿ ಮಾಡಿದವರಕಡಿಗಾಗಲಿ, ಕಮಿಟಿಯ ಪ್ರೆಸಿಡೆಂಟರ ಕಡಿಗಾಗಲಿ ಬೇಡಿದರೆ ಕ್ರಯವಿಲ್ಲದೆ ಶಿಗುವವು.

Dharwar } (Signed) S. V. **Patwardhan**
26 June 1889 } **Educational Inspector S. D.**

—೦೦೦—

What is to simplify a subject.

ಶಿಕ್ಷಣದಲ್ಲಿ ವಿಷಯಕ್ಕೆ ಸುಲಭರೂಪ ಕೊಡೋಣವೆಂದರೇನು?

ಈ ಸುಲಭರೂಪ ಕೊಡೋಣವು ಯಾವತ್ತು ವ್ಯ

ಪದಾರ್ಥಗಳಲ್ಲಿ ಉಂಟೋ, ಇಲ್ಲವೋ, ಇದ್ದರೆ ಹ್ಯಾಗೆ ನಡೆಯುವದು? ಎಂಬ ಬಗ್ಗೆ ನಿಬಂಧವು.

ಶಿಕ್ಷಣದ ಕೆಲಸವು ಭೂಮಿಯ ಮೇಲೆ ಯಾವತ್ತು ಪ್ರಾಣಿಗಳಲ್ಲಿ ಅವುಗಳ ಉತ್ಪತ್ತಿಯ ಕಾಲದಿಂದ ನಡೆದು ಬಂದಿರುತ್ತದೆ. ಶಿಕ್ಷಣವೆಂದರೆ ಯಾವದೊಂದು ಕೆಲಸವನ್ನು ಮಾಡಲಿಕ್ಕೆ ಬರುವಹಾಗೆ ಮಾಡುವದು. ಪ್ರಾಣಿಗಳು ಹುಟ್ಟಿದ ಕೂಡಲೆ ಅವಕ್ಕೆ ದೇವರು ಕೊಟ್ಟಂಥ ಅಂದರೆ ಸ್ವಾಭಾವಿಕವಾದ ಇಂದ್ರಿಯಗಳ ಕಾರ್ಯಜ್ಞಾನದ ಹೊರ್ತು ಮತ್ತ್ಯಾವ ಸಂಗತಿಯು ಗೊತ್ತಿರುವದಿಲ್ಲ. ಆದದರಿಂದ ಅವುಗಳನ್ನು ಹಡೆದ ಪ್ರಾಣಿಗಳು ತಮಗೆ ಅನುಭವದಿಂದ ಇಲ್ಲವೆ ಬೇರೆ ತರದಿಂದ ಗೊತ್ತಾಗಿದ್ದ ನಡಾವಳಿಗಳನ್ನು ಉದರ ಪೋಷಣೆಯ ಸಲುವಾಗಿ ಮಾಡಿಕೊಳ್ಳಬೇಕಾದ ಉದ್ಯೋಗಗಳ ಕ್ರಮಗಳನ್ನೂ ಸೃಷ್ಟಿಯೊಳಗಿನ ಪದಾರ್ಥಗಳ ಧರ್ಮಗಳನ್ನೂ ತಿಳಿಸಿ ಕೊಟ್ಟು ಅವುಗಳನ್ನು ಮಾರ್ಗಕ್ಕೆ ಹಚ್ಚುವದು ಸಹಜವಾಗಿದೆ. ಆದರೆ ಕೆಲವು ಪ್ರಾಣಿಗಳಿಗೆ ಯಾವತ್ತು ಸಂಗತಿಗಳನ್ನು ತಿಳಿಸಲಿಕ್ಕೂ ತಿಳುಕೊಳ್ಳಲಿಕ್ಕೂ ತಕ್ಕ ಸಾಧನೆಗಳಿರುವದಿಲ್ಲ. ಅವುಗಳಲ್ಲಿರುವ ಸಾಧನಗಳ ಪ್ರಮಾಣದ ಮೇಲಿಂದ ಅವುಗಳ ಉಪಜೀವನದ ಕ್ರಮಗಳು ಬೇರೆ ಬೇರೆಯಾಗಿರುತ್ತವೆ. ಹೊಟ್ಟೆ ತುಂಬಿಕೊಳ್ಳುವ ಉದ್ಯೋಗವು ಯಾವತ್ತು ಪ್ರಾಣಿಗಳಿಗೆ ಸಾಧಾರಣವಾಗಿರುವದು. ಬೇರೆ ಬೇರೆ ಪ್ರಾಣಿಗಳಲ್ಲಿ ದೇವರು ಕೊಟ್ಟಿರುವ ಸಾಧನಗಳ ಪ್ರಮಾಣವು ಬೇರೆ ಬೇರೆಯಾಗಿರುವದರಿಂದ ಅವುಗಳ ಸ್ಥಿತಿಯಲ್ಲಿರುವ ಹೆಚ್ಚು ಕಡಿಮೆಯ ಮಾನದಿಂದ ಅವವುಗಳ ಶಿಕ್ಷಣ ಕ್ರಮವು ಬೇರೆ ಬೇರೆಯಾಗಿರುವದು. ಆದರೆ ಈ ಉಪಜೀ

ವನದ ಉದ್ಯೋಗವನ್ನು ಮಾಡಲಿಕ್ಕೆ ಬರುವಂತೆ ಕಲಿಸ
ವದು ಯಾವತ್ತು ಪ್ರಾಣಿಗಳಲ್ಲಿ ಕಂಡು ಬರುತ್ತದೆ. ಅಂ
ಮೇಲೆ ಶಿಕ್ಷಣವು ಯಾವತ್ತು ಪ್ರಾಣಿಗಳಲ್ಲಿ ಸ್ವಾಭಾವಿ
ವಾಗಿ ನಡಿಯುತ್ತದೆಂದು ತೋರುತ್ತದೆ. ಇದನ್ನು ಸ್ಪಷ್ಟ
ಮಾಡುವದಕ್ಕಾಗಿ ದೃಷ್ಟಾಂತವು—ಬೆಕ್ಕು ತನ್ನ ಮರಿಗಳಿ
ಹುಳಗಳನ್ನು ಹಿಡಿಯಲಿಕ್ಕೂ, ಗೋಡೆಗಳ ಮೇಲೆ ಏರ
ಕ್ಕೂ ಕಲಿಸುವದು. ಇದರಂತೆ ಯಾವತ್ತು ಪ್ರಾಣಿಗಳು ತ
ಮ್ಮ ಮರಿಗಳಿಗೆ ಆಹಾರ ದೊರಕಿಸುವ ಉದ್ಯೋಗದ ಕ್ರ
ಮವನ್ನು ತಿಳಿಸಿ ಕೊಡುವವು. ಮನುಷ್ಯರು ನಡಾವಳಿಯ
ಕ್ರಮಗಳನ್ನೂ ಬೇರೆ ಹೆಚ್ಚಿನ ಸಂಗತಿಗಳನ್ನೂ ಅರಿತುಕೊ
ಳ್ಳಲಿಕ್ಕೆ ಸಮರ್ಥರಾಗಿರುವದರಿಂದ ಎಲ್ಲ ಪ್ರಾಣಿಗಳಲ್ಲಿ ಶ್ರೇ
ಷ್ಠರಾಗಿರುವರು. ಶಿಕ್ಷಣದ ಕ್ರಮವು ಮನುಷ್ಯರಲ್ಲಿ ಹೆಚ್ಚ
ಪ್ರಮಾಣದಿಂದ ನಡಿಯುವದು. ಯಾವ ಪ್ರಾಣಿಗಳೇ ಆಗ
ಚಿಕ್ಕತನದಲ್ಲಿ ಅಜ್ಞಾನಿಗಳಾಗಿರುವದರಿಂದ ಅವುಗಳಿಗೆ ಯಾ
ವತ್ತು ವಿಷಯಗಳು ಹೊಸವಾಗಿರುತ್ತವೆ. ಆ ಹೊಸ ವಿಷ
ಯಗಳಲ್ಲಿ ಕೆಲವನ್ನು ಅವು ತಮ್ಮ ಸ್ವಾಭಾವಿಕವಾದ ಬು
ದ್ಧಿಯಿಂದ ಕಲಿತುಕೊಳ್ಳುತ್ತವೆ. ಉಳಿದವುಗಳನ್ನು ಹಿರಿಯ
ಪ್ರಾಣಿಗಳು ಕಲಿಸತಕ್ಕದ್ದು. ಯಾವದೊಂದು 'ಸಂಗತಿಯನ್ನು
ಹೇಳಿದರೆ ಆ ಚಿಕ್ಕ ಪ್ರಾಣಿಗಳಿಗೆ ತಿಳಿಯುತ್ತಿರುವದಿಲ್ಲ.
ಅಂಥ ಪ್ರಸಂಗದಲ್ಲಿ ಹೇಳತಕ್ಕ ಸಂಗತಿಯ ಅರ್ಥವನ್ನು ಅ
ವುಗಳಿಗೆ ಗೊತ್ತಿದ್ದ ಶಬ್ದಗಳಿಂದಾ ಮತ್ತು ದೃಷ್ಟಾಂತಗಳಿಂ
ದ, ತಿಳಿಸಿಕೊಡತಕ್ಕದ್ದು. ಹಾಗೂ ಕೆಲವು ಸಂಗತಿಗಳ
ಮೂಲ ಸ್ವರೂಪವನ್ನು ತೋರಿಸಿ ಅವುಗಳನ್ನು ತಿಳಿಸಿಕೊ
ಡತಕ್ಕದ್ದು. ಈ ಮೇರಿಗೆ ತಿಳಿಯದ ಸಂಗತಿಗಳನ್ನು ತಿಳಿ

ಯುವಂತೆ ಮಾಡೋಣವೇ ಕಲಿಸತಕ್ಕ ವಿಷಯಗಳಿಗೆ ಸುಲಭರೂಪ ಕೊಡೋಣವು. ಈ ಪದ್ಧತಿಯು ಪಶುಪಕ್ಷಿಗಳಲ್ಲಿ ಸಹ ಉಂಟು. ಬೆಕ್ಕು ತನ್ನ ಮರಿಗಳಿಗೆ ಹರಿದಾಡುವ ಪ್ರಾಣಿಗಳ ಸ್ವರೂಪವನ್ನು ತೋರಿಸಿ ಕೊಟ್ಟು, ಅವುಗಳನ್ನು ಹಿಡಿಯ ಕಲಿಸಬೇಕಾಗಿದ್ದಲ್ಲಿ ಮೊದಲು ತನ್ನ ಬಾಲವನ್ನು ನೆಲದಮೇಲೆ ಉರುಳಾಡಿಸಿ ಅದನ್ನು ಬಾಯಿಂದ ಕಚ್ಚುವದಕ್ಕೆ ಕಲಿಸುವದು. ಈ ಮೇರೆಗೆ ರೂಢಿಯಿಂದ, ಹರಿದಾಡುವ ಪ್ರಾಣಿಯನ್ನು ಕಂಡಕೂಡಲೆ ಹಿಡಿಯುವದಕ್ಕೆ ಆ ಮರಿಗಳು ಕಲಿಯುವವು. ಒಂದು ಹಗ್ಗವನ್ನು ಕೈಯಲ್ಲಿ ಹಿಡಿದು ಅಗಳಾಡಿಸಿದರೆ ಅದನ್ನು ಹಿಡಿಯುವದಕ್ಕೆ ಹವಣಿಸುವ ಬೆಕ್ಕಿನ ಮರಿಗಳನ್ನು ನಾವು ನೋಡುತ್ತೇವೆ. ಇದೇಮೇರೆಗೆ ಯಾವತ್ತು ಪ್ರಾಣಿಗಳು ತಮ್ಮ ಮರಿಗಳಿಗೆ ರೂಢಿಯ ಸಂಗತಿಯಿಂದ ವಿಶೇಷ ಸಂಗತಿಗಳನ್ನು ತಿಳಿಸಿ ಕೊಡುವವು.

ಸುಲಭ ರೂಪಕೊಡುವದು ಮನುಷ್ಯರಲ್ಲಿ ಹೆಚ್ಚು ಪ್ರಮಾಣದಿಂದ ಇರುತ್ತದೆಂಬದು ಸಹಜವೇ ಇನ್ನು ವ್ಯವಹಾರದಲ್ಲಿ ಈ ಸುಲಭ ರೂಪವನ್ನು ಹ್ಯಾಗೆ ಕೊಡುತ್ತಾರೆಂಬದನ್ನು ವಿಚಾರಿಸುವಾ — ವಿಷಯಗಳು ಕಣ್ಣಿಗೆ ಕಾಣದಂಥವು ಇದ್ದರೆ ದೃಷ್ಟಾಂತದಿಂದ, ಹಾಗೂ ಪದಾರ್ಥಗಳ ಮೂಲಸ್ವರೂಪದ ವಿವರಣೆಯಿಂದ ತಿಳಿಯುವ ಹಾಗೆ ಮಾಡಿ ಅಂದರೆ ಅವುಗಳಿಗೆ ಸುಲಭ ರೂಪ ಕೊಟ್ಟು ತಿಳಿಸುವರು. ಇವುಗಳಿಗೆ ಉದಾಹರಣಗಳು —

ತಂದೆಯು ಮಗನಿಗೆ ಮನುಷ್ಯರಲ್ಲಿ ಇಂಥಾ ಗುಣವಿರತಕ್ಕದ್ದು ಇಲ್ಲವೆ ಇಂಥಾ ಗುಣವು ಇರಬಾರದೆಂದು ಹೇಳಬೇಕಾ

ಗಿದ್ದಲ್ಲಿ “ ಈ ಗುಣವು ಇರಬೇಕು, ಅಥವಾ ಈ ಗುಣವು ಇರಬಾರದು ” ಎಂಬ ವಾಕ್ಯವನ್ನೇ ಹೇಳಿದರೆ ಅವನು ಅದನ್ನು ಮತ್ತೊಂದು ಕ್ಷಣದಲ್ಲಿ ಮರೆತು ಬಿಡುವನು. ಇಲ್ಲವೆ ಅದರಿಂದ ಅವನಿಗೆ ಏನೂ ಉಪಯೋಗವಾಗಲಿಕ್ಕಿಲ್ಲ. ಹೀಗೆ ಮಾಡದೆ ಈ ಸಂಬಂಧದ ದೃಷ್ಟಾಂತವನ್ನು ಹೇಳಿ ತಿಳಿಸಿಕೊಟ್ಟರೆ ಆ ಬುದ್ಧಿಯು ಮಾತು ಅವನ ಮನಸಿನಲ್ಲಿ ಹೆಚ್ಚು ನೆಲೆಗೊಳ್ಳುವದು. ಇಂಥ ಪ್ರಸಂಗಕ್ಕೆ ವ್ಯವಹಾರದಲ್ಲಿರುವ ಅನೇಕ ಸಜ್ಜನರ ಮತ್ತು ದುರ್ಜನರ ಚರಿತ್ರಗಳು ತಕ್ಕ ದೃಷ್ಟಾಂತಗಳಾಗುತ್ತವೆ. ನೋಡಿರಿ! ತಂದೆಯು ಮಗನಿಗೆ ಜೂಜಾಡಬೇಡ ಆದರಿಂದ ನಾಶ ಹೊಂದೀ; ಎಂದು ಹೇಳಿದರೆ ಒಂದು ವೇಳೆ ಈ ಮಾತು ಆ ಹುಡುಗನಿಗೆ ಸಣ್ಣದಾಗಿ ತೋರಿ ಅದರ ಪರಿಣಾಮವನ್ನು ಮನಸಿನಲ್ಲಿ ತರದೆ ಇರಬಹುದು. ಅದೇ ಈ ಮಾತನ್ನು ಹೇಳುವ ಕಾಲಕ್ಕೆ ತಂದೆಯು—“ ಪಾಂಡವರಿಗೆ ಜೂಜಾಟದಿಂದ ವದಗಿದ ವನವಾಸದ ದೃಷ್ಟಾಂತವನ್ನು ” ಕೊಟ್ಟರೆ, ಆ ಹುಡುಗನು ಜೂಜಾಟದಿಂದ ವದಗುವ ಅವಸ್ಥೆಯನ್ನು ನೆನಪಿಗೆ ತಂದು ಹೆದರಿ ಅದನ್ನು ಬಿಟ್ಟುಬಿಡುವನು. ಇಲ್ಲಿ ಜೂಜು ಅಂದರೇನು? ಅದನ್ನು ಹ್ಯಾಗೆ ಆಡುತ್ತಾರೆ? ಎಂಬದನ್ನು ಉದಾಹರಣೆಯಿಂದ ತಿಳಿಸಿ ಅದರ ಪರಿಣಾಮವನ್ನು ಹೇಳಿದ್ದರಿಂದ ಹುಡುಗನಿಗೆ ತಂದೆಯ ಮಾತಿನ ಅಭಿಪ್ರಾಯವು ಸುಲಭವಾಗಿ ತಿಳಿಯುವದು. ಇಂಥಾ ಉದಾಹರಣೆಗಳನ್ನು ಸ್ಪಷ್ಟ ಮಾಡುವದಕ್ಕಾಗಿಯೇ ಜನರು ನಾಟಕಗಳನ್ನು ಆಡುವರು.

ಬೆಳವಲ ದೇಶದ ಒಕ್ಕಲಿಗನ ಮುಂದೆ ಮಲ್ಲಾಡದ ಒಬ್ಬ ಒಕ್ಕಲಿಗನು ಅಡಕಿಯ ಮರದ ಸುದ್ದಿಯನ್ನು ಹೇಳುತ್ತಿ

ಗ್ಗೆ ಅದನ್ನು ನೋಡದೆ ಇದ್ದ ಆ ಎರಡನೆಯವನಿಗೆ ಆ ಮರವು ಹ್ಯಾಗೆ ಇರುತ್ತದೆಂಬದನ್ನು ತಿಳಕೊಳ್ಳುವ ಆ ಕಾಂಕ್ಷೆಯುಂಟಾಗುವದು. ಆಗ ಬಲ್ಲ ಒಕ್ಕಲಿಗನು ತೆಂಗಿನ ಮರದ ಉಪಮೆಯನ್ನು ಕೊಟ್ಟು ತಿಳಿಸಿ ಹೇಳುವನು. ಈ ಉದಾಹರಣೆಗಳಿಂದ ವಿಷಯಗಳಿಗೆ ಸುಲಭ ರೂಪವನ್ನು ದೃಷ್ಟಾಂತದಿಂದ ಕೊಡುತ್ತಿರುವದನ್ನು ವಿವರಿಸಿದಂತಾಯಿತು.

ಒಬ್ಬ ವ್ಯಾಪಾರಿಯ ಮುಂದೆ ಒಬ್ಬ ಒಕ್ಕಲಿಗನು ಹೊಲಕ್ಕೆ ರೆಂಟಿ ಹೊಡಿಯುತ್ತಕ್ಕದ್ದು. ಎಂದು ಹೇಳಿದನೆಂದು ಕಲ್ಪಿಸುವ. ಇಲ್ಲಿ ಆ ವ್ಯಾಪಾರಿಗೆ ರೆಂಟಿ ಅಂದರೇನು? ಅದನ್ನು ಹೊಡಿಯೋಣವೆಂದರೇನು? ಎಂಬದು ಗೊತ್ತಿಲ್ಲದಿದ್ದರೆ ಆ ಒಕ್ಕಲಿಗನು ಆ ರೆಂಟಿಯ ಮೂಲಸ್ವರೂಪವನ್ನು ತೋರಿಸುವದಕ್ಕಾಗಿ ಕಟ್ಟಿಗೆಯನ್ನು ತಂದು ಬಾಗಿದ ಕೈ ಹಾಗೆ ಕೆತ್ತಿ ಅದರ ತುದಿಗೆ ಕಬ್ಬಿಣದ ಸಲಾಖಿಯನ್ನು ಹಾಕಿ ಅದರಿಂದ ಹೊಲದಲ್ಲಿ ಹೀಗೆ ಮಾಡುತ್ತೇವೆಂದು ಹೇಳುವನು. ಇಲ್ಲಿ ಒಕ್ಕಲಿಗನು ರೆಂಟಿ ಹೊಡಿಯೋದರ ಮೂಲಸ್ವರೂಪಕ್ಕೆ ಹೋಗಿ ತನ್ನ ಮಾತನ್ನು ತಿಳಿಸಿಕೊಟ್ಟಂತಾಯಿತು. ಈ ಮೇರೆಗೆ ವ್ಯವಹಾರದಲ್ಲಿ ಅನೇಕ ಉದ್ಯೋಗಗಳ ಸಂಬಂಧದಿಂದ ಜನರು ತಾವು ಮತ್ತೊಬ್ಬರ ಕೂಡಾ ಮಾತಾಡುವಾಗ ವಿಷಯಕ್ಕೆ ಸುಲಭ ರೂಪ ಕೊಡುವ ಪ್ರಚಾರವು ನಡದೇ ಇರುತ್ತದೆ.

ಕೆಲವು ವೇಳೆ ಶಬ್ದಗಳ ಅರ್ಥದಿಂದ ಸಹ ವಿಷಯಕ್ಕೆ ಸುಲಭ ರೂಪವನ್ನು ಕೊಡುವರು. ಹೊಸದಾಗಿ ಮಾತಾಡುವದಕ್ಕೆ ಕಲಿಯುತ್ತಿರುವ ಹುಡಗನಿಗೆ " ಅಲ್ಲಿಗೆ ಹೋಗಿ ಬಾ " ಎಂಬ ಮಾತು ತಿಳಿಯದೆ ಕಡೀ " ಬಾ " ಎಂಬದನ್ನು ಕೇಳಿ ಹತ್ತರ ಮಾತ್ರ ಬರುವನು; ಇಲ್ಲವೆ ಸುಮ್ಮ

ನೆ ನಿಂತಲ್ಲೆ ನಿಲ್ಲುವನು. ಆಗ ಅವನಿಗೆ "ಅಲ್ಲಿಗೆ ಹೋಗು" ಎಂದು ಹೇಳಿ ಸ್ವಲ್ಪ ನಿಂತು ಅವನು ಅಲ್ಲಿಗೆ ಹೋದಬಳಿಕ "ತಿರಿಗಿ ಬಾ" ಎಂದು ಹೇಳಿದರೆ ಅವನು ಹೇಳಿದಂತೆ ಮಾಡುವನು.

(ಮುಂದೆ ಸಾಗುವದು.)

History of the Middle Ages

ಯುರೋಪದ ಮಧ್ಯಕಾಲದ ಇತಿಹಾಸವು

(೧೩೪ನೇ ಪುಟದಿಂದ ಮುಂದೆ ಸಾಗಿದ್ದು.)

— ಕಾನಸ್ತಾಂತಿ ನೋಪಲ್ಲವು —

ಅಂದ್ರೋನಿಕಸನೆಂಬವನು ಅಲೆಕ್ಸೀಯುಸನೆಂಬ ಚಕ್ರವರ್ತಿಯನ್ನು ಕೊಂದು ತಾನು ಪಟ್ಟವೇರಿದನು, ೧೧೮೩. ಮುಂದೆ ಯೆರಡು ವರ್ಷಗಳ ನಂತರ ಅವನನ್ನು ಕೊಂದು ಇಸಾಕ್ಕೆಂಬವನು ಚಕ್ರವರ್ತಿಯಾದನು. ಅವನು ಅವನ ತಮ್ಮನಾದ ೩ನೇ ಅಲೆಕ್ಸೀಯುಸನೆಂಬವನಿಂದ ತಳ್ಳಲ್ಪಟ್ಟನು, ೧೧೯೪. ಇಸಾಕನ ಮಗನು, ಯುರೋಪದ ಅರಸರು ೪ನೇ ಕ್ರೂಸೇಡ ಯುದ್ಧಕ್ಕೆ ಹೊರಟಿರಲಾಗಿ ಅವರ ಬಳಿಗೆ ತನ್ನ ತಂದೆಗೆ ಸಹಾಯ ಮಾಡಿರೆಂದು ಬೇಡಿಕೊಂಡನು ಆದದರಿಂದ ಆ ಅರಸರು ಕಾನಸ್ತಾಂತಿನೋಪಲವನ್ನು ತಕ್ಕೊಂಡು, ಇಸಾಕನ ಸೆರೆ ಬಿಡಿಸಿ, ಅವನ ಮಗನನ್ನು ೪ನೇ ಅಲೆಕ್ಸೀಯುಸನೆಂಬ ಹೆಸರಿನಿಂದ ಪಟ್ಟಕ್ಕೆ ಕುಳ್ಳಿರಿಸಿದರು. ಆದರೆ ಅವರಿಬ್ಬರು ತಂ

ದೆ ಮಕ್ಕಳನ್ನು ಕೊಂದು ೫ನೇ ಅಲೆಕ್ಸೀಯುಸನು ಚಕ್ರವರ್ತಿಯಾದನು, ೧೨೦೪. ತರವಾಯು ಕ್ರೂಸೆಡದ ದಂಡಿನವರು ಪುನ: ಪಟ್ಟಣವನ್ನು ತಕ್ಕೊಂಡು ವೊಬ್ಬ ಬಾಲ್ಡವಿನ್ನನೆಂಬ ಹೊಸ ಅರಸನನ್ನು ಮಾಡಿ, ಅವನಿಗೆ ರಾಜ್ಯದ ನಾಲ್ಕನೇ ಪಾಲು ಕೊಟ್ಟು, ಉಳಿದದ್ದನ್ನೆಲ್ಲ ತಾವು ಹಂಚಿಕೊಂಡರು. ಆ ಹಂಚಿಕೊಂಡಂಥಾ ರಾಜ್ಯದಲ್ಲಿ ಮೂರು ಗ್ರೀಕ ಸಂಸ್ಥಾನಗಳುಂಟಾಗಿ, ಅವುಗಳಲ್ಲಿ ಯೆರಡರ ವೊಡೆಯರು ಚಕ್ರವರ್ತಿ ಯೆಂಬ ಪದವಿಯನ್ನು ಧರಿಸಿದರು.

ಬಾಲ್ಡವಿನ್ನನು ವೊಂದು ವರ್ಷ ಆಳಿದಬಳಿಕ ಬಲ್ಗೇರಿಯನ್ನ ಜನರು ಅವನನ್ನು ಕ್ರೂರತನದಿಂದ ಕೊಂದರು, ೧೨೦೬. ತರುವಾಯ ಅವನ ಮಗನೂ, ಅಳಿಯನೂ ಆಳಿದ ಬಳಿಕ ಪೀಟರದೀ ಕೋರ್ಟನೀ ಯೆಂಬವನು ಅರಸನಾದನು.

ಮೇಲೆ ಹೇಳಿದ ಮೂರು ಗ್ರೀಕ ಸಂಸ್ಥಾನಗಳಲ್ಲಿ ಏಶಿಯದೊಳಗಿನ ಸಂಸ್ಥಾನದ ಚಕ್ರವರ್ತಿಯಾದ ಜಾನ ಲಸ್ಕರಿಸನೆಂಬವನೂ, ಅವನ ಮಗನೂ ವಿವೇಕದಿಂದ ಆಳಿದರು. ತರುವಾಯ ಮಿಚಲ ಪಾಲಿಯಾಲಗಸನೆಂಬವನು ಅವನ ಮೊಮ್ಮಗನನ್ನು ಕೊಂದು, ತಾನು ಅರಸನಾದನು. ಮಿಚಲ್ಲನ ಸರದಾರನೊಬ್ಬನು ಕಾನಸ್ಟಾಂತಿನೋಪಲ್ಲವನ್ನು ವೊಂದೇ ರಾತ್ರಿಯೊಳಗೆ ತಕ್ಕೊಂಡನು, ೧೨೬೧. ಆ ಪಟ್ಟಣವು ಈ ಪೂರ್ವದಲ್ಲಿ ೫೭ ವರ್ಷ ಮಾತ್ರ ಲಾಟಿನ ಜನರ ವಶದಲ್ಲಿಯಿತ್ತು.

ಧರ್ಮಸಂಬಂಧದ ಕ್ರೂಸೆಡೆಂಬ ಯುದ್ಧಗಳು.

ಸೀರಿಯ, ಇಜಿಪ್ತ ದೇಶಗಳ ಮುಸಲ್ಮಾನರು ಜರೂಸಲೇ

ಮೂಡ ರಾಜ್ಯವನ್ನು ಮೇಲೆ ಮೇಲೆ ಪೀಡಿಸುವರು. ಆದರೆ ಅಲ್ಲಿಯ ಜನರ ಶೌರ್ಯದಿಂದಲೂ, ಯುರೋಪದ ಅರಸರ ಸಹಾಯದಿಂದಲೂ ಆ ರಾಜ್ಯವು ಹಲಕಾಲ ಶತ್ರುಗಳಿಗೆ ವಶವಾಗಿದ್ದಿಲ್ಲ. ಆದರೆ ಮುಂದೆ ೫೦ ವರ್ಷಗಳ ನಂತರ ಮೋಸಲ ಪಟ್ಟಣದ ಅತ್ತಾಬೇಗನು ಇದ್ದಿಸವೆಂಬ ಪ್ರಾಂತವನ್ನು ಹಿಡಕೊಳ್ಳಲಾಗಿ, ಹೊಸ ಕ್ರೂಸೆಡದ ಯುದ್ಧವುಂಟಾಯಿತು. ಫ್ರಾನ್ಸದ ೭ನೇ ಲೂಯಿಯು, ಜರ್ಮನಿಯ ೩ನೇ ಕಾನ್ರಾದನೂ ಯುದ್ಧಕ್ಕೆ ಹೊರಡಲಾಗಿ, ಮೂರು ಲಕ್ಷ ಸೈನ್ಯ ಕೂಡಿತು, ೧೧೪೭. ಆದರೆ ಕಾನ್ರಾದನು ಇಕೋನಿಯಂ ಯೆಂಬಲ್ಲಿಯ ಸುಲ್ತಾನನಿಂದ ತೀರ ಗೆಲ್ಲಲ್ಪಟ್ಟು ಕಾನಸ್ತಾಂತಿನೋಪಲ್ಲಕ್ಕೆ ಓಡಿ ಹೋದನು. ಲೂಯಿಯು ಸಹ ಪ್ರೊಪ್ತ ಅಪಜಯ ಪಟ್ಟಾಗ್ಯೂ, ಜರೂಸಿಲೇಮಕ್ಕೆ ಮುಟ್ಟಿ. ಅಲ್ಲಿಂದ ದಮಾಸ್ಕಸ ಪಟ್ಟಣದ ಮುತ್ತಿಗೆಗಾರರಿಗೆ ಸಹಾಯ ಮಾಡ ಹೋದನು. ಅದರಿಂದ ಲಾಭವೇನು ಆಗಲಿಲ್ಲ; ೧೧೪೮.

ಸಾಲಾದೀನನು ಜರೂಸಿಲೇಮ ಪಟ್ಟಣವನ್ನು ತಕ್ಕೊಂಡ ಸುದ್ದಿಯು ಯುರೋಪಕ್ಕೆ ಮುಟ್ಟಿದ ಬಳಿಕ ಕ್ರಿಸ್ತೀ ಜನರು ಅತೀ ಕ್ಲೇಶ ಪಟ್ಟು ಸಂತಪ್ತರಾದರು, ೧೧೮೭. ಆದದರಿಂದ ಮೂರನೇ ಕ್ಲೆಮೆಂತನೆಂಬ ಪೋಪನು ಯುದ್ಧದ ಸನ್ನಾಹ ಮಾಡರೆಂದು ಅರಸರನ್ನು ಬೋಧಿಸಿದನು. ಆದದರಿಂದ ಜರ್ಮನಿಯ ಫ್ರೇಡರಿಕ ಚಕ್ರವರ್ತಿಯು, ಫ್ರಾನ್ಸದ ಫಿಲಿಪ ರಾಜನೂ ಇಂಗ್ಲಂಡದ ಮೊದಲನೇ ರಿಚರ್ಡ ರಾಜನೂ ಯುದ್ಧಕ್ಕೆ ಹೊರಟರು, ೧೧೮೮.

(ಮುಂದೆ ಸಾಗುವದು.)

—ooo—

Correspondce.

ಪತ್ರವ್ಯವಹಾರವು.

ನಮ್ಮ ಜನರು ವ್ಯರ್ಥವಾಗಿ ಹಣವನ್ನು ವೆಚ್ಚ ಮಾಡುವ ಕಾರ್ಯಗಳು.

ಚ॰ ಮಾ॰ ವೃ॰ || ಅರುಣಧರಂ ಮುರಾರಿಯ ಸಖಂ ನಗ
ಜಾಧವನೀಕ್ಷಣತ್ರಯಂ | ಸುರಪತಿ ವಂದಿ
ತಂ ಸಲಿಲಜಾಸ್ತ್ರಹರಂ ಕರುಣಾಘನಂ
ಶಿವಂ | ತರುಳನ ಹಸ್ತದಿಂ ಲಿಖಿತಮಾ
ದ ನಿಬಂಧವು ಮಿತ್ರರಾಳಿಯೊಳ್ |
ಮೆರೆವ ತೆರಂ ದಯಾ ಭರಿತನಾಗಲಿ ಪಾದ
ಸರೋಜ ಭೃಂಗನೊಳ್ || ೧ ||

|| ಕಂದ || ಜನನದಿ ಮರಣದಿ ತೋಷದಿ | ಮನ
ದೊಳ್ ಬಹು ಶೋಕ ಮಿರ್ಪ ಸಮ
ಯದಿಮತ್ತಂ | ತನಯನ ಲಗ್ನದೊಳತಿ
ಶಯ | ಧನ ಕಳೆಯುವದೆಂತು ಹಿತವೊ
ಗಿರಿಜಾಧೀಶಾ || ೧ ||

ನಮ್ಮ ಜನರು ಕೆಲಕೆಲವು ಕಾರ್ಯ ಸಮಾರಂಭಗಳಲ್ಲಿ ಬಹಳ ಹಣವನ್ನು ವೆಚ್ಚ ಮಾಡುತ್ತಾರೆ. ಆ ಕಾರ್ಯಗಳು ಸ್ವಲ್ಪ ಹಣದ ಸಹಾಯದಿಂದಲೇ ಪೂರ್ಣವಾಗುವದಾಗಿದ್ದರೂ, ಬಹಳ ಹಣ ವೆಚ್ಚ ಮಾಡಿದರೆ ಕೀರ್ತಿ ದೊರೆಯುವದೆಂಬ ಭ್ರಾಂತಿಯಿಂದ ವ್ಯರ್ಥವಾದ ವೆಚ್ಚಕ್ಕೆ ಮನಸ್ಸು ಹಾಕುತ್ತಾರೆ. ಈ ತರದ ಸಮಾರಂಭಗಳನ್ನು ಸತ್ತಾಗ, ಹುಟ್ಟಿದಾಗ, ಬೈನೆ ಬಿದ್ದಾಗ, ಸಂತೋಷದಲ್ಲಿರುವಾಗ, ದುಃಖದಲ್ಲಿರುವಾ

ಗ ಮುಂತಾದ ಸಮಯಗಳಲ್ಲಿ ಮಾಡುತ್ತಾರೆ. ಹುಟ್ಟಿದಾಗ, ಸಂತೋಷದಲ್ಲಿರುವಾಗ, ಮುಂತಾದ ಸಮಯಗಳಲ್ಲಿ ದುಂದುಗಾರಿಕೆಗಾಗಿ ನೆಲೆಗೆಟ್ಟು ವೆಚ್ಚ ಮಾಡುವದೇ ಕನಿಷ್ಟ ಪ್ರತಿಯ ಕೆಲಸವು. ಅಂದ ಮೇಲೆ ದುಃಖದಲ್ಲಿರುವಾಗ, ಸತ್ತಾಗ, ಬೇನೆ ಬಿದ್ದಾಗ, ಮುಂತಾದ ಸಮಯಗಳಲ್ಲಿ ನೆಲೆಗೆಟ್ಟು (ಸ್ವಲ್ಪದರೂ ಚಿಂತೆಯಿಲ್ಲ) ವೆಚ್ಚ ಮಾಡುವವರು ಪಂಡಿತರಾದಾಗ್ಯೂ ಅವರನ್ನು ಹೆಡ್ಡಪ್ಪಗಳೊಳಗೆಣಿಸಲಿಕ್ಕೇನೂ ಪ್ರತಿಬಂಧ ತೋರುವದಿಲ್ಲ.

ಸತ್ತಾಗ ಮಾಡುವ ಸಮಾರಂಭ -- ಇದು ವಿಶೇಷವಾಗಿ ಸುಧಾರಿಸಿದವರಾದ ಬ್ರಾಹ್ಮಣ ಲಿಂಗಾಯತ ಮುಂತಾದ ಜಾತಿಯವರಲ್ಲಿ ವಿಶೇಷವಾಗಿ ನಡಿಯುತ್ತದೆ, ಶ್ರಾದ್ಧಾದಿ ಕಾರ್ಯಗಳಿಗೋಸ್ಕರ ಸ್ವಲ್ಪ ಹಣ ವೆಚ್ಚ ಮಾಡುವ ಬ್ರಾಹ್ಮಣರೊತ್ತಟ್ಟಿಗಿರಲಿ, ಲಿಂಗಾಯತರಲ್ಲಿ ಈ ಹುರುಪು ಬಹಳ. ಶವಗಳನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ಗುಲಾಲ ಬುಕ್ಕಿಟ್ಟು ಹಾಕುತ್ತಾರೆ. ಮನೆಯಿಂದ ಸಮಾಧಿಗೆ ಒಯ್ಯುವಾಗ ಸಮಾರಂಭವನ್ನುಂಟು ಮಾಡಿದರೆ ಸತ್ತವರಿಗೆ ಸ್ವರ್ಗಪ್ರಾಪ್ತಿಯಾಗುವದೆಂಬ ಮುಗ್ಧ ಭಾವದಿಂದ ಕೈವಲ್ಯ ವಿಮಾನ (ಸ್ವರ್ಗಾರೋಹಣದ ಸಾಧನ) ವನ್ನು ಚಿತ್ರ ವಿಚಿತ್ರವಾಗಿ ಕಟ್ಟಿ ಅದರೊಳಗೆ ಶವವನ್ನು ಕೂಡ್ರಿಸುತ್ತಾರೆ. ಕೆಲವರು ೨।೩ ಅಂತಸ್ಥಗಳುಳ್ಳ ತೇರ ಕಟ್ಟುತ್ತಾರೆ. ಇಂಥ ತೇರಿನೊಳಗೆ ಶವವನ್ನು ಕೂಡ್ರಿಸಿ ಹತ್ತಿಪ್ಪತ್ತು ಮಂದಿ ಕೂಡಿ ಎಳೆಯುತ್ತಾರೆ. ಅವರ ಮುಂದೆ ಸನಾದಿ, ಕಹಳೆ, ತಾಸೆ ಮುಂತಾದವುಗಳ ಆರ್ಭಾಟವೂ, ವೇಶ್ಯೆಯರ ಗಾನ ನರ್ತನಗಳೂ, ತೇರಿನ ನಡು ಅಂತಸ್ಥದ ಮೇಲೆ ನಿಂ

ತು ಚಾಮರ ಬೀಸುವವರ ಶೋಭೆಯೂ ವೈಯಾರವೂ ಆತ್ಯಾಶ್ಚರ್ಯಕರವಾಗಿರುತ್ತವೆ. ಕೆಲವರು ಸಾಯುವ ಮುಂಚೆ ಮಗನನ್ನು ಕರಿದು—" ನನ್ನನ್ನು ಮಣ್ಣು ಕೂಡಿಸುವದಕ್ಕೆ ನೂರಿನ್ನೂರು ರೂಪಾಯಿ ವೆಚ್ಚ ಮಾಡು" ಎಂದು ಹೇಳಿ ಅವನ ಕಡಿಯಿಂದ ವಚನ ತೆಗೆದುಕೊಳ್ಳುತ್ತಾರೆ. ಅದೇ ಹೆಣವನ್ನು ಕಟ್ಟಿಗೆಯ ಚಟ್ಟ ಕಟ್ಟಿ ಅದರ ಮೇಲೆ ಕೂಡ್ರಿಸಿ ಕೊಂಡು ಒಯ್ದರೆ, ಅದು ಒಲ್ಲೆನೆನ್ನುವದೇನು? ಸತ್ತ ಮೇಲೆ ಎತ್ತ ಬಿದ್ದರೂ ಚಿಂತೆಯಿಲ್ಲ.

ಹುಟ್ಟಿದಾಗಿನ ಸಮಾರಂಭ— ನಮ್ಮ ಜನರಲ್ಲಿ ಮಗ ಹುಟ್ಟಿದರೆ ಸಕ್ಕರೀ ಹಂಚುವ ನಡಾವಳಿಯುಂಟು. ಮಗ ಹುಟ್ಟಿದನೆಂದರೆ ನೂರಾರು ಜನರಿಗೆ ಪಕ್ವಾನ್ನ ಭೋಜನ ಮಾಡಿಸಿ ಮ್ಮ ತಮ್ಮ ಧರ್ಮಾಚರಣೆಯಂತೆ ಬ್ರಾಹ್ಮಣರು ವೈದಿಕರಿಗೆ ಂಗಾಯತರು ಅಯ್ಯನವರಿಗೆ ನೂರಾರು ರೂಪಾಯಿ ದಾನ ಮಾಡುವರು. ಇಪ್ಪತ್ತೈದು ಸಾವಿರ ರೂಪಾಯಿ ಬಕ್ಕರಿ ಕೊಂಡು ಕೂತ ಆಚಾರ್ಯನು ಅಥವಾ ಅಯ್ಯನು, "ಹ ತ್ತು ರೂಪಾಯಿ ಕೊಟ್ಟರೇ ಕಾರ್ಯ ಸಾಗುವದೆಂದು" ಹ ಹಿಡಿದರೆ ಹತ್ತು ರೂಪಾಯಿ ಪಾದದ ಮೇಲಿಟ್ಟು ನಮಸ್ಕಾರ ಮಾಡುವರು. ದಾನ ಮಾಡಬಾರದೆಂದು ಯಾರೂ ಹೇಳಾರರು. ಆದರೆ ಅದೇ ಹಣವನ್ನು ಬಡ ಬಗ್ಗರಿಗೆ ದಾನ ಮಾಡಿ ತಿನ್ನಲಿಕ್ಕೆ ಭಕ್ಕರೀ ಕೊಟ್ಟಿದ್ದರೆ ಕೀರ್ತಿಯೂ, ಅ ಥರನ್ನು ರಕ್ಷಿಸಿದ ಪುಣ್ಯವೂ ಪ್ರಾಪ್ತಿಯಾಗುತ್ತಿದ್ದವು. ಲೆ ಹೇಳಿದಂಥ ಆಚಾರ್ಯರಿಗೂ ಜಂಗಮರಿಗೂ ಪಕ್ವಾ ಭೋಜನ ಮಾಡಿಸಿದ ಮೇಲೆ ಮನೆಗೆ ಹೋಗುವ ದಾ ಲ್ಲವರು— " ಎಲ್ಲಾ ಅಡಿಗಿಯೂ ನೆಟ್ಟಗಾಗಿತ್ತು.

ಆದರೆ ಸಾರು ಕೆಟ್ಟಿತ್ತು,, ಮುಂತಾದ ಉಂಡ ಮನೆಯ ಕುಲವನ್ನು ಆರಿಸುವವರಿಗೆ ಅನ್ನ ಹಾಕುವದರಿಂದೇನು ಪ್ರಯೋಜನವು. ಬಸುರಿರುವಾರುವಾಗ ಮಾಡುವ ಸಮಾರಂಭಕ್ಕೆ ಬ್ರಾಹ್ಮಣರು ಸೀಮಂತವೆಂತಲೂ ಲಿಂಗಾಯತರು ಹೂಮುಡಿಸೋಣವೆಂತಲೂ ಅನ್ನುವರು. ಆಗಲೂ ಸಂತೋಷದಿಂದ ಸೂರಾರು ಮಂದಿಗೆ ಪಕ್ವಾನ್ನ ಭೋಜನ ಮಾಡಿಸುವರು. ಯಾವದಾದರೊಂದು ಕಾರಣದಿಂದ ಹೊಟ್ಟೆಯೊಳಗಿನ ಕೂಸಿಗೆ ಅಪಘಾತ ಒದಗಿದರೆ, ಆ ಅಪಘಾತವನ್ನು ಉಂಡವರು ದೂರ ಮಾಡುವರೋ? ಉಣ್ಣಿಸಿದವರು ದೂರ ಮಾಡುವರೋ? ಯಾರೂ ಇಲ್ಲ! ಅಖಂಡೇಶನ ಇಚ್ಛೆಯು.

ಬೇನೆ ಬಿದ್ದಾಗಾಗುವ ಸಮಾರಂಭ—ಯಾವನೊಬ್ಬನು ಬೇನೆ ಬಿದ್ದಿರುವನೆಂದು ಬೇರೂರಲ್ಲಿದ್ದ ತಮ್ಮ ಹತ್ತುಗಡೆಯವರಿಗೆ ಸುದ್ದೀ ಕಳಿಸಿದರೆ, ಅಥವಾ ತೀವ್ರ ಬಂದರೆ ಕಂಡೀರೆಂದು ಹೇಳಿಕಳಿಸಿದರೆ, ಅವನನ್ನು ನೋಡುವದಕ್ಕಾಗಿ ಪಕ್ವಾನ್ನಗಳನ್ನು ಮಾಡಿಕೊಂಡು ಗಾಡೀ ಹೂಡಿಕೊಂಡು ಹೋಗುತ್ತಾರೆ. ಹೋದವರೂ ಮನೆಯವರೂ ಕೂಡಿಕೊಂಡು ಉಣ್ಣುವಾಗ, ಉಣ್ಣಲಿಕ್ಕೆ ಬಾಯಿ ತೆರೆಯದಂಥಾ ಬೇನೆಯಿಂದ ಬಳಲುತ್ತಿರುವಂಥಾ ಆ ಬಡಪ್ರಾಣಿಯು ಹಾಸಿಗೆಯ ಮೇಲೆ ಮಲಗಿರಬೇಕು. ಪಕ್ವಾನ್ನವನ್ನು ಹೆಸರಿಗೆ ತಂದದ್ದು ಬೇನೆಯವನಿಗೆ, ನಿಜವಾಗಿ ತಂದದ್ದು ತಾವೂ ಅವರೂ ಕೂಡಿಕೊಂಡುಣ್ಣುವದಕ್ಕೆ ಇದೆಂಥಾ ಮೂರ್ಖತ್ವವು.

(ಮುಂದೆ ಸಾಗುವದು)

— ೦ —

ಕನ್ನಡಶಾಲಾಪತ್ರಕವು

CANARESE SCHOOL PAPER.

ಪುಸ್ತಕ ೩೪) (ಸಂಚಿಕೆ ೮

(ಆಗಸ್ಟ ೧೮೮೯)

ಅನುಕ್ರಮಣಿಕೆಯು.

ಪುಟ.

ುದ್ಧಿಶಕ್ತಿ, ನಿರ್ಣಯ, ಕಲ್ಪನೆ.................... ೧೬೯
ದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.... ೧೭೭
ಕ್ಷಣದಲ್ಲಿ ವಿಷಯಕ್ಕೆ ಸುಲಭರೂಪ ಕೊಡೋಣ ವೆಂದರೇನು?........ ೧೮೩
ುರೋಪದ ಮಧ್ಯಕಾಲದ ಇತಿಹಾಸವು ೧೮೭
ತ್ರವ್ಯವಹಾರವು.............................. ೧೯೦

CONTENTS

ntellectual Powers, Judjement and Immagination 169
Education and Improvement. 177
Vhat is to simplify a subject............... 183
Iistory of the Middle Ages............ 187
Correspondence 190

DHARWAR.

Printed at the Dnana Wardhaka Press

ಶಾಲಾಪತ್ರಿಕೆಯು

ಪುಸ್ತಕ ೩೪) (ಸಂಚಿಕೆ ೮

(ಆಗಷ್ಟ ೧೮೮೯)

Intellectual Powers, Judjement and Immagination.

ಬುದ್ಧಿಶಕ್ತಿ, ನಿರ್ಣಯ, ಕಲ್ಪನೆ.

ಮನುಷ್ಯ ಜಾತಿಯ ಪ್ರಾಣಿಗಳು ಸಂಪಾದಿಸಿದ ಸಾಮರ್ಥ್ಯಗಳನ್ನು ಕ್ರಮಗೊಳಿಸಿ ರಚಿಸುವದೇ ವಿದ್ಯಾಭ್ಯಾಸವೆನಿಸುತ್ತದೆ.

ಮಾನಸ ಶಾಸ್ತ್ರದ ಭಾಗವು ವಿದ್ಯಾಭ್ಯಾಸದ ಮುಖ್ಯ ಭಾಗವಿರುತ್ತದೆ; ಬೇರೆ ಬೇರೆ ವಿಷಯಗಳು ಶುದ್ಧ ಮಿಶ್ರ, ಇದ್ದಂತೆ ಅವುಗಳ ಸ್ವಾಭಾವಿಕ ಕ್ರಮ, ಅವು ಒಂದನ್ನೊಂದು ಅವಲಂಬಿಸಿರುವ ಗುಣ, ಇವುಗಳ ಶೋಧವು ಯೆರಡನೇ ಭಾಗವಿರುತ್ತದೆ.

ಮನಸಿನ ವ್ಯಾಪಾರಗಳಲ್ಲಿ ಭಾವನೆಗಳೆಂತಲೂ ಬುದ್ಧಿಯೆಂತಲೂ ಯೆರಡು ಮುಖ್ಯ ವರ್ಗಗಳುಂಟು. ಇವು ಬಹಳ ಬೆಳೆದರೆ ಒಂದಕ್ಕೊಂದು ವಿರೋಧಿಯಾಗುತ್ತವೆ. ಎರಡೂ ಸರಿಯಾಗಿ ಬೆಳೆದರೆ ಶರೀರವು ಕ್ಷೀಣವಾಗುತ್ತದೆ ಯಾಕಂದರೆ ಮಾನಸಿಕ ವ್ಯಾಪಾರಗಳೆಲ್ಲ ಶಾರೀರ ಬಲವನ್ನು ಅವಲಂಬಿಸಿರುತ್ತವೆ.

ಈ ಯೆರಡೂ ವರ್ಗಗಳ ವ್ಯಾಪಾರಗಳು ವಿದ್ಯಾಭ್ಯಾಸ

ದ ದೊಡ್ಡ ಭಾಗಗಳಾಗಿರುತ್ತವೆ; ಆದರೂ ಬುದ್ಧಿಯೆಂಬ ರ್ಗವು ಅತಿ ನಿಕಟವಾಗಿ ಸಂಬಂಧಿಸುತ್ತದೆ.

ಬುದ್ಧಿಯ ವ್ಯಾಪಾರಗಳು ಮೂರು—(೧) ಭೇದ ಬೋಧ ಅಥವಾ ವಿಂಗಡಿಸುವ ಶಕ್ತಿ ಇಲ್ಲವೆ ವೈಷಮ್ಯ ಬೋಧ (೨) ಸಾಮ್ಯ ಬೋಧ, (೩) ಸ್ಮರಣ—ಇವುಗಳಲ್ಲಿ ಸ್ಮರಣವು ವಿದ್ಯಾಭ್ಯಾಸಕ್ಕೆ ಪೂರಾ ಹೊಂದಿರುತ್ತದೆ; ಉಳಿ ಯೆರಡು ಸಾಂಸರ್ಗಿಕ ಭಾಗಗಳಾಗಿ ಬರುತ್ತವೆ.

(೧) ಭೇದ ಬೋಧ—ಬುದ್ಧಿಯ ಆವಿರ್ಭಾವವು ಮೊ ದಲು ಈ ಶಕ್ತಿಯಿಂದ ಆಗುತ್ತದೆ. ಉ—ತಾಯಿಯ ಗ ರ್ಭ. ಹಲವು ವಸ್ತುಗಳ ಭೇದವು ತಿಳಿಯುವ ವರೆಗೆ ಉ ಳಿದ ಯೆರಡು ವ್ಯಾಪಾರಗಳು ನಡಿಯುವದಿಲ್ಲ. ಈ ಶಕ್ತಿ ಯು ಸೂಕ್ಷ್ಮವಿದ್ದಂತೆ ಸ್ಮರಣದ ಸಂಗ್ರಹವು ಬೆಳೆಯುತ್ತದೆ.

ಪಂಚೇಂದ್ರಿಯಗಳಿಂದ ಆಗುವ ಭೇದ ಬೋಧಗಳಲ್ಲಿ ಕೆ ಲವೊಂದು ಕೆಲವರಲ್ಲಿ ಹೆಚ್ಚಿರುತ್ತದೆ, ಕೆಲವರಲ್ಲಿ ಕಡಿಮೆ ಇರುತ್ತದೆ. ಉ.—ಸ್ವಾಭಾವಿಕ ಗಾಯನ. ಈ ಕಾರಣದಿಂದ ಬುದ್ಧಿ ಜಾತಿಯಲ್ಲಿಯೂ, ಮೆಚ್ಚಿಕೆಗಳಲ್ಲಿಯೂ, ಹೋರಿಗಳಲ್ಲಿಯೂ ಬಹಳ ಹೆಚ್ಚು ಕಡಿಮೆಯುಂಟಾಗುತ್ತದೆ. ಆದದರಿಂದ ಹುಡುಗರಲ್ಲಿ ಪಂಚೇಂದ್ರಿಯಗಳ ಪ್ರಬಲತ್ವ ದುರ್ಬಲತ್ವಗಳನ್ನು ಮಾಡಲು ನೋಡಿಕೊಳ್ಳಲಿಕ್ಕೆಬೇಕು. ಹಾಗೆ ನೋಡಿಕೊಳ್ಳುವದರಿಂದ ಯಾವ ಹುಡುಗನು ಯಾವ ಕೆಲಸಕ್ಕೆ ತಕ್ಕವನೆಂಬುವದು ವ್ಯಕ್ತವಾಗುತ್ತದೆ.

ಭೇದ ಬೋಧವು (ಸಾಮ್ಯ ಬೋಧ ಸ್ಮರಣಗಳು ಸಹ) ಶರೀರ ಬಲದ ಉಬ್ಬುಳಿಕೆ, ಹುರವು, ಯೆಚ್ಚರು ಇವುಗಳನ್ನು ಅವಲಂಬಿಸಿರುತ್ತದೆ. ಮನಸಿನ ಉಬ್ಬುಳಿಕೆಯನ್ನು ಶಿಕ್ಷ

ಕನು ಯುಕ್ತಿಯಿಂದ ತಿಳಿಸಲಿಕ್ಕೆಬೇಕು. ಮನಸು ಒಮ್ಮೊಮ್ಮೆ ಉಬ್ಬಳಿಕೆಯುಳ್ಳದ್ದಿದ್ದಾಗ್ಯೂ ಅಡ್ಡ ಮಾರ್ಗ ಹಿಡಿಯುತ್ತಿರುತ್ತದೆ. ಭಾವನೆಗಳ ಪ್ರಾಬಲ್ಯವಿದ್ದಲ್ಲಿ ಹೀಗೆ ಆಗುತ್ತದೆ. ಅಂಥಲ್ಲಿ ಶಿಕ್ಷಕನು ಮನಸನ್ನು ಮಾರ್ಗಕ್ಕೆ ಹಚ್ಚಲಿಕ್ಕೆ ಬೇಕು.

ಬುದ್ಧಿಯ ವ್ಯಾಪಾರವು ವಸ್ತುತಃ ನಿಸ್ಸಾರವಾಗಿರುತ್ತದೆ. ಅದಕ್ಕೆ ಮನಸು ಮೆಚ್ಚುವದಿಲ್ಲ. ಆ ವ್ಯಾಪಾರದಿಂದ ಒಮ್ಮೊಮ್ಮೆ ಸಂತೋಷವಾಗುತ್ತದೆ; ಆದರೆ ಕೆಲವೊಂದು ಸಂಗತಿಯು ತಿಳಿದ ಬಳಿಕ ಅಂದರೆ ಬುದ್ಧಿಯ ವ್ಯಾಪಾರ ಮುಗಿದ ಬಳಿಕ, ಮಾತ್ರ ಆ ಸಂತೋಷವು ಹುಟ್ಟುತ್ತದೆ. ಆನಂದ, ಖೇದ, ಈ ಯೆರಡು ಭಾವನೆಗಳು ಭೇದ ಬೋಧಕ್ಕೆ ಆಶ್ರಯ ಕೊಡುತ್ತವೆ. ನಿಸ್ಸಾರವಾದ ಭೇದಕ್ಕೆ ಯಾರು ಲಕ್ಷ್ಯ ಕೊಡುವದಿಲ್ಲ.

ಭೇದಗಳು ಒಂದರ ಹಿಂದೆ ಒಂದು ಯೆಡೆ ಬಿಡದೆ ಬಂದರೆ, ಅಥವಾ ಯೆರಡು ಪದಾರ್ಥಗಳನ್ನು ಒಂದಕ್ಕೊಂದು ಹೊಂದಿಸಿ ನೋಡಿದರೆ, ಅವುಗಳಲ್ಲಿಯ ಭೇದವು ಬೇಗ ವ್ಯಕ್ತವಾಗಿ ಸ್ಮರಣದಲ್ಲಿ ನಿಲ್ಲುತ್ತದೆ.

(೨) ಸ್ಮರಣವು —(ಅರಿತದ್ದನ್ನು ಕಾದುಕೊಳ್ಳುವ ಶಕ್ತಿ) ಇದು ವಿದ್ಯಾಭ್ಯಾಸಕ್ಕೆ ಪೂರಾ ಹೊಂದಿರುತ್ತದೆ. ಇದರಿಂದಲೇ ಮಾನಸಿಕ ಸಾಮರ್ಥ್ಯಗಳು ಬೆಳೆಯುತ್ತವೆ.

ಒಂದು ಸಂಗತಿಯು ಒಮ್ಮೆ ವರ್ತಿಸಲು ನಿರಂತರದ ಕ್ಲಪ್ತಿಯು (ಸ್ಮರಣದಲ್ಲಿ ನಿಲ್ಲುವಂಥಾದು) ಬಹುತರ ಹುಟ್ಟುವದಿಲ್ಲ; ಆದದರಿಂದ ಮನಸಿಗೆ ಆಗುವ ಆ ಘಾತವು ಬಹಳ ಹೊತ್ತು ನಡಿಯಲಿಕ್ಕೆ ಬೇಕು, ಇಲ್ಲವೆ ಮೇಲೆ ಮೇ

ಲೇ ಆಗಲಿಕ್ಕೆ ಬೇಕು. ಇದೇ ಸ್ಮರಣದ ಮುಖ್ಯ ತತ್ವವಿರುತ್ತದೆ. ಇದೇ ಕಾರಣದಿಂದ ಕಲಿಯತಕ್ಕದ್ದರ ಚಿಂತನ ಮಾಡಬೇಕಾಗುತ್ತದೆ, ಮತ್ತು ಕಲಿಯತಕ್ಕ ಕೃತ್ಯವನ್ನು ಬಹಳ ಸಾರಿ ಮಾಡಬೇಕಾಗುತ್ತದೆ. ಹೀಗೆ ಮಾಡುವದರಿಂದ ಹತ್ತುವ ಚಟವೇ ಸಂಪಾದನ ಎನಿಸಿಕೊಳ್ಳುತ್ತದೆ.

ಶರೀರ ಬಲದ ಉಬ್ಬಳಿಕೆ, ಹುರುಪು, ಎಚ್ಚರುಗಳು ಸ್ಮರಣಕ್ಕೂ ಬೇಕೇ ಬೇಕು. ಅಂದರೆ ಮಿದುಳಿನ ವ್ಯಾಪಾರವು ಭರದಿಂದ ನಡೆದಾಗ ಸ್ಮರಣವು ಪರಮಾವಧಿ ಇರುತ್ತದೆ. ಆ ಕಾರಣ ಬೆಳಿಗ್ಗೆ ಸ್ಮರಣ ಶಕ್ತಿಯು ಬಹಳ ಹೆಚ್ಚಿರುತ್ತದೆಂತಲೂ ಸಂಜೆಗೆ ಬಹಳ ಕಡಿಮೆ ಇರುತ್ತದೆಂತಲೂ ಹೇಳಬಹುದು. ಬೆಳಗಿನ ಊಟವಾದ ಬಳಿಕ ೨, ೩ ತಾಸು ಇದು ಪರಮಾವಧಿ ಇರುತ್ತದೆ. ಎರಡನೇ ಊಟದ ನಂತರವೂ ಇದು ಸ್ವಲ್ಪ ಬೆಳೆಯುವದು. ಈ ನಿಯಮಕ್ಕೆ ಆಲಸ್ಯದಿಂದ ಇಲ್ಲವೆ ಪ್ರೋತ್ಸಾಹಕ ಕಾರಣಗಳಿಂದ ಅಪವಾದ ಉಂಟಾಗಬಹುದು. ಉ.—ಭಂಗಿ. ಇದೇ ಮೇರೆಗೆ ಸ್ಮರಣ ಶಕ್ತಿಯು ಚಳಿಗಾಲದಲ್ಲಿ ಹೆಚ್ಚು ಬೇಸಿಗೆಯಲ್ಲಿ ಕಡಿಮೆ, ತಾರುಣ್ಯದಲ್ಲಿ ಹೆಚ್ಚು, ಮುಪ್ಪಿನಲ್ಲಿ ಕಡಿಮೆ ಇರುತ್ತದೆ ಇಳಿತರದ ಮನುಷ್ಯರಿಗೆ ಟಿಪ್ಪಣಿಗಳು ಬಹಳ ಬೇಕು.

ಮನಸಿನ ಏಕಾಗ್ರತೆಯು ಸ್ಮರಣದ ಮೊದಲನೇ ಸಾಧನವಿರುತ್ತದೆ. ಏಕಾಗ್ರತೆಯು ಇಚ್ಛೆಯನ್ನು ಅವಲಂಬಿಸಿರುತ್ತದೆ; ಇಚ್ಛೆಯು ಸಂತೋಷ ಖೇದಗಳನ್ನು ಅವಲಂಬಿಸಿರುತ್ತದೆ. ಆದದರಿಂದ ವಿದ್ಯಾಭ್ಯಾಸದಲ್ಲಿ ಸಂತೋಷವು ಇಚ್ಛೆಗೆ ಮುಖ್ಯ ಮಾರ್ಗದರ್ಶಕವಾಗಲಿಕ್ಕೆ ಬೇಕು. ಸಂತೋಷ

ಪ್ರಮಿತವಾದದ್ದು ಇಲ್ಲವೆ ಬೆಳೆಯುವಂಥಾದು ಇದ್ದರೆ ವಿದ್ಯಾಭ್ಯಾಸಕ್ಕೆ ಹೆಚ್ಚು ಬಲ ಕೊಡುತ್ತದೆ; ಅದು ಮಿತಿ ಮೀರಿದ್ದಿದ್ದರೆ ಬುದ್ಧಿಶಕ್ತಿಗೂ ಶರೀರಕ್ಕೂ ಬೇಗ ದೌರ್ಬಲ್ಯ ತರುತ್ತದೆ. ಮುಂದೆ ಬರತಕ್ಕ ಸಂತೋಷದಿಂದಲೂ ಏಕಾಗ್ರತೆಗೆ ತಕ್ಕ ಪುಷ್ಟಿಗೆ ಸಹಾಯವಾಗುತ್ತದೆ. ಆ ಸಂತೋಷದ ಚಿತ್ರೀಕರಣವಾದಂತೆ ಏಕಾಗ್ರತೆಯು ಬೆಳೆಯುತ್ತದೆ. ದುರ್ಲಕ್ಷ್ಯಕ್ಕೆ ದುಃಖವನ್ನು (ಶಿಕ್ಷೆಯನ್ನು) ಹೊಂದಿಸಿಡುವವರಿಂದಲೂ ಏಕಾಗ್ರತೆಗೆ ಸಹಾಯವಾಗುತ್ತದೆ. ಆದರೆ ಇದು ಕಡಿಮೆ ತರದ್ದು; ಯಾಕಂದರೆ ಇದರಿಂದ ಭಯ ಹುಟ್ಟಿ ಮಿದುಳಿನ ಹ್ರಾಸವಾಗುತ್ತದೆ. ಮುಂದೆ ಬರುವ ದುಃಖವಾದರೂ ಏಕಾಗ್ರತೆಗೆ ಸಾಧನವಾಗುತ್ತದೆ. ಉ.— ಮುಂದಿನ ಹೊಟ್ಟೆಯ ಚಿಂತೆ.

ಭೇದವು ತ್ವರೆಯಾಗಿಯೂ ಅಕಸ್ಮಾತ್ತಾಗಿಯೂ ಆಗುವದರಿಂದ ಭೇದ ಬೋಧಕ್ಕೂ ಸ್ಮರಣಕ್ಕೂ ಸಹಾಯವಾಗುತ್ತದೆ. ಯಾಕಂದರೆ ಇಂಥಾ ಭೇದದಿಂದ ಮನಸಿಗೆ ಬಲವಾದ ಆಘಾತವಾಗುತ್ತದೆ.

ಸ್ಮರಣ ಬೆಳಿಸುವದು— ಸ್ಮರಣ ಶಕ್ತಿಯು ಆರಂಭದಲ್ಲಿ ಮರ್ಯಾದಿತವಾಗಿದ್ದು, ಬೇರೆ ಮಾನಸಿಕ ಶಕ್ತಿಗಳನ್ನು ಕುಂದಿಸುವದರಿಂದ ಬೆಳೆಯುವದು. ವಿಚಾರ, ನಿರ್ಣಯ, ಕಲ್ಪನೆ, ಮುಂತಾದ ಬುದ್ಧಿಶಕ್ತಿಗಳನ್ನಾಗಲಿ, ಸುಖ, ಆನಂದ, ಪ್ರೀತಿ, ಮುಂತಾದ ಭಾವನೆಗಳನ್ನಾಗಲಿ ಕೆಡಿಸಿ, ಸ್ಮರಣವನ್ನು ಬೆಳಿಸಬಹುದು. ಇದು ವಿಹಿತವಲ್ಲ.

ಕೆಲವೊಂದು ವಿಷಯದಲ್ಲಿ ಭಕ್ತಿ ಹುಟ್ಟಿದರೆ, ಅದರ ಸಂಬಂಧದ ಸ್ಮರಣವು ಬೆಳೆಯುತ್ತದೆ ಇದೇ ಸ್ಮರಣ ಬೆಳಿಸುವ

ಮುಖ್ಯ ಸಾಧನವು. ಉ—ಇಂಜಿನಿಯರರು, ಶಿಕ್ಷಕರು. ಆದದರಿಂದ ಸ್ಮರಣಬೆಳಿಸುವದನ್ನು ಆಲೋಚಿಸುವದಕ್ಕಿಂತ, ಸ್ಮರಣದ ಕಟ್ಟಳೆಗಳನ್ನು ಅನುಸರಿಸಿ ಕೆಲವೊಂದು ನಿಯಮಿತವಾದ ಸಂಪಾದನೆಯ ಸಾಧನಗಳನ್ನು ವಿಚಾರಿಸುವದು ಲೇಸು.

೩ ಸಾಮ್ಯಭೋಧವು — ಗ್ರಹಿಕೆಗೆ ಸ್ಮರಣದಷ್ಟೇ ಇದಾದರೂ ಸಹಾಯಕವಾಗಿರುತ್ತದೆ. ಸಾಮ್ಯ ವೈಷಮ್ಯಗಳ ಬೋಧದಿಂದ ಗ್ರಹಿಕೆಯು ಪೂರ್ಣವಾಗುತ್ತದೆ. ಸಾಮ್ಯ ವೈಷಮ್ಯಗಳು ಕೂಡಿ ಇರುವಲ್ಲಿ ಸಾಮ್ಯದ ಗೌರವವು ಬೆಳೆಯುತ್ತದೆ. ಯಾಕಂದರೆ ಭೇದದಲ್ಲಿ ಕಾಣುವ ಸಾಮ್ಯವು ಆಘಾತವನ್ನು ಹುಟ್ಟಿಸುತ್ತದೆ. ಜ್ಞಾನದ ಅರ್ಧಕ್ಕರ್ಧ ಭಾಗವು ಇಂಥಾ ಆಘಾತಗಳಿಂದ ಉಂಟಾಗಿದೆ. ಉ — ಊಗುರ, ಚಂದ್ರ.

ಮನುಷ್ಯನು ಕೆಲವು ಮಾನಸಿಕ ಸಂಪಾದನೆಗಳನ್ನು ಮಾಡಿಕೊಂಡಬಳಿಕ ತೀರ ಹೊಸದಾದಂಥ ಸಂಗತಿಯು ಅವನಿಗೆ ಬಹುತರ ಯಾವವೂ ಕಾಣುವದಿಲ್ಲ. ಜ್ಞಾನ ಬೆಳೆದಂತೆ ಸೃಷ್ಟಿಯಲ್ಲಿ ನೂತನತ್ವವು ಕಡಿಮೆಯಾಗುತ್ತದೆ. ವಯಸ್ಸು ಬೆಳೆದ ಹಾಗೆ ಹಳೆದಕ್ಕೆ ಹೊಸದನ್ನು ಅಂಟಿಸುವ ಶಕ್ತಿಯು ಕುಂದುತ್ತ ಹೋಗುತ್ತದೆ, ಆದರೆ ಹೊಸ ಜ್ಞಾನವನ್ನು ಸಂಪಾದಿಸುವ ಸಾಮರ್ಥ್ಯವು ಬೆಳೆಯುತ್ತದೆ; ಯಾಕಂದರೆ ಸೃಷ್ಟಿಯಲ್ಲಿ ನೂತನತ್ವವು ಕಡಿಮೆಯಾಗುತ್ತ ಹೋಗಿ ಹಳೆದಕ್ಕೆ ಹೊಸದನ್ನು ಅಂಟಿಸುವ ಪ್ರಯಾಸವು ಕಡಿಮೆಯಾಗುತ್ತದೆ. ಮಾಸ್ತರನ ಕೆಲಸದಲ್ಲಿ ಈ ಮಾತು ಆಗಾಗ್ಗೆ ಅನುಭವಕ್ಕೆ ಬರುವದು.

ನಿರ್ಣಯವು — ಇದನ್ನು ವಿಚಾರ, ಗ್ರಹಿಕೆ ಅಥವಾ ತಿಳುವಳಿಕೆ, ಈ ಅರ್ಥದಲ್ಲಿ ಒಮ್ಮೊಮ್ಮೆ ಪ್ರಯೋಗಿಸುವರು,

ಆದರೆ ಈ ಮೂರು ಶಬ್ದಗಳ ಅರ್ಥಗಳಲ್ಲಿ ಸ್ವಲ್ಪ ಭೇದವುಂಟು. ನಿರ್ಣಯವು ಸ್ಮರಣದ ಪ್ರತಿ ರೂಪವಾಗಿರುತ್ತದೆ.

ಎರಡು ಪದಾರ್ಥಗಳಲ್ಲಿ ತೋರುವ ಸಾಮ್ಯದ, ಇಲ್ಲವೆ ವೈಷಮ್ಯದ, ಇಲ್ಲವೆ ಈ ಎರಡುಗಳ ತುಲನೆಯ ವ್ಯಾಪಾರವು ನಿರ್ಣಯದ ಮೂಲ ಸ್ವರೂಪವಿರುತ್ತದೆ. ಆ ಎರಡು ಪದಾರ್ಥಗಳು ಕೇವಲ ಇಂದ್ರಿಯ ಗ್ರಾಹ್ಯವಾಗಿದ್ದರೆ ನಿರ್ಣಯದ ವ್ಯಾಪಾರವು ಇಂದ್ರಿಯ ಜನಿತವಾದ ಭೇದ ಬೋಧ ಸಾಮ್ಯ ಬೋಧಗಳಿಗಿಂತ ಹೆಚ್ಚಿರುವದಿಲ್ಲ. ಈ ಬಗೆಯ ನಿರ್ಣಯವು ಇಂದ್ರಿಯದ ಸೂಕ್ಷ್ಮ ಗ್ರಾಹಕ ಶಕ್ತಿ, ಲಕ್ಷ್ಯಪರಿಮಿತಿ, ನಿಕಟ ಸಾಂನಿಧ್ಯ, ಇವುಗಳನ್ನು ಅವಲಂಬಿಸಿರುತ್ತದೆ.

ಕೊಟ್ಟ ಯೆರಡು ಪದಾರ್ಥಗಳು, ಯಂತ್ರ, ಮನೆ, ಗಿಡಗಳಂತೆ ತೊಡಕುಳ್ಳವುಗಳಿದ್ದಲ್ಲಿ ಹೆಚ್ಚು ಲಕ್ಷ್ಯ ಮಾತ್ರ ಕೊಡಬೇಕಾಗುತ್ತದೆ; ಆದರೆ ನಿರ್ಣಯದ ವ್ಯಾಪಾರವು ಮೇಲಿನಂತೆಯೇ ಇರುತ್ತದೆ ಆದರೆ ನಿರ್ಣಯಿಸತಕ್ಕ ಪದಾರ್ಥಗಳು ಅಂಶತಃ ಇಂದ್ರಿಯ ಗೋಚರ, ಅಂಶತಃ ವರ್ಣನೆಯಿಂದ ತಿಳುಕೊಳ್ಳ ತಕ್ಕಂಥವು, (ಉ.—ಖನಿಜಗಳು) ಇದ್ದರೆ, ಅವುಗಳ ಆಕಲನವು ಹೆಚ್ಚು ಕಠಿಣವಾಗುತ್ತದೆ. ಎರಡು ವ್ಯಾಜ್ಯಗಳನ್ನು, ಎರಡು ಉಪಪತ್ತಿಗಳನ್ನು ತುಲನೆ ಮಾಡುವ ವ್ಯಾಪಾರವು ಯೆಲ್ಲಕ್ಕೂ ಹೆಚ್ಚು ಕಠಿಣವಿರುತ್ತದೆ. ಅವುಗಳಲ್ಲಿ ಇಂದ್ರಿಯ ಗೋಚರವಾದದ್ದು ಯೇನೂ ಇರುವದಿಲ್ಲ.

ಆಕಲನವೆಂದರೆ ಒಂದು ಸಂಗತಿಗೆ ಸಂಬಂಧಿಸಿದಂಥ ಯಾವತ್ತು ಅನುಷಂಗಿಕ ಪೂರ್ಣ ಗ್ರಹಿಕೆಯು. ಇದಕ್ಕೆ ಕೆಲವರು ನಿರ್ಣಯವೆನ್ನುವರು; ಇದಕ್ಕೆ ಗ್ರಹಿಕೆ ಅಥವಾ ತಿಳುವಳಿಕೆ

ಯೆನ್ನುವದು ಲೇಸು.

ವಿಚಾರಕ್ಕೂ ನಿರ್ಣಯಕ್ಕೂ ಬಹಳ ಭೇದವಿಲ್ಲ. ನ್ಯಾಯಶಾಸ್ತ್ರದ ತತ್ವವನ್ನು ಅನುಸರಿಸಿ ಮಾಡಿದ ನಿರ್ಣಯವೇ ವಿಚಾರವೆನಿಸುವದು.

ಕಲ್ಪನೆಯು — ಇದರ ಅರ್ಥವು ಅತಿ ವಿಸ್ತಾರವಾದದ್ದಿರುತ್ತದೆ; ಇದರಲ್ಲಿ ನಾನಾಪ್ರಕಾರದ ಮಾನಸಿಕ ವ್ಯಾಪಾರಗಳು ನಡಿಯುತ್ತವೆ. ವಿದ್ಯಾಭ್ಯಾಸದಲ್ಲಿ ಕಲ್ಪನೆಯು ಶೇರಿತೆಂದರೆ ಬಹಳ ಗೊಂದಲವಾಗುತ್ತದೆ. ಉ. — ಕುದುರೆಯ ವರ್ಣನೆಯಿಂದ ಕತ್ತೆಯ ಗ್ರಹಿಕೆ. ಕೆಲವು ಅರ್ಥಗಳಲ್ಲಿ ಕಲ್ಪನೆಯ ವ್ಯಾಪಾರವು ಅತ್ಯುನ್ನತವಾಗಿರುತ್ತದೆ. ಉ. — ಮೇಲಾದ ಕಾದಂಬರಿ. ಬೇರೆ ಕೆಲವು ಅರ್ಥಗಳಲ್ಲಿ ಇದರ ವ್ಯಾಪಾರವು ಅತಿ ನೀಚವಿರುತ್ತದೆ. ಉ. — ಕತ್ತಲೆಯಲ್ಲಿ ದೆವ್ವಿನಭಯ.

ಕಲ್ಪನೆಯ ಮೊದಲನೇ ಅರ್ಥವೇನೆಂದರೆ, ನೋಡದೆ ಇದ್ದಂಥ ಪದಾರ್ಥವನ್ನು ವರ್ಣನೆಯಿಂದ ಚಿತ್ರೀಕರಿಸಿಕೊಳ್ಳುವದು. ದರ್ಶನೀಯ ಸಂಗತಿಗಳ ಅನುಭವವು ಬೆಳೆದಂತೆ ಇದು ಬೆಳೆಯುತ್ತದೆ. ಜ್ಞಾನದಿಂದ ಇದರಲ್ಲಿ ತಿದ್ದುಪಾಟಾಗುತ್ತದೆ ಹೊರ್ತು ಬೇರೆ ಯಾತರಿಂದಲ್ಲ.

ಬೇರೆಜನರ ಮನೋಭಾವವನ್ನು ಆಕಲನ ಮಾಡುವ ವ್ಯಾಪಾರಕ್ಕೆ ಸಹೃದಯತ್ವವೆನ್ನುವರು. ಸಹೃದಯತ್ವವೇ ನೀತಿವಿಷಯದ ತತ್ವವಿರುತ್ತದೆ. ಇತಿಹಾಸ, ಕವಿತ್ವ, ಕಾದಂಬರಿಗಳನ್ನು ಓದುವರಿಂದ ಮನೋವಿಕಾರಗಳನ್ನುಂಟು ಮಾಡುವ ಶಕ್ತಿಯು ಇದೇ.

ಮುಂದೆಸಾಗುವದು.

—೦೦೧—

Education and Improvement.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಸರಕಾರೀ ಶಾಲೆಗಳಲ್ಲಿ ಹೊಸ ಸುಧಾರಣೆಗಳನ್ನು ಮಾಡುವ ಬಗ್ಗೆ ಸರಕಾರದಲ್ಲಿ ಬಹಳ ವಿಚಾರ ನಡೆದದೆ. ಈ ಸಂಬಂಧದಲ್ಲಿ ಇಂಡಿಯಾ ಸರಕಾರದ್ದೊಂದು ಠರಾವು ಬಳಗಡೆಯಲ್ಲಿ ಪ್ರಸಿದ್ಧವಾಗಿರುತ್ತದೆ. ಅದರಲ್ಲಿ ವಿದ್ಯಾರ್ಥಿಗಳಿಗಾಗಿ ಗರಡೀ ಸಾಧಕ, ಶಾಲೆಯಲ್ಲಿ ಶಿಕ್ಷೆಯ ಕ್ರಮಗಳು, ವಿದ್ಯಾರ್ಥಿಗಳ ಸದ್ವರ್ತನದ ರಜಿಸ್ತರು, ಅವರ ಊಟದ ಮನೆ, ಮುಂತಾದ ಸಂಗತಿಗಳ ಬಗ್ಗೆ ಸರಕಾರದವರು ತಮ್ಮ ವಿಚಾರಗಳನ್ನು ಪ್ರಕಟಿಸಿದ್ದಾರೆ. ಶಾಲೆಯ ನಿಯಮಕ್ಕೆ ವಿರುದ್ಧವಾಗಿ ತುಂಡತನದಿಂದ ನಡೆಯುವ ಹುಡುಗರ ಬೆನ್ನ ಮೇಲೆ ಬೆತ್ತದಿಂದ ಬಡಿಯುವ ಶಿಕ್ಷೆ ಕೊಡಬೇಕೆಂತಲೂ, ಇಷ್ಟಿಷ್ಟು ವಯಸ್ಸಿನ ಹುಡುಗರು ಇಂಥಿಂಥ ಇಯತ್ತೆಯಲ್ಲಿ ಪಾಸಾಗಲಿಕ್ಕೆ ಬೇಕೆಂತಲೂ, ಕೆಟ್ಟ ನಡತೆಯ ಮೂಲಕ ಕೆಲವೊಬ್ಬ ಹುಡುಗನನ್ನು ಒಂದು ಶಾಲೆಯಿಂದ ಹೊರಗೆ ಹಾಕಿದ ಬಳಿಕ ಅವನನ್ನು ಬೇರೆ ಯಾವ ಶಾಲೆಯಲ್ಲಿಯೂ ತಕ್ಕೊಳ್ಳಲಾಗದೆಂತಲೂ ಸರಕಾರದವರ ಅಭಿಪ್ರಾಯವದೆ. ಟ್ರೇನಿಂಗಕಾಲೇಜಗಳ ಸಂಖ್ಯವನ್ನು ಬೆಳೆಸುವ ಆಲೋಚನೆಯುಂಟು. ಈ ಸಂಬಂಧದಲ್ಲಿ ಇನ್ನೂ ಹೊಸ ಠರಾವುಗಳು ಪ್ರಕಟವಾಗುವವೆಂದು ತೋರುತ್ತದೆ.

—o—

ಕಲಿಕತ್ತೆಯಲ್ಲಿ ಡಾಕ್ತರ ಅಘೋರನಾಥಯೆಂಬವರ ಕನ್ನಿಕೆ ೧೦ ವರ್ಷದ ಹುಡಿಗೆಯು ಈ ವರ್ಷ ಮ್ಯಾಟ್ರಿಕ್ಯು

ಲೇಸನ್ ಪರೀಕ್ಷೆಗೆ ಕೂಡ್ರತಕ್ಕವಳಿದ್ದಾಳೆ.

— ೦ —

ಬಂಗಾಲದಿಂದ ವಿಲಾಯತಿಗೆ ವಿದ್ಯಾಭ್ಯಾಸಕ್ಕೆ ಹೋದ ಚಕ್ಕರಬತಿ ಯೆಂಬವನು ಈ ವರ್ಷದ ಸಿವಿಲ್ ಸರ್ವಿಸ ಪರೀಕ್ಷೆಯಲ್ಲಿ ಪಾಸಾದನು.

— ೦ —

ಧಾರವಾಡದಿಂದ ಪುಣೆಯ ಹಾಯಸ್ಕೂಲಿನ ಹೆಡ್ ಮಾಸ್ತರರಾಗಿ ಹೋದ ರಾ. ರಾ. ಮಾಧವರಾವ ಕಾಣೆ ಇವರು ಅಜಾರಿ ರಜೆ ತಕ್ಕೊಂಡದ್ದರಿಂದ ಬೆಳಗಾವಿಯ ಹಾಯಸ್ಕೂಲ ಹೆ. ಮಾ. ಮಿ. ಹುಗ್ವರ್ಥ ಸಾಹೇಬರನ್ನು ಅವರ ಸ್ಥಳಕ್ಕೆ ನೇಮಿಸಿ, ಹುಗ್ವರ್ಥ ಸಾಹೇಬರ ಸ್ಥಳಕ್ಕೆ ಸೊಲ್ಲಾಪುರದ ಹಾಯಸ್ಕೂಲ ಹೆ. ಮಾ. ಗಣೇಶ ವೆಂಕಟೇಶ ಜೋಶಿ ಇವರನ್ನು ನೇಮಿಸಿದರು.

— ೦ —

ವಿಲಾಯತಿಯಲ್ಲಿ ಸಿವಿಲ್ ಸರ್ವಿಸ ಪರೀಕ್ಷೆ ಕೊಟ್ಟು ಬಂದು ಜಡಜರಾಗಿ ಕೆಲಸ ಮಾಡುತ್ತಿದ್ದ ಶ್ರೀಪಾದ ಬಾಬಾಜೀ ಠಾಕೂರ ಯೆಂಬವರು ಈ ತಿಂಗಳಲ್ಲಿ ಮರಣ ಹೊಂದಿದರು ಇವರು ಘನವಿದ್ವಾಂಸರಿದ್ದು ಈ ದೇಶದ ಹತ್ತೆಂಟು ಭಾಷೆಗಳನ್ನೂ ಯುರೋಪದ ಹತ್ತೆಂಟು ಭಾಷೆಗಳನ್ನೂ ಕಲಿತಿದ್ದರು. ಇವರ ಪುಸ್ತಕ ಸಂಗ್ರಹವು ಸುಮಾರು ೭೫೦೦೦ ರೂಪಾಯಿ ಬೆಲೆಬಾಳುವಂಥಾದಿರುತ್ತದೆ.

— ೦೦ —

ನಿಜಾಮ ಸರಕಾರದ ಚಿಟಣೀಸರಾಗಿದ್ದ ಮಿ. ಸೈಯದ ಅಲೀ ಬೀಲಗ್ರಾಮಿ ಯೆಂಬವರು ಅಥರ್ವಣವೇದದ ಭಾಷಾಂ

ಶರವನ್ನು ಆರಂಭಿಸಿದ್ದಾರೆ!

—೦೦—

ಹೊಸ ಶೋಧಗಳು — ಅಮೇರಿಕದಲ್ಲಿ ಸದ್ಯಕ್ಕೆ ಹೊಸ ಶೋಧಗಳು ಉಕ್ಕೇರಿದಂತೆ ತೋರುತ್ತದೆ. ಟೆಲಿಫೋನ (ದೂರಧ್ವನಿ) ಯಂತ್ರವು ಹುಟ್ಟಿ ಸ್ವಲ್ಪ ದಿವಸವಾಯಿತು. ಇಷ್ಟರೊಳಗೆ ಈ ಯಂತ್ರವನ್ನು ಹುಟ್ಟಿಸಿದ ಮಿ. ಎಡಿಸನ್ನೆಂಬ ವಿಜಾತೀಯ ಕಲ್ಪಕನು ನೂರಾರು ಮೈಲಿನ ಮೇಲಿರುವ ಪದಾರ್ಥಗಳನ್ನು ಪ್ರತ್ಯಕ್ಷ ತೋರಿಸುವಂಥದೊಂದು ಯಂತ್ರವನ್ನು ರಚಿಸಿದ್ದಾನೆ. ಅಂಥಾದೇ ಒಂದು ಯಂತ್ರವನ್ನು ಫ್ರಾನ್ಸದಲ್ಲಿಯೂ ಕೋರ್ಟನೆಯೆಂಬವನು ಹುಟ್ಟಿಸಿದ್ದಾನೆ.

—೦೦—

ನೀರಿನಿಂದ ಗಾಡಿಯನ್ನು ನಡಿಸುವ ಯುಕ್ತಿಯನ್ನು ವಿಲಾಯತಿಯಲ್ಲಿ ಒಬ್ಬ ಗೃಹಸ್ಥನು ತೆಗೆದಿದ್ದಾನೆ. ಆದರೆ ಅಮೇರಿಕದಲ್ಲಿ ವಿದ್ಯುಲ್ಲತೆಯಿಂದ ಅತಿ ವೇಗದಿಂದ ನಡೆಯುವ ಒಂಟಿಗಾಲಿಯ ಗಾಡಿಗಳು ಸದ್ಯಕ್ಕೆ ಟಪಾಲಖಾತೆಯ ಕೆಲಸ ಮಾಡುತ್ತವೆ. ಛಾಪಖಾನೆಗಳಲ್ಲಿ ಹಾಳೆ ಜೋಡಿಸುವ ಯಂತ್ರವು ವಿಲಾಯತಿಯಲ್ಲಿ ಸದ್ಯಕ್ಕೆ ಕೆಲಸ ಮಾಡುತ್ತದೆ. ಗ್ಲಾಡಸ್ಟನ್' ಧೊರೆಗಳು ಈ ಯಂತ್ರವನ್ನು ನೋಡಲಿಕ್ಕೆ ಹೋದಾಗ ಇದರ ತ್ವರೆಯನ್ನು ನೋಡಿ ಆಶ್ಚರ್ಯ ಚಕಿತರಾಗಿ ಆಶ್ಚರ್ಯದ ಉದ್ಗಾರಗಳನ್ನು ಪ್ರಕಟಿಸಿದರು. ಮುಂದೆ ೫ ಮಿನಿಟು ಅಲ್ಲೇ ಮಾತಾಡುತ್ತ ನಿಂತಿರುವಷ್ಟರೊಳಗೆ ಇವರು ನುಡಿದ ಭಾಷಣವೆಲ್ಲ ಅಕ್ಷರಶಃ ಛಾಪೆಯಾಗಿ ಯಂತ್ರದೊಳಗಿಂದ ಹೊರಬಿತ್ತು!

—೦೦೦—

ಮೆಕ್ಸಿಕೋದೇಶದ ಅಡವಿಯಲ್ಲಿ ಗವಿಗಳಲ್ಲಿ ವಾಸಿಸುವ ಮನುಷ್ಯ ಜಾತಿಯ ಹೊಸದೊಂದು ಕುಲವನ್ನು ಲೆಫ್ಟಿನೆಂಟ ಸ್ಕಾಟಯೆಂಬವನು ಗೊತ್ತು ಹಚ್ಚಿದ್ದಾನೆ. ಈ ಮನುಷ್ಯರು ಬಹಳ ಗಿಡ್ಡರೂ ಬೆದರಬಡಕರೂ ಇರುತ್ತಾರೆ. ಹೊಸ ಮನುಷ್ಯರನ್ನು ಕಂಡಕೂಡಲೆ ಇವರು ಅಂಜಿಗವಿಯೊಳಗೆ ಓಡಿ ಹೋಗುತ್ತಾರೆ. ಮಂಗಗಳಂತೆ ಇಕ್ಕಟ್ಟಿನ ಸ್ಥಳಗಳಲ್ಲಿ ಅಯಾಸವಿಲ್ಲದೆ ಯೇರಿ ಹೋಗುವರು. ಇವರ ಮೈಬಣ್ಣ ಕಪ್ಪು ಇಲ್ಲವೆ ಕೆಂಪು. ಈ ಜನರು ಸೂರ್ಯನನ್ನು ಆರಾಧಿಸುತ್ತಾರೆ.

— ೦೦ —

ಒಬ್ಬ ಅಮೇರಿಕದ ಪಯಣಸ್ಥನು ಜಪಾನ ದೇಶವನ್ನು ಕುರಿತು ಹೀಗೆ ಬರೆಯುತ್ತಾನೆ - ಇಲ್ಲಿಯ ಮನುಷ್ಯರೂ, ಪಶುಗಳೂ, ಗಿಡಗಳೂ, ಮನೆಗಳೂ, ಬೇರೆ ಯಾವತ್ತು ಪದಾರ್ಥಗಳೂ ವಾಮನಮೂರ್ತಿಗಳಾಗಿವೆ. ಮನುಷ್ಯರ ನಿಲುವಿಕೆ ಪರಮಾವಧಿ ೫ ಫೂಟು, ೫ ಇಂಚಿಗಿಂತ ಹೆಚ್ಚಿಲ್ಲ. ಹೆಂಗಸರು ಇದಕ್ಕೂ ಗಿಡ್ಡರು. ಮರಗಳು ಬಹಳ ಯೆತ್ತರವಾಗಿ ಯೆಂದೂ ಬೆಳೆಯುವದಿಲ್ಲ. ನಾಯಿ, ಬೆಕ್ಕು, ಕುದುರೆ, ಯೆತ್ತು, ಇವೆಲ್ಲ ಅಮೇರಿಕದ ಪಶುಗಳಿಗಿಂತ ಬಹಳ ಸಣ್ಣವು. ಎಲ್ಲ ಮನೆಗಳು ಒಂದೇ ಅಂತಸ್ತಿನವು. ಇಲ್ಲಿಯ ಜನರ ತಿಂಬುವ ಪ್ರಮಾಣವಾದರೂ ಬಹಳ ಸ್ವಲ್ಪವಿರುತ್ತದೆ. ಕುಡಿಯಲಿಕ್ಕೆ ಚಹಾ ಬೇಡಿದರೆ ಕೋಳಿಯ ತತ್ತಿಯ ಅರ್ಧಭಾಗದಷ್ಟು ಒಂದು ಪಾತ್ರೆಯೊಳಗೆ ಚಹಾ ತಂದು ಕೊಡುವರು. ಆದರೆ ಜಪಾನದವರ ಸುಧಾರಣೆಯು ಮಾತ್ರ ಪರಮಾವಧಿಯು ವೇಗದಿಂದ ನಡೆದದೆ. ಇವರು ಸ್ವಲ್ಪ ದಿನಗಳೊಳಗೆ ವಿದ್ಯ

ದಲ್ಲಿ ಯುರೋಪದವರನ್ನು ಮೀರುವರೆಂದು ತೋರುತ್ತದೆ!

ಫ್ರಾನ್ಸ ದೇಶದಲ್ಲಿ ೧೦೦ಜನ ವಿಧುರರಿಗೆ ೧೯೪ ಜನರಂತೆ ವಿಧವೆಗಳ ಪ್ರಮಾಣವಿರುತ್ತದೆ, ವಿಲಾಯತಿಯಲ್ಲಿ ವಿಧುರರಿಗಿಂತ ವಿಧವೆಗಳ ಸಂಖ್ಯೆಯು ೮ಲಕ್ಷ ಹೆಚ್ಚಿರುತ್ತದೆ. ನಮ್ಮ ದೇಶದಲ್ಲಿ ಹತ್ತು ವರ್ಷದೊಳಗಿನ ವಿಧವೆಗಳ ಸಂಖ್ಯೆ ೨೦೦೦೦ಇರುತ್ತದೆ.

* * *

ಅತಿ ಕೌತುಕದ ಗಾರುಡೀ ಆಟ— ಸಿದ್ಧೇಸೂರ ಮಿತ್ತರಯೆಂಬವನೊಬ್ಬ ಗೃಹಸ್ಥನು ಬಂಗಾಲದೇಶದ ಒಂದು ಹಳ್ಳಿಯಲ್ಲಿ ತಾನು ಕಣ್ಣಾರೆ ನೋಡಿದ್ದೊಂದು ಗಾರುಡೀ ಆಟದ ಚಮತ್ಕಾರವನ್ನು ಕಲಕತ್ತೆಯ ಪತ್ರಗಳಲ್ಲಿ ಈ ಪ್ರಕಾರ ವರ್ಣಿಸುತ್ತಾನೆ. ಒಂದು ಬೈಲು ಪ್ರದೇಶದಲ್ಲಿ ಗಾರುಡಿಗರ ಗಂಡಸರೂ ಹೆಂಗಸರೂ ಬಹು ಜನರು ಕೂಡಿದ್ದರು. ಅವರ ಬಳಿಯಲ್ಲಿ ನಾನಾಪ್ರಕಾರದ ಪೆಟ್ಟಿಗೆಗಳೂ ಚೀಲುಗಳೂ ಬಹಳ ಇದ್ದವು. ಪ್ರೇಕ್ಷಕ ಜನರು ತಕ್ಕ ಪಟ್ಟಿಗೆ ಕೂಡಿದ್ದರು. ನಾನು ಹೋಗಿನಿಂತ ಬಳಿಕ ಮಧ್ಯಾಹ್ನದ ಮೂರು ಬಡಿಯುವ ಸುಮಾರಿನಲ್ಲಿ ಆಟಕ್ಕೆ ಆರಂಭವಾಯಿತು. ಗಾರುಡಿಗರು ತಮ್ಮವನೊಬ್ಬ ಮನುಷ್ಯನನ್ನು ಒಂದು ಪೆಟ್ಟಿಗೆಯೊಳಗೆ ಹಾಕಿ, ಅದರ ಮೇಲೆ ಹಲಿಗೆ ಮುಚ್ಚಿ ಅದರ ಸುತ್ತುಮುತ್ತು ಮೊಳೆಗಳನ್ನು ಜಡಿದು ಗಟ್ಟಿಯಾಗಿ ಕೂಡ್ರಿಸಿ; ಮೇಲೆ ಹಗ್ಗಗಳನ್ನು ಬಿಗಿದರು. ಬಳಿಕ ಪೆಟ್ಟಿಗೆಗೆ ಮಂತ್ರತಂತ್ರಗಳನ್ನು ಹಾಕಿ ವಾಡಿಕೆಯ ಪ್ರಕಾರ ಛೂ, ಛೂ, ಮಾಡಿದ ಬಳಿಕ ಪೆಟ್ಟಿಗೆಯನ್ನು ಬಿಚ್ಚಿದರು. ಆದರೆ ಅದು ತೀರ ಬರಿದಾಗಿದ್ದದ್ದನ್ನು ನೋಡಿ ನಾನು ಬಹಳ ಅರಿದಾಪೆನು. ಅವಗೆ

ಮುಂದೆ ವರ್ತಿಸಿದ್ದನ್ನು ನೋಡಿದರೆ ಈ ಕೌತುಕವು ಯೇನೂ ಅಲ್ಲ. ಆ ಪೆಟ್ಟಿಗೆಯನ್ನು ಬಹು ಜನರು ಒಳಿತಾಗಿ ಪರೀಕ್ಷಿಸಿ ಅದರಲ್ಲಿ ಮನುಷ್ಯನಿಲ್ಲೆಂದು ಮನಗಂಡ ಬಳಿಕ, ಮುಖ್ಯ ಗಾರುಡಿಗನು ಮುಂದಕ್ಕೆ ಬಂದು ಪೆಟ್ಟಿಗೆಯನ್ನು ಮುಚ್ಚಿ ಒಂದು ಬದಿಗಿಟ್ಟು, ಇವರೊಳಗಿನ ಮನುಷ್ಯನು ಇಂದ್ರನ ಕೂಡ ಜಗಳಕ್ಕೆ ಹೋದನೆಂದು ಹೇಳಿದನು ಅದಕ್ಕೆ ನಾವೆಲ್ಲರು ನಕ್ಕೆವು. ಆದರೆ ಅವನು ನಗದೆ, ಒಬ್ಬ ಹುಡುಗನ ಕೈಯಿಂದ ಒಂದು ಕೋಲನ್ನು ನೆಲದ ಮೇಲೆ ಉದ್ದಕ್ಕೆ ಹಿಡಿಸಿ ನಿಲ್ಲಿಸಿ, ಇಂದ್ರನ ಕೂಡ ನಡಿದ ಜಗಳದ ಪರಿಣಾಮವೇನಾಯಿತೋ ನೋಡಿ ಬರುತ್ತೇನೆಂದು ನಮಗೆ ಹೇಳಿ, ಕೋಲಿನ ಮೇಲೆ ಬರ ಬರ ಯೇರಿ, ಅದರ ತುದಿಗೆ ಹೋದ ಕೂಡಲೆ ಕಾಣದ ಹಾಗಾದನು. ನಾವೆಲ್ಲರು ಚಕಿತರಾಗಿ ನೋಡುತ್ತ ನಿಂತೆವು. ಇಷ್ಟರೊಳಗೆ ಆಕಾಶದಿಂದ ಕೈಗಳು, ಕಾಲುಗಳು, ದಂಡ, ರುಂಡ, ಇವು ಒಂದೊಂದಾಗಿ ಕಡಿ ಕಡಿದು ರಕ್ತ ಮುಳುಗಿ ಕೆಳಗೆ ಬೀಳ ಹತ್ತಿದವು. ಹೀಗೆ ಹಾವತ್ತು ಅವಯವಗಳು ಬಿದ್ದ ಬಳಿಕ ಹುಡುಗನು ಮೊದಲಿನಂತೆ ಮತ್ತೆ ಕೋಲು ನಿಲ್ಲಿಸಿದನು. ಆ ಕೂಡಲೆ ಮುಖ್ಯ ಗಾರುಡಿಗನು ಕೋಲಿನ ತುದಿಯಲ್ಲಿ ಕಾಣಿಸಿಕೊಂಡು, ಕೆಳಗಿಳಿದು ಬಂದು ತಾನು ಹೋಗುವ ಪೂರ್ವದಲ್ಲಿಯೇ ಇಂದ್ರನು ತನ್ನ ಸ್ನೇಹಿತನನ್ನು ಕೊಂದಿದ್ದನೆಂದು ಹೇಳಿದನು. ಆದರೆ ಇಷ್ಟಕ್ಕೆ ತೀರಲಿಲ್ಲ. ತುಂಡುತುಂಡಾಗಿ ಬಿದ್ದ ಅವಯವಗಳನ್ನು ಅವನು ಮೊದಲಿನ ಪೆಟ್ಟಿಗೆಯೊಳಗೆ ಹಾಕಿ, ಮೊದಲಿನಂತೆ ಮೊಳೆ ಜಡಿದು ಹಗ್ಗ ಬಿಗಿದು ಮಂತ್ರ ಹಾಕಿ, ಮತ್ತೆ ಪೆಟ್ಟಿಗೆಯನ್ನು ಬಿಚ್ಚಿ ನೋಡಲು ಮೊದಲು ಅದರೊಳಗೆ ಹಾಕಿದ ಮನುಷ್ಯನು ಅದರೊಳಗಿಂದ

ಒಂದು ಕೂದಲು ಸಹ ಕೊಂಕಾಗದೆ ಹೊರಬಿದ್ದು ಬಂದನು!!!

ಪೂರ್ವಕಾಲದಲ್ಲಿ ಧರ್ಮರಾಜನ ಸಭೆಯಲ್ಲಿ ಇಂಥಾದೇ ಒಂದು ಅಪವಾದ ಕಥೆಯು ಪುರಾಣದಲ್ಲಿ ಬರೆದಿರುತ್ತದೆ.

— ೦೦೦ —

What is to simplify a subject

ಶಿಕ್ಷಣದಲ್ಲಿ ವಿಷಯಕ್ಕೆ ಸುಲಭರೂಪ ಕೊಡೋಣವೆಂದರೇನು?

೧೬೨ನೇ ಪುಟದಿಂದ ಮುಂದೆ ಸಾಗಿದ್ದು.

ಇದರಂತೆ ಶಾಲಾಗುರುಗಳು ತಮ್ಮ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವಾಗ ಕಠಿಣ ಸಂಗತಿಗಳು ಹುಡುಗರಿಗೆ ತಿಳಿಯುವಂತೆ ಸುಲಭವಾಕ್ಯಗಳಿಂದ, ಪದಾರ್ಥಗಳನ್ನು ಇದುರಿಗೆ ಇಟ್ಟು, ಇಲ್ಲವೆ ದ್ರಷ್ಟಾಂತಗಳನ್ನು ಕೊಟ್ಟು ಇಲ್ಲವೆ ಅವುಗಳ ಮೂಲಸ್ವರೂಪಕ್ಕೆ ಹೋಗಿ ಸ್ಪಷ್ಟವಾಗಿ ತಿಳಿಸಿಕೊಡಲಿಕ್ಕೆಬೇಕು. ವಿಷಯಗಳಿಗೆ ಸುಲಭರೂಪಕೊಡಲಿಕ್ಕೆ ಮಾಸ್ತರನಲ್ಲಿ ಸ್ವಲ್ಪ ಚಾತುರ್ಯವಿರಬೇಕು. ಅಂದರೆ ಹೊತ್ತಿಗೆ ತಕ್ಕ ದೃಷ್ಟಾಂತಗಳನ್ನು ಕೊಟ್ಟು ಇಲ್ಲವೆ ಪದಾರ್ಥಗಳನ್ನು ಇದುರಿಗೆ ಇಟ್ಟು ಪ್ರಸಂಗಾನುಸಾರವಾಗಿ ಬೇರೆಬೇರೆ ತರದಿಂದ. ಹುಡುಗರಿಗೆ ಬೇಸರ ಬರದಂತೆ ಮಾಡಿ ತಿಳಿಸುವನು.

ಉದಾಹರಣಗಳು.--

ಇತಿಹಾಸ ಭೂಗೋಲಗಳನ್ನು ಕಲಿಸಬೇಕಾದರೆ ನಕಾಶದ ಉಪಯೋಗಮಾಡಬೇಕಾಗುತ್ತದೆ ಇಲ್ಲದಿದ್ದರೆ ಅವು ಹುಡುಗರ ಧ್ಯಾನದಲ್ಲಿ ಉಳಿಯಲಿಕ್ಕಿಲ್ಲ. ಇಂಥಾದೊಂದು ದೇಶದ ಉತ್ತರಕ್ಕೆ ಅಥವಾ ದಕ್ಷಿಣಕ್ಕೆ ಇಂಥಾ ದೇಶದೆ ಅಂತಾ ಬಾಯಿಲೆ ಹೇಳಿದರೆ ಅದರಿಂದ ಏನೂ ತಿಳಿಯಲಿಕ್ಕಿಲ್ಲ. ನೋ

ಡಿರೆ| ಅಮೇರಿಕದೇಶವು ನಮ್ಮ ಕಾಲಬುಡಕ್ಕೆ ಇದೆ ಹೀಗೆ ಹೇಳಿದರೆ ಹುಡುಗರ ಮನಸಿನಲ್ಲಿ "ಅಲ್ಲಿಯ ಜನರು ಇಲ್ಲಿಗೆ, ಬರಲಿಕ್ಕೆ ಇಲ್ಲಿಯ ಜನರು ಅಲ್ಲಿಗೆ ಹೋಗಲಿಕ್ಕೆ" ದಾರಿಯಾವಲ್ಲಿ? ಭೂಮಿ ಒಡೆದು ಹ್ಯಾಗೆ ಹೋಗಬೇಕು? ಈ ಮೊದಲಾದ ಸಂಗತಿಗಳ ಅಜ್ಞಾನವೆಂಬ ಕತ್ತಲಿಯಲ್ಲಿ ಮುಳುಗುವರು. ಇಂಥಲ್ಲಿ ಕೃತ್ರಿಮಗೋಲವನ್ನು ತಂದು ಅವರ ಮುಂದೆ ಇಡಲಾಗಿ ಅವರನ್ನು ಮುಸುಗಿದ ಕತ್ತಲಿಯು ಹರಿದು ಬೆಳಕಾಗುವದು. ಇನ್ನು ಇಂಥಾ ದೇಶದ ಭೂಮಿ ಇಂಥಲ್ಲಿ ಎತ್ತರ ಇಂಥಲ್ಲಿ ತಗ್ಗು ಇದೆ ಎಂದು ಭೂಮಿಯ ಮೇಲ್ಮೈಯ ವಿಷಯವಾಗಿ ಹೇಳುವಾಗ ನಕಾಶವನ್ನು ಉಪಯೋಗ ಮಾಡದೆ ಹಾಗೇ ಹೇಳಿದರೆ ಚನ್ನಾಗಿ ತಿಳಿಯಲಿಕ್ಕಿಲ್ಲ. ಇದೇ ಯಾವ ಭಾಗದ ಸಂಬಂಧ ಹೇಳುವದಿರುತ್ತದೋ ಆ ಭಾಗದಲ್ಲಿದ್ದ ಹೊಳೆಗಳು ಯಾವದಿಕ್ಕಿನಿಂದ ಯಾವದಿಕ್ಕಿಗೆ ಹೋಗಿರುತ್ತವೆ ಎಂಬದನ್ನು ನಕಾಶದ ಮೇಲೆ ತೋರಿಸಲಾಗಿ "ತಗ್ಗು ಇದ್ದ ಕಡೆಗೆ ನೀರು ಹರಿಯುತ್ತದೆಂಬದು" ಅವರಿಗೆ ಗೊತ್ತಿರುವದರಿಂದ ಕೂಡಲೆ ಇಂಥ ಕಡೆಗೆ ಎತ್ತರ ಇಂಥ ಕಡೆಗೆ ತಗ್ಗು ಇದೆಂದು ಹೇಳುವರು. ಇದಕ್ಕೂ ಹೆಚ್ಚಿಗೆ ಹೇಳುವ ಕೆಲಸವು ಉಳಿಯಲಿಲ್ಲ. ಹಾಗು ಹಿಂದುಸ್ಥಾನದ ನಕಾಶ ಕಲಿಸುವಲ್ಲಿ ಬಂಗಾಲ ಪ್ರಾಂತದ ಭೂಮಿಯು ಹೊಳೆಗಳಿಂದ ಹುಟ್ಟಿದ ತ್ರಿಕೋಣದಿಂದ ಆಗಿರುತ್ತದೆ. ಅಂತ ಹೇಳಿದರೆ "ತ್ರಿಕೋಣ ಅಂದರೇನು? ಹೊಳೆಗಳಿಂದ ಹ್ಯಾಗೆ ಹುಟ್ಟುತ್ತದೆ. ಎಂಬ ವಿಷಯವು ಅವರಿಗೆ ತಿಳಿಯುವದು ಅಸಾಧ್ಯವಾಗುತ್ತದೆ. ಇಂಥಲ್ಲಿ, ಅವರಿಗೆ ಗೊತ್ತಿದ್ದ ಹಳ್ಳದ, ಅಥವಾ ಅದೂ ಗೊತ್ತಿಲ್ಲದಿದ್ದರೆ ಬಚ್ಚಲಮೋರಿಯ ಉದಾಹರಣೆಯನ್ನು ತಗೊಂಡು ಕ್ರಮದಿಂ

ದ ಹೊಳೆಗಳ ಕಡೆಗೆ ಹೋಗೋಣ. ಸಮನೆಲದ ಮೇಲೆ ನೀರಿನ ಪ್ರವಾಹವು ಮಂದವಾಗಿ ಹರಿಯುವದು. ಗೊತ್ತಿರುತ್ತದಷ್ಟೇ ಆಗ್ಗೆ ಪ್ರವಾಹಕ್ಕೆ ಮಾರ್ಗದಲ್ಲಿ ಏನಾದರೂ ಅಡ್ಡಬಂದರೆ ಪ್ರವಾಹದಲ್ಲಿ ಎರಡು ಎಸಳುಗಳು ಆಗಿ ಬೇರೆಬೇರೆ ಕಡೆಗೆ ಹೋಗುತ್ತವೆ. ಆ ಬೇರೆಬೇರೆ ಕಡೆಗೆ ಹೋದ ಎಸಳುಗಳಲ್ಲಿ ಮತ್ತೆ ಇದೇ ಪ್ರಕಾರ ಆಗುತ್ತ ಪ್ರವಾಹವು ಮೊದಲಿಗಿಂತ ಮಂದವಾಗುತ್ತಾ ಹೋಗಿ ಆ ಎಸಳುಗಳ ನಡುನಡುವೆ ಮಣ್ಣು ಹೆಚ್ಚಿಗೆ ಕೂಡುತ್ತಾ ಕೂಡುತ್ತಾ ಗುಂಪೆಗಳು ಹುಟ್ಟುತ್ತವೆ. ಇದರಂತೆ ಹೊಳೆಯ ಪ್ರವಾಹಗಳು ಬೇರೆಬೇರೆ ಆಗಿ ಅವುಗಳ ನಡುವೆ ದೊಡ್ಡದೊಡ್ಡ ಗುಂಪೆಗಳು ಹುಟ್ಟುತ್ತವೆ. ಬಳಿಕ ಆ ಗುಂಪೆಗಳ ನಡುನಡುವೆ ಸಣ್ಣಾಗಿ ಹರಿಯುವ ನೀರು ಮಣ್ಣಿನಿಂದ ಕೂಡಿ ಕೊಳಚೆ ಪ್ರದೇಶ ಹುಟ್ಟುವದು. ಬರಬರುತ್ತಾ ಆ ಪ್ರದೇಶವು ಗಟ್ಟಿಯಾಗಿ ಪ್ರವಾಹಕ್ಕೆ ಬೇರೆ ಮಾರ್ಗ ದೊರೆದು ದೊಡ್ಡದೊಂದು ಬೈಲು ಹುಟ್ಟುವದು. ಬಳಿಕ ಆ ಪ್ರದೇಶದಲ್ಲಿ ಗಿಡಗಳು ಹುಟ್ಟಿ ಅಡವಿಯಾಗುತ್ತದೆ. ಆಗ್ಗೆ ಮತ್ತೆ ಮಳೆಗಾಲದಲ್ಲಿ ಹೊಳೆಯ ಪ್ರವಾಹವು ಮೇಲಕ್ಕೆ ಬಂದು ಆ ಪ್ರದೇಶದಲ್ಲಿ ಹೆಚ್ಚಿಗೆ ಮಣ್ಣು ಕೂತು ಎತ್ತರ ಪ್ರದೇಶವಾದ ಕೂಡಲೆ ಜನರು ವಾಸಮಾಡ ಹತ್ತುವರು. ಈ ರೀತಿ ಬಂಗಾಲ ಪ್ರಾಂತದ ವಿಸ್ತಾರವು ಭಾಗಿರಥಿಯ ತ್ರಿಕೋಣದಿಂದ ಉಂಟಾಗಿರುತ್ತದೆ ಅಂತ ಹುಡುಗರಿಗೆ ಕ್ರಮದಿಂದ ಇವರ ಇತಿಹಾಸ ತಿಳಿಸಲಾಗಿ ಅವರಿಗೆ ಸುಲಭವಾಗಿ ತಿಳಿಯುವದು.

ಶಾಸ್ತ್ರೀ ವಿಷಯದಲ್ಲಿ ಯಾವದೊಂದು ಸಂಗತಿಯನ್ನು ತಿಳಿಸುವಾಗ ಆ ಸಂಬಂಧದ ದೃಷ್ಟಾಂತಗಳನ್ನು ಇದುರಿಗೆ ಇ

ಷ್ಟಿ ಹೊರ್ತು ತಿಳಿಯುವದಿಲ್ಲ. ಆದದರಿಂದ ಪದಾರ್ಥ ವಿಜ್ಞಾನ ಶಾಸ್ತ್ರವನ್ನು ಹೇಳುವಾಗ ತಕ್ಕ ಪ್ರಯೋಗಗಳನ್ನು ಮಾಡಿ ತೋರಿಸ ಬೇಕಾಗುತ್ತವೆ.

ಮೊದಲನೇ ಯತ್ತೆಯು ಹುಡುಗರಿಗೆ ಒಡಿವೇ ಪಾಠಗಳನ್ನು ಕಲಿಸುವಾಗ್ಗೆ ದೀಪ ಹಚ್ಚುವ ಸಮೆಯಾದ ವಿಷಯ ಕಲಿಸಬೇಕಾದಲ್ಲಿ "ಇದನ್ನು ಧಾತುವಿನಿಂದ ಮಾಡಿರುತ್ತಾರೆ, ಮತ್ತು ದೀಪ ಹಚ್ಚಲಿಕ್ಕೆ ಉಪಯೋಗ ಮಾಡುತ್ತಾರೆ." ಎಂದು ಮಾಸ್ತರರು ಹೇಳಲಾಗಿ ಇದನ್ನು ಯಾಕೆ ಮಾಡಿದರು, ಇದರ ರಚನೆಯು ಯಾವ ಕಲ್ಪನೆಯಿಂದ ಸುಧಾರಿಸಿತು. ಇವೇ ಮೊದಲಾದ ಪ್ರಶ್ನೆಗಳು ಹುಡುಗರ ಬಾಯಿಂದ ಬರಬಹುದು. ಇಂಥಲ್ಲಿ ಅದರ ಮೂಲಸ್ವರೂಪವನ್ನು ವಿವರಿಸಿ ತಿಳಿಸುವದು ಮಾಸ್ತರನಿಗೆ ಅಗತ್ಯವಾಗಿರುತ್ತದೆ. ಅದರಲ್ಲಿ ದೀಪ ಹಚ್ಚುವ ಪ್ರಣತಿ ಮೊದಲು ಆ ಪ್ರಣತಿಯನ್ನು ಎತ್ತರ ಮಾಡಿ ಇಡಲಿಕ್ಕೆ ಗೋಡೆಯಲ್ಲಿ ಪ್ರಟ್ಟಿಯನ್ನು ಮಾಡಿದರು; ಮತ್ತು ಅದರ ಬುಡದಲ್ಲಿ, ಎಣ್ಣೆ ಕೆಳಗೆ ಬೀಳದಂತೆ ಒಂದು ಪರಟಿಗೆ ಶಗಣಿ ಹಚ್ಚಿ ಇಟ್ಟರು. ಆಮೇಲೆ ಇದನ್ನು ಬೇಕಾದ ಕಡೆಗೆ ತಕ್ಕಷ್ಟು ಎತ್ತರದ ಮೇಲೆ ಇಟ್ಟುಕೊಳ್ಳಲಿಕ್ಕೆ ಅಡ್ಡಿ ಬಾಂದದರಿಂದ ಮೊದಲು ಕಟ್ಟಿಗೆಯ ಒಂದು ಮಣೆಗೆ ನಡುವೆ ಒಂದು ಕೋಲು ಚುಚ್ಚಿ ಸ್ವಲ್ಪ ಅಂತರದ ಮೇಲೆ ಪ್ರಣತಿಗೆ ತಕ್ಕಂತೆ ಮತ್ತೊಂದು ಸಣ್ಣ ಮಣೆಯನ್ನು ಕೂಡಿಸಿ ಅದಕ್ಕೆ ಕಾಣಿಸಿದ ಬಳಿಕ ಅದು ಚಂದವಾಗಿ ಕಾಣಿಸಬೇಕೆಂದು ಇದೀ ಕಟ್ಟಿಗೆಯನ್ನೂ ಗಾಡಕ್ಕೆ ಹಚ್ಚಿ ರೋಹಾದೀವಿಗೆ ಎಂದು ಹೆಸರಿಟ್ಟರು, ಉರುಳಿ ಬೀಳದಂತೆ ಅದರ ಬುಡವನ್ನು ಅಗಲು ಮಾಡಿದರು. ಮುಂದೆ ಮೇಲಿನ ಪ್ರಣತಿಯೊಳಗಿನ ಎಣ್ಣೆ ಕೆಳಗೆ ಬೀಳಲಿಕ್ಕೆ ಹತ್ತಿ

ದ ಕೂಡಲೆ ಎಣ್ಣೆ ನಿಲ್ಲುವ ಹಾಗೆ ಬುಡದ ಮಣಿಯು ಸುತ್ತಲು ಸ್ವಲ್ಪ ತಗ್ಗು ಮಾಡಿದರು. ಈ ರೀತಿ ಮೊದಲು ಕಟ್ಟಿಗೆಯಲ್ಲಿ ಉತ್ಪನ್ನವಾಗಿ ಮುಂದೆ ಸುಧಾರಣೆಯು ಕಡಿಗೆ ಲಕ್ಷ್ಯಕೊಟ್ಟು ಅವರವರ ಯೋಗ್ಯತೆ ಹೆಚ್ಚಾದಂತೆ ಧಾತುಗಳಿಂದ ಮಾಡಿಸಲಿಕ್ಕೆ ಹತ್ತಿದರು. ಈ ರೀತಿ ಮೂಲಸ್ವರೂಪದ ವಿವೇಚನದಿಂದ ಇಲ್ಲಿವೆ ದೃಷ್ಟಾಂತಗಳಿಂದ ವಿಷಯಕ್ಕೆ ಸುಲಭರೂಪ ಕೊಡುತ್ತಾ ಕಲಿಸುತ್ತಾ ಹೋಗಬೇಕು.

— ooo —

History of the Middle Ages

ಯುರೋಪದ ಮಧ್ಯಕಾಲದ ಇತಿಹಾಸವು

(೧೭೪ನೇ ಪುಟದಿಂದ ಮುಂದೆ ಸಾಗಿದ್ದು.)

ಫ್ರೆಡರಿಕ ಚಕ್ರವರ್ತಿಯ ಸೈನ್ಯವು ವೊಂದು ಲಕ್ಷವಿತ್ತು. ಂದಿನಂತೆ ಈ ಸಾರಿ ಅವನು ತುರಕರನ್ನು ಯೆಷ್ಟು ಮಾತ್ರವೂ ಸೈನ್ಯದ ಸಂಗಡ ಬರಗೊಡಲಿಲ್ಲ. ಅವನು ಹಂಗ ಯು ಮಾರ್ಗದಿಂದ ಗ್ರೀಕ ಶೀಮೆಯನ್ನು ಸೇರಲಾಗಿ, ಇಸಾಕನೆಂಬ ಅರಸನ ಜನರು ಅವನನ್ನು ಬಹಳ ಪೀಡಿಸಿದ

ಆದದರಿಂದ ಫ್ರೆಡರೀಕನು ಆ ಗ್ರೀಕನ ರಾಜ್ಯದಲ್ಲಿ ಬ ಜನರನ್ನು ಕೊಂದು ತೆರಿಗೆಯು ಯೆತ್ತಿ, ಇಸಾಕನನ್ನು ಡಂಬಡಿಕೆಗೆ ತಂದು, ಅವನ ರಾಜಧಾನಿಯಾದ ಆದ್ರಿಯಾನೋಪಲ್ಲ ಪಟ್ಟಣದಲ್ಲಿ ಚಳಿಗಾಲ ಕಳಿದನು. ತರುವಾಯ ವನು ಮುಂದಕ್ಕೆ ಸಾಗಿ, ಹಲವು ಕಾಳಗಗಳಲ್ಲಿ ತು ಜನರನ್ನು ಗೆದ್ದು ಇಕೋನಿಯಂ ರಾಜಧಾನಿಯನ್ನು ತಕ್ಕೊಂಡನು. ಆ ಬಳಿಕ ಅವನು ತಾರಸಪರ್ವತವನ್ನು ದಾ

ಟು ಮುಂದಕ್ಕೆ ಹೋಗುವ ಮಾರ್ಗದಲ್ಲಿ ಬಿಸಲಿನಿಂದ ಬಳಲಿ ಸೈಲಿಸ್ ಯೆಂಬದೊಂದು ಹೊಳೆಯೊಳಗೆ ಜಳಕಕ್ಕಿಳಿದು ಮುಳುಗಿ ಸತ್ತನು, ೧೧೯೦.

ಇನ್ನು ಈ ಕ್ರೂಸೆಡಕ್ಕೆ ಹೊರಟಬೇರೆ ಅರಸರ ವರ್ತಮಾನವೇನಂದರೆ — ಇಂಗ್ಲಂಡದ ರಿಚರ್ಡನೂ, ಫ್ರಾನ್ಸಿನ ಫಿಲಿಪನೂ ಫ್ಲಾಂಡರ್ಸಪ್ರಾಂತದ ಫಿಲಿಪರಾಜನೂ ಮುಂತಾದ ಬಹು ಜನರು ಅರಸರೂ, ಜಮೀನ್ದಾರರೂ ಕೂಡಿ ಮೂರು ಲಕ್ಷ ಸೈನ್ಯ ತಕ್ಕೊಂಡು ಬೇರೆ ಬೇರೆ ಮಾರ್ಗವಾಗಿ ಮೆಸಿನಾಪಟ್ಟಣಕ್ಕೆ ಹೋಗಿಳಿದರು, ೧೧೯೧ ಅಲ್ಲಿರುವಾಗ ಈ ಕೂಟಾಳದ ಅರಸರುಗಳಲ್ಲಿ ಬಗೆಬಗೆಯ ಕಾರಣಗಳಿಂದ ವೈಮನಸ್ಯಗಳುಂಟಾದವು. ರಿಚರ್ಡನ ಹಡಗಗಳು ಬಿರುಗಾಳಿಯಿಂದ ಸೈಪ್ರಸ ದ್ವೀಪಕ್ಕೆ ಹೋದವು. ಅಲ್ಲಿಯ ಅರಸನು ಪ್ರಜೆಗಳನ್ನು ಬಹಳ ಕಾಡುವದು ಕಂಡು ರಿಚರ್ಡನು ಅವನನ್ನು ಪದಚ್ಯುತ ಮಾಡಿ ಆ ದ್ವೀಪವನ್ನು ಜೆರೂಸಿಲೇಮಿನ ಅರಸನಿಗೆ ಮಾರಿದನು. ಆ ಅರಸನ ವಂಶದವರು ಸೈಪ್ರಸವನ್ನು ಮುಂದೆ ಮುನ್ನೂರು ವರ್ಷ ಆಳಿದರು.

ಈ ಅರಸರ ಸೈನ್ಯಗಳೂ, ಫ್ರೆಡರಿಕನ ಸೈನ್ಯವೂ ಕೂಡಿ ಹೋಗಿ, ಶೌರ್ಯದಿಂದ ಏಕರ (ತಾಲೆಮಾಯಿಸ) ಪಟ್ಟಣವನ್ನು ತಕ್ಕೊಂಡವು. ಆದರೆ ಮುಂದೆ ಫ್ರಾನ್ಸದ ಫಿಲಿಪನು ರಿಚರ್ಡನ ಪರಾಕ್ರಮಕ್ಕೆ ಮತ್ಸರ ಪಟ್ಟು ಸ್ವಲ್ಪ ಸೈನ್ಯವನ್ನು ಮಾತ್ರ ಹಿಂದೆ ಬಿಟ್ಟು ಬೇನೆಯ ನೆವದಿಂದ ಸ್ವದೇಶಕ್ಕೆ ತಿರುಗಿ ಹೋದನು. ತರುವಾಯು ಉಳಿದ ಸೈನ್ಯಾಧಿಪತಿಗಳು ಅಸ್ಕೆಲನ್ ಪಟ್ಟಣವನ್ನು ತಕ್ಕೊಳ್ಳ

ಹೋಗಲಾಗಿ, ಅವರಿಗೂ ಸಾಲಾದೀನನಿಗೂ ಅತಿ ದಾರುಣ ಯುದ್ಧವಾಯಿತು. ಈ ಯುದ್ಧದಲ್ಲಿ ರಿಚರ್ಡನು ಅತ್ಯಾಶ್ಚರ್ಯಕರವಾದ ಶೌರ್ಯದಿಂದ ಕಾದಿ, ೮೦೦೦ ಮುಸಲ್ಮಾನರನ್ನು ಸಂಹರಿಸಿದನು. ಹಾಗೆಯೇ ಮುಂದಕ್ಕೆ ಸಾಗಿ, ಕ್ರಿಸ್ತಿ ಸೈನ್ಯವೂ ಜರೂಸಲೇಮಿನ ಸಮೀಪಕ್ಕೆ ಹೋದಬಳಿಕ, ರಿಚರ್ಡನು ಯುದ್ಧಕ್ಕೆ ಬೇಸತ್ತು ಸ್ವದೇಶಕ್ಕೆ ಹೋಗುವ ಆಲೋಚನೆಯು ತೆಗೆದನು. ಆದದರಿಂದ ಸಾಲಾದೀನನಿಗೂ, ಕ್ರಿಸ್ತೀ ಅರಸರಿಗೂ ಯುದ್ಧ ನಿಲ್ಲಿಸುವ ವೊಡಂಬಡಿಕೆಯಾಗಿ, ಏಕರ ಜೋಪಾ ಮುಂತಾದ ಕೆಲವು ಬಂದರಗಳು ಕ್ರಿಸ್ತೀ ಜನರ ವಶದಲ್ಲಿ ಉಳಿದವು. ರಿಚರ್ಡನು ತಿರುಗಿ ಹೋಗುವಾಗ ಮಾರ್ಗದಲ್ಲಿ ಆಸ್ಟ್ರಿಯದ ಡ್ಯೂಕನು ನೀಚತನದಿಂದ ಅವನನ್ನು ಸೆರೆ ಹಿಡಿದ ಸಂಗತಿಯನ್ನು ಹಿಂದೆ ಹೇಳಿರುತ್ತೇವೆ.

ನಾಲ್ಕನೇ ಕ್ರೂಸೆಡವು ಫ್ರೆಂಚರಿಂದಲೂ, ಜರ್ಮನ್ನರಿಂದಲೂ ಉಂಟಾಯಿತು, ೧೨೦೩ ಇವರು ಮೊದಲು ಹೋಗಿ, ಪೋಪನ ಬಹಿಷ್ಕಾರವನ್ನು ಲಕ್ಷಿಸದೆ, ಝಾರಾ ಪಟ್ಟಣವನ್ನು ತಕೊಂಡರು. ಆಗ ಮುಸಲ್ಮಾನರು ಕಾನಸ್ಟಾಂಟಿನೋಪಲವನ್ನು ತಕ್ಕೊಳ್ಳುವ ಕೆಲವನ್ನು ಕಡೆಗಾಣಿಸಿ ತಮ್ಮ ಮುಖ್ಯಸ್ಥನನ್ನು ಪಟ್ಟಕ್ಕೆ ಕೂಡ್ರಿಸಿದ ಬಗ್ಗೆ ಹಿಂದೆ ಬರೆದಿರುತ್ತೇವೆ. ೧೨೦೪ ಈ ಯುದ್ಧದ ಕಡೆಯಲ್ಲಿ ಕ್ರಿಸ್ತೀ ಜನರು ಕಾನಸ್ಟಾಂಟಿನೋಪಲ್ಲಿನ ಕೆಲವು ಶೀಮೆಗಳನ್ನು ಪಡಿದು ತಮ್ಮ ತಮ್ಮೊಳಗೆ ಹಂಚಿಕೊಂಡರು.

೫ನೇ ಕ್ರೂಸೆಡವು ಮುಖ್ಯವಾಗಿ ಜರ್ಮನ್ನರಿಂದಲೂ ಅವರ ನೆರೆಯವರಿಂದಲೂ ಉಂಟಾಯಿತು, ೧೨೧೭. ಇ

ವರು ಪೋರ್ತುಗಾಲದ ಅರಸನಿಗೆ ಸಹಾಯ ಮಾಡಿ ಮೂರರನ್ನು ಓಡಿಸಿ ಬಿಟ್ಟರು. ಆದರೆ ಇವರು ಏಶಿಯಾದಲ್ಲಿ ತೆಬರ ಪಟ್ಟಣವನ್ನು ತಕ್ಕೊಳ್ಳುವ ಪ್ರಯತ್ನದಲ್ಲಿ ಫಲಹೊಂದದೆ, ಇಜಿಪ್ತಕ್ಕೆ ಹೋಗಿ, ಅಲ್ಲಿಯ ಸುಲ್ತಾನನ ಸೈನ್ಯವನ್ನು ಗೆದ್ದು ದಾಮೀತಾ ಯೆಂಬ ಪಟ್ಟಣವನ್ನು ತಕ್ಕೊಂಡರು. ಆದರೆ ಆಬಳಿಕ ಪೋಪನ ಬಳಿಯಿಂದ ಹೋದವನೊಬ್ಬ ಧರ್ಮಾಧ್ಯಕ್ಷನು ಖ್ರಿಸ್ತೀ ಸೈನ್ಯದ ಮುಖ್ಯಸ್ಥನಾಗಿ, ಅವನು ಅವಿವೇಕತನದಿಂದ ನೀಲಹೊಳೆಯ ಯೆರಡು ಪ್ರವಾಹಗಳ ಮಧ್ಯದಲ್ಲಿ ತನ್ನ ಸೈನ್ಯವನ್ನು ಸೇರಿಸಿ, ಸುಲ್ತಾನನಿಂದ ಗೆದಿಯಲ್ಪಟ್ಟನು. ಆದದರಿಂದ ಖ್ರಿಸ್ತೀ ಜನರು ದಾಮೀತಾ ಪಟ್ಟಣವನ್ನು ಹಿಂದಕ್ಕೆ ಕೊಟ್ಟು ಮುಂದೆ ೮ ವರ್ಷ ಯುದ್ಧಕ್ಕೆ ಬರಲಿಕ್ಕಿಲ್ಲವೆಂದು ಸುಲ್ತಾನನ ಸಂಗಡ ಒಪ್ಪಂದ ಮಾಡಿಕೊಂಡರು, ೧೨೨೧—

ಮುಂದೆ ಸಾಗುವದು.

—oo—

Correspondence.

ಪತ್ರವ್ಯವಹಾರವು.

(೧೭೮ನೇ ಪುಟದಿಂದ ಮುಂದೆ ಸಾಗಿದ್ದು.)

ದುಃಖದಲ್ಲಿರುವಾಗಾಗುವ ಸಮಾರಂಭ

ಸತ್ತಾಗ ಊಟಮಾಡುವ ಪದ್ಧತಿಯುಂಟು. ಅಳುವವ ಅಳುತ್ತಿರಬೇಕು, ಉಣ್ಣುವರು ನಗುತ್ತಿರಬೇಕು. ಡಾಂಭಿಕತ ದ ದುಃಖತೋರಿಸುವವರು ಉಣ್ಣಲಿಕ್ಕೂ, ಬಿಡಲಿಕ್ಕೂ ಬ ರದೆ ಕಣ್ಣು ಬಿಡುತ್ತಿರಬೇಕು.

ಸತ್ತವರ ಹೆಂಡರಿಗೆ ರಂಡಿ ಸೀರೆಯೆಂಬ ಹೊಸ ಸೀ ಯನ್ನು ಅವರ ಅಪ್ಪರುಡಿಸುವ ನಡತೆಯುಂಟು. ಇದಂ

ಬಹಳೇ ಅಜ್ಞಾನತನವು. ಯಾಕಂದರೆ!! ಆ ಹೆಂಗಸರು ಗಂಡಸತ್ತ ದುಃಖದಲ್ಲಿ ಮುಳುಗಿರುವ ಸಮಯದಲ್ಲಿ ಹೊಸ ಸೀರೆಯನ್ನುಡಿಸುವರು. ಕೆಲವರು ಆಸಮಯದಲ್ಲಿ ಕೀರ್ತಿ ದೊರಕಿಸುವ ಉದ್ದೇಶಬದ್ಧರಾಗಿ ಹತ್ತಿಪ್ಪತ್ತು ರೂಪಾಯಿ ಬೆಲೆಯ ೬ ಬೊಟ್ಟು ಗಡಿಯಿದ್ದ ಸೀರೆಯನ್ನುಡಿಸುವರು. ಆದು ಅವಳಿಗೆ ಸೊಗಸುದೋರುವದೋ? ಇಲ್ಲಿಲ್ಲ. ಅಂದವೋರೆ ಕಲ್ಲಿಗುಡಿಸಿದಂತಲ್ಲವೇ.

ಸಂತೋಷದ ಸಮಾರಂಭಗಳು— ಇವು ಜಾತ್ರೆ, ಲಗ್ನ, ಹಬ್ಬ ಮುಂತಾದವುಗಳಲ್ಲಿ ಆಗುತ್ತವೆ. ಜಾತ್ರೆಯ ಸಮಾರಂಭದೊಳಗೆ ಮದ್ದು ಸುಡೋಣ, ಸಾವಿರಗಟ್ಲೆ ದೀಪಗಳ ಕರಿಯೋಣ, ಪಣ್ಯಾಂಗನೆಯರ ಗಾನ ನರ್ತನ, ಇವೆಲ್ಲ ಊರಿಗೆ ಬಡತನ ತರುತ್ತವೆ. ಕೆಲಕೆಲವು ಜಾತ್ರೆಗಳಲ್ಲಿ ಹರಕೆಕೊಟ್ಟು ಕುರಿ ಕೋಣಗಳನ್ನು ಬಲಿ ಕೊಡುವರು. ಅವುಗಳನ್ನು ಕೊಯ್ದು ತಿನ್ನುವವರಿಗೆ ಸಹ ಹಣಕೊಡಬೇಕಾಗುವದು. ದ್ಯಾಮವ್ವನ ರಥೋತ್ಸಹವಾಗುವಾಗ ರಥೋತ್ಸವವಾಗುವದಕ್ಕೆ ಮುಂಚಿತವಾಗಿ ೧೦ದಿನ ಹೊಲಕ್ಕೆ ನೇಗಿಲುಗಳು ಹೋಗಬಾರದು, ರೊಟ್ಟಿ ಸುಡಬಾರದು, ಮುಂತಾದ ನೇಮವಿರುವದರಿಂದ ಹತ್ತುದಿವಸ ಬದುಕಿಲ್ಲದೆ ಕೂತ್ರುವದೊಂದೇ ಲುಕ್ಸಾನ್, ರೊಟ್ಟಿ ಮಾಡದಿದ್ದ ಮೇಲೆ ಬಿಲ್ಲದಡಿಗೆ ಮಾಡಿಕೊಂಡುಣ್ಣಬೇಕೆಂಬ ತಾತ್ಪರ್ಯದಿಂದ ಹಣದ ವೆಚ್ಚ, ಇವೆಲ್ಲ ಸಂಭವಿಸುತ್ತವೆ. ಇಷ್ಟಾದರೂ ಸಾಲದಾಯಿತೆಂಬ ಬಿಂತೆ ಬಿಡದು ಜಾತ್ರೆಯು ಬಡವನಾದ ಜನನನ್ನು ಸಹ ಮೋಸಗೊಳಿಸಿ ಕೀರುಮಿಠಾಯಿ ತಿನ್ನಿಸಿ ಎರಡು ಅಣೆ ರೊಕ್ಕಾ ವೆಚ್ಚ ಮಾಡಿಸುತ್ತದೆ. ಅಂದ ಮೇಲೆ ಜಾತ್ರೆಯಲ್ಲಿ ದೊಡ್ಡ

ಮನಸಿನವನಾದ ಸಾಹುಕಾರನ ವೆಚ್ಚಕ್ಕಂತೂ ಅಳವಿಲ್ಲ.

ಲಗ್ನದ ಸಮಾರಂಭಗಳು— ಈ ಸಮಾರಂಭಗಳಲ್ಲಿ ಹಣವನ್ನು ವ್ಯರ್ಥ ವೆಚ್ಚಮಾಡಿ, ಅಥವಾ ನಿರುಪಯುಕ್ತವಾದ ಕೆಲಸದಲ್ಲಿ ಹಾಕಿ ಎಷ್ಟೋ ಜನರ ಮನೆತನಗಳು ಹಾಳಾಗಿ ಹೋಗುತ್ತವೆ. ಲಗ್ನದಲ್ಲಿ ಅಳಿಯನಿಗೆ ವರದಕ್ಷಿಣೆ, ಎಂದು ಹಣ ಕೊಡುವ ಪದ್ಧತಿಯುಂಟು. ಯಾರು ಇನ್ನೂರು, ರೂ|| ಯಾರು ಮುನ್ನೂರು ರು|| ಹೀಗೆ ವರದಕ್ಷಿಣೆ ಕೊಡುತ್ತಾರೆ. ಹುಡುಗನು ಪ್ರಾಯದವನಾಗಿಯೂ, ರೂಪವಂತನಾಗಿಯೂ, ಜಾಣನಾಗಿಯೂ ಇದ್ದರೆ ವರದಕ್ಷಿಣೆಯು ಸಾವಿರದ ತನಕ ಏರುತ್ತದೆ. ಸಾಂಪ್ರತಕಾಲದಲ್ಲಿ ಬಿಎ, ಎಮ್‌ ಎ ಮುಂತಾದ ಪರೀಕ್ಷೆಗಳಲ್ಲಿ ಪಾಸಾದವರಿಗೆ ಸಾವಿರ ರೂಪಾಯಿ ಯಾಕೆ ಕೊಡಬಾರದೆಂದು ಕೇಳುವವರೆಷ್ಟೋ ಜನರುಂಟು.

ಆ ಹಣವಾದರೂ ಅಳಿಯನ ತಂದೆಯ ಹತ್ತಿರ ನಿಲ್ಲುವದಿಲ್ಲ. ಇನ್ನೂರು ರೂಪಾಯಿ ವರದಕ್ಷಿಣೆ ಕಟ್ಟಿದರೆ ಎರಡು ಶೇರು ಬಂಗಾರವನ್ನು ಹೆಣ್ಣಿನ ಮೈಮೇಲಿಡಬೇಕೆಂದು ಗೊತ್ತು ಮಾಡಿರುತ್ತಾರೆ. ಇನ್ನೂರು ರೂಪಾಯಿಗಳಲ್ಲದೆ ಬೇಕಾಗುವ ಆರುನೂರು ರೂಪಾಯಿಗಳನ್ನು ಕೈಯಿಂದ ಹಾಕಬೇಕಾಗುವದು. ಅದರೊಳಗೆ ಹತ್ತುವರ್ಷದ ಹುಡಿಗಿಗೆ ೨ಶೇರು, ಹನ್ನೆರಡುವರ್ಷದ ಹುಡಿಗಿಗೆ ೩ಶೇರು ಹೀಗೆ ಬೇಡುತ್ತಾ

(ಮುಂದೆ ಸಾಗುವದು.)

ಕನ್ನಡಶಾಲಾಪತ್ರಕವು

CANARESE
SCHOOL PAPER.

ಪುಸ್ತಕ ೨೪) (ಸಂಚಿಕೆ ೯

(ಸೆಪ್ಟೆಂಬರ ೧೮೮೯)

ಅನುಕ್ರಮಣಿಕೆಯು.

ಪುಟ.

ುದ್ಧಿಶಕ್ತಿ, ನಿರ್ಣಯ, ಕಲ್ಪನೆ ೧೯೩
ದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು ೨೦೨
ಾಲಕರನ್ನು ತಿದ್ದುವಿಕೆ ೨೦೭
ತ್ರವ್ಯವಹಾರವು ೨೧೧
ುರೋಪದ ಮಧ್ಯಕಾಲದ ಇತಿಹಾಸವು ೨೧೩

CONTENTS

ellectual Powers, Judjement and Immagination . 193
Education and Improvement. 202
Educating children 207
Correspondence 211
History of the Middle Ages 213

DHARWAR.

Printed at the Dnana Wardhaka Press

ಶಾಲಾಪತ್ರಕವು

ಪುಸ್ತಕ ೨೪) (ಸಂಚಿಕೆ ೯

(ಸಪಟಂಬರ ೧೮೮೯)

Intellectual Powers, Judjement and Immagination.

ಬುದ್ಧಿಶಕ್ತಿ, ನಿರ್ಣಯ, ಕಲ್ಪನೆ

(೧೮೩ನೇ ಪುಟದಿಂದ ಮುಂದೆ ಸಾಗಿದ್ದು)

ಕವಿಗಳಲ್ಲಿ ಕಾಣುವ ಹೊಸ ಸೃಷ್ಟಿಯನ್ನುಂಟುಮಾಡುವ ಸಾಮರ್ಥ್ಯವು ಕಲ್ಪನೆಯು ಅತಿ ಘನವಾದ ವ್ಯಾಪಾರವಿರುತ್ತದೆ. ಚಿತ್ರಗಾರರ ಕಲ್ಪನೆಯೂ ಇದೇ ವರ್ಗದ್ದು. ಇದು ಕಲಿಸಿಬಾರದು.

ಬೆಳಿಸ ಮನೋಭಾವನೆಯೊಂದುಂಟಾಗ ಅಸಂಬದ್ಧವಾದ ಕಲ್ಪನೆಯು ನೀಚತರದ್ದಿರುತ್ತದೆ. ಉ.—ಕೊತಲ್ಲಿ ಹಗೆಯು ಭಯ,

—o—

ತಿಳಿದದ್ದರಿಂದ ತಿಳಿಯದಿದ್ದದಕ್ಕೆ ಹೋಗುವ ಪದ್ಧತಿಯೇ ಶಿಕ್ಷಣದ ಮುಖ್ಯ ತತ್ವವಿರುತ್ತದೆ. ಇದರಲ್ಲಿ ಪೂರ್ವದಲ್ಲಿ ತಿಳಿದಿದ್ದ ಸಂಗತಿಗಳ ಸಹಾಯದಿಂದ ತಿಳಿಯದಿದ್ದದ್ದನ್ನು ಸ್ಪಷ್ಟೀಕರಿಸಬೇಕಾಗುತ್ತದೆ. ತಿಳಿದವಲ್ಲದಂಥ ಸಂಗತಿಗಳ ಆಧಾರದಿಂದ ಕಲಿಸುವವನು ತಿಳಿಸಿ ಕೊಡುತ್ತಿದ್ದಲ್ಲಿ, ವರ್ಣನೆಯು

ಲ್ಲಿ, ಕೇಳುವವರಿಗೆ ತಿಳಿಯದಂಥ ಶಬ್ದಗಳು ಬರುತ್ತಿದ್ದಲ್ಲಿ ಮೊದಲು ಮಾಡದಿದ್ದಂಥ ಕೃತ್ಯಗಳನ್ನು ಮಾಡಲಿಕ್ಕೆ ಅಪ್ಪಣೆಯಾಗುತ್ತಿದ್ದಲ್ಲಿ, ಪರಿಣಾಮದಲ್ಲಿ ಫಲವೇನು ಆಗುವದಿಲ್ಲ.

ಮಾತಾಡುವಾಗ ಒಂದೇ ಸಾರಿಗೆ ಒಂದು ಸಂಗತಿಯನ್ನು ಕುರಿತು ಮಾತಾಡ ಬಹುದು. ಆದರೆ ಅತಿ ಕಠಿಣವಾಗಿದ್ದ ಸಂಗತಿಯನ್ನು ಆಕಲನ ಮಾಡಬೇಕಾಗಿದ್ದಲ್ಲಿ ಯೆರಡು ಮೂರು ವಿವರಗಳ ಗ್ರಹಿಕೆಯು ಒಮ್ಮೇಲೆ ಆಗಬೇಕಾಗಿರುತ್ತದೆ. ಉ—ಯುದ್ಧದ ವರ್ಣನ, ಚಿತ್ರ. ಈ ತೊಂದರೆಗೆ ವಿದ್ಯಾರ್ಥಿಯು ಮೊದಲು ರೂಢಿಸಬೇಕಾಗುತ್ತದೆ. ಇನ್ನೊಂದು ತೊಂದರೆ ಯೇನೆಂದರೆ, ಹೇಳುವವನು ಅತಿ ಸುಲಭ ರೂಪದಿಂದ ಹೇಳಿದಾಗ್ಯೂ, ಆದರಲ್ಲಿ ಕೇಳುವವನಿಗೆ ತಿಳಿಯದಿದ್ದಂಥ ಸಂಗತಿಯು ಒಂಮೊಮ್ಮೆ ಶೇರಿ ಅವನಲ್ಲಿ ಅಜ್ಞಾನ ಉಳಿಯುತ್ತದೆ. ಈ ತೊಂದರೆಯನ್ನು ತೆಗಿದು ಹಾಕಲಿಕ್ಕೆ ಪ್ರಶ್ನ ಪದ್ಧತಿಯೇ ಮೇಲಾದ ಉಪಾಯವು.

ಬಾಲಕರಿಗೆ ಆಗತಕ್ಕ ಅಭ್ಯಾಸಗಳು.

ಶರೀರಾವಯವಗಳ ಅಭ್ಯಾಸವು— ಬಾಲಕರು ಆರಂಭದಲ್ಲಿ ಸ್ವಬುದ್ಧಿಯಿಂದ ಕೆಲವು ಸಂಗತಿಗಳನ್ನು ಕಲಿಯುತ್ತಾರೆ. ಈ ಕಲಿಯುವಿಕೆಯಲ್ಲಿ ಅನುಕರಣವೇ ಮುಖ್ಯ ಸಾಧನವಿರುತ್ತದೆ. ಅನುಕರಣಕ್ಕೆ ಶಿಕ್ಷಣವು ಜತೆಯಾಗತಕ್ಕದ್ದು. ಶಿಕ್ಷಣದಿಂದ ಅನುಕರಣವು ತಕ್ಕ ವಿಷಯಗಳಲ್ಲಿ ಯೋಗ್ಯಮಾರ್ಗದಿಂದ ನಡಿಯುತ್ತದೆ. ಈ ಶಿಕ್ಷಣವು ಶರೀರಾವಯವಗಳಿಗೆ ವಿಶೇಷವಾಗಿ ಸಂಬಂಧಿಸುತ್ತದೆ. ಕೈ ಬರಹ, ಚಿತ್ರ ತೆಗೆಯುವದು, ಆಯುಧಗಳ ಉಪಯೋಗ, ಸ್ವರ, ಮುಂತಾ

ಹವುಗಳು ಶರೀರಾವಯವಗಳ ಅಭ್ಯಾಸದೊಳಗೆ ಬರುತ್ತವೆ.

ಇಂದ್ರಿಯಗಳ ಅಭ್ಯಾಸವು — ಮನುಷ್ಯನಿಗೆ ಐದು ಇಂದ್ರಿಯಗಳಿಂದ ಆಗುವ ಜ್ಞಾನವು ಸ್ವತಂತ್ರವಾದ ಮಾನಸಿಕ ಶಕ್ತಿಯೆಂದು ಕೆಲವರು ಯೆಣಿಸುತ್ತಾರೆ; ಆದರೆ ಇದನ್ನು ಬಾವನೆಗಳಲ್ಲಿ ಯೆಣಿಸುವದು ಲೇಸು. ಇಂದ್ರಿಯಗಳಿಗೆ ಅಭ್ಯಾಸ ಮಾಡಿಸೋಣವೆಂದರೆ ಆವುಗಳ ಭೇದ ಬೋಧದ ಸ್ವಾಭಾವಿಕ ಶಕ್ತಿಯನ್ನು ಬೆಳಿಸೋಣವಿರುತ್ತದೆ. ಇಂದ್ರಿಯಗಳ ಶಕ್ತಿಯನ್ನು ಬೆಳಿಸುತ್ತಿರಲಾಗಿ ಯಾವ ಹುಡುಗನಲ್ಲಿ ಯಾವ ಇಂದ್ರಿಯದ ಸ್ವಾಭಾವಿಕ ಶಕ್ತಿ ಹೆಚ್ಚಿರುವದೋ ಅವನಲ್ಲಿ ಆ ಶಕ್ತಿಯು ಬೇರೆ ಇಂದ್ರಿಯಗಳ ಶಕ್ತಿಗಿಂತ ಬೇಗ ಬೆಳೆಯುತ್ತದೆ. ಕಿವಿಯಲ್ಲಿ ಹೆಚ್ಚು ಭೇದ ಬೋಧದ ಶಕ್ತಿಯುಳ್ಳವನು ಕೇಳಿಕೆಯಿಂದ ಗಾಯನವನ್ನು ಬೇಗ ಕಲಿಯುತ್ತಾನೆ; ಕಣ್ಣಿನಲ್ಲಿ ಆ ಶಕ್ತಿ ಹೆಚ್ಚು ಇದ್ದರೆ ಚಿತ್ರ, ಅಕ್ಷರಗಳನ್ನು ನೋಡಿ ಬೇಗ ಕಲಿಯುತ್ತಾನೆ, ಇತ್ಯಾದಿ.

ಆರಂಭದಲ್ಲಿ ಇಂದ್ರಿಯಗಳ ಅಭ್ಯಾಸಕ್ಕೋಸ್ಕರವಾಗಿ ಹಲವು ಪ್ರಕಾರದ ಆಟಗಳನ್ನು ಹುಡುಗರಿಗೆ ಕಲಿಸುತ್ತಾರೆ. ಬಣ್ಣಗಳ ಭೇದ ಬೋಧವನ್ನು ಬೆಳಿಸುವದಕ್ಕೋಸ್ಕರ ಬಣ್ಣ ಕೊಟ್ಟ ಗಂಜೀಫಗಳನ್ನು ಅವರ ಮುಂದೆ ಹರವುತ್ತಾರೆ; ಬೇರೆ ಬೇರೆ ಆಕಾರಗಳ ಸಣ್ಣ ದೊಡ್ಡ ಒಡವೆಗಳನ್ನು ಅವರಮುಂದೆ ಚಲ್ಲಿ ಆಕಾರಗಳನ್ನೂ ಮಹತ್ವಗಳನ್ನೂ ವಿಂಗಡಿಸ ಹೇಳುತ್ತಾರೆ; ಭೂಮಿತಿಯ ಆಕೃತಿಗಳನ್ನು ವಿಂಗಡಿಸ ಹೇಳುತ್ತಾರೆ. ಆದರೆ ಈ ಉಪಾಯಗಳಿಂದ ಆಗತಕ್ಕಂಥ ಅಭ್ಯಾಸವು ಇಂದ್ರಿಯಗಳಿಗೆ ಆಗುವದಿಲ್ಲ. ಬಣ್ಣಗಳನ್ನು ವಿಂಗಡಿಸುವವನೂ, ಆಕಾರ ಮಹತ್ವಗಳನ್ನು ವಿಂಗಡಿಸುವವನೂ ಚಿತ್ರ

ತ್ರವಿದ್ಯೆ, ಇಂಜನೀಯರ ವಿದ್ಯೆಗಳಿಗೆ ಮಾತ್ರ ಸಂಬಂಧಿಸುತ್ತವೆ. ಆದರೆ ಎಲ್ಲ ಹುಡುಗರು ಈ ವಿದ್ಯೆಗಳಲ್ಲಿ ಮಾತ್ರ ಪ್ರವೀಣರಾಗ ತಕ್ಕವರಿರುವದಿಲ್ಲ. ಭೂಮಿತಿಯ ಆಕೃತಿಗಳನ್ನು ವಿಂಗಡಿಸುವ ಅಭ್ಯಾಸವಂತೂ ಬಹುತರ ನಿರರ್ಥಕವಿರುತ್ತದೆ. ಭೂಮಿತಿಯನ್ನು ಕಲಿಯುವವನಿಗೆ ಆಕೃತಿಗಳನ್ನು ವಿಂಗಡಿಸಲಿಕ್ಕೆ ಎಷ್ಟು ಮಾತ್ರವೂ ಶ್ರಮವಾಗುವದಿಲ್ಲ.

ಚಿತ್ರವಿದ್ಯೆ ಕಲಿಸುವದರಿಂದ ಶೋಧ ದೃಷ್ಟಿಯು ಬಲಪಡುತ್ತದೆಂದು ಕೆಲವರು ಯೋಚಿಸುತ್ತಾರೆ. ಆದರೆ ಅದರಿಂದ ಚಿತ್ರ ಕಲೆಗೆ ಬೇಕಾಗುವಷ್ಟು ಮಟ್ಟಿಗೆ ಮಾತ್ರ ದೃಷ್ಟಿಯ ಅಭ್ಯಾಸವು ಬೆಳೆಯುತ್ತದೆ, ಅಷ್ಟಕ್ಕಿಂತ ಹೆಚ್ಚಿಲ್ಲ.

ಶೋಧ ದೃಷ್ಟಿಯು ಕೇವಲ ಇಂದ್ರಿಯ ಜ್ಞಾನದಿಂದ ಮಾತ್ರ ಉಂಟಾಗುವದಿಲ್ಲ. ಮೊದಲು ಸಂಪಾದಿಸಿದ ಜ್ಞಾನದ ಸಹಾಯದಿಂದ ತೋರಿಕೆಯ ಸಂಗತಿಗಳ ಅರ್ಥವನ್ನು ಅರಿತು ಕೊಳ್ಳುವದೇ ಶೋಧ ದೃಷ್ಟಿಯು. ಆದದರಿಂದ ಶೋಧ ದೃಷ್ಟಿಗೆ ನಿರ್ಣಯದ ಸಹಾಯ ಬೇಕಾಗುತ್ತದೆ. ಇದೊಂದು ಸ್ವತಂತ್ರವಾದ ಅಭ್ಯಾಸವಿರುತ್ತದೆ.

ಇಂದ್ರಿಯಗಳ ಪ್ರವೃತ್ತಿಯು— ಮನುಷ್ಯನ ಮಿದುಳು ಒಮ್ಮೇಲೆ ಪೂರ್ಣವಾಗಿ ಬೆಳೆಯುವದಿಲ್ಲ. ಅದು ಬೆಳೆಯುತ್ತ ಹೋದಹಾಗೆ ಅದರ ಮೇಲೆ ಶಿಕ್ಷಣದ ಪರಿಣಾಮವು ಆಗುತ್ತಿರಲಿಕ್ಕೆ ಬೇಕು. ಮಿದುಳಿನ ವ್ಯಾಪಾರಗಳು ಆರಂಭದಿಂದ ನ್ಯಾಯಪ್ರಾಪ್ತವಾಗಿ ಬೆಳೆಯುತ್ತ ಹೋಗುವ ಕ್ರಮ ಹ್ಯಾಗಂದರೆ— ಮೊದಲು ಅತಿ ಸುಲಭವಾದ ಬೋಧಗಳು, ಆ ಮೇಲೆ ತೊಡಕುಳ್ಳ ಬೋಧಗಳು; ಮೊದಲು ಸ್ಪಷ್ಟ ಪದಾರ್ಥಗಳ ಜ್ಞಾನ, ಆಮೇಲೆ ಶುದ್ಧ ವಿಚಾರದ ಬೆಳವಣಿಗೆ.

ಮನುಷ್ಯನ ಸಹಜ ಸಾಮರ್ಥ್ಯದ ಆವಿರ್ಭಾವವು ಮೊದಲು ಚಲನ ವಲನಗಳ ರೂಪದಿಂದಾಗುತ್ತದೆ; ಅದು ನ್ಯೂನಾಧಿಕ, ಅನಿಯಮಿತ, ಅನುದ್ದಿಷ್ಟ, ಇರುತ್ತದೆ. ಅದು ನಡಿದಾಗ ಅದನ್ನು ತಕ್ಕ ಮಾರ್ಗಕ್ಕೆ ಹಚ್ಚುವದು ಶಿಕ್ಷಕನ ಮೊದಲನೇ ಕರ್ತವ್ಯವು. ಆದರೆ ಬಲಾತ್ಕಾರದಿಂದ ಚಲನವನ್ನುಂಟು ಮಾಡಲಾಗದು.

ಇದರ ನಂತರ ಇಂದ್ರಿಯಗಳು ಕ್ರಮವಾಗಿ ಎಚ್ಚರಗೊಳ್ಳುತ್ತವೆ. ಆ ಕಾಲಕ್ಕೆ ಈ ಲೋಕವೆಲ್ಲ ಹೊಸದಾಗಿರುವ ಕಾರಣ ಇಂದ್ರಿಯಗಳ ವ್ಯಾಪಾರವು ಆನಂದದಾಯಕವಾಗಿರುತ್ತದೆ. ಅದರಿಂದ ಬಾಲಕರು ತಮ್ಮ ಇಂದ್ರಿಯಗಳನ್ನು ಪ್ರಯೋಗಿಸಲಿಕ್ಕೆ ಆತುರ ಪಡುತ್ತಾರೆ. ಇಂದ್ರಿಯ ವ್ಯಾಪಾರಗಳ ಆರಂಭವೇ ಭಾವನೆಗಳ ಆರಂಭವು. ಪ್ರೀತಿ, ಮಮತ್ವ, ಸಿಟ್ಟು, ಅಹಂಕಾರ, ಹೆದರಿಕೆ, ಇವೇ ಮೊದಲು ಎಚ್ಚರ ಪಡುವ ಭಾವನೆಗಳು. ಭಾವನೆಗಳ ಹಿಂದೆ ಬುದ್ಧಿಯ ವ್ಯಾಪಾರಗಳು ಮೆಲ್ಲ ಮೆಲ್ಲಗೆ ಪ್ರಾದುರ್ಭಾವವಾಗುತ್ತವೆ. ಭಾವನೆಗಳು ಬುದ್ಧಿಯ ವ್ಯಾಪಾರಕ್ಕೆ ಕೆಲವು ಮಟ್ಟಿಗೆ ಸಹಾಯ ಮಾಡುತ್ತಿದ್ದಾಗ್ಯೂ, ಅವು ತಾವು ಮುಂದಾಗಿ ಬುದ್ಧಿಯನ್ನು ಹಿಂದಕ್ಕೊತ್ತುತ್ತವೆ. ಆದರೆ ಕೌತುಕ, ಕಲ್ಪನೆ, ಅನುಕರಣ, ತರ್ಕ, ಇವು ಬುದ್ಧಿಯ ವ್ಯಾಪಾರಗಳಿಂದ ಬೆಳಿಯ ಹತ್ತಿದ ಹಾಗೆ ಬುದ್ಧಿಯನ್ನು ಮುಂದಕ್ಕೆ ತರುತ್ತವೆ.

ಚಲನ ವಲನ, ಇಂದ್ರಿಯ ಜನಿತವಾದ ಆನಂದ, ಭಾವನೆಗಳು, ಇವುಗಳನ್ನು ಕ್ರಮಗೊಳಿಸಿತಕ್ಕ ಮಾರ್ಗಕ್ಕೆ ಹಚ್ಚುವ ಶಿಕ್ಷಣವೇ ನೀತಿ ಶಿಕ್ಷಣವೆನಿಸುತ್ತದೆ.

* * *

ಒಡವೇ ಪಾಠಗಳು.

ಒಡವೇ ಪಾಠಗಳ ಪದ್ಧತಿಯನ್ನು ಮೊದಲು ಪೇಸ್ತಲೋಝಿಯೆಂಬವನೊಬ್ಬ ಜರ್ಮನಿಯ ಗೃಹಸ್ಥನು ಆರಂಭ ಮಾಡಿದನು. ಅವನು ಒಡವೆಗಳನ್ನು ಹುಡುಗರ ಮುಂದಿಟ್ಟು ಅವುಗಳ ಸಂಖ್ಯೆ, ಆಕಾರ, ಮುಂತಾದ ಸಾಮಾನ್ಯ ಗುಣ ಧರ್ಮಾದಿಗಳ ಕ್ಲಪ್ತಿಯನ್ನು ಹುಡುಗರ ಮನಸಿನಲ್ಲಿ ಸೇರಿಸುವನು. ಉ — ನಾಲ್ಕು, ವರ್ತುಳ, ಇತ್ಯಾದಿ. ಈ ಪ್ರಕಾರದ ಅಭ್ಯಾಸವು ಸಾಮಾನ್ಯ ಜ್ಞಾನದ ಮೂಲಾರಂಭವಾಗಿ ಇರುತ್ತದೆ.

ಇಂದ್ರಿಯಜ್ಞಾನ, ವಿಚಾರದೃಷ್ಟಿ, ಇವುಗಳನ್ನು ತಿದ್ದಿ ಬೆಳಸಲಿಕ್ಕೂ ಕೆಲವರು ಒಡವೇ ಪಾಠಗಳನ್ನು ಪ್ರಯೋಗಿಸುವರು. ಈ ಪದ್ಧತಿಯು ಮೇಲಿನ ಪದ್ಧತಿಗೆ ವಿಪರೀತವಿರುತ್ತದೆ. ಯಾಕಂದರೆ ಮೇಲಿನ ಪದ್ಧತಿಯಲ್ಲಿ ಸಾಮಾನ್ಯ ಜ್ಞಾನವನ್ನು ಬೆಳಸುವ ಉದ್ದೇಶವಿದ್ದು, ಇದರಲ್ಲಿ ವಿಶೇಷ ಜ್ಞಾನವನ್ನು ಬೆಳಸುವ ಉದ್ದೇಶವಿರುತ್ತದೆ. ಈ ಬಗೆಯ ಪಾಠಗಳನ್ನು ಕಲಿಸುವವರು ಬಣ್ಣಗಳ ಬೇರೆಬೇರೆ ಛಾಯೆಗಳನ್ನೂ ಬೇರೆಬೇರೆ ಗಾಯನ ಸ್ವರಗಳನ್ನೂ ಹುಡುಗರಿಗೆ ವಿಂಗಡಿಸಿ ಹೇಳುವರು. ಆದರೆ ಈ ಬಗೆಯ ಸೂಕ್ಷ್ಮಜ್ಞಾನವು ಪ್ರೌಢತನದಲ್ಲಿ ಉದ್ಯೋಗದ ಅನುರೋಧದಿಂದ ತನಗೆ ತಾನೇ ಆಗುತ್ತಿರುವ ಕಾರಣ ಬಾಲ್ಯದಲ್ಲಿ ಈ ಅಭ್ಯಾಸವು ಬಹುತರ ನಿಷ್ಫಲವಾದದ್ದೆಂದು ಹಿಂದೆ ಹೇಳಿದ್ದೇವೆ.

ಮೂರನೇ ಪ್ರಕಾರದ ಒಡವೇ ಪಾಠಗಳು ಬೇರೆಯುಂಟು. ಅವುಗಳ ಸಹಾಯದಿಂದ ಭಾಷೆಯ ಜ್ಞಾನವನ್ನು ದೃಢಪಡಿ ಬೆಳಸಲಿಕ್ಕೆ ಯತ್ನಿಸುವರು. ಈ ಪಾಠ ಕಲ್ಪಿಸುವವರು ಕಾಗ

ಪ, ಚಿತ್ರ, ಸುಣ್ಣ, ಮುಂತಾದ ಒಡವೆಗಳನ್ನು ಹುಡುಗರ ಮುಂದೆ ಇಟ್ಟು ಅವುಗಳ ಹೆಸರುಗಳನ್ನು ಹೇಳುವರು. ಇದರಿಂದ ಪದಾರ್ಥಗಳ ಜ್ಞಾನವೂ ಭಾಷೆಯ ಜ್ಞಾನವೂ ಒಂದಕ್ಕೊಂದು ಜೋಡಾಗಿ ಬೆಳೆಯುವವು. ಆದರೆ ಈ ಬಗೆಯ ಪಾಠಗಳಿಂದ ಬಹಳ ಪ್ರಯೋಜನವಾಗುತ್ತದೆಂದು ನಮಗೆ ತೋರುವದಿಲ್ಲ. ವಯಸ್ಸು ಬೆಳೆದಂತೆ ಈ ಜ್ಞಾನವು ತನಗೆ ತಾನೇ ಬೆಳೆಯುತ್ತದೆ.

ನಾಲ್ಕನೇ ಮುಖ್ಯ ಪ್ರಕಾರದ ಒಡವೇ ಪಾಠಗಳು ಮೇಲಿನ ಎಲ್ಲವುಗಳಿಗಿಂತ ಹೆಚ್ಚು ಹಿತಕರವೆಂದು ತೋರುತ್ತದೆ. ಕೆಲವು ಸೋಜಿಗದ ಒಡವೆಗಳನ್ನು ಆರಿಸಿಟ್ಟು ಕೊಂಡು, ಅವುಗಳಲ್ಲಿ ಒಂದನ್ನು ಹುಡುಗರ ಮುಂದಿಟ್ಟು, ಅದರ ಆಕಾರ, ಬಣ್ಣ, ಭಾಗಗಳು, ಉಪಯೋಗ, ಮುಂತಾದವುಗಳಿಗೆ ಹುಡುಗರ ಲಕ್ಷ್ಯವನ್ನು ಹಚ್ಚಿ ತಿಳಿಸಿ ಕೊಡುವರು. ಇದರಿಂದ ಹುಡುಗರಿಗೆ ಪದಾರ್ಥಗಳ ಜ್ಞಾನವು ಬೇಗ ಹೆಚ್ಚು ಪೂರ್ಣವಾದದ್ದಾಗಿ ಅವರ ಶೋಧದೃಷ್ಟಿಯು ಬೆಳೆಯುವದು. ಈ ಲಾಭವು ಮೇಲಿನ ಯಾವ ಪದ್ಧತಿಯಲ್ಲಿಯೂ ಇಲ್ಲ.

ಈ ಪಾಠಗಳು ಹುಡುಗರಿಗೆ ಒಳಿತಾಗಿ ಗೊತ್ತಿದ್ದಂಥ ಒಡವೆಗಳಿಂದ ಆರಂಭವಾಗತಕ್ಕವು. ಆ ಒಡವೆಗಳಲ್ಲಿ ಹುಡುಗರು ಅರಿಯದಿದ್ದಂಥ ಸಂಗತಿಗಳನ್ನೇ ಅವರಿಗೆ ತಿಳಿಸಿ ಕೊಡತಕ್ಕವು.

ಆದರೆ ಈ ಪಾಠಗಳಲ್ಲಿ ವಿಷಯಾಂತರವಾಗುವ ಒಲವು ಬಹಳ ಇರುತ್ತದೆ. ಈ ದೋಷದ ವಿವರ ಹ್ಯಾಗಂದರೆ —

೧) ಹುಡುಗರು ಅರಿತದ್ದನ್ನೇ ಶಿಕ್ಷಕರು ಮತ್ತೆ ಮತ್ತೆ

ಹೇಳತೊಡಗುವರು; (೨) ತಿಳಿಯದಿದ್ದಂಥ ಸಂಗತಿಗಳು ತಿಳದವೆ ಯೆಂದು ಗ್ರಹಿಸಿ ಅವುಗಳನ್ನು ನೆಲೆ ಮಾಡಿ ಹೊಸ ಸಂಗತಿಗಳನ್ನು ತಿಳಿಸುವರು; (೩) ಅಪ್ರಾಸಂಗಿಕ ಸಂಗತಿಗಳನ್ನು ಮನಸಿಗೆ ಬಂದಂತೆ ಬೆಳಿಸಿ ಹೇಳುವರು; (೪) ಕ್ರಮಗೆಟ್ಟು ಹಿಂದೆ ಮುಂದೆ ಬೇಕಾದಹಾಗೆ ಪಾಠದ ಸಂಗತಿಗಳನ್ನು ವಿವರಿಸುವರು.

೧ ಆದದರಿಂದ ಶಿಕ್ಷಕರು ನೆನಪಿಡತಕ್ಕ ಮೊದಲನೇ ನಿಯಮವೇನೆಂದರೆ—(೧) ಸಾಮ್ಯ ವೈಷಮ್ಯಗಳ ಅನುರೋಧದಿಂದ ಸ್ಪಷ್ಟೀಕರಣದ ತತ್ವವನ್ನು ಅನುಸರಿಸಲಿಕ್ಕೆ ಬೇಕು; (೨) ತಿಳಿದದ್ದರಿಂದ ತಿಳಿಯದಿದ್ದದ್ದಕ್ಕೆ ಹೋಗಲಿಕ್ಕೆ ಬೇಕು; (೩) ಅಮಿಶ್ರ ವಸ್ತುವಿನಿಂದ ಸಂಕಲಿತವಾದದ್ದಕ್ಕೆ ಹೋಗಲಿಕ್ಕೆ ಬೇಕು; (೪) ಪ್ರತ್ಯಕ್ಷವಾದದ್ದರಿಂದ ಅಪ್ರತ್ಯಕ್ಷವೆಂದರೆ ವಿಚಾರ ಗಮ್ಯವಾದದ್ದಕ್ಕೆ ಹೋಗಲಿಕ್ಕೆ ಬೇಕು.

ಬೇರೆ ಬೇರೆ ಸ್ವರೂಪದ ಒಡವೇ ಪಾಠಗಳ ವರ್ಗಗಳನ್ನು ಮೊದಲು ಮಾಡಿಕೊಳ್ಳಲಿಕ್ಕೆ ಬೇಕು. ಈ ವರ್ಗಗಳಲ್ಲಿ ಹುಡುಗರ ವಯಸ್ಸಿನ ಮಾನದಿಂದ ಕ್ರಮವನ್ನು ಹಚ್ಚಬೇಕು.

ಹುಡುಗರು ಅರಿಯದಿದ್ದದ್ದನ್ನು ತಿಳಿಸಿ ಕೊಟ್ಟು ಅವರ ಇಂದ್ರಿಯ ಜ್ಞಾನವನ್ನು ಬೆಳಿಸಬೇಕಾಗಿದ್ದಲ್ಲಂತು ಈ ಬಗೆಯಾಗಿ ಪಾಠಗಳ ವರ್ಗೀಕರಣವೂ ಕ್ರಮವೂ ಅತ್ಯವಶ್ಯವುಂಟು. ಅದರಿಂದ ಗೊಂದಲವು ತಪ್ಪುತ್ತದೆ. ಹೀಗೆ ಯೋಚಿಸಿದ ಕ್ರಮಿಕ ಪಾಠಗಳಲ್ಲಿ ಒಂದು ಪಾಠವು ಮುಂದಿನದಕ್ಕೆ ಸಾಧನವಾಗಿರಬೇಕು. ಇದರಿಂದ ಹಿಡಿದ ಕ್ರಮದೊಳಗಿನ ಯಾವತ್ತು ಪಾಠಗಳ ಆಶಯವು ಗೊತ್ತಾಗುತ್ತದೆ. ತೋರಿಕೆ

ಯಲ್ಲಿ ಈ ಪಾಠಗಳು ಅಸಂಬದ್ಧವಾಗಿದ್ದರೂ ಅಡ್ಡಿ ಇಲ್ಲ ಒಡವೇ ಪಾಠಗಳಲ್ಲಿ ತ್ರುಟಿತ ಶಿಕ್ಷಣವು ಅಲ್ಪಸ್ವಲ್ಪವಾದರೂ ಬರತಕ್ಕದ್ದೇ. ಬೇರೆ ಬೇರೆ ಪಾಠಗಳಿಗಾಗಿ ಒಂದೇ ಒಡವೆಯನ್ನು ಹುಡುಗರ ಮುಂದೆ ತರಲಿಕ್ಕೆ ಅಡ್ಡಿ ಇಲ್ಲ.

೩ ಒಡವೇ ಪಾಠ ಕಲಿಸುವವರಿಗೆ ವಾಡಿಕೆಯಾಗಿ ಹೇಳಲ್ಪಡುವ ನಿಯಮವೇನೆಂದರೆ, ಮೊದಲು ಸ್ವರೂಪ, ಆ ಮೇಲೆ ಇಂದ್ರಿಯಗೋಚರವಾದಂಥ ಗುಣಗಳು, ಕಡೆಯಲ್ಲಿ ಉಪಯೋಗ, ಈ ಪ್ರಕಾರ ಪಾಠದಲ್ಲಿ ಕ್ರಮವಿರಬೇಕು. ಆದರೆ ಮೊದಲು ಒಡೆದು ಕಾಣಿಸುವ ಸ್ವರೂಪವನ್ನಷ್ಟೇ ಉಲ್ಲೇಖಿಸಿ, ಉಪಯೋಗವನ್ನು ತಿಳಿಸುವದು ಲೇಸು; ಆ ಮೇಲೆ ಉಪಯೋಗದ ಸಂಬಂಧದಿಂದ ಗುಣಗಳು ಬರತಕ್ಕವು. ಉಪಯೋಗವನ್ನು ಆರಂಭದಲ್ಲಿ ತಿಳಿಸಿಕೊಡುವದರಿಂದ ಕಲಿಯುವವರ ಲಕ್ಷ್ಯವು ಬಹು ಬೇಗ ಹತ್ತುತ್ತದೆ, ಮತ್ತೂ ಉಪಯೋಗವು ಗುಣಗಳನ್ನು ಸೂಚಿಸುತ್ತದೆ.

ಉದಾಹರಣಾರ್ಥವಾಗಿ ಕಾಜು ತಕ್ಕೊಳ್ಳುವ – ೬ | ೭ ವರ್ಷದ ಹುಡುಗರಿಗೆ ಇಂದ್ರಿಯಗಳಿಂದ ತಿಳಿಯ ಬಹುದಾದಂಥ ನುಣುಪು, ಪಾರದರ್ಶಕತ್ವ, ನಾದ, ರುಚಿಗಂಧಗಳ ಅಭಾವ, ಒಡೆಯುವ ಗುಣ, ಇವೆಲ್ಲ ತಿಳಿದಿರುತ್ತವೆ, ಮತ್ತೂ ಅದರ ಉಪಯೋಗವನ್ನಾದರೂ ಅವರು ತಕ್ಕ ಮಟ್ಟಿಗೆ ಅರಿತಿರುತ್ತಾರೆ. ಆದದರಿಂದ ಇವನ್ನೆ ವಿವರಿಸುತ್ತ ಕೂಡ್ರುವದು ಹಿತವಲ್ಲ. ಆದರೂ ಅವರನ್ನು ಸ್ವಲ್ಪ ಮಾತಾಡ ಹಚ್ಚ ಬಹುದು. ಆದರಿಂದ ಅವರ ಶೋಧದೃಷ್ಟಿ, ಭಾಷೆಯ ಸರಣಿ, ಇವು ಬೈಲಿಗೆ ಬರುತ್ತವೆ. ಪರವಾಯು ಅವರು ಅರಿಯದಿದ್ದಂಥ ಕೆಲವು ಉಪಯೋಗಗಳನ್ನು (ಔಷಧ ಸಂಗ್ರಹ,

ದುರ್ಬೀನು, ಸೂಕ್ಷ್ಮದರ್ಶಕ ಇ.) ತಿಳಿಸಿ, ಆ ಉಪಯೋಗಗಳಿಗೆ ಸಂಬಂಧಿಸುವ ಗುಣಗಳನ್ನು ತಿಳಿದಷ್ಟು ಮಟ್ಟಿಗೆ ಹೇಳಬಹುದು.

(ಮುಂದೆ ಸಾಗುವದು)

— ೦೦೦ —

Education and Improvement.

ವಿದ್ಯಾಸುಧಾರಣೆಗೆ ಸಂಬಂಧವಾದ ವೃತ್ತಾಂತಗಳು.

ಈ ತಿಂಗಳಲ್ಲಿ ಪರೀಕ್ಷೆಗಳ ಗಡಿಬಿಡಿಯೇ ನಮ್ಮಲ್ಲಿಯು ಮುಖ್ಯ ವರ್ತಮಾನವು. ಟ್ರೇನಿಂಗಕಾಲೇಜ ಹಾಯಸ್ಕೂಲುಗಳ ವಾರ್ಷಿಕ ಪರೀಕ್ಷೆಗಳು ೧೬ನೇ ತಾರೀಖಿನಲ್ಲಿ ಆರಂಭವಾದವು.

ಟ್ರೇನಿಂಗಕಾಲೇಜದಲ್ಲಿ ೧೧೬ ಜನ ಪರೀಕ್ಷೆಗೆ ಕೂತಿದ್ದರು. ಪರೀಕ್ಷೆಯ ನಿರ್ಣಯವು ಇನ್ನೂ ಆಗತಕ್ಕದ್ದಿರುತ್ತದೆ.

ಮುಲಖೀ ಪರೀಕ್ಷೆಯು ೨೩ನೇ ತಾರೀಖಿನಲ್ಲಿ ಆರಂಭವಾಯಿತು. ದೇಶ ಭಾಷೆಯಲ್ಲಿ ೨೫೦ ಜನರೂ ಇಂಗ್ಲಿಷದಲ್ಲಿ ೯ ಜನರೂ ಪರೀಕ್ಷೆಗೆ ಬಂದಿದ್ದರು. ಅವರಲ್ಲಿ ಮೊದಲನೇ ದಿವಸದ ಗಣಿತದ ಕಾಗದದಲ್ಲಿ ದೇಶಭಾಷೆಯವರು ೯೨ ಜನ ಇಂಗ್ಲಿಷದವರು ೫ ಜನ ನಾಪಾಸಾಗಿ ಕಡೆಯಲ್ಲಿ ೧೫೮, ೪, ಈ ಪ್ರಕಾರ ಯೆರಡೂ ಬಗೆಯ ಉಮೇದವಾರರ ಸಂಖ್ಯೆಗಳು ಉಳಿದವು. ಪರೀಕ್ಷೆಯ ನಿರ್ಣಯವು ಇನ್ನೂ ಆಗಿಲ್ಲ. ಕಡೆತನಕ ಉಳಿದವರ ಸಂಖ್ಯವನ್ನು ನೋಡಲಾಗಿ ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು ಜನ

ಲು ಪಾಸಾಗುವರೆಂದು ತೋರುತ್ತದೆ.

ಹಾಯಸ್ಕೂಲಿನಿಂದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಹೋಗತಕ್ಕವರ ಪ್ರಿಲಿಮಿನರಿ (ಅಂದರೆ ಪರೀಕ್ಷೆಗೆ ಹೋಗುವ ಯೋಗ್ಯತೆಯನ್ನು ನಿರ್ಣಯಿಸುವ) ಪರೀಕ್ಷೆಯು ಮುಂದಿನ ತಿಂಗಳಿನ ೧ನೇ ತಾರೀಖಿನಲ್ಲಿ ಆರಂಭವಾಗತಕ್ಕದ್ದದೆ.

ಮಿಶನರೀ ಶಾಲೆಗೆ ಸಹಾಯದ ಹಣ (ಗ್ರಾಂಟ್ ಇನ್ ಏಡ್) ಕೊಡುವ ಪರೀಕ್ಷೆಯೂ ಹಾಯಸ್ಕೂಲಿನಲ್ಲಿ ಸಂಬಳದ ವಿದ್ಯಾರ್ಥಿಗಳನ್ನು ತಕ್ಕೊಳ್ಳುವ ಪರೀಕ್ಷೆಯೂ ಇದೇ ಸಂಧಿಯಲ್ಲಿ ಆದವು.

* * *

ಇಲ್ಲಿಯ ವಿಕ್ಟೋರಿಯಾ ಹಾಯಸ್ಕೂಲೆಂಬ ಖಾಸಗೀ ಇಂಗ್ಲಿಷ ಶಾಲೆಗೆ ಕಳೆದ ಯೆರಡು ಮೂರು ವರ್ಷಗಳಲ್ಲಿ ಸರಕಾರದಿಂದ ಸಹಾಯದ ಹಣ ದೊರೆಯುತ್ತಿತ್ತು. ಅದು ಇನ್ನು ಮುಂದೆ ದೊರೆಯುವದು ತಟ್ಟಿಯಿತೆಂದು ತೋರುತ್ತದೆ. ಆ ಶಾಲೆಯ ಪಾಲಕರು ಕೆಳಗಿನ ಮೂರು ಇಯತ್ತೆಗಳನ್ನು ಮಾತ್ರ ತನ್ನ ಶಾಲೆಯಲ್ಲಿ ಇಟ್ಟರೆ ಅವರಿಗೆ ಸಹಾಯ ಕೊಡಬೇಕೆಂದು ವಿದ್ಯಾಖಾತೆಯ ಅಧಿಕಾರಿಗಳು ನಿರ್ಬಂಧ ಮಾಡಿ, ಸರಕಾರೀ ಹಾಯಸ್ಕೂಲಿನೊಳಗಿನ ಕೆಳಗಿನ ಮೂರು ಇಯತ್ತೆಗಳನ್ನು ತೆಗೆದಿದ್ದರು. ಆದರೆ ಒಳಗಡೆಯಲ್ಲಿ ಆ ಶಾಲೆಯವರು ೪ನೇ ೫ನೇ ಮುಂತಾದ ಇಯತ್ತೆಗಳನ್ನು ತಮ್ಮ ಶಾಲೆಯಲ್ಲಿ ಇಟ್ಟದ್ದರಿಂದ ಸರಕಾರೀ ಹಾಯಸ್ಕೂಲಿನಲ್ಲಿ ೧ನೇ ೨ನೇ ಇಯತ್ತೆಗಳನ್ನು ಇಡುವ ವಿಚಾರವು ಗೊತ್ತಾದದ್ದು ಪ್ರಸಿದ್ಧವಾಗಿದೆ. ಇದರಿಂದ ಈ ಯೆರಡೂ ಹಾಯಸ್ಕೂಲುಗಳು ಪಾಲಾ ಬಿಟ್ಟಂತೆ ಆ

ಗುತ್ತದೆ.

—○—

ಇಲ್ಲಿಯ ಹಾಯಸ್ಕೂಲಿನ ಕಾಯಿಮ ಹೆಡ್ ಮಾಸ್ತರರಾದ ರಾ. ರಾ. ಮಹಾದೇವ ವಿಷ್ಣು ಕಾಣೆ ಇವರು ಪುಣೆಗೆ ಹೋದದ್ದರಿಂದ ಆದ ವರ್ಗಾವರ್ಗಿಯಲ್ಲಿ ಬೆಳಗಾವಿಯ ಅಸಿಸ್ಟಾಂಟ ಡಿಪುಟಿಯ ಸ್ಥಳವು ತೆರವು ಬಿದ್ದಿತ್ತು. ಆ ಸ್ಥಳಕ್ಕೆ ಹುಬ್ಬಳ್ಳಿಯ ಇಂಗ್ಲಿಷ ಶಾಲೆಯಲ್ಲಿ ೧ನೇ ಅಸಿಸ್ಟಾಂಟರಾಗಿದ್ದ ಬಾಬಾ ಗರ್ದೆ ಯೆಂಬವರನ್ನು ನೇಮಿಸಿದರೆಂದು ಧಾರವಾಡ ವೃತ್ತಪತ್ರ ತಿಳಿಸುತ್ತದೆ.

—○—

ಲಿಂಗವಂತರ ವಿದ್ಯಾಭಿವೃದ್ಧಿ ಫಂಡಿಗೆ ವಂಟಮುರಿಯ ದೇಸಾಯಿಯು ೫೦೦೦ ರುಪಾಯಿ ಕೊಟ್ಟದ್ದು ಕೇಳಿ ಬಹಳ ಸಂತೋಷವಾಗುತ್ತದೆ.

—○—

ಧಾರವಾಡದಲ್ಲಿ ಶ್ರೀ ಜಗದ್ಗುರು ಶಂಕರಾಚಾರ್ಯ ಶೃಂಗೇರಿ ಯೆಂಬ ಸಂಸ್ಕೃತ ಶಾಲೆಗಾಗಿ ರಾ. ರಾ. ಗುರುನಾಥರಾವ ಘಾಟಕ ಇವರು ಸ್ವಂತ ಪ್ರಯತ್ನದಿಂದ ಈ ಹೊತ್ತಿನ ವರಿಗೆ ಸುಮಾರು ೩೭೦೦ ರುಪಾಯಿ ಕೂಡಿಸಿದ್ದಾರೆ. ಗುರುನಾಥರಾಯರು ಬೇರೆ ಯಾರ ಸಹಾಯವಿಲ್ಲದೆ ಕೇವಲ ಆರ್ಜವ ವೃತ್ತಿಯಿಂದ ಅಣೆ ಅರ್ಧಾಣೆ ವರೆಗೆ ಯಾರು ಯೆಷ್ಟು ಕೊಟ್ಟಷ್ಟು ತಕ್ಕೊಂಡು ಈ ಸಂಚಯವನ್ನು ಮಾಡಿದ್ದಾರೆ. ಇದಲ್ಲದೆ ಸಂಸ್ಕೃತ ಶಾಸ್ತ್ರಿಯ ಗುರುಗಳಿಗೆ ಇವರು ತಮ್ಮ ಕೈಯಿಂದ ತಿಂಗಳಿಗೆ ೧೦ ಹತ್ತು ರುಪಾಯಿ ಕೊಡುತ್ತಾರೆ. ಶಾಲೆಯಲ್ಲಿ ರಘು ಅಲಂಕಾರ, ನ್ಯಾಯಾ

ಸ್ತ್ರ ಮುಂತಾದ ವಿಷಯಗಳನ್ನು ಹತ್ತೆಂಟು ಜನ ವಿದ್ಯಾರ್ಥಿಗಳು ಕಲಿಯುತ್ತಾರೆ. ಅವರಲ್ಲಿ ಕೆಲವರಿಗೆ ಭೋಜನದ ಉಪಪತ್ತಿಯನ್ನು ಗುರುನಾಥರಾಯರು ಮಾಡಿಸಿ ಕೊಟ್ಟಿದ್ದಾರೆ, ಇನ್ನೂ ಕೆಲವರಿಗೆ ಮಾಡಿಸಿಕೊಡುವ ಪ್ರಯತ್ನ ನಡಿಸಿದ್ದಾರೆ. ಇದರ ಹೊರ್ತು ನಾಗಪಂಚಮಿಯಲ್ಲಿ ಪ್ರತಿ ವರ್ಷ ಆಗುವ ಸಂಸ್ಕೃತ ಭಾಷಣ ಸಮಾರಂಭಕ್ಕೆ ಗುರುನಾಥರಾಯರು ತಮ್ಮ ಕೈಯಿಂದ ನೂರಾರು ರೂಪಾಯಿ ವೆಚ್ಚ ಮಾಡುತ್ತಾರೆ. ಗುರುನಾಥರಾಯರು ದೊಡ್ಡ ಶ್ರೀಮಂತರಲ್ಲ, ಅವರಿಗೆ ಸಾವಿರಾರು ರೂಪಾಯಿಯ ಘನವಾದ ಪ್ರಾಪ್ತಿಯೂ ಇಲ್ಲ. ಹೀಗಿದ್ದು ಅವರು ಕೇವಲ ಏಕನಿಷ್ಠೆಯಿಂದ ತ್ರಿಕರಣ ಪೂರ್ವಕವಾಗಿ ನಡಿಸಿದ ಪ್ರಯತ್ನದ ಫಲವು ಇಷ್ಟು ಆಶ್ಚರ್ಯಕರವಾದದ್ದಾಗಿರುತ್ತದೆ. " ನರ ಕರೇಸೋ ನಾರಾಯನ ಭಯೆ ". ಯೆಂಬ ಹಿಂದುಸ್ಥಾನೀ ಗಾದಿಯ ನಿಜತ್ವವನ್ನು ಗುರುನಾಥರಾಯರು ಬಹು ಸರಸಾಗಿ ತೋರಿಸಿದ್ದಾರೆ. ಇಂಥಾ ಸ್ವದೇಶಾಭಿಮಾನಿಯಾದ ಗೃಹಸ್ಥರಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡುವದು ಪ್ರತಿ ಯೊಬ್ಬನ ಕರ್ತವ್ಯವಿರುತ್ತದೆಂದು ನಾವು ಹೇಳುವ ಪ್ರಯೋಜನವಿಲ್ಲ. ನಮ್ಮ ಮಾಸ್ತರ ಜನರು ತಮ್ಮ ತಮ್ಮ ಗ್ರಾಮಗಳಲ್ಲಿ ರೂಪಾಯಿ, ಅರ್ಧ ರೂಪಾಯಿಯಂತೆ ವರ್ಗಣಿಯಿಂದ ಹಣ ಕೂಡಿಸಿ ಗುರುನಾಥರಾಯರ ಕಡೆಗೆ ಕಳಿಸಿದರೆ ಅವರಿಗೆ ಬಹು ದೊಡ್ಡ ಸಹಾಯವಾಗುವದು.

—o—

ಯುನಿವರ್ಸಿಟಿಯ ಪರೀಕ್ಷೆಗಳಲ್ಲಿ ದೇಶಭಾಷೆಗಳ ಪ್ರವೇಶವಾಗುವ ಆಶೆ ಪೂರೈಸಲಿಲ್ಲೆಂದು ಹಿಂದೇ ತಿಳಿಸಿದ್ದೆವು. ಬಿ.

ಏ. ಪರೀಕ್ಷೆಯ ಅಭ್ಯಾಸವು ಇದು ವರೆಗೆ ಮೂರು ವರ್ಷಗಳಲ್ಲಿ ಮುಗಿಯುತ್ತಿತ್ತು. ಅದು ಇನ್ನು ಮುಂದೆ ನಾಲ್ಕು ವರ್ಷದ ವರೆಗೆ ನಡೆಯಬೇಕೆಂದು ನಿಯಮವಾಯಿತು. ಆದರೆ ಪರೀಕ್ಷೆಗಳು ಮೊದಲಿನಂತೆ ಮೂರೇ ಆಗತಕ್ಕವು. ಅವು ೧ನೇ ೨ನೇ, ೪ನೇ ವರ್ಷಗಳ ಕಡೆಯಲ್ಲಿ ಆಗುವವು. ಎಲ್. ಎಲ್. ಬೀ. ಪರೀಕ್ಷೆಯನ್ನು ಈ ಪೂರ್ವದಲ್ಲಿ ಕಾಲೇಜದ ಅಧಿಕಾರಿಗಳೇ ತೆಗೆದುಕೊಳ್ಳುತ್ತಿದ್ದರು. ಇನ್ನು ಮುಂದೆ ಇದಾದರೂ ಬೇರೆ ಪರೀಕ್ಷೆಗಳಂತೆ ಯುನಿವರ್ಸಿಟಿಯವರ ಮುಖಾಂತರವಾಗಿ ಆಗುವದು.

* * *

ಪಂಡಿತಾ ರಮಾಬಾಯಿಯ ಶಾರದಾಸದನದಲ್ಲಿ ಸದ್ಯಕ್ಕೆ ೧೮ ಜನ ವಿಧವೆಗಳು ವಿದ್ಯಾಭ್ಯಾಸ ಮಾಡುತ್ತಾರೆ.

* * *

ಜರ್ಮನಿಯಲ್ಲಿ ಬುಲ್ಫಿಶ್ ಯೆಂಬ ಹೆಸರಿನ ಹಕ್ಕಿಗಳಿಗೆ ಗಾಯನ ಕಲಿಸುವ ಶಾಲೆಗಳನ್ನು ಪ್ರೊಳನಡೆಯಲ್ಲಿ ಸ್ಥಾಪಿಸಿದ್ದಾರೆ. ಈ ಶಾಲೆಗಳಲ್ಲಿ ಹುಡುಗರ ಶಾಲೆಗಳಂತೆ ಇಯತ್ತೆಯ ಕ್ರಮದಿಂದ ಅಭ್ಯಾಸವು ನಡೆಯುತ್ತದೆ. ಹ್ಯಾಗಂದರೆ — ೬ರಿಂದ ೧೧ರ ವರೆಗೆ ಹಕ್ಕಿಗಳ ಪಂಜರಗಳನ್ನು ಮಟ್ಟ ಮೊದಲು ವೊಂದು ಕತ್ತಲೆಯ ಕೋಣೆಯಲ್ಲಿ ಕಟ್ಟಿ ಇಡುತ್ತಾರೆ. ಅಲ್ಲಿ ಸುಸ್ವರದ ವಾದ್ಯಗಳನ್ನು ಬಾರಿಸುವರು. ಕತ್ತ ಲ್ಲಿ ಹಕ್ಕಿಗಳು ಬೇಸತ್ತಿರುತ್ತವೆ. ಆದರಿಂದ ಅವು ವಾದ್ಯಸ್ವ ಕೇಳಿ ಆನಂದದಿಂದ ತಾವೂ ಗಾಯನ ಮಾಡ ಹತ್ತುತ್ತವೆ. ಹ ಗೆ ಸ್ವಲ್ಪ ಗಾಯನ ಕಲಿತ ಬಳಿಕ ಅವುಗಳನ್ನು ಸ್ವಲ್ಪ ಬೆ ನ ಸ್ಥಳದಲ್ಲಿ ವೊಯಿದು ಇಟ್ಟು ಮೊದಲಿಗಿಂತ ಜಲೋ

ಹಾರವನ್ನು ಅವುಗಳಿಗೆ ಹಾಕುತ್ತಾರೆ. ಅಲ್ಲಿ ಕೆಲವು ಹೆಚ್ಚಿನ ಅಭ್ಯಾಸವಾದ ಬಳಿಕ ಅಲ್ಲಿಂದ ತೆಗೆದು ಅದಕ್ಕೂ ಹೆಚ್ಚು ರಮಣೀಯವಾದ ಸ್ಥಳದಲ್ಲಿ ಅವುಗಳನ್ನು ಇಟ್ಟು ಅಭ್ಯಾಸವನ್ನು ಮುಂದಕ್ಕೆ ಸಾಗಿಸುವರು. ಈ ಪ್ರಕಾರ ಕಡೆತನಕ ಅಭ್ಯಾಸ ನಡೆಯುವದು.

* * *

ರಶಿಯನ್ ರಾಜಧಾನಿಯಾದ ಸೇಂಟಪೀಟರ್ಸಬರ್ಗದ ಶಾಲೆಗಳಲ್ಲಿ ಹಿಂದುಸ್ತಾನೀ, ಬ್ರಹ್ಮೀ, ಚಿನಯೀ, ಜಿಪಾನೀ, ಮುಂತಾದ ಏಶಿಯಾಖಂಡದ ಭಾಷೆಗಳನ್ನು ಮೊಳಗಡೆಯಲ್ಲಿ ಕಲಿಸ ಹತ್ತಿದ್ದಾರೆ.

* * *

ವಿಲಾಯತಿಯಲ್ಲಿ ಪ್ರಖ್ಯಾತ ಕವೀಂದ್ರನಾದ ಟೆನಿಸನ್ನೆಂಬವನಿಗೆ ಅವನ ಗ್ರಂಥಗಳ ಮಾರಾಟದಿಂದ ವರ್ಷಕ್ಕೆ ೮೦ ಸಾವಿರ ರೂಪಾಯಿಯು ಆದಾಯವಿರುತ್ತದೆ. ಅವನು ಈಗ ೮೦ ವರ್ಷದ ಮುದುಕನಾಗಿದ್ದಾನೆ.

* * *

Educating children.

ಬಾಲಕರನ್ನು ತಿದ್ದುವಿಕೆ

ಬಾಲಕರನ್ನು ತಿದ್ದುವಿಕೆ ಅಂದರೆ ಅವರನ್ನು ಬುದ್ಧಿವಂತರಾಗಿಯೂ, ಗುಣವಂತರಾಗಿಯೂ ಮಾಡೋಣವು; ಗುಣವೆಂಬ ಶಬ್ದದಲ್ಲಿ ೧ ನೇದ್ದು, ಶಾಲಾ,, ಗುಣ ತಿದ್ದುವಿಕೆಯಂತಲೂ, ೨ನೇದ್ದು, ಪ್ರಾಸಂಚಿಕ ಗುಣ ತಿದ್ದುವಿಕೆಯಂತಲೂ ಎರಡು ಭಾಗಗಳು.

೧ನೇದ್ದು, ಶಾಲಾಗುಣ ತಿದ್ದುವಿಕೆ

ಶಾಲಾಗುಣ ತಿದ್ದುವಿಕೆ ಎಂಬ ಭಾಗವು ಗೌರವವಾದದ್ದು ಅಂತಾ ಇಷ್ಟೇ ಹೇಳಿ ಬಿಟ್ಟರೆ ತೀರದು. ಯಾಕಂದರೆ ಒಂದು ಇಮಾರತಿಯನ್ನು ಕಟ್ಟಬೇಕಾದರೆ ಶಿಲ್ಪಿಗನು ಮೊದಲು ಭದ್ರವಾದ ಸ್ಥಳದಲ್ಲಿ ಪಾಯಾ ಹಾಕಿ ಯಾವಕಡೆಯಿಂದಾದರೂ ಸೌಳು ಶೀತಮುಂತಾದ ಇಮಾರತಿಗೆ ಬಾಧಕವಾದ ಸಂಗತಿಗಳು ಅದಕ್ಕೆ ತಗಲದ ಹಾಗೆ ನೋಡಿ ತನ್ನ ಕಟ್ಟುವಿಕೆಯನ್ನು ಆರಂಭಿಸುವಂತೆ ವಿದ್ಯಾರ್ಥಿಗಳು ಮುಂದೆ ಪ್ರಪಂಚದಲ್ಲಿ ಜನರಿಗೂ, ದೇವರಿಗೂ, ಸರಿಯಾಗಿ ನಡಕೊಂಡು ಸುಖಪಡಬೇಕಾದರೆ, ಅವರ ಗುಣಗಳು ತಿದ್ದಲ್ಪಡುವದು ಅವಶ್ಯವು. ಇದೇ ಅವರ ಮುಂದಿನ ಸುಖಕ್ಕೆ ಕಾರಣೀಭೂತವಾದದ್ದು, ಇದೇ ಅವರ ಊರ್ಜಿತ ಸ್ಥಿತಿಯ ಪಾಯಾ ಇರುತ್ತದೆಂದು ಬೇರೆ ಹೇಳುವ ಪ್ರಯೋಜನವಿಲ್ಲ. ಇದರಲ್ಲಿ ೧ನೇ ಭಾಗವಾದ ಶಾಲಾಗುಣ ತಿದ್ದುವಿಕೆಯ ವಿಷಯದಲ್ಲಿ ಬೋಧಕನು ಮುಖ್ಯವಾಗಿ ಮಾಡತಕ್ಕ ಕರ್ತವ್ಯಕರ್ಮವೇನಂದರೆ:— ಹುಡುಗರು ಶುಚಿರ್ಭೂತರಾಗಿಯೂ ಅವರು ವೇಳೆಗೆ ಸರಿಯಾಗಿ ಕ್ರಮದಿಂದ ತಮ್ಮ ನೇಮಿತ ಕೆಲಸವನ್ನು ಲಕ್ಷಪೂರ್ವಕವಾಗಿ ಮಾಡಲಿಕ್ಕೆ ಹವಣಿಸುವವರಾಗಿಯೂ, ಒಬ್ಬರಿಗೊಬ್ಬರು ಕೀಳ ಸಂಗತಿಗಳ ದೆಶೆಯಿಂದ ಜಗಳಾಡದವರಾಗಿಯೂ, ತಾವೆಲ್ಲರು ಬೇರೆ ಬೇರೆ ಕುಟುಂಬಗಳಿಗೆ ಸೇರಿದವರಲ್ಲ. ಜನರೆ ಒಂದೇ ಕುಟುಂಬಕ್ಕೆ ಸೇರಿದವರಂತೆ ಒಬ್ಬರಿಗೊಬ್ಬರು ಬಂಧು ಪ್ರೀತಿಯಿಂದಿದ್ದು ತಮ್ಮ ಕೈಲಾದ ಮಟ್ಟಿಗೆ ಸಣ್ಣ ಸಣ್ಣ ಸಹಾಯಗಳನ್ನು ಮಾಡ

ಲಿಕ್ಕೆ ಹವಣಿಸುವವರಾಗಿಯೂ, ಇರುವಂತೆ ಮಾಡುವದೇ ಮಾಸ್ತರನ ಕೆಲಸವು. ಇಂಥ ಮಾಸ್ತರನೇ ಶಾಲಾಗುಣ ತಿದ್ದಬಲ್ಲಂಥ ಬೋಧಕನು. ಅವನೇ ಶಾಲಾಗುಣ ತಿದ್ದುವಿಕೆಗೆ ಬೇಕಾದ ಯಾವತ್ತು ಉಪಾಯಗಳನ್ನು ಅರಿತವನು ಅಂತ ಹೇಳಬಹುದು.

೨ — ಪ್ರಾಪಂಚಿಕಗುಣ ತಿದ್ದುವಿಕೆಯು.

ಎರಡನೇ ಭಾಗವಾದ ಪ್ರಾಪಂಚಿಕಗುಣ ತಿದ್ದುವಿಕೆ ಎಂಬುವದು ಮೊದಲನೇ ಭಾಗಕ್ಕಿಂತ ಹೆಚ್ಚು ಗೌರವವಾದದ್ದು. ಯಾಕಂದರೆ ಹುಡುಗರು ಶಾಲೆಯಲ್ಲಿರುವಾಗ ಅವರು ಯಾವಾಗಲೂ ತಮ್ಮ ಬೋಧಕನಿಂದ ನಡಿಸಲ್ಪಡುತ್ತಾರೆ. ಅವರಿಗೆ ಆಗಾಗ್ಗೆ ಸೂಚನೆಕೊಡಲಿಕ್ಕೂ ಅವರನ್ನು ಕೆಡಕು ಮಾರ್ಗದಿಂದ ಉತ್ತಮ ಮಾರ್ಗಕ್ಕೆ ತಿರುಗಿಸಲಿಕ್ಕೂ ಸಿದ್ಧವಾಗಿ ನಡಕಟ್ಟಿಕೊಂಡು ಹಿಂದೆ ರಕ್ಷಕನಂತೆ ಬೋಧಕನು ನಿಂತಿರುತ್ತಾನೆ. ಆದರೆ "ಪ್ರಾಪಂಚಿಕಗುಣ ತಿದ್ದುವಿಕೆಯು" ಪರಿಣಾಮವೆಂಬ ನಾಟಕವು ವಿದ್ಯಾಲಯದಲ್ಲಿ ಆಗತಕ್ಕಂಥಾದ್ದಲ್ಲ, ತಮ್ಮ ಮಾಸ್ತರನ ಹಾಗು ಶಾಲೇ ಗೆಳೆಯರ ಮುಂದೆ ಆಡತಕ್ಕಂಥಾದಲ್ಲ, ಆದರೆ ಇದು ಪೃಥ್ವಿಯೆಂಬ ರಂಗಭೂಮಿಯಲ್ಲಿ ನೋಡಲಿಕ್ಕೆ ನರಂಥ ಬೇರೆಬೇರೆ ಜಾತಿಯ, ಬೇರೆಬೇರೆ ಭಾಷೆಯ, ಬೇರೆಬೇರೆ ಸಾಂಪ್ರದಾಯದ ಜನರೆದುರಿಗೆ ಪ್ರತ್ಯಕ್ಷ ಸೂತ್ರಧಾರಿಯು ಇಲ್ಲದೆ, ಬೋಧಕನಿಂದ ತಿದ್ದಲ್ಪಟ್ಟ ಗುಣಗಳೇ ಮನಸಿನಲ್ಲಿ ಸೂತ್ರಧಾರಿಯಾಗಿ ನಿಂತು, ಆ ಯಾವತ್ತು ನೋಟಕರ ಮನಸನ್ನು ರಂಜಿಸುವದು ಮಾತ್ರವಲ್ಲ; ಆದರೆ ಆ ಸೃಷ್ಟಿ, ಸ್ಥಿತಿ ಲಯಾದಿಗಳಿಗೆ ಕಾರಣೀಭೂತ

ಕ್ರಮೇಣವಾಗಿ ವಿವರಿಸ ತೊಡಗುತ್ತೇವೆ.

(ಮುಂದೆ ಸಾಗುವದು.)

Correspondence.

ಪತ್ರವ್ಯವಹಾರವು.

(೧೯೩ನೇ ಪುಟದಿಂದ ಮುಂದೆಸಾಗಿದ್ದು)

ಇಪ್ಪತ್ತೈದು ವರ್ಷದ ವಳಗೆ ೭ ಶೇರು ಭಂಗಾರ ಬೇಡುವ ದಿವಸಗಳೂ ಬರುತ್ತಿದ್ದವು; ಆದರೆ ಈಗಿನ ಜನರು ಈ ವಿಷಯಕ್ಕೆ ಮೆಚ್ಚುವದಿಲ್ಲಾದ್ದರಿಂದ ಅಂಥಾ ದಿವಸಗಳನ್ನು ನಾವು ನೋಡಲಿಕ್ಕಿಲ್ಲ. ಕೆಲವರು ಬಹಳ ಭಂಗಾರವಿಡುವ ಮನೆತನಕ್ಕೆ ಕೊಡಬೇಕೆಂದು ಹುಡಿಗೆ ದೊಡ್ಡದಾಗುವತನಕ ಯಾರಿಗೂ ಕೊಡುವದಿಲ್ಲ. ಹೀಗಾಗಿ ಹುಡಿಗೆಯು ಮೈನೆರೆಯುತೆಂದರೆ, ಬಹಿಷ್ಕಾರಕ್ಕೊಳಗಾಗಿ ಸ್ವಾಮಿಗಳಿಗೆ ನೂರಾರು ರೂಪಾಯಿ ಕೊಟ್ಟು ಶುದ್ಧವಾಗಬೇಕು. ಮೈನೆರೆತ ಹೆಣ್ಣನ್ನು ದೊಡ್ಡ ಮನೆತನಸ್ಥರು ಯಾಕೆ ತೆಗೆದುಕೊಂಡಾರು ಕಟ್ಟಕಡೆಗೆ ಪಶ್ಚಾತ್ತಾಪ ಪಟ್ಟು ಕೈಯಿಂದ ರೂಪಾಯಿ ಕೊಟ್ಟು ಬಡವನಿಗೆ ಭಂಗಾರವಿಲ್ಲದೆ ಕೊಡಬೇಕಾಗುವದು. ಪ್ರಾಯಕ್ಕೆ ಬರುವವರೆಗೆ ವಧುವಿಗೆ ವರನು, ವರನಿಗೆ ವಧುವು ಸಿಗದಕಾರಣ ಕಾಲಮಹತ್ವಕ್ಕನುಸಾರವಾಗಿ ಇನ್ನೂ ಎಷ್ಟೋ ದುರ್ಘಟ ಪ್ರಸಂಗಗಳು ಒದಗುತ್ತವೆ. ಭಂಗಾರಕ್ಕಾಗಿ ವೆಚ್ಚ ಮಾಡುವ ಹಣವನ್ನು ವ್ಯಾಪಾರ ಉದ್ದಿಮೆಗಳಲ್ಲಿ ಹಾಕಿದರೆ ಮುಂದೆ ಅದೇ ದಂಪತಿಗಳು ಸಾಯುವ ತನಕ ಸುಖ ಬಡುವದಕ್ಕೆ ಅವ್ವಿ

ಲ್ಲದಷ್ಟು ಹಣವಾಗಬಹುದು.

ಇದೇ ಸಂಬಂಧದ ವೆಚ್ಚದಿಂದ ಒಬ್ಬ ನವಾಬಸಾಹೇಬರಿಗಾದ ಸಾಲವು ಊರೊಳಗಿನ ಮನೆಗಳನ್ನು ರೈತರಿಗೆ ಮಾರಿದರೂ ತೀರಲಿಲ್ಲೆಂದು ಹೇಳುತ್ತಾರೆ.

ಉಡಿಗೆ ತೊಡಿಗೆಗಳ ವಿಷಯದಲ್ಲಿ ಕೆಲವರು ಬಹಳ ಹಣ ವೆಚ್ಚ ಮಾಡುತ್ತಾರೆ. ತಿಂಗಳಿಗೆ ಹತ್ತು ರೂಪಾಯಿ ಸಂಬಳ ದೊರಿತರೆ ಕಾಲುಚೀಲ, ಬೂಟು, ಜರದ ರುಮಾಲ ನಾಗಪುರೀ ಧೋತರ, ಮುಂತಾದವುಗಳನ್ನು ಧರಿಸಿಕೊಂಡು ತಿರುಗಾಡುವವರೆಷ್ಟೋ ಜನರುಂಟು. ಇದೂ ಅವರ ದುರ್ಭಾಗ್ಯತೆಗೆ ಮೇಲಾದ ಸಹಾಯವಾಗಿರುತ್ತದೆ.

ಕೆಲವರು ಹವ್ಯಾಸಕ್ಕೆ ಬಿದ್ದು ಬಹಳ ಹಣವನ್ನು ವೆಚ್ಚ ಮಾಡುತ್ತಾರೆ. ನಮ್ಮ ಭಾಗಾದಿಯು ಸಮಾರಂಭದಿಂದ ಲಗ್ನ ಮಾಡಿದ ಮೇಲೆ ನಾವ್ಯಾಕೆ ಬಿಡಬೇಕೆಂಬ ಹವ್ಯಾಸಕ್ಕೆ ಬಿದ್ದು ಸಾಲ ಮಾಡಿ ಲಗ್ನ ಮಾಡುವರು ಇವು ಕೈಯಲ್ಲಿ ಭಿಕ್ಷಾ ಪಾತ್ರೆ ಬರುವದರ ಮುಂಗಡೆಯು ಎಂದು ತಿಳಿಯತಕ್ಕದ್ದು.

ದುಂದುಗಾರರಾದವರು ಓಣಿಗಳ ಬಡಿವಾರದಿಂದ ಹೋಳೀಹುಂಣಿವೆ, ನಾಗರಪಂಚಮಿ ಮುಂತಾದ ಹಬ್ಬಗಳಲ್ಲಿ ವಿನಹಾಕಾರಣ ಹಣ ವೆಚ್ಚ ಮಾಡುತ್ತಾರೆ. ಒಬ್ಬನು—ಆ ಓಣಿಯವರು ಬಳ್ಳಾರೀ ಪಾತ್ರದವರನ್ನು ಕರಿಸಿದರೆ ನಾವು ಆಪವಾನಿಯವರನ್ನು ಕರಿಸುವಾ. ಅವರು ಹತ್ತು ರೂಪಾಯಿದ ಮದ್ದು ಸುಟ್ಟರೆ ನಾವು ೨೫ ರೂಪಾಯಿದ್ದು ತರಿಸುವಾ. ಅನ್ನುವನು. ಅದರೊಳಗಿನವನೊಬ್ಬ ಹೂಲಿಬಡಕನು ಆ ಓಣಿಯವರ ಮೋಸ್ತು ನೆಟ್ಟಗೆ ಮಾಡುತ್ತಾರೆಂದು ಅಂ

ದ ಕೂಡಲೇ ಇವನು ಭಂಗೀ ಸೇದುವವರಂತೆ ಸ್ಮೃತಿಗೆಟ್ಟು ಎರಡನೆಯುವರ್ಯಾರೂ ಕೊಡದಿದ್ದರೂ, ನನ್ನ ಹೊಲಮನೆಗಳನ್ನು ಒತ್ತೀ ಬಿದ್ದರೂ, ಅವರನ್ನು ದುಂದು ಮಾಡಿ ನಾಚಿಕ[illegible] ಬಡಿಸೆಂದು ಮಾತಾಡಿ ಅದರಂತೆ ಮಾಡಿದ ಬಳಿಕ, ಸನಾದಿಯುವರೂ, ಕಹಳೆಯುವರೂ, ಸಾಮಾನು ಕೊಟ್ಟ ಅಂಗಡಿಕಾರರೂ ತಮ್ಮ ತಮ್ಮ ಹಣ ಕೇಳುವದಕ್ಕೆ ಮನೆಗೆ ಎಡತಾಕಿ ಮರ್ಯಾದೆ ತೆಗೆದುಕೊಳ್ಳುವಾಗ ನಾನು ಇಂಥಾ ದುಂದುಗಾರಿಕೆಗೆ ಯಾಕೆ ಹೋಗಿದ್ದೆನೆಂದು ಚಿಂತೆ ಹತ್ತುವದು.

ಇದರಂತೆ ಎಷ್ಟೋ ಜನರು ಹೊಲಮನೆಗಳನ್ನು ಕಳಕೊಂಡಿದ್ದಾರೆ. ಆದದರಿಂದ ಮೇಲೆ ಹೇಳಿದ ಯಾವತ್ತು ಸಮಾರಂಭಗಳಲ್ಲಿ ವ್ಯರ್ಥವಾಗಿ ಹಣವನ್ನು ವೆಚ್ಚ ಮಾಡುವದನ್ನು ಬಿಟ್ಟು ಉಗುರಿನಿಂದ ಹೋಗುವದಕ್ಕೆ ಶಸ್ತ್ರ ಪ್ರಯೋಗ ಮಾಡಬಾರದೆಂಬದಾಗಿ ಮನಸಿನಲ್ಲಿ ವಿಚಾರ ಮಾಡಿ ಸ್ವಂತಯೋಗ್ಯತೆಯನ್ನನುಲಕ್ಷಿಸಿ ಮಿತದಿಂದ ದ್ರವ್ಯ ವ್ಯಯಮಾಡಬೇಕೆಂದು ಹೇಳಿ, ಲೆಕ್ಕಣಿಕೆಗೆ ವಿಶ್ರಾಂತೀ ಕೊಡುತ್ತೇನೆ.

ತಾರೀಖು ೨೯|೬|೮೯ ಇ.

—oo—

History of the Middle Ages
ಯುರೋಪದ ಮಧ್ಯಕಾಲದ ಇತಿಹಾಸವು

(೧೯೦ನೇ ಪುಟದಿಂದ ಮುಂದೆ ಸಾಗಿದ್ದು.)

ಜರ್ಮನಿಯ ೨ನೇ ಫ್ರೆಡರಿಕ ಚಕ್ರವರ್ತಿಯು ಸನ್ ೧೨೨೮ನೇ ವರ್ಷ ಕ್ರೂಸೇಡಕ್ಕೆ ಹೊರಟು ಯುದ್ಧ ಮಾಡದೆ ಚಾತುರ್ಯದಿಂದ ಈಜಿಪ್ತದ ಸುಲ್ತಾನನ ಕೈಯಿಂದ ಜರೂ

ಸಲೇಮು ಪಟ್ಟಣವನ್ನು ಬೆಥ್ಲೆಮು (ಕ್ರಿಸ್ತನ ಜನ್ಮ ಭೂಮಿ) ಮುಂತಾದ ಕೆಲವು ಗ್ರಾಮಗಳನ್ನೂ ತಕ್ಕೊಂಡನು.

ಮುಂದೆ ಸನ್ನ ೧೨೪೪ನೇ ವರ್ಷ ಖೊವಾರೆಸ್ಮಿಯರೆಂಬ ಮುಸಲ್ಮಾನರು ಮೊಗಲರಿಂದ ಓಡಿಸಲ್ಪಟ್ಟು, ಪಶ್ಚಿಮಕ್ಕೆ ಹೋಗಿ, ಸಿರಿಯ ಪಾಲೆಸ್ತಾಯಿನ, ಪ್ರಾಂತಗಳನ್ನೂ ಹಿಡುಕೊಂಡರು. ಆ ಕಾರಣ ಮುಂದೆ ಫ್ರಾನ್ಸದ ಸೆಂತಲೂಯಿಯು ಬೇನೆಯಿಂದ ಅರಪ್ರಗೆಟ್ಟ ಸಮಯದಲ್ಲಿ ಕ್ರೂಸೇಡಕ್ಕೆ ಹೊರಡುವ ಹರಿಕೆಯು ಹೊತ್ತು, ಮೇಲಾದ ಸೈನ್ಯದೊಡನೆ ಪೂರ್ವಕ್ಕೆ ಹೊರಟನು. ಅವನು ಮೊದಲು ಇಜಿಪ್ತದೇಶವನ್ನು ತಕ್ಕೊಳ್ಳ ಹೋಗಿ, ದಾಮೀತಾ ಪಟ್ಟಣದಲ್ಲಿಳಿದು ಅದನ್ನು ತಕ್ಕೊಂಡನು. ಆದರೆ ಬೇನೆಯಿಂದ ಅವನ ದಂಡಿನಲ್ಲಿ ಬಹು ಜನರು ಸತ್ತು, ಕಡೆಯಲ್ಲಿ ಮಾಸೂರೆಂಬಲ್ಲಿ ಫ್ರೆಡರಿಕನು ಅಪಜಯ ಪಟ್ಟು ದೊಡ್ಡದೊಡ್ಡ ಸರದಾರರೊಂದಿಗೆ ಸೆರೆಯವನಾಗಿ ಬಹಳ ಹಣಕೊಟ್ಟು ಸ್ವದೇಶಕ್ಕೆ ಹೋದನು, ೧೨೫೦.

ಮುಂದೆ ಇಪ್ಪತ್ತು ವರ್ಷಗಳ ನಂತರ ಈ ಅರಸನು ಮತ್ತೊಮ್ಮೆ ಕ್ರೂಸೇಡಕ್ಕೆ, ಹೊರಟು, ತ್ಯೂನಿಸ್ ಪಟ್ಟಣದ ಅರಸನು ಕ್ರಿಸ್ತಿಯನ್ನನಾಗುತ್ತಾನೆಂದು ಕೇಳಿ ಅಲ್ಲಿಗೆ ಹೋದನು. ಆದರೆ ಅದು ಸುಳ್ಳೆಂದು ತಿಳಿದ ಬಳಿಕ ಲೂಯಿಯು ಆ ಪಟ್ಟಣಕ್ಕೆ ಮುತ್ತಿಗೆ ಹಾಕುವ ಪ್ರಯತ್ನದಲ್ಲಿ ಜ್ವರದಿಂದ ತೀರಿದನು, ೧೨೭೦—ಇವನ ತರುವಾಯ ಕ್ರೂಸೇಡದ ಆವೇಶವು ಕ್ರಿಸ್ತೀ ಜನರಲ್ಲಿ ಕುಂದಿತು. ಇಂಗ್ಲಂಡದ ಎಡ್ವರ್ಡ ರಾಜನು ಮುಂದೆ ಕೆಲವು ಉದ್ಯೋಗ ನಡಿಸಿದಾಗ್ಯೂ ಕ್ರಿಸ್ತೀಯನ್ನರ ಸಾಮರ್ಥ್ಯವು ಉತ್ತರೋತ್ತರ ಕಡಮೆಯಾಗಿ, ಅವರ ವಶದಲ್ಲಿ ಕಡೆಗೆ ವುಳಿದ ಏಕರ ಪಟ್ಟಣವನ್ನು ಸಹ ಇಜಿಪ್ತದ ಸು

ಲ್ತಾನನು ತಕ್ಕೊಂಡನು, ೧೨೯೧—

ಈ ಕ್ರೂಸೇಡದ ಕಾಳಗಗಳು ಆರಂಭದಲ್ಲಿ ಕೇವಲ ಧರ್ಮಮೂಢತೆಯ ಅವಿಚಾರಗಳಿಂದ ವುಂಟಾಗಿ, ಯುರೋಪದವರಿಗೂ, ಏಶಿಯಾದವರಿಗೂ ಅಪರಿಮಿತ ಕೇಡಗಳಾದವು. ಆದಾಗ್ಯೂ ಅವುಗಳಿಂದ ಹಲವು ಲಾಭಗಳಾದರೂ ಫಲಿತವಾದವು. ಅವೇನಂದರೆ — ಯುರೋಪದ ಜನರು ಅಜ್ಞಾನದ ನಿದ್ರೆಯಿಂದ ಯೆಚ್ಚರ ಪಟ್ಟರು; ಅವರ ವಿಚಾರಗಳು ಹಬ್ಬಿಗೊಂಡವು; ಸೌಂದರ್ಯಕ್ಕೂ ಸುಧಾರಣೆಗೂ ಜನರಲ್ಲಿ ಮೆಚ್ಚಿಕೆಯುಂಟಾಯಿತು, ಜಲ ಪರ್ಯಟಣವೂ, ವ್ಯಾಪಾರವೂ ಬೆಳೆದು, ದೊಡ್ಡ ಪಟ್ಟಣಗಳಲ್ಲಿ ಸಂಪತ್ತು ಹೆಚ್ಚಾಯಿತು; ಜಮೀದಾರರ ಸಾಮರ್ಥ್ಯವೂ ಸಾಮರ್ಥ್ಯವೂ ಸ್ವಾತಂತ್ರ್ಯವೂ, ಸಂಪತ್ತಿಯೂ ಹುಂಮೆಟ್ಟಿ, ಅರಸರ ಅಧಿಕಾರವು ವರ್ಧಿಸಿತು. ಕ್ರೂಸೇಡಗಳ ಕಾಲದಲ್ಲಿ ಏಶಿಯಾದವರಿಗೂ ಯುರೋಪದವರಿಗೂ ವ್ಯವಹಾರವು ಯೆಷ್ಟು ಬೆಳೆಯಿತೆಂಬದು ಇನ್ನೂ ಚನ್ನಾಗಿ ತಿಳಿದಿಲ್ಲ.

ಮೊಗಲರು — ಜಂಗಿಸಖಾನನು.

ಈ ಕುಲದವರ ಪ್ರಾಚೀನ ಕಾಲದ ದೇಶದಲ್ಲಿ ೩೦೦೦ ಕುಟುಂಬಗಳಿಗೊಡೆಯನಾದವನೊಬ್ಬ ದೊಡ್ಡ ಖಾನನು ಸೆಲಿಂಗವೆಂಬ ಹೊಳೆಯ ಧಡದಲ್ಲಿ ತೀರಿದಾಗ ಅವನ ಮಗ ತೆಮುಜಿನ್ನನೆಂಬವನು ಚಿಕ್ಕ ಬಾಲಕನಿದ್ದನು. ಆ ಹುಡುಗನು ದೊಡ್ಡವನಾಗುವಷ್ಟರೊಳಗೆ ಯೆಲ್ಲ ಕುಟುಂಬಗಳು ಅವನನ್ನು ಬಿಟ್ಟು ಹೋಗಿ ಕಡೆಯಲ್ಲಿ ೧೩ ಕುಟುಂಬಗಳು ಮಾತ್ರ ಅವನ ಅನುಯಾಯಿಗಳಾಗಿ ಉಳಿದವು. ತೆಮುಜಿನ್ನನು ತನ್ನ ಕಾ

ರ್ಯದಿಂದಲೂ, ಔದಾರ್ಯದಿಂದಲೂ ಬುದ್ಧಿಯಿಂದಲೂ, ಪ್ರಖ್ಯಾತನಾದನು. ಸೆಲಿಂಗ ಹೊಳೆಯ ದಡದಲ್ಲಿ ವೊಂದಾನೊಂದು ದಿವಸ ಆ ಕುಲದವರ ಸಭೆ ಕೂಡಿದಾಗ ಅವರೊಳಗಿನ ಬುದ್ಧಿವಂತನೊಬ್ಬನು ಯೆದ್ದು ನಿಂತು, ತನ್ನ ಸ್ವಪ್ನದಲ್ಲಿ ದೇವರು ವೊಡ್ಡೋಲಗದೊಳಗೆ ಸಿಂಹಾಸನಾರೂಢನಾಗಿ ತೆಮುಂಜಿಯು ಜಂಗಿಸಖಾನನು (ಬಹು ದೊಡ್ಡ ಖಾನನು) ಆಗ ತಕ್ಕವನೆಂದು ವಿಧಿಸಿದ್ದು ತಾನು ಕೇಳಿದನಂತೆ ಹೇಳಿದನು. ಅದನ್ನು ಮೊಗಲರೆಲ್ಲರು ಕೈಯೆತ್ತಿ ತಮ್ಮ ಜಂಗಿಸ ಖಾನನು ಹೋದಲ್ಲಿ ಅವನನ್ನು ಹಿಂಬಾಲಿಸುವೆವೆಂದು ಆಣೆಯಿಟ್ಟುಕೊಂಡರು, ೧೨೦೬.

(ಮುಂದೆ ಸಾಗುವದು)

— ooo —

ಶಾಲಾಪತ್ರಕವು

ಪುಸ್ತಕ ೨೪)   (ಸಂಚಿಕೆ ೧೦

(ಅಕ್ಟೋಬರ ೧೮೮೯)

Intellectual Powers, Judjement and Immagination.

ಬುದ್ಧಿಶಕ್ತಿ, ನಿರ್ಣಯ, ಕಲ್ಪನೆ

(೨೭೨ನೇ ಪುಟದಿಂದ ಮುಂದೆ ಸಾಗಿದ್ದು)

ಉಪಯೋಗದ ಸಂಬಂಧದಿಂದ ಕೆಲವೊಂದು ಪಾಠವು ನಡಿ ಾಗ ಅದರಂಥ ಉಪಯೋಗವುಳ್ಳ ಬೇರೆ ಒಡವೆಗಳನ್ನು ತ ಮಟ್ಟಿಗೆ ವಿವರಿಸುವದು ಒಳ್ಳೇದು. ಇದ್ದಲಿಯು ಸುಡುವ ಸಕ್ಕೆ ಬರುತ್ತದೆಂದು ಹೇಳುವ ಸಂದರ್ಭದಲ್ಲಿ ಕಟ್ಟಿಗೆ, ಪ್ಪಡಿ, ಕುಳ್ಳು, ಇವುಗಳನ್ನು ಉಲ್ಲೇಖಿಸ ಬೇಕು. ಆದರೆ ವುಗಳ ಬೇರೆ ಗುಣಧರ್ಮಾದಿಗಳ ಗೊಡವಿಗೆ ಯೆಷ್ಟುಮಾ ವೂ ಹೋಗಕೂಡದು. ಹೀಗೆ ಉಪಯೋಗ ಸಾಮ್ಯವನ್ನು ರಿಸುವ ಪಾಠವು ಸಾಮಾನ್ಯಜ್ಞಾನದ ಪಾಠವಾಗುತ್ತದೆ.

೩ ಒಡವೇಪಾಠಗಳ ಮೂರನೇ ನಿಯಮವೇನೆಂದರೆ ಅವು ಳಿಂದ ಹುಡುಗರ ಕಲ್ಪಕಶಕ್ತಿಯು ಬೆಳಿಯಲಿಕ್ಕೆ ಬೇಕು. ಈ ಕ್ತಿಯು ಅರಿಯದಂಥ ಪ್ರಾಣಿಗಳು, ದರ್ಶನೀಯ ಸ್ಥಳಗ , ಇಂಥವುಗಳ ಆಕಲನ ಮಾಡಿಕೊಳ್ಳಲಿಕ್ಕೆ ವಿಶೇಷವಾಗಿ ಕಾಗುತ್ತದೆ.

೪ ನೇ ನಿಯಮವೇನಂದರೆ, ಉದಾಹರಣಗಳ ಅಥವಾ ವ್ಕಿ ಜ್ಞಾನದ ಸಂಗ್ರಹವು ತಕ್ಕಮಟ್ಟಿಗೆ ಆದಹೊರ್ತು ಶಾಲ

ಷ್ಟು ಕ್ರಮವನ್ನು ಆರಂಭಿಸಬಾರದು. ತುಲನೆಯನ್ನು ಮಾಡಬೇಕಾಗಿದ್ದಾಗ ಅದನ್ನು ಕಟ್ಟಿಗೆ ಹಚ್ಚಿ ಪೂರ್ಣವಾಗಿ ಉದ್ದೇಶವನ್ನು ಕೊನೆಗಾಣಿಸುವಹಾಗೆ ಮಾಡಲಿಕ್ಕೆ ಬೇಕು. ಅಂದರೆ ಅದರಲ್ಲಿ ವರ್ಗವನ್ನು ಇಲ್ಲವೆ ಜಾತಿಯನ್ನು ರಚಿಸುವ ಉದ್ದೇಶವಿರಲಿಕ್ಕೆ ಬೇಕು. ಬೇರೆ ಬೇರೆ ವ್ಯಕ್ತಿಗಳಲ್ಲಿಯ ಅವಾಂತರ ಭೇದಗಳನ್ನು ಲಕ್ಷಿಸುವ ಪ್ರಯೋಜನವಿಲ್ಲ.

ಈ ಪ್ರಕಾರ ಒಡವೇಪಾಠಗಳ ತತ್ವಗಳಿರುತ್ತವೆ. ಇನ್ನು ಈ ಯಾವತ್ತು ತತ್ವಗಳಿಗೂ ಸೂಚನೆಗಳಿಗೂ ಹೊಂದುವಂಥಾದೊಂದು ಉದಾಹರಣೆಯನ್ನು ತಕ್ಕೊಳ್ಳುವ.

ಒಂಟೆಯು — ಮೊದಲು ಹುಡುಗರು ಒಳಿತಾಗಿ ಅರಿತಂಥ ಪಶುಗಳ ಪಾಠಗಳನ್ನು ಅವರಿಗೆ ಹೇಳಿದ ಬಳಿಕ ಈ ಪಾಠವು ಬರತಕ್ಕದ್ದು.

ಒಂಟೆಯನ್ನು ಹುಡುಗರು ನೋಡಿರದಿದ್ದರೆ, ಅದರದೊಂದು ಚಿತ್ರವನ್ನು ಅವರಮುಂದಿಡು.

೧ ಇದು ಭಾರಹೊರುವ ಪಶು — ಇದರಿಂದ ವ್ಯಾಪಾರವು ಗುಣದಂತೆ ಪ್ರಯೋಗಿಸಲ್ಪಡುತ್ತದೆಂಬದನ್ನು ಮರೆಯಬೇಡ. [ಇಂಥವೆಷ್ಟೋ ಉದಾಹರಣೆಗಳಾದ ಬಳಿಕ ಪ್ರಾಣಿಗಳ ವ್ಯಾಪಾರಗಳು ಒಡವೆಗಳ ಗುಣಗಳಂತೆ ನಮ್ಮ ಕೆಲಸಕ್ಕೆ ಬರುತ್ತವೆಂಬದನ್ನು ತಿಳಿಸಿ ಕೊಡಬೇಕಾಗಿರುತ್ತದೆ.]

ಭಾರಹೊರುವಂಥ ಬೇರೆ ಪ್ರಾಣಿಗಳ ಉಲ್ಲೇಖವನ್ನು ಸ್ವಲ್ಪ ಶಬ್ದಗಳಲ್ಲಿ ಮಾಡು; ಬಹಳ ಬೆಳಸ ಬೇಡ.

ಒಂಟೆಗಳು ಇರುವಸ್ಥಳಕ್ಕೆ (ಕಾಳು ಬೈಲುಗಳಿಗೆ) ತಕ್ಕಂತೆ ಅವುಗಳ ಶರೀರರಚನೆ ಇರುತ್ತದೆಂಬ ಮಾತು ಈ ಪಾಠದಲ್ಲಿ ಮುಖ್ಯಕೌತುಕದ ಸಂಗತಿಯಾಗಿರುತ್ತದೆ. ಆದರಿಂದ

ನಿಂನ್ನಮುಂದೆ ಯೆರಡು ವಿಷಯಗಳು, ಸ್ಥಳ, ರಚನೆ, ಒಮ್ಮೇಲೆ ಬಂದವು. ಬೇಕಾದದ್ದನ್ನು ಮೊದಲು ತಕ್ಕೊಂಡರೂ ಅಡ್ಡಿ ಇಲ್ಲ. ಮೊದಲು ಸ್ಥಳತಕ್ಕೊಳ್ಳುವ.

೨ ಹಾಳು ಬೈಲು— ಆಫ್ರಿಕ, ಅರಬಸ್ತಾನ ಮುಂತಾದ ಕಡೆಯಲ್ಲಿ; ನೀರು ಇಲ್ಲ; ವೃಕ್ಷಜಾತಿಗಳಿಲ್ಲ; ನೆಲದ ಮೇಲೆ ಉಸುಬು ಕಲ್ಲುಹಾಸಿಗೆ; ಕ್ವಚಿತ್ತಾಗಿ ದೂರದೂರ ನೀರಿನ ಒರತೆಗಳೂ ಅವುಗಳ ಸುತ್ತುಮುತ್ತು ವೃಕ್ಷಗಳೂ; ಒಂಟೆಗೆ ಸಂಬಂಧಿಸುವ ಸಂಗತಿಗಳಿಷ್ಟೇ; ಇಷ್ಟಕ್ಕಿಂತ ಹೆಚ್ಚು ಯೇನಾದರೂ ಹೇಳಿದರೆ ವಿಷಯಾಂತರವಾಗುತ್ತದೆ.

೩ ಆಕಾರ, ರಚನೆ— ಆಕಾರವು ಚಿತ್ರದಲ್ಲಿ, ಇಲ್ಲವೆ ಪ್ರತ್ಯಕ್ಷ ಕಾಣುತ್ತದೆ. ಬಾಹ್ಯರಚನೆ— (೧) ಕಾಲು ಇಗ್ಗೊರಸು, ಹರವು, ಮಿದು, ಉಸುಬಿಗೆ ತಕ್ಕಂಥವು. (೨) ಕಣ್ಣು ಮೇಲ್ಗಡೆಯಲ್ಲಿ, ಗಾಳಿಯಲ್ಲಿ, ಹಾರಾಡುವ ಜಿಣುಗು ಮಳಲು ಕಣ್ಣೊಳಗೆ ಬೀಳದಂತೆ (೩) ಮೊಣಕಾಲಿಗೂ ತೊಡೆಯ ಹಿಂಬದಿಯಲ್ಲಿಯೂ ದಡ್ಡು, ಭಾರಹೊರಬೇಕಾಗಿ ಕೂಡ್ರುವಾಗ ನೆಲಕ್ಕೆ ಊರುವಂತೆ (೪) ಡುಬ್ಬದ ಮೇಲಿನ ಗೂನು, (ಇದು ಬಾಹ್ಯರಚನೆಯಲ್ಲಿ ಯೆಲ್ಲಕ್ಕೂ ಹೆಚ್ಚು ಕೌತುಕದ್ದು), ಗೂನಿನಿಂದ ಕುರೂಪ; ಆದರೆ ಕೂಳು ನೀರು ದೊರೆಯದಿದ್ದಾಗ ಇದು ಕರಗಿ ಒಂಟೆಯ ಪೋಷಣವಾಗುತ್ತದೆಂಬ ಉಪಯೋಗ. ಅಂತರ ರಚನೆ— ಕೂಳು ನೀರಿನ ಸಂಗ್ರಹವಾಗುವಂತೆ ಅನ್ನಾಶಯದ ರಚನೆ; ಮೆಲಕಾಡಿಸುವ ಪಶುಗಳ ಉಲ್ಲೇಖ ತಕ್ಕಷ್ಟೇ. ಆದರೆ ಯೆತ್ತು, ಆಕಳುಗಳಿಗಿಂತ ಒಂಟೆಯ ಅನ್ನಾಶಯದಲ್ಲಿ ಬಹಳ ಹೆಚ್ಚು ಕೂಳು ನೀರು ಸಂಗ್ರಹಿಸಲಿಕ್ಕೆ ಸ್ಥಳವಿರುತ್ತದೆ. ಆದರಿಂದ [illegible]

ದು ಯೆಷ್ಟೋ ದಿವಸಗಳವರೆಗೆ ಉಪವಾಸ ಕಾಲಕ್ಷೇಪ ಮಾಡಿ ಹಾಳು ಬೈಲಲ್ಲಿ ಇರುವದು.

ಇದು ಒಡವೇ ಪಾತಗಳ ಮೇಲಾದ ಮಾದರಿ ಇರುತ್ತದೆ.

— ೦ —

Education and Improvement.
ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ರಾ. ರಾ. ಮಾಧವರಾವ ಕಾಣೆ ಇವರನ್ನು ಪುಣೇ ಹಾಯಸ್ಕೂಲಿನಿಂದ ಬೇರೊಂದು ಬದಲೀ ಕೆಲಸಕ್ಕೆ ಇಷ್ಟರೊಳಗೆ ನೇಮಿಸತಕ್ಕವರಿರುವ ಕಾರಣ ಅವರು ಧಾರವಾಡ ಹಾಯಸ್ಕೂಲಿನಿಂದ ಹೋದ ಕಾರಣದಿಂದ ಈ ದಕ್ಷಿಣ ಭಾಗದಲ್ಲಿ ಆದ ನೇಮಣೂಕುಗಳು ಇನ್ನು ಕೆಲವು ದಿವಸಗಳ ವರೆಗೆ ನಡಿಯುವವು.

— ೦ —

ಹಾಯಸ್ಕೂಲು ಟ್ರೇನಿಂಗ ಕಾಲೇಜಗಳಿಗೆ ಈ ತಿಂಗಳಿನ ೧೯ನೇ ತಾರೀಖಿನಲ್ಲಿ ಸುಟಿಯಾಯಿತು. ಇವೆರಡೂ ಮುಂದಿನ ತಿಂಗಳಿನ ೭ನೇ ೮ನೇ ತಾರೀಖುಗಳಲ್ಲಿ ತೆರೆಯುವವು.

— ೦ —

ಮೆ. ಇನ್‌ಸ್ಪೆಕ್ಟರ ಸಾಹೇಬರು ಪುಣೆಯ ಕಡೆಯಿಂದ ಇಷ್ಟರೊಳಗೆ ಬರತಕ್ಕವರಿದ್ದಾರೆ.

— ೦ —

ಲಿಂಗವಂತ ವಿದ್ಯಾರ್ಥಿಗಳಿಗೆ ಸಂಸ್ಕೃತ ಕಲಿಸುವದಕ್ಕಾಗಿ

ಮುದೀಹಾಳದಲ್ಲಿ ಹೊಸ ಶಾಲೆಯಾದದ್ದನ್ನು ಹಿಂದೆ ತಿಳಿಸಿದ್ದೇವೆ. ಆ ಶಾಲೆ ಮುರಿದದ್ದರಿಂದ ಈಗ ಬೇರೆ ಪ್ರಕಾರವಾಗಿ ಸವರೀ ವಿದ್ಯಾರ್ಥಿಗಳಿಗೆ ಸಂಸ್ಕೃತ ಕಲಿಸುವ ಕ್ರಮ ನಡದದೆ.

—o—

ಇಲ್ಲಿಯ ಹಾಯಸ್ಕೂಲಿನಲ್ಲಿ ಶಾಸ್ತ್ರೀಯ ವಿಷಯ ಕಲಿಸುವ ಶಿಕ್ಷಕರಾದ ರಾ. ರಾ. ರಾಮಚಂದ್ರ ಕೇಶವ ಆಳಿಕರ ಇವರನ್ನು ಪುಣೆಯ ಟ್ರೇನಿಂಗ ಕಾಲೇಜದಲ್ಲಿ ನೇಮಿಸಿದ ವರ್ತಮಾನವದೆ.

ಹಾಯಸ್ಕೂಲಿನ ಕನ್ನಡ ಶಿಕ್ಷಕರಾದ ಶಿದ್ರಾಮಯ್ಯಯೆಂಬವರು ಈ ತಿಂಗಳಿನ ೨೮ನೇ ತಾರೀಖಿನಲ್ಲಿ ಮರಣಹೊಂದಿದರು.

ಈ ಪ್ರಕಾರ ಹಾಯಸ್ಕೂಲಿನಲ್ಲಿ ತೆರವಾದ ಯೆರಡು ಸ್ಥಳಗಳಿಗೆ ಹೊಸ ನೇಮಣೂಕಗಳು ಆಗತಕ್ಕವಿರುತ್ತವೆ.

—o—

ಮ್ಯುನಸಿಪಲ ಶಾಲೆಗಳ ಸಂಬಂಧದಿಂದ ಸರಕಾರದವರು ಪ್ರೊಳಗಡೆಯಲ್ಲಿ ಮಾಡಿದ ನಿಯಮವನ್ನು ಅನುಸರಿಸಿ ಈ ತಿಂಗಳಿನ ೨೭ನೇ ತಾರೀಖಿನಲ್ಲಿ ಧಾರವಾಡದೊಳಗಿನ ಮ್ಯುನಸಿಪಲ ಶಾಲೆಗಳ ಮಾಸ್ತರರೂ ಅಸಿಸ್ಟಾಂಟ ಮಾಸ್ತರರೂ ಒತ್ತಟ್ಟಿಗೆ ಕೂಡಿದ್ದರು. ಆ ಸಭೆಯಲ್ಲಿ ರಾ. ಬ. ಸಬ್ಬಜಿತಜರೂ, ರಾ. ಸಾ. ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ, ರಾ. ಸಾ. ಡೆಪ್ಯುಟೀ ಇನಸ್ಪೆಕ್ಟರರೂ, ರಾ. ಸಾ. ಸ್ಕೂಲಬೋರ್ಡಿನ ಅಧ್ಯಕ್ಷರೂ, ಮುಂತಾದವರು ಹಾಜರಿದ್ದರು. ಮಾಸ್ತರ ಜನರ ಕೆಲಸದಲ್ಲಿ ಬರುವ ವಿಘ್ನಗಳ ಬಗ್ಗೆ, ಮುಂದೆ ಕೆಲಸದಲ್ಲಿ ಆಗತಕ್ಕ ಸುಧಾರಣೆಗ ಬಗ್ಗೆ, ನೀತಿಶಿಕ್ಷಣದಬಗ್ಗೆ ವಿಚಾರಗಳು ನಡದವು.

ಪ್ರತಿವೊಂದು ಜಿಲ್ಲೆಯೊಳಗಿದ್ದ ಲೋಕಲ್ ಫಂಡ ಶಾಲೆಗಳ ಮಾಸ್ತರರಸಭೆಗಳು ಇದೇಪ್ರಕಾರ ವರ್ಷಕ್ಕೊಮ್ಮೆ ಕೂಡುತ್ತ ಹೋದರೆ ಬಹಳ ಹಿತವಾಗುವದೆಂದು ತೋರುತ್ತದೆ.

* * *

ಪುಣೇಪ್ರಾಂತದವನೊಬ್ಬ ಮಾಸ್ತರನು ಜ್ಞಾನಪ್ರಕಾಶದಲ್ಲಿ ಪ್ರಸಿದ್ಧಿಸಿದ್ದೊಂದು ಪತ್ರದಲ್ಲಿ ಬರೆದದ್ದರ ಅಭಿಪ್ರಾಯವೇನಂದರೆ—ದುರ್ಗುಣಗಳ ಕ್ಷಯವಾಗಿ ಜನರ ಸದ್ಗುಣಗಳು ಬೆಳೆಯಬೇಕಾಗಿ ಸರಕಾರದವರು ಶಾಲೆಗಳನ್ನು ಊರೂರಿಗೆ ಸ್ಥಾಪಿಸುತ್ತ ನಡಿಸಿದ್ದಾರೆ, ಆದರೆ ಪರಿಣಾಮವು ವಿಪರೀತವಾಗುತ್ತ ನಡಿದದೆ, ಪರರಿಗೆ ಕೇಡು ಬಗೆದು ತಮ್ಮ ಹಿತವನ್ನು ಸಾಧಿಸಿಕೊಳ್ಳುವ ವೊಲವು ಜನರೊಳಗೆ ಬೆಳೆಯುತ್ತ ನಡಿದದೆ; ಇದು ಅಧಿಕಾರಿಗಳ ತಪ್ಪು ಇರುತ್ತದೆ. ಇತ್ಯಾದಿ

* * *

ಪುಣೆಯ ಮ್ಯುನಿಸಿಪಾಲಿಟಿಯವರು ತಮ್ಮ ಶಾಲೆಗಳಲ್ಲಿ ಗಂಡುಹುಡಗರಿಗೂ ಹೆಣ್ಣುಮಕ್ಕಳಿಗೂ ಹೊಲೆಮಾದಿಗರ ಶಾಲೆಗಳಲ್ಲಿಯ ಹುಡುಗರಿಗೂ ಸ್ಕಾಲರಶಿಪ್ ಸಂಬಳಗಳನ್ನು ಕೊಡುವ ಆಲೋಚನೆಯನ್ನು ನಡಿಸಿದ್ದಾರೆ.

* * *

ಜಪಾನದೊಳಗಿನ ತೋಕಿಯೋ ಯೆಂಬಲ್ಲಿಯ ಯುನಿವರ್ಸಿಟಿಯಲ್ಲಿ ವೊಬ್ಬ ಇಂಗ್ಲಿಷ ವಿದ್ವಾಂಸನು ಜಪಾನೀ ವಿದ್ಯಾರ್ಥಿಗಳಿಗೆ ಜಪಾನೀ ಭಾಷೆಯನ್ನು ಕಲಿಸುವ ಪ್ರೊಫೇಸರನಾಗಿ ಯೆಷ್ಟೋ ವರ್ಷ ಕೆಲಸ ಮಾಡುತ್ತಾನೆ. ಇದು ಆಶ್ಚರ್ಯವಲ್ಲವೇ!

* * *

ಪುಣೆ ಮುಂಬಯಿಗಳಲ್ಲಿ ಅನ್ಯ ಜಾತಿಗಳ ಜನರು ವಿಶೇಷವಾಗಿ ಮಹಾರಾಷ್ಟ್ರ ಕುಲದ ವರು ಬ್ರಾಹ್ಮಣರ ವಿರೋಧಿಗಳಾಗಿ ಅವರನ್ನು ಬಹಳ ಜರಿಯು ಹತ್ತಿದ್ದಾರೆ. ಜೋತಿಬಾ ಗಣಫುಲೆಯೆಂಬ ಮಹಾರಾಷ್ಟ್ರನು ಈ ಜನರ ಮುಖ್ಯಸ್ಥನಾಗಿದ್ದಾನೆ. ಇವನು ಬ್ರಾಹ್ಮಣರನ್ನು ನಿಂದಿಸುವಕ್ಕಾಗಿಯೇ ವೊಂದು ವರ್ತಮಾನಪತ್ರವನ್ನು ಸ್ಥಾಪಿಸಿದ್ದಾನೆ. ಓಣಿಗಳಲ್ಲಿಯೂ ಬೀದಿಗಳಲ್ಲಿಯೂ ನಿಂತು ಅನ್ಯಜಾತಿಯು ಬ್ರಾಹ್ಮಣರನ್ನು ಬೈಯು ಹತ್ತಿದ್ದಾರೆ. ಇವರು ಬ್ರಾಹ್ಮಣರ ಮೇಲೆ ಹೊರಿಸುವ ಮುಖ್ಯ ಆರೋಪವೇನಂದರೆ, ಬ್ರಾಹ್ಮಣರು ಬುನಾದಿಯಿಂದ ವಿದ್ಯವನ್ನು ತಮಗೆ ಕಲಿಸದೆ ಮುಚ್ಚಿಟ್ಟುಕೊಂಡರು! ಮುಖ್ಯ ರಾಜ್ಯಾಧಿಕಾರಿಗಳೇ ಬ್ರಾಹ್ಮಣರನ್ನು ದ್ವೇಷಿಸಹತ್ತಿದಬಳಿಕ ಹೊಲೆ ಮಾದಿಗರು ಸಹ ಬ್ರಾಹ್ಮಣರನ್ನು ನಿದಿಸಿದರೂ ಆಶ್ಚರ್ಯವಲ್ಲ.

—o—

ಫ್ರಾನ್ಸದೇಶದ ಪಾರ್ಲಿಮೆಂಟಿನಲ್ಲಿ ಪ್ರವೇಶಿಸಲಿಕ್ಕೆ ಆ ದೇಶದ ಹೆಂಗಸರು ಬಹಳ ಪ್ರಯತ್ನ ನಡಿಸಿದ್ದರು. ಆದರೆ ಹೆಂಗಸರನ್ನು ಆ ಸಭೆಯಲ್ಲಿ ತಕ್ಕೊಳ್ಳಕೂಡದೆಂದು ಬಹುಜನರ ಮತವಿರುವದರಿಂದ ಆ ಹೆಂಗಸರ ಪ್ರಯತ್ನವು ನಿಷ್ಫಲವಾಯಿತು. ಆದರೆ ಅಮೇರಿಕದ ಹೆಂಗಸರು ರಾಜ್ಯಕಾರಭಾರದಲ್ಲಿ ಬೇಗ ಸೇರುವರೆಂದು ತೋರುತ್ತದೆ. ಅಷ್ಟಾದ ಮೇಲೆ ಕಡೆಯು ಹೋರೆ ಯುದ್ಧ ವೊಂದೇ ಉಳಿಯುವದು. ಅದರೊಳಗೂ ಹೆಂಗಸರು ಕಾಲು ಹಾಕಿದರೆಂದರೆ, ಗಂಡಸರು ಬಳೆ ಇಟ್ಟುಕೊಳ್ಳುವ ಮಾರ್ಗಕ್ಕೆ ಹತ್ತುವರು.

—o—

ವಿದ್ಯುಲ್ಲತೆಯ ದೀಪಗಳು ವಿಲಾಯತಿಯಲ್ಲಿ ವೊಂದೊಂದು ಪೆನ್ನಿಗೆ (ಅಂದರೆ ಸುಮಾರು ೧ ಆಣೆಗೆ) ದೊರೆಯುತ್ತಿದ್ದಾವೆ. ಈ ದೀಪದ ಬೆಳಕು ೫ ಮೇಣಬತ್ತಿಗಳ ಬೆಳಕಿನಷ್ಟು ಇರುತ್ತದೆ, ಮತ್ತೂ ಇದು ಅರ್ಧತಾಸು ಏಕಪ್ರಕಾರವಾಗಿ ಉರಿಯುತ್ತದೆ.

—೦೦೦—

ಮೈಸೂರ ಸಂಸ್ಥಾನದಲ್ಲಿ ವೊಳಗಡೆಯಲ್ಲಿ ದೊರಿದ ಚಿನ್ನದ ಖಣಿಗಳು ಯುರೋಪಿಯನ್ ವ್ಯಾಪಾರಸ್ಥರ ಕೈಸೇರಿರುತ್ತವಷ್ಟೇ. ಆ ಖಣಿಗಳ ಬಾಡಿಗೆ ಮೈಸೂರ ಸಂಸ್ಥಾನಕ್ಕೆ ಸನ್ ೧೮೮೭ರಲ್ಲಿ ೩೩೪೩೩ ರುಪಾಯಿ, ಸನ್ ೧೮೮೮ರಲ್ಲಿ ೧೦೮೫೨೫ ರುಪಾಯಿ ದೊರಿದವು; ನಡಿಯುವ ವರ್ಷದ ಕೊನೆಯಲ್ಲಿ ೨ ಲಕ್ಷರುಪಾಯಿ ದೊರಿಯುವದೊಂದು ಅಂದಾಜು ಇರುತ್ತದೆ ಈ ಖಣಿಗಳಲ್ಲಿ ದೊರಿದ ಚಿನ್ನದ ಮೇಲೆ ನೂರರಲ್ಲಿ ೫ ರುಪಾಯಿಯಂತೆ ಮೈಸೂರ ಸಂಸ್ಥಾನಕ್ಕೆ ತೆರಿಗೆ ಕೊಡಬೇಕೆಂದು ಕರಾರು ಇರುತ್ತದೆ. ಇದರಿಂದ ಆ ಖಣಿಗಳನ್ನು ತೆರಿಗೆಗೆ ತಕ್ಕೊಂಡ ಕಂಪನಿಗಳಿಗೆ ಇದುವರೆಗೆ ಸುಮಾರು ೧೭೦೦೦೦೦೦ ರೂಪಾಯಿ ಬೆಲೆಬಾಳುವಷ್ಟು ಚಿನ್ನವು ದೊರೆತೆಂದು ಸಿದ್ಧವಾಗುತ್ತದೆ. ಇಷ್ಟು ಸಂಪತ್ತು ಪರದೇಶಕ್ಕೆ ಹೋಗಿ ಇದಕ್ಕೆ ಬದಲಾಗಿ ಪೆಟ್ಟಿಗೆ ೩೪೦೦೦೦ ರೂಪಾಯಿ ಮೈಸೂರಿನ ಧೊರೆಗೆ ದೊರಿದದ್ದು ಬಹು ಆಶ್ಚರ್ಯವಲ್ಲವೇ?

—೦೦೦—

ಹೆಸರಾದ ತಾತ್ಯಾಭಿಲ್ಲನನ್ನು ಹೋಳಕರ ಸರಕಾರದವರು ಹಿಡಿದದ್ದರಿಂದ ಜಬಲಪುರದಲ್ಲಿ ಅವನ ಚೌಕಶಿಯು ನಡಿದಿ

ತ್ತು. ಆ ಚೌಕಶಿಯಲ್ಲಿ ಅವನಿಗೆ ಮರಣದ ಶಿಕ್ಷೆಯಾಯಿತೆಂದು ವರ್ತಮಾನಪತ್ರಗಳಿಂದ ತಿಳಿಯುತ್ತದೆ.

—ooo—

ರಶಿಯಾ ದೇಶದಲ್ಲಿ ಯಾತನೆ ಪಡುವಂಥ ಬೇನೆಯವರನ್ನು ಆ ಯಾತನೆಯಿಂದ ಬಿಡಿಸುವದಕ್ಕೋಸ್ಕರವಾಗಿ ಕೊಲ್ಲುವ ನಡಾವಳಿ ಇರುತ್ತದೆಂತೆ!!

—ooo—

ಇರಾಣದ ಶಹನ ಬಳಿಯಲ್ಲಿ ರತ್ನಗಳ ಸಂಗ್ರಹ ವಿದ್ದಷ್ಟು ಬೇರೆ ಯಾವ ದೇಶದಲ್ಲಿಯೂ ಇಲ್ಲವೆಂದು ಹೇಳುತ್ತಾರೆ. ಕೋಳಿಯ ತತ್ತಿಯಷ್ಟು ದೊಡ್ಡದೊಂದು ಮಾಣಿಕವೂ, ಆರು ಲಕ್ಷ ರೂಪಾಯಿ ಬೆಲೆ ಬಾಳುವಂಥ ದೊಂದು ಮುತ್ತೂ ಆ ಬಾದಶಹನ ಬಳಿಯಲ್ಲಿ ಉಂಟು. ಇವಲ್ಲದೆ "ತಸಲ್ಮಾ" ಯೆಂಬದೊಂದು ರತ್ನವಿರುತ್ತದೆ. ಅದರಲ್ಲಿ ಅಲೌಕಿಕ ಗುಣಗಳುಂಟೆಂತಲೂ, ಭೂಮಿಯ ಮೇಲಿನಯಾವತ್ತು ರತ್ನಗಳಿಗಿಂತ ಅದರ ಬೆಲೆಯು ಬಹಳ ಹೆಚ್ಚುಂಟೆಂತಲೂ ಆ ಬಾದಶಹನ ನಂಬಿಗೆಯುಂಟು.

—ooo—

ಮುಂಬಯೀ ಹೈಕೋರ್ಟಿನಲ್ಲಿ ಹೆಸರಾದ ಬಾರಿಷ್ಟರರಾಗಿದ್ದ ಆನರೇಬಲ್ ಕಾಶೀನಾಥ ತ್ರಿಂಬಕ ತೆಲಂಗ ಇವರನ್ನು ಆ ಹೈಕೋರ್ಟಿನ ಜಡಜರಾಗಿ ನೇಮಿಸಿದರು. ಆದರೆ ಅವರಿಗೆ ಮೊದಲಿನ ಜಡಜರ ಸಂಬಳದ ಯೆರಡು ತೃತೀಯಾಂಶದಷ್ಟು ಮಾತ್ರ ಸಂಬಳವು ದೊರಿಯುವದೆಂದು ಕೇಳುತ್ತೇವೆ.

—ooo—

ಇಂಗ್ಲಂಡದ ಯುವರಾಜರಾದ ಪ್ರಿನ್ಸ ಆಫ ವೇಲ್ಸಯೆಂಬವರ ಪುತ್ರರಾದ ಪ್ರಿನ್ಸ ವಿಕ್ಟರಯವರು ಮುಂದಿನ ತಿಂಗಳ

ಲಿ ಈ ದೇಶಕ್ಕೆ ಬರತಕ್ಕವರಿದ್ದಾರೆ. ಅವರ ಸನ್ಮಾನಾರ್ಥವಾಗಿ ದೊಡ್ಡದೊಡ್ಡ ಪಟ್ಟಣಗಳಲ್ಲಿ ಬಹಳ ಸಮಾರಂಭದ ಉದ್ಯೋಗವು ನಡೆದಿರುತ್ತದೆ.

—ooo—

Notices.

ನೋಟೀಸು.

ವಿಜಾಪೂರ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ ಮಾಸ್ತರಂಗೆ ತಿಳಿಯ ಪಡಿಸುವದಕ್ಕಾಗಿ ಪ್ರಸಿದ್ಧಿಸುವದೇನಂದರೆ:—

(೧) ಇಂಡೀ ತಾ|| ಚಡಚಣ ಇಲ್ಲಿಯ ಹೆಡ್ಡ ಮಾಸ್ತರರಾದ ಲಕ್ಷ್ಮಣ ನಾರಾಯಣ ಆಶ್ರಿತ ಇವರು ಪೋಷ್ಟಿನ ಕೆಲಸದಲ್ಲಿ ದಗಲಬಾಜಿ ಮಾಡುತ್ತಿದ್ದರೆಂಬ ಬಗ್ಗೆ ಪಕ್ಕಾ ಸಾಬಿತು ಬಂದದರಿಂದ ಅವರ ಪಗಾರ ೨೦ ಇದ್ದದ್ದು ೧೮ ಮಾಡಿದ್ದಲ್ಲದೇ ಅವಂಗೆ ದೊರಿಯುತ್ತಿರುವ ೪ ರೂಪಾಯಿ ಪೋಷ್ಟ ಸಂಬಂಧದ ಅಲೋವೆನಸ ಸಹ ಮುಣಗಿ ಹೋಯಿತು. ಈಗ ಅವರು ಇಂಡೀ ತಾ|| ಅಗರಖೇಡ ಸಾಲಿಯ ಮೇಲೆ ಹೆಡ್ಡ ಮಾಸ್ತರರಿರುತ್ತಾರೆ.

(೨) ವಿಜಾಪೂರ ತಾ|| ಮಮದಾಪೂರ ಇಲ್ಲಿಯ ಮಾಸ್ತರರಾದ ರಾ|| ವಾಸುದೇವ ಮಹಾದೇವ ವೈದ್ಯ ಇವರು ಮೇಲೆ ರಾ|| ಆಶ್ರಿತ ಮಾಡಿದಂಥ ಅಪರಾಧವನ್ನು ಮಾಡಿದ್ದರಿಂದ ಅವಂಗೆ ದೊರಿಯುತ್ತಿದ್ದ ೨೨ ಯಿಂದ ೨೦ ರೂಪಾಯಿ ಪಗಾರ ಮಾಡಿ ಬಾಗೇವಾಡಿ ತಾ|| ಮಸಗೋಳ ಸಾಲಿಗೆ ವರ್ಗ ಮಾಡಿರುತ್ತದೆ. ಅವಂಗೆ ದೊರಿಯುತ್ತಿರುವ ಪೋಷ್ಟಲ ಅಲೋವೆನಸ ೪ ರೂ|| ಮುಣಗಿದವು.

(೧) ಬಾಗೇವಾಡಿ ಕನ್ನಡ ಸಾಲಿಯ ಹೆಡ್ಡ ಮಾಸ್ತರರಾದ ರಾ|| ಬಾಳಕೃಷ್ಣ ರಘುನಾಥ ಇವರು ೬ನೇ ಎತ್ತೆಕ್ಕೆ ಶಿದ್ಧಾಂತ ಕಲಿಸದೇ ಇದ್ದದ್ದಕ್ಕಾಗಿ ಅವರನ್ನು ಸರೀ ಪಗಾರದ ಮೇಲೆ ವಿಜಾಪೂರ ತಾ|| ಬಬಲೇಶ್ವರ ಸಾಲಿಗೆ ವರ್ಗ ಮಾಡಿತು.

(೨) ಶಿಂದಿಗಿ ತಾ|| ದೇವರಹಿಪ್ಪರಗಿ ಸಾಲಿಯ ಮಾಸ್ತರರಾದ ರಾ|| ಅಂಣಾಜಿ ಆನಂದರಾವ ಇವರು ಸಾದೀಲವಾರ ಖರ್ಚು ಮಾಡೋದರಲ್ಲಿ ಗೈರ ರೀತಿಯಿಂದ ನಡೆದದಕ್ಕಾಗಿ ಅವರ ೨೫ ರೂಪಾಯಿ ಪಗಾರ ಇದ್ದದ್ದು ೨೪ ರೂಪಾಯಿ ಮಾಡಿದೆ.

(೩) ಬಾದಾಮಿ ಕನ್ನಡ ಸಾಲಿಯ ಮಾಸ್ತರರಾದ ರಾ|| ನಾರಾಯಣ ಶಿವಾಜಿ ದೇಶಪಾಂಡೆ ಇವರು ಮಾ|| ಅ|| ಡೆಪ್ಯೂಟಿ ಯಜ್ಞೇಶ್ವರ ವೆಂಕಾಜಿ ಜೋಶಿ ಇವರಿಗೆ ೨೫ ರೂಪಾಯಿ ಸಾಲಾ ಕೊಟ್ಟು ಆ ಸಾಲಾ ವಸೂಲ ಮಾಡುವದರ ದಶಿಂದಾ ತಾ||ನ ಪಗಾರ ಬರವಡೆ ಶಿಪಾಯಿಯನ್ನು ಅವರ ಹಿಂದೆ ತಗಾದೀ ಹಚ್ಚೋದಕ್ಕೆ ಕಳುಹಿಸಿದರು. ಅವನಿಗೆ ಅವರ ಪತ್ತೆ ಹಚ್ಚಲಿಕ್ಕೆ ೧೫ ದಿವಸಗಳು ಹತ್ತಿದವು. ಅವರಿಗೆ ಪಗಾರ ಬರವಣಿ ಕೆಲಸ ತಪಕೂಪ ಇತ್ತು. ಹಾಗು ಕೇಳಿದಾಗ ಮಾಸ್ತರರು ಖರೇ ಮಜಕೂರು ಹೇಳಲಿಲ್ಲ.

(೪) ತಾ|| ಶಿಪಾಯಿ, ಅವನ ಹೆಂಡತಿ, ವ ಮಗಾ ಇವರನ್ನ ಮನಿಯ ಒಚ್ಚಲ ಮೋರಿ ಬಳಸಲಿಕ್ಕೆ ವ ಕಟ್ಟಿಗಿ, ಪತ್ರಾವಳಿ, ತರಸಲಿಕ್ಕೆ ಹಚ್ಚಿದ್ದರು.

(೫) ಶಿಪಾಯಿಯನ್ನು ಘರಗುತ್ತೀ ಛತ್ರದ ಚೀಲಗಳನ್ನು ರೇಲ್ವೆ ಸ್ಟೇಶನದಿಂದ ತರಸಲಿಕ್ಕೆ ಕಳಸಿಲ್ಲ ಎಂಬ

ಮಾತು ಸಿದ್ಧ ಪಡಿಸೋದಕ್ಕೆ ಗಾಡಿಯವನ ಕಡೆಯಿಂದ ಹಿಂದಿನ ತಾರೀಖು ಹಾಕಿ ಪಾವತಿ ಬರಿಸಿಕೊಂಡಿದ್ದು ಹಾಜರ ಮಾಡಿದರು.

ಈ ಮೇಲೆ ನಮೂದಿಸಿದ ಕಾರ್ಯಗಳನ್ನು ಮಾಡಿದ್ದಕ್ಕೆ ಅವರ ಪಗಾರ ೩೫ ಇದ್ದದ್ದು ೨೨ ಮಾಡಿ, ಶಿಂದಿಗಿ ತಾ॥ ಕೋರವಾರ ಸಾಲಿಗೆ ನೇಮಿಸಿರುತ್ತದೆ. ಈ ಪ್ರಕಾರ ಆದ್ದರಿಂದ ಬುಕ್ಕಡೀಪೋದ ಉತ್ಪನ್ನ ಸಹ ಮುಣಗಿತು.

(೬) ಹಿರೇಮುರಾಳ ಮುದ್ದೆಬಿಹಾಳ ತಾ॥ ಇಲ್ಲಿಯ ಮಾಸ್ತರರಾದ ಗುರುಬಸಪ್ಪಾ ಗಿರಿಯಪ್ಪ ಇವರು ರಜೆ ಇಲ್ಲದೇ ೧೫।೨೦ ದಿವಸ ಸಮೀಪವಿರುವ ತಂಬು ಊರಿಗೆ ಹಾಗು ಅಕ್ಕನ ಊರಿಗೆ ಹೋಗಿ ಕೂತುಕೊಂಡದ್ದರಿಂದ ಅವರ ಪಗಾರ ೯ ರಿಂದ ೬ ಮಾಡಿ ಕುಂಟೋಜಿಯಲ್ಲಿ ಅಸಿಸ್ಟಂಟರಾಗಿ ಮಾಡಿತು.

(೭) ಬಾಗೇವಾಡಿ ತಾ॥ ನರಸಲಗಿ ಮಾಸ್ತರರಾದ ಹಣಮಂತ ಗುರಪ್ಪಾ ಇವರು ಹೋದ ವರ್ಷ ಏನೂ ಕೆಲಸ ಮಾಡದೇ ಇರುವದರಿಂದ ಅವರಿಗೆ ಪಗಾರವಿಲ್ಲದೇ ಒಂದು ವರ್ಷದ ರಜೆ ಕೊಟ್ಟಿರುತ್ತದೆ.

(೮) ಬಾಗೇವಾಡಿ ತಾ॥ ಉಕ್ಕಲಿ ಹೆಡ್ಡ ಮಾಸ್ತರರಾದ ರಾ॥ ವಿಷ್ಣು ಕೃಷ್ಣ ಜರಿಮಲಿ ಇವರು ಖೊಟ್ಟಿ ಹಾಜರಿಯನ್ನು ತುಂಬಿದ್ದರಿಂದಲೂ, ಸಾಲೀ ಕೆಲಸ ವೇಳೆ ವೇಳೆಕ್ಕೆ ಮಾಡದೇ ಇದ್ದದರಿಂದಲೂ, ಅವರಿಗೆ ಸರೀ ಪಗಾರದ ಮೇಲೆ ವಿಜಾಪೂರ ತಾ॥ ಸಾರವಾಡಕ್ಕೆ ಒಳಗಡೆ ವರ್ಗ ಮಾಡಲ್ಪಟ್ಟಿತು. ಈ ಪ್ರಕಾರ ಮಾಡೋಣದರಿಂದ ಅವರ ಷ್ಟೇಷ್ಟಲ ಆಲೋಚನಸ ಮುಣಗಿದ್ದವು. ಅವರು ಈಗ ಪ್ರ

ನಃ ಸಾರವಾಡದಲ್ಲೂ ೨೦ ಹುಡುಗರ ಹೆಸರುಗಳು ೩ ತಿಂಗಳಕಿಂತ ಹೆಚ್ಚು ಮುದ್ದತು ಪರಿಯಂತರ ಕೋಡಿಗೆ ವಿರುದ್ಧವಾಗಿ ಹಜರೀ ಮೇಲೆ ಇಟ್ಟದ್ದರಿಂದ ಅವರ ೨೫ ರೂಪಾಯಿ ಪಗಾರವನ್ನು ಕಡಿಮೆ ಮಾಡಿ ೨೨ ರೂಪಾಯಿ ಪಗಾರ ಮಾಡಲ್ಪಟ್ಟಿತು.

(೯) ವಿಜಾಪುರ ತಾ|| ತೊರವೀ ಮಾಸ್ತರರಾದ ಬಾಳಾಜಿ ಅಣ್ಣಾಜಿ ಶಾಪೂರ ಇವರು ಖೊಟ್ಟಿ ಹಾಜರೀ ತುಂಬಿದ್ದರಿಂದ ಹಾಗೂ ಕೋಡಿನ ನಿಯಮಗಳಿಗೆ ವಿರುದ್ಧವಾಗಿ ಹುಡುಗರ ಹೆಸರುಗಳು ಹಾಜರೀ ಮೇಲೆ ಇಟ್ಟದ್ದರಿಂದ ಅವರ ಪಗಾರ ೨೦ ಇದ್ದದ್ದು ೧೮ ಮಾಡಿ ಬಾಗೇವಾಡಿ ತಾ|| ಚಿಮ್ಮಲಗೀ ಸಾಲಿಗೆ ವರ್ಗ ಮಾಡಿತು.

(೧೦) ಇಂಡೀ ಸಾಲಿಯ ಹೆಡ್ಡ ಮಾಸ್ತರರಾದ ರಾ|| ನಾರಾಯಣ ಅನಂತ ಜೋಶಿ ಇವರು ಬುಕ್ಕ ಡಿಪೋದ ಹಣ ಬಹಳ ದಿವಸ ಭರಣಾ ಮಾಡದೇ ಇಟ್ಟುಕೊಂಡದ್ದರಿಂದಲೂ, ಅಶಿಷ್ಟಂಟ ಮಾಸ್ತರರಿಗೆ ಫೀ ಭರ್ತಿ ಮಾಡುವದಕ್ಕೆ ಸತ್ತಾಯಿ ಮಾಡಿದ್ದರಿಂದಲೂ, ಖೋಟಿ ಹುಡುಗರ ಹೆಸರು ದಾಖಲ ಮಾಡಿದ್ದರಿಂದಲೂ, ಅವರ ಪಗಾರ ೨೦ ರಿಂದ ೧೯ ರೂಪಾಯಿ ಮಾಡಿರುತ್ತದೆ.

(೧೧) ಸಿಂದಗಿ ತಾ|| ಚಿಕ್ಕನಾಳ ಸಾಲೀ ಮಾಸ್ತರರಾದ ರಾ|| ನಾರಾಯಣ ಬಾಜೀರಾವ ಇವರು ಬಗರ ರಜೇದಿಂದ ನಿಜಾಮ ಇಲಾಖೆಕ್ಕೆ ಕಲಸದ ದಶಿಂದ ಹೋಗಿ ಅಲ್ಲಿ ಕೆಲಸ ದೊರೆಯದ್ದರಿಂದ ಕಾಶಿಗೆ ಹೊರಟು ಹೋಗಿ ತಿರಿಗಿ ಬಾರದ್ದರಿಂದಲೂ ಅವರ ಪಗಾರ ೧೪ ರೂಪಾಯಿ ಇದ್ದದ್ದು ೧೧ ರೂಪಾಯಿ ಮಾಡಿ ಬಾಗೇವಾಡಿ ೧ನೇ ಅಶಿ

ಷ್ಟಂಟರನ್ನು ಮಾಡಿರುತ್ತದೆ.

(೧೨) ವಿಜಾಪೂರ ತಾ॥ ಹೊನ್ನವಾಡ ಸಾಲೀ ಅಸಿಷ್ಟಂಟರಾದ ಭೀಮಾಜಿ ಗುರುರಾವ ಇವರು ಸ್ತ್ರೀ ಸಂಬಂಧದ ದುರ್ನಡತೆಯಿಂದ ಯೇಕದಂ ಹೇಳದೇ ಕೇಳದೇ ಸಾಲೀ ಬಿಟ್ಟು ಓಡಿ ಹೋದದರಿಂದ ಅವರನ್ನು ಬರತರ್ಫ ಮಾಡೋಣವಾಗಿದೆ.

ಮೇಲೆ ಬರೆದ ಶಿಕ್ಷೆಗಳೆಲ್ಲಾ ಮೆ॥ ಎಂ। ಇನಸ್ಪೇಕ್ಟರ ಸಾ॥ ಬಾ॥ ರವರ ಹುಕುಮಗಳ ಮೇಲಿಂದಲೂ, ವ ಮಂಜೂರೀ ಮೇಲಿಂದಲೂ, ಆಗಿರುತ್ತವೆ. ಕಾರಣ ಯಾವತ್ತು ಮಾಸ್ತರ ವ ಅಸಿಷ್ಟಂಟರು ಮೇಲೆ ಬರೆದ ಶಿಕ್ಷೆಗಳನ್ನು ಓದಿಕೊಂಡು ಜಾಗ್ರತಿಯಿಂದ ನಡೆಯಬೇಕು. ಕೆಟ್ಟ ಕೆಲಸ ಮಾಡಿದವರಿಗೆ ಶಿಕ್ಷೆ ವಿಧಿಸಲ್ಪಡುತ್ತದಂತಲ್ಲ, ಆದರೆ ಈ ವರ್ಷ ಚಂನಾಗಿ ಕೆಲಸ ಮಾಡಿದ ಪುಷ್ಕಳ ಮಂದಿ ಮಾಸ್ತರರಿಗೆ ಬಡತೀ ದೊರಕಿರುತ್ತದೆ. ಆದ್ದರಿಂದ ತಂಮ ನುಕಸಾನ ಆಗಬಾರದೆಂಬವರು ಕೆಟ್ಟ ನಡತೆಯಿಂದ ನಡೆಯಬಾರದು. ಬಡತೀ ಆಗಬೇಕೆಂಬವರು ಮನಸಿಗೆ ಅಂಜಿ ತಂಮ ತಂಮ ಕರ್ತವ್ಯ ಕರ್ಮವಂನು ಚಂನಾಗಿ ಬಜಾಯಿಸಬೇಕು.

ತಿಳಿಯುವದು ತಾ॥ ೧೮ನೇ ಮಾಹೆ ಆಗಟಂಬರ
ಸನ ೧೮೮೯ ಇಸವಿ.

S. R. Savadi.
ಅಗ॥ ಡಿ। ಎ। ಇನಸ್ಪೇಕ್ಟರ ಜಿಲ್ಲಾ
ವಿಜಾಪೂರ.

Educating children.

ಬಾಲಕರನ್ನು ತಿದ್ದುವಿಕೆ.

೧ನೇದು ಶಿಕ್ಷಕನ ಮಾದರಿ.

ದೇವರು ಮನುಷ್ಯನಿಗೆ ಕೊಟ್ಟ ಅನೇಕ ಗುಣಗಳಲ್ಲಿ "ನೋಡಿ ಮಾಡುವ ಗುಣವು" ಹೆಚ್ಚಿನದು. ಈ ಗುಣವನ್ನು ದೇವರು ಮನುಷ್ಯನಿಗೆ ಕೊಡದಿದ್ದರೆ, ಅವನು ಇಷ್ಟು ಬುದ್ಧಿವಂತನೂ, ಇಷ್ಟು ಪೂರ್ಣನೂ, ಎಂದಿಗೂ ಅನ್ನಿಸಿಕೊಳ್ಳುತ್ತಿದ್ದಿಲ್ಲ. ತಂದೆಯು ಮಾಡುವದನ್ನು ನೋಡಿ ಮಗನು ಅದರಂತೆ ಮಾಡಲಿಕ್ಕೆ ಕಲಿಯುತ್ತಾನೆ. ತಂದೆಯು ಬೆಳಗ್ಗೆ ಎದ್ದು ಮುಖಪ್ರಕ್ಷಾಳನಾದಿ ಕೃತ್ಯಗಳನ್ನು ತೀರಿಸಿಕೊಂಡು ಪುಸ್ತಕವನ್ನು ಓದುತ್ತ ಕೂಡ್ರುವದನ್ನು ನೋಡುತ್ತಿದ್ದ ಮಗನು ತಾನೂ ಒಂದು ಪುಸ್ತಕವನ್ನು ತೆಗೆದುಕೊಂಡು ಏನೇನೋ ಸುಳ್ಳು ಸುಳ್ಳು ಓದುತ್ತ ತಂದೆಯು ಎದುರಿಗೆ ಕೂ ಇಂಥ ಉದಾಹರಣೆಗಳನ್ನು ನಾವು ಬಹಳ ಸಾರೆ ನೋಡುತ್ತೇವೆ. ಅವದರಿಂದ ತಂದೆಯ ಗುಣಗಳು ಎಂಥವೋ ಅಂಥ ಗುಣಗಳು ಮಗನಲ್ಲಿ ಬೇಗನೆ ಸೇರುವದಕ್ಕೆ ಕಾರಣವಾಗುತ್ತದೆ. ಅದೇಪ್ರಕಾರ ಬೋಧಕನ ಗುಣಗಳು ವಿದ್ಯಾರ್ಥಿಗಳಲ್ಲಿ ತೀವ್ರವಾಗಿ ಸೇರುತ್ತವೆ. ಕಾರಣ ಬೋಧಕನು ತನ್ನ ಮಾದರಿಯಿಂದ ಅಂದರೆ ತನ್ನ ಆಚರಣೆಗಳೆಂಬ ಕಿತ್ತೆಯಿಂದ ವಿದ್ಯಾರ್ಥಿಗಳನ್ನು ತಿದ್ದಬೇಕು. ತಾನು ಯಾವಪ್ರಕಾರ ಬುದ್ಧಿ ಹೇಳುತ್ತಾನೋ ಅದೇಪ್ರಕಾರ ತಾನು ನಡೆಯುವವನಾಗಿರಬೇಕು. ಅಂದರೆ ಅವನ ಬೋಧನೆಗಳಿಗೆ ಇಮ್ಮಡಿ ಬಲ ಬಂದು ವಿದ್ಯಾರ್ಥಿಗಳು ಅದನ್ನು ಪೂರ್ಣವಾಗಿ ಹಿಂಬಾಲಿಸುತ್ತಾರೆ

ನುಡಿಯಂತೆ ನಡೆ ಇಲ್ಲದವನ ವರ್ಚಸ್ಸು ಎಂದಿಗೂ ಬೀಳಲಾರದು ಇವರಮೇಲಿಂದ ಕೆಲವು ಸಿದ್ಧಾಂತಗಳು ಹೊರಡುತ್ತವೆ ಅವು ಯಾವವೆಂದರೆ:—

೧ ಮಾಸ್ತರನು ತನ್ನ ವಿದ್ಯಾರ್ಥಿಗಳು ಎಂಥವರು ಆಗಿರಬೇಕೆಂದು ಅಪೇಕ್ಷಿಸುತ್ತಾನೋ, ಅಂಥವನೇ ತಾನಾಗಿರಬೇಕು.

೨ ತನ್ನ ವಿದ್ಯಾರ್ಥಿಗಳು ಏನು ಮಾಡಬೇಕೆಂದು ಆಶಿಸುತ್ತಾನೋ, ಅದನ್ನೇ ತಾನು ಮಾಡುತ್ತಿರಬೇಕು.

೩ ವಿದ್ಯಾರ್ಥಿಗಳು ಏನು ಬಿಡಬೇಕೆಂದು ಬಯಸುತ್ತಾನೋ ಅದನ್ನು ತಾನು ಬಿಟ್ಟವನಾಗಿರಬೇಕು. ವರ್ಗದಲ್ಲಿ ಏನಾದರೂ ಒಂದು ತಪ್ಪಾಯಿತೆಂದು ಕಂಡು ಬಂದರೆ, ಆ ತಪ್ಪಿಗೆ ತಾನು ಎಷ್ಟು ಪಾಲುಗಾರನು, ತನ್ನ ವಿದ್ಯಾರ್ಥಿಗಳು ಎಷ್ಟು ಪಾಲುಗಾರರು, ಎಂಬುವದನ್ನು ಚನ್ನಾಗಿ ವಿಚಾರ ಮಾಡಿ ಆಮೇಲೆ ವಿದ್ಯಾರ್ಥಿಗಳ ತಪ್ಪು ಇದ್ದರೆ ಅವರಿಗೆ ಮನಗಾಣಿಸಿ ಕೊಟ್ಟು ಶಿಕ್ಷೆ ಮಾಡಬೇಕು. ಒಂದುವೇಳೆ ಶಿಕ್ಷಕನದೇ ತಪ್ಪು ಇದ್ದರೆ ಇನ್ನೊಂದಾವರ್ತಿ ಆಪ್ರಕಾರ ಆಗದಂತೆ ಬಹು ಎಚ್ಚರಿಕೆಯಿಂದ ಇರಬೇಕು. ಇನ್ನೊಂದು ಮಹತ್ವದ ಸಂಗತಿಯನ್ನು ಮನಸಿನಲ್ಲಿಡತಕ್ಕದ್ದು. ಅದೇನಂದರೆ:—ಮನುಷ್ಯನು ಎಷ್ಟೇ ವಿಚಾರವಂತನಾಗಲಿ, ಎಷ್ಟೇ ಜಾಣನಾಗಲಿ, ಅವನ ವಿಚಾರಗಳೂ ಶಹಣೆತನಗಳೂ ಅಲ್ಪವಾದವುಗಳು; ಒಮ್ಮೊಮ್ಮೆ ಅನ್ಯಾಯ ಮಾಡಲಿಕ್ಕೆ ಪಾತ್ರವಾದವುಗಳೂ ದೂಷಣಾರ್ಹವಾದವುಗಳೂ ಎಂದು ತಿಳಕೊಳ್ಳಬೇಕು. ಬೋಧಕನು ತನ್ನ ಕೆಲಸ ನಡಿಸುವಾಗ ಪರಮೇಶ್ವರನನ್ನು ಕುರಿತು ದೇವರೇ ನೀನೇ ಸರ್ವಜ್ಞನು; ನೀನೇ ಎಲ್ಲರ ಮನಸ್ಸನ್ನು ತಿಳಿದವನು, ನಾನು ವಿಚಾರ ಶೂನ್ಯನು, ಅರಿಯದವನು. ಆದ್ದರಿಂ

ಥ ನನ್ನ ಕೆಲಸದಲ್ಲಿ ನೀನೇ ಸಾನಿಧ್ಯನಾಗಿ ನಿಂತು ನನ್ನ ಕೆಲಸವನ್ನು ನೆರವೇರಿಸು; ನಿನ್ನ ಹೊರ್ತು ನನಗೆ ಮಾರ್ಗ ತೋರಿಸುವವರು ಯಾರೂ ಇಲ್ಲವೆಂದು ಆತನನ್ನು ಮನಃಪೂರ್ವಕವಾಗಿ ಪ್ರಾರ್ಥಿಸಿ ಬೋಧಕನು ತನ್ನ ಕೆಲಸವನ್ನು ನಡಿಸಬೇಕು. ಅಂದರೆ ಇಂಥಾ ಬೋಧಕನಿಂದ ಬಹಳ ಮಾಡಿ ಅನುಚಿತ ಕೃತ್ಯಗಳು ಸಂಭವಿಸಲಾರವೆಂದು ನಮ್ಮ ಅಭಿಪ್ರಾಯ ಉಂಟು.

೨-ಒಳ್ಳೇ ರೀತಿಯಿಂದ ಬುದ್ಧಿ ಕಲಿಸುವದು.

ಒಳ್ಳೇ ರೀತಿಯಿಂದ ಬುದ್ಧಿ ಕಲಿಸಬೇಕು ಎಂಬುವ ವಾಕ್ಯದಲ್ಲಿ ವಿದ್ಯಾರ್ಥಿಗಳಿಗೆ, ಮಾಸ್ತರನ ಮೇಲೆ ಹಾಗು ತಮ್ಮತಮ್ಮ ಪಾಠಗಳ ಮೇಲೆ ಪ್ರೀತಿ ಹುಟ್ಟುವಂತೆಯೂ ಅವರು ತಮ್ಮ ಕೆಲಸವನ್ನು ಮನಮುಟ್ಟಿ ಮಾಡುವಂತೆಯೂ ಒಬ್ಬರಿಗೊಬ್ಬರು ಸಹಾಯ ಮಾಡುವಂತೆಯೂ ಬುದ್ಧಿಗಲಿಸಬೇಕು, ಎಂಬುವದು ವ್ಯಕ್ತವಾಗುತ್ತದೆ. ಬೋಧಕನು ನಿರ್ವಂಚನೆಯಿಂದಲೂ ತನ್ನ ಕೆಲಸವನ್ನು ದಕ್ಷತೆಯಿಂದಲೂ ಮನಮುಟ್ಟಿ ನಡಿಸಿದರೆ, ಮೇಲೆ ಹೇಳಿದ ಎಲ್ಲ ಗುಣಗಳು ತಮ್ಮಷ್ಟಕ್ಕೆ ತಾವೇ ಹುಡುಗರಲ್ಲಿ ಹುಟ್ಟುವವು.

೩-ಬುದ್ಧಿ ಹೇಳುವದು

ಬೋಧಕನು ಬುದ್ಧಿ ಹೇಳುವ ಮಾತುಗಳಂತೆ ಆತನ ಆಚರಣೆ ಇರದಿದ್ದರೆ “ ಶಾಸ್ತ್ರ ಹೇಳುವದಕ್ಕೆ ಬೋನ ಉಣ್ಣುವದಕ್ಕೆ ಎಂಬ ಗಾದೆಯಂತೆ, ಅವನ ಬುದ್ಧಿ ಮಾತುಗಳಲ್ಲಿ ಮಹತ್ವವು ಉಳಿಯದೆ, ಹೊಳೆಯಲ್ಲಿ ಹುಣಿಸಿಹಣ್ಣು ತೇಲಿ

ಳಿದ ಹಾಗೆ ಏನೂ ಕೆಲಸಕ್ಕೆ ಬಾರದೆ ಹೋಗುವವು. ಅದರಿಂದ ಹಿಂದೆ ಹೇಳಿದಂತೆ ಮಾಸ್ತರನ ಗುಣಗಳೂ ಅವನ ಬುದ್ಧಿ ಮಾತುಗಳೂ ಕಳಿತು ಬಿದ್ದಿದ್ದರೆ, ಅವನ ನುಡಿಗಳು ವಿದ್ಯಾರ್ಥಿಗಳ ಮನಸಿನಲ್ಲಿ ಬೇರೂರಿ, ಅವು ತೀವ್ರ ವೃಕ್ಷವಾಗಿ ಬೆಳೆದು, ಅಪೇಕ್ಷಿಸಿದ ಫಲಗಳು ಬೇಗನೆ ತಲೆದೋರುವವು.

ಬುದ್ಧಿ ಹೇಳುವಾಗ ಮಾಸ್ತರನು ಹರಟೆ ಮಾತುಗಳನ್ನಾಡದೆ, ಪ್ರಸಂಗಕ್ಕೆ ಯೋಗ್ಯವಾದ ನಾಲ್ಕೈದು ಮಾತುಗಳನ್ನು ಗಂಭೀರವಾಗಿ ಅಧಿಕಾರದ ಮುದ್ರೆಯಿಂದ ವ್ಯಕ್ತಪಡಿಸಿ ಹುಡುಗರ ಮನಸಿನಲ್ಲಿ ಬಿಂಬಿಸುವಂತೆ, ಸ್ವಲ್ಪದರಲ್ಲಿಯೇ ಹೇಳಬೇಕು, ಬುದ್ಧಿ ಮಾತುಗಳಲ್ಲಿ ಲಂಚದ ಆಶೆಯು ಏನೂ ಇರಬಾರದು. ಯಾಕೆಂದರೆ ಈ ನಡತೆಯಿಂದ ಲಾಭಕ್ಕೆ ಬದಲಾಗಿ ಕೇಡಿನ ಸಂಭವವು ಹೆಚ್ಚಿರುತ್ತದೆ. ಈ ಆಶೆಯಿಂದ ಮಾಸ್ತರನ ಉದ್ದೇಶವು ಸಕೃದರ್ಶನಕ್ಕೆ ಕೊನೆಗಾಣುವಂತೆ ಕಂಡರೂ, ಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಅದರ ಪರಿಣಾಮವು ಭಯಂಕರವಾದದ್ದು ಕೇಡಿಗೆ ಮುಖ್ಯವಂಥಾದ್ದು ಇರುತ್ತದೆ. ಕಾರಣ ಬುದ್ಧಿ ಮಾತುಗಳಲ್ಲಿ ಲಂಚದ ಅಥವಾ ಬೇರೆ ಆಶೆಯ ಬೆರಕೆಯು ಎಳ್ಳಷ್ಟಾದರೂ ಇರಬಾರದು.

ಬುದ್ಧಿ ಹೇಳುವಾಗ ಬಹಿರಂಗಕ್ಕಿಂತ ಅಂತರಂಗವೇ ಒಳ್ಳೆಯದು. ಅದರಿಂದ ಬಹಳ ಕೆಲಸಗಳು ಆಗುತ್ತವೆ. ಒಮ್ಮೊಮ್ಮೆ ಅಂತರಂಗದಿಂದ ನೆನಿಸಿದ ಫಲವು ಬೋಧಕನಿಗೆ ಕಂಡು ಬಾರದೆ ಇದ್ದರೆ, ಬಹಿರಂಗದಲ್ಲಿ ಬುದ್ಧಿ ಹೇಳುತ್ತಾ ಇರಬೇಕು. ಆ ವೇಳೆಯಲ್ಲಿ ಪಂತೋಜಿಯು ತನ್ನ ಸ್ಥಿತಿಯ ಬಗ್ಗೆ ವಿಚಾರ ಮಾಡಬೇಕು; ಅಂದರೆ ತಾನು ವಿದ್ಯಾರ್ಥಿಯಾಗಿದ್ದಾಗ ಪಠಿಸಿದ್ದನ್ನೂ ತನಗೆ ಸಂಭವಿಸಿದ ಸಂಗತಿಗಳನ್ನೂ ಅಷ್ಟು ತನ

ಹಿಗೆ ತಂದು ತನ್ನ ಸ್ಥಿತಿಗೂ ಹುಡುಗರ ಸ್ಥಿತಿಗೂ, ಹಚ್ಚಿ ನೋಡಿ ತನ್ನ ಉದಾಹರಣೆಯಿಂದ ಹುಡುಗರ ಮನಸ್ಸನ್ನು ತಿದ್ದಲಿಕ್ಕೆ ಬರುವಂತೆ ಇದ್ದರೆ ಅದೇ ಪ್ರಕಾರ ಮಾಡಿ, ಅವಂಗೆ ಚನ್ನಾಗಿ ತಿಳಿಸಿಕೊಟ್ಟು ಅವರನ್ನು ಒಳ್ಳೇ ಮಾರ್ಗಕ್ಕೆ ತರಬೇಕು.

(ಮುಂದೆ ಸಾಗುವದು.)

History of the Miledd Ages

ಯುರೋಪದ ಮಧ್ಯಕಾಲದ ಇತಿಹಾಸವು

(೨೧೭ನೇ ಪುಟದಿಂದ ಮುಂದೆ ಸಾಗಿದ್ದು)

ಜಂಗಿಸಖಾನನು ಮೊದಲು ಚೀನಾ ದೇಶವನ್ನಭಿಗಮಿಸಿ, ಕಾಂಗಯೆಂಬ ವಂಶದ ಅರಸನನ್ನು ಜಯಿಸಿ, ಯೆನ್‌ಕಿಂಗ ರಾಜಧಾನಿಯನ್ನು ತಕ್ಕೊಂಡನು. ತರುವಾಯ ಅವನು ಕೋರಿಯುದೇಶವನ್ನು ಜಯಿಸಿ ಪಶ್ಚಿಮಕ್ಕೆ ತಿರುಗಿ ಥಿಬೇಟದೇಶವನ್ನು ಜಯಿಸಿಕೊಂಡು ಕಾಶ್ಮೀರದ ಮಾರ್ಗದಿಂದ ಖೋರಾಸಾಯೆಂಬ ದೇಶಕ್ಕೆ ತಲುಪಿದನು. ಅಲ್ಲಿಯ ಸುಲ್ತಾನನು ಘೋಕ ಕುಲದ ಅರಸರನ್ನು ಜಯಿಸಿ ಸಮಗ್ರ ಇರಾಣ ದೇಶವನ್ನು ಹಿಂದುಸ್ತಾನದ ಸೀಮೆಯ ವರೆಗೆ ಆಳುತ್ತಿದ್ದನು. ಆ ಅಲ್ಲಾಉದ್ದೀನ ಸುಲ್ತಾನನು ನಾಲ್ಕು ಲಕ್ಷ ದಂಡು ತಕ್ಕೊಂಡು ಜಂಗೀಸಖಾನನೆದುರಿಗೆ ಯುದ್ಧಕ್ಕೆ ನಿಂತು, ಪರಾಜಯ ಪಟ್ಟು ರಾಜ್ಯವನ್ನು ಕಳಕೊಂಡನು. ಅವನ ಮಗ ಜಲಾಲುದ್ದೀನನು ಶೌರ್ಯದಿಂದ ಕಾದಿದಾಗ್ಯೂ ಅದರಿಂದ ಪ್ರಯೋಜನವಾಗಲಿಲ್ಲ. ತರುವಾಯ ಜಂಗೀಸಖಾನನು ಕಾಸ್ಪಿಯನ್ ಸಮುದ್ರ

ಷ ಸ್ತಾತ್ರಲಿನ ಸೀಮೆಗಳನ್ನು ಗೆದ್ದು, ರಶಿಯದ ರಘಾರನ ಸಂಗಡ ಕಾಲ್ಕಾಯೆಂಬ ಹೊಳೆಯ ಮೇಲೆ ಯುದ್ಧ ಮಾಡಿ, ಅವನನ್ನು ಓಡಿಸಿದನು; ೧೨೨೭. ಮುಂದೆ ಆ ಕಲಿ ಮೊಗಲನು ಹೊಸ ಕಾಯಿದ್ದೆಗಳನ್ನು ಸ್ಥಾಪಿಸಿ ೬೪ನೇ ವರ್ಷದ ವಯಸ್ಸಿನಲ್ಲಿ ತೀರಿದನು.

ಜಂಗೀಸಖಾನನ ಮಕ್ಕಳೂ ಮೊಮ್ಮಕ್ಕಳೂ ಅವನಂತೆಯೇ ಜಯಶಾಲಿಗಳಾಗಿ ದೇಶಗಳನ್ನು ಕೈವಶ ಮಾಡಿಕೊಂಡರು. ರಶಿಯದ ಅಲೆಕ್ಸಾಂಡರನೆಂಬ ದೊಡ್ಡ ಡ್ಯೂಕನು ಜಂಗೀಸಖಾನನ ಯೆರಡನೇ ಮಗನ ಮಗನಾದ ಬಾತೂ ಯೆಂಬವನಿಂದ ಗೆಲ್ಲಲ್ಪಟ್ಟು ಪೋಲಂಡಕ್ಕೆ ಓಡಿ ಹೋದನು, ೧೨೪೧. ತರುವಾಯ ಬಾತೂಖಾನನು ಪೋಲಂಡವನ್ನು ಜಯಿಸಿ, ಕ್ರಾಕೋ ಪಟ್ಟಣವನ್ನು ಸುಟ್ಟು, ಹಂಗರಿಯವರನ್ನು ಸೋಲಿಸಿದನು. ತರುವಾಯ ಅವನು ಪಶ್ಚಿಮಕ್ಕೆ ಸಾಗಿ ಬ್ಲೆಸ್ರಾ ಪಟ್ಟಣವನ್ನು ಸುಟ್ಟು, ದೇಶವನ್ನು ಹಾಳಗೆಡಹಿದರಿಂದ ಜರ್ಮನಿಯ ಯೆರಡನೇ ಫ್ರೇಡರಿಕ ಚಕ್ರವರ್ತಿಯೂ ಪೋಪನೂ ಕೂಡಿ ಯುರೋಪದ ಜನರನ್ನು ಬೋಧಿಸಿ ದೊಡ್ಡ ಸೈನ್ಯ ಕೂಡಿಸಿದರು. ಈ ಯುದ್ಧವು ವಲಸ್ತಾದನೆಂಬ ಗ್ರಾಮದ ಹತ್ತರ ಯೆಸಗಿತು. ಖ್ರಿಸ್ತೀ ಜನರಿಗೂ ಮುಸಲ್ಮಾನರಿಗೂ ಇದರಷ್ಟು ಭಯಂಕರ ಯುದ್ಧವು ಯೆಂದೂ ಆಗಲಿಲ್ಲ ಈ ಯುದ್ಧದಲ್ಲಿ ಖ್ರಿಸೀ ಜನರು ಸೋತು, ದೇಶವೆಲ್ಲ ತೀರ ಹಾಳುಬಿತ್ತು, ೧೨೪೨ ಆದರೆ ಮೊಗಲರಿಂದ ಮುಂದೆ ಹೆಚ್ಚಿನ ಕಾರ್ಯವೇನೂ ಆಗಲಿಲ್ಲ.

ಜಂಗೀಸಖಾನನ ನಾಲ್ಕನೇ ಮಗನ ಮಗನಾದ ಕುಬ್ಲಾಯಿ ಯೆಂಬವನು ಚೀನ-ದೇಶವನ್ನು ಪೂರ್ಣವಾಗಿ ಕೈವಶ ಮಾಡಿಕೊಂಡನು.

ಬಗದಾದದ ಖಲೀಫರ ಸಮಾಪ್ತಿಯು.

ಜಂಗೀಸಖಾನನ ಪುತ್ರೊಬ್ಬ ಮೊಮ್ಮಗನಾದ ಹೂಲಾಗೂ ಯೆಂಬವನು ಬಗದಾದ ಪಟ್ಟಣವನ್ನು ಸುತ್ತುಗಟ್ಟಿ ಕಪಟದಿಂದ ತಕ್ಕೊಂಡನು, ೧೨೫೮. (ಹಿಜರೀ ಸನ್ನ ೬೫೬) ಈ ಕಾಲದಲಿ ೫೬ನೇ ಖಲೀಫನು ಬಗದಾದದಲ್ಲಿ ಆಳುತ್ತಿದ್ದನು. ಮೊಗಲರು ೪೦ ದಿವಸಗಳ ವರೆಗೆ ಪಟ್ಟಣವನ್ನು ಸುಲಿದು ಯೆರಡು ಲಕ್ಷ ಸಿಪಾಸಿಗಳನ್ನು ಕೊಂದರು. ಖಲೀಫನು ಈ ಗದ್ದಲದೊಳಗೆ ಯೆಲ್ಲಿ ಬಿದ್ದು ಸತ್ತನೋ ತಿಳಿಯಲಿಲ್ಲ. ತರುವಾಯ ಮೊಗಲರು ಅಲೆಪೋ, ದಮಾಸ್ಕಸ ಪಟ್ಟಣಗಳನ್ನು ತಕ್ಕೊಂಡು ಸೀರಿಯು, ಪಾಲೆಸ್ತೈನ ಪ್ರಾಂತಗಳನ್ನು ಶೇರಿದರು. ಆದರೆ ಇಜಿಪ್ತದ ಸುಯುಫ ಉದ್ದಿನನೆಂಬ ಮೀಮಲೂಕ ಸುಲತ್ತಾನನು ಅವರನ್ನು ಜಯಿಸಿದನು. ಆ ಸುಲ್ತಾನನ ಮಗನು ಅವರನ್ನು ಸಿರಿಯು ದೇಶದಿಂದ ಓಡಿಸಿದನು, ೧೨೬೦.

ಖಲೀಫನು ತೀರಿದ ಬಳಿಕ ಅವನ ಮಗನು ಇಜಿಪ್ತಕ್ಕೆ ಓಡಿ ಹೋಗಿ ಬೈಬರ್ಸನಿಂದ ಆಶ್ರಯ ಪಟ್ಟು ಕೇರೋ ಪಟ್ಟಣದಲ್ಲಿ ನಿಂತನು. ಅವನ ವಂಶದವರು ಮುಂದೆ ೨೫೦ ವರ್ಷಗಳ ವರೆಗೆ ಆಮೀಮಲೂಕ ಸುಲ್ತಾನರ ಆಶ್ರಯದಿಂದ ಬಾಳಿದರು.

೭ನೇ ಭಾಗವು.

ಪೋಪಗಳ ಅಧಿಕಾರ ಹಿಂಮೆಟ್ಟಿದ್ದು.

ದೊಡ್ಡ ರಾಜ್ಯಗಳು ಸ್ಥಾಪಿಸಲ್ಪಟ್ಟಿದ್ದು.

೧ ತಲೆ — ಪೋಪಗಳು.

ರೋಮದ (ಪೋಪಗಳ) ದರ್ಬಾರಿನಲ್ಲಿ ದುರಾಚರಣೆಯು ಮಿತಿಮೀರಿ ಬೆಳೆದದರಿಂದಲೂ, ಅಮರ್ಯಾದವಾದ ಅಧಿ

ಹಾರವು ನಡಿಸಲ್ಪಡುತ್ತಿದ್ದ ಕಾರಣದಿಂದಲೂ ಪೋಪಗಳ ಬಗ್ಗೆ ಜನರ ಮನಸ್ಸಿನಲ್ಲಿ ದ್ವೇಷ ಬುದ್ಧಿಯು ಕ್ರಮಕ್ರಮವಾಗಿ ಬೆಳೆಯುತ್ತ ಸಾಗಿತು. ಧರ್ಮೋಪದೇಶಕರ ಮೇಲೆ ಬಹಳ ತೆರಿಗೆಗಳು ಕೂಡ್ರಿಸಲ್ಪಟ್ಟದರಿಂದ ಅವರೆಲ್ಲರು ಪೋಪನಿಗೆ ವಿರೋಧಿಗಳಾದರು. ಹೀಗಿರಲಾಗಿ ೮ನೇ ಬೊನಿಫೇಸನೆಂಬ ಪೋಪನು ಸಿಂಹಾಸನಾರೂಢನಾಗಿ, ಆ ಕಾಲದ ಲಕ್ಷಣಗಳನ್ನರಿಯದೆ ತನ್ನ ಅಧಿಕಾರವನ್ನು ಬೆಳೆಸುವ ಪ್ರಯತ್ನಕ್ಕೆ ಬಿದ್ದು ಮೋಸಹೋದನು.

ಇಂಗ್ಲಂಡದ ಮೊದಲನೇ ಎಡ್ವರ್ಡನೂ ಫ್ರಾನ್ಸದ ಫಿಲಿಪನೂ ತಮ್ಮ ರಾಜ್ಯಗಳಲ್ಲಿ ಧರ್ಮ ಸಂಬಂಧದ ಹಣವನ್ನು ಆಕ್ರಮಿಸಲಾರಂಭಿಸಿದರು. ಆದದರಿಂದ ಪೋಪನು ತನ್ನ ಅಪ್ಪಣೆಯಿಲ್ಲದೆ ಯಾರಿಗೂ ಯಂಥಾ ತೆರಿಗೆಯನ್ನು ಕೊಡಬಾರದೆಂದು ಧರ್ಮೋಪದೇಶಕರಿಗೆ ಶಾಸನಗಳನ್ನು ಕಳುಹಿದನು. ಆದರೆ ಫ್ರಾನ್ಸದೊಳಗಿನ ಧರ್ಮೋಪದೇಶಕರು ಪೋಪನ ಅಪ್ಪಣೆಯು ಮೀರಿ ತಮ್ಮ ಅರಸನಿಗೆ ವಿಧೇಯರಾಗಿ ನಡೆದದರಿಂದ ಪೋಪನು ನಿರುಪಾಯನಾಗಿ ಆ ಅರಸನ ಸಂಗಡ ಸ್ನೇಹ ಮಾಡಿದ್ದನು. ಆದಾಗ್ಯೂ ಮುಂದೆ ಸನ್ನ ೧೩೦೧ನೇ ವರ್ಷ ವೊಬ್ಬ ಬಿಶಪ್ಪನು ಅರಸನಿಗೆ ಅಪಮಾನ ಮಾಡಲಾಗಿ, ಅರಸನು ಇವನನ್ನು ಸೆರೆ ಹಾಕಿದನು. ಈ ಸುದ್ದಿಯು ಕೇಳಿ ಪೋಪನು ಅತಿ ಸಂತಪ್ತನಾಗಿ ಅರಸನಿಗೆ ಹಲವು ಶಾಸನಗಳನ್ನು ಬರೆದನು, ಅವುಗಳೊಂದರಲ್ಲಿ ಆ ಫಿಲಿಪರಾಜನು ಧರ್ಮ ಸಂಬಂಧದಲ್ಲಿಯೂ, ರಾಜ್ಯ ಸಂಬಂಧದಲ್ಲಿಯೂ ತನಗೆ ಅಜ್ಞಾಂಕಿತನಾಗಿ ನಡೆಯತಕ್ಕವನೆಂದು ಬರೆದಿದ್ದನು. ಆದದರಿಂದ ಫಿಲಿಪನು ಆ ಶಾಸನವನ್ನು ಪಾರಿಸದಲ್ಲಿ ಪ್ರಸಿದ್ಧವಾಗಿ ಸುಡಿಸಿ, ರಾಜ್ಯಕಾರಭಾರ

ಪೋಪನಿಗೆ ಏನೂ ಅಧಿಕಾರವಿಲ್ಲೆಂದು ಪ್ರಕಟಿಸಿದನು.

ತರುವಾಯ ಬೋನಿಫೇಸನು ರೋಮದಲ್ಲಿ ಸಭೆ ಕೂಡಿಸಿ, ಅದರೊಳಗೆ ತಾನು ವಿಧಿಸಿದ ಹೊಸ ಕಟ್ಟಳೆಗಳನ್ನು ಪ್ರಕಟಿಸಿದನು. ಅವುಗಳ ವಿವರ ಹ್ಯಾಗಂದರೆ— ಧರ್ಮ ಸಂಬಂಧದ ಜನರೆಲ್ಲರು ವೊಂದೇ ಸಮಾಜವು; ಅವರು ವೊಬ್ಬನೇ ಮುಖ್ಯಸ್ಥನ ಕೈಕೆಳಗೆ ನಡಿಯತಕ್ಕವರು. ಆ ಮುಖ್ಯಾಧಿಕಾರಿಯಾದ ಪೋಪನ ಕೈಯಲ್ಲಿ ಎರಡು ಕತ್ತಿಗಳು; ವೊಂದು ಪಾರಲೌಕಿಕ ಸಂಬಂಧದ್ದು; ಅದನ್ನು ಪೋಪನು ಸ್ವತಃ ಬೀಸತಕ್ಕವನು. ಯೆರಡನೇದು ಇಹಲೋಕ ಸಂಬಂಧದ್ದು; ಅದನ್ನು ಅರಸರೂ, ಸರದಾರರೂ ಪೋಪನ ಇಚ್ಛಾನುಸಾರವಾಗಿ ಅವನ ಅಪ್ಪಣೆಯಂತೆ ಬೀಸತಕ್ಕದ್ದು; ಅರಸರೂ, ಸರದಾರರೂ ಪೋಪನಿಗೆ ವಿಧೇಯರಾಗಿ ನಡಿಯತಕ್ಕವರು; ಯಾಕಂದರೆ ರೋಮದ ಧರ್ಮಪೀಠಕ್ಕೆ ಮನುಷ್ಯಜಾತಿ ಮಾತ್ರವೆಲ್ಲ ವಿಧೇಯವಾದದ್ದು, ಯಾಕಂದರೆ ದೇವರ ಅಪ್ಪಣೆಯಿಂದ ಆಳುವಂಥಾ ನಮ್ಮ ಸಂತೋಷವು ಹೀಗುಂಟು. ಈ ಹೊಸ ಕಟ್ಟಳೆಗಳು ಪ್ರಸಿದ್ಧವಾದ ಬಳಿಕ ಸಹ ಫಿಲಿಪನು ತನಗೆ ಅಜ್ಞಾಂಕಿತನಾಗದ್ದು ಕಂಡು ಪೋಪನು ಬಹಿಷ್ಕಾರ ಹಾಗಿ ಅವನ ರಾಜ್ಯವನ್ನು ಜರ್ಮನಿಯ ಮೊದಲನೇ ಆಲ್ಬರ್ಟ ಚಕ್ರವರ್ತಿಗೆ ಕೊಟ್ಟನು. ಅಷ್ಟರಲ್ಲಿ ಫಿಲಿಪನು ತಂತ್ರ ರಚಿಸಿದ್ದೇನಂದರೆ, ಬೋನಿಫೇಸನು ನ್ಯಾಯವಾಗಿ ನೇಮಿಸಲ್ಪಡಲಿಲ್ಲವೆಂದು ಜನರೊಳರೊಳಗೆ ಪ್ರಕಟಿಸಿ, ವೊಬ್ಬ ಚತುರ ಮನುಷ್ಯನನ್ನು ರೋಮುಕ್ಕೆ ಕಳುಹಿದನು. ಆ ಮನುಷ್ಯನ ಹೆಸರು ನಾಗರೆಟ್ಟನು. ಅವನು ಗುಪ್ತದಿಂದ ಹೋಗಿ ಪೋಪನಿಂದ ಅತಿಶಯವಾಗಿ ಪೀಡಿತಳಾದ ಸಿಯಾರಾ ಕಾಲೊನಾ ಯೆಂಬ ಸ್ತ್ರೀಯಾಳ

ಸಹಾಯದಿಂದ, ಅನಾಗ್ನೀ ಯೆಂಬ ಗ್ರಾಮದಲ್ಲಿ ಪೋಪನು ಒಬ್ಬನೇ ಇದ್ದ ಸಂಧಿಯ ಸಾಧಿಸಿ, ಅವನನ್ನು ಸೆರೆ ಹಿಡಿದನು. ಈ ಸುದ್ದಿಯ ಕೇಳಿ ಮೂರು ದಿವಸಗಳ ನಂತರ ನೆರೆಹೊರೆಯ ಜನರು ಬಂದು ಅವನನ್ನು ಬಿಡಿಸಿಕೊಂಡಾಗ್ಯೂ ಆ ದುರಭಿಮಾನಿಯಾದ ಪೋಪನಿಗೆ ಸಿಟ್ಟಿನಿಂದ ಜ್ವರ ಹುಟ್ಟಿ, ಅದರಿಂದಲೇ ಅವನ ಮರಣವಾಯಿತು, ೧೩೦೩. ತರುವಾಯ ೧೧ನೇ ಬೆನಿದಿಕ್ತನೆಂಬವನು ಪೋಪನಾಗಿ, ಅವನು ಫಿಲಿಪನಿಗೆ ವಿರೋಧವಾಗಿ ಬೋನಿಫೇಸನಿಂದ ಬರೆಯಲ್ಪಟ್ಟ ಶಾಸನಗಳನ್ನು ರದ್ದು ಮಾಡಿದನು. ಇದರಿಂದ ಪೋಪನ ಅಧಿಕಾರವು ಯೆಷ್ಟು ಕಡಿಮೆಯಾಯಿತೆಂಬದು ತಿಳಿದು ಬರುತ್ತದೆ.

(ಮುಂದೆ ಸಾಗುವದು.)

— ೦೦೦ —

ಶಾಲಾಪತ್ರಕವು

ಪುಸ್ತಕ ೩೪) (ಸಂಚಿಕೆ ೧೧

(ನವಂಬರ ೧೮೮೯)

Moral Training.

ನೀತಿಶಿಕ್ಷಣವು.

ಶಿಕ್ಷಣದಲ್ಲಿ ಶಾರೀರ ಶಿಕ್ಷಣ, ಬುದ್ಧಿ ಶಿಕ್ಷಣ, ನೀತಿ ಶಿಕ್ಷಣ, ಧರ್ಮ ಶಿಕ್ಷಣ, ಯೆಂಬ ನಾಲ್ಕು ಮುಖ್ಯ ಭೇದಗಳಿರುತ್ತವೆ. ಧರ್ಮ ಶಿಕ್ಷಣದೊಳಗೆ ನೀತಿ ಶಿಕ್ಷಣವು, ಇಲ್ಲವೇ ನೀತಿ ಶಿಕ್ಷಣದೊಳಗೆ ಧರ್ಮ ಶಿಕ್ಷಣವು ಬರುತ್ತದೆಂದು ಕೆಲವರ ಮತವದೆ. ಈ ನಾಲ್ಕೂ ಬಗೆಯ ಶಿಕ್ಷಣವು ಶಾಲೆಗಳಲ್ಲಿ ನಡಿಯುತಕ್ಕದ್ದೇ. ಆದರೆ ಬುದ್ಧಿ, ನೀತಿ, ಇವುಗಳ ಶಿಕ್ಷಣದ ಬಗ್ಗೆ ಮಾಸ್ತರನು ಜಬಾಬದಾರನಿದ್ದಷ್ಟು ಮಟ್ಟಿಗೆ ಶಾರೀರ ಶಿಕ್ಷಣದ ಬಗ್ಗೆ ಇರುವದಿಲ್ಲ.

ನೀತಿ ಶಿಕ್ಷಣವನ್ನು ಸಂಪಾದಿಸುವ ಬಗೆಯು ಜನ್ಮ ಭಾಷೆಯ ಶಿಕ್ಷಣವನ್ನು ಸಂಪಾದಿಸುವ ಬಗೆಯಂತೆ ಇರುತ್ತದೆ. ಜನ್ಮಭಾಷೆಯ ಜ್ಞಾನವನ್ನು ಅಸಂಖ್ಯ ಮಾರ್ಗಗಳಿಂದ ಮನುಷ್ಯನು ಹ್ಯಾಗೆ ಸಂಪಾದಿಸುತ್ತಾನೋ, ಹಾಗೆ ನೀತಿ ಶಿಕ್ಷಣವನ್ನಾದರೂ ಅಸಂಖ್ಯ ಮಾರ್ಗಗಳಿಂದ ಸಂಪಾದಿಸುತ್ತಾನೆ. ಆ ಮಾರ್ಗಗಳಲ್ಲಿ ಶಾಲಾಧ್ಯಯನವು ಮುಖ್ಯ ಮಾರ್ಗವೆಂದು ಸಹ ಯೆಣಿಸಲ್ಪಡುವದಿಲ್ಲ. ಬೇರೆ ಬೇರೆ ಜನರ ಮನಸಿ

ನ ಒಲವು ಬೇರೆ ಬೇರೆ ಪ್ರಕಾರದ್ದಿರುತ್ತದೆ. ಈ ಒಲವು ಆರಂಭದಲ್ಲಿ ತಕ್ಕಷ್ಟು ಇರುವದಿಲ್ಲ; ಆದರೂ ಸಹವಾಸದಿಂದ ಬೆಳೆಯುತ್ತದೆ. ಸಮಾಜದಲ್ಲಿ ಶಿಕ್ಷೆ, ಇನಾಮು, ಇಲ್ಲವೆ ಲಾಭ, ಹಾನಿ, ಇವೇ ನಮ್ಮ ಮನಸಿನ ಒಲವನ್ನು ಬೆಳಸುವ ಸಾಧನಗಳಿರುತ್ತವೆ. ಹೀಗೆ ಅನುಭವದಿಂದ ಹಿತಕರವಾದಂಥ ಪ್ರವೃತ್ತಿಯನ್ನು ಬೆಳಸೋಣವೇ ತಿದ್ದುವಿಕೆ ಯೆಂದು ಹೇಳಲ್ಪಡುತ್ತದೆ.

ಸಮಾಜದಲ್ಲಿ ತಾನು ಪರರ ಕೂಡ ನಡೆದಂತೆ ಅವರು ತನ್ನ ಕೂಡ ನಡೆಯುತ್ತಾರೆಂಬ ತತ್ವ ಮೊದಲು ಸ್ವಾನುಭವದಿಂದ ಕೆಲವು ಮಟ್ಟಿಗೆ ತಿಳಿಯುತ್ತದೆ. ಆದರಿಂದ ಚಿಕ್ಕ ಬಾಲಕರಿಗೆ ತಮ್ಮ ಇಚ್ಛೆಯಂತೆ ನಡೆಯಲಿಕ್ಕೆ ಸಮಾಜದ ಕಟ್ಟಳೆಗಳು ಅಡ್ಡ ಮಾಡುತ್ತವೆಂದು ತಿಳಿದು, ಅವರು ತಾಯಿತಂದೆಗಳ ಅಪ್ಪಣೆಗೆ ವಿಧೇಯರಾಗಿ ನಡೆಯ ಹತ್ತುತ್ತಾರೆ, ಅಂದರೆ ಅವರಿಗೆ ವಿಧೇಯತ್ವದ ಚಟ ಹತ್ತುತ್ತದೆ. ಇದೇ ನೀತಿಶಿಕ್ಷಣದ ಮೊದಲನೇ ಪಾಠವಿರುತ್ತದೆ; ಇದೇ ನೀತಿಶಿಕ್ಷಣದ ಮುಖ್ಯ ಭಾಗವೆಂದೆನ್ನಬಹುದು. ಇದರಿಂದ ತಮ್ಮ ಕರ್ತವ್ಯವೇನೆಂದು ಹುಡುಗರಿಗೆ ತಿಳಿಯಹತ್ತಿ, ಅವರು ಆದರ್ಶ ಉದ್ದೇಶವನ್ನು ಅರಿತು ಕೊಳ್ಳುವರು.

ಹುಡುಗರಿಗೆ ತಾಯಿ ತಂದೆಗಳು, ಗೆಳೆಯರು, ಬಳಗದವರು, ಮುಂತಾದವರ ಸಹವಾಸದಿಂದ ನೀತಿಶಿಕ್ಷಣವು ಕ್ಷಣಶಃ ನಡೆದಿರುತ್ತದೆ. ಇದಲ್ಲದೆ ಅವರು ತಮ್ಮಂತೆ ಪರಾಧೀನರಾದಂಥ ಅನ್ಯಜನರ ಸ್ಥಿತಿ ರೀತಿಗಳನ್ನು ಆಗಾಗ್ಗೆ ನೋಡುತ್ತಿರುತ್ತಾರೆ. ಆದರಿಂದ ಬರಬರುತ್ತಾ ಅವರು ಸಮಾಜದ ಇಚ್ಛೆಗೆ ಮಾನ ಕೊಡಲಿಕ್ಕೆ ಕಲಿಯುವರು; ಮತ್ತೂ ಇಂಥಾ ಆ

ಸಂಪ್ಕ್ಕ ಉದಾಹರಣೆಗಳನ್ನು ನೋಡಿದ ಬಳಿಕ ಸಮಾಜದ ಗೌರವವನ್ನು ಅರಿತುಕೊಳ್ಳುವರು.

ಈ ಪ್ರಕಾರ ಸ್ವಾಭಾವಿಕವಾಗಿ ಆಗುವ ನೀತಿಶಿಕ್ಷಣವು ಇದೇ ಪ್ರಕಾರದಿಂದ ಆಗುವ ಶಾರೀರ ಶಿಕ್ಷಣವನ್ನು ಹೋಲುತ್ತವೆ. ಹುಡುಗರು ದೀಪಕ್ಕೆ ಕೈ ಹಚ್ಚಿ ಅದು ಸುಡುತ್ತದೆಂಬ ಅನುಭವವನ್ನು ಪಡಿದ ಬಳಿಕ ಮತ್ತೊಮ್ಮೆ ಅದಕ್ಕೆ ಕೈ ಹಚ್ಚುವದಿಲ್ಲ; ಸಕ್ಕರೆಯು ಸೀ ಹತ್ತುತ್ತದೆಂದು ತಿಳಿದ ಬಳಿಕ ಅದನ್ನು ಕಂಡಕೂಡಲೆ ಬಾಯಿ ತೆರೆಯುತ್ತವೆ. ಈ ಪ್ರಕಾರದ ಅನುಭವಗಳಿಂದ ಹುಡುಗರಿಗೆ ಒಂದು ಬಗೆಯ ನಡತೆಯ ಚಟ ಹತ್ತುತ್ತ ಸಾಗುತ್ತದೆ.

ಆದದರಿಂದ ಬಾಲ್ಯದ ಚಟಗಳಿಗೆ ಸೃಷ್ಟಿ ನಿಯಮಗಳೂ ಸಮಾಜದ (ನೀತಿಯ) ಕಟ್ಟಳೆಗಳೂ ಕಾರಣವಾಗಿರುತ್ತವೆ.

ಈ ಬಗೆಯಾಗಿ ಮನುಷ್ಯನು ಪ್ರೌಢನಾಗುತ್ತ ನಡಿವದಾಗ ನೀತಿಯ ತತ್ವಗಳನ್ನು ಯಾರು ಕಲಿಸದೆ ತನಗೆ ತಾನೇ ಕಲಿಯುತ್ತ ಹೋಗುತ್ತಾನೆ. ನೀತಿಯ ಆಚರಣೆಯು ಈ ಲೋಕದಲ್ಲಿ ಇದೇ ಪ್ರಕಾರವಾಗಿ ಬೆಳೆದಿದೆ. ದಂಡಿನಲ್ಲಿ ಅಪರಾಧ ಮಾಡಿದಂಥ ಶಿಪಾಯಿಗಳಿಗೆ ಆಗುವ ಶಿಕ್ಷೆಯ ಕಾರಣದಿಂದಲೇ ಅವರು ದಂಡಿನಲ್ಲಿ ಬೇಕಾಗುವ ಸದ್ಗುಣಗಳನ್ನು ಕಲಿಯುತ್ತಾರೆ. ಸದಾಚಾರದಿಂದ ನಡೆಯುವಂಥ ಮನೆತನದಲ್ಲಿ ಹುಡುಗರಿಗೆ ನೀತಿಶಿಕ್ಷಣವನ್ನು ಬೇರೆಯಾಗಿ ಕೊಡುವ ಪ್ರಯೋಜನವಿರುವದಿಲ್ಲ. ಓದು ಬರಹ ಕಲಿಯದಂಥ ಜನರೆಲ್ಲರು ತಮ್ಮ ಸ್ವಂತ ಅನುಭವದಿಂದಲೇ ನೀತಿತತ್ವಗಳನ್ನು ಅರಿತುಕೊಂಡು ಆಚರಿಸುವರು.

ಆದದರಿಂದ ಶಾಲೆಯಲ್ಲಿ ನೀತಿಶಿಕ್ಷಣವೆಂದರೆ ಸ್ವಾಭಾವಿಕ ರೀತಿಯಿಂದಾಗುತ್ತಿರುವ ಶಿಕ್ಷಣವನ್ನು ಕ್ರಮಗೊಳಿಸಿ ತಿದ್ದಿ ಬೇಗ ಬೆಳಿಸುವ ಸಾಧನವಿರುತ್ತದೆ.

ತಾಯಿ ತಂದೆಗಳಂತೆ ಮಾಸ್ತರನಾದರೂ ನೀತಿಯನ್ನು ಕಲಿಸತಕ್ಕವನಿರುತ್ತಾನೆ; ಅಂದರೆ ಹುಡುಗರ ಆಚರಣೆಗೆ ತಲೆದೂಗಿ, ಇಲ್ಲವೆ ಅದನ್ನು ಧಿಕ್ಕರಿಸಿ, ಅವರಿಗೆ ವಿಧೇಯತ್ವ, ನಿಜಸ್ತಿಕೆ, ನಿಯಮಿತತನ, ನ್ಯಾಯವ ವರ್ತನ, ಮುಂತಾದ ಸದ್ಗುಣಗಳನ್ನು ಕಲಿಸತಕ್ಕವನಿರುತ್ತಾನೆ. ಬುದ್ಧಿ ಶಿಕ್ಷಣಕ್ಕೆ ಬೇಕಾಗುವ ತಿದ್ದುವಿಕೆಯನ್ನು ಕಾದುಕೊಳ್ಳಬಲ್ಲಂಥ ಶಿಕ್ಷಕನು ಅವನು ತನ್ನ ವಿದ್ಯಾರ್ಥಿಗಳಿಗೆ ನೀತಿಯನ್ನು ಕಲಿಸುತ್ತಿದ್ದರೂ ಇರದಿದ್ದರೂ ಅವರ ಮನಸಿನ ಮೇಲೆ ನಿಜವಾದ ನೀತಿಯ ಪಡಿಯಚ್ಚನ್ನು ಒತ್ತುತ್ತಾನೆಂಬದಕ್ಕೆ ಸಂದೇಹವಿಲ್ಲ. ಅವಶ್ಯವಿದ್ದಂಥ ಕಟ್ಟಳೆಗಳಿಗೆ ಮನ ಮುಟ್ಟಿ ಆನಂದದಿಂದ ಒಳಗಾಗಲಿಕ್ಕೂ, ತನ್ನ ಸಂಗಡಲೂ ಪರಸ್ಪರರ ಸಂಗಡಲೂ ಒಳ್ಳೇ ಮನಸಿನಿಂದ ನಡಿಯಲಿಕ್ಕೂ ಹುಡುಗರಿಗೆ ಕಲಿಸುವ ಚಾತುರ್ಯವುಳ್ಳಂಥ ಶಿಕ್ಷಕನು ಮೇಲಾದ ನೀತಿಶಿಕ್ಷಕನೆನ್ನಲಿಕ್ಕೆ ಅಡ್ಡಿ ಇಲ್ಲ.

ಆದರೆ ವಾಡಿಕೆಯಾಗಿ ಮಾಸ್ತರನು ತನ್ನ ವಿದ್ಯಾರ್ಥಿಗಳಿಗೆ ನೀತಿಯ ಪಾಠಗಳನ್ನು ಕಲಿಸಬೇಕಾಗುತ್ತದೆ. ಆ ಪಾಠಗಳಲ್ಲಿ ಆರಿಸಿ ಶೇರಿಸಿದಂಥ ಕಲ್ಪಿತ ವೃತ್ತಾಂತಗಳಿಂದಲೂ ಇಕ್ಕಟ್ಟಿನ ಪ್ರಸಂಗಗಳಿಂದಲೂ ವಿದ್ಯಾರ್ಥಿಗಳ ಮನಸಿನಲ್ಲಿ ನೀತಿಯ ಭಾವನೆಯುಂಟಾಗತಕ್ಕದ್ದಿರುತ್ತದೆ. ಈ ಪಾಠಗಳಿಂದ ಕೆಲವು ಲಾಭಗಳೂ ಕೆಲವು ಹಾನಿಗಳೂ ಆಗುತ್ತಿರುತ್ತವೆ. ಲಾಭಗಳು ಒದಿದ ಕಥೆಯೊಳಗೆ ವಿವರಿಸಿದ ಸಂಗತಿಗ

ಳಲ್ಲಿ ಓದುವವನಿಗೆ ಸಂಭವಿಸಿದ್ದರೆ ಆಗುತ್ತಿದ್ದಂಥ ಜಾತಿಯು ವಿರುತ್ತದೆ. ಆದರೆ ವಿದ್ಯಾರ್ಥಿಗಳ ಕಲ್ಪನಾಶಕ್ತಿಯು ಅಪಕ್ವವಿರುವದರಿಂದ ಓದಿದ ಕಥೆಯ ಸಾರವು ಶೇರತಕ್ಕಷ್ಟು ಬಲದಿಂದ ಅವರ ಮನಸಿನಲ್ಲಿ ಶೇರುವದಿಲ್ಲ, ಮತ್ತು ಆ ಸಂಬದ್ಧವಾದ ಗ್ರಹಿಕೆಯು ಒಮ್ಮೊಮ್ಮೆ ಹುಟ್ಟುತ್ತದೆ; ಇವೇ ಹಾನಿಗಳು.

ಈ ನೀತಿಯ ಪಾಠಗಳ ಸಲುವಾಗಿ ಮೊದಲು ಸದ್ಗುಣ ದುರ್ಗುಣಗಳ ಉತ್ತಮವಾದ ವರ್ಗೀಕರಣವನ್ನು ಮಾಡಿಕೊಳ್ಳುವದು ಅತ್ಯವಶ್ಯವಿರುತ್ತದೆ. ಒಂದೇ ಸಂಗತಿಯನ್ನು ಬೇರೆ ಬೇರೆ ರೂಪಗಳಿಂದ ಮೇಲೆ ಮೇಲೆ ಹೇಳುತ್ತ ಕೂತರೆ ಹುಡುಗರು ಅದನ್ನು ದುರ್ಲಕ್ಷ್ಯ ಮಾಡುವ ಸಂಭವವಿರುತ್ತದೆ ಸದ್ಗುಣಗಳಲ್ಲಿ ಶುದ್ಧ ಸದ್ಗುಣಗಳೆಂತಲೂ ಮಿಶ್ರ ಸದ್ಗುಣಗಳೆಂತಲೂ ಎರಡು ವರ್ಗಗಳುಂಟು. ಅವುಗಳಿಗೆ ಮೂಲ ಸದ್ಗುಣಗಳೆಂತಲೂ ಫಲಿತ ಸದ್ಗುಣಗಳೆಂತಲೂ ಅನ್ನಬಹುದು. ಮೊದಲು ಮೂಲ ಸದ್ಗುಣಗಳನ್ನು ಹುಡುಗರ ಮನಸಿನಲ್ಲಿ ಬಿಂಬಿಸಿ ಆ ಮೇಲೆ ಫಲಿತ ಸದ್ಗುಣಗಳ ಅಭ್ಯಾಸವನ್ನು ಮಾಡಿಸಬೇಕು.

೧ ತಾನು, ೨ ಪರರು, ೩ ಲಾಭ, ೪ ಹಾನಿ, ಈ ನಾಲ್ಕುಗಳ ಸಂಯೋಗ ವಿಯೋಗಗಳಿಂದ ಸದ್ಗುಣ ದುರ್ಗುಣಗಳುಂಟಾಗುತ್ತವೆ. ಹ್ಯಾಗಂದರೆ — ೧ ಪರರ ಹಾನಿಯನ್ನು ಚಿಂತಿಸದೆ ತನ್ನ ಸ್ವಂತ ಲಾಭವನ್ನು ಹುಡುಕುವ ಗುಣವು ಮೊದಲನೇ ವರ್ಗದ ಸದ್ಗುಣವು; ೨ ತನಗೂ ಪರರಿಗೂ ಲಾಭವನ್ನು ಬಯಸುವ ಗುಣವು ಎರಡನೇ ವರ್ಗದ್ದು; ತನ್ನ ಹಾನಿಯನ್ನು ಮಾಡಿಕೊಂಡು ಪರರ ಲಾಭವನ್ನು

ಬಯಸುವ ಗುಣವು ಮೂರನೇ ಉತ್ಕೃಷ್ಟವು ವರ್ಗದ್ದು. ಇದೇ ಮೇರೆಗೆ ದುರ್ಗುಣಗಳಲ್ಲಿಯೂ ವರ್ಗಗಳಾಗುತ್ತವೆ.

ವ್ಯವಹಾರದಲ್ಲಿ ವಿವೇಕ, ನ್ಯಾಯ, ಪರೋಪಕಾರ, ಈ ಮೂರು ಮೂಲ ಸದ್ಗುಣಗಳೆಂದು ಎಣಿಸಲ್ಪಡುತ್ತವೆ. ವಿವೇಕವೆಂದರೆ ಪರರ ಅಹಿತವನ್ನು ಮಾಡದೆ ತನ್ನ ಸ್ವಂತ ಹಿತವನ್ನು ಸಾಧಿಸಿಕೊಳ್ಳುವ ಗುಣವು. ವಿವೇಕಕ್ಕೆ ಎರಡು ವಿಘ್ನಗಳಿರುತ್ತವೆ. ೧ನೇದು ಅಜ್ಞಾನ, ೨ನೇದು ಮೊದಲಿನ ಆವೇಶ. ಇವೆರಡನ್ನೂ ಶಿಕ್ಷಕನು ಪರಿಹರಿಸಲಿಕ್ಕೆ ಬೇಕು. ಏನಾದರೂ ಸಂಗತಿಯನ್ನು ನೋಡಿದ ಇಲ್ಲವೆ ಕೇಳಿದ ಕೂಡಲೆ ಬರುವ ಆವೇಶವು ಮೊದಲಿನ ಆವೇಶವೆಂದು ಹೇಳಲ್ಪಡುತ್ತದೆ. ವಿವೇಕದಲ್ಲಿ ನಮಗೂ ಪರರಿಗೂ ಇರುವ ಸಂಬಂಧವು ಬಹುತರ ಬಂದೇ ಬರುತ್ತದೆ. ನಮಗೆ ಸಾಧಿಸಿದಷ್ಟು ಹೆಚ್ಚು ಲಾಭವಾಗಬೇಕಾದರೆ, ನಮಗೆ ಸಹಾಯ ಮಾಡತಕ್ಕವರ ಸಂಗಡಲೂ ಅಡ್ಡಿ ಮಾಡತಕ್ಕವರ ಸಂಗಡಲೂ ನಾವು ಯೋಗ್ಯ ರೀತಿಯಿಂದ ನಡೆಯಲಿಕ್ಕೆ ಬೇಕು. ಈ ಸಂಬಂಧದ ಮೂಲಕವಾಗಿ ನ್ಯಾಯ, ಪರೋಪಕಾರ, ಈ ಗುಣಗಳು ಮುಂದಕ್ಕೆ ಬರುತ್ತವೆ.

ಸಾಮಾಜಿಕ ಕರ್ತವ್ಯಗಳಲ್ಲಿ ನ್ಯಾಯವು ಮೊದಲು ಬರುತ್ತದೆ. ಪ್ರತಿ ಒಬ್ಬ ಮನುಷ್ಯನನ್ನು ಬೇರೆ ಯಾವತ್ತು ಮನುಷ್ಯರ ಬಾಧೆಯಿಂದ ಸಂರಕ್ಷಿಸುವ ಗುಣವೇ ನ್ಯಾಯವೆನಿಸುತ್ತದೆ. ಇದು ಕಾಯಿದೆಗಳಲ್ಲಿ ಸಂಗ್ರಹಿಸಲ್ಪಟ್ಟು ಬಲಾತ್ಕಾರದಿಂದ ನಡಸಲ್ಪಡುತ್ತದೆ. ಒಬ್ಬರಿಗೊಬ್ಬರು ಹಿತ ಮಾಡುವದೂ ಕೇಡು ತಪ್ಪಿಸುವದೂ ನ್ಯಾಯದ ಮುಖ್ಯ ತತ್ವವಿರುತ್ತದೆ.

ಪರೋಪಕಾರವು ನ್ಯಾಯಕ್ಕಿಂತ ಹೆಚ್ಚು ಬೆಲೆಯುಳ್ಳ

ದ್ದು. ಸರ್ಕಾರದ ಕಟ್ಟಳೆಯಂತೆ ಅವಶ್ಯವಿಲ್ಲದೆ ಪರರ ಹಿತ ಮಾಡುವದೇ ಪರೋಪಕಾರವಿರುತ್ತದೆ. ಇದಕ್ಕೆ ಬಲಾತ್ಕಾರ ಬೇಕಾಗುವದಿಲ್ಲ, ಮನುಷ್ಯನ ಸ್ವೇಚ್ಛೆಯೇ ಪ್ರೇರಕವಾಗಿರುತ್ತದೆ. ಪರರ ವಿಪತ್ತಿಯೇ ಪರೋಪಕಾರದ ಸ್ಥಳವು ಇದಕ್ಕೆ ಪ್ರೇಮ, ದಯೆ, ಮಾಯೆ, ಕನಿಕರ, ಮುಂತಾದ ಹೆಸರುಗಳುಂಟು.

ಧೈರ್ಯ, ದೃಢತ್ವ, ಶಾಂತಿ, ಯೆಂಬ ಗುಣಗಳು ವಿವೇಕ, ನ್ಯಾಯ, ಈ ಯೆರಡು ಮೂಲ ಸದ್ಗುಣಗಳನ್ನು ಅವಲಂಬಿಸಿರುತ್ತವೆ. ಇವು ತೋರಿಕೆಯಲ್ಲಿ ವಿವೇಕಕ್ಕೆ ಹೊಂದುತ್ತವೆ. ಆದರೆ ಇವುಗಳಿಗೆ ಸಮಾಜದಲ್ಲಿ ಬಹಳ ಬೆಲೆ ಇರುವ ಕಾರಣ ಇವು ನ್ಯಾಯಕ್ಕೂ ಪರೋಪಕಾರಕ್ಕೂ ಆಧಾರವಾಗಿರುತ್ತವೆಂದು ಹೇಳಬಹುದು.

ಪರೋಪಕಾರದ ಸ್ವರೂಪವನ್ನು ಹೊಂದಿದ ನ್ಯಾಯವೇ ಪ್ರಮಾಣಿಕತನವೆಂದು ಹೇಳಲ್ಪಡುತ್ತದೆ ಅಂದರೆ ನ್ಯಾಯದ ವರ್ತನದಿಂದ ಪರೋಪಕಾರವಾಗುತ್ತಿದ್ದಲ್ಲಿ ಅದಕ್ಕೆ ಪ್ರಮಾಣಿಕತನವೆನ್ನುವರು.

ನಿಜಸ್ತಿಕೆಯು ಸ್ವತಂತ್ರ ಸದ್ಗುಣವೆಂದು ಕೆಲವರ ಮತವಿದೆ. ಇದು ವಸ್ತುತಃ ಮೇಲೆ ಹೇಳಿದ ಮೂಲ ಸದ್ಗುಣಗಳ ಉಪಕರಣವಿರುತ್ತದೆ ಸತ್ಯದ ಪ್ರೀತಿಯೇ ವಿವೇಕ, ನ್ಯಾಯ, ಪರೋಪಕಾರ, ಧೈರ್ಯ, ದೃಢತ್ವ, ಶಾಂತಿ, ಇವುಗಳಿಗೆ ಆಶ್ರಯವಾಗುತ್ತದೆ. ಆದರೆ ಈ ಗುಣಗಳಂತೆ ಸತ್ಯಕ್ಕೆ ಅಂಶಗಳಿಲ್ಲ; ಇದು ಇದ್ದರೆ ಪೂರಾ ಇರುವದು, ಇಲ್ಲದಿದ್ದರೆ ಎಷ್ಟು ಮಾತ್ರವೂ ಇರುವದಿಲ್ಲ.

ಮೇಲೆ ಹೇಳಿದ ಮೂಲ ಸದ್ಗುಣಗಳು ನಾನಾಪ್ರಕಾರವಾ

ಗಿ ಒಂದರೊಳಗೊಂದು ಕೂಡುತ್ತವೆ. ನೀತಿಯನ್ನು ಕಲಿಸುವ ಶಿಕ್ಷಕನಲ್ಲಿ ಈ ಸಂಯೋಗಗಳನ್ನು ಗೊತ್ತು ಹಿಡಿಯುವ ಸಾಮರ್ಥ್ಯವಿರಲಿಕ್ಕೆ ಬೇಕು.

ಉದ್ದೇಶಗಳು— ಇವುಗಳಲ್ಲಿ ಸ್ವಾರ್ಥದವೆಂತಲೂ ಸಾಮಾಜಿಕವೆಂತಲೂ ಯೆರಡು ಭೇದಗಳುಂಟು. ವಿವೇಕವು ಸ್ವಾರ್ಥದ ಉದ್ದೇಶದಿಂದ ಫಲಿಸುತ್ತದೆ; ಯೆರಡೂ ಬಗೆಯ ಉದ್ದೇಶಗಳು ಕೂಡಿ ನ್ಯಾಯವನ್ನುಂಟು ಮಾಡುತ್ತವೆ. ಪರೋಪಕಾರವು ಸಾಮಾಜಿಕ ಉದ್ದೇಶದ ಪರಿಣಾಮವು; ಆದರೆ ಅದರಲ್ಲಿ ಅತ್ಯುನ್ನತವಾದ ಸ್ವಾರ್ಥದ ಉದ್ದೇಶವು (ಪುಣ್ಯದ ಅಪೇಕ್ಷೆಯು) ಕೂಡಿರುತ್ತದೆ.

ಉದ್ಯೋಗ, ಮಿತವ್ಯಯ, ಮಿತಾಹಾರ, ವಿದ್ಯೆಯಲ್ಲಿ ಭಕ್ತಿ, ಮುಂತಾದ ಮಿಶ್ರ ಸದ್ಗುಣಗಳು ಮುಖ್ಯವಾಗಿ ಸ್ವಾರ್ಥದ ಉದ್ದೇಶದಿಂದ ಬೆಳೆಯುತ್ತವೆ. ಪ್ರೀತಿ, ದಯೆ, ಅಭಿಮಾನ, ಮುಂತಾದವುಗಳಲ್ಲಿ ಸಾಮಾಜಿಕ ಉದ್ದೇಶವು ಮುಖ್ಯವಿರುತ್ತದೆ.

ನೀತಿಶಿಕ್ಷಕನು ಹುಡುಗರನ್ನು ಒಲಿಸಿಕೊಂಡು ಕಲಿಸಬೇಕೇ ಹೊರತು ಭೀತಿಯ ಸಹಾಯವನ್ನು ಅಪೇಕ್ಷಿಸಲಾಗದು. ಭಯದಿಂದಲೂ ಶಿಕ್ಷೆಯಿಂದಲೂ ಬಹಿರಂಗದ ಸದ್ವರ್ತನವು ಕೆಲವಂಶದಲ್ಲಿ ಹುಟ್ಟಬಹುದು; ಆದರೆ ಈ ಉಪಾಯಗಳಿಂದ ಅಂತಃಕರಣವು ಸದ್ವರ್ತನಕ್ಕೆ ಒಲಿಯಲಾರದು. ಬಲಾತ್ಕಾರದಿಂದ ಮನಸಿನಲ್ಲಿಯ ವಿರೋಧವು ಬೆಳೆಯುತ್ತದೇ ಹೊರತು ಕಡಿಮೆಯಾಗುವದಿಲ್ಲ. ಇಷ್ಟೇ ಅಲ್ಲ, ವಿರೋಧವಿಲ್ಲದಲ್ಲಿ ಸಹ ಬಲಾತ್ಕಾರವು ವಿರೋಧವನ್ನು ಹುಟ್ಟಿಸುತ್ತದೆ. ಚಿಕ್ಕಂದಿನಲ್ಲಿ ಹುಡುಗರ ಮನಸು ಮಣಿಸಿದಂತೆ ಮಣಿಯುತ್ತಿರುತ್ತದೆ, ಅಹಂಕಾ

ರವು ಬೆಳಿದಿರುವದಿಲ್ಲ. ಆಗ ಬುದ್ಧಿ ಹೇಳುವದರಿಂದಲೂ ಶಿಕ್ಷೆಯಿಂದಲೂ ಒಳಿತು ಹೀನಗಳ ಭಾವನೆಯನ್ನು ಹುಡುಗರ ಮನಸಿನಲ್ಲಿ ಹುಟ್ಟಿಸಲಿಕ್ಕೆ ಆಸ್ಪದವಿರುತ್ತದೆ. ಆದರೆ ಈ ನಮ್ರ ಸ್ಥಿತಿಯು ಬದಲಾಗಿ ಅಹಂಕಾರವು ಬೆಳಿವ ಸಂಧಿಯನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತಿರಲಿಕ್ಕೆ ಬೇಕು. ಆ ಕಾಲದ ನಂತರ ಭೀತಿ ಶಿಕ್ಷೆಗಳು ಯೆಷ್ಟು ಮಾತ್ರವೂ ಕೆಲಸಕ್ಕೆ ಬಾರವು. “ **प्राप्तेतु षोडशेवर्षे पुत्रं मित्रवदाचरेत्** ”. ಆದರೆ ಮಾಡಿಕೆಯಾಗಿ ಹನ್ನೆರಡು ವರ್ಷ ಮೀರಿದ ಬಳಿಕ ಹುಡುಗರಿಗೆ ನೀತಿಯ ಬೋಧಗಳಿಂದ ಪ್ರಯೋಜನವಾಗುವದಿಲ್ಲೆಂದು ಹೇಳಬಹುದು. ಆಗ ಅವರಿಗೆ ಪ್ರತ್ಯಕ್ಷ ಸುಧಾರಣೆಯ ಮಾರ್ಗದಿಂದಲೇ ನೀತಿಯನ್ನು ಕಲಿಸಕ್ಕೆ ಬೇಕು. ಪ್ರೌಢ ಹುಡುಗರ ಶಾಲೆಗಳಲ್ಲಿಯೂ ಕಾಲೇಜಗಳಲ್ಲಿಯೂ ಪ್ರತ್ಯಕ್ಷವಾಗಿ ನೀತಿಯ ಪಾಠಗಳನ್ನು ಕಲಿಸಲಾಗದೆಂದು ಸಾಮಾನ್ಯ ಸಿದ್ಧಾಂತವಿರುತ್ತದೆ.

ಆದರೆ ಸ್ವಾರ್ಥದ ಉದ್ದೇಶಗಳಿಗೆ ಬೇಕಾದಾಗ ಚಲಿಸಿಕೊಡಬಹುದು. ಆದರೆ ಬಲಾತ್ಕಾರಕ್ಕೂ ಅಡ್ಡಿಗೂ ನೆವ ತೆಗಿದಂತೆ ತೋರಿಸಕೂಡದು. ವಿದ್ಯಾರ್ಥಿಗಳ ಹಿತವನ್ನು ಶಿಕ್ಷಕನು ಮನ ಮುಟ್ಟಿ ಬಯಸುತ್ತಾನೆಂದು ಅವರು ಮನಗಂಡರೆ, ಅವರು ಹತ್ತು ಪಾಲಿಗೆ ಅವನಮಾತು ಕೇಳುವರು. ಮುಖ್ಯ ತೊಂದರೆ ಯೇನೆಂದರೆ, ಹುಡಗರ ಹಿತಾ ಹಿತವು ಶಿಕ್ಷಕನಿಗೆ ತಿಳಿಯುತ್ತಿರುವಷ್ಟು ಅವರಿಗೆ ತಿಳಿಯುತ್ತಿರುವದಿಲ್ಲ. ಮುಂದೆಬರುವ ಲಾಭ ಹಾನಿಗಳನ್ನು ಹುಡಗರ ಮನಸಿನಲ್ಲಿ ಚಿತ್ರೀಕರಿಸವದು ಬಹು ಬಿಗಿಯಾದ ಕೆಲಸವಿರುತ್ತದೆ. ಹುಡಗರು ಬಹಳ ಚಿಕ್ಕವರಿದ್ದಾಗ ಈ ಬಿಗಿಕಟ್ಟು ಮಸ್ತರವಿರುತ್ತ

ದೆ; ಆದರೆ ಅವರ ವಯಸ್ಸು ಬೆಳೆದಹಾಗೆ ಕಡಿಮೆಯಾಗುತ್ತದೆ. ಆದರೂ ಶಿಕ್ಷಕನು ಪರಮಾವಧಿಯ ಶ್ರಮ ತಕ್ಕೊಂಡ ಹೊರ್ತು ಮುಂದಿನ ಕಲ್ಪನೆಯು ಹುಡುಗರ ಮನಸಿನಲ್ಲಿ ತೋರುವದಿಲ್ಲ.

—o—

Education and Improvement.

ವಿದ್ಯಾಸುಧಾರಣೆಗೆ ಸಂಬಂಧವಾದ ವೃತ್ತಾಂತಗಳು.

ಮ. ಇನ್ಸ್ಪೆಕ್ಟರ ಸಾಹೇಬರು ರತ್ನಾಗಿರಿಯ ಜಿಲ್ಲೆಯ ಕಡೆಗೆ ಹೋಗಿದ್ದಾರೆ.

—ooo—

ಧಾರವಾಡ ಹಾಯಸ್ಕೂಲಿನಲ್ಲಿ ಶಾಸ್ತ್ರೀಯ ವಿಷಯದ ಶಿಕ್ಷಕರಾದ ರಾ. ರಾ. ರಾಮಚಂದ್ರ ಕೇಶವ ಲೆಲೇಕರ ಇವರನ್ನು ಪುಣೆಯ ಟ್ರೇನಿಂಗ ಕಾಲೇಜದಲ್ಲಿ ೧ನೇ ಅಸಿಸ್ಟಾಂಟರಾಗಿ ನೇಮಿಸಿದರು. ಅವರ ೭೫ ರೂಪಾಯಿಯ ಸಂಬಳವು ಅವರ ಕೆಳಗಿನವರಾದ ರಾ. ರಾ. ಶಂಭೂರಾವ ಅನೀಖಿಂಡಿ ಯೆಂಬವರಿಗೆ ದೊರಿವು ಅವರ ಸ್ಥಳಕ್ಕೆ ಬೆಳಗಾವಿಯ ಹಾಯಸ್ಕೂಲಿನಲ್ಲಿಯ ಹೆಬ್ಬಾಳ ಯೆಂಬವರನ್ನು ನೇಮಿಸಿದರು.

—ooo—

ಇಲ್ಲಿಯ ಹಾಯಸ್ಕೂಲಿನಲ್ಲಿ ಕನ್ನಡ ಶಿಕ್ಷಕರಾಗಿದ್ದ ರಾ. ರಾ. ಶಿದ್ಧರಾಮಯ್ಯನವರು ಈ ತಿಂಗಳಲ್ಲಿ ಅಕಸ್ಮಾತ್ತಾಗಿ ಮರಣ ಹೊಂದಿದರು. ಅವರ ಕೆಲಸಕ್ಕೆ ಶಾಮಾಚಾರ್ಯ ಗೋಪಾಲಾಚಾರ್ಯ ತಡಕೋಡ ಯೆಂಬವರನ್ನು ನೇಮಿಸಿದರು.

ಈ ಸ್ಥಳಕ್ಕೆ ನೇಮಿಸತಕ್ಕ ಮನುಷ್ಯನನ್ನು ಪರೀಕ್ಷೆ ತಕ್ಕೊಂಡು ಹೆಚ್ಚು ಗುಣಗಳನ್ನು ಸಂಪಾದಿಸಿದವನನ್ನು ನೇಮಿಸುವ ವಿಚಾರದಿಂದ ಮೂರು ಜನ ಉಮೇದವಾರರ ಪರೀಕ್ಷೆಯನ್ನು ಹೆಡ್ಡಮಾಸ್ತರರು ತಕ್ಕೊಂಡರು. ಆ ಪರೀಕ್ಷೆಯಲ್ಲಿ ಮಣ್ಣೂರ ಯೆಂಬ ಉಮೇದವಾರನು ಯೆಲ್ಲಕ್ಕೂ ಮೇಲೆ ಬಂದಾಗ್ಯೂ ಅವನಿಗೂ ಪರೀಕ್ಷೆ ಕೊಟ್ಟ ಬೇರೆ ಯಾವ ಮನುಷ್ಯನಿಗೂ ಕೆಲಸ ದೊರೆಯದೆ ಪರೀಕ್ಷೆಗೆ ಕೂಡ್ರದಿದ್ದಂಥ ಸದರೀ ತಡಕೋಡ ಯೆಂಬವರಿಗೆ ಕೆಲಸ ದೊರೆದದ್ದು ಆಶ್ಚರ್ಯವಿರುತ್ತದೆ.

—ooo—

ಈ ಜಿಲ್ಲೆಯ ಅಸಿಷ್ಟಾಂಟ ಡಿಪುಟಿಯಾದ ರಾ. ರಾ. ಯಜ್ಞೇಶ್ವರ ವೆಂಕಾಜೀ ಯೆಂಬವರನ್ನು ಕಾನಡಾ ಜಿಲ್ಲೆಗೆ ನೇಮಿಸಿ ಅಲ್ಲಿಯ ಧೊಂಡೋ ದತ್ತಾತ್ರಯ ಯೆಂಬವರನ್ನು ಧಾರವಾಡಕ್ಕೆ ತಂದರು. ಯಜ್ಞೇಶ್ವರ ಪಂತರು ಯೆರಡು ವರ್ಷದ ರಜೆಯನ್ನು ಬೇಡಿಕೊಂಡಿದ್ದಾರೆಂದು ಕೇಳುತ್ತೇವೆ.

—ooo—

ಲಿಂಗವಂತ ಮುಂತಾದ ಜಾತಿಗಳ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಭಾಷೆಯ ಶಾಲೆಯನ್ನು ಹಾಕುವದಕ್ಕೋಸ್ಕರ ದಂಬಳದ ತೋಂಟದ ಸ್ವಾಮಿಗಳವರು ೧೫೦೦೦ ರೂಪಾಯಿ ಕೊಟ್ಟರು. ಈ ಹಣವನ್ನು ಪೆರಿಸಿ ಸದರೀ ಸ್ವಾಮಿಗಳವರ ಉಪಕಾರವನ್ನು ಮನ್ನಿಸುವ ಸಮಾರಂಭವು ಈ ತಿಂಗಳಲ್ಲಿ ಆಯಿತು

—ooo—

ಖಾನದೇಶ ಜಿಲ್ಲೆಯ ಮುಖ್ಯ ಪಟ್ಟಣವಾದ ಧುಳೆಯಲ್ಲಿ ಹೊಸದೊಂದು ಟ್ರೇನಿಂಗ ಕಾಲೇಜವು ಸ್ಥಾಪನವಾಯಿತು.

—ooo—

ವಿಜಾಪುರದಲ್ಲಿ ಹೊಸ ಹಾಯಸ್ಕೂಲು ಇಷ್ಟರೊಳಗೆ ಸ್ಥಾಪನವಾಗತಕ್ಕದ್ದಿರುತ್ತದೆಂದು ಕೇಳುತ್ತೇವೆ.

—ooo—

ಮಾಟ್ರಿಕ್ಯುಲೇಶನ್ ಪರೀಕ್ಷೆಯು ಈ ತಿಂಗಳಿನ ೧೮ನೇ ತಾರೀಖಿನಲ್ಲಿ ಆಯಿತು. ಧಾರವಾಡದಿಂದ ಹೋದ ಉಮೇದವಾರ ಜನರ ಸಂಖ್ಯವನ್ನು ಹಿಂದೆ ತಿಳಿಸಿದ್ದೇವೆ. ಪರೀಕ್ಷೆಯ ಪರಿಣಾಮವು ಇನ್ನೂ ತಿಳಿದಿಲ್ಲ.

—ooo—

ಸ್ಕೂಲಫೈನಲ್ ಯೆಂಬ ಪರೀಕ್ಷೆಯು ಮುಂದಿನ ತಿಂಗಳಿನ ೨ನೇ ತಾರೀಖಿನಲ್ಲಿ ಆರಂಭವಾಗತಕ್ಕದ್ದಿರುತ್ತದೆ. ಇದು ಮೊದಲನೇ ಪರೀಕ್ಷೆಯು.

—ooo—

ಯುನಿವರ್ಸಿಟಿಯ ಪದವಿಗಳ ಪರೀಕ್ಷೆಗಳು ಈ ತಿಂಗಳಲ್ಲಿ ಆದವು. ಫರ್ಸ್ಟ " ಬೀ. ಏ. " ಯೆಂಬ ಪರೀಕ್ಷೆಗೆ ೨೯೩ ಜನ ಕೂತವರಲ್ಲಿ ೬೭ ಜನ ಪಾಸಾದರು. " ಸಿವಿಲ್ ಇಂಜಿನೀಯರಿಂಗ " ಯೆಂಬ ಪರೀಕ್ಷೆಗೆ ಕೂತ ೪೭ ಜನರಲ್ಲಿ ೨೩ ಮಂದಿ ಇಳಿದರು. ಫರ್ಸ್ಟ " ಬೀ. ಎಸ. ಸಿ. " ಯೆಂಬ ಪರೀಕ್ಷೆಗೆ ಕೂತ ೧೪ ಜನರಲ್ಲಿ ೫ ಜನರು, " ಸೆಕಂಡ ಬೀ. ಎಸ. ಸಿ. " ಯೆಂಬ ಪರೀಕ್ಷೆಗೆ ಕೂತ ೭ ಜನರಲ್ಲಿ ಇಬ್ಬರು ಇಳಿದರು.

—ooo—

ಹಿಂದೆ ಬಿದ್ದ ಜಾತಿಗಳಿಗೆ ಸರಕಾರದವರು ವಿದ್ಯಾಭ್ಯಾಸದ ಪ್ರಸಕ್ತಿಯಲ್ಲಿಯೂ ನೌಕರಿಯ ಪ್ರಸಕ್ತಿಯಲ್ಲಿಯೂ ಹೆಚ್ಚು ಆಶ್ರಯ ಕೊಡಹತ್ತಿದ್ದರಿಂದ ಮುಸಲ್ಮಾನರಿಗೆ ವಿಶೇಷ ಲಾಭ

ವಾಗ ಹತ್ತಿರುತ್ತದೆ. ಇದನ್ನು ನೋಡಿ ವೊಬ್ಬ ಮಹಾರಾಷ್ಟ್ರ ಜಾತಿಯ ಗೃಹಸ್ಥನು ಧಾರವಾಡ ವೃತ್ತಕ್ಕೆ ಬರೆದ ಪತ್ರದಲ್ಲಿ ತೋರಿಸುವದೇನಂದರೆ, ಸನ್ ೧೮೬೭ರಿಂದ ೧೮೮೭ರ ವರೆಗೆ ಮುಲಕೀ ಪರೀಕ್ಷೆಯಲ್ಲಿ ೪೧ ಜನ ಮುಸಲ್ಮಾನರು ಪಾಸಾದರು; ಆದರೆ ಮಹಾರಾಷ್ಟ್ರರು ಅಕ್ಕಿಂತ ಹೆಚ್ಚು ಜನ ಪಾಸಾಗಿಲ್ಲ. ಆದದರಿಂದ ಸರಕಾರದವರು ಮುಸಲ್ಮಾನರಿಗಿಂತ ಮಹಾರಾಷ್ಟ್ರರಿಗೆ ಹೆಚ್ಚು ಸಹಾಯ ಮಾಡುವದು ತಕ್ಕದ್ದಾಗಿರುತ್ತದೆ.

— ○○● —

ಪುಣೆಯ ಜನರು ಕೈಹಾಕಿದ ಯಾವತ್ತು ಕೆಲಸಗಳಲ್ಲಿ ಕೀರ್ತಿ ಪಡೆಯುತ್ತಿರುವದನ್ನು ಆಗಾಗ್ಗೆ ತಿಳಿಸುತ್ತ ಬಂದಿದ್ದೇವೆ. ಆದರೆ ವೊಂದು ಕೆಲಸದಲ್ಲಿ ಮಾತ್ರ ಅವರ ಪ್ರಯತ್ನವು ನಿಷ್ಫಲವಾಗುವಂತೆ ತೋರುತ್ತದೆ. ವಿಲಾಯತಿಯ ಕೆಂಪು ಬಣ್ಣ ಕೊಡುವ ಕಾರಖಾನೆಯನ್ನು ಹಾಕುವದಕ್ಕೋಸ್ಕರ ಸುಮಾರು ೩ ವರ್ಷಗಳ ಹಿಂದೆ ಹಣ ಕೂಡಿಸಿದರು. ಆದರೆ ಆ ಕಾರಖಾನೆಯು ಇನ್ನೂ ಆರಂಭವಾಗಿಲ್ಲ, ಮುಂದೆ ಬೇಗ ಆರಂಭವಾಗಿ ಕೆಲಸವು ಸುಸೂತ್ರ ನಡೆಯುವ ಲಕ್ಷಣವೂ ತೋರುವದಿಲ್ಲ. ಇದು ಪುಣೆಯವರ ಬುದ್ಧಿ ಪ್ರಭಾವಕ್ಕೆ ಕಳಂಕವಿರುತ್ತದೆ.

— ○✱○ —

ಯುಕ್ಲೀಡ್ಡನು ಸಿದ್ಧಾಂತಗಳ ೧೩ ಪುಸ್ತಕಗಳನ್ನು ಮಾಡಿದ್ದನು, ಅವುಗಳಲ್ಲಿ ೬ ಪುಸ್ತಕಗಳು ರೂಢಿಯಲ್ಲಿರುತ್ತವೆ; ಉಳಿದ ಪುಸ್ತಕಗಳು ಇದುವರೆಗೆ ದೊರಿದಿದ್ದಿಲ್ಲ. ಅವು ಈಗ ದೊರೆತ ಸುದ್ಧಿಯು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧವಾಗಿರುತ್ತದೆ.

ಗಂಡನನ್ನು ಒಲ್ಲೆನೆಂಬ ಹಟದಿಂದ ಕೀರ್ತಿ ಪಡೆದ ರಖಮಾಬಾಯಿಯೆಂಬ ಕೀಳು ಕುಲದ ಹೆಂಗಸು ಈಗ ವಿಲಾಯತಿಯಲ್ಲಿ ಇರುತ್ತಾಳೆ. ಆಕೆಯು ಅಲ್ಲಿಯ ಜನರನ್ನು ಒಲಿಸಿಕೊಂಡು ಬಾಲವಿವಾಹದ ನಡಾವಳಿಯನ್ನು ಮುರಿಯುವ ಪ್ರಯತ್ನ ನಡಿಸಿದ್ದಾಳೆ. ಆಕೆಯನ್ನು ಊಟಕ್ಕೆ ಕರೆಯುವ ಸಮಾರಂಭವನ್ನು ಬಹು ಜನರು ಮಾಡ ಹತ್ತಿದ್ದಾರೆ. ಆಶ್ಚರ್ಯವೇ!

— ooo —

ಗ್ಲಾಸಗೋ ಪಟ್ಟಣದ ಯುನಿವರ್ಸಿಟಿಯಲ್ಲಿ ವಿದ್ಯಾರ್ಥಿಗಳಿಗೂ ಪ್ರೊಫೆಸರರಿಗೂ ದೊಡ್ಡ ಜಗಳವಾಗಿ, ವಿದ್ಯಾರ್ಥಿಗಳು ಆ ವಿದ್ಯಾಲಯದ ಖಿಡಿಕಿಗಳನ್ನು ಒಡೆದು, ಪ್ರೊಫೇಸರರಿಗೆ ಕಲ್ಲು ಬಿಗಿದು ಅನರ್ಥ ಮಾಡಿದ ಸುದ್ದಿಯುಂಟು.

— ooo —

ಹಣ ಹೂಳಿಡುವ ನಡಾವಳಿಯು ನಮ್ಮ ದೇಶದಲ್ಲಿಯೇ ಇರುತ್ತದೆಂದೆನ್ನಲಾಗದು. ಚೆಂಬರ್ಸಜರ್ನಲ್' ಯೆಂಬ ಪತ್ರದಿಂದ ತಿಳಿಯುವದೇನೆಂದರೆ ಇತಳಿ, ಫ್ರಾನ್ಸ ಸ್ವಿತ್ಸರ್ಲಂಡ ಬೆಲ್ಜಂ ಮುಂತಾದ ರಾಷ್ಟ್ರಗಳಲ್ಲಿ ಹಣ ಹೂಳಿಡುವ ನಡಾವಳಿಯು ಈಗ್ಯೂ ಇರುತ್ತದೆ. ಐರ್ಲಂಡದ ಜನರು ಬ್ಯಾಂಕ ನೋಟುಗಳನ್ನು ಹೂಳಿಡುತ್ತಾರೆ. ಜರ್ಮನಿಯಲ್ಲಿ ಸರಕಾರೀ ಹಣವನ್ನು ಬಹಳ ಹುಗಿದು ಇಟ್ಟಿದ್ದಾರೆ. ಇಂಗ್ಲಂಡದಲ್ಲಿಯೂ ಹಣ ಹುಗಿದಿಡುವವರು ಹಲಕೆಲವರುಂಟೆಂದು ತಿಳಿದಿದೆ.

— o * o —

ಅಮೇರಿಕದ ಹೆಂಗಸರು ಗಂಡಸರನ್ನು ಹಿಂದೆ ಹಾಕುವ ಪ್ರಯತ್ನ ನಡಿಸಿದ ಸುದ್ದಿಯನ್ನು ಆಗಾಗ್ಗೆ ತಿಳಿಸುತ್ತಿರು

ತ್ರೀವಷ್ಟೇ ಅವರು ಈಗ ತಮಗೆ ಒಳ್ಳೆ ಗಡ್ಡ ಬರುವ ಉಪಾಯಗಳನ್ನು ಬಹು ಪ್ರಯಾಸದಿಂದ ಹುಡುಕ ಹತ್ತಿದ್ದಾರೆ! ವಿಶ್ವಾಮಿತ್ರ ಸೃಷ್ಟಿಯನ್ನು ಈ ಹೆಂಗಸರು ನಾಚಿಸುವಂತೆ ತೋರುತ್ತದೆ.

—o—

ಕೊಚೀನ ಪಟ್ಟಣದಲ್ಲಿ ೯ ಜನ ರಾಜ ಕನ್ನಿಕೆಯರ ಲಗ್ನವಾಗತಕ್ಕದ್ದಿರುವ ಕಾರಣ ದೊಡ್ಡ ಸಮಾರಂಭವು ನಡಿದಿದೆ. ಈ ಶೀಮೆಯ ನಡಾವಳಿಯಂತೆ ರಾಜವಂಶದಲ್ಲಿ ಸಹ ಮಗನು ತಂದೆಯ ಆಸ್ತಿಗೆ ಬಾಧ್ಯನಾಗದೆ ಅಕ್ಕ ತಂಗಿಯರ ಮಕ್ಕಳು ಬಾಧ್ಯಸ್ಥರಾಗುತ್ತಾರೆ. ೯ ಜನ ಕನ್ನಿಕೆಯರಿಗಾಗಿ ೯ ಜನ ನಂಬೂರಿ ಯೆಂಬ ಬ್ರಾಹ್ಮಣ ಕುಲದವರನ್ನು ಅರಸನು ಬಹಳ ಹಣ ಕೊಟ್ಟು ತಂದಿದ್ದಾನೆ, ಅವರಿಗೆ ಆ ಕನ್ನಿಕೆಯರನ್ನು ಕೊಟ್ಟು ಅವರನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಳ್ಳುವನಂತೆ. ಇಂಥಾ ನಡಾವಳಿಯು ಭೂಮಿಯ ಮೇಲೆ ಯೆಲ್ಲಾದರೂ ಇರುವದೋ?

—o—

ಸರಾಯಿ ಕುಡಿಯುವ ದುರಾಚಾರವನ್ನು ಮುರಿಯುವ ಪ್ರಯತ್ನವು ಬಹಳ ಕಡೆಯಲ್ಲಿ ನಡಿದಿರುತ್ತದೆ. ಈ ಕೆಲಸದಲ್ಲಿ ಈ ದೇಶದವರೂ ವಿಲಾಯತಿಯವರೂ ಮೊಳಿತಾಗಿ ಪ್ರಯತ್ನ ನಡಿಸಿದ್ದಾರೆ. ಇವಾನ್ಸ ಯೆಂಬ ಪಾದ್ರಿಯು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಾಖ್ಯಾನಗಳನ್ನು ಕೊಡುತ್ತಿರುತ್ತಾನೆ. ಕಾಶಿಗೆ ಅವನು ಹೋಗಿ ವ್ಯಾಖ್ಯಾನ ಕೊಡುವಾಗ ೪೦೦೦ ಜನರು ಸರಾಯಿ ಕುಡಿಯಲಿಕ್ಕಿಲ್ಲವೆಂದು ಆಣೆ ಇಟ್ಟುಕೊಂಡಿರುತ್ತಾರೆಂದು ಅಲ್ಲಿಯ ಪ್ರಮುಖ ಜನರು ಅವನಿಗೆ ತಿಳಿಸಿದರು ಆದ

ರೂ ಕಾಶಿಯಲ್ಲಿ ಇದ್ದಷ್ಟು ಸರಾಯಿಯ ಅಂಗಡಿಗಳು ಬೇರೆ ಯಾವ ಪಟ್ಟಣದಲ್ಲಿಯೂ ಇಲ್ಲವೆಂದು ಕೇಳುತ್ತೇವೆ.

—ooo—

History of the Midle Ages

ಯುರೋಪದ ಮಧ್ಯಕಾಲದ ಇತಿಹಾಸವು

(೨೪೦ನೇ ಪುಟದಿಂದ ಮುಂದೆ ಸಾಗಿದ್ದ)

೫ನೇ ಕ್ಲೆಮೆಂತನೆಂಬ ಪೋಪನು ಮೊದಲು ಫ್ರಾನ್ಸದ ನಿವಾಸಿಯಾದದರಿಂದ ಅಲ್ಲಿಯ ಅರಸನ ಹೇಳಿಕೆಯಂತೆ ಅವಿಗ್ನನ್ ಪಟ್ಟಣದಲ್ಲಿ ಹೋಗಿ ನಿಂತನು, ೧೩೦೫. ಅವನ ತರುವಾಯದ ಆರು ಜನರು ಪೋಪಗಳು ಫ್ರೆಂಚರೇ ಆದದರಿಂದ ಅವರು ಇದೇ ಪಟ್ಟಣದಲ್ಲಿ ವಾಸಿಸಿದರು.

ಜರ್ಮನಿಯ ಲೂಯಿ ಚಕ್ರವರ್ತಿಯು ಇತಲಿಯೊಳಗಿನ ಪ್ರಾಂತಗಳನ್ನು ಪುನಃ ತಕ್ಕೊಳ್ಳುವ ಉದ್ಯೋಗ ನಡಿಸಲಾಗಿ ಪೋಪನು ಅವನ ಸಂಗಡ ಜಗಳ ತೆಗೆದು ಚಕ್ರವರ್ತಿಯನ್ನು ನೇಮಿಸುವ ಅಧಿಕಾರವು ಪ್ರಜೆಗಳಿಗೆ ಕೊಡಲ್ಪಟ್ಟಾಗ್ಯೂ ಅವರಿಂದ ನೇಮಿಸಲ್ಪಟ್ಟ ಚಕ್ರವರ್ತಿಯ ಬಗ್ಗೆ ಪೋಪನ ಸಂಮತಿಯು ಬೇಕೆಂತಲೂ, ಆ ಚಕ್ರವರ್ತಿಯು ಸಿಂಹಾಸನಾರೂಢನಾದ ಬಳಿಕ ಪೋಪನ ಮುಂದೆ ಶಪಥ ತಕ್ಕೊಳ್ಳತಕ್ಕವನೆಂತಲೂ ವಾದ ಹೂಡಿದನು. ಈ ಜಗಳದಲ್ಲಿ ಪೋಪನು ಲೂಯಿಗೆ ಬಹಿಷ್ಕಾರ ಹಾಕಿ ಅವನ ಪ್ರಜೆಗಳನ್ನು ರಾಜನಿಷ್ಠೆಯಿಂದ ಮುಕ್ತ ಮಾಡಿದಾಗ್ಯೂ, ಅವರು ತಮ್ಮ ಚಕ್ರವರ್ತಿಯನ್ನು ಬಿಡಲಿಲ್ಲ, ೧೩೨೩. ಆದರೆ ಲೂಯಿಯು ಸ್ವಲ್ಪ ಹೆಚ್ಚಿಗೆ ಜಾಗ್ರತೆಯಿಂದ ವರ್ತಿಸಿದ್ದರೆ, ಅವನು ಈ ಜಗ

ಳದಲ್ಲಿ ಸುಲಭವಾಗಿ ಜಯ ಹೊಂದುತ್ತಿದ್ದನು.

ಈ ಮೇರಿಗೆ ಪೋಪನು ತೋರಿಕೆಯಲ್ಲಿ ಬಲಾಢ್ಯನೆನಿಸಿಕೊಂಡಾಗ್ಯೂ ನಿಜವಾಗಿ ಅವನ ಅಧಿಕಾರವು ದಿನದಿನಕ್ಕೆ ಹಿಮ್ಮೆಟ್ಟುತ್ತಿತ್ತು. ಫ್ರಾಂಕಫೋರ್ಟದ ಸಭೆಯವರು ಚಕ್ರವರ್ತಿಯನ್ನು ನೇಮಿಸುವದರಲ್ಲಿ ಪೋಪನಿಗೆ ಯೇನೇನು ಅಧಿಕಾರವಿಲ್ಲೆಂದು ಹೇಳಿ ದೇಶಗಳಲ್ಲಿ ಶಾಲೆಗಳು ಸ್ಥಾಪಿಸಲ್ಪಟ್ಟು ವಿದ್ಯಾಭ್ಯಾಸವು ಬೆಳೆದು, ಜನರು ವಿಚಾರಕ್ಕೆ ಮೆಚ್ಚಿದರು. ವಿದ್ವಾಂಸರೂ ದೇಶಭಿಮಾನಿಗಳು ಪೋಪನ ಅಧಿಕಾರವನ್ನು ತಗ್ಗಿಸುವ ಪ್ರಯತ್ನಕ್ಕೆ ಬಿದ್ದರು. ಹಾಡುಗಳ ರೂಪದಿಂದಲೂ, ಕಥೆಗಳ ರೂಪದಿಂದ ಪೋಪಗಳ ದರ್ಬಾರಿನಲ್ಲಿ ನಡೆಯುವ ದುರಾಚಾರಗಳ ಬೈಲಿಗೆ ಬರಹತ್ತಿದವು. ೨೨ನೇ ಜಾನನೆಂಬ ಪೋಪನು ಕೆಲವು ಸನ್ಯಾಸಿಗಳನ್ನು ಪೀಡಿಸಿದರಿಂದ ಪೋಪನು ಖ್ರಿಸ್ತನಿಗೆ ವಿರೋಧಿಯಾದವನೆಂದು ಅವರು ಪ್ರಸಿದ್ಧವಾಗಿ ಪ್ರತಿಪಾದಿಸಿ, ಲೂಯಿಸಗೆ ಆಶ್ರಯ ಕೊಟ್ಟರು. ಇತ್ತ ಈ ಸಮಯದಲ್ಲಿ ಪೋಪನ ದರ್ಬಾರಿನವರ ಸುಲಿಗೆಗಳು ಮಿತಿಮೀರಿದವು. ೨೨ನೇ ಜಾನನು ಮೊದಲಿನ ಫಲವೆಂಬ ತೆರಿಗೆಯನ್ನು ಜನರ ಮೇಲೆ ಕೂಡ್ರಿಸಿ, ಖ್ರಿಸ್ತೀ ರಾಜ್ಯಗಳಲ್ಲೆಲ್ಲ ಬಿಶಪಗಳೆಂಬ ಧರ್ಮಾಧಿಕಾರಿಗಳನ್ನು ನೇಮಿಸುವ ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡನು. ಸಾರಾಂಶವೇನಂದರೆ ಪೂರ್ವದ ಪೋಪಗಳು ದೊಡ್ಡ ರಾಜ್ಯಗಳನ್ನು ಸಂಪಾದಿಸಲಿಕ್ಕೆ ಹವಣಿಸುವರು; ಆದರೆ ಈಗಿನವರು ಅವರಿಗಿಂತ ಕೀಳು ಮನಸ್ಸಿನವರಾಗಿ ಹಣ ಸಂಪಾದಿಸಲಿಕ್ಕೆ ಹವಣಿಸುವರು.

೧೧ನೇ ಗ್ರೇಗರಿಯು ತನ್ನ ಸಿಂಹಾಸನವನ್ನು ಪುನ: ರೋಮಕ್ಕೆ ಒಯ್ದನು, ೧೩೭೭. ಅವನು ತೀರಿದ ಬಳಿಕ ಇತಲಿ

ಯು ಜನರು ತಮ್ಮೊಳಗಿನವನೊಬ್ಬನನ್ನು ೬ನೇ ಅರ್ಬನ್ನೆಂಬ ಹೆಸರಿನಿಂದ ನೇಮಿಸಲಾಗಿ, ಕಾರ್ಡಿನಲ್‌ಗಳೆಂಬ ಅಧಿಕಾರಿಗಳಿಗೂ, ಅವನಿಗೂ ವ್ಯಾಜ್ಯ ಹುಟ್ಟಿ, ಅವರು ಅವನನ್ನು ತಳ್ಳಿ ರಾಬರ್ಟನೆಂಬವನೊಬ್ಬ ಫ್ರೆಂಚನನ್ನು ೭ನೇ ಕ್ಲೇಮೆಂತನೆಂಬ ಹೆಸರಿನಿಂದ ಪಟ್ಟಕ್ಕೆ ಕೂಡ್ರಿಸಿ, ಅವನು ಅವಿಗ್ನನ್ ಪಟ್ಟಣದಲ್ಲಿರಬೇಕೆಂದು ಗೊತ್ತು ಮಾಡಿದರು, ೧೩೭೮.

ತರುವಾಯ ಕೆಲವು ದೇಶಗಳು ಅರ್ಬನ್ನನ ಪಕ್ಷವನ್ನೂ, ಕೆಲವು ದೇಶಗಳು ಕ್ಲೇಮೆಂಟನ ಪಕ್ಷವನ್ನೂ ಸ್ವೀಕರಿಸಿದವು. ಈ ಯೆರಡೂ ಪಕ್ಷಗಳ ಪೋಪಗಳು ತೀರಿ, ಅರ್ಬನ್ನನ ಹಿಂದೆ ಮೂರು ಮಂದಿ ಪೋಪಗಳೂ, ಕ್ಲೇಮೆಂಟನ ಹಿಂದೆ ಮತ್ತೊಬ್ಬ ಪೋಪನೂ ಆದನು. ಈ ಜಗಳಗಳು ಸನ್ನ ೧೪೦೯ನೇ ವರ್ಷದ ವರೆಗೆ ನಡೆದು ಕಡೆಯಲ್ಲಿ ಪೈಸಾ ಪಟ್ಟಣದಲ್ಲಿ ದೊಡ್ಡದೊಂದು ಸಭೆ ಕೂಡಿ, ಯೆರಡೂ ಪಕ್ಷಗಳ ಪೋಪಗಳನ್ನು ತಳ್ಳಿ ೫ನೇ ಅಲೆಕ್ಸಾಂಡರನೆಂಬ ಹೊಸ ಪೋಪನನ್ನು ಪಟ್ಟಕ್ಕೆ ಕೂಡ್ರಿಸಿದರು. ಆದರೆ ಇನ್ನೂ ಕೆಲವು ದೇಶಗಳು ಮುಂಚಿನ ಪೋಪಗಳಿಗೆ ಆಶ್ರಯ ಕೊಟ್ಟದ್ದರಿಂದ, ಇಬ್ಬರ ಸ್ಥಳದಲಿ ಮೂವರು ಪೋಪಗಳಾದರು. ಆದದರಿಂದ ಸನ್ನ ೧೪೧೪ನೆ ವರ್ಷ ಕಾನಸ್ಟನ್ಸ ಪಟ್ಟಣದಲ್ಲಿ ಮತ್ತೊಮ್ಮೆ ಸಭೆಯಾಗಿ ಈ ಮೂರು ಮಂದಿ ಪೋಪಗಳನ್ನು ಮುರಿದು ೫ನೇ ಮಾರ್ಟೀನ್ನನೆಂಬ ಹೊಸ ಪೋಪನನ್ನು ನೇಮಿಸಿದರು. ಈ ಯೆರಡನೇ ಸಭೆಯಲ್ಲಿ ಪೂರ್ವದ ಸಭೆಗಳಂತೆ ಕೇವಲ ಧರ್ಮ ಸಂಬಂಧದ ಜನರೇ ಕೂಡಿದ್ದಿಲ್ಲ. ಯುನಿವರ್ಸಿಟಿಯೆಂಬ ಮಹಾವಿದ್ಯಾಲಯಗಳಿಂದಲೂ, ಕೆಲವರು ಅರಸರಿಂದಲೂ ವಕೀಲರು ಈ ಸಭೆಗೆ ಕಳುಹಲ್ಪಟ್ಟಿದ್ದರು. ರಾಜ್ಯದಾಡಳತೆಯಲ್ಲಿ,

ಪೋಪಗಳ ಸ್ವಾತಂತ್ರ್ಯವನ್ನು ಮುರಿದು ರಾಜಪ್ರಜಾತ್ಮಕ ಪದ್ಧತಿಯನ್ನು ನೆಲೆಗೊಳಿಸುವದೇ ಈ ಸಭೆಯವರ ಮುಖ್ಯ ಉದ್ದೇಶವು. ಈ ಸಭೆಯಲ್ಲಿ ಇಟಾಲಿಯನ್ ಜರ್ಮನ್, ಫ್ರೆಂಚ ಇಂಗ್ಲಿಷ, ಯೆಂಬ ಸಮಾನ ಅಧಿಕಾರವುಳ್ಳ ನಾಲ್ಕು ಭಾಗಗಳಾಗಿ, ಅವರಿಂದ ವೊಂದು ಸುಧಾರಣೆಯ ಸಮಾಜವು ನೇಮಿಸಲ್ಪಟ್ಟಿತು. ಆದರೆ ಈ ನಾಲ್ಕು ಭಾಗಗಳಲ್ಲಿ ಪರಸ್ಪರ ದ್ವೇಷ ಭಾವವುಂಟಾಗಿ, ಕಡೆಯಲ್ಲಿ ಮಾರ್ಟಿನ್ನನು ಈ ಸಭೆಯನ್ನು ಮುರಿದು ಬಿಟ್ಟನು.

ಮುಂದೆ ಸಾಗುವದು.

— ooo —

Correspondence
ಪತ್ರವ್ಯವಹಾರವು.

(೧೪೪ನೇ ಪುಟದಿಂದ ಮುಂದೆ ಸಾಗಿದ್ದು.)

(೩) ಶಾಲಾ ಮಾಸ್ತರರ ಹೊಸ ಕಾಯಿದೆ ೮ನೇ ಭಾಗದ ೭ನೇ ನಿಯಮದಲ್ಲಿ ಹೇಳಿದ ಪ್ರಕಾರ ಸನ್ ೧೮೭೧ನೇ ಇಸವಿಯ ಈಚೆಗೆ ನೌಕರಿಯಲ್ಲಿ ಸೇರಿದ ಅಂಟ್ರೆಂಡ ಜನರನ್ನು ಕೆಲಸದಿಂದ ತೆಗೆಯ ಹತ್ತಿದರೆ, ಬಹು ದಿವಸ ನಂಬಿಗೆಯಿಂದ ಕೆಲಸ ಮಾಡಿದ ನಮ್ಮ ಬಡ ಮಾಸ್ತರ ಜನರ ಲುಕಸಾನಕ್ಕೆ ಅಳತೆಯಿಲ್ಲದಂತಾಗುವದು. ಆದ್ದರಿಂದ ವಿದ್ಯಾಖಾತೆ ಸರಕಾರದವರು ಈ ನಿಯಮವನ್ನು ಅಮಲಿನಲ್ಲಿ ತಾರದೆ, ಸನ್ ೧೮೮೧ನೇ ಇಸವಿಯ ಜಾನೇವರಿ ಮೊದಲನೇ ತಾರೀಖಿನಿಂದ ಈಚೆಗೆ ನೌಕರಿಯಲ್ಲಿ ಶೇರಿದಂಥ ಮುಲಕಿ ಸರಟಿಫಿಕೇಟು ಇಲ್ಲದಂಥ (೮) ರುಪಾಯಕ್ಕಿಂತ

ಕಡಿಮೆ ಸಂಬಳುಳ್ಳಂಥ ಶಿಕ್ಷಕ ಜನರನ್ನು ನೌಕರಿಯಿಂದ ತೆಗೆದುಹಾಕಿ, ಮೇಲಿನ (೨) ನೇ ನಿಯಮದಲ್ಲಿ ಹೇಳಿದಂಥ ಯೋಗ್ಯ ಜನರನ್ನೇ ಕೆಲಸದಲ್ಲಿ ಸೇರಿಸಬೇಕು. ದಯಾನಿಧಿಗಳಾದ ನಮ್ಮ ಜಿಲ್ಹೆಯ ರಾ. ಸಾ. ಡಿ. ಎ. ಇ. ಸೌದಿ ಧೊರೆಗಳು ಈ ನಿಯಮದ ಒಳ್ಳೇ ಉಪಯೋಗವನ್ನು ಸತ್ವರೆಯಿಂದ ಅಮಲಿನಲ್ಲಿ ತರಹತ್ತಿದ್ದನ್ನು ಕಂಡು, ನಾನು ಸಂತೋಷಭರಿತನಾಗಿದ್ದೇನೆ.

(೪) ಸನ್ ೧೮೭೧ನೇ ಇಸವಿಯ ಜಾನುವರಿ ತಿಂಗಳ ೧ನೇ ತಾರೀಖಿನಿಂದ ಈಚೆಗೆ ನೌಕರಿಯಲ್ಲಿ ಸೇರಿದಂಥ ಪೆನ್‌ಶನ್ ಲಾಯಖ ಸಂಬಳ ಇಲ್ಲದಂಥ ಅಂಟ್ರಂಡ ಮಾಸ್ತರ ಹಾಗು ಅಸಿಸ್ಟಂಟ ಮಾಸ್ತರಿಗಾಗಿ ಹೊಸದೊಂದು ಪರೀಕ್ಷೆಯನ್ನು ಇಡುವದು ಗಣಿತ, ಕನ್ನಡ ಭಾಷಾಪದ್ಧತಿ (ಗದ್ಯ ಪದ್ಯಾತ್ಮಕಗಳ ಜ್ಞಾನ), ಶಿಕ್ಷಣದ ಮುಖ್ಯ ತತ್ವಗಳು, ಇವೇ ಈ ಪರೀಕ್ಷೆಯ ಮುಖ್ಯ ವಿಷಯಗಳಾಗಿರಬೇಕು. ಈ ಪರೀಕ್ಷೆಗೆ ಹೋಗುವ ಮಾಸ್ತರ ಜನರಿಗೆ ವಯಸ್ಸಿನ ನಿರ್ಬಂಧವಿರಬಾರದು. ಈ ಪರೀಕ್ಷೆಯಲ್ಲಿ ಪಾಸಾದವರು ಶಿಕ್ಷಣದ ಕೆಲಸಕ್ಕೆ ಯೋಗ್ಯರಾಗುತ್ತಾರೆಂದೂ ಮತ್ತು ಮೇಲಿನ (೧) ನೇ ನಿಯಮದಲ್ಲಿ ಹೇಳಿದ ಯೋಗ್ಯ ಸಂಬಳವನ್ನು ಪಡೆಯಲಿಕ್ಕೆ ಲಾಯಖರಾಗುತ್ತಾರೆಂದೂ ಗೊತ್ತು ಮಾಡಲ್ಪಡಬೇಕು. ಆದರೆ ಮೇಲಿನ (೩) ನೇ ನಿಯಮಕ್ಕೆ ಅನುಸರಿಸಿದವರೂ, ಶಾಲಾ ಶಿಕ್ಷಕರಲ್ಲದಂಥ ಪರಾಯ ಜನರೂ ಈ ಪರೀಕ್ಷೆಗೆ ಹೋಗಕೂಡದು.

(೫) ಚೆನ್ನಾಗಿ ಕೆಲಸ ಮಾಡುತ್ತಿರುವ ಯಾವತ್ತು ಮಾಸ್ತರ ಹಾಗು ಅಸಿಸ್ಟಂಟ ಮಾಸ್ತರ ಜನರಿಗೆ ಅವರವರ

ಯೋಗ್ಯತಾನುಸಾರ ಬಡತಿಗಳನ್ನೂ, ಇನಾಮುಗಳನ್ನೂ ತಪ್ಪದೆ ಕೊಡುತ್ತಿರಬೇಕು. ಅಂದರೆ ನಾವು ಮನಮುಟ್ಟಿ ಕೆಲಸ ಮಾಡಿದರೆ ನಮಗೆ ನಿಶ್ಚಯವಾಗಿ ಒಳ್ಳೇ ಫಲ ದೊರಕುವದೆಂಬ ನಂಬಿಗೆಯಿಂದ ಎಲ್ಲ ಮಾಸ್ತರರು ತಮ್ಮ ತಮ್ಮ ಶಾಲೆಗಳನ್ನು ಊರ್ಜಿತ ಸ್ಥಿತಿಗೆ ತರಬೇಕೆಂಬ ಕುತೂಹಲವುಳ್ಳವರಾಗುತ್ತಾರೆ.

(೬) ಯಾವತ್ತು ದೇಶ ಭಾಷೆಯ ಶಾಲೆಗಳಲ್ಲಿ ಪ್ರೌಢ ವಿದ್ಯಾರ್ಥಿಗಳಿಗೆ ನೀತಿಯ ಆಚರಣಗಳನ್ನೂ, ಈಗಿನ ವ್ಯವಹಾರ ಉದ್ಯೋಗಗಳ ಅಭ್ಯಾಸವನ್ನೂ ಅವಶ್ಯ ಹೆಚ್ಚಿನ್ನೆ ಕಲಿಸುವದು. ಇದರಿಂದ ಶಾಲಾ ವಿದ್ಯೆಯ ಯಥಾ ಉಪಯೋಗವು, ವಿದ್ಯಾರ್ಥಿಗಳ ಹಾಗು ಅವರ ತಾಯಿ ತಂದೆಗಳ ಮನಸಿನಲ್ಲಿ ತತ್ಕಾಲವೇ ಬರುವದರಿಂದ ಊರ ಜನರೆಲ್ಲರು ತಮ್ಮ ಮಕ್ಕಳು ಮರಿಗಳಿಗೆ ಶಾಲಾ ವಿದ್ಯವನ್ನು ಅತ್ಯವಶ್ಯವಾಗಿ ಕಲಿಸಬೇಕೆಂಬ ಲವಲವಿಕೆಯುಳ್ಳವರಾಗುತ್ತಾರೆ.

(೭) ಸೃಷ್ಟ ಪದಾರ್ಥಗಳ ಜ್ಞಾನವನ್ನೂ, ಸುಲಭವಾದ ಕಲಾಕೌಶಲ್ಯದ ಕೃತಿಗಳ ಅಭ್ಯಾಸವನ್ನೂ, ಮತ್ತೂ ಕೆಲವು ಹಸ್ತಕೌಶಲ್ಯದ ಪಾಶ್ಚಿಮಾತ್ಯ ವಿದ್ಯಗಳನ್ನೂ ಬೆಳೆಸುವ ಬಗ್ಗೆ ಉತ್ತೇಜನ ಕೊಡುವದು ಈ ಮೇಲಾದ ಸುಧಾರಣೆಯನ್ನು ಅನುಲಕ್ಷಿಸಿ ಈಗಿನ ಹೊಸ ವಾಚನ ಪುಸ್ತಕಗಳು (ವಿಶೇಷವಾಗಿ ೫ನೇ, ೬ನೇ, ಪುಸ್ತಕಗಳು) ರಚಿಸಲ್ಪಟ್ಟಿರುತ್ತವೆ. ರಸ ಭರಿತವಾದ ಈ ಪುಸ್ತಕಗಳಿಂದ ನಮ್ಮೆಲ್ಲರಿಗೆ ದೊರೆಯುತ್ತಿರುವ ಅನಂತ ಲಾಭಗಳನ್ನು ನಾವು ಮನಸಿನಲ್ಲಿ ತಂದರೆ, ಈ ಗ್ರಂಥಗಳನ್ನು ರಚಿಸಿದ ನಮ್ಮ ಮಾಜೀ ಕನ್ನಡ ಟ್ರಾನ್ಸಲೇಟರರಾದ ರಾ. ಸಾ. ವೆಂಕಟ

ಂಗೇ ಕಟ್ಟಿ ಧೈರಿಗಳ ಸನ್ನುತ ಉಪಕಾರವನ್ನು ನಾವು ಎಷ್ಟು ಪರಿಯಿಂದ ಕೊಂಡಾಡಿದರೂ ತೀರದು.

(೮) ಶಾಲಾ ಸುಧಾರಣೆಯ ಹಲವು ಮೇಲಾದ ಉಪಾಯಗಳಲ್ಲಿ ದೇಶ ಭಾಷೆಯನ್ನು ಸುಧಾರಿಸುವದೇ ಎಲ್ಲಕ್ಕೂ ಮೊದಲಿನ ಉಪಾಯವು ಹಾಗು ಸರಕಾರದವರ ಮುಖ್ಯ ಉದ್ದೇಶವಾದರೂ ದೇಶಭಾಷೆಯನ್ನು ಸುಧಾರಿಸಬೇಕೆಂಬದೇ ಇರುತ್ತದೆ. ಹೀಗಿದ್ದು ಈಗಿನ ಮಾಸ್ತರರಲ್ಲಿ ಎಷ್ಟೋ ಜನರಿಗೆ ಶುದ್ಧವಾದ ಕನ್ನಡ ಭಾಷಾ ಪದ್ಧತಿಯ ಮಾರ್ಗವು ಗೊತ್ತಿಲ್ಲೆಂಬದಕ್ಕೆ ಶಾಲಾ ಪತ್ರಕದಲ್ಲಿ ಇದುವರೆಗೆ ಪ್ರಸಿದ್ಧವಾಗುತ್ತ ಬಂದ ಪತ್ರಗಳೇ ಸಾಕ್ಷಿಯಾಗಿರುತ್ತವೆ. ಅಚ್ಚಗನ್ನಡ ಶಬ್ದಗಳನ್ನು ಬಿಟ್ಟು ಅಗತ್ಯವಿಲ್ಲದ ಅನ್ಯ ದೇಶಶಬ್ದಗಳಿಂದಲೂ ಮಹಾರಾಷ್ಟ್ರ ವಾಕ್ಯದ ಪದ್ಧತಿಯಿಂದಲೂ ವ್ಯಾಕರಣಕ್ಕೆ ವಿರುದ್ಧವಾದ ಪ್ರಯೋಗಗಳಿಂದಲೂ, ಇತ್ಯಾದಿ ದೋಷಗಳಿಂದ ಕೂಡಿದ ಕೊಳಕ ಭಾಷೆಯ ಲೇಖಗಳನ್ನು ಕಾಣುವದು ಅಪರೂಪವಲ್ಲ. ನಾನಾದರೂ ಇದೇ ವರ್ಗದವನೇ ಇರಬಹುದು. ಆದಾಗ್ಯೂ ಈಗ ವಿದ್ಯಾಖಾತೆಯಲ್ಲಿ ಅಭಿಜ್ಞರೆನಿಸಿ ಸದಾ ಸತ್ಕೀರ್ತಿಯನ್ನು ಹೊತ್ತುಕೊಳ್ಳುವ ಉಯೋಭಂತರರಾದ ನಮ್ಮ ರಾ. ಸಾ. ವೆಂಕಟರಾಯರು ಕನ್ನಡ ತ್ರಾನ್ಸಲೇಟರ ಕೆಲಸದಲ್ಲಿ ಜನ್ಮ ಕಳೆದದರಿಂದ ಈ ಸದ್ಗೃಹಸ್ಥರು ತಮ್ಮ ಕರ್ತವ್ಯ ಕರ್ಮವನ್ನು ಅನುಲಕ್ಷಿಸಿ, ಅಚ್ಚಗನ್ನಡ ಭಾಷೆಯಿಂದ ಪೂರ್ಣವಾದ ಸರಸ ಗ್ರಂಥಗಳನ್ನು ರಚಿಸಿ, ನಮ್ಮ ದಕ್ಷಿಣ ಭಾಗದಲ್ಲೆಲ್ಲ ಹರವಿಬಿಟ್ಟದರಿಂದ ಕನ್ನಡ ಭಾಷಾ ಸುಧಾರಣೆಯ ಆರಂಭದ ಕಾಲವು ಈಗೀಗ ಪ್ರಾಪ್ತಿಯಾಗಿರುತ್ತದೆಂದು ಹೇಳಬಹುದು.

ಇದೇ ಸಂಧಿಯಲ್ಲಿ ಘನ ವಿದ್ವಾಂಸರೂ, ಕನ್ನಡಿಗರೂ ಆದ ರಾ. ಸಾ. ದೇಶಪಾಂಡೆ ದೊರೆಗಳು ಈ ತ್ರಾನ್ಸಲೇಟರ ಕೆಲಸವನ್ನು ಕೈಕೊಂಡದ್ದರಿಂದ ಕಬ್ಬಿನ ಮೇಲೆ ಇಟ್ಟಂತಾಯಿತು. ಕಲಿಸುವ ಕೆಲಸದಲ್ಲಿ ಭಾಷಾ ಜ್ಞಾನವು ಪೂರಾ ಇದ್ದ ಹೊರ್ತು ಎಂಥಾ ದೊಡ್ಡ ವಿದ್ವಾಂಸನಿದ್ದರೂ ಸುಶಿಕ್ಷಕನೆನಿಸಲಾರನು. ಆದ್ದರಿಂದ ವಿದ್ಯಾಖಾತೆ ಸರಕಾರದವರು ದೇಶಭಾಷಾ ಸುಧಾರಣೆಗಾಗಿ ಏನಾದರೊಂದು ಅಥವಾ ಹಲವು ಬಲವಾದ ಕಟ್ಟಳೆಗಳನ್ನು ಮಾಡಿಡಬೇಕು.

ಅಯ್ಯಾ ವಿದ್ಯಾಖಾತೆಯ ಒಡೆಯರೇ! ನಾನು ಮೇಲೆ ಉಲ್ಲೇಖಿಸಿದ ವಿದ್ಯಾವೃದ್ಧಿಯ ಮಾರ್ಗಗಳನ್ನು ಒಳ್ಳೇ ವಿಚಾರದಿಂದಲೂ, ಅನುಭವದಿಂದಲೂ ಹುಡುಕಿ ತೆಗೆದಿರುವೆನು. ಆದ್ದರಿಂದ ಈ ಕಟ್ಟಳೆಗಳು ಉಲ್ಲಂಘಿಸ ಕೂಡದಂಥಾವೂ, ದಯಾನಿಧಿಗಳಾದ ತಾವು ವಿಶೇಷ ವಿಚಾರ ಮಾಡಲಿಕ್ಕೆ ಯೋಗ್ಯವಾದಂಥವೂ ಇರಬಹುದೆಂದು ನಾನು ತುಂಬಾ ನಂಬಿದ್ದೇನೆ.

ಓ ಸ್ವಾಮೀ! ಪತ್ರಕರ್ತ ಮಹಾರಾಯರೇ! ಪತ್ರವು ಬಹಳ ಬೆಳೆದದರಿಂದ ಪತ್ರವಿಸ್ತಾರಕ್ಕೂ ಹಸ್ತದೋಷಕ್ಕೂ ಕ್ಷಮಾ ಬೇಡಿಕೊಂಡು, ಇನ್ನು ನಾನು ನನ್ನ ನಿತ್ಯದ ಕೆಲಸಕ್ಕೆ ತೊಡಗುತ್ತೇನೆ. ಲೋಭವಿರಲಿ ಇತಿ ವಿಜ್ಞಾಪನ:

ತಾ. ೧೬-೬-೮೯ ಇಸವಿ
ಶಾಲಾ ಬಬಲೇಶ್ವರ
ತಾಲೂಕ ವಿಜಾಪೂರ.

ಶಿದರಾಮಗೌಡಾ ಶಿದ್ದನಗೌಡಾ
ನಿಡಗುಂದಿ ಇ. ಹೆಡ್ಡ ಮಾಸ್ತರ
ಸ್ಕೂಲ ಬಬಲೇಶ್ವರ.

* * *

ರಾವಸಾಹೇಬ ಕನ್ನಡ ಶಾಲಾಪತ್ರಕರ್ತ ಎಡಿಟರ ದಕ್ಷಿಣ ಭಾಗ ಇವರ ಚರಣ ಕಮಲಗಳಿಗೆ—

ವಿ. ವಿ. ಅಂಪ್ಯಾ ಎಡಿಟರ ಧೊರೆಗಳೇ ತಾವು ಕೆಳಗೆ ಬರೆದ ಸಂಗತಿಯನ್ನು ಅತಿ ಮನೋಹರವಾದ ಶಾಲಾಪತ್ರಕದಲ್ಲಿ ಅಚ್ಚು ಹಾಕುವಿರೆಂಬ ಮಹಾದಾಶಯಿಂದ ಸನ್ನದ್ಧನಾಗಿದ್ದೇನೆ.

ಗಾಂವಟಿಶಾಲೆಗಳ ವಿಷಯವಾಗಿ.

ಈ ನಮ್ಮ ಹಿಂದುಸ್ಥಾನದಲ್ಲಿ ಇಂಗ್ಲಿಷರ ರಾಜ್ಯ ಬರುವದರಕಿಂತಾ ಮೊದಲು ಹಾಗೂ ಬಂದಮೇಲೆ ದರಬಂದು ಹಳ್ಳಿಗಾಡ ಊರುಗಳಲ್ಲಿ ಸರಕಾರಿ ಶಾಳಾ ಆಗುವ ಪೂರ್ವದಲ್ಲಿ ಈ ದೇಶದಲ್ಲಿ ಎಷ್ಟು ಅಜ್ಞಾನತ್ವ ಇತ್ತು ಈಗೆ (ಅಂದರೆ) ಸರಕಾರ ಶಾಳಾ ಆದಂದಿನಿಂದ ಜನರು ವಿದ್ಯಾದಲ್ಲಿ ಪರಿಪೂರ್ಣರಾಗಿ, ಹಳ್ಳಿಗಾಡ ಜನರಲ್ಲಿ ಸಹ ಕೆಲವರು ದೊಡ್ಡ ದೊಡ್ಡ ಪರೀಕ್ಷೆಯನ್ನು ಕೊಟ್ಟು, ದೊಡ್ಡ ದೊಡ್ಡ ನೌಕರರಾಗಿದ್ದಾರೆ ಇದು ಎಲ್ಲರ ಅನುಭವದ ಮಾತು. ಆದರೆ ಪೂರ್ವದ ಜನರು ವಿದ್ಯದಲ್ಲಿ ಹಿಂದೆ ಬಿದ್ದಿದ್ದರು. ಈಗಿನ ಜನರು ವಿದ್ಯವನ್ನು ವೃದ್ಧಿಸುತ್ತ ನಡಿದಿದ್ದಾರೆ. ಇದರ ಕಾರಣಾ ನಮ್ಮ ದಯಾಳು ಇಂಗ್ಲಿಷ ಸರಕಾರದ ಸಾಹಸವೇ ಜಾತಿ ಭೇದವಿಡದೇ ಯಾವತ್ತು ಜನರಿಗೆ ಉತ್ತೇಜನ ಕೊಡುತ್ತ ಸರಕಾರದಿಂದ ಪಗಾರ ಸಹ ಕೊಟ್ಟು ವಿದ್ಯ ಪಸರಿಸ ಹತ್ತಿದ್ದಾರೆ ಆದದರಿಂದ ಈ ನಮ್ಮ ವ್ಹಿಕ್ಟೋರಿಯಾ ಮಹಾರಾಣಿಯವರ ಕೃಪೆಯು ನಮ್ಮ ಮೇಲೆ ಎಷ್ಟು ನೋಡರಿ.

ಮುಂದೆ ಸಾಗುವದು.

ಕನ್ನಡ ಶಾಲಾಪತ್ರಕವು
CANARESE SCHOOLPAPER.

ಪುಸ್ತಕ ೨೪) (ಸಂಚಿಕೆ ೧೨

(ದಶಂಬರ ೧೮೮೯)

ಅನುಕ್ರಮಣಿಕೆಯು.

ಪುಟ.

ಮನುಷ್ಯನ ಮನಸು ೨೬೫
ವಿದ್ಯಾ ಸುಧಾರಣಾ ಸಂಬಂಧವಾದ ವೃತ್ತಾಂತಗಳು ೨೭೦
ಉದ್ಯೋಗ, ಪ್ರಯತ್ನ ೨೭೬
ಯುರೋಪದ ಮಧ್ಯಕಾಲದ ಇತಿಹಾಸವು ೨೮೨
ಪತ್ರವ್ಯವಹಾರವು ೨೮೬

CONTENTS

The Human Mind..........................265
Education and Improvement. 270
Industry and Endeavour... 276
History of the Midle Ages... 282
Correspondence.................................286

DHARWAR

Printed at the Dnana Wardhaka Press

ಶಾಲಾಪತ್ರಕವು

ಪುಸ್ತಕ ೨೪)   (ಸಂಚಿಕೆ ೧೨

ಡಿಶಂಬರ ೧೮೮೯

The Human Mind

ಮನುಷ್ಯನ ಮನಸು.

ಮನುಷ್ಯನ ಮನಸಿನ ಶಕ್ತಿಯು ಅತ್ಯಗಾಧವಾದದ್ದಿರುತ್ತದೆ. ಪಶು ಪಕ್ಷ್ಯಾದಿಗಳಿಗೂ ಮನಸುಂಟು. ಆದರೆ ಆತ್ಮ ರಕ್ಷಣದ ಮೇರೆಯನ್ನು ದಾಟಿ ಅವುಗಳ ಮನಸು ಮುಂದಕ್ಕೆ ಹೋಗುತ್ತದೆಂದು ತೋರುವದಿಲ್ಲ. ಅವುಗಳಿಗೆ ಭೂತಕಾಲದ ಸ್ಮೃತಿಯು ಅಲ್ಪ ಸ್ವಲ್ಪವೇ ಇರುತ್ತದೆ. ಜನನದ ಸಂಬಂಧದಿಂದ ಭವಿಷ್ಯ ಕಾಲದಲ್ಲಿ ತಮಗೆ ಒದಗುವ ಆಪತ್ತು ಕ್ರಿಮಿ ಕೀಟಕಗಳಲ್ಲಿ ಕೆಲವುಗಳಿಗೆ ಒಂದು ಬಗೆಯಾಗಿ ತಿಳಿಯುತ್ತದೆಂದು ಹೇಳ ಬಹುದು. ಸಾರಾಂಶವೇನಂದರೆ ಸ್ವಂತದ ಸಂರಕ್ಷಣ, ಸಂತತಿಯ ಸಂರಕ್ಷಣ, ಇಷ್ಟರ ಹೊರ್ತು ಕಡಿಮೆ ಜಂತುಗಳ ಮನಸಿಗೆ ಬೇರೆ ಯಾವ ಮಾತಿನ ಗ್ರಹಿಕೆಯೂ ಆಗುತ್ತದೆಂದು ತೋರುವದಿಲ್ಲ.

ಮನುಷ್ಯನ ಮನಸಿನ ಸ್ವರೂಪವು ಬಹಳ ಬೇರೆ ತರದ್ದಿರುತ್ತದೆ. ಸಾಮ್ಯ ಬೋಧ, ಭೇದ ಬೋಧ, ಈ ಯೆರಡು ಶಕ್ತಿಗಳು ಮನುಷ್ಯನಲ್ಲಿ ಬೇರೆ ಜಂತುಗಳಿಗಿಂತ ಬಹಳ ಹೆಚ್ಚಿರುತ್ತವೆ. ನಾನಾ ಪ್ರಕಾರದ ಬೋಧವನ್ನು ಏಕೀಕರಿಸಿ

ನಿರ್ಣಯ ಮಾಡುವ ಶಕ್ತಿಯು ಮನುಷ್ಯನಿಗೆ ಮಾತ್ರವುಂಟು. ಇದರಂತೆ ಕಲ್ಪನೆ, ತರ್ಕ, ಮುಂತಾದ ಮಾನಸಿಕ ಸಾಮರ್ಥ್ಯಗಳ ಖಣಿಯು ಮನುಷ್ಯನೇ ಹೊರ್ತು ಬೇರೆ ಯಾವ ಜಂತುವೂ ಅಲ್ಲ.

ಆದರೆ ಮನುಷ್ಯನಲ್ಲಿ ಅತ್ಯಾಶ್ಚರ್ಯಕರವಾದ ಶಕ್ತಿ ಇನ್ನೊಂದು ಯಾವದೆಂದರೆ ಭವಿಷ್ಯ ಜ್ಞಾನವು. ಪ್ರತಿ ಮೊಬ್ಬನುಷ್ಯನಿಗೆ ಭವಿಷ್ಯ ಜ್ಞಾನವೂ ಪರೋಕ್ಷ ಜ್ಞಾನವೂ ಇರುತ್ತದೆಂಬವಕ್ಕೆ ಸಂದೇಹವಿಲ್ಲ. ಆದರೆ ಈ ಜ್ಞಾನದ ಅನುಭವವು ಮಾತ್ರ ಬಹುತರ ಯೋಗಿಗಳ ಹೊರ್ತು ಬೇರೆ ಯಾರಿಗೂ ಇರುವದಿಲ್ಲ. ಯೋಗಿಗಳು ನಮ್ಮಂತೆ ಮನುಷ್ಯರೇ ಇರುತ್ತಾರೆ. ಇಷ್ಟೇ ಅಲ್ಲ, ಯೋಗ ವಿದ್ಯವನ್ನು ಸಾಧಿಸಿಕೊಳ್ಳುವ ಪೂರ್ವದಲ್ಲಿ ಅವರು ನಮ್ಮ ಹಾಗೇ ಅಜ್ಞಾನಿಗಳಿರುತ್ತಾರೆ. ಯೋಗ ಸಾಧನದಿಂದ ಸರ್ವಜ್ಞತ್ವವು ಯೋಗಿಗೆ ಬರುತ್ತದೆ. ಬೇಕಾದ ಮನುಷ್ಯನು ಅಭ್ಯಾಸದಿಂದ ಯೋಗಿಯಾಗ ಬಹುದು. ಆದದರಿಂದ ಬೇಕಾದ ಮನುಷ್ಯನು ಸರ್ವಜ್ಞನಾಗಬಹುದು. ಆದರೆ ಸೃಷ್ಟಿನಿಯಮಕ್ಕೆ ವಿರುದ್ಧವಾಗಿ ತನ್ನಲ್ಲಿ ಇಲ್ಲದಂಥ ಸಾಮರ್ಥ್ಯವನ್ನು ಯಾವನೂ ತಂದುಕೊಳ್ಳಲಾರನು. ಉದಾಹರಣಾರ್ಥವಾಗಿ ಚಿರಜೀವಿಯಾಗಿ ಬದುಕುವ ಸಾಮರ್ಥ್ಯವು ಯೆಂಥಾ ಘನ ಯೋಗಿಗೂ ಬಾರದು. ಆದದರಿಂದ ಯೋಗಿಯಾಗತಕ್ಕ ಮನುಷ್ಯನಲ್ಲಿ, ಅಂದರೆ ಯೆಲ್ಲ ಮನುಷ್ಯರಲ್ಲಿ ಸರ್ವಜ್ಞತ್ವದ ಅಂಕುರವು ಇದ್ದೇ ಇರುತ್ತದೆಂದು ಸಿದ್ಧವಾಗುತ್ತದೆ.

ನಿಷ್ಕಾರಣ ಆನಂದ, ನಿಷ್ಕಾರಣ ಖೇದ, ವಿಶೇಷವಾಗಿ ಸ್ವಪ್ನ, ಇವೇ ಮನುಷ್ಯನಲ್ಲಿಯ ಸರ್ವಜ್ಞತ್ವದ ಕುರುಹು

ಗಳಾಗಿರುತ್ತವೆ. ನಾಳೆ, ಯೆಂಟು ದಿನಕ್ಕೆ, ಆರು ತಿಂಗಳಿಗೆ, ಹತ್ತು ಹರದಾರಿಯ ಮೇಲೆ, ಇಪ್ಪತ್ತು ಹರದಾರಿಯ ಮೇಲೆ ವೊದಗುವ ಸಂಗತಿಗಳು ನಮಗೆ ಪ್ರತ್ಯಕ್ಷ ನೋಡಿದ ರೂಪದಿಂದ ಸ್ವಪ್ನದಲ್ಲಿ ಕಾಣಿಸುತ್ತವೆ. ಇಂಥಾ ಭವಿಷ್ಯ ಪರೋಕ್ಷ ಜ್ಞಾನವನ್ನು ಸೂಚಿಸುವಂಥ ಸ್ವಪ್ನಗಳ ಅನುಭವವು ಬಹು ಜನರಿಗೆ ಇರುತ್ತದೆ. ಅದರಿಂದ ಅವುಗಳನ್ನು ಕುರಿತು ಹೆಚ್ಚಿಗೆ ಬರೆಯುವ ಪ್ರಯೋಜನವಿಲ್ಲ. ಇಂಥಾ ಸ್ವಪ್ನವು ಬೀಳಬೇಕಾದರೆ ಅತ್ಯುತ್ಕಟವಾದ ಇಚ್ಛೆಯೇ ಕಾರಣವಿರುತ್ತದೆ. ಅಂದರೆ ಮಲಗುವಾಗ ನಮ್ಮ ಮನಸು ಅತ್ಯಾತುರದಿಂದ ಯಾವ ಸಂಗತಿಗೆ ಅಂಟಿಕೊಂಡಿರುತ್ತದೆಯೋ, ಆ ಸಂಗತಿಯನ್ನು ಕುರಿತು ನಮಗೆ ಸ್ವಪ್ನವು ಬೀಳುತ್ತದೆ. ಇದರಿಂದ ಭವಿಷ್ಯ ಸೂಚಕ ಸ್ವಪ್ನಕ್ಕೆ, ಅಂದರೆ ಸರ್ವಜ್ಞತ್ವದ ಅನುಭವಕ್ಕೆ, ಮನಸಿನ ಏಕಾಗ್ರತೆಯೇ ಮುಖ್ಯ ಕಾರಣವಿರುತ್ತದೆಂದು ಸಿದ್ಧವಾಗುತ್ತದೆ. ಯೋಗಶಾಸ್ತ್ರವಾದರೂ ಇದೇ ಮಾತು ಹೇಳುತ್ತದೆ. ಈ ಶಾಸ್ತ್ರದ ಮೊದಲನೇ ಸೂತ್ರವು "ಯೋಗಶ್ಚಿತ್ತವೃತ್ತಿನಿರೋಧಃ" (ಮನಸು ನಾಲ್ಕು ಕಡೆಗೆ ಹಂಚರಿಯುವದನ್ನು ಪ್ರತಿಬಂಧಿಸುವದೇ ಯೋಗವು) ಯೆಂದು ಇರುತ್ತದೆ.

ನಮ್ಮ ಮನಸೆಂದರೆ ವೊಂದು ದೊಡ್ಡ ಕೆರೆ ಇರುತ್ತದೆಂದು ಕಲ್ಪಿಸಬಹುದು. ಇಂಥಾ ಕೆರೆಗೆ ಹತ್ತಿಪ್ಪತ್ತು ಕಾವಲಿಗಳನ್ನು ವೊಮ್ಮೆಲೆ ತೋಡಿದರೆ, ಆ ಕಾವಲಿಗಳು ಬಹಳ ವೇಗದಿಂದಲೂ ಹರಿಯಲಿಕ್ಕಿಲ್ಲ, ಬಹಳ ದೂರವೂ ಹೋಗಲಿಕ್ಕಿಲ್ಲ. ಅದೇ, ಯೆಲ್ಲ ದಿಕ್ಕುಗಳಲ್ಲಿ ಕೆರೆಗೆ ಕಸುವುಳ್ಳ ವೊಡ್ಡು ಹಾಕಿ, ಹೀಗೆ ವೊಂದೇ ಕಾವಲಿಯಿಂದ

ಮಾರ್ಗಕೊಟ್ಟರೆ, ಆ ಕಾಪಲಿಯು ಅತಿ ವೇಗದಿಂದ ಹರಿದು ಬರುವತ್ತು ಅತಂಕಗಳನ್ನು ಮುರಿಬಡದು ಬಹು ದೂರ ಹೋಗುವದು. ಇದೇ ಮನಸಿನ ಸ್ಥಿತಿ ಇರುತ್ತದೆ. ಒಂದೇ ದಿಕ್ಕಿನಲ್ಲಿ ಮನಸು ಹರಿಯ ಹತ್ತಿತೆಂದರೆ, ಅದು ಸ್ಥಳ, ಕಾಲಗಳ ಪರಮಾವಧಿಯ ಅಂತರದ ವರೆಗೆ ಹೋಗುವದು, ಅಂದರೆ ಅಪರೋಕ್ಷ ಜ್ಞಾನವನ್ನೂ ಭವಿಷ್ಯ ಜ್ಞಾನವನ್ನೂ ಪಡಿಯುವದು.

ಮನುಷ್ಯನ ಜ್ಞಾನಕಲೆಯು ಅಥವಾ ಮನೋಧರ್ಮವು ವಿದ್ಯುಲ್ಲತೆಯ ವ್ಯಾಪಾರವಿರುತ್ತದೆಂದು ವಿದ್ವಾಂಸರು ಊಹಿಸುತ್ತಾರೆ. ತಲೆಯೊಳಗಿನ ಮಿದುಳಿನ ಬೇರೆ ಬೇರೆ ಭಾಗಗಳಲ್ಲಿ ವಿದ್ಯುತ್ತಿನ ವ್ಯಾಪಾರವು ನಡಿಯಲಾಗಿ ಆಯಾ ಭಾಗಕ್ಕೆ ಅನುರೂಪವಾದ ಜ್ಞಾನವು ನಮಗಾಗುತ್ತದೆ. ಕತ್ತಲಲ್ಲಿ ನಡಿಯುವಾಗ ಮೆತ್ತಗಿನ ಪದಾರ್ಥಗಳನ್ನು ತುಳಿದರೆ, ಕ್ಷಣಮಾತ್ರದೊಳಗೆ ಇಡೀ ಶರೀರವು ತಟ್ಟನೆ ಹಾರುತ್ತದೆ. ಇದರಿಂದ ನಮ್ಮ ತಲೆಯಲ್ಲಿ ನಡಿಯುವ ವಿದ್ಯುದ್ವ್ಯಾಪಾರದ ತ್ವರೆಯು ಬಹು ಸರಸಾಗಿ ತಿಳಿಯುವದಲ್ಲದೆ, ಕಾಲಿಗೂ ತಲೆಗೂ ತಂತಿ ಟಪಾಲಿನಂಥಾದೊಂದು ಯೇನಾದರೂ ಟಪಾಲು ನಡಿಯುತ್ತದೆಂದು ಅನುಮಾನವಾಗುತ್ತದೆ. ಆ ಟಪಾಲಿನ ಮಾರ್ಗವು ಯಾವದೆಂದರೆ ಶರೀರದೊಳಗಿನ ಜ್ಞಾನತಂತುಗಳು. ಜ್ಞಾನತಂತುಗಳು ಬಿಳಿದೊಂದು ಪದಾರ್ಥದ ಅತಿ ಸೂಕ್ಷ್ಮವಾದ ಕೊಳವೆಗಳಿರುತ್ತವೆ. ಆ ಕೊಳವೆಗಳಲ್ಲಿ ಅತಿ ಸ್ವಚ್ಛವಾದದ್ದೊಂದು ಬಗೆಯ ರಸವು ಹರಿಯುತ್ತಿರುತ್ತದೆ. ಆ ರಸವೇ ನಮ್ಮ ಪಂಚೇಂದ್ರಿಯಗಳಿಗೆ ಆಗುವ ಭಾವನೆಗಳನ್ನು ಮಿದುಳಿಗೆ ವೈದು ಮುಟ್ಟಿಸುವ ಸಾಧನ

ವಿರುತ್ತದೆ.

ಈ ಬಗೆಯಾಗಿ ವಿದ್ಯುತ್ಕಾರ್ಯದಿಂದ ನಮಗೆ ನಾನಾ ಪ್ರಕಾರದ ಜ್ಞಾನವಾಗುತ್ತದೆಂಬ ಮಾತು ನಿಜವಿದ್ದರೆ, ನಮ್ಮ ಜ್ಞಾನವನ್ನು ಅಮರ್ಯಾದಿತವಾಗಿ ಬೆಳಸಬಹುದೆಂದೆನ್ನಲಿಕ್ಕೆ ಅಡ್ಡಿ ಇಲ್ಲ. ಯಾಕಂದರೆ ಹವೆಯು ವಿದ್ಯುದ್ವಾಹಕವಿದ್ದು, ಅದು ಭೂಗೋಲವನ್ನೆಲ್ಲ ಸುತ್ತಿಕೊಂಡಿರುತ್ತದೆ. ಆದದರಿಂದ ಅಶಿಕ್ಷಿತನಾದ ಮನುಷ್ಯನ ಮಿದುಳಿನಲ್ಲಿಯ ವಿದ್ಯುತ್ತಿನ ವ್ಯಾಪಾರವು ಅವನ ಶರೀರದ ಚರಮ ಭಾಗಗಳ ವರೆಗೆ ಹರಿಯುವಂತೆ ಯೋಗ ಸಾಧನದಿಂದ ಮನೋವೃತ್ತಿಯನ್ನು ಸ್ಥಿರಪಡಿಸಿ ಬಲಪಡಿಸಿದಂಥ ಮನುಷ್ಯನ ಮಿದುಳಿನಲ್ಲಿಯ ವಿದ್ಯುತ್ತಿನ ಕಾರ್ಯವು ಹವೆಯ ಮಾರ್ಗವಾಗಿ ಬೇಕಾದಲ್ಲಿಯ ವರೆಗೆ ಹರಿಯಬಹುದು.

ಆದರೆ ಯೋಗಾಭ್ಯಾಸದಿಂದ ಮನೋವೃತ್ತಿಯನ್ನು ಅಂಕಿತವಾಗಿ ಮಾಡಿಕೊಳ್ಳುವದು ಸುಲಭವಲ್ಲ. ಚಂಚಲ ಮನಸುಳ್ಳಂಥ ಜನರಿಗೆ ಯೋಗ ವಿದ್ಯವು ಸಾಧಿಸುವದು ಬಹು ಕಷ್ಟವಿರುತ್ತದೆ. ಯೆಷ್ಟೋ ಜನರು ಯೋಗಭ್ರಷ್ಟರಾದ ಕಥೆಗಳು ಪ್ರಾಚೀನ ಗ್ರಂಥಗಳಲ್ಲಿ ಇರುತ್ತವೆ. ಆದರೆ ಈ ವಿದ್ಯವು ನಮ್ಮ ದೇಶದ ಪ್ರಾಚೀನ ಜನರಿಗೆ ಮಾತ್ರ ಗೊತ್ತಿತ್ತು. ಭೂಮಿಯ ಮೇಲೆ ಬೇರೆ ಯಾವದೇಶದ ಜನರೂ ಇದನ್ನು ಅರಿಯರು. ನಮ್ಮ ದೇಶದಲ್ಲಿ ಸಹ ಪೂರ್ವಕಾಲದಲ್ಲಿ ಇದ್ದಷ್ಟು ಯೋಗಿಗಳು ಈಗಿನ ಕಾಲದಲ್ಲಿ ಇರುವದಿಲ್ಲ. ಯೋಗಶಾಸ್ತ್ರಕ್ಕೆ ಕಪಿಲ ಮಹಾ ಮುನಿಯು ಜನ್ಮ ಕೊಟ್ಟನು. ಆವನು ಕ್ರಿಸ್ತೀಶಕದ ಹಿಂದೆ ಸುಮಾರು ೧೦೦೦ ವರ್ಷಗಳ ಸುಮಾರಿನಲ್ಲಿ ಇದ್ದನೆಂದು ಯುರೋಪದ ವಿದ್ವಾಂಸರು ಊ

ಹಿಸುತ್ತಾರೆ. ಆದರೆ ಆದಕ್ಕೂ ಬಹಳ ಪೂರ್ವದಲ್ಲಿ ಈ ಪ್ರಾಣಿಯು ಆದನೆಂದು ನಮ್ಮ ದೇಶದ ಶೋಧಕರು ಪ್ರಪಾದಿಸುತ್ತಾರೆ.

—o0o—

Education and Improvement.

ವಿದ್ಯಾಸುಧಾರಣೆಗೆ ಸಂಬಂಧವಾದ ವೃತ್ತಾಂತಗಳು.

ಹುಬ್ಬಳ್ಳಿಯ ಅಂಗ್ಲೋವರ್ನ್ಯಾಕ್ಯುಲರ ಶಾಲೆಯು ತಾ. ೧ನೇ ಜನವರಿಯಿಂದ ಅಲ್ಲಿಯ ಮ್ಯುನಸಿಪಾಲಿಟಿಯವರ ಕೈಕೆಳಗೆ ಹೋಯಿತು. ಆ ಶಾಲೆಯ ಹೆಡ್ಡ ಮಾಸ್ತರರಾದ ರಾಮಚಂದ್ರ ಭಿಕಾಜೀ ಗುಂಜೀಕರ ಇವರನ್ನು ಬೆಳಗಾವಿಯ ಅಸಿ. ಡಿಪುಟಿಯ ಕೆಲಸಕ್ಕೆ ನೇಮಿಸಿದರೆಂದು ಕೇಳುತ್ತೇವೆ.

—ooo—

ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ರಾ. ರಾ. ವೆಂಕಟರಂಗೋ ಕಟ್ಟೀ ಇವರು ರಾಜೀನಾಮೆ ಕೊಟ್ಟದ್ದರಿಂದ ಅವರ ಕೆಲಸದ ಚಾರ್ಜವನ್ನು ರಾ. ರಾ. ರಾವಜೀ ಬಾಳಾಜೀ ಕರಂದೀಕರ ಇವರು ತಾ. ೧ನೇ ಜನವರಿಯಲ್ಲಿ ತಕ್ಕೊಳ್ಳತಕ್ಕವರಿದ್ದಾರೆ.

—ooo—

ಕರಂದೀಕರರ ಮೋಡಲಿನ ಹಾಯಸ್ಕೂಲಿನ ಹೆಡ್ ಮಾಸ್ತರರ ಕೆಲಸಕ್ಕೆ ಸಾತಾರೆಯ ಹಾಯಸ್ಕೂಲಿನ ಹೆಡ್ ಮಾಸ್ತರರಾಗಿದ್ದ ರಾ. ರಾ. ಕೇಸಕರ ಇವರನ್ನು ನೇಮಿಸಿದರು. ಇವರು ಬೇಗ ಬರತಕ್ಕವರಿದ್ದಾರೆ. ಇವರು ಪೂರ್ವದಲ್ಲಿ ಪ್ರೊಂ

ದು ವರ್ಷ ಇಲ್ಲಿಯ ಹಾಯಸ್ಕೂಲಿನ ಹೆಡ್ ಮಾಸ್ತರರಾಗಿದ್ದರು.

—ooo—

ಇಲ್ಲಿಯ ಹಾಯಸ್ಕೂಲಿನ ಪೂರ್ವದ ಕಾಯಮ ಹೆಡ್ ಮಾಸ್ತರರಾದ ರಾ. ರಾ. ಮಹಾದೇವ ವಿಷ್ಣು ಕಾಣೆ ಇವರನ್ನು ಸಾತಾರೆಯ ಹಾಯಸ್ಕೂಲಿಗೆ ನೇಮಿಸಿದರು.

—ooo—

ವಿಜಾಪುರದಲ್ಲಿ ಹಾಯಸ್ಕೂಲು ಮಾಡುವ ವಿಚಾರವು ಬಹಳ ದಿವಸದಿಂದ ನಡಿದದೆ. ಜನವರಿಯಲ್ಲಿ ಈ ಶಾಲೆಯು ಆರಂಭವಾಗತಕ್ಕದ್ದಿರುತ್ತದೆಂಬ ಸಹ ಹೋದ ತಿಂಗಳಲ್ಲಿ ಸುದ್ದಿ ಇತ್ತು. ಆದರೆ ಈ ತಿಂಗಳಲ್ಲಿ ಹೆಚ್ಚಿಗೇನು ವೃತ್ತಾಂತವು ಬೈಲಿಗೆ ಬರಲಿಲ್ಲವಾದ ಕಾರಣ ಶಾಲೆಯು ಮುಂದಕ್ಕೆ ಬಿತ್ತೆಂದು ತೋರುತ್ತದೆ.

—ooo—

ಈ ವರ್ಷದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ೫ ಜನ ಹೆಣ್ಣು ಮಕ್ಕಳು ಪಾಸಾದದ್ದು ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿರುತ್ತದೆ.

—ooo—

ಪುಣೆಯಲ್ಲಿಯ ಫರ್ಗ್ಯುಸನ್ ಕಾಲೇಜವೆಂಬ ಖಾಸಗೀ ಕಾಲೇಜದಲ್ಲಿ ಈ ಪೂರ್ವದಲ್ಲಿ ಪಿ. ಇ. ಪರೀಕ್ಷೆಯ ವರೆಗೆ ಅಭ್ಯಾಸವು ನಡಿಯುತ್ತಿತ್ತು. ಆದರೆ ಮುಂದಿನ ತಿಂಗಳಿನ ೩ ನೇ ತಾರೀಖಿನಿಂದ ಫರ್ಸ್ಟ್ ಬೀ. ಏ. ಪರೀಕ್ಷೆಯ ಅಭ್ಯಾಸವನ್ನು ನಡಿಸಲಿಕ್ಕೆ ಯುನಿವರ್ಸಿಟಿಯ ಅಧಿಕಾರಿಗಳು ಅಪ್ಪಣೆ ಕೊಟ್ಟಿದ್ದಾರೆ. ಪುಣೆಯಲ್ಲಿಯ ಕೆಲವು ಪ್ರಮುಖ ಜನರು

“ ಡೆಕ್ಕನ್ ಎಜುಕೇಶನ್ ಸೋಸಾಯಿಟಿ ” ಯೆಂಬ ಹೆಸರಿನದೊಂದು ಸಮಾಜವನ್ನು ಮಾಡಿಕೊಂಡು ಕೆಲವು ಶಾಲೆಗಳನ್ನು ಸ್ಥಾಪಿಸಿದ್ದಾರೆ. ಅವರೇ ಈ ಫರ್ಗ್ಯುಸನ್ ಕಾಲೇಜವನ್ನು ಸ್ಥಾಪಿಸಿದ್ದಾರೆ. ಆ ಕಾಲೇಜದಲ್ಲಿ ಅಭ್ಯಾಸವು ಸರಸಾಗಿ ನಡಿಯುತ್ತಿರುವ ಕಾರಣ ಆ ಸೋಸಾಯಿಟಿಯವರಿಗೆ ತಮ್ಮ ಕಾಲೇಜದ ಅಭ್ಯಾಸವನ್ನು ಬೆಳಿಸಲಿಕ್ಕೆ ಯುನಿವರ್ಸಿಟಿಯವರ ಅಪ್ಪಣೆ ದೊರೆದದ್ದನ್ನು ಕೇಳಿ ನಮಗೆ ಬಹಳ ಸಂತೋಷವಾಗುತ್ತದೆ. ಮನುಷ್ಯನ ಶಕ್ತಿಯನ್ನು ಮೀರಿದ ಮಾತು ಈ ಲೋಕದ ವ್ಯವಹಾರದಲ್ಲಿ ಯಾವದೂ ಇಲ್ಲ. “ ನರಕರೇಸೋ ನರಕಾ ನಾರಾಯಣಭಯೋ ”

—○○○—

ಯುನಿವರ್ಸಿಟಿಯ ಸಿ. ಇ. ಪರೀಕ್ಷೆಗೆ ೮೬೪ ಜನ ಹೋಗಿದ್ದರು. ಅವರಲ್ಲಿ ೨೫೨ ಜನ ಮಾತ್ರ ಪಾಸಾದರು. ಈ ಪಾಸಾದವರಲ್ಲಿ ಕೃಷ್ಣಾಜಿ ಗುರರಾವ ಗುಂಜೀಕರ, ಗೋಪಾಳ ಭೀಮರಾವ ಜಮಖಂಡಿ, ಯೆಂಬವರಿಬ್ಬರು ಕನ್ನಡಿಗರು. ಇದ್ದಾರೆ.

—○○○—

ಎಲ್. ಎಲ್. ಬೀ. ಪರೀಕ್ಷೆಗೆ ೮೦ ಜನ ಉಮೇದವಾರರಿದ್ದರು. ಅವರಲ್ಲಿ ೨೨ ಜನ ಪಾಸಾದರು. ಇದು ಕಾಯದೆಯ ಪರೀಕ್ಷೆಯು.

—○○○—

ಎಲ್. ಎಮ್. ಆಂಡ. ಎಸ್. ಪರೀಕ್ಷೆಗೆ ಕೂತ ೭೪ ಜನರಲ್ಲಿ ೪೨ ಜನ ಪಾಸಾದರು. ಇದು ವೈದ್ಯಕದ ಪರೀಕ್ಷೆಯು.

—○○○—

ಸಿವಿಲ್ ಸರ್ವೀಸಿನಲ್ಲಿ ಸೇರತಕ್ಕ ಉಮೇದವಾರರ ವಯಸ್ಸು ೧೯ ವರ್ಷಕ್ಕಿಂತ ಹೆಚ್ಚು ಇರಕೂಡದೆಂದು ಈ ಪೂರ್ವದಲ್ಲಿ ನಿರ್ಬಂಧವಿತ್ತು. ಅದರಿಂದ ಈ ದೇಶದ ವಿದ್ಯಾರ್ಥಿಗಳಿಗೆ ವಿಲಾಯತಿಗೆ ಹೋಗಿ ಅಭ್ಯಾಸ ಮಾಡಲಿಕ್ಕೆ ಬಹಳ ತೊಂದರೆಯಾಗುತ್ತಿತ್ತು. ಆ ಕಾರಣ ಜಡಜ, ಕಲೆಕ್ಟರ, ಮುಂತಾದ ದೊಡ್ಡ ಹುದ್ದೇದಾರಿಯ ಕೆಲಸಗಳು ನಮ್ಮ ಜನರಿಗೆ ಬಹು ಸ್ವಲ್ಪ ಮಾತ್ರ ದೊರೆಯುತ್ತಿದ್ದವು. ಆದರೆ ಈಗ ಸದರೀ ವಯಸ್ಸಿನ ಮುದ್ದತು ೨೩ ವರ್ಷದ ವರೆಗೆ ಬೆಳೆಸಿದ್ದಾರೆ. ಆದದರಿಂದ ಇನ್ನು ಮುಂದೆ ಮೊದಲಿಗಿಂತ ಹೆಚ್ಚು ಜನರು ವಿಲಾಯತಿಗೆ ಹೋಗಿ ಅಭ್ಯಾಸ ಮಾಡಿ ಸಿವಿಲ್ ಸರ್ವೀಸಿನಲ್ಲಿ ಸೇರಲಿಕ್ಕೆ ಮಾರ್ಗವಾಯಿತೆಂದು ಹೇಳಬಹುದು. ದೇಶೀ ಜನರು ಒಳಗಡೆಯಲ್ಲಿ ಕಾಂಗ್ರೇಸಯೆಂಬ ಸಭೆಯ ದ್ವಾರದಿಂದ ನಡಿಸಿದ ಪ್ರಯತ್ನದ ಫಲವು ಇದು ಮೊದಲನೇದೆಂದು ಕೆಲವರು ಊಹಿಸುತ್ತಾರೆ. ಅದು ಹ್ಯಾಗೇ ಇರಲಿ, ಈ ವಯಸ್ಸಿನ ಮುದ್ದತು ಬೆಳೆದದ್ದು ನಮ್ಮ ಜನರಿಗೆ ಬಹು ದೊಡ್ಡ ಲಾಭವೆಂದೆನ್ನಲಿಕ್ಕೆ ಅಡ್ಡಿ ಇಲ್ಲ.

— ooo —

ಛಾಪಿಸುವ ಮೊಳೆಗಳು ಸುಮಾರು ಮುನ್ನೂರು ವರ್ಷಗಳೀಚೆಯಲ್ಲಿ ಆದವೆಂದು ಬಹು ಜನರ ಗ್ರಹಿಕೆಯುಂಟು. ಮೊದಲು ಚೀನಾದೇಶದವರು ಕಟ್ಟಿಗೆಯ ಅಕ್ಷರಗಳನ್ನು ಮಾಡಿ ಛಾಪಿಸುತ್ತಿದ್ದರೆಂದು ಐತಿಹ್ಯವಿರುತ್ತದೆ. ತರುವಾಯ ಸುಣ್ಣದ ಕಲ್ಲಿನ ಮೇಲೆ ಅಕ್ಷರಗಳನ್ನು ಮೂಡಿಸಿ ಛಾಪಿಸುವ ಕಲ್ಪನೆಯು ಹೊರಟಿತು. ಕಡೆಯಲ್ಲಿ ಮೊಳೆಗಳಾದವು.

ಆದರೆ ಒಳಗಡೆಯಲ್ಲಿ ಏಶಿಯದ ತುರ್ಕಸ್ತಾನದಲ್ಲಿ ಪ್ರಾ

ಚೀನಕಾಲದ ಕೈಬರಹದ ಕಾಗದಗಳು ಕೆಲವು ದೊರೆದಿರುತ್ತವೆ. ಅವುಗಳಲ್ಲಿ ಮೊಳೆಯಿಂದ ಛಾಪಿಸಿದ ಕಾಗದಗಳೂ ಕೆಲವುಂಟು. ಅವು ಕ್ರಿಸ್ತೀ ಶಕದ ೯ನೇ ಶತಕದಲ್ಲಿ ಛಾಪೆಯಾದವೆಂದು ಅವುಗಳ ಮೇಲಿನ ಮಿತಿಯು ಹೇಳುತ್ತದೆ. ಆದದರಿಂದ ಮೊಳೆಗಳಿಂದ ಛಾಪಿಸುವ ಯುಕ್ತಿಯು ಇದಕ್ಕೂ ಪೂರ್ವದಲ್ಲಿ ಉಂಟಾಯಿತೆಂದು ಸ್ಪಷ್ಟವಾಗುತ್ತದೆ. ಕೈಬರಹದ ಕಾಗದಗಳಿಂದ ಬಗದಾದ ಪಟ್ಟಣದ ಖಲೀಫನ ಆಳಿಕೆಯಲ್ಲಿ ಸನ್ ೭೯೪ನೇ ವರ್ಷ ಕಾಗದ ಮಾಡುವ ಕಾರಖಾನೆಗಳು ಆ ರಾಜ್ಯದಲ್ಲಿ ನಡೆಯುತ್ತಿದ್ದವೆಂದು ತಿಳಿಯುತ್ತದೆ. ಆ ಕಾಲಕ್ಕೆ ಈಗಿನ ಬ್ಯಾಂಕ ನೋಟಿನಂಥ ಛಾಪಿಸಿದ ನೋಟುಗಳು ಸೀರಿಯ ಪ್ರಾಂತದಲ್ಲಿ ನಡೆಯುತ್ತಿದ್ದವು.

—೦೦೦—

ಸ್ವಿತ್ಸರ್ಲಂಡದ ಸರಕಾರದವರು ಉತ್ತರ ಧ್ರುವ ಬಿಂದುವ ಗೊತ್ತು ಹಚ್ಚುವದಕ್ಕೋಸ್ಕರವಾಗಿ ಒಬ್ಬ ವಿದ್ವಾಂಸನ ಕೈಕೆಳಗೆ ಕೆಲವು ಜನರನ್ನು ಕೊಟ್ಟು ಇಷ್ಟರೊಳಗೆ ಕಳಿಸತಕ್ಕವರಿದ್ದಾರೆ. ಈ ಕೆಲಸಕ್ಕೆ ಆ ದೇಶದ ಜನರು ಸುಮಾರು ಎರಡೂವರೆ ಲಕ್ಷ ರೂಪಾಯಿಯನ್ನು ವರ್ಗಣಿಯಿಂದ ಕೂಡಿಸಿದ್ದಾರೆ.

—೦೦೦—

ಮಣಿಯಲ್ಲಿ ಕೈಗಾರಿಕೆಯ ಅಂಗಡಿಗಳು ೩೦೦೦ ಇರುತ್ತವೆ. ಅವುಗಳಲ್ಲಿ ೬೦೦೦೦ ಜನರು ಹೊಟ್ಟೆ ತುಂಬಿಕೊಳ್ಳುತ್ತಾರೆ.

—೦೦೦—

ವಿಕ್ಟೋರಿಯಾ ಮಹಾರಾಣಿಯವರ ಮೊಮ್ಮಗನಾದ ಪ್ರಿ

ಸ್ಪವಿಕ್ಟರನೆಂಬವನು ಈ ದೇಶಕ್ಕೆ ಬಂದಿರುತ್ತಾನೆಂಬುವದು ಪ್ರಸಿದ್ಧವದೆ. ಅವನಿಗೆ ಕೊಡುವದಕ್ಕೋಸ್ಕರ ತಿರುವನ್‌ಕೋಡಿನ [ತ್ರಾವಣಕೋರದ] ಅರಸನು ಬೆಳ್ಳಿ, ಚಿನ್ನ, ರತ್ನಗಳಿಂದ ವೊಂದು ಗಾಡಿಯನ್ನು ಮಾಡಿಸಿದ್ದಾನೆ. ಇದರಲ್ಲಿ ನಾನಾ ಪ್ರಕಾರದ ರತ್ನಗಳು ಅಲ್ಲಲ್ಲಿಗೆ ಹೊಳೆಯುತ್ತವೆ.

—೦೦೦—

ಕೌತುಕದ ಸಂಗತಿಯು—ಮಸೂರಿಯೆಂಬ ಗ್ರಾಮದಲ್ಲಿ ವೊಬ್ಬ ಯುರೋಪಿಯನ್ ಹೆಂಗಸು ಚಳಿಗಾಲದಲ್ಲಿ ಹೊತ್ತು ಮುಳುಗುವ ಸುಮಾರಿನಲ್ಲಿ ತನ್ನ ಮನೆಯ ಅಂಗಳಲ್ಲಿ ಖುರ್ಚಿಯ ಮೇಲೆ ವೊಬ್ಬಳೇ ಕೂತಿರಲಾಗಿ, ಆಕೆಗೆ ತನ್ನ ತಂದೆಯ ಸ್ಮರಣವಾಯಿತು. ಅವನು ಇಂಗ್ಲಂಡದಲ್ಲಿದ್ದನು. ಅವನನ್ನು ಯಾವಾಗ ನೋಡೇನೆಂದು ಆಕೆಗೆ ಬಹಳ ಆತುರ ಹುಟ್ಟಿತು. ಅಷ್ಟರೊಳಗೆ ಆಕೆಯ ತಂದೆಯು ಆಕೆಯ ಮುಂದೆ ಬಂದು ನಿಂತನು. ಅವನನ್ನು ನೋಡಿ ಆ ತರುಣಿಯು ಚಕಿತಳಾಗಿ ಅವನ ಮೋರೆಯನ್ನು ನೋಡುತ್ತ ಚಿತ್ರದಂತೆ ಕೂತಿರುವಷ್ಟರಲ್ಲಿ, ತಂದೆಯು ಮಗಳ ಕೈಹಿಡಿದು, "ಮಗಳೇ ನಿನ್ನ ಅಪ್ಪಣೆಯನ್ನು ತಕ್ಕೊಳ್ಳಲಿಕ್ಕೆ ಬಂದೆನು" ಯೆಂದು ಹೇಳಿ ಅದೃಶ್ಯನಾದನು. ಇದೆಲ್ಲ ಆದಾಗ ತಾನು ಪೂರಾ ಯೆಚ್ಚರ ಇದ್ದಳೆಂದು ಆ ಸ್ತ್ರೀಯು ಹೇಳುತ್ತಾಳೆ. ಮುಂದೆ ಮೂರುದಿವಸ ವಿಲಾಯತಿಯಿಂದ, ನಿನ್ನಿನ ದಿವಸ ಸಂಜೆಗೆ (ಅಂದರೆ ಮೇಲೆ ಹೇಳಿದ ಕೌತುಕವು ವರ್ತಿಸಿದ ಕಾಲಕ್ಕೆ) ನಿನ್ನ ತಂದೆಯು ಮರಣ ಹೊಂದಿದನೆಂಬ ಆಕೆಗೆ ತಂತಿ ಟಪಾಲು ಬಂತು!

—೦೦೦—

Industry and Endeavour
ಉದ್ಯೋಗ, ಪ್ರಯತ್ನ

ಮನುಷ್ಯನು ತಾನು ಯೇನಾಗಬೇಕೆಂದು, ಅಥವಾ ಯೇನು ಮಾಡಬೇಕೆಂದು ಚಿಂತಿಸುವನೋ, ಅದು ಆಗುವದಕ್ಕೆ, ಅಥವಾ ಮಾಡುವದಕ್ಕೆ ಅವನ ಇಚ್ಛೆಯೇ (ಉದ್ದೇಶದ ಬಲವೇ) ಕಾರಣವು. ಒಬ್ಬ ಸತ್ಪುರುಷನು ಹೇಳಿದ್ದು ಯೇನಂದರೆ "ನಿನ್ನ ಅಪೇಕ್ಷೆಯಂತೆ ನೀನಾಗುವಿ; ದೇವರ ಇಚ್ಛೆಗೆ ಹೊಂದಿದಂಥ ನಮ್ಮ ಇಚ್ಛೆಯ ಬಲವು ಯೆಷ್ಟುಂಟೆಂದರೆ, ನಾವು ಮನಃಪೂರ್ವಕವಾಗಿಯೂ, ನಿಜವಾದ ಬುದ್ಧಿಯಿಂದಲೂ ಯೇನಾಗಬೇಕೆಂದು ಅಪೇಕ್ಷಿಸುವೆವೋ ಅದು ನಾವು ಆಗುವೆವು. ಯಾವಾತನ ಅಪೇಕ್ಷೆಯಂತೆ ಫಲವಾಗುವದಿಲ್ಲವೋ, ಅವನು ಅತುರದಿಂದ ತಾನು ಲೀನನೂ, ಶಾಂತನೂ, ಮಿತಭಾಷಿಯೂ, ಉದಾರನೂ, ಆಗಲಿಚ್ಛಿಸುವದಿಲ್ಲ. ಒಬ್ಬ ಬಡಿಗೆಯವನ ಕಥೆಯುಂಟು; ಅದು ಹ್ಯಾಗಂದರೆ— ಒಬ್ಬ ನ್ಯಾಯಾಧೀಶನು ಕೂಡ್ರುವ ಖುರ್ಚಿಯನ್ನು ಒಂದು ದಿವಸ ನೆಟ್ಟಗೆ ಮಾಡಿಸುವದಕ್ಕೆ ಅವನ ಹತ್ತರ ತಂದಿರಲಾಗಿ, ಅವನು ಬಹು ಜಾಗ್ರತೆಯಿಂದ ಅದರಮೇಲೆ ಉಜ್ಜುಗೊರಡನ್ನು ಆಡಿಸಹತ್ತಿದನು. ಆಗಲೊಬ್ಬನು ನೀನು ಇಷ್ಟು ಜಾಗ್ರತೆ ಪಡುವದೇನು ಕಾರಣವೆಂದು, ಕೇಳಲು "ನಾನು ಇದರಮೇಲೆ ಕೂಡ್ರುವ ಹೊತ್ತು ಬಂದಾಗ ಇದರಿಂದ ನನಗೆ ಸುಖವಾಗಬೇಕೆಂದು ಇಚ್ಛಿಸುತ್ತೇನೆ," ಯೆಂದು ಉತ್ತರ ಹೇಳಿದನು. ಮುಂದೆ ಅತ್ಯಾಶ್ಚರ್ಯಕರವಾಗುವಂತೆ ವರ್ತಿಸಿದೇನಂದರೆ, ಅವನು ಅದೇ ಖುರ್ಚಿಯಮೇಲೆ ನ್ಯಾಯಾಧೀ

ಶನಾಗಿ ಕೂತುಕೊಳ್ಳುವ ಸಮಯವು ನಿಜವಾಗಿ ಒದಗಿತು.

ನಮ್ಮ ಇಚ್ಛೆಯ ಸ್ವಾತಂತ್ರ್ಯದ ಬಗ್ಗೆ ನೈಯ್ಯಾಯಿಕರ ಸಿದ್ಧಾಂತಗಳು ಹ್ಯಾಗೇ ಇರಲಿ; ಪ್ರತಿಯೊಬ್ಬ ಮನುಷ್ಯನು ವ್ಯವಹಾರದೊಳಗೆ ಒಳಿತು ಹೀನಗಳಲ್ಲಿ ತನಗೆ ಬೇಕಾದದ್ದನ್ನು ಆರಿಸಿಕೊಳ್ಳುವದಕ್ಕೆ ತಾನು ಸ್ವತಂತ್ರನೆಂದು ಚನ್ನಾಗಿ ಬಲ್ಲನು. ನೀರಿನ ಪ್ರವಾಹವು ಯಾವ ದಿಕ್ಕಿಗೆ ಹೋಗುತ್ತದೆಂದು ನೋಡುವದಕ್ಕೋಸ್ಕರವಾಗಿ ಅದರೊಳಗೆ ಚಲ್ಲಿದ ಕಡ್ಡಿಯಂತೆ ಮನುಷ್ಯನಲ್ಲ. ಒಳ್ಳೇ ಘಟ್ಟಿಗನಾದ ಈಸುವವನಂತೆ ನಮ್ಮ ಸ್ಥಿತಿ ಯುಂಟು. ತನ್ನ ಸ್ವಂತ ಕೈಕಾಲುಗಳನ್ನು ಆಡಿಸುವದಕ್ಕೂ, ತೆರೆಗಳ ಸಂಗಡ ಗುದ್ಯಾಡುವದಕ್ಕೂ, ಅವನು ಸಮರ್ಥನಾಗಿರುವದಲ್ಲದೆ, ಬೇಕಾದ ದಿಕ್ಕಿಗೆ ತನ್ನ ದಾರಿಯನ್ನು ತೆಗಿದುಕೊಳ್ಳುವದಕ್ಕೆ ಬಹುಶಃ ಸ್ವತಂತ್ರನಾಗಿರುತ್ತಾನೆಂಬದು ಯೆಲ್ಲರಿಗೂ ಗೊತ್ತುಂಟು. ನಮ್ಮ ಇಚ್ಛೆಗೆ ಪೂರ್ಣವಾದ ಪ್ರತಿಬಂಧವು ಯಾತರಿಂದಲೂ ಆಗದು. ಮಂತ್ರವಿದ್ಯದಿಂದ ಬಂಧಿಸಿದಂತೆ ಇಂಥಾದೇ ಕೃತ್ಯ ಮಾಡಬೇಕೆಂಬ ಬಂಧನವು ನಮಗಿಲ್ಲವೆಂಬದನ್ನು ನಾವು ಚನ್ನಾಗಿ ಬಲ್ಲೆವು. ಇಂಥಾ ಬಂಧನಕ್ಕೆ ನಾವು ಒಳಗಾಗಿದ್ದರೆ, ನಮ್ಮಲ್ಲಿ ಉತ್ತಮತ್ವವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯು ದುರ್ಬಲವಾಗುತ್ತಿತ್ತು. ವ್ಯಾಪಾರ ಉದ್ಯೋಗಗಳೂ, ಪ್ರಪಂಚವ್ಯವಹಾರಗಳೂ ಪ್ರಪಂಚ ನಿಯಮಗಳೂ, ಸಾರ್ವಜನಿಕವ್ಯವಸ್ಥೆಗಳೂ, ಸಾರ್ವಜನಿಕ ಸಂಸ್ಥೆಗಳೂ, ಇವೆಲ್ಲ ನಮ್ಮ ಇಚ್ಛೆಯು ಸ್ವತಂತ್ರವಾದದ್ದೆಂಬ ಅನುಭವದಿಂದ ಸಿದ್ಧವಾದ ನಂಬಿಗೆಯಿಂದಲೇ ಉಂಟಾಗಿವೆ.

ಹೀಗಿಲ್ಲದಿದ್ದರೆ, ನಾವು ಮಾಡಿದಂತೆ ನಡೆಯಬೇಕೆಂಬ ನಿಯಮವು ಉಳಿಯುತ್ತಿದ್ದಿಲ್ಲ; ಆಮೇಲೆ ಶಿಕ್ಷಣೆ, ಬೋಧನೆ, ಉಪದೇಶ, ದಂಡ, ಸುಧಾರಣೆ, ಮುಂತಾದವುಗಳಿಂದ ಯೇನು ಲಾಭವಾಗುತ್ತಿತ್ತು? ಮನುಷ್ಯರು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಕಾಯಿದೆಗಳನ್ನು ಮನ್ನಿಸುತ್ತಾರೆ, ಅಥವಾ ಮನ್ನಿಸುವದಿಲ್ಲವೆಂಬ ಜಗತ್ಪ್ರಸಿದ್ಧವಾದ ಸಂಗತಿಯಲ್ಲಿಯಲ್ಲಿ ಜನರ ನಂಬಿಗೆಯಿಲ್ಲದಿದ್ದರೆ, ಕಾಯಿದೆಗಳಿಂದ ಯೇನು ಪ್ರಯೋಜನವಾಗುತ್ತಿತ್ತು? ನಮ್ಮ ಮನದರಿಕೆಯು ನಾವು ಜೀವದಿಂದಿರುವ ಮಟ್ಟಿಗೂ ಪ್ರತಿಕ್ಷಣದಲ್ಲಿ ಇಚ್ಛೆಯು ಸ್ವತಂತ್ರವಾದದ್ದೆಂದು ಕೂಗುತ್ತಿರುತ್ತದೆ. ಇದೊಂದೇ ಪೂರ್ಣವಾಗಿ ನಮ್ಮ ವಶದಲ್ಲಿದ್ದ ಒಡವೆಯು. ಇದನ್ನು ಯೋಗ್ಯಮಾರ್ಗಕ್ಕಾಗಲಿ, ಅಯೋಗ್ಯಮಾರ್ಗಕ್ಕಾಗಲಿ, ಹಚ್ಚುವದು ಕೇವಲ ನಮ್ಮ ಸ್ವಾಧೀನವಾಗಿರುತ್ತದೆ. ನಮ್ಮ ಅಭ್ಯಾಸಕ್ಕೂ, ಮೋಹಕ್ಕೂ ನಾವು ವಶವರ್ತಿಗಳಲ್ಲ, ಅವೇ ನಮ್ಮ ವಶದಲ್ಲಿ ವರ್ತಿಸತಕ್ಕಂಥವು. ನಾವು, ಅವುಗಳ ಸ್ವಾಧೀನವಾಗುವಾಗ್ಗೆ ಸಹ ಮನದರಿಕೆಯು ಇನ್ನೂ ಅದ್ದಿ ಮಾಡಬಹುದೆಂದು ಹೇಳುತ್ತಿರುತ್ತದೆ; ಇದಲ್ಲದೆ ಅವುಗಳನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ನಾವು ಯೋಚಿಸಿದರೆ, ನಮ್ಮ ನಿಶ್ಚಯವನ್ನು ಕಡೆಗಾಣಿಸುವ ಸಾಮರ್ಥ್ಯವು ನಂಮಲ್ಲಿ ಯೆಷ್ಟುಮಟ್ಟಿಗಿರುತ್ತದೋ, ಅಷ್ಟಕ್ಕಿಂತ ಹೆಚ್ಚು ಕೆಲಸಕ್ಕೆ ಪ್ರಯೋಜನವಿಲ್ಲೆಂದು ಸಹ ಅದು ಹೇಳುತ್ತಿರುತ್ತದೆ.

ಲಮೊನಾಯಿಯೆಂಬವನು ಒಮ್ಮೆ ಒಬ್ಬ ಉಲ್ಲಾಸಿನಾದ ಪ್ರಯಸ್ಥನ ಸಂಗಡ ಮಾತಾಡುತ್ತಿರಲಾಗಿ ೬೦೦ ಸ್ಪೀನಂದ

ರೆ, " ನೀನು ಈಗ ಯಾವದೊಂದು ನಿಶ್ಚಯವನ್ನು ಹಿಡಿದು ನಡಿಯತಕ್ಕಂಥ ವಯಸ್ಸಿನವನಾಗಿರುತ್ತೀ. ಇನ್ನುಮುಂದೆ ಸ್ವಲ್ಪ ತಡಮಾಡಿದರೆ, ನೀನು ನಿನ್ನ ಕೈಯಿಂದಲೇ ಅಗಿದುಕೊಂಡು ಗೋರಿಯೊಳಗೆ ಬಿದ್ದು ಒರಲಬೇಕಾಗುವದು; ಆ ಗೋರಿಯ ಮೇಲಿನ ಕಲ್ಲನ್ನು ಉರುಳಿಸುವ ಸಾಮರ್ಥ್ಯವು ಸಹ ನಿನ್ನಲ್ಲಿ ಉಳಿಯಲಿಕ್ಕಿಲ್ಲ. ನಮ್ಮ ಇಚ್ಛೆಯು ಅತಿ ಸುಲಭವಾಗಿ ನಂಮ ಅಭ್ಯಾಸಕ್ಕೆ ವಶವಾಗುತ್ತದೆ. ಆದರಿಂದ ಬಲವಾಗಿಯೂ, ನಿಶ್ಚಯವಾಗಿಯೂ, ಇಚ್ಛೆಯನ್ನು ಧರಿಸುವದಕ್ಕೆ ಕಲಿ. ಹೀಗೆ ಮಾಡಿ ಗೊತ್ತಿಲ್ಲದೆ ಹರಿದಾಡುವ ನಿನ್ನ ಬಾಳುವೆಯನ್ನು ಸ್ಥಿರಪಡಿಸು; ಅದನ್ನು ಇನ್ನ ಮುಂದೆ ಗಾಳಿಯೊಳಗೆ ದಿಕ್ಕಿಲ್ಲದೆ ಹಾರಾಡುವ ಒಣಗಿದ ಯೆಲೆಯಂತೆ ಅತ್ತಿತ್ತ ಹೋಗಗೊಡಬೇಡ."

ಪ್ರಾಯಸ್ಥರು ತಾವು ಯೇನಾಗಬೇಕೆಂದು ಅಪೇಕ್ಷಿಸುವರೋ ಅದು ತಾವಾಗುವರು, ದೃಢವಾದ ನಿಶ್ಚಯವನ್ನು ಮಾತ್ರ ಹಿಡಿಯತಕ್ಕದ್ದು, ಯೆಂದು ಒಕ್ಸತನ್ನನೆಂಬವನ ಅಭಿಪ್ರಾಯವಿತ್ತು. ಅವನು ತನ್ನ ಪ್ರೌಢ ಮಗನಿಗೆ ಪತ್ರದಲ್ಲಿ ಬರೆದದ್ದೇನಂದರೆ, " ನೀನು ಇನ್ನುಮೇಲೆ ನಿನ್ನ ಮನಸ್ಸಿಗೆ ತಿಳಿದಮಾರ್ಗವನ್ನು ಹಿಡಿಯಬಹುದಾದ ವಯಸ್ಸಿನವನಾಗಿರುತ್ತೀ. ಆದದರಿಂದ ನೀನು ನಿನ್ನ ಮನಸ್ಸಿನ ಬಲವನ್ನೂ, ನಿಶ್ಚಯವನ್ನೂ, ತಾತ್ಪರ್ಯವನ್ನೂ ಅನುಭವಕ್ಕೆ ತಂದು ತೋರಿಸು. ಆಲಸ್ಯದಲ್ಲಿ ಮುಳುಗಿ, ಗೊತ್ತಿಲ್ಲದೆ ಅಡ್ಡಾಡುವ ನಿರುಪಯುಕ್ತನಾದ ಮನುಷ್ಯನ ನಡತೆಯನ್ನೂ, ಸ್ವಭಾವವನ್ನೂ, ಕಲಿತುಕೊಳ್ಳಬೇಡ. ನೀನು ಒಮ್ಮೆ ಇಂಥಾ ಸ್ಥಿತಿಯಲ್ಲಿ ಬಿದ್ದ ಮೇಲೆ ಪುನಃ ಮೇಲಕ್ಕೆ ಯೇಳುವದು ಸುಲಭವಲ್ಲ

ವು ನಿನಗೆ ಮುಂದೆ ತಿಳಿಯುವದು. ಪ್ರಾಯಸ್ಥನಾದ ಮನುಷ್ಯನು ತಾನು ಹ್ಯಾಗಾಗಬೇಕೆಂದು ಕೋರುವನೋ, ಹಾಗೆ ಆಗುವನೆಂದು ನಾನು ನಂಬುತ್ತೇನೆ. ನನ್ನ ಸ್ವಂತ ಅನುಭವವಾದರೂ ಹೀಗೇ ಉಂಟು. ನಾನು ನಿನ್ನ ವಯಸ್ಸಿನವನಿದ್ದಾಗ ಮಾಡಿದ ವ್ಯವಸ್ಥೆಯಿಂದಲೇ ಈಗ ಅನುಭೋಗಿಸುವ ಸೌಖ್ಯವೂ ಘನತೆಯೂ, ಉಂಟಾಯಿತು. ನೀನು ಉದ್ಯೋಗಿಯೂ, ಜಾಗ್ರತೆಯುಳ್ಳವನೂ ಆಗಬೇಕೆಂದು ಮನಃಪೂರ್ವಕವಾಗಿ ನಿಶ್ಚಯಿಸಿಕೊಂಡರೆ, ನೀನು ಜೀವದಿಂದಿರುವ ಮಟ್ಟಿಗೂ ಈ ನಿಶ್ಚಯವನ್ನು ಬಿಡದದ್ದಕ್ಕೆ ಬಹು ಸಂತೋಷಪಡುವಿಯೆಂಬದಕ್ಕೆ ಸಂದೇಹವಿಲ್ಲ.'' ನಮ್ಮ ಇಚ್ಛೆಯು ಹಿಡಿಯುವ ಮಾರ್ಗವನ್ನು ಲಕ್ಷ್ಯದಲ್ಲಿ ತರದೆ ಕೇವಲ ಇಚ್ಛೆಯೆಂದರೇನು, ಯೆಂದು ವಿಚಾರಿಸಲಾಗಿ ಅದು ನಿತ್ಯತ್ವ, ದಾರ್ಢ್ಯ, ದೃಢನಿಶ್ಚಯ, ಈ ಹೆಸರುಗಳನ್ನು ಹೊಂದುತ್ತದೆ ಯೆಂದು ತಿಳಿಯುತ್ತದೆ; ಅದರಿಂದ ಇಚ್ಛೆಯು ಯಾವ ಉದ್ದೇಶವನ್ನೂ ಯಾವ ಮಾರ್ಗವನ್ನೂ ಹಿಡಿಯುವದೋ, ಅದರಂತೆ ಪರಿಣಾಮವಾಗುವದೆಂಬದು ಸ್ಪಷ್ಟವೇ. ದೃಢವಾದ ಇಚ್ಛೆಯು ಇಂದ್ರಿಯ ಭೋಗಗಳಲ್ಲಿ ಬಲಿದರೆ, ಅದು ರಾಕ್ಷಸನಂತೆ ವರ್ತಿಸುವದು; ಬುದ್ಧಿಯು ಕೇವಲ ನೀಚತ್ವಕ್ಕೆ ಇಳಿದು ಅದರ ದಾಸ್ಯವನ್ನು ಕೈಕೊಳ್ಳುವದು. ಅದರೆ ಒಳ್ಳೇ ಕೃತ್ಯವನ್ನು ಹಿಂಬಾಲಿಸಿದರೆ, ದೃಢವಾದ ಇಚ್ಛೆಯು ಅರಸನಂತೆ ಇರುತ್ತದೆ; ಬುದ್ಧಿಯು ಮನುಷ್ಯನಲ್ಲಿ ಅತ್ಯುತ್ತಮಸ್ಥಿತಿಯನ್ನುಂಟು ಮಾಡುವ ಪ್ರಧಾನನಂತೆ ಇರುತ್ತದೆ.

'' ಇಚ್ಛೆಯಿದ್ದಲ್ಲಿ ಮಾರ್ಗವಿರುತ್ತದೆ, '' ಯೆಂಬದೊಂದು ಯಥಾರ್ಥವಾದ ಹಳೇ ಗಾದೆಯುಂಟು. ಯಾವಾತನು ಇಂ

ಥಃದೊಂದು ಕೆಲಸವನ್ನು ಮಾಡುವೇನೇ, ಯೆಂದು ನಿಶ್ಚಯಪಡುತ್ತಾನೋ, ಅವನು ಅದೇ ನಿಶ್ಚಯದ ಬಲದಿಂದ ಬಹುಶಃ ಮಾರ್ಗದಲ್ಲಿದ್ದ ಇಕ್ಕಟ್ಟುಗಳನ್ನೆಲ್ಲ ದಾಟಿ, ಆ ಕೆಲಸವನ್ನು ಸಂಪಾದಿಸಿಕೊಳ್ಳುತ್ತಾನೆ. ನಾವು ಸಮರ್ಥರಿದ್ದೇವೆಂದು ಚಿಂತಿಸುವದರಿಂದಲೇ ಬಹುತರವಾಗಿ ಸಮರ್ಥರಾಗುತ್ತೇವೆ, ಇಂಥಾದೊಂದು ಸಂಪಾದನೆಯು ಮಾಡತಕ್ಕದ್ದೆಂಬ ನಿಶ್ಚಯದಿಂದಲೇ ಒಂದೊಂದು ಸಮಯದಲ್ಲಿ ಆ ಸಂಪಾದನೆಯು ತಾನೇ ಆಗಿ ಹೋಗುತ್ತದೆ. ಈ ಮೇರೆಗೆ ಒಂದೊಂದು ವೇಳೆ ದೃಢನಿಶ್ಚಯವೆಂಬ ಗುಣದಲ್ಲಿ ಬಹುಶಃ ಸರ್ವಶಕ್ತಿತ್ವದ ಲಕ್ಷಣವುಂಟೆಂದು ತೋರಬರುತ್ತದೆ. ಸುವರೋ ಎಂಬವನ ಇಚ್ಛೆಯುಬಲದಿಂದಲೇ ಅವನ ಯೋಗ್ಯತೆಗೆ ಬಲವುಂಟಾಗಿತ್ತು. ಬೇರೆ ನಿರ್ಧಾರವುಳ್ಳ ಮನುಷ್ಯರಂತೆ ಅವನಾದರೂ ಜನರಿಗೆ ನೀವು ನಿಮ್ಮ ಕೆಲಸದಲ್ಲಿ ಬಲವಾದ ಇಚ್ಛೆಯನ್ನು ಧರಿಸಿರೆಂದು ಬೋಧಿಸುವನು. ತಮ್ಮ ಯತ್ನವನ್ನು ಕಡೆಗಾಣಿಸದಂಥ ಜನರಿಗೆ ಅವನು, “ ನೀವು ಅರ್ಧಮಾತ್ರ ಇಚ್ಛಿಸಬಲ್ಲಿರೆಂ” ದು ಅನ್ನುವನು. ರಿಚಿಲೂ, ನೇಪೋಲಿಯನ್ ಮೊದಲಾದವರಂತೆ ಅವನು “ ಅಸಂಭಾವ್ಯ ” ವೆಂಬ ಶಬ್ದವನ್ನು ಕೋಶದೊಳಗಿಂದ ತೆಗೆದು ಹಾಕಬೇಕೆಂಬ ಅಭಿಪ್ರಾಯದವನಿದ್ದನು. “ ನನಗೆ ಗೊತ್ತಿಲ್ಲ,” “ ನಿನ್ನಿಂದಾಗದು, ” “ ಇದು ಅಸಂಭಾವ್ಯವು, ” ಯೆಂಬ ನುಡಿಗಳನ್ನು ತಿರಸ್ಕರಿಸಿದಷ್ಟು ಅವನು ಬೇರೆ ಯಾವ ಮಾತನ್ನು ತಿರಸ್ಕರಿಸುತ್ತಿದ್ದಿಲ್ಲ. “ ಕಲಿ! ಮಾಡು! ಯತ್ನಿಸು! ” ಎಂದು ಅವನು ಕೂಗುವನು. ಅವನ ಚರಿತ್ರೆಯು ಬರೆದವನು ಹೇಳಿದ್ದೇನೆಂದರೆ, ಮನಸ್ಸಿನ ಯಾವ ಶಕ್ತಿಗಳ ಅಂಕುರಗಳು ಯೆಲ್ಲ ಮನುಷ್ಯರಲ್ಲಿಯೂ ಇರುತ್ತವೆ

ಯೋ, ಅವುಗಳನ್ನು ಚನ್ನಾಗಿ ಜಾಗ್ರತೆಪಡಿಸಿ ಪ್ರಯೋಗಿಸಲು. ಯೇನು ಫಲವಾಗುತ್ತದೆಂಬದರ ಮೇಲಾದ ಉದಾಹರಣೆಯು ಅದರಿಂದವುಂಟಾಗಿಧೆ.

History of the Midle Ages.

ಯುರೋಪದ ಮಧ್ಯಕಾಲದ ಇತಿಹಾಸವು.

(೨೫೯ನೇ ಪುಟದಿಂದ ಮುಂದೆ ಸಾಗಿದ್ದು.)

ತರುವಾಯ ಮತ್ತೊಂದು ಹೊಸ ಸಭೆಯನ್ನು ೫ ವರ್ಷಗಳ ವರೆಗೂ, ಅದರ ನಂತರ ಯೆರಡನೇದೊಂದನ್ನು ೭ ವರ್ಷಗಳವರೆಗೂ ನೇಮಿಸಿ, ಆಮೇಲೆ ಹತ್ತು ಹತ್ತು ವರ್ಷಕ್ಕೊಂದು ಹೊಸ ಸಭೆಯನ್ನು ನೇಮಿಸುತ್ತ ಹೋಗಬೇಕೆಂದು ಕಟ್ಟಳೆಯಾಯಿತು. ಆದರೆ ಈ ಸಭೆಯಿಂದ ಪೋಪಗಳಿಗೆ ಹಿತವೇನು ಆಗಲಿಲ್ಲ. ಈ ಸಭೆಯವರು ಪೋಪಗಳ ಅಧಿಕಾರವನ್ನು ಹಿಮ್ಮೆಟ್ಟಿಸಿ, ಅವರ ದುರಾಚಾರಗಳನ್ನು ತಿದ್ದುವ ಕ್ರಮವನ್ನು ನಡಿಸಲಾಗಿ, ಅವರಿಗೂ, ಪೋಪನಿಗೂ ವ್ಯಾಜ್ಯಗಳು ಹುಟ್ಟಿ ೧೫ ವರ್ಷಗಳೊಳಗೆ ನಾಲ್ವರು ಪೋಪಗಳು ನೇಮಿಸಲ್ಪಟ್ಟರು, ೧೪೪೯. ಮುಂದಿನ ಪೋಪಗಳು ಇತಲಿಯೊಳಗಿನ ತಮ್ಮ ಸ್ವಂತ ರಾಜ್ಯವನ್ನು ಚಿಂತಿಸುವರಷ್ಟೇ ಹೊರ್ತು ಬೇರೆ ಅರಸರ ಕಾರಭಾರಗಳಲ್ಲಿ ಕೈಹಾಕುವ ಸಾಹಸಕ್ಕೆ ಬೀಳಲಿಲ್ಲ. ಇತ್ತ ಯುರೋಪ ಖಂಡದಲ್ಲಿ ಪೋಪಗಳ ವಿರೋಧವು ದಿನದಿನಕ್ಕೆ ಹೆಚ್ಚಾಯಿತು. ಈ ವಿರೋಧಿಗಳಲ್ಲಿ ಇಂಗ್ಲಿಷರೇ ಮುಖ್ಯರು. ವಿಕ್ಲಿಫನೆಂಬವನೊಬ್ಬ ಪ್ರಖ್ಯಾತ ವಿದ್ವಾಂಸನು ಪೋಪನ ಅಧಿಕಾರಕ್ಕೂ ಮಹತ್ವಕ್ಕೂ

ವಿರುದ್ಧವಾಗಿ ಹೊಸ ಮತಗಳನ್ನು ಸ್ಥಾಪಿಸಲಾಗಿ ಅವರಿಗೆ ಬಹಳ ಜನರು ಆಶ್ರಯ ಕೊಟ್ಟರು. ಇದೇ ಮೇರೆಗೆ ಹಸ್ಸ ಜೆರೋಮ ಮುಂತಾದ ವಿದ್ವಾಂಸರು ಪೋಪನಿಗೆ ಪ್ರತಿಕಕ್ಷಿಗಳಾಗಿ, ಜನರ ಮನಸಿನಲ್ಲಿ ಸುಧಾರಣೆಯ ಮೆಚ್ಚಿಕೆಯನ್ನುಂಟು ಮಾಡಿದರು.

—೦೦೦—

ಇತಲಿ.

— ಪ್ರಜಾ ಸತ್ತಾತ್ಮಕ ಸಂಸ್ಥಾನಗಳು —

೧೪ನೇ ಶತಮಾನದಲ್ಲಿ ಇತಲಿಯಲ್ಲಿ ಹಲವು ಪ್ರಜಾಸತ್ತಾತ್ಮಕ ಸಂಸ್ಥಾನಗಳು ಒಂದರಿಂದೊಂದು ಸ್ವತಂತ್ರವಾಗಿದ್ದವು. ಅವು ಮುಖ್ಯವಾಗಿ ನಾಲ್ಕು ಗುಂಪುಗಳಾಗಿದ್ದವೆಂದು ಹೇಳಬಹುದು. ೧ನೇದು ಉತ್ತರಲಾಂಬರ್ಡಿ ಯೆಂಬುದು, ಇದರಲ್ಲಿ ಮಿಲಾನ ಕ್ರೆಮೋನಾ, ಪಾರ್ಮಾ, ಪೇವಿಯ, ಮಾಂಟುವಾ, ಮುಂತಾದ ಸಂಸ್ಥಾನಗಳಿದ್ದವು ಯೆರಡನೇದು ವಿರೋನದ ಭಾಗವು; ಇದರಲ್ಲಿ ವಿರೋನ, ಪಾದುವಾ, ತ್ರಿವಿಸೋ ಮುಂತಾದ ಸಂಸ್ಥಾನಗಳಿದ್ದವು. ಮೂರನೇದು ರೋಮಾಗ್ನಾ ಯೆಂಬುದು, ಇದರಲ್ಲಿ ಬಲೋಗ್ನಾ, ಇಮೋಗಲಾ, ಮೋದೀನ ಮುಂತಾದ ಸಂಸ್ಥಾನಗಳಿದ್ದವು. ೪ನೇದು ಟಸ್ಕನಿ; ಇದರಲ್ಲಿ ಫ್ಲೋರೆನ್ಸ, ಹೈಸಾ, ಸೀನಾ, ಮುಂತಾದ ಸಂಸ್ಥಾನಗಳಿದ್ದವು. ಇವುಗಳಲ್ಲದೆ ಸಮುದ್ರತೀರದಲ್ಲಿ ಪಶ್ಚಿಮದಲ್ಲಿ ಜಿನೋವ, ಪೂರ್ವದಲ್ಲಿ ವೇನಿಸ, ಯೆಂಬ ದೊಡ್ಡ ಪ್ರಜಾಸತ್ತಾತ್ಮಕ ಸಂಸ್ಥಾನಗಳಿದ್ದವು.

ಈ ಪಟ್ಟಣಗಳಲ್ಲಿ ಪ್ರಜೆಗಳೇ ರಾಜ್ಯದ ಕಾರಭಾರವನ್ನು

ನಡಿಸುವವರಿಗೆ ಇವುಗಳಲ್ಲಿ ಸಂಪತ್ತಿಯೂ ಉದ್ಯೋಗವೂ, ಸಾಮರ್ಥ್ಯವೂ ಚನ್ನಾಗಿ ನೆಲೆಗೊಂಡಿದ್ದವು. ಆದರೆ ಇವುಗಳ ಪರಸ್ಪರ ಪೀಡೆಗಳಿಗೂ, ತಮ್ಮ ತಮ್ಮೊಳಗಿನ ಜಗಳಗಳಿಗೂ ವೊಳಗಾಗಿದ್ದವು. ಬಹುತರವಾಗಿ ಯೆಲ್ಲ ಸಂಸ್ಥಾನಗಳಲ್ಲಿ ರಾಜ್ಯದಾಡಳತೆಯಲ್ಲಿ ಕ್ರಮಕ್ರಮವಾಗಿ ಹೆಚ್ಚು ಕಡಿಮೆಯಾಗುತ್ತ ಹೋಗಿ, ೧೪ನೇ ಶತಮಾನದ ಕಡೆಯಲ್ಲಿ ವೊಬ್ಬೊಬ್ಬ ಮನುಷ್ಯನ ಅಧಿಕಾರವು ನೆಲೆಗೊಂಡು, ಹಿಂಸೆಗಳೂ ಕೊಲೆಗಳೂ, ಅಟ್ಟುಳಿಗಳೂ ಮೊದಲಾದ ದುರಾಚಾರಗಳು ನಡೆಯುತ್ತಿದವು. ಈ ಯೆಲ್ಲ ಸಂಸ್ಥಾನಗಳಲ್ಲಿ ಗ್ವೆಲ್ಫ್, ಘಿಬಲಿನ್ನೆಂದು ಯೆರಡು ಬಣಗಳಿರುವವು.

ಫ್ಲೋರೆನ್ಸದಲ್ಲಿ ಮೇಲೆ ಹೇಳಿದ ಬಣಗಳಲ್ಲದೆ ಬೇರೆ ಹಲವು ಬಲಗಳುಂಟಾಗಿ ಭಯಂಕರವಾದ ಕಲಹಗಳು ಯೆಡೆಬಿಡದೆ ನಡಿಯುವವು. ಆದಾಗ್ಯೂ ಇಲ್ಲಿಯ ನಿವಾಸಿಗಳು ಪ್ರಬಲರಾಗಿ ನೆರೆಸಂಸ್ಥಾನಗಳ ಶೀಮೆಗಳನ್ನು ಆಗಾಗ್ಗೆ ಗೆದ್ದುಕೊಳ್ಳುವರು.

ಪೈಸಾಪಟ್ಟಣದವರು ನೌಕಾವಿದ್ಯದಿಂದ ಪ್ರಖ್ಯಾತರಾದರು. ೧೧ನೇ ಶತಮಾನದಲ್ಲಿ ಇವರು ಸಾರ್ಡೀನಿಯ, ಕೋರ್ಶಿಕಾ, ಲಲ್ಬಾ ದ್ವೀಪಗಳನ್ನು ಗೆದ್ದುಕೊಂಡರು. ಸನ ೧೨೮೪ನೇ ವರ್ಷ ಫ್ಲೋರೆನ್ಸದವರಿಗೂ ಇವರಿಗೂ ಕಾಳಗವಾಗಿ ಇವರು ಬಲಗುಂದಿದರು. ಮುಂದೆ ಕ್ರಮಕ್ರಮವಾಗಿ ದುರ್ಬಲರಾಗುತ್ತ ಹೋಗಿ ಇವರು ಕಡೆಯಲ್ಲಿ ಫ್ಲೋರೆನ್ಸದವರಿಗೆ ಆಧೀನರಾದರು.

ಜಿನೋವಾಪಟ್ಟಣದವರು ಕಾನಸ್ತಾಂತಿನೋಪಲವನ್ನು ಲಾಟಿನ್ ಜನರಿಂದ ತಕ್ಕೊಂಡಂದಿನಿಂದ ಬಲಾಢ್ಯರಾದರು, ೧೨೬೧

ಇವರು ವ್ಯಾಪಾರದಲ್ಲಿ ಪ್ರಖ್ಯಾತರು. ಕಪ್ಪು ಸಮುದ್ರದವರೆಗೆ ಇವರ ವ್ಯಾಪಾರ ನಡಿಯುತ್ತಿತ್ತು. ವೇನೀಸವರಿಗೂ ಇವರಿಗೂ ಬಹಳ ವ್ಯಾಜ್ಯಗಳು ನಡೆದು ಕಡೆಯಲ್ಲಿ ವೇನೀಸವರಿಂದಲೇ ಗೆಲ್ಲಲ್ಪಟ್ಟು ಇವರು ದುರ್ಬಲರಾದರು. ೧೩೭೮ ಇವರಲ್ಲಿಯೂ ಗೆಲ್ಫ್, ಘಿಬಿಲಿನ್, ಬಣಗಳ ವ್ಯಾಜ್ಯಗಳು ಬಹಳ ನಡಿಯುತ್ತಿದ್ದವು.

ಅಕ್ವೀಲಿಯ ಯೆಂಬದೊಂದು ಗ್ರೀಕಪಟ್ಟಣದ ನಿವಾಸಿಗಳು ೫ನೇ ಶತಮಾನದಲ್ಲಿ ಬ್ರೆಂತವೆಂಬ ಹೊಳೆಯ ಮುಖದ ಹತ್ತರ ರಿವಾಲ್ತೋಯೆಂಬದೊಂದು ಗ್ರಾಮವನ್ನು ಕಟ್ಟಿ ವಾಸವಾದರು. ಆ ಗ್ರಾಮವೇ ಮುಂದೆ ವೇನೀಸೆಂಬ ಹೆಸರಿನಿಂದ ಪ್ರಖ್ಯಾತವಾಯಿತು. ೧೦ನೇ ಶತಮಾನದವರೆಗೆ ಇವರು ಪೂರ್ವರಾಜ್ಯಕ್ಕೆ ಅಧೀನವಾಗಿದ್ದರು. ಆದರೆ ಕಾನಸ್ತಾಂತಿನೋಪಲವನ್ನು ಲಾಟಿನ್ ಜನರು ತಕ್ಕೊಂಡಾಗ ಇವರು ಬಹಳ ಸಂಪತ್ತನ್ನೂ, ಕ್ಯಾಂಡಿಯಾ ಮುಂತಾದ ಶೀಮೆಗಳನ್ನೂ ಪಡೆದು ಸ್ವತಂತ್ರರಾದರು. ತರುವಾಯ ಇವರು ವ್ಯಾಪಾರದಲ್ಲಿ ಬಹು ಪ್ರಖ್ಯಾತರಾಗಿ, ಸೀರಿಯಾ, ಇಜಿಪ್ತ ಮುಂತಾದ ಪೂರ್ವದೇಶಗಳ ಸರಕುಗಳನ್ನು ಯುರೋಪಕ್ಕೆ ವೊಯ್ದು ಬಹಳ ಲಾಭ ಪಡೆದರು. ಇದಲ್ಲದೆ ಇವರು ಇತಲಿಯೊಳಗಿನ ಜಗಳಗಳಲ್ಲಿ ಕೈಹಾಕಿ ತ್ರಿವಿಸೋ, ಪಾದುವಾ, ವಿರೋನ, ಬರ್ಗಾಮೋ, ಮುಂತಾದ ಸಂಸ್ಥಾನಗಳನ್ನು ಮಕ್ರಮವಾಗಿ ಆಕ್ರಮಿಸಿದರು.

ನೇಪಲ್ಸ್, ಸಿಸಿಲಿ ಜರ್ಮನಿಯ ೨ನೇಫ್ರೆಡರಿಕ ಚಕ್ರವರ್ತಿಯ ಮಗ ಕಾನರಾದನು ತೀರಿದ ಬಳಿಕ ಆವನ ತಮ್ಮ ಮಾನ ಫ್ರೆಡ್ಡನೆಂಬವನು ಈ ರಾಜ್ಯವನ್ನು ಆಳುತ್ತಿರಲಾಗಿ,

ಪೋಪನು ಅವನ ಸಂಗಡ ಹಗೆತನ ಬಳಿಸಿ, ಅಂಜೂಪ್ರಾಂತದ ವೊಡೆಯನಾದ ಚಾರ್ಲಸನೆಂಬವನಿಗೆ ಈ ರಾಜ್ಯ ಕೊಟ್ಟನು, ೧೨೬೬. ಮುಂದೆ ಸಿಸಿಲಿಯವರು ಹಲಕಾಲ ಜಗಳ ನಡಿಸಿ ಸ್ವತಂತ್ರರಾದರು, ೧೩೦೦. ನೇಪಲ್ಸದ ರಾಜ್ಯಾಧಿಕಾರವು ವೊಬ್ಬಿಬ್ಬರು ದುರಾಚಾರಿಗಳಾದ ಹೆಂಗಸರ ಕೈಶೇರಿದದರಿಂದ ಬಹಳ ಕಲಹಗಳು ಸುಮಾರು ೧೫೦ ವರ್ಷಗಳ ವರೆಗೆ ನಡಿದು ಕಡೆಯಲ್ಲಿ ಅರೇಗನ್ ಪ್ರಾಂತದ ಅಲ್ಫಾನ್ಸೋ ಯೆಂಬವನ ಮಗ ಫರ್ಡಿನಾಂಡನೆಂಬವನು ಅರಸನಾದನು, ೧೪೫೮

(ಮುಂದೆ ಸಾಗುವದು)

—oo—

Correspondence

ಪತ್ರವ್ಯವಹಾರವು.

(೨೬೪ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ಪೂರ್ವದಲ್ಲಿಯ ಜನರಿಗೆ ಈಗಿನ ಜನರಿಗೆ ವಿದ್ಯದಲ್ಲಿ ಬಹಳ ಬಿಡುಗಡೆ ಇದ್ದಂತೆ ಕಂಡು ಬರುತ್ತದೆ. ಇದರ ಕಾರಣವೇನಂದರೆ ಮೊದಲು ಗಾವಟಿ ಶಾಲೆ ಇದ್ದು ಅಭ್ಯಾಸ ಚಂನಾಗಿ ಆಗುತ್ತಿದ್ದಿಲ್ಲ. ಈಗ ಪ್ರತಿ ಒಂದು ಊರಲ್ಲಿ ಸರಕಾರೀ ಶಾಲೆ ಸ್ಥಾಪನಾ ಮಾಡಿ ಯೋಗ್ಯ ಮತ್ತು ಹುಷಾರ ಕಂಡಂಥಾ ಮನುಷ್ಯನನ್ನು ಶಾಲಾಗುರುಗಳಾಗಿ ಮಾಡಿದ್ದಾರೆ! ಆದರಿಂದ ವಿದ್ಯಾವೃದ್ಧಿಯು ದಿನೇ ದಿನೇ ವೃದ್ಧಿಸುತ್ತ ನಡದೆ.

ಸಾಂಪ್ರತಕಾಲದಲ್ಲಿಯಾದರೂ ಗಾವಟಿ ಶಾಲೆಯ ಗುರು

ಗಳೆಂಬ ದೀಡ ಪಂಡಿತರು. ಇಷ್ಟೇ ಇದ್ದಾರೆ. ಈ ಹೆಡ್ಡರಿಂದ ದಡ್ಡರಿಂದಲೇ ದೇಶದ ದಡ್ಡತನಕ್ಕೆ ಮೂಲ ಕಾರಣವಾಗುತ್ತದೆ. ಇವರ ವಿದ್ವತ್ತ್ವವನ್ನು ಎಷ್ಟು ವರ್ಣಿಸಿದರೂ ತೀರದು. ಮುತ್ತು ತಪ್ಪಲ್ಲಿ ಕಿಂಚಿತ್ತಾದರೂ ವಿದ್ಯೆ ಇರಲಿಕ್ಕಿಲ್ಲ. ದೊಡ್ಡ ದೊಡ್ಡ ಪಂಡಿತರಿಗೆ ಕಾಲದ ನಿಡುವರು. ಊರಲ್ಲಿಯ ಜನರಿಗೆ ಸರಕಾರೀ ಶಾಲೆಯಲ್ಲಿ ಪಾಡಾಗಿ ಕಲಿಸಾಣಿಲ್ಲಾ. ಕಲಿಸಿದರೂ ಅಪೂರ್ಣಾಂಕ ಕವಿತಾ, ಬಾಗಲ್', ವ್ಯಾಕರಣಾ, ಕಲಿಸುತಾರ. ಆದರಿಂದ ಯೇನು ಫಾಯಿದೆ, ಸಂಪೂರ್ಣವಾಗಿ ಜೇಮಿನಿ, ಭಾರತ ಚೀಟು ಓದಾಕ ಬರ್ಯಾಕ ಕಲಿಸಾಣಿಲ್ಲ. ಅಂತಾ ಬೋಧ ಕೊಡುತ್ತಾರೆ. ಆ ಜನರಾದರೂ ಮೂಢರಿರುವ ಮೂಲಕಾ ಇವರ ಬೋಧನೆಗೆ ಒಳಗಾಗಿ ಸರಕಾರೀ ಶಾಲೆ ಮಾಸ್ತರರ ಪಂಚ ಮುಂತಾದವರ ಸಮಜೂತಿ ಮಾತು ಅಲಕ್ಷ ಮಾಡುತ್ತಾರೆ. ಮೇಲೆ ಹೇಳಿದ ಗಾವಟಿಶಾಲೆಗಳಾ ತಕ್ಕ ಗುರುಗಳು ಈಪ್ರಕಾರಾ ಭೋದಿಸಿ ಸರಕಾರೀ ಶಾಲೆಗೆ ಹೋಗುತ್ತಿದ್ದ ಹುಷಾರ ಹುಡುಗರನ್ನು ಬಿಡಿಸಿ ಗಾವಟಿಶಾಲೆಗೆ ಬರಮಾಡುತ್ತಾರೆ ಹೀಗೆ ಮಾಡುವದರಿಂದ ಆ ಹುಡುಗರು ಅಥೋಭ್ರಷ್ಟ ತಥೋಭ್ರಷ್ಟ ಯೆಂಬ ಗಾದೆಯಂತೆ ಯಾವ ಧಡಕ್ಕೂ ಹತ್ತುವದಿಲ್ಲ. ಇದರಿಂದ ಆ ಹುಡುಗರ ಲುಕ್ಸಾನವೆಷ್ಟು ನೋಡಿರಿ? ಆದರೆ ಗಾವಟಿ ಶಾಲೆಯನ್ನು ಹಾಕಬಾರದು ಹೀಗೇನು ಅಲ್ಲ.. ಆ ಗಾವಟಿಶಾಲೆ ಗುರುಗಳು ತಕ್ಕಮಟ್ಟಿಗಾದರೂ ವಿದ್ವಾನರಿರಬೇಕು. ಅಂದರೆ ವಿದ್ಯಾಭಿವೃದ್ಧಿಯು ವಿಶೇಷ ಆಗಬಹುದು. ಆದರೆ ಅವರು ಬುದ್ಧಿಶೂನ್ಯರಿರುವದೇ ಬಹಳ ಯಾಕಂದರೆ ಅವನು ಪರೀಕ್ಷೆ ಕೊಡುವ ಶಕ್ತಿ ಇಲ್ಲದಾಗ್ಯೂ ಉದರನಿರ್ವಾಹಕ್ಕೆ ಪುಕ್ತೂಂ

ನು ಉಪಾಯು ಇಲ್ಲದವರಾಗಿಯೂ ಸರಕಾರೀ ಶಾಲೆಗೆ ನಿಂದಿಸುವನಾಗಿಯೂ ಇರುವದು ಬಹು ಜನರುಂಟು. ಆದರೆ ವಿದ್ವಜ್ಜರಾದ ಮೇಲಾಧಿಕಾರಿಗಳು ಅವರಿಗೆ ಯಾವದಾದರೂ ಕಟ್ಟಳೆ ಮಾಡಿ ಪರೀಕ್ಷೆ ತೆಗೆದುಕೊಂಡು ಅವರನ್ನು ನೇಮಿಸಬೇಕು. ಮುಖ್ಯ ಇದರಿಂದ ಸರಕಾರೀ ಶಾಲೆಗಳಿಗೆ ವಿಘ್ನ ಬಾರದಹಾಗೆ ಮಾಡುವಿರೆಂದು ತುಂಬಾ ನಂಬಿದ್ದೇನೆ.

ಎಡಿಟರರಾಯರೇ ಪತ್ರವಿಸ್ತಾರಕ್ಕೂ ಹಸ್ತದೋಷಕ್ಕೂ ಕ್ಷಮಾ ಇರಬೇಕು.

ಮುಕ್ಕಾಂ ಕೋಡಿಹಾಳ
ತಾ. ೧೫|೧೧|೮೯ ಇ.
ತಾ. ಹುನಗುಂದ

ಭೀಮಾಜಿ ಗೋಪಾಳ ಸ್ಕೂಲ
ಮಾಸ್ತರ ಕೋಡಿಹಾಳ

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬರೆಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದವೇಳ್ಪುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಜನವರಿ ೧೮೯೦. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಹೋದವರ್ಷದ (೧೮೮೮–೮೯ ವಿದ್ಯಾಖಾತೆಯ ರಿಪೋರ್ಟು ಇದೇ ತಿಂಗಳಲ್ಲಿ ಪ್ರಕಟ ತು. ಇವರಿಂದ ತಿಳಿಯುವದೇನಂದರೆ,—ನಮ್ಮ ಇಲಾ ಳಗೆ ಶಾಲೆಗಳಲ್ಲಿ ಅಭ್ಯಾಸ ಮಾಡುವ ಗಂಡು ಹುಡು ಖ್ಯೆಯು ಹೋದವರ್ಷ ೫೦೦೮೩೨ ಇತ್ತು, ಈ ೫೨೨೭೪೯ ಆಗಿರುತ್ತದೆ; ಮತ್ತು ಹೆಣ್ಣುಮಕ್ಕಳ ಸಂಖ್ಯೆಯು ಹಿಂದಿನ ವರ್ಷ ೫೩೫೨೬ ಇತ್ತು, ಈ ವರ್ಷ ೬೦೮೦೪ ಆಗಿರುತ್ತದೆ. ಅಂದರೆ, ಶಾಲೆಗೆ ಹೋಗತಕ್ಕ ವ[illegible]ಸ್ಸಿನ ಒಟ್ಟು ಗಂಡು ಮಕ್ಕಳಲ್ಲಿ ನೂರಕ್ಕೆ ಸುಮಾರು ಇಪ್ಪತ್ತೆಂಟು ವಿದ್ಯಾರ್ಥಿಗಳೂ, ಒಟ್ಟು ಹೆಣ್ಣು ಮಕ್ಕಳಲ್ಲಿ ನೂರಕ್ಕೆ ಮೂವರು ವಿದ್ಯಾ

ರ್ಥಿನಿಯರೂ, ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಾರೆ. ಈ ಇಲಾಖೆಯಲ್ಲಿ ಯಾವತ್ತು ಪ್ರಕಾರದ ಸರಕಾರೀ ಖಾಸಗೀ ಶಾಲೆಗಳು ಕೂಡಿ, ಹಿಂದಿನ ವರ್ಷ ೧೧೨೩೨ ಇದ್ದವು, ಈ ವರ್ಷ ೧೧೭೩೨ ಆಗಿರುತ್ತವೆ. ಈ ಶಾಲೆಗಳಲ್ಲಿ ಫಕ್ತ ಸರಕಾರೀ ಶಾಲೆಗಳು ಹಿಂದಿನ ವರ್ಷ ೮೨೭೪, ಖಾಸಗೀ ಶಾಲೆಗಳು ೨೯೫೮ ಇದ್ದವು. ಈ ವರ್ಷ ಸರಕಾರೀ ಶಾಲೆಗಳು ೮೬೪೨, ಖಾಸಗೀ ಶಾಲೆಗಳು ೩೦೯೦ ಆಗಿರುತ್ತವೆ. ಹಿಂದಿನ ವರ್ಷ ಕನಿಷ್ಠ ಪ್ರತಿಯ ದೇಶಭಾಷೆಯ ಸರಕಾರೀ ಶಾಲೆಗಳು ೭೭೭೧, ವಿದ್ಯಾರ್ಥಿಗಳು ೪೪೦೬೨೬ ಇದ್ದರು; ಈ ವರ್ಷ ಅನುಕ್ರಮವಾಗಿ ೮೧೧೩ ಮತ್ತು ೪೬೨೫೭೧ ಇದ್ದಾರೆ.

ಈ ಇಲಾಖೆಯ ದಕ್ಷಿಣ ಭಾಗದಲ್ಲಿ ಜನ ಸಂಖ್ಯೆಯು ೪೨೮೭೧೭೪ ಇರುತ್ತದೆ; ಮತ್ತು ಯಾವತ್ತು ಪ್ರಕಾರದ ಶಾಲೆಗಳು ೨೪೨೫, ವಿದ್ಯಾರ್ಥಿಗಳು ೧೩೬೩೮೮ ಇರುವರು. ಕನಿಷ್ಠ ಪ್ರತಿಯ ಗಂಡು ಹುಡುಗರ ಶಾಲೆಗಳು ೨೧೭೪ ಮತ್ತು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಕೂಡಿ ೧೨೨೦೩೪ ಇದ್ದಾರೆ. ಹೆಣ್ಣು ಮಕ್ಕಳ ಶಾಲೆಗಳು ೧೨೮, ವಿದ್ಯಾರ್ಥಿನಿಯರು [illegible]೯೬ ಇರುವರು. ಗಂಡು ಹುಡುಗರ ಶಾಲೆಗಳಿಗೆ ಹೋಗುವ ಹೆಣ್ಣು ಮಕ್ಕಳ ಸಂಖ್ಯೆಯು ೨೯೦೮ ಇರುವದು. ಈ ವರ್ಷ ನಮ್ಮ ದಕ್ಷಿಣ ಭಾಗದಲ್ಲಿ ಒಟ್ಟಿಗೆ ೮೮ ಶಾಲೆಗಳು ಮತ್ತು ೫೦೭ ವಿದ್ಯಾರ್ಥಿಗಳು ಹೋದ ವರ್ಷಕ್ಕಿಂತ ಹೆಚ್ಚು ಆಗಿರುವರು.

ಈ ರಿಪೋರ್ಟನ ಮೇಲಿಂದ ವಿದ್ಯಾಪ್ರಸಾರದ ಸಂಬಂಧದಿಂದ ನಮ್ಮ ಇಲಾಖೆಯು ಮುಂದಕ್ಕೆ ಹೆಜ್ಜೆ ಇಡುತ್ತ ನಡೆವದೆಂಬದು ಸ್ಪಷ್ಟವಾಗುತ್ತದೆ.

ಮುಂಬಯಿ ಇಲಾಖೆಯೊಳಗೆ ವಿದ್ಯಾಖಾತೆಯ ಒಟ್ಟು ಖರ್ಚು ೫೪೫೩೩೨೮ ರೂಪಾಯಿ ಆಗಿರುತ್ತದೆ. ಈ ರಕಮಿನೊಳಗಿಂದ ಫೀ ಹಣ ೧೧೫೪೨೮೩ ರೂಪಾಯಿ ಮತ್ತು ವರ್ಗಣಿ ಮುಂತಾದ ಬಾಬುಗಳಿಂದ ಆಗುವ ಉತ್ಪನ್ನ ೧೪೮೭೩೮೫ ರೂಪಾಯಿ ವಜಾ ಹೋಗಲಾಗಿ, ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೧೬೫೨೯೧೬ ರೂಪಾಯಿ, ಲೋಕಲ್ಫಂಡಿಗೆ ೮೫೩೪೫೩ ರೂಪಾಯಿ, ಮ್ಯುನಸಿಪಾಲಿಟಿಗಳಿಗೆ ೩೦೫೨೯೧ ರೂಪಾಯಿ ಬಿತ್ತು. ಕನಿಷ್ಠ ಪ್ರತಿಯ ಶಿಕ್ಷಣಕ್ಕೆ ೨೩೭೮೯೯೩ ರೂಪಾಯಿ ಖರ್ಚು ಆಯಿತು. ಇವರೊಳಗೆ ಫೀ ಉತ್ಪನ್ನ ೩೨೫೨೧೪ ರೂಪಾಯಿ ಮತ್ತು ಇತರ ಬಾಬುಗಳಿಂದ ಆಗುವ ಉತ್ಪನ್ನ ೬೧೯೪೩೭ ರೂಪಾಯಿ ವಜಾ ಹೋಗಲಾಗಿ, ಉಳಿದದ್ದರಲ್ಲಿ ಸರಕಾರಕ್ಕೆ ೫೨೫೮೭೧ ರೂಪಾಯಿ, ಲೋಕಲ್ಫಂಡಿಗೆ ೬೮೭೬೮೬ ರೂಪಾಯಿ, ಮ್ಯುನಸಿಪಾಲಿಟಿಗಳಿಗೆ ೨೨೦೭೮೫ ರೂಪಾಯಿ ಖರ್ಚು ಬಿತ್ತು.

ಜನೆವರಿ ತಿಂಗಳ ಕಡೆಯಲ್ಲಿ ಮುಂಬಯಿ ಯುನಿವರ್ಸಿಟಿಯ ಕಾನವ್ರೊಕೇಶನ್ ಅಂದರೆ ಪದವಿಗಳನ್ನು ಕೊಡುವ ಸಮಾರಂಭವು ಆಯಿತು. ಆಗ ವೈಸ್ ಚಾನ್ಸಲರರಾದ ಮ್ಯಾಕಿಕನ್ ಸಾಹೇಬರು ಬಹಳ ಸರಸಾದ ಭಾಷಣವನ್ನು ಮಾಡಿದರು. ಬಳಿಕ ಚಾನ್ಸಲರರಾದ ಲಾರ್ಡ ರೇ ಧೊರೆಗಳು ಸ್ವಲ್ಪದರಲ್ಲಿ ಸಮಯಕ್ಕೆ ತಕ್ಕ ಭಾಷಣವನ್ನು ಮಾಡಿದರು. ಆಗ ಅವರು ಮಾಡಿದ ಗೌರವದ ಸೂಚನೆ ಯಾವದಂದರೆ,—ಬೇರೆ ಬೇರೆ ಪರೀಕ್ಷೆಗಳ ಪ್ರಶ್ನದ ಕಾಗದಗಳು ಪ್ರತಿವರ್ಷ ಒಂದೇ ಸಮನಾಗಿ

ನಿಯಮಿತ ಪದ್ಧತಿಯಿಂದ ಹೊರಡುವಂತೆ ವ್ಯವಸ್ಥೆ ಮಾಡುವದಕ್ಕಾಗಿ, ಒಂದು ಮೇಲ್ವಿಚಾರಣೆಯ ಸಭೆಯನ್ನು (ಬೋರ್ಡ ಆಫ್ ಸ್ಟಡೀಜ) ನೇಮಿಸಬೇಕು. ಇವರಿಂದ ಬೇರೆ ಬೇರೆ ಸ್ವಭಾವದ ಪರೀಕ್ಷರು ಒಂದೇ ವಿಷಯದಲ್ಲಿ ಒಂದು ವರ್ಷ ಬಹಳ ಕಠಿಣ, ಒಂದುವರ್ಷ ತೀರ ಸುಲಭ, ಹೀಗೆ ತಮಗೆ ಬೇಕಬೇಕಾದ ಹಾಗೆ ಪ್ರಶ್ನಗಳನ್ನು ತೆಗಿಯುವ ಪದ್ಧತಿಯು ಕಟ್ಟಾಗುವದು. ಲಾರ್ಡರೇ ಧೊರೆಗಳು ಮಾಡಿದ ಈ ಸೂಚನೆಯು ಬಹು ಯೋಗ್ಯವಾದದ್ದು; ಮತ್ತು ಇದರಬಗ್ಗೆ ಯುನಿವರ್ಸಿಟಿಯ ಅಧಿಕಾರಿಗಳು ವಿಚಾರ ಮಾಡುವದು ತಕ್ಕದ್ದೆಂದು ತೋರುತ್ತದೆ.

ಒಬ್ಬ ವನಸ್ಪತಿಶಾಸ್ತ್ರಜ್ಞನು ಯುರೋಪ ಖಂಡದಲ್ಲಿ ಒಟ್ಟಿಗೆ ೪೭೦೦ ಬೇರೆ ಬೇರೆ ಪ್ರಕಾರದ ಹೂಗಳು ಉಂಟೆಂತಲೂ, ಅವುಗಳಲ್ಲಿ ೪೭೦ ಅಂದರೆ ನೂರಕ್ಕೆ ಹತ್ತೇ ಹೂಗಳು ಸುವಾಸನೆಯುಳ್ಳವಿರುತ್ತವೆಂತಲೂ, ಅತಿ ಪ್ರಯಾಸದಿಂದ ಗೊತ್ತು ಹಚ್ಚಿದ್ದಾನೆ.

ಮದ್ರಾಸ ಇಲಾಖೆಯೊಳಗೆ ಆಗುವ ಮಿಡಲ್‌ಸ್ಕೂಲ ಪರೀಕ್ಷೆ (ಇದು ನಮ್ಮ ಇಲಾಖೆಯೊಳಗಿನ ೭ನೇ ಗ್ರೇಡ ಮುಲಕೀ ಪರೀಕ್ಷೆಯನ್ನು ಹೋಲುತ್ತದೆ) ಯಲ್ಲಿ ಈ ವರ್ಷ ಬಹಳ ಜನ ವಿದ್ಯಾರ್ಥಿಗಳು ನಾಪಾಸ ಆದದ್ದನ್ನು ನೋಡಿ, ರಾಜಾ ಸರ. ಟೀ. ಮಾಧವರಾಯರು ಒಂದು ವರ್ತಮಾನ ಪತ್ರದಲ್ಲಿ ಒಳ್ಳೇ ಸಿಟ್ಟಿನ ಉದ್ಗಾರಗಳನ್ನು ಹೊರಗೆಡವಿದ್ದಾರೆ. ಅವರು ಅನ್ನುವದೇನಂವರೆ, ಬೀಜಗಣಿತ, ಸಿದ್ಧಾಂತ ಇವು ಎಂಥಾ ವಿಷಯಗ

ಳು! ಹುಡುಗರಿಗೆ ಈ ವಿಷಯಗಳಿಂದ ವ್ಯವಹಾರದಲ್ಲಿ ಏನಾದರೂ ಉಪಯೋಗ ಉಂಟೋ? ಇಂಥ ವಿಷಯಗಳಲ್ಲಿ ಬಹಳ ಹುಡುಗರನ್ನು ನಾಪಾಸ ಮಾಡುವದು ಅನ್ಯಾಯವಲ್ಲವೇ? ಎಲೈ, ರಾಷ್ಟ್ರೀಯ ಸಭೆಯೇ! ಎಲೈ, ಗವರನರರೇ! ಕಣ್ದೆರೆದು ಈ ಅನ್ಯಾಯವನ್ನು ನೋಡಿರಿ!!

ವಿದ್ಯಾಸಂಪನ್ನರೂ ಸದ್ಗುಣಿಗಳೂ ಆದವರಿಗೆ ತಮ್ಮ ಕೀರ್ತಿಯನ್ನು ತಾವೇ ಹಬ್ಬಿಸುವದೂ, ತಮ್ಮನ್ನು ತಾವೇ ಹೊಗಳಿ ಕೊಳ್ಳುವದೂ ಸೇರುವದಿಲ್ಲೆಂಬದು ಎಷ್ಟೋ ಸಾರೆ ಕಂಡು ಬರುತ್ತದೆ. ಕಾರ್ಬಾನಿಕ್ ಆಸಿಡ್ ಗ್ಯಾಸದ ಶೋಧಕನಾದ ಡಾಕ್ತರ ಬ್ಲ್ಯಾಕ್ ಸಾಹೇಬನ ವಿಷಯದಲ್ಲಿ ಮೇಲಿನ ತಾತ್ಪರ್ಯದ ಉದಾಹರಣಗಳು ಎಷ್ಟೋ ಉಂಟು. ಅವನು ಯಾವದಾದರೊಂದು ಶೋಧವನ್ನು ಮಾಡಿದನೆಂದರೆ, ಅದನ್ನು ಕೂಡಲೆ ಎಂದೂ ಹೊರಗೆಡವುತ್ತಿದ್ದಿಲ್ಲ. ಅವನ ರಸಾಯನ ಶಾಲೆಯಿಂದ ಮೆಲ್ಲ ಮೆಲ್ಲನೆ ಆ ಸುದ್ದಿಯು ಒಡೆದು, ಆತನ ಕೆಲವು ಸ್ನೇಹಿತರ ಕಿವಿಗೆ ಬೀಳಲಾಗಿ, ಅವರು ಡಾಕ್ತರನ ಬಳಿಯಲ್ಲಿ ಹೋಗಿ, ನೀವು ಮಾಡಿದ ಶೋಧವನ್ನು ನಮಗೆ ತಿಳಿಸಬೇಕೆಂದು ಒತ್ತಾಯ ಮಾಡಿದಾಗ ಮಾತ್ರ, ಆ ಮಾತು ಅಲ್ಪ ಸ್ವಲ್ಪ ಹೊರ ಬೀಳುತ್ತಿತ್ತು.

ಹೈಡ್ರೋಜನ ಗ್ಯಾಸ (ಜಲಜವಾಯು)ವೂ, ಅದನ್ನು ವಿಮಾನದಲ್ಲಿ ಉಪಯೋಗಿಸುವದೂ, ಬೇರೆ ಜನರಿಗೆ ತಿಳಿಯುವದಕ್ಕಿಂತ ಎಷ್ಟೋ ವರ್ಷಗಳ ಪೂರ್ವದಲ್ಲಿ ಡಾಕ್ತರ ಬ್ಲ್ಯಾಕ್ ಸಾಹೇಬನಿಗೆ ಗೊತ್ತಿದ್ದವೆಂದು ಹೇಳುತ್ತಾರೆ.

ಒಂದಾನೊಂದು ದಿವಸ ಡಾಕ್ತರ ಬ್ಲ್ಯಾಕ್ ಸಾಹೇಬನು ಎಷ್ಟೋ ಜನ ಸ್ನೇಹಿತರನ್ನು ಮೇಜವಾನಿಗೆ ಕರೆದಿದ್ದನು. ಆಗ ಏನಾದರೂ ಒಂದು ಚಮತ್ಕಾರವನ್ನು ತೋರಿಸಬೇಕೆಂದು ಸ್ನೇಹಿತರೆಲ್ಲರು ಡಾಕ್ತರ ಸಾಹೇಬನಿಗೆ ಬಿನ್ನೈಸಿದರು. ಸ್ವಲ್ಪ ದಿವಸಗಳ ಪೂರ್ವದಲ್ಲಿ ಕ್ಯಾವೆಂಡಿಶನೆಂಬ ಪಂಡಿತನು ಹೈಡ್ರೋಜನ್ ಗ್ಯಾಸವೆಂಬ ವಿಷಯವನ್ನು ಕುರಿತು ಒಂದು ನಿಬಂಧವನ್ನು ಓದಿದ್ದನು. ಅದರಲ್ಲಿ ಆ ಗ್ಯಾಸದ ತೂಕವು ಕನಿಷ್ಠ ಪಕ್ಷದಲ್ಲಿ ಹವೆಯ ಹತ್ತನೇ ಪಾಲಿನಷ್ಟು ಉಂಟೆಂಬದನ್ನು ಸಿದ್ಧಮಾಡಿ ತೋರಿಸಿದ್ದನು. ಆದದರಿಂದ, ಅಲ್ಲಿ ನೆರೆದ ಸ್ನೇಹಿತರಿಗೆ ತಾನು ತೋರಿಸುವ ಚಮತ್ಕಾರದ ಕಾರಣಗಳು ತಿಳಿಯಬೇಕೆಂತಲೂ, ಮೊದಲು ತುಸು ತಮಾಷೆ ಮಾಡಬೇಕೆಂತಲೂ, ಡಾಕ್ತರ ಬ್ಲ್ಯಾಕ್ ಸಾಹೇಬನು ಹೈಡ್ರೋಜನ್ ಗ್ಯಾಸವನ್ನು ಸಿದ್ಧ ಮಾಡಿ, ಒಂದು ಚೀಲದೊಳಗೆ ತುಂಬಿ,—ಇಗೋ, ಈ ಚಮತ್ಕಾರವನ್ನು ನೋಡಿರಿ! ಎಂದು ಕೈಯೊಳಗಿನ ಚೀಲವನ್ನು ಬಿಟ್ಟುಬಿಡಲು; ನೋಡ ನೋಡುವಷ್ಟರೊಳಗೆ ಆ ಚೀಲವು ಮೇಲಕ್ಕೆಹೋಗಿ ಮನೆಯ ಕಡೇಪಾಟಿಗೆ ಅಂಟಿಕೊಂಡಿತು. ಆ ಮೇಲೆ, ಡಾಕ್ತರ ಬ್ಲ್ಯಾಕ್ ಸಾಹೇಬನು ತನ್ನ ಸ್ನೇಹಿತರ ಕಡೆಗೆ ನೋಡಲಾಗಿ, ಅವರು—ಇದೇನಾಶ್ಚರ್ಯ? ಇದರೊಳಗೇನುಂಟು? ಹೀಗೆ ಹಾರಿ ಹೋದದ್ದರ ಕಾರಣವು ಮೇಲೇ ತೋರುತ್ತದೆ, ಎಂದು ಅಂದರು. ಮೇಲಿನ ನಿಬಂಧದಲ್ಲಿ ಹೇಳಿದ ವಿಷಯವು ತನ್ನ ಸ್ನೇಹಿತರಿಗೆ ಚನ್ನಾಗಿ ತಿಳಿಯಿತು. ಮತ್ತು ಅದರ ಸ್ಪಷ್ಟೀಕರಣಾರ್ಥವಾಗಿ ದೃಷ್ಟಾಂತರೂಪದಿಂದ ನಾನು ತೋರಿಸಿದ ತಮಾಷೆಯಾದರೂ ತಿಳಿಯಿತು, ಎಂದು ಯೋಚಿಸಿ, ಅವನು ಸಂತೋಷಪಟ್ಟು—

ಕ್ಯಾವೆಂಡಿಶ್ ಸಾಹೇಬರ ನಿಬಂಧದ ಮಹತ್ವವು ಈಗ ಚನ್ನಾಗಿ ತಿಳಿಯಿತಷ್ಟೇ? ಎಂದು ಸಹಜವಾಗಿ ಪ್ರಶ್ನಮಾಡಲು, ಕೂಡಲೆ ಆ ಸ್ನೇಹಿತರು ಅಂದದ್ದು — ನಮಗೆ ಕ್ಯಾವೆಂಡಿಶ್ ಸಾಹೇಬರ ನಿಬಂಧವೂ ಬೇಡ. ಅದರೊಳಗಿನ ವಿಷಯವನ್ನು ತಿಳುಕೊಳ್ಳುವದೂ ಬೇಡ. ಚೀಲವು ಒಮ್ಮೆಲೇ ಮೇಲಕ್ಕೆ ಯಾಕೆ ಹೋಯಿತೆಂಬವರ ಕಾರಣವು ಮೇಲೇ ತೋರುತ್ತದೆ. ಚೀಲಕ್ಕೆ ಒಂದು ಸಣ್ಣ ಕರೇ ದಾರವು ಹಚ್ಚಲ್ಪಟ್ಟದೆ. ಕಪೇಪಾಟಿಗೆ ಒಂದು ಸಣ್ಣ ತೂತು ತೆಗೆದು, ಅದರೊಳಗಿಂದ ಆ ದಾರವನ್ನು ಯಾರೋ ಒಬ್ಬರು ಸರ್ರನೆ ಮೇಲಕ್ಕೆ ಎಳಕೊಂಡರು. ಇದೇ ಕಾರಣದಿಂದ ಚೀಲವು ಮೇಲಕ್ಕೆ ಹೋಯಿತು.

ಡಾಕ್ತರ ಬ್ಲ್ಯಾಕನು ಈ ಮಾತು ಕೇಳಿ, ಅವರ ಹುಚ್ಚುತನಕ್ಕೆ ನಕ್ಕು, ಅಲ್ಲಿ ಕುಳಿತ ಜನರಿಗೆ ಎಳ್ಳಷ್ಟಾದರೂ ಸಂಶಯ ಬಾರದಹಾಗೆ ಆ ಪ್ರಯೋಗವನ್ನು ಪುನಃ ತೋರಿಸಿ, ಅದರ ಕಾರಣವನ್ನು ತಿಳಿಸಿದನು. ಈ ಸಂಗತಿ ವರ್ತಿಸಿ ಹನ್ನೆರಡು ವರುಷಗಳಾದ ಬಳಿಕ, ಚಾರ್ಲಸನೆಂಬ ಪಂಡಿತನು ಪಾರಿಸ ಪಟ್ಟಣದಲ್ಲಿ ಹೈದ್ರೋಜನ್ ಗ್ಯಾಸವನ್ನು ವಿಮಾನದೊಳಗೆ ತುಂಬಿ, ಆಕಾಶದೊಳಗೆ ಹಾರಿಸುವ ಯುಕ್ತಿಯನ್ನು ತೆಗೆದನು. ಆದರೆ ಮೇಲೆ ಹೇಳಿದಂತೆ ಬ್ಲ್ಯಾಕ್ ಸಾಹೇಬನು ಈ ಶೋಧವನ್ನು ಮೊದಲೇ ಮಾಡಿದ್ದನು.

ಈ ಹೊತ್ತಿನ ವರೆಗೆ ಪೃಥ್ವೀ ಪ್ರದಕ್ಷಿಣೆಯನ್ನು ಮಾಡಿದವರಲ್ಲಿ ಜ್ಯೂಲ್ಸವರ್ನನೆಂಬ ಫ್ರೆಂಚ ಮನುಷ್ಯನು ಬಲು ಬೇಗ ಪ್ರದಕ್ಷಿಣೆಯನ್ನು ಮಾಡಿದನು. ಅದಕ್ಕೆ ಅವನಿಗೆ ಎಪ್ಪತ್ತೈದು ದಿವ

ಸಗಳು ಹತ್ತಿದವು. ಇವಕ್ಕೂ ಕಡಿಮೆ ದಿವಸಗಳಲ್ಲಿ ಈ ಪ್ರದಕ್ಷಿಣೆಯನ್ನು ಮಾಡುವದಕ್ಕೆ ಅಮೇರಿಕದೊಳಗಿನ ನ್ಯೂಯಾರ್ಕ ವರ್ಲ್ಡವೆಂಬ ವರ್ತಮಾನ ಪತ್ರದ ಒಡೆಯನು ಮಿಸ್ ನೇಲಿ ಬ್ಲೋಯ್ ಎಂಬ ಯುವತಿಯನ್ನು ಕಳಿಸಿದ್ದಾನೆ. ಆಕೆಯು ಈ ಪ್ರದಕ್ಷಿಣೆಯನ್ನು ಎಪ್ಪತ್ತೆರಡು ದಿವಸಗಳಲ್ಲಿ ಮುಗಿಸುವೆನೆಂದು ಒಪ್ಪಿಕೊಂಡಿದ್ದಾಳೆ.

ಲಂಡನ್ ಯುನಿವ್ಹರ್ಸಿಟಿಯಲ್ಲಿ ಈ ವರೆಗೆ ಏಳುಮಂದಿ ಸ್ತ್ರೀಯರು ಎಮ್. ಏ. ಪರೀಕ್ಷೆಯನ್ನು ಕೊಟ್ಟಿದ್ದಾರೆ. ನೂರಾನಾಲ್ವತ್ತೇಳು ಮಂದಿ ಬಿ. ಏ. ಪರೀಕ್ಷೆಯನ್ನು ಕೊಟ್ಟಿದ್ದಾರೆ. ಒಬ್ಬರು ಡಾಕ್ಟರ ಆಫ್ ಸಾಯನ್ಸ, ಇಪ್ಪತ್ತರೊಂಬತ್ತು ಮಂದಿ ಬೆಚಲರ ಆಫ್ ಸಾಯನ್ಸ ಎಂಬ ಪರೀಕ್ಷೆಗಳನ್ನು ಕೊಟ್ಟಿದ್ದಾರೆ. ಎಂಟುಮಂದಿ ಸ್ತ್ರೀಯರು ವೈದ್ಯರಾಗಿ ಔಷಧ ಕೊಡಲಿಕ್ಕೆ ಯುನಿವ್ಹರ್ಸಿಟಿಯಿಂದ ಸನದುಗಳನ್ನು ಪಡಕೊಂಡಿದ್ದಾರೆ.

FROEBEL'S KINDER-GARTEN SYSTEM.

ಫ್ರೊಬೆಲನ ಶಿಶು-ಶಿಕ್ಷಣಾಪದ್ಧತಿ.

ಪದ್ಯಗಳು.

ಇಡುವ ಪ್ರೇಂದೊಡವಂಬಗೆಟ್ಟರ ।
ಒಡನೆ ತಿದ್ದುವ ನಕ್ಕಸಾಲಂ ।
ಕೊಡುವ ಶಿಕ್ಷಣದಲ್ಲಿ ಶಿಕ್ಷಕನೊಮ್ಮೆ ತಪ್ಪಿದೊಡೆ ॥
ಕೆಡುವದಾತನ ಶಿಷ್ಯವರ್ಗಂ ।
ಕಡುಭಯಂಕರ ವದರಪರಿಣತಿ ।
ಕಡೆಯೊಳೆನೆ ತಾನೆನಿತುಘನವೋ ಶಿಕ್ಷಕೋದ್ಯಮವು ॥ ೧ ॥

ಆನಂದಭಕ್ತಿವಿನಯಂ ಸದಸದ್ವಿಚಾರಂ |
ಮಾನಂ ಜಯಂ ಸಿರಿ ಯಶಂ ಗುರುಸೇವೆಯಿಂದೆ ||
ಧ್ಯಾನಂ ಸುಬುದ್ಧಿ ಧೃತಿ ಶಾಂತಿ ಶುಭಂ ಸುವಿದ್ಯಾ— |
ಜ್ಞಾನೋದಯಂ ಪರಸುಖಂ ಗುರುಸೇವೆಯಿಂದೆ || ೧ ||
ಕೋಳಿರನ್ನವ ಹಳಿದೊಡೇನದು |
ಕೀಳಹುದೆ? ಶಿಕ್ಷಕರ ನರಿಯದ— |
ಖೂಳರೇಳಿಸಲವರಮಾನ್ಯತೆ ಬೆಳೆಯದೇ ಜಗದಿ ||
ಕೀಳರುಕ್ತಿಗೆ ಕಿವಿಯನೀಯದೆ |
ಪಾಲಿಪುದು ಶಿಕ್ಷಕರು ತಮ್ಮಯ |
ಶೀಲಸದ್ಗುಣ ಶಿಕ್ಷಣಂಗಳ ನಿಜದಿ ಸುಖವಹುದು || ೨ ||

ಚಿಕ್ಕ ಮಕ್ಕಳಿಗೆ ಮೂಲಾರಂಭದಲ್ಲಿ ಶಿಕ್ಷಣ ಕೊಡುವ ಸಂಬಂಧದಿಂದ ಬಹಳ ಎಚ್ಚರಪಡಲಿಕ್ಕೆ ಬೇಕು. ಆಗ ಸ್ವಲ್ಪ ಅಲಕ್ಷ್ಯವಾದರೆ, ಮುಂದೆ ಎಷ್ಟು ಉತ್ತಮ ಶಿಕ್ಷಣ ಕೊಟ್ಟಾಗ್ಯೂ, ಅವರಿಂದ ತಕ್ಕ ಫಲವಾಗುವದಿಲ್ಲೆಂಬ ಸಂಗತಿಯು ಈಗಿನ ಸುಶಿಕ್ಷಿತ ಜನರಿಗೆ ಮನವರಿಕೆಯಾಗಿರುವದು. ಚಿಕ್ಕ ಮಕ್ಕಳಿಗೆ ತಕ್ಕ ಶಿಕ್ಷಣದ ಪದ್ಧತಿಯನ್ನು ಶೋಧಿಸುವದರಲ್ಲಿ ವಿದ್ವಾಂಸರು ಮನಸು ಹಾಕಹತ್ತಿ, ಈಗ ಸುಮಾರು ನೂರು, ನೂರಾಐವತ್ತು ವರ್ಷಗಳಾದವು. ಈ ಅವಧಿಯಲ್ಲಿ ಪೆಸ್ತಾಲೊತ್ಸಿ ಮತ್ತು ಫ್ರಬೆಲ್ ಎಂಬವರಿಬ್ಬರು ಮೇಲಾದ ಪದ್ಧತಿಗಳನ್ನು ಉಪಕ್ರಮಿಸಿದರು. ಈ ಪದ್ಧತಿಗಳಂತೆ ಈಗ ಶಿಕ್ಷಣವು ಎಷ್ಟೋ ಕಡೆಯಲ್ಲಿ ಸಾಗುತ್ತದೆ. ಫ್ರಬೆಲನ ಪದ್ಧತಿಯು ಬಹಳ ಸರಸಾವದ್ದೆಂದು ಎಷ್ಟೋಮಂದಿ 'ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ಅವನ್ನು ಅನುಕೂಲವಾದಂತೆ ಇಲ್ಲಿ ಕೊಡಬೇಕೆಂಬ ಆಲೋಚನೆಯುಂಟು. ಆದರೆ ಮೊದಲು ಆ ಪಂಡಿ

ತನ ಚರಿತ್ರವನ್ನು ಹೇಳುವದು ಯುಕ್ತವಾಗಿ ತೋರಿದ್ದರಿಂದ, ಅವನ್ನು ಸ್ವಲ್ಪದರಲ್ಲಿ ಬರೆಯುತ್ತೇವೆ.*

ಫ್ರೆಡರಿಕ್ ಫ್ರೊಬೆಲನು ಜರ್ಮನಿಯಲ್ಲಿ ೧೭೮೨ನೇ ವರ್ಷ ಹುಟ್ಟಿದನು. ಈತನ ತಂದೆಯು ಧರ್ಮೋಪದೇಶಕನಿದ್ದನು. ಈತನ ತಾಯಿಯು ಬಹಳ ಚಿಕ್ಕಂದಿನಲ್ಲಿ ತೀರಿಕೊಂಡಳು. ಇವನಿಗೆ ಅಣ್ಣ ತಮ್ಮಂದಿರು ಬಹಳ ಜನರಿದ್ದರು. ಇವನೇ ಎಲ್ಲರಿಗೆ ಕಡೆಹುಟ್ಟಿದವನು. ಇವನ ತಂದೆಯು,—ಈ ಹುಡುಗನು ಹೊರಗೆ ಅತ್ತಿತ್ತ ತಿರುಗಾಡಿದರೆ, ಇವನಿಗೆ ಕೆಟ್ಟ ಸಂಗತಿ ಹತ್ತುವದು ಎಂದು ತಿಳಿದು, ಇವನನ್ನು ಒಂದು ಕೋಣೆಯಲ್ಲಿ ಹಾಕಿ, ತನ್ನ ಕೆಲಸಕ್ಕೆ ಹೋಗುತ್ತಿದ್ದನು. ತಿಳಿದು ನೋಡಿದರೆ, ಆತನ ತಂದೆಯು ಹೀಗೆ ಮಾಡಿದ್ದು ತಕ್ಕದ್ದಲ್ಲ. ಚಿಕ್ಕಂದಿನಲ್ಲಿ ಹುಡುಗರಿಗೆ ಯಾವಾಗಲೂ ಏನಾದರೂ ಒಂದು ಕೆಲಸದೊಳಗೆ ತೊಡಗುವ ಚಟವಿರುತ್ತದೆ. ಸುಮ್ಮನೆ ಕೂಡ್ರುವದು ಅವರಿಗೆ ಸೇರುವದೇ ಇಲ್ಲ. ಆದದರಿಂದ, ಅವರಲ್ಲಿ ತೋರಿಬರುವ ಈ ಚಂಚಲವೃತ್ತಿಯನ್ನು ಅವರಿಗೆ ಶಿಕ್ಷಣ ಕೊಡುವವರ ಕಡೆಗೆ ಹಚ್ಚಬೇಕು. ಹಾಗೆ ಮಾಡದೆ, ಫ್ರೊಬೆಲನ ತಂದೆಯು ಅವನನ್ನು ಕೋಣೆಯಲ್ಲಿ ಹಾಕಿಡುತ್ತಿದ್ದದ್ದು ಬಹು ದುಃಖಕರವಾದ ಸಂಗತಿಯೇ ಸರಿ. ಫ್ರೆಡರಿಕನು ಒಂದು ದೊಡ್ಡ ದೇವಾಲಯದ ನೆರೆಯಲ್ಲಿ ಒಂದು ಗುಡಿಸಲೊಳಗೆ ಇರುತ್ತಿದ್ದನು. ನೆರೆಯಲ್ಲಿ ಎತ್ತರವಾದ ಬಹು ದೊಡ್ಡ ಇಮಾರತು ಇದ್ದರೆ, ಹತ್ತರದಲ್ಲಿದ್ದ ಗುಡಿಸಲುಗಳ ಪಾಡು ಏನಾಗುತ್ತದೆಂಬವನ್ನು ನೀವು ಬಲ್ಲಿರಿ. ಅವುಗಳಲ್ಲಿ ಬೆಳಕಂತೂ

---

*ಈ ವಿಷಯವು ಪಂಡಿತಾ ರಮಾಬಾಯಿ ಎಂಬವರು ಕೊಟ್ಟ ವ್ಯಾಖ್ಯಾನಗಳಿಂದ ತೆಗೆದುಕೊಳ್ಳಲ್ಪಟ್ಟದೆ.

ಬೀಳುವದೇ ಇಲ್ಲ. ಫ್ರೊಬೆಲನ ಮನೆಯು ಹಾಗಾದರೂ ಹೀಗೇ ಇತ್ತು. ಮತ್ತು ಅವನನ್ನು ಇಡುತ್ತಿದ್ದ ಕೋಣೆಯಲ್ಲ್ಯಂತೂ ಬೆಳಕಿನ ವರ್ತಮಾನವೇ ಇದ್ದಿಲ್ಲ. ಚಳಿನಾಡುಗಳಲ್ಲಿ ಬೆಳಕಿನ ಆವಶ್ಯಕತೆಯು ಇಷ್ಟೆಂದು ಹೇಳಕೂಡದು. ಸೂರ್ಯನ ಪ್ರಕಾಶವು ಯಾವ ದಿವಸ ಚೆನ್ನಾಗಿ ಬೀಳುವದೋ, ಆ ದಿವಸವು ಎಲ್ಲರಿಗೂ ಅತಿ ಆಹ್ಲಾದಕರವಾದದ್ದು. ಹೀಗಿರಲಾಗಿ, ಫ್ರೊಬೆಲನಂಥ ಹುಡುಗನನ್ನು ಆತನ ತಂದೆಯು ಗುಡಿಸಲಿನ ಒಂದು ಮೂಲೆಯಲ್ಲಿರುವ ಕೋಣೆಯೊಳಗೆ ಹಾಕಿ, ಪ್ರತಿಬಂಧದೊಳಗಿಟ್ಟ ಮೇಲೆ ಮಾಡತಕ್ಕದ್ದೇನು? ಈ ಹಾಗಾದರೂ ಫ್ರೊಬೆಲನ ಜೀವನಶಕ್ತಿಯೂ ಉತ್ಸುಕತೆಯೂ ಕುಂದಲಿಲ್ಲ. ನಿಜವಾಗಿ ನೋಡಿದರೆ, ತೀರ ಕುಂದಿಹೋಗತಕ್ಕದ್ದು. ನೀವೇ ನೋಡಿರಿ, ನಮ್ಮ ಹತ್ತರ ಉತ್ಕೃಷ್ಟವಾದ ಬೀಜ ಉಂಟು. ಅದರಿಂದ ಮೇಲಾದ ಗಿಡ ಹುಟ್ಟಬೇಕೆಂದು ನಮ್ಮ ಮನಸಿನಲ್ಲಿ ಅದೆ. ಹೀಗಿದ್ದ ಮೇಲೆ, ತಕ್ಕ ರೀತಿಯಿಂದ ಅದರ ವ್ಯವಸ್ಥೆಯನ್ನು ಮಾಡುವದು ನಮ್ಮ ಕರ್ತವ್ಯವು. ನಾವು ಆ ಬೀಜವನ್ನು ಮೇಲಾದ ಭೂಮಿಯಲ್ಲಿ ಬಿತ್ತಿ, ನೀರು, ಸೂರ್ಯಪ್ರಕಾಶ, ಚಳಿಯೋ ಗೊಬ್ಬರ ಮುಂತಾದ ಆವಶ್ಯಕವಾದ ಬಡವೆಗಳ ಅನುಕೂಲತೆಯನ್ನು ಮಾಡಿಕೊಡಬೇಕಲ್ಲವೇ? ಎಲ್ಲ್ಯಾದರೂ ಒಂದು ಮೊರಡಿಯಮೇಲೆ ಅದನ್ನು ಚೆಲ್ಲಿ ಬಿಟ್ಟರೆ ನಡದೀತೇ? ಅದಕ್ಕೆ ಮೊಳಕೆ ಬಂದೀತೇ? ಅದಕ್ಕೆ ಸೂರ್ಯ ಪ್ರಕಾಶಾದಿ ಆವಶ್ಯ ಸಂಗತಿಗಳ ಅನುಕೂಲತೆಯನ್ನು ಮಾಡಿಕೊಡದಿದ್ದರೆ, ಅದಕ್ಕೆ ಮೊಳಕೆ ಬಡಿಯುವದಂತೂ ಒತ್ತಟ್ಟಿಗೆ ಇರಲಿ, ಆ ಬೀಜದ ಜೀವನಶಕ್ತಿಯು ಅದರಲ್ಲಿಯೇ ನಾಶವಾಗಿ, ಅದು ಕೊಳತು ಮಾತ್ರ ಹೋಗುವದು.

ಫ್ರಬೆಲನ ತಂದೆಯು ಅವನನ್ನು ಈ ಮೇರೆಗೆ ಬಂದುಕಟ್ಟಿನಲ್ಲಿ ಇಡುತ್ತಿದ್ದನು. ಇಂಥ ಸ್ಥಿತಿಯಲ್ಲಿ ಇದ್ದಾಗ್ಯೂ, ಫ್ರಬೆಲನಿಗೆ ಕಂಡಕಂಡದ್ದನ್ನೆಲ್ಲ ನೋಡುವ ಇಚ್ಛೆಯು ಬಹಳೇ ಬಲವತ್ತರವಾಗಿತ್ತು. ಅವನು ಸಾಮಕಿಂಡಿಗಳೊಳಗಿಂದ ಹೊರಗೆ ಕಾಣಿಸುವವನ್ನೆಲ್ಲ ನೋಡಿ ಸಂತೋಷ ಪಡುತ್ತಿದ್ದನು. ಸಣ್ಣ ಕೂಸುಗಳು ತಮ್ಮ ದೃಷ್ಟಿಗೆ ಬಿದ್ದದ್ದನ್ನು ನೋಡಿ ಅಕ್ಕರತೆ ಬಡುತ್ತವೆ; ಮತ್ತು ದೊಡ್ಡವರು ಮಾಡಿದಂತೆ ತಾವೂ ಮಾಡಬೇಕೆಂಬ ಲವಲವಿಕೆಯು ಅವಕ್ಕೆ ಬಹಳೇ ಇರುತ್ತದೆ. ಅವು ತಮ್ಮ ಪ್ರತಿದಿನದ ಅನುಭವದ ಸಂಗತಿಯನ್ನು ಧ್ಯಾನಿಸುತ್ತ ಇರುತ್ತವೆ.

ತಾಯಿಯು ಬಲೆಹಾಕಲಿಕ್ಕೆ ಕೂತಳೆಂದರೆ, ಕೂಸು ಅವಳ ಹತ್ತರ ಹೋಗಿ,—ನನಗೂ ಮಣ್ಣಿನ ಮುದ್ದೆಯನ್ನು ಕೊಡು, ಎಂದು ಹಟಮಾಡುತ್ತ ಕೂಡ್ರುತ್ತದೆ. ಮತ್ತು ಮಣ್ಣಿನ ಮುದ್ದೆಯು ಸಿಕ್ಕಿತೆಂದರೆ, ತಾನೂ ಬಲೆಯನ್ನೂ ಕಟ್ಟೆಯನ್ನೂ ಹಾಕುತ್ತ ಕೂಡ್ರುತ್ತದೆ. ಇದು ಕೂಸುಗಳ ಸ್ವಭಾವವು. ಇದರಂತೆಯೇ ಒಂದು ದಿವಸ ಸಮೀಪದ ಗುಡಿಯನ್ನು ನೆಟ್ಟಗೆ ಮಾಡುವ ಕೆಲಸದಲ್ಲಿ ತೊಡಗಿರುವ ಕೂಲಿಕಾರರನ್ನು ನೋಡಿ, ಅವರ ಕೆಲಸದಲ್ಲಿ ಅವರಿಗೆ ನೆರವಾಗಲಿಕ್ಕೆ ಹೋಗಬೇಕೆಂಬ ಲವಲವಿಕೆಯು ಫ್ರಬೆಲನಿಗೆ ಉಂಟಾಯಿತು. ಬಳಿಕ ಎರಡು ಮೂರು ದಿವಸ ಅವರು ಮಾಡುವದನ್ನೆಲ್ಲ ನೋಡಿದ್ದರಿಂದ ಅವನ ಲವಲವಿಕೆಯು ಬೆಳೆಯಿತು.

ಫ್ರಬೆಲನ ತಾಯಿಯು ಅವನು ಬಹು ಚಿಕ್ಕವನಿರುವಾಗಲೇ ತೀರಿದಳೆಂದು ನಿಮಗೆ ನಾನು ಈಗ ಹೇಳಿದ್ದೇನಷ್ಟೇ? ಅಂದಿ

ನಿಂದ ಅವನ ಜೋಪಾನ ಮಾಡುವ ಕೆಲಸವನ್ನು ಅವನ ತಂದೆಯು ಮನೆಯಲ್ಲಿ ಕೆಲಸಮಾಡುವ ಒಬ್ಬ ಒಕ್ಕಲಗಿತ್ತಿಗೆ ಹೇಳಿದನು. ಆ ಬಡಪ್ರಾಣಿಯು ಏನು ಮಾಡ್ಯಾಳು? ಅವನ ಹೊಟ್ಟೆಬಟ್ಟೆ ಪೂರ್ತಿ ನೋಡುತ್ತಿದ್ದಳು. ತನ್ನ ಹೊಟ್ಟೇ ಮಗನನ್ನು ನೋಡಿದಂತೆ ಯಾಕೆ ನೋಡ್ಯಾಳು? ಹೀಗೆ ಕೆಲವು ದಿವಸಗಳಾದ ಬಳಿಕ ಫ್ರಬೆಲನ ತಂದೆಯು ಎರಡನೇ ಮದುವೆಯನ್ನು ಮಾಡಿಕೊಂಡನು. ಫ್ರಬೆಲನ ಮಲತಾಯಿಯು ಪ್ರಾರಂಭಕ್ಕೆ ಅವನ ಮೇಲೆ ಬಳ್ಳೇ ಪ್ರೀತಿಯನ್ನು ಮಾಡುತ್ತಿದ್ದಳು. ಆದರೆ ಈ ಸ್ಥಿತಿಯು ಅವಳಿಗೆ ಒಂದು ಕೂಸು ಆಗುವತನಕ ಮಾತ್ರ ಇತ್ತು. ಅಲ್ಲಿಂದ ಮೆಲ್ಲಗೆ ಸವತಿ ಮತ್ಸರವು ತಲೆದೋರ ಹತ್ತಿತು. ಫ್ರಬೆಲನು ನನ್ನ ಸವತಿಯ ಮಗನೆಂದು ಅವಳ ಮನಸಿನಲ್ಲಿ ಬರಹತ್ತಿತು. ಅವನ ಮೇಲಿನ ಅವಳ ಪ್ರೀತಿಯು ತೀರ ಕಡಿಮೆಯಾಯಿತು. ಅವಳು ಅವನಕೂಡ ಮಾತಾಡುವಾಗ ಉಪರೋಧಕ ಭಾಷಣವನ್ನು ಮಾಡಹತ್ತಿದಳು. ಅಂದರೆ ಅವನನ್ನು ಮೊದಲಿನಂತೆ „ನೀನು” ಎಂದು ದ್ವಿತೀಯ ಪುರುಷದಿಂದ ಮಾತಾಡಿಸುವದನ್ನು ಬಿಟ್ಟು, „ಅವನು” ಎಂದು ತೃತೀಯ ಪುರುಷದಿಂದ ಮಾತಾಡಿಸ ಹತ್ತಿದಳು. ಈ ನನ್ನ ಮಾತಿನ ಅಭಿಪ್ರಾಯವು ನಿಮಗೆ ಬಹುಶಃ ತಿಳಿದಿರಲಿಕ್ಕಿಲ್ಲ. ಆದ್ದರಿಂದ ಅದನ್ನು ತುಸು ಬಿಡಿಸಿ ಹೇಳುತ್ತೇನೆ.

ಯಾರಮೇಲೆ ನಮ್ಮ ಪ್ರೀತಿಯು ಹೆಚ್ಚಿರುವದೋ ಅವರಿಗೆ ನಾವು „ನೀನು” ಎಂದು ಅನ್ನುತ್ತೇವೆ. ಹುಡುಗರು ತಮ್ಮ ತಾಯಿಗೆ „ನೀವು” ಎಂದು ಎಂದಿಗೂ ಅನ್ನುವದಿಲ್ಲ. ಹುಡುಗರಾಗಲಿ ದೊಡ್ಡವರಾಗಲಿ ತಮ್ಮ ತಾಯಿಗೆ „ಅವ್ವಾ ನೀನು

ಏನು ಮಾತುತ್ತೀಯೋ?” “ಅವ್ವಾ ನೀನು ಎಲ್ಲಿಗೆ ಹೋಗಿದ್ದಿ?” ಎಂದು ಕೇಳುವದೇ ಸಹಜವಾಗಿದೆ. ತಂದೆಯುಮಾತ್ರ ಹಾಗಲ್ಲ. ಕೆಲ ಕೆಲವರು ತಂದೆಗೆ “ನೀವು” ಅಥವಾ “ತಾವು” ಎಂದು ಅನ್ನುವರು. ಇದಕ್ಕೆ ಕಾರಣವೇನಂದರೆ, ತಂದೆಗಿಂತ ತಾಯಿಯ ಮೇಲೆ ನಮ್ಮ ಪ್ರೀತಿಯು ಹೆಚ್ಚಿರುತ್ತದೆ. ಇಬ್ಬರ ನಡುವಿನ ಪ್ರೇಮವು ಹೆಚ್ಚು ಕಡಿಮೆ ಇದ್ದಂತೆ ನೀನು, ನೀವು, ತಾವು ಎಂಬ ಶಬ್ದಗಳ ಉಪಯೋಗವು ಮಾತಿನಲ್ಲಿ ಆಗುತ್ತದೆ. ಈ ಮಾತಿನ ಅನುಭವವು ಎಲ್ಲಿ ಹೋದರೂ ತಪ್ಪುವದಿಲ್ಲ. ನೀವು ಅಥವಾ ತಾವು ಎಂಬ ಶಬ್ದವನ್ನು ಪರಕೀಯತ್ವವನ್ನು ತೋರಿಸಲಿಕ್ಕೆ ಉಪಯೋಗಿಸುತ್ತೇವೆ. ಅದೇ ಪ್ರಕಾರ ಜರ್ಮನಿಯಲ್ಲಿ “ಅವನು” ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ. ಫ್ರೆಬೆಲನ ತಾಯಿಯು ಮೊದಲು ಅವನ ಸಂಗಡ “ನೀನು” ಎಂಬ ಪ್ರೇಮಸೂಚಕವಾದ ಶಬ್ದದಿಂದ ಮಾತಾಡುತ್ತಿದ್ದಳು. ಮುಂದೆ “ಅವನು’ ಎಂದು ಅನ್ನಹತ್ತಿದಳು. ಆಗ ಅವನಿಗೆ ಬಹಳ ವ್ಯಸನವಾಗ ಹತ್ತಿತು. ಈ ಸಂಬಂಧದಿಂದ ಅವನು ತನ್ನ ಒಬ್ಬ ಮಿತ್ರನಿಗೆ ಬರೆದ ಪತ್ರವಲ್ಲಿ ಅಂದದ್ದೇನಂದರೆ—ನಮ್ಮ ತಾಯಿ ನನ್ನ ಕೂಡ ಹೀಗೆ ನಡೆಯುವದನ್ನು ಕಂಡು ನನಗೆ ಬಹು ದುಃಖವಾಗುತ್ತದೆ. ಇದರಿಂದ ನನ್ನ ಮನಸಿಗೆ ವಿಷಾದವಾಗಿ ನನ್ನಿಂದ ನನ್ನ ಕೆಲಸಗಳಲ್ಲಿ ಎಷ್ಟೋ ತಪ್ಪುಗಳಾಗುತ್ತವೆ.

ನೋಡಿರಿ, ಇದು ಎಷ್ಟು ಸ್ವಾಭಾವಿಕವಾಗಿದೆ! ಫ್ರೆಡರಿಕನ ಮನಸ್ಸಾದರೂ ಹೀಗೇ ಕೋಮಲವಿತ್ತು. ಕೋಮಲ ಮನಸ್ಸಿನವರ ಸ್ಥಿತಿಯು ಹೀಗೇ ಇರುತ್ತದೆ. ಇಂಥವರನ್ನು ಜನರು ಕೀಳಮನಸ್ಸಿನವರೆಂದು ತಿಳಿಯುತ್ತಾರೆ. ಅವರಿಗೆ ನಗುತ್ತಾರೆ.

ಇದು ಬಹು ದೊಡ್ಡ ತಪ್ಪು. ಕೋಮಲ ಮನಸ್ಸಿನವರ ಕೈಯಿಂದ ದಿಟ್ಟತನದ ಕೆಲಸಗಳಾಗದಿದ್ದರೂ ಅವರಲ್ಲಿ ಒಂದು ಬಲು ಹೆಚ್ಚಿನ ಗುಣವಿರುತ್ತದೆ. ಅದು ಯಾವದೆಂದರೆ—“ಪ್ರೇಮಬುದ್ಧಿಯು.” ಅವರ ಮನಸ್ಸು ಬಹುಬೇಗ ಕರಗುವದು, ಅವರಿಗೆ ದಯೆ ಬಹಳ. ಈ ಗುಣವು ಅಪರೂಪವಾದದ್ದು.

ಫ್ರೆಡರಿಕ್ ಫ್ರಬೆಲ್ಲನ ಬಾಲ್ಯವೆಲ್ಲ ಈ ಪ್ರಕಾರ ಬಹು ಕಷ್ಟದಲ್ಲಿ ಹೋಯಿತು. ದೊಡ್ಡ ದೊಡ್ಡ ಜನರ ಪಾಡು ಎಲ್ಲಿನೋಡಿದರೂ ಹೀಗೇ ಇರುತ್ತದೆ. ಆದರೆ ಅವರು ಧೀರರೂ ದೃಢಮನಸ್ಸುಳ್ಳವರೂ ಆಗಿರುವದರಿಂದ ತಮಗಾಗುವ ದುಃಖಗಳನ್ನು ಲೆಕ್ಕಿಸುವದೇ ಇಲ್ಲ. ಇಷ್ಟೇ ಅಲ್ಲ, ಆ ದುಃಖಗಳಿಂದ ಅವರ ಧೈರ್ಯಕ್ಕೂ, ನಿಶ್ಚಯಕ್ಕೂ, ಮತ್ತಿಷ್ಟು ಹುರುಪು ಬರುತ್ತದೆ. ನದಿಯ ಪ್ರವಾಹವನ್ನು ನೋಡಿರಿ! ಅದು ತಡೆ ಇಲ್ಲದೆ ಹರಿಯುತ್ತಿರುವಾಗ ಅತಿವೇಗದಿಂದ ಹೋಗುವದಿಲ್ಲ. ಆದರೆ ಅದು ತಗ್ಗುಮಿಟ್ಟಿಯಾದ ಕಲ್ಲು ನೆಲದಮೇಲಿಂದ ಹರಿಯುವಾಗ, ಇಲ್ಲವೆ ಅತ್ಯುನ್ನತಪ್ರದೇಶದಿಂದ ಒಳ್ಳೇ ತಗ್ಗಿನ ಪ್ರದೇಶಕ್ಕೆ ಹೋಗುವಾಗ, ಮಿತಿಮೀರಿದ ಸೆಳವಿನಿಂದ ಯಾವದನ್ನೂ ಲೆಕ್ಕಿಸದೆ, ಒಂದೇ ಸವನೇ ತನ್ನ ಹಾದಿಯನ್ನು ಹುಡುಕುತ್ತಿರುತ್ತದೆ. ದೊಡ್ಡವರ ಸ್ಥಿತಿಯಾದರೂ ಹೀಗೇ. ಎಂಥಾ ಕಂಟಕ ಬಂದರೂ ಎಂಥಾ ಗಂಡಾಂತರ ಬಂದರೂ ಅವರ ನಿಶ್ಚಯವು ಸಡಲುವದಿಲ್ಲ.

ಫ್ರಬೆಲನ ಸ್ವಭಾವವು ಹೀಗೇ ಇತ್ತು. ಅವನಿಗೆ ಎಷ್ಟು ಕಷ್ಟಗಳು ಒದಗಿದರೂ ಅವಕ್ಕೆ ವ್ಯಾಹತಿ ಬರಲಿಲ್ಲ. ಅವನ ಚಿಕ್ಕಂದಿನ ಒಂದು ಸಂಗತಿಯು ಬಹು ಸೋಜಿಗವಾದ್ದದೆ. ಅದು ಯಾವದಂದರೆ—ಅವನ ಮಲತಾಯಿಯು ಅವನ ಸಂಗಡ

ಮುಸುಮುಸು ಮಾಡಹತ್ತಿದಾಗ, ಸಹಜವಾಗಿಯೇ ಅವನ ಕೆಲಸಗಳಲ್ಲಿ ತಪ್ಪುಗಳಾಗ ಹತ್ತಿದವು. ಆಗ ಅವಳು ಅಷ್ಟಿಷ್ಟಕ್ಕೆಲ್ಲ ತನ್ನ ಗಂಡನ ಮುಂದೆ ಅವನನ್ನು ದೂರಹತ್ತಿದಳು. ಆದ್ದರಿಂದ ಆ ಗಂಡಹೆಂಡರಲ್ಲಿ ದಿನಾಲು ಒಳ್ಳೇ ಅಬ್ಬರದ ಜಗಳಗಳು ನಡಿಯು ಹತ್ತಿದವು. ಈ ನಿತ್ಯಗಟ್ಟಳೆಯ ಕಲಹಗಳಿಂದ ಅವನಿಗೆ ತನ್ನ ಸ್ಥಿತಿಯು ದುಃಸಹವಾಯಿತು. ಇದರಿಂದ ಒಂದಾನೊಂದು ಸಮಯದಲ್ಲಂತೂ ಅವನು ಶಾಲೆಗೆ ಸೂಟಿಯಾವದರಿಂದ ಮನೆಗೆ ಬಂದ ತನ್ನ ಅಣ್ಣನಿಗೆ ಬಹು ಚಮತ್ಕಾರವ ಪ್ರಶ್ನವನ್ನು ಕೇಳಿದನು. ಅದೇನಂದರೆ:—ಅಣ್ಣಾ, ಈ ಜಗತ್ತಿನಲ್ಲಿ ದೇವರು ಎಲ್ಲರನ್ನು ಗಂಡಸರನ್ನೇ ಅಥವಾ ಹೆಂಗಸರನ್ನೇ ಯಾಕೆ ಹುಟ್ಟಿಸಲಿಲ್ಲ? ಹುಟ್ಟಿಸಿದ್ದರೆ, ಮೇಲಿಂದ ಮೇಲೆ ಉಂಟಾಗುವ ಜಗಳಗಳಾದರೂ ನಿಂತು ಹೋಗುತ್ತಿದ್ದವು. ಇದನ್ನು ಕೇಳಿ ಅವನ ಅಣ್ಣನಿಗೆ ಕೌತುಕವಾಯಿತು. ಮತ್ತು ಅವನು ಜಾಣನಿದ್ದವರಿಂದ ಫ್ರೆಡರಿಕನಿಗೆ ಅಂದದ್ದೇನಂದರೆ:—„ ತಮ್ಮಾ, ನೀನು ಕೆಲವು ದಿನಗಳ ವರೆಗೆ ಈ ಪ್ರಶ್ನದ ಉತ್ತರವ ಬಗ್ಗೆ ವಿಚಾರವನ್ನೇ ಮಾಡಬೇಡ ನಾನು ಇಂದಿನಿಂದ ನಿನಗೆ ವನಸ್ಪತಿ ಶಾಸ್ತ್ರವನ್ನು ಕಲಿಸುತ್ತೇನೆ. ಅದನ್ನು ಕಲಿ. ಅಂದರೆ ತನಗೆ ತಾನೇ ನಿನ್ನ ಪ್ರಶ್ನದ ಉತ್ತರವು ನಿನಗೆ ತಿಳಿಯುವದು,'' ಎಂದುಹೇಳಿ ಆ ದಿವಸದಿಂದ ಅವನ ಅಣ್ಣನು ಅವನಿಗೆ ವನಸ್ಪತಿ ಶಾಸ್ತ್ರವನ್ನು ಕಲಿಸ ಹತ್ತಿದನು. ಅದನ್ನು ಕಲಿಯುತ್ತಿರುವಾಗ ಈ ಜಗತ್ತಿನಲ್ಲಿ ಸಹಜವಾಗಿ ತೋರುವ ಸ್ತ್ರೀತತ್ವ, ಪುಂಸ್ತ್ವಗಳೆಂಬ ಎರಡು ಮುಖ್ಯ ತತ್ವಗಳೂ, ಅವುಗಳ ಉಪಯೋಗವೂ, ಆವಶ್ಯಕತ್ವವೂ, ಅವನಿಗೆ ತಿಳಿದ

ವು. ಅದರಿಂದ ಅವನ ಪ್ರಶ್ನದ ಉತ್ತರವು ಅವನಿಗೆ ದೊರೆಯಿತು. ವನಸ್ಪತಿ ಶಾಸ್ತ್ರದ ಅಭ್ಯಾಸವನ್ನು ಹುಡುಗರಿಗೆ ಅವಶ್ಯವಾಗಿ ಮಾಡಿಸಬೇಕು. ಅದರಿಂದ ಸ್ತ್ರೀ ಪುರುಷರಲ್ಲಿ ಬಹುತರವಾಗಿ ಸಾಮ್ಯವಿದ್ದರೂ ತುಸುಮಾತ್ರ ಭೇದ ಉಂಟು. ಆದರೂ ಅದು ಬಹು ಮಹತ್ವದ್ದದೆ, ಎಂಬದು ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಿ ಈಶ್ವರ ಸೃಷ್ಟಿಯ ಅಗಾಧ ಮಹಿಮೆಯ ವಿಷಯಕ್ಕೆ ಅವರ ಮನಸ್ಸಿನಲ್ಲಿ ಪೂಜ್ಯಬುದ್ಧಿ ಹುಟ್ಟುತ್ತದೆ. ಪ್ರಾಣಿ ಕೋಟಿಯಲ್ಲೇ ಆಗಲಿ, ವನಸ್ಪತಿ ಕೋಟಿಯಲ್ಲೇ ಆಗಲಿ, ಸ್ತ್ರೀತ್ವ, ಪುಂಸ್ತ್ವಗಳು ಉಂಟೇ ಉಂಟು. ಹುಳಗಳನ್ನು ಮೊದಲು ಮಾಡಿಕೊಂಡು ಮನುಷ್ಯರ ವರೆಗೆ ನೋಡಿರಿ! ಅಥವಾ ಸಣ್ಣ ಕಂಟಿಗಳ ಮೊದಲ್ಗೊಂಡು ದೊಡ್ಡ ದೊಡ್ಡ ಮರಗಳ ವರೆಗೆ ನೋಡಿರಿ! ಪ್ರತಿ ಒಂದರಲ್ಲಿ ಸ್ತ್ರೀ, ಪುರುಷರ ಭಾವವು ತೋರುತ್ತದೆ. ಸ್ತ್ರೀಜೀವ ಪುರುಷ ಜೀವಗಳು ಪ್ರಾಣಿ ಕೋಟಿಯಲ್ಲಿದ್ದಂತೆಯೇ ಪ್ರತಿಯೊಂದು ವನಸ್ಪತಿಯಲ್ಲಿ ಸ್ತ್ರೀ ಪುಷ್ಪ, ಪುರುಷ ಪುಷ್ಪಗಳೂ, ಸ್ತ್ರೀ ಕೇಶರ, ಪುರುಷ ಕೇಶರಗಳೂ ಉಂಟು. ಅವೆರಡರ ಸಂಯೋಗವಾಗದೆ ಎಂದಿಗೂ ಉತ್ಪತ್ತಿಯಾಗಲಿಕ್ಕಿಲ್ಲ. ಇದರಿಂದ ವನಸ್ಪತಿ ಶಾಸ್ತ್ರದ ಮಹತ್ವವು ವ್ಯಕ್ತವಾಗುವದು.

ಈ ಹೊಸ ಜ್ಞಾನವು ಅವನು ವಿಚಾರಮಾಡಲಿಕ್ಕೆ ಬಹಳ ಮೇಲಾದ ವಿಷಯವಾಯಿತು. ಈ ಹೊತ್ತಿನ ವರೆಗೆ ಅವನ ಮನಸು ಅತ್ತ ಇತ್ತ ಹರಿದಾಡುತ್ತಿತ್ತು. ಆದರೆ ಈ ಸಂಗತಿಯಿಂದ ಅದು ಯಾವದೊಂದು ವಿಷಯದ ಕಡೆಗೆ ಏಕಾಗ್ರವಾಗಹತ್ತಿತು. ನಾವು ನಮ್ಮ ಸ್ವಂತ ಅನುಭವದಮೇಲಿಂದಲೇ ನೋಡಿದರೆ ನಮ್ಮ ಮನಸು ಸ್ಥಿರವಿರುವದಿಲ್ಲ. ಕಂಡ ಕಂಡ

ಕಡೆಗೆ ಹರದಾಡುತ್ತಿರುತ್ತದೆ. ಫ್ರಬೆಲನ ಮನಸು ಈಗ ಏಕಾಗ್ರವಾಯಿತು. ಮುಂದೆ ಅವನು ತಮ್ಮ ಸೋದರ ಮಾವನ ಊರಿಗೆ ಹೋಗಿ, ಅಲ್ಲಿ ಕೆಲವು ಕಾಲ ಸುಖದಿಂದ ಕಳೆದು ತಿರುಗಿ ತನ್ನ ಮನೆಗೆ ಬಂದನು. ದೊಡ್ಡವನಾದಮೇಲೆ ಮೋಜಣಿ ಕೆಲಸ ಕಲಿಯುವದಕ್ಕಾಗಿ ಒಬ್ಬ ಮೋಜಣಿದಾರನ ಹತ್ತರ ನಿಂತು, ಅಭ್ಯಾಸ ಮಾಡಿ, ತಾನೇ ಮೋಜಣಿದಾರನಾದನು. ಆ ಕೆಲಸದಲ್ಲಿ ಇರುವಾಗ ಯಾವಾಗಲೂ ಹೊಲ ತೋಟಗಳಲ್ಲಿಯೂ ಗಿಡ ಗಂಟಿಗಳಲ್ಲಿಯೂ ಹೊತ್ತು ಕಳೆಯಬೇಕಾಗುತ್ತಿತ್ತು. ಆದದರಿಂದ ಅವುಗಳನ್ನು ಸ್ವತಃ ನೋಡಿ ವನಸ್ಪತಿ ಶಾಸ್ತ್ರಜ್ಞಾನವನ್ನು ವಿಶೇಷವಾಗಿ ಬೆಳಸಲಿಕ್ಕೆ ಅವನಿಗೆ ಆಸ್ಪದವಾಯಿತು. ಆಗ ಅವನು ಗಣಿತವಿದ್ಯದ ಅಭ್ಯಾಸವನ್ನು ಸಹ ಮಾಡಿದನು.

ಜರ್ಮನಿ ಮುಂತಾದ ಕೆಲವು ಯುರೋಪದೊಳಗಿನ ದೇಶಗಳಲ್ಲಿ ಪ್ರತಿ ಒಬ್ಬ ಮನುಷ್ಯನು ಯುದ್ಧಕ್ಕೆ ಬೇಕಾಗುವ ಜ್ಞಾನವನ್ನು ದಂಡಿನಲ್ಲಿ ನಿಂತು ಸಂಪಾದಿಸಲಿಕ್ಕೆ ಬೇಕೆಂದು ಕಟ್ಟಳೆಯುಂಟು. ಈ ಕಟ್ಟಳೆಯ ಪ್ರಕಾರ ಇವನು ದಂಡಿನಲ್ಲಿ ನಿಂತು ಕವಾತು ಮುಂತಾದ್ದನ್ನು ಕಲಿಯ ಬೇಕಾಯಿತು. ಅವನ್ನು ಕಲಿಯುತ್ತಿರುವಾಗ ಮೈ ಕೈಗಳನ್ನು ಅಲ್ಲಾಡಿಸುವದರಿಂದ ತನಗೆ ವ್ಯಾಯಾಮವಾಗಿ ಬಹಳ ಹಿತವಾಗುತ್ತದೆಂಬದು ಅವನಿಗೆ ತಿಳಿಯಿತು. ಮತ್ತು ಕವಾತಿನ ಶಿಕ್ಷಣವು ಅವಶ್ಯವಾದದ್ದೆಂದು ಅವನಿಗೆ ತೋರಿತು. ದೊಡ್ಡವರು ಮಾಡಿದಂತೆ ತಾವೂ ಮಾಡಬೇಕು; ಅವರು ಮಾತಾಡಿದಂತೆ ತಾವೂ ಮಾತಾಡಬೇಕು, ಎಂಬ ಲವಲವಿಕೆಯು ಹುಡುಗರಿಗೆ ಸ್ವಾಭಾವಿಕವಾಗಿರುತ್ತದೆ. ಈ ಸಂಗತಿಯು ಅವನ ಲಕ್ಷ್ಯಕ್ಕೆ

ಮುಂದಕ್ಕೆ ಸಾಗುವದು.

NOTES ON GRAMMAR.

ಗ್ರಂಥದ ಮೇಲಿಂದ ವ್ಯಾಕರಣ ಹೇಳುವದು.

ಈಗ ಬೇರೆ ಬೇರೆ ಸಾಲಿಗಳಲ್ಲಿ ಕಲಿತ ವಿದ್ಯಾರ್ಥಿಗಳ ವ್ಯಾಕರಣ ಮಾಡುವ ರೀತಿಗಳು ಬೇರೆ ಬೇರೆಯಾಗಿವೆ. ಎಷ್ಟೋ ವಿದ್ಯಾರ್ಥಿಗಳ ವ್ಯಾಕರಣಮಾಡುವ ರೀತಿಗಳಲ್ಲಿ ಹಲಕೆಲವು ದೋಷಗಳು ಕಂಡು ಬರುತ್ತವೆ. ಕೆಲವರು ಕೇವಲ ರೂಪಸಿದ್ಧಿಯ ಕಡೆಗೇ ಲಕ್ಷ್ಯಕೊಡುತ್ತಾರೆ. ಕೆಲವರು ಅವಶ್ಯವಿಲ್ಲದ ಶಬ್ದಗಳನ್ನು ವ್ಯಾಕರಣ ಮಾಡುವಾಗ ಅನ್ನುತ್ತಿರುತ್ತಾರೆ. ಹಲವರು ಅರ್ಥಾನು ಸಂಧಾನವ ನೋಡದೆ, ಎಲ್ಲ ಕಡೆಯಲ್ಲಿ ಒಂದೇ ರೀತಿಯಿಂದ ಶಬ್ದಗಳ ವ್ಯಾಕರಣ ಹೇಳುತ್ತಾರೆ. ಹೀಗೆ ಮಾಡುವದರಿಂದ ತಕ್ಕ ಪದ್ಧತಿಯು ಯಾವದೆಂಬದು ತಿಳಿಯುವದಿಲ್ಲ. ಈ ಗೊಂದಲವನ್ನು ದೂರಮಾಡಬೇಕೆಂದು ಈ ಸಂಬಂಧದ ಕೆಲವು ಸೂಚನೆಗಳನ್ನು ಇಲ್ಲಿ ಬರೆಯುತ್ತೇವೆ. ಮತ್ತು ಕೆಲವು ವಾಕ್ಯಗಳ ವ್ಯಾಕರಣ ಮಾಡಿ ತೋರಿಸುತ್ತೇವೆ. ಅವನ್ನು ಮಾಸ್ತರ ಜನರು ಓದಿ ನೋಡಿ, ಅವರಲ್ಲಿ ಏನಾದರೂ ಆಕ್ಷೇಪ ತೋರಿದರೆ, ನಮಗೆ ಬರೆದು ತಿಳಿಸಬೇಕು. ಅಂದರೆ ಆ ವಿಷಯದಲ್ಲಿ ಚರ್ಚೆನಡಿಸಿ ಒಂದು ಶುದ್ಧ ಪದ್ಧತಿಯನ್ನು ಗೊತ್ತು ಮಾಡಬಹುದು.

ಸೂಚನೆಗಳು.

(೧). ವಾಕ್ಯದೊಳಗಿನ ಪದಗಳ ಪರಸ್ಪರ ಸಂಬಂಧವನ್ನು ಹೇಳುವದೇ ವ್ಯಾಕರಣ ಮಾಡುವದು.

(೨). ವಾಕ್ಯದ ಅರ್ಥವೂ ಅದರೊಳಗಿನ ಪ್ರತಿಒಂದುಪದದ ಅರ್ಥವೂ ತಿಳಿಯದಿದ್ದರೆ, ವಾಕ್ಯದೊಳಗಿನ ಪದಗಳ ಪರಸ್ಪರ ಸಂಬಂಧವು ತಿಳಿಯುವದಿಲ್ಲ. ಆ ಕಾರಣ ಅರ್ಥವನ್ನು ಚನ್ನಾಗಿ ತಿಳಕೊಂಡ ಮೇಲೆ, ವಾಕ್ಯದ ವ್ಯಾಕರಣ ಮಾಡಬೇಕು.

(೩). ವ್ಯಾಕರಣ ಮಾಡುವಾಗ ಅರ್ಥದ ಕಡಿಗೆ ವಿಶೇಷ ಲಕ್ಷ್ಯ ಕೊಡಬೇಕು. ಬರೀ ರೂಪಸಿದ್ಧಿಯನ್ನು ಹೇಳಿದರೆ ವ್ಯಾಕರಣ ಮಾಡಿದಂತೆ ಆಗುವದಿಲ್ಲ.

(೪). ಓದಿದ ವಾಕ್ಯದಲ್ಲಿ ಏನಾದರೂ ದೋಷವಿದ್ದರೆ, ಅವನ್ನು ಮಾಸ್ತರರು ವಿದ್ಯಾರ್ಥಿಗಳಿಂದ ಪ್ರಶ್ನಗಳ ಸಹಾಯದಿಂದ ಮೊದಲು ತಿದ್ದಿಸ ಬೇಕು. ಅಥವಾ ತಾವೇ ಅದರ ಕಾರಣಗಳನ್ನು ಹೇಳಿ ತಿದ್ದಬೇಕು.

(೫). ಮೊದಲು ಸಂಪೂರ್ಣ ವಾಕ್ಯವನ್ನು ಓದಿ, ಅಲ್ಲಿಂದ ವ್ಯಾಕರಣ ಮಾಡಲಿಕ್ಕೆ ಆರಂಭಿಸಬೇಕು. ಹೀಗೆ ಮಾಡದೆ ಒಂದೊಂದೇ ಪದದ ವ್ಯಾಕರಣ ಹೇಳಬಾರದು.

(೬). ವಾಕ್ಯ ಓದಿದ ಬಳಿಕ ಕರ್ತೃ ಕರ್ಮ ಕ್ರಿಯಾಪದಗಳನ್ನು ಅಂದು, ಪ್ರಯೋಗವನ್ನು ಹೇಳಬೇಕು. ಅಲ್ಲಿಂದ ಒಂದೊಂದು ಪದದ ರೂಪ ಸಿದ್ಧಿಯನ್ನೂ ಅರ್ಥ ಸಂಬಂಧವನ್ನೂ ಹೇಳಬೇಕು. ಕಡೆಗೆ ಕ್ರಿಯಾಪದದ ರೂಪಸಿದ್ಧಿಯನ್ನೂ ಅರ್ಥವನ್ನೂ ಹೇಳಬೇಕು.

(೭). ವಿದ್ಯಾರ್ಥಿಯು ವ್ಯಾಕರಣ ಮಾಡುತ್ತಿರುವಾಗ ಸಮಾಸದ ವಿಗ್ರಹಗಳನ್ನೂ, ಶಬ್ದಗಳ ವ್ಯುತ್ಪತ್ತಿಯನ್ನೂ, ಸಂಧಿನಿಯಮಗಳನ್ನೂ, ಇನ್ನೂ ತಮಗೆ ಬೇಕಾದ ವ್ಯಾಕರಣದ ನಿಯಮಗಳನ್ನೂ ಅವಶ್ಯ ಕಂಡರೆ ಮಾಸ್ತರರಾಗಲಿ, ಪರೀಕ್ಷಕರಾಗಲಿ ಕೇಳಿ, ಅವುಗಳ ಉತ್ತರಗಳನ್ನು ವಿದ್ಯಾರ್ಥಿಗಳಿಂದ ಹೊರಡಿಸಬಹುದು. ಆದರೆ ಇಂಥವುಗಳನ್ನು ವಿದ್ಯಾರ್ಥಿಯು ತಾನೇ ಹೇಳುವದು ಅವಶ್ಯವಿಲ್ಲ. ಸಾಧಾರಣ ನಿಯಮಗಳನ್ನು ಅನುಸರಿಸಿ ವ್ಯಾಕರಣ ಹೇಳಿದರೆ ಅವನ ಕೆಲಸವಾಯಿತು.

ಮುಂದಕ್ಕೆ ಸಾಗುವದು.

DEPARTMENTAL NOTICES.

ವಿದ್ಯಾಖಾತೆಯ ಸಂಬಂಧದ ನೋಟೀಸುಗಳು.

ಸಾಲೆಯ ಮನೆಯ ಬೆಳಕಿನ ಬಗ್ಗೆ ಮತ್ತು ಸ್ವಚ್ಛತೆಯ ಬಗ್ಗೆ ಸುಲಭವಾದ ನಿಯಮಗಳು.

ಸಾಲೇ ಮನಿಗಳಲ್ಲಿ ತಕ್ಕಷ್ಟು ಬೆಳಕೂ, ಸ್ವಚ್ಛತೆಯೂ ಇರದಿದ್ದರೆ, ಹುಡುಗರಿಗೆ ಒಂದಿಲ್ಲ ಒಂದು ರೀತಿಯಿಂದ ಕೇಡಾಗುತ್ತದೆಂದು ನಿಷ್ಕರ್ಷವಾಗಿರುತ್ತದೆ. ಈ ಕೇಡನ್ನು ಯಥಾಶಕ್ತಿ ದೂರ ಮಾಡಲಿಕ್ಕೆ ಎಲ್ಲರೂ ಯತ್ನಿಸಬೇಕೆಂದು ಮೆಹರಬಾನ ಎಜುಕೇಶನಲ್ ಇನ್ಸಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರು ಕೆಲವು ಸುಲಭ ನಿಯಮಗಳನ್ನು ಆರಿಸಿ ಪ್ರಕಟಿಸುವದಕ್ಕಾಗಿ ನಮ್ಮ ಕಡಿಗೆ ಕಳುಹಿಸಿರುತ್ತಾರೆ. ಅವು ಯಾವವೆಂದರೆ—

ಸ್ಥಳವೂ ಕಟ್ಟಣೆಯೂ.

೧. ಹುಡುಗರ ಮತ್ತು ಶಿಕ್ಷಕರ ಸುಖದ ಸಲುವಾಗಿ ಸಾಲೇ ಮನೆಗಳಲ್ಲಿ ಸ್ವಚ್ಛ ಹವೆಯು ಇರುವದು ಮತ್ತು ಬೆಳಕಿನ ಬಗ್ಗೆ ಯೋಗ್ಯವಾದ ವ್ಯವಸ್ಥೆ ಇರುವದು ಅವಶ್ಯವಾಗಿರುತ್ತದೆ.

೨. ಏನಿಲ್ಲೆಂದರೂ ಪ್ರತಿಯೊಂದು ಕೋಣೆಯು ಎರಡು ಬದಿಯಲ್ಲಾದರೂ ವಿಸ್ತೀರ್ಣವಾದ ಹವೆಯು ಇರತಕ್ಕದ್ದು. ಸಾಲೇ ಮನೆಯು ಬಗ್ಗೆ ಆದಷ್ಟರ ಮಟ್ಟಿಗೆ ಶೇವಿಲ್ಲದ ಎತ್ತರವಾದ ಸ್ಥಳವನ್ನು ಹುಡುಕತಕ್ಕದ್ದು. ಅದು ಓಣಿಗಳಿಂದ ಮತ್ತು ಮನೆಗಳಿಂದ ದೂರಿರುವವಲ್ಲದೆ, ಸಣ್ಣ ಹುಡುಗರಿಗೆ ಹೋಗಲಿಕ್ಕೆ ಆಯಾಸವಾಗುವಂತೆ ಇರಬಾರದು. ಕೋಣೆಗಳು ಬಹ

ಳ ಕಡಿಮೆಯುಂವರೆ ೧೦ರಿಂದ ೧೨ ಫೂಟು ಎತ್ತರವಿರುತ್ತವೇದ ತಿಳಿವರೂ, ಕನ್ನಡ ಸಾಲೆಗಳಲ್ಲಿ ಪ್ರತಿಯೊಬ್ಬ ಹುಡುಗನಿಗೆ ೧೦ ಚೌರಸ ಫೂಟು ನೆಲವು ಮತ್ತು ಇಂಗ್ರೇಜಿ ಸಾಲೆಗಳಲ್ಲಿ ಪ್ರತಿಯೊಬ್ಬನಿಗೆ ೧೫ ಚೌರಸ ಫೂಟು ನೆಲವು ಬೇಕೇಬೇಕು. ಹರೆಯುವವರಿಗೆ ಮತ್ತು ದೊಡ್ಡ ಹುಡುಗರಿಗೆ ೨೦ರಿಂದ ೨೫ ಚೌರಸ ಫೂಟು ನೆಲವು ಹೆಚ್ಚಾಗಲಿಕ್ಕಿಲ್ಲ.

ಬೆಳಕು.

೩. ಸಾಲೇ ಮನೆಗಳಲ್ಲಿ ಅಥವಾ ವರ್ಗದ ಕೋಣೆಗಳಲ್ಲಿ ಬೆಳಕು ಸಾಕಷ್ಟು ಇರಬೇಕು; ಮತ್ತು ಅದರ ವಿಭಾಗವನ್ನೂ ಉಪಯೋಗವನ್ನೂ ಚನ್ನಾಗಿ ಮಾಡಿಕೊಳ್ಳತಕ್ಕದ್ದು.

೪. ಕೋಣೆಯ ನೆಲದ ಉದ್ದಳತೆಯ ೫ ರಲ್ಲಿ ೧ ಪಾಲು ಬೆಳಕು ಬರುವ ಮಾರ್ಗಗಳಿದ್ದರೆ, ಆ ಕೋಣೆಗೆ ಬೆಳಕು ಸಾಕಾಗುವದೆಂದು ಸಾಧಾರಣವಾಗಿ ಅನ್ನ ಬಹುದು. ೨೦ ಫೂಟು ಉದ್ದ ಮತ್ತು ೨೦ ಫೂಟು ಅಗಲಿರುವ ಕೋಣೆಗೆ ೮೦ ಚೌರಸಫೂಟು ಬೆಳಕಿನ ಸ್ಥಳವಿರತಕ್ಕದ್ದು. ಸಾಲೇಮನೆಯ ಸ್ಥಳದಿಂದ ಮತ್ತು ಕಟ್ಟೋಣವರಿಂದ ಬೆಳಕಿನಲ್ಲಿ ಹೆಚ್ಚು ಕಡಿಮೆಯಾಗಬಹುದು. ಆದರೆ ಸಾಧಾರಣವಾಗಿ ಒಂದು ಕೋಣೆಯಲ್ಲಿ ಬೆಳಕು ಸಾಕಷ್ಟು ಇದ್ದದ್ದು ಅಥವಾ ಇಲ್ಲದ್ದು ಸುಲಭವಾಗಿ ತಿಳಿಯುವದು.

೫. ಬೆಳಕನ್ನು ಉಪಯೋಗ ಮಾಡುವಾಗ್ಗೆ ಮುಖ್ಯವಾಗಿ ನೆನಪಿನಲ್ಲಿ ಇಡತಕ್ಕ ಮಾತು ಯಾವದೆಂದರೆ, ಹುಡುಗರ ಕಣ್ಣಿಗೆ ತೊಂದರೆಯಾಗಬಾರದು. ಬೆಳಕು ಬೇಕಾದಷ್ಟಕ್ಕಿಂತ ಹೆಚ್ಚು

ಅಥವಾ ಕಡಿಮೆ ಇದ್ದರೆ, ಹುಡುಗರ ಕಣ್ಣಿಗೆ ತೊಂದರೆಯಾಗುವದು. ಮಸಕಿನಲ್ಲಿ ಅಥವಾ ಪ್ರಕಾಶದ ಕಿರಣಗಳು ಬೀಳುವಲ್ಲಿ ಓದುವದು ಸಮನಾಗಿ ಕೆಡಕಾಗಿರುತ್ತದೆ. ಮೇಲಿಂದ ಮತ್ತು ಎಡಗಡೆಯಿಂದ ಬೆಳಕು ಬೀಳುವ ಸ್ಥಳಗಳಲ್ಲಿ ಆದಷ್ಟು ಹೆಚ್ಚು ಹುಡುಗರನ್ನು ಕೂಡ್ರಿಸಿ, ಅವರಿಗೆ ಓದಲಿಕ್ಕೆ ಅಥವಾ ಬರಿಯಲಿಕ್ಕೆ ಹೇಳತಕ್ಕದ್ದು. ಬಲಗಡೆಯಿಂದ ಬರುವ ಬೆಳಕು ಮಧ್ಯಮ, ಮತ್ತು ಹಿಂದಿನಿಂದ ಬರುವ ಬೆಳಕು ಕೆಟ್ಟದ್ದು. ಯಾಕಂದರೆ, ಬೆಳಕು ಹಿಂದುಗಡೆಯಲ್ಲಿ ಇದ್ದರೆ, ಮೈ ನೆಳಲು ಪುಸ್ತಕದ ಮೇಲೆ ಬಿದ್ದು ಕತ್ತಲೆಯಾಗುತ್ತದೆ. ಆದರೆ ಹುಡುಗರ ಮೇಲೆ ಬೀಳುವ ಎದುರ್ಬೆಳಕು ತೀರ ಕೆಟ್ಟದ್ದು; ಇಂಥ ಬೆಳಕಿನಲ್ಲಿ ಎಂದೂ ಓದಬಾರದು. ಓದಿದರೆ ಕಣ್ಣಿಗೆ ಬಹಳ ಅಪಾಯವಾಗುವದು. ಇಂಥ ಬೆಳಕನ್ನು ತಪ್ಪಿಸುವದಕ್ಕಾಗಿ ಕಿಟಕಿಗಳನ್ನು ನೆಲದಿಂದ ಎತ್ತರವಾಗಿ ಹಚ್ಚಿಸತಕ್ಕದ್ದು. ಅಥವಾ ಮಾಳಗೆಯ ಮನೆ ಇದ್ದರೆ ಬೆಳಕಿಂಡಿಗಳನ್ನು ಬಿಡತಕ್ಕದ್ದು. ಬರೆಯುವ ಮೇಜುಗಳನ್ನು ಉಪಯೋಗಿಸುತ್ತಿದ್ದರೆ, ಕಿಟಕಿಗಳ ತಳತುಂಡುಗಳನ್ನು ಎತ್ತರವಾಗಿ ಇರಿಸತಕ್ಕದ್ದು; ಇಲ್ಲವಾದರೆ ಅಕ್ಷರಗಳು ನೆಟ್ಟಗೆ ಕಾಣಿಸಲಿಕ್ಕಿಲ್ಲ; ಮತ್ತು ಹುಡುಗರಿಗೆ ಓದುವಾಗ್ಗೆ ಬಹಳ ಆಯಾಸವಾಗುವದು. ಕಿಟಕಿಗಳಿಗೆ ಮುಚ್ಚಳಗಳಿದ್ದರೆ ಎದುರಾಗಿ ಬರುವ ಕಿರಣಗಳನ್ನು ಬೇಕಾದಾಗ್ಗೆ ತಪ್ಪಿಸಲಿಕ್ಕೆ ಆಗುವದು. ಇರಳು ಸಾಲೆಗಳಲ್ಲಿ ಸಮಾಧಾನದಿಂದ ಉರಿಯುವ ದೀಪಗಳನ್ನು ಹಚ್ಚತಕ್ಕದ್ದು; ಹೊಯ್ದಾಡುವ ದೀಪಗಳನ್ನು ಉಪಯೋಗಿಸಬಾರದು. ಸುಣ್ಣ ಹಚ್ಚಿದ ಗೋಡಿಗಳಿಗಿಂತ ಎರಡನೇ ಬಣ್ಣದ ಗೋಡಿಗಳು ಒಳಿತು; ಯಾಕಂದರೆ ಬಿಳಿ ಗೋಡೆಗಳಿಂದ ಬೆಳಕು ಹೆಚ್ಚು

ತ್ತದೆ. ಬೂದೀ ಬಣ್ಣ, ಮಸಕು ಬಣ್ಣ, ಅಥವಾ ತುಸು ನೀಲೀ ಬಣ್ಣಗಳು ಈ ಭಾಗಗಳಲ್ಲಿ ಹೆಚ್ಚಾಗಿ ದೊರಿಯುತ್ತವೆ. ಬಿಳೆ ಬಣ್ಣಕ್ಕಿಂತ ಈ ಬಣ್ಣಗಳು ಬೆಳಕನ್ನು ಚೆನ್ನಾಗಿ ಹರವುತ್ತವೆ.

ಹವೆಯು ಪ್ರಸರಣೆಯು.

೬. ಗಾಳಿಯನ್ನು ಬೀಸಗೊಟ್ಟು ಹವೆಯು ಆಡಹತ್ತಿದರೆ ಕೆಟ್ಟ ಹವೆಯು ಉಳಿಯಲಾರದು. ಆಯಾ ಕಾಲಕ್ಕೆ ಬೀಸುವ ಗಾಳಿಗಳನ್ನು ಒಳಗೆ ಬಿಟ್ಟರೆ ಮನೆಯಲ್ಲಿದ್ದ ಕೆಟ್ಟ ಗಾಳಿಯು ಹೊರಬೀಳುವದು. ಆದರೆ ಸುಳಿಗಾಳಿಯು ಹುಡುಗರ ಮೈಮೇಲೆ ಹಾಯ್ದು ಹೋಗುವಂತೆ ವ್ಯವಸ್ಥೆ ಇರಕೂಡದು.

೭. ಹವೆಯ ಸಂಬಂಧದಿಂದಲೂ ಬೆಳಕಿನ ಸಂಬಂಧದಿಂದಲೂ ಎತ್ತರವಾದ (ಉದಾ. ೪½ ಫೂ.) ಕಿಟಕಿಗಳು ಶಾಲೇ ಮನೆಗಳಿಗೆ ಮತ್ತು ವರ್ಗದ ಕೋಣೆಗಳಿಗೆ ಇದ್ದರೆ ಒಳ್ಳೇದು. ಈ ಕಿಟಕಿಗಳು ಮಾಳಿಗೆಗೆ ಮುಟ್ಟುವಂತೆ ಎತ್ತರವಿದ್ದಷ್ಟು ಚಲೋದು; ಹೀಗಿದ್ದರೆ ಬೆಳಕು ಮೇಲಿಂದ ಬೀಳುತ್ತದೆ. ಮತ್ತು ಹುಡುಗರ ಮೈಮೇಲೆ ಗಾಳಿ ಬೀಸುವದಿಲ್ಲ. ಕಿಟಕಿಗಳ ಮುಂದೆ ಪಡಸಾಲೆಗಳಲ್ಲದಿದ್ದರೆ ಕಿಟಕಿಗಳ ಬಗ್ಗೆ ಮುಚ್ಚಳಗಳಾದರೂ ಇರತಕ್ಕದ್ದು, ಅಂದರೆ ಕಿಟಕಿಗಳನ್ನು ಮಳೆ ಬಿಸಲುಗಳ ಸಲುವಾಗಿ ಮುಚ್ಚಬೇಕಾಗಲಿಕ್ಕಿಲ್ಲ. ಹೊಸ ಕಟ್ಟಣೆಗಳಲ್ಲಿ ಮತ್ತು ಆವಷ್ಟರ ಮಟ್ಟಿಗೆ ಹಳೆ ಕಟ್ಟಣೆಗಳಲ್ಲಿ ಮಾಳಿಗೆಯ ಹತ್ತರ ಗೋಡಿಗಳಲ್ಲಿ ಕಿಂಡಿಗಳನ್ನು ಬಿಡತಕ್ಕದ್ದು.

ಪ್ರಕಟನೆ.

ಈ ಪುಸ್ತಕದ ಸಂಬಂಧದ ಯಾವತ್ತು ಪತ್ರ ವ್ಯವಹಾರವನ್ನು ಮೊದಲಿನಂತೆ ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಧಾರವಾಡ ಇವರ ಕೂಡ ಇಡತಕ್ಕದ್ದು.

ತಾಲೂಕ ಮಾಸ್ತರರು ಮೂರು ಮೂರು ತಿಂಗಳ ಚಂದಾ ಹಣವನ್ನು ಮುಂಗಡ ವಸೂಲು ಮಾಡಿ ಪ್ರಿನ್ಸಿಪಾಲರ ಕಡಿಗೆ ಕಳುಹಿಸ ಬೇಕು. ಯಾರಕಡಿಂದ ಎಷ್ಟು ಹಣಾ ಸಲ್ಲಿತೆಂಬದನ್ನು ಈ ಪುಸ್ತಕದ ಕೊನೆಯಲ್ಲಿ ಪ್ರಕಟಿಸುವೆವು. ಬೇರೆ ಪಾವತಿ ದೊರೆಯಲಿಕ್ಕಿಲ್ಲ.

ಚಂದಾಹಣ.	ವರ್ಷಕ್ಕೆ	ಮುಂಗಡ	೧೨ ಆಣೆ.
ಅಂಚೆವೆಚ್ಚ	...	...	೩ ಆಣೆ.
		ಅಂತು	೧೫ ಆಣೆ.

ಕನ್ನಡ ಶಾಲಾಪತ್ರಕವು.

KANARESE
SCHOOL PAPER.

ಪುಸ್ತಕ ೨೪.] ಫೆಬ್ರುವರಿ ೧೮೯೦. [ಸಂಚಿಕೆ ೨.

ಅನುಕ್ರಮಣಿಕೆಯು.

ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು... ... ೨೫
೨. ಕನ್ನಡ ಶಾಲಾಮಾಸ್ತರರ ಪೆನಶನ್ ಫಂಡಿನ ಬಗ್ಗೆ ಆದ ವ್ಯವಸ್ಥೆ. ೩೨
೩. ಫ್ರೊಬೆಲನ ಶಿಶು-ಶಿಕ್ಷಣಪದ್ಧತಿ ೩೪
೪. ಹುಡುಗರಿಗೆ ಚಿಕ್ಕಂದಿನಲ್ಲಿ ಕಲಿಸತಕ್ಕ ನಡತೆಗಳು... ... ೪೦
೫. ಗ್ರಂಥದ ಮೇಲಿಂದ ವ್ಯಾಕರಣ ಹೇಳುವದು ೪೩
೬. ವಿದ್ಯಾಖಾತೆಯ ಸಂಬಂಧದ ನೋಟೀಸು ೪೭
೭. ಪತ್ರವ್ಯವಹಾರ ೪೮

CONTENTS.

1. Educational Intelligence and Useful Notes.......25
2. Vernacular School-Master's Pension Fund.......32
3. Froebel's Kinder-Garten System.................34
4. Forming the Habits of Little Children..........40
5. Notice on Grammar..............................43
6. Departmental Notice............................47
7. Correspondence.................................48

DHARWAR:
PRINTED AT THE KARANATIC BOOK DEPOT PRESS,
1890.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿಮಾಸಮಾಗಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದಿ ಪೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೬.] ಫೆಬ್ರುವರಿ ೧೮೯೦. [ಸಂಚಿಕೆ ೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ಹಿಂದುಸ್ಥಾನದಲ್ಲಿ ಸುಧಾರಣೆಯಾಗಬೇಕೆಂದು ಎಷ್ಟೋ ಸ್ವದೇಶಾಭಿಮಾನಿ ಜನರ ಮನಸಿನಲ್ಲಿ ಬರಹತ್ತಿರುತ್ತದೆ. ಮತ್ತು ಸುಧಾರಣೆಗೆ ಮುಖ್ಯ ಸಾಧನವು ಶಿಕ್ಷಣವೇ ಎಂಬದಾದರೂ ಪ್ರತಿಬ್ಬರಿಗೆ ತಿಳಿಯಹತ್ತಿದೆ. ಬೇರೆಬೇರೆ ರಾಷ್ಟ್ರಗಳಲ್ಲಿ ತಾಯಂದಿರು ತಮ್ಮ ತಮ್ಮ ಚಿಕ್ಕ ಮಕ್ಕಳಿಗೆ ತಕ್ಕ ಶಿಕ್ಷಣವನ್ನು ಕೊಡುವ ಭಾರವನ್ನು ವಹಿಸಿಕೊಂಡದ್ದರಿಂದ, ಯಾವತ್ತು ಸುಸೂತ್ರವಾಗಿ ನಡೆವದೆ. ನಮ್ಮ ದೇಶದ ಸ್ಥಿತಿಯು ಹೀಗಿಲ್ಲ. ಶಿಕ್ಷಣದ ಯಾವತ್ತು ಭಾರವು ಶಿಕ್ಷಕವರ್ಗದ ಮೇಲೆಯೇ ಬಿದ್ದಿರುತ್ತದೆ. ಈ ಶಿಕ್ಷಕರಲ್ಲಿ ಪ್ರಾಥಮಿಕ (ಕನಿಷ್ಠಪ್ರತಿಯ) ಶಿಕ್ಷಣವನ್ನು ಕೊಡುವ ಜನರು ಬಹಳ ಕೀಳಸ್ಥಿತಿಯಲ್ಲಿದ್ದಾರೆ: ಅಂದರೆ ಅವರ

ಸಂಬಳವು ನಾಲ್ಕು, ಐದು ರುಪಾಯಿ ಮಾತ್ರ ಇರುವದು. ಇಷ್ಟರಿಂದ ಅವರ ಹೊಟ್ಟೆ ತುಂಬುವದೇ ದುರ್ಲಭವು. ಇಂಥವರು ಶಿಕ್ಷಣದಂಥ ಗೌರವದ ವಿಷಯವನ್ನು ಕುರಿತು ಯಾವಾಗಲೂ ವಿಚಾರ ಮಾಡಿ, ಅನುಭವ ತಕ್ಕೊಂಡು ಅದನ್ನು ಹ್ಯಾಗೆ ಸುಧಾರಿಸುವರು? ಇವನ್ನು ನಮ್ಮ ಭಾಗದ ಎಜುಕೇಶನಲ್ ಇನಸ್ಪೆಕ್ಟರಾದ ಮೆಹರಬಾನ ಪಟವರ್ಧನ ಸಾಹೇಬರು ಮನಸಿನಲ್ಲಿ ತಂದು, ಆದಷ್ಟು ಯತ್ನಮಾಡಿ, ಎರಡು ಮೂರು ವರ್ಷಗಳ ಕೆಳಗೆ ಕುಲಾಬಾ, ರತ್ನಾಗಿರಿ ಜಿಲ್ಲೆಗಳಲ್ಲಿ ಶಿಕ್ಷಕರ ಸಂಬಳ ಕನಿಷ್ಠ ಆರು ರುಪಾಯಿ, ಮತ್ತು ಹೆಡ್ ಮಾಸ್ತರರ ಸಂಬಳ ಕನಿಷ್ಠ ಹತ್ತು ರುಪಾಯಿ ಮಾಡಿರುತ್ತಾರೆ. ಇನ್ನು ದಕ್ಷಿಣ ಭಾಗದೊಳಗಿನ ಉಳಿದ ಜಿಲ್ಲೆಗಳಲ್ಲಿ ಸಹ ಇದೇ ವ್ಯವಸ್ಥೆಯಾಗತಕ್ಕದ್ದದೆ. ಇವರಿಂದ, ನಾಲ್ಕು ಐದು ರುಪಾಯಿ ಸಂಬಳದ ಬಡಶಿಕ್ಷಕರಿಗೆ ಸ್ವಲ್ಪ ಉತ್ತೇಜನ ದೊರೆದು, ಶಿಕ್ಷಣದ ಕೆಲಸವು ತಕ್ಕಮಟ್ಟಿಗೆ ಚನ್ನಾಗಿ ಸಾಗಬಹುದು.

ಪುಣೆಯಲ್ಲಿ ಫೀಮೇಲ ಟ್ರೇನಿಂಗಕಾಲೇಜ, ಅಂದರೆ ಹೆಣ್ಣುಮಕ್ಕಳ ಶಾಲೆಗಳಿಗಾಗಿ ಶಿಕ್ಷಕಿಯರನ್ನು ತಯಾರುಮಾಡುವ ವಿದ್ಯಾಲಯವು, ಇದ್ದದ್ದು ನಮ್ಮ ವಾಚಕರಿಗೆ ಗೊತ್ತಿರಬಹುದು. ಈ ಕಾಲೇಜದಬಗ್ಗೆ ೧೮೮೮-೮೯ನೇ ವರ್ಷದ ವಿದ್ಯಾಖಾತೆಯ ವಾರ್ಷಿಕ ರಿಪೋರ್ಟನಲ್ಲಿ ಬರೆದದ್ದೇನಂದರೆ— ಈ ಕಾಲೇಜದಲ್ಲಿ ಹೋದವರ್ಷ ಮೂವತ್ತಾರು ಮಂದಿ ವಿದ್ಯಾರ್ಥಿನಿಯರು ಅಭ್ಯಾಸ ಮಾಡುತ್ತಿದ್ದರು. ಇವರಲ್ಲಿ ಹದಿನೈದು ಜನರು ಶಿಕ್ಷಕರ ಹೆಂಡರಿದ್ದಾರೆ. ಹತ್ತು ಜನರು ಕಾಲೇಜದಲ್ಲಿಯೇ ವಾಸಮಾಡುತ್ತಾರೆ; ಹದಿನೆಂಟು ಜನರು ತಮ್ಮ ಪತಿಗಳೊಡನೆ ಊ

ರಲ್ಲಿ ಮನೆ ಮಾಡಿಕೊಂಡು ಇರುತ್ತಾರೆ; ಎಂಟು ಜನರು ತಮ್ಮ ಆಪ್ತಇಷ್ಟರ ಮನೆಗಳಲ್ಲಿ ಇರುತ್ತಾರೆ. ಈ ವರ್ಷ ಮೂರು ಮಂದಿ ವಿದ್ಯಾರ್ಥಿನಿಯರು ಸರಟಿಫಿಕೀಟ ಪರೀಕ್ಷೆಯಲ್ಲಿ ಪಾಸಾದರು.

ಈ ಪಟ್ಟಣದಲ್ಲಿ ಹೆಣ್ಣುಮಕ್ಕಳಿಗೆ ಇಂಗ್ಲಿಷ ಭಾಷೆಯನ್ನು ಕಲಿಸುವದಕ್ಕಾಗಿ ಒಂದು ಹೈಸ್ಕೂಲ್ ಇದ್ದ ಸಂಗತಿಯಾದರೂ ನಮ್ಮ ವಾಚಕರಿಗೆ ಗೊತ್ತಿರಬಹುದು. ಅಲ್ಲಿ ಅರುವತ್ತೊಂದು ಮಂದಿ ಹೆಣ್ಣುಮಕ್ಕಳು ಇಂಗ್ಲಿಷ ಭಾಷೆಯನ್ನು ಕಲಿಯುತ್ತಾರೆಂತಲೂ, ಶಾಲೆಯು ಒಳ್ಳೇ ಸ್ಥಿತಿಯಲ್ಲಿರುವದೆಂತಲೂ ಆ ರಿಪೋರ್ಟಿನ ಮೇಲಿಂದ ತಿಳಿಯುತ್ತದೆ. ಈ ಹೈಸ್ಕೂಲಿಗೆ ಮೇಲೆ ಹೇಳಿದ ಫೀಮೇಲ ಟ್ರೇನಿಂಗಕಾಲೇಜವು ಕಳೆದ ಜನವರಿ ತಿಂಗಳಿಂದ ಜೋಡಿಸಲ್ಪಟ್ಟಿತು.

ಇತ್ತಲಾಗಿ, ಮುಂಬಯಿ ಸರಕಾರದವರು ಕಲಾಕೌಶಲ್ಯದ ಶಾಲೆಗಳನ್ನು ಸ್ಥಾಪಿಸುವದರಲ್ಲಿ ಮನಸು ಹಾಕಿರುವದು ನಮ್ಮ ದೇಶದ ಭಾಗ್ಯೋದಯದ ಕುರುಹು ಎಂದು ಹೇಳಬಹುದು. ಇಂಥ ಶಾಲೆಗಳ ಆವಶ್ಯಕತೆಯನ್ನೂ ಅವುಗಳಿಂದಾಗುವ ಲಾಭಗಳನ್ನೂ ಎಷ್ಟು ವರ್ಣಿಸಿದರೂ ತೀರದು. ಈ ನಮ್ಮ ಮೇಲಧಿಕಾರಿಗಳು ಹಾಕಿಕೊಟ್ಟ ಕಿತ್ತಿಯನ್ನು ನಮ್ಮ ದೇಶೀಯ ಸಂಸ್ಥಾನಿಕರು ತೀಡಹತ್ತಿದ್ದನ್ನು ನೋಡಿ, ನಮಗೆ ಬಹಳ ಸಂತೋಷವಾಗುತ್ತದೆ.

ನಮ್ಮ ದೇಶೀಯ ಸಂಸ್ಥಾನಿಕರಲ್ಲಿ ಕಲಾಕೌಶಲ್ಯದ ಶಾಲೆಯನ್ನು ಮೊದಲು ಸ್ಥಾಪಿಸಿದ ಶ್ರೇಯಸ್ಸು ನಿಜಾಮ ಸರಕಾರದವರಿಗೆ ಉಂಟು. ಇವರು ಸ್ವಲ್ಪ ದಿವಸಗಳ ಕೆಳಗೆ ಔರಂಗಾಬಾ

ದದಲ್ಲಿ ಬಂದು ಟೆಕ್ನಿಕಲ್‌ಸ್ಕೂಲ ಅಂದರೆ ಕಲಾಕೌಶಲ್ಯದ ಶಾಲೆಯನ್ನು ಸ್ಥಾಪಿಸಿದರು. ಈ ಶಾಲೆಯನ್ನು ಸ್ಥಾಪಿಸುವ ಸಮಾರಂಭವನ್ನು ಹೈದರಾಬಾದದ ರೆಸಿಡೆಂಟ ಸಾಹೇಬರೂ, ನಿಜಾಮ ಸರಕಾರದ ಮುಖ್ಯ ಮಂತ್ರಿಗಳಾಗಿರುವ ಸರ ಅಸ್ಮಾಂಜಾ ಎಂಬವರೂ ಕೂಡಿಮಾಡಿದರು. ಔರಂಗಾಬಾದ ಪಟ್ಟಣವು ಪ್ರಾಚೀನ ಕಾಲದಿಂದ ತರತರವ ಕಾರಖಾನೆಗಳ ಬಗ್ಗೆ ಹೆಸರಾದದ್ದರಿಂದ, ಅದು ಈ ಮಾದರಿಯ ಶಾಲೆಗಳಿಗೆ ತಕ್ಕ ಸ್ಥಳವೆಂದು ಹೇಳುವದು ಅವಶ್ಯವಿಲ್ಲ. ಔರಂಗಾಬಾದ, ದೌಲತ್ತಾಬಾದಗಳಲ್ಲಿ ಹುಟ್ಟುವ ಕಾಗದಗಳ ಮಾರಾಟವು ಈ ನಮ್ಮ ಪ್ರಾಂತದಲ್ಲಿ ಕೆಲವು ವರ್ಷಗಳ ಪೂರ್ವದಲ್ಲಿ ನಡೆಯುತ್ತಿತ್ತು. ಆ ಕಾಗದಗಳು ನಮ್ಮ ಕರ್ನಾಟಕದಲ್ಲಿ ಹುಟ್ಟುವ ಕಾಗದಗಳಿಗಿಂತ ಬಹು ನುಣುಪಾಗಿಯೂ, ದಪ್ಪಾಗಿಯೂ, ಬಹಳ ದಿವಸ ತಾಳುವಂಥವಾಗಿಯೂ ಇರುವದರಿಂದ, ಜನರು ಅವುಗಳನ್ನು ಪ್ರೀತಿಯಿಂದ ಕೊಂಡುಕೊಳ್ಳುತ್ತಿದ್ದರು. ಆದರೆ ಇತ್ತಲಾಗಿ, ವಿಲಾಯತಿಯಿಂದ ತರ ತರದ ಕಾಗದಗಳು ಬಂದು, ಬಹಳ ಅಗ್ಗವಾಗಿ ದೊರೆಯಹತ್ತಿದ್ದರಿಂದ, ಆ ಕಾಗದಗಳ ವ್ಯಾಪಾರವು ತೀರ ಕಟ್ಟಾಗಿ, ಅವು ಕಾಣದ ಹಾಗೆ ಆದವು. ಔರಂಗಾಬಾದದಲ್ಲಿ ಹೊಸದಾಗಿ ಸ್ಥಾಪಿಸಿದ ಕಲಾಕೌಶಲ್ಯದ ಶಾಲೆಯು ಉತ್ಕರ್ಷವಾಗಿ, ಈ ಅಡಗಿ ಹೋದ ಕಾಗದ ಮುಂತಾದವುಗಳ ವ್ಯಾಪಾರಗಳಿಗೆ ಜೀವಕಳೆ ತುಂಬಿ, ಸಾವಿರಾರು ಜನರ ಉಪಜೀವನ ಸಾಗೀತೆಂದು ನಂಬುತ್ತೇವೆ.

ಈ ಪ್ರಸಕ್ತಿಯಲ್ಲಿ ಬಡೋದೆ ಸರಕಾರದವರು ತಮ್ಮ ರಾಜ್ಯದಲ್ಲಿ ತೀವ್ರವೇ ಕಾಗದದ ಗಿರಣಿ ಮುಂತಾದ ಕೆಲವು ಕಾರಖಾನೆಗಳನ್ನು ಸ್ಥಾಪಿಸತಕ್ಕವರಿದ್ದಾರೆಂದು ಕೇಳುತ್ತೇವೆ.

ಈಗ ಇಂಗ್ಲಂಡದಲ್ಲಿ ಗ್ಲ್ಯಾಡ್ಸ್ಟನ್ ಸಾಹೇಬರೆಂಬವರೊಬ್ಬರು ಬಳ್ಳೇ ರಾಜಕಾರಸ್ಥಾನೀ ಪುರುಷರಿದ್ದಾರೆ. ಇವರು ವ್ಹಿಗ್ ಅಂದರೆ ಪ್ರಜಾಪಕ್ಷದವರಿದ್ದು, ಎಷ್ಟೋ ಸಾರಿ ಇಂಗ್ಲಂಡದಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಈಗ ಇವರಿಗೆ ಎಂಬತ್ತೊಂದನೇ ವರ್ಷ ನಡೆಯುತ್ತದೆ. ಇಷ್ಟು ಮುಪ್ಪಿನವರಾದಾಗ್ಯೂ, ಯಾವಾಗಲೂ ವಿದ್ಯಾವ್ಯಾಸಂಗದೊಳಗೆ ತೊಡಗಿರುತ್ತಾರೆ. ಮಾಂಚೆಸ್ಟರ ಗಾರ್ಡಿಯನ್ ಎಂಬ ವರ್ತಮಾನ ಪತ್ರದಲ್ಲಿ ಇವರ ವಿಷಯಕ್ಕೆ ಬರೆದದ್ದೇನಂದರೆ—ಈ ಮುಪ್ಪಿನ ಮುದುಕರು ವರ್ತಮಾನ ಪತ್ರಗಳಲ್ಲಿಯೂ, ಮಾಸಿಕ ಪುಸ್ತಕಗಳಲ್ಲಿಯೂ, ನಿಬಂಧಗಳನ್ನೂ ಬೇರೆ ಲೇಖಗಳನ್ನೂ ಬರೆಯುವದಕ್ಕೆ ಕೆಲವು ವೇಳೆಯನ್ನು ವೆಚ್ಚ ಮಾಡಬೇಕೆಂದು ಗೊತ್ತು ಮಾಡಿದ್ದಾರೆ. ಇದು ಎಂಥಾ ಸೋಜಿಗದ ಮಾತು ನೋಡಿರಿ! ಎಷ್ಟೋ ಜನರು ಮುಪ್ಪಿನವರಾಗುವವರೆಗೆ ಬದುಕುವದನ್ನು ನಾವು ನೋಡುತ್ತೇವೆ. ಆದರೆ ಇಂಥಾ ಮುಪ್ಪಿನ ಕಾಲದಲ್ಲಿ ತಮ್ಮ ಬುದ್ಧಿಯನ್ನು ಇಂಥಾ ಕೆಲಸಗಳಲ್ಲಿ ಉಪಯೋಗಿಸುವ ಜನರನ್ನು ಕಾಣುವದು ಅಪರೂಪ. ಇವರು ತಾವು ಕೈಕೊಂಡ ಕೆಲಸವನ್ನು ಬಳ್ಳೇ ಪ್ರಾಯಸ್ಥನ ಹಾಗೆ ಮಾಡುತ್ತಾರಂತೆ. ನಮ್ಮ ಹಿಂದುಸ್ಥಾನದಲ್ಲಿ ಇಂಥಾ ರತ್ನಗಳು ಹುಟ್ಟುವದಂತೂ ಒತ್ತಟ್ಟಿಗೆ ಇರಲಿ, ಬಳ್ಳೇ ಪ್ರಾಯದಲ್ಲಿ ಅವರೂ ತಮ್ಮ ಆಯುಷ್ಯವನ್ನು ಇಂಥಾ ಸ್ತುತ್ಯ ಕೃತ್ಯಗಳಲ್ಲಿ ಕಳೆಯುವವರು ಹುಟ್ಟಿದರೆ, ನಮ್ಮ ಸುದೈವವೆಂದು ಎಣಿಸಬಹುದು.

ಗಿಡಗಳ ಬೇರುಗಳನ್ನು ಊರದೆ ತುದಿಗಳನ್ನು ಊರಿದರೆ, ಅವು ಚನ್ನಾಗಿ ಬೆಳೆಯುವವೋ ಇಲ್ಲವೋ, ಬೆಳೆದರೆ ಹ್ಯಾಗೆ

ಬೆಳೆಯುತ್ತವೆ, ಎಂಬವನ್ನು ನೋಡುವದಕ್ಕಾಗಿ, ಜರ್ಮನಿಯಲ್ಲಿರುವ ದೊಡ್ಡ ದೊಡ್ಡ ಪಂಡಿತರು ಪ್ರಯೋಗಗಳನ್ನು ಮಾಡಲಾರಂಭಿಸಿದ್ದಾರೆ.

ಕಲಕತ್ತೆಯಲ್ಲಿರುವ ವಿದ್ಯಾಖಾತೆಯ ಮುಖ್ಯಾಧಿಕಾರಿಗಳು ಒಂದು ಕಮಿಟಿಯನ್ನು ಸ್ಥಾಪಿಸಿ, ಅವರ ಮುಖಾಂತರವಾಗಿ ಉತ್ತಮವಾದ ಪುಸ್ತಕಗಳು ಜನರಿಗೆ ಸ್ವಲ್ಪ ಬೆಲೆಯಲ್ಲಿ ಸಿಗುವಂತೆ ವ್ಯವಸ್ಥೆಯನ್ನು ಮಾಡತಕ್ಕವರಿದ್ದಾರೆ. ಮುಂಬಯಿಯಲ್ಲಿ ಸಹ ಇದರಂತೆಯೇ ವ್ಯವಸ್ಥೆ ಮಾಡುವದಕ್ಕಾಗಿ, ಒಂದು ಸಭೆ ನೆರದಿತ್ತು.

ಜರ್ಮನೀ ದೇಶದ ಜನರು ಬಳ್ಳೇ ವಿದ್ಯಾಸಂಪನ್ನರಾಗಿರುವರು. ಅವರಲ್ಲಿ ಎಷ್ಟೋ ಜನರು ವಿದ್ಯಾವ್ಯಾಸಂಗದೊಳಗೆ ದಿನಾಲು ಹದಿನೆಂಟು ತಾಸು ವೇಳೆಯನ್ನು ಕಳೆಯುತ್ತಾರಂತೆ. ಜರ್ಮನೀ ರಾಜ್ಯದಲ್ಲಿ ಸಣ್ಣ ದೊಡ್ಡ ಪುಸ್ತಕಾಲಯಗಳು ಎಷ್ಟು ಉಂಟೋ, ಅಷ್ಟು ಬೇರೆ ಕಡೆಯಲ್ಲಿ ಇಲ್ಲೆಂದರೂ ಸಲ್ಲುವದು. ಬಹು ದೊಡ್ಡ ಪುಸ್ತಕಾಲಯಗಳ ವಿವರವು ಹ್ಯಾಗಂದರೆ—ಮುಂಚಿನ್ ಎಂಬಲ್ಲಿ ಎಂಟು ಲಕ್ಷ ಛಾಪಿಸಿದ ಗ್ರಂಥಗಳೂ, ಇಪ್ಪತ್ತುನಾಲ್ಕು ಸಾವಿರ ಕೈಬರಹದ ಪುಸ್ತಕಗಳೂ ಉಂಟು; ಬರ್ಲಿನ್ ಪಟ್ಟಣದಲ್ಲಿ ಏಳು ಲಕ್ಷ ಛಾಪಿಸಿದ ಗ್ರಂಥಗಳೂ, ಹದಿನೈದು ಸಾವಿರ ಕೈಬರಹದ ಪುಸ್ತಕಗಳೂ ಉಂಟು; ದ್ರೆಸದೆನ್‌ದಲ್ಲಿ ಐದು ಲಕ್ಷ ಛಾಪಿಸಿದ ಗ್ರಂಥಗಳೂ ನಾಲ್ಕು ಸಾವಿರ ಕೈಬರಹದ ಪುಸ್ತಕಗಳೂ ಉಂಟು; ಡಾರ್ಮಸ್ಟ್ಯಾಡದಲ್ಲಿ ಮೂರು ಲಕ್ಷ ಎಂಬತ್ತು ಸಾವಿರ ಛಾಪಿಸಿದ ಪುಸ್ತಕಗಳೂ, ಎಪ್ಪತ್ತೈದು ಸಾವಿರ ನಿಬಂಧಗಳೂ, ಮೂರು ಸಾವಿರದಇನ್ನೂರು ಕೈಬರಹದ ಪುಸ್ತಕ

ಗಳೂ ಉಂಟು; ಲೆಪ್ಸಿಕ ಯುನಿವರ್ಸಿಟಿಯ ಲಾಯಬ್ರರಿಯಲ್ಲಿ ಮೂರು ಲಕ್ಷ ಐವತ್ತು ಸಾವಿರ ಛಾಪಿಸಿದ ಗ್ರಂಥಗಳೂ, ನಾಲ್ಕು ಸಾವಿರ ಕೈಬರಹದ ಪುಸ್ತಕಗಳೂ ಉಂಟು; ಬ್ರೆಸ್ಲಾದಲ್ಲಿ ಛಾಪಿಸಿದ ಪುಸ್ತಕಗಳು ನಾಲ್ವತ್ತು ಸಾವಿರ, ಕೈಬರಹದ ಪುಸ್ತಕಗಳು ಎರಡು ಸಾವಿರ; ಸ್ಟುಟಗಾರ್ಟದಲ್ಲಿ ಛಾಪಿಸಿದ ಪುಸ್ತಕಗಳು ಮೂರು ಲಕ್ಷ, ನಿಬಂಧಗಳು ಒಂದು ಲಕ್ಷ ಇಪ್ಪತ್ತು ಸಾವಿರ, ಕೈಬರಹದ ಪುಸ್ತಕಗಳು ಮೂರು ಸಾವಿರದ ಏಳುನೂರು; ಹಾಂಬುರ್ಗ, ಹಿಡೇಲ್ಬರ್ಗ, ಸ್ಟ್ರಾಸ್ಬರ್ಗದಲ್ಲಿ ಸುಮಾರು ಮೂರು ಲಕ್ಷ ಛಾಪಿಸಿದ ಪುಸ್ತಕಗಳು; ಟ್ಯುಬಿಂಜನ್ನದಲ್ಲಿ ಎರಡು ಲಕ್ಷ ಎಂಬತ್ತು ಸಾವಿರ ಛಾಪಿಸಿದ ಪುಸ್ತಕಗಳು; ಫ್ರೀಬರ್ಗದಲ್ಲಿ ಎರಡು ಲಕ್ಷ ಐವತ್ತು ಸಾವಿರ ಛಾಪಿಸಿದ ಗ್ರಂಥಗಳು; ಗೋಥಾ ಎಂಬಲ್ಲಿ ಎರಡು ಲಕ್ಷ ಮೂವತ್ತೆಂಟು ಸಾವಿರ ಛಾಪಿಸಿದ ಗ್ರಂಥಗಳು; ವೀಮರದಲ್ಲಿ ಎರಡುಲಕ್ಷ ಮೂವತ್ತೆಂಟು ಸಾವಿರ ಛಾಪಿಸಿದ ಗ್ರಂಥಗಳು; ಜೀನಾದಲ್ಲಿ ಒಂದು ಲಕ್ಷ ಎಂಬತ್ತು ಸಾವಿರ,—ಈ ಮೇರೆಗೆ ಪುಸ್ತಕಗಳುಂಟು. ನಮ್ಮ ಹಿಂದುಸ್ಥಾನದಲ್ಲಿರುವ ಪುಸ್ತಕಾಲಯಗಳಲ್ಲಿ ಬಹುದೊಡ್ಡ ಪುಸ್ತಕಾಲಯವು ಮುಂಬಯಿ ಟೌನಹಾಲಿನಲ್ಲಿರುವ "ರೊಯಲ್ ಏಶಿಯಾಟಿಕ ಸೋಸಾಯಟಿ" ಎಂಬ ಸಭೆಯವರದೇ. ಇದರೊಳಗೆ ಅರವತ್ತೆರಡು ಸಾವಿರದ ಐನೂರು ಛಾಪಿಸಿದ ಗ್ರಂಥಗಳೂ, ಎರಡು ಸಾವಿರದ ಒಂದು ನೂರು ಕೈಬರಹದ ಪುಸ್ತಕಗಳೂ ಮಾತ್ರ ಉಂಟು. ಇದರಿಂದ ಮೇಲಿನ ಪುಸ್ತಕಾಲಯಗಳ ಮಹತ್ವವೂ ಅಲ್ಲಿಯ ಜನರ ವಿದ್ವತ್ತೆಯೂ ವ್ಯಕ್ತವಾಗುತ್ತದೆ.

VERNACULAR SCHOOL-MASTERS' PENSION-FUND.

ಕನ್ನಡ ಶಾಲಾಮಾಸ್ತರರ ಪೆನಶನ್ ಫಂಡಿನ ಬಗ್ಗೆ ಆದ ವ್ಯವಸ್ಥೆ.

ಲೋಕಲ್ ಬೋರ್ಡುಗಳ ಮತ್ತು ಮ್ಯುನಿಸಿಪಲ್ ಕಮಿಟಿಗಳ ವ್ಯವಸ್ಥೆಯು ಆಯಾಸ್ಥಳದ ಜನರ ಕೈಗೆ ಸೇರಿದ ಬಳಿಕ, ಸರಕಾರದವರು ಕನ್ನಡ ಶಾಲೆಗಳ ವ್ಯವಸ್ಥೆಯನ್ನಾದರೂ, ಆ ಎರಡು ಸಂಸ್ಥೆಯವರ ಕಡೆಗೆ ಒಪ್ಪಿಸಿದರು. ಅಂದಿನಿಂದ ಸರಕಾರದವರ ಅಂಕಿತದಿಂದ ಈ ಎರಡು ಸಂಸ್ಥೆಯವರ ವಶಕ್ಕೆ ಹೋಗುವ ಶಿಕ್ಷಕರು ಬಹಳ ತೊಂದರೆಗೆ ಒಳಗಾಗಹತ್ತಿದ್ದರು. ಹ್ಯಾಗಂದರೆ— (೧). ಸರಕಾರದವರನ್ನು ನಂಬಿದಂತೆ ಈ ಎರಡು ಸಂಸ್ಥೆಯವರನ್ನು ನಂಬಬಹುದೋ ಹ್ಯಾಗೆ, ಎಂಬ ಬಗ್ಗೆ ಅವರಿಗೆ ಸಂಶಯಹುಟ್ಟಿತು; ಮತ್ತು (೨). ಪೆನಶನ್ ಫಂಡನ್ನು ತುಂಬುವ ಬಗ್ಗೆ ಶಿಕ್ಷಕರಿಗೂ, ಸರಕಾರದವರಿಗೂ, ಮೇಲೆ ಹೇಳಿದ ಎರಡು ಸಂಸ್ಥೆಯವರಿಗೂ, ಯಾವಾಗಲೂ ವ್ಯರ್ಥ ಉಪದ್ರವವಾಗಹತ್ತಿತು. ಇದರಿಂದ ಕಡೆಗೆ ಆದ ಪರಿಣಾಮವೇನಂದರೆ, ಅನುಭವವುಳ್ಳವರೂ ಜಾಣರೂ ಆದ ಶಿಕ್ಷಕರು, ದೊಡ್ಡದೊಡ್ಡ ಊರುಗಳ ಶಾಲೆಗಳಮೇಲೆ ಸಹ ಹೋಗಲಿಕ್ಕೆ ಹಿಂದುಮುಂದು ನೋಡಹತ್ತಿದರು. ಮಧ್ಯಭಾಗದ ಎಜುಕೇಶನಲ್ ಇನ್ಸಪೆಕ್ಟರರಾದ ಮೊಹರಬಾನ ಕರ್ಕ್ಯಾಮ್ ಸಾಹೇಬರು ಈ ಸ್ಥಿತಿಯನ್ನು ನೋಡಿ, ಯಾರಿಗೂ ತೊಂದರೆಯಾಗದಂಥ ಒಂದು ಬಗೆಯ ವ್ಯವಸ್ಥೆಯನ್ನು ಯೋಚಿಸಿ, ವರಿಷ್ಠಾಧಿಕಾರಿಗಳ ಮುಂದೆ ಇಟ್ಟರು. ಅದು ಮುಂಬಯಿ ಸರಕಾರದವರ ಮನಸಿಗೆ ಬಂದು, ಮುಂದೆ ಹಿಂದುಸ್ಥಾನ ಸರಕಾರದವರ ಕಡೆಗೆ ಹೋಗಲಾಗಿ,

ಅವರು ಅದಕ್ಕೆ ಪೂರ್ಣವಾಗಿ ಸಮ್ಮತಿಸಿದರು. ಇನ್ನು ಮೇಲೆ, ಪೆನಶನವ ನಿಯಮಗಳಲ್ಲಿ ಹೆಚ್ಚು ಕಡಿಮೆಯಾಗಿ, ಹೊಸನಿಯಮಗಳು ತೀವ್ರವೇ ಹೊರಬೀಳುವವು. ಶಿಕ್ಷಕರಿಗೆ ಪೆನಶನವ ಹಣ ತುಂಬುವ ಬಗ್ಗೆ ಇನ್ನು ಏನೂ ತೊಂದರೆಯಾಗದು. ಈ ವಿಷಯವಲ್ಲಿ ಅವರು ಕೇವಲ ನಿಶ್ಚಿಂತರಾಗಿರಬಹುದು. ಮತ್ತು ಈ ಸಂಬಂಧದಿಂದ ಅವರು ಸರಕಾರದವರ ಅಂಕಿತದಲ್ಲಿದ್ದಂತೆಯೇ, ಲೋಕಲ್‌ಬೋರ್ಡು ಮ್ಯುನಿಸಿಪಾಲಿಟಿಗಳ ಅಧೀನದಲ್ಲಿ ಇರತಕ್ಕದ್ದು. ಪೆನಶನ್‌ಫಂಡಿನ ಯಾವತ್ತು ಕೊಡಕೊಳ್ಳೋಣವು ಸರಕಾರದವರೂ, ಬೋರ್ಡು ಇಲ್ಲವೆ ಕಮಿಟಿಯವರೂ, ತಮ್ಮದು ತಾವೇ ನೋಡಿಕೊಳ್ಳುವರು. ಇದಲ್ಲದೆ, ಪೆನಶನದ ಸಂಬಧದಿಂದ ಇನ್ನು ಮೇಲೆ ಸರಕಾರೀ ಶಿಕ್ಷಕರಿಗೂ, ಬೋರ್ಡು ಕಮಿಟಿಗಳ ಶಿಕ್ಷಕರಿಗೂ, ಯಾವಪ್ರಕಾರದ ಭೇದವೂ ಉಳಿಯಲಿಕ್ಕಿಲ್ಲ. ಮತ್ತು ಹೊಸ ನಿಯಮಗಳು ಸುಲಭವಾಗಿಯೂ, ಹೆಚ್ಚು ಅನುಕೂಲವಾಗಿಯೂ ಇರುವದರಿಂದ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಶಿಕ್ಷಕರ ಬದಲಿಯಾದರೂ, ಯಾವ ಪ್ರಕಾರದ ತೊಂದರೆಯೂ ತಟ್ಟಲಿಕ್ಕಿಲ್ಲ. ಇದಕ್ಕಾಗಿ ನಮ್ಮ ಶಿಕ್ಷಕರು ಮಿ. ಕಕ್ಕ್ಯಾರ್ಮ ಸಾಹೇಬರ ಉಪಕಾರವನ್ನು ನೆನಿಸಬೇಕು. ಮತ್ತು ನಮ್ಮ ಲೋಕಪ್ರಿಯ ಗವ್ಹರ್ನರರಾವ ಲಾರ್ಡ ರೇ ಧೊರೆಗಳು ಈ ಕೆಲಸದಲ್ಲಿ ಮನಸುಹಾಕಿ, ಎಡಶಿಕ್ಷಕರಿಗೆ ನಿರಂತರದಲ್ಲಿ ಅವರಸೆನಪು ಉಳಿಯುವಂಥ ವ್ಯವಸ್ಥೆಯನ್ನು ಮಾಡಿಕೊಟ್ಟದ್ದರಿಂದ, ಇವರ ಉಪಕಾರವನ್ನಾದರೂ ಬಹಳವಾಗಿ ನೆನಿಸತಕ್ಕದ್ದು.

FROEBEL'S KINDER-GARTEN SYSTEM.
ಫ್ರುಬೆಲನ ಶಿಶು-ಶಿಕ್ಷಣಪದ್ಧತಿ.

(೧೮ ನೇ ಪುಟದಿಂದ ಮುಂದೆ ಸಾಗಿದ್ದು.)

ಬಂದದ್ದಲ್ಲದೆ, ಹುಡುಗರ ಈ ತರದ ಸ್ವಭಾವವು ಕವಾತಿಗೆ ಬಹಳ ಉಪಯೋಗವುಳ್ಳದ್ದೆಂದು ಅವನಿಗೆ ತಿಳಿಯಿತು. ದಂಡಿನೊಳಗಿರುವಾಗ ಈತನಿಗೂ ಒಬ್ಬ ದೊಡ್ಡ ಮನುಷ್ಯನಿಗೂ ಬಹಳ ಗೆಳೆತನ ಬಿತ್ತು. ಈ ಗೆಳೆತನವು ಕಡೆತನಕ ನಡೆಯಿತು. ಮತ್ತು ಇದರಿಂದ ಫ್ರುಬೆಲನಿಗೆ ಬಹಳ ಉಪಯೋಗವಾಯಿತು. ಈ ಸ್ನೇಹಿತನಿಗೆ ಫ್ರುಬೆಲನು ಶಿಕ್ಷಣದ ಕೆಲಸವಲ್ಲಿ ಬಹಳ ಹೆಸರಾಗುವವನು, ಉಳಿದ ವಿಷಯಗಳ ಕಡೆಗೆ ಅವನ ಮನಸು ಹತ್ತತಕ್ಕಷ್ಟು ಹತ್ತುವದಿಲ್ಲ, ಎಂದು ತೋರಿತು. ಈ ಮಾತಿನ ಮನವರಿಕೆಯು ಚನ್ನಾಗಿ ಆದಬಳಿಕ, ಅವನು ಒಂದು ದಿವಸ ಫ್ರುಬೆಲನಿಗೆ ಅಂದದ್ದು— ಫ್ರುಬೆಲನೇ, ನೀನು ಶಿಕ್ಷಕನ ಕೆಲಸ ಒಳ್ಳೇ ಕುಶಲತನದಿಂದ ಮಾಡುವಿ; ಉಳಿದ ವಿಷಯಗಳ ಕಡೆಗೆ ನಿನ್ನ ಮನಸು ಹರಿಯುವದಿಲ್ಲ. ನಾನು ಒಂದು ಸಾಲಿ ಹಾಕತಕ್ಕವನಿದ್ದೇನೆ. ನೀನು ಕಲಿಸಲಿಕ್ಕೆ ಬರುವಿಯಾ? ಎಂದು ಕೇಳಲು, ಅದಕ್ಕೆ ಫ್ರುಬೆಲನು ತತ್ಕ್ಷಣವೇ ಒಪ್ಪಿಕೊಂಡನು. ಯಾಕಂದರೆ, ಶಿಕ್ಷಣದ ಕೆಲಸವನ್ನು ಕೈಕೊಳ್ಳುವದೇ ಉತ್ತಮವಾದದ್ದೆಂಬದು ಅವನ ಮನಸಿನಲ್ಲಾದರೂ ಇತ್ತು. ಈ ಮೇರೆಗೆ ಅವರಿಬ್ಬರೂ ಆಲೋಚನೆ ಮಾಡಿದಮೇಲೆ, ಫ್ರುಬೆಲನು ಶಿಕ್ಷಕನಾದನು. ಮೊದಲನೇ ದಿವಸ ಅವನು ತನ್ನ ವರ್ಗಕ್ಕೆ ಹೋದಬಳಿಕ, ಯಾರಮನಸು ತಿದ್ದತಕ್ಕ ಕೆಲಸವು ತನ್ನ ಕೈಯಲ್ಲಿ ಇರುವದೋ ಅಂಥ ಮೂವತ್ತು ನಾಲ್ವತ್ತು ಜನ ಹುಡುಗರು ತನ್ನ ಸುತ್ತು

ಮತ್ತು ನೆರೆದದ್ದನ್ನು ನೋಡಿ, ಆತನಿಗೆ ಆದ ಆನಂದವನ್ನು ವರ್ಣಿಸಕೂಡದು. ಆತನು ಈ ಆನಂದವನ್ನು ಕುರಿತು ಒಂದು ಪತ್ರದಲ್ಲಿ ಬರೆದದ್ದೇನಂದರೆ:—"ಮೀನುಗಳಿಗೆ ಯಥೇಚ್ಛ ನೀರು ಸಿಕ್ಕ ಹಾಗೆ ಆಯಿತು." ಶಿಕ್ಷಕನಿಗೆ ಅವಶ್ಯವಾಗಿ ಬೇಕಾದಷ್ಟು ಜ್ಞಾನವು ನನ್ನಲ್ಲಿ ಇಲ್ಲ. ಅದನ್ನು ನಾನು ದೊರಕಿಸಬೇಕು, ಎಂದು ಅವನಿಗೆ ತೀವ್ರವೇ ತಿಳಿಯಿತು.

ದೊಡ್ಡವರ ಸ್ವಭಾವವು ಹ್ಯಾಗಂದರೆ,—ಯಾವದಾದರೊಂದು ಕೆಲಸವನ್ನು ಮಾಡಬೇಕೆಂದು ಅವರು ಒಮ್ಮೆ ನಿಶ್ಚಯಿಸಿದರೆಂದರೆ, ಅದಕ್ಕೆ ಆಲಸ್ಯ ಮಾಡುವದಿಲ್ಲ. ಫ್ರಬೆಲನು ಕೂಡಲೇ ಸಾಲಿಯ ಕೆಲಸವನ್ನು ಬಿಟ್ಟುಕೊಟ್ಟು, ತನ್ನ ವಿದ್ಯಾಭ್ಯಾಸ ಬೆಳೆಸಬೇಕೆಂದು ವಿಶ್ವವಿದ್ಯಾಲಯದ (ಯುನಿವರ್ಸಿಟಿಯ) ಹಾದಿಯ ಹಿಡಿದನು. ಅಲ್ಲಿ ಹೋಗಿ, ಅವನು ಲ್ಯಾತಿನ್, ಗ್ರೀಕ ಮುಂತಾದ ಹಲವು ಭಾಷೆಗಳನ್ನೂ, ಗಣಿತ ಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರ, ರಸಾಯನ ಶಾಸ್ತ್ರ ಮುಂತಾದ ವಿಷಯಗಳನ್ನೂ ಚನ್ನಾಗಿ ಕಲಿತು, ಇನ್ನು ಮೇಲೆ ಮತ್ತೆ ಶಿಕ್ಷಣದ ಉದ್ಯೋಗ ನಡಿಸಲಿಕ್ಕೆ ತೊಂದರೆಯಾಗಲಿಕ್ಕಿಲ್ಲೆಂಬದನ್ನು ಮನವಟ್ಟು ಮಾಡಿಕೊಂಡು, ತನ್ನ ಮೊದಲಿನ ಸಾಲಿಗೆ ಬಂದನು. ಕೆಲವು ದಿವಸಗಳವರೆಗೆ ಆ ಕೆಲಸವನ್ನು ನಡಿಸಿದ ಮೇಲೆ, ಅವನಿಗೆ ತಿಳಿದದ್ದೇನಂದರೆ—ಶಿಕ್ಷಣದ ಕೆಲಸವನ್ನು ಒಳ್ಳೇ ರೀತಿಯಿಂದ ಸಾಗಿಸಬೇಕಾದರೆ, ಶಿಕ್ಷಕನಿಗೆ ಅವಶ್ಯವಾಗಿರುವ ಜ್ಞಾನವನ್ನು ಇನ್ನೂ ಹೆಚ್ಚಿಗೆ ಸಂಪಾದಿಸಿಕೊಳ್ಳಲಿಕ್ಕೆ ಬೇಕು; ಇಲ್ಲದಿದ್ದರೆ, ನನ್ನಿಂದ ಈ ಕೆಲಸವು ಆಗತಕ್ಕಷ್ಟು ಉತ್ತಮ ರೀತಿಯಿಂದ ಆಗಲಿಕ್ಕಿಲ್ಲ. ಈ ಮೇರೆಗೆ ಆಲೋಚನೆ ಮಾಡಿಕೊಂಡು, ಅವನು ಇತಲೀ ದೇಶಕ್ಕೆ ಬಂದು, ಅಲ್ಲಿ ಪ್ರಖ್ಯಾತ ಪಂಡಿತನಾದ ಪೆಸ್ತಾಲೊತ್ಸೆ ಎಂಬವನ ಹತ್ತರ

ಸುಮಾರು ಎರಡು ಎರಡೂವರೆ ವರುಷಗಳವರೆಗೆ ನಿಂತು, ಅವನ ಶಿಕ್ಷಣಪದ್ಧತಿಯನ್ನು ಕಲಿತುಕೊಂಡನು. ಪೆಸ್ತಾಲೊತ್ಸೆಯು ಅತಿ ವಿಖ್ಯಾತವಾದ ಒಂದು ಶಿಕ್ಷಣ ಪದ್ಧತಿಯನ್ನು ಶೋಧಿಸಿ ತೆಗೆದಿದ್ದನು. ಅವರ ಮುಖ್ಯ ತತ್ವವೇನೆಂದರೆ—ಶಿಷ್ಯರಿಗೆ ಬಡವೆಯನ್ನು ಪ್ರತ್ಯಕ್ಷವಾಗಿ ತೋರಿಸಿ ಅವನ್ನು ತಿಳಿಸಿಕೊಡುವದು. ಪದಾರ್ಥದರ್ಶನದಿಂದ ಬಲುಬೇಗ ಅದರ ಜ್ಞಾನವಾಗುತ್ತದೆಂಬ ಮಾತು ಸರ್ವಾಂಶದಿಂದಲೂ ಸತ್ಯವದೆ. ಪದಾರ್ಥವು ಮುಂದೆ ಇಲ್ಲದೆ, ಬರೇ ವರ್ಣನೆಯಿಂದಲೇ ಅದನ್ನು ಕಲ್ಪಿಸಿಕೊಂಡು, ಅವರ ಜ್ಞಾನವನ್ನು ಸಂಪಾದಿಸಿಕೊಳ್ಳುವ ಕೆಲಸವು ಬಹಳ ಬಿಗಿಯಾದದ್ದು. ಇದಕ್ಕಿಂತ ಪದಾರ್ಥವನ್ನು ಮುಂದಿಟ್ಟುಕೊಂಡು ಅವನ್ನು ನೋಡುವದರಿಂದ, ಆ ಸಂಬಂಧದ ಜ್ಞಾನವು ತನಗೆ ತಾನೇ ದೊರೆಯುವದೆಂಬ ಉತ್ಕೃಷ್ಟ ಗುಣವು ಪೆಸ್ತಾಲೊತ್ಸೆಯ ಶಿಕ್ಷಣ ಪದ್ಧತಿಯಲ್ಲಿತ್ತು. ಆದರೆ ಈ ಪದ್ಧತಿಯು ಸಣ್ಣ ಹುಡುಗರಿಗೆ ತಕ್ಕದ್ದಾಗುವದೆಂದು ತೋರಲಿಲ್ಲ. ದೊಡ್ಡವರಿಗೆ ಈ ಪದ್ಧತಿಯಿಂದ ಪ್ರಯೋಜನವಾದಷ್ಟು ಚಿಕ್ಕ ಬಾಲಕರಿಗೆ ಆಗಲಿಕ್ಕಿಲ್ಲೆಂದು ಅವನಿಗೆ ತೋರಿತು. ಪದಾರ್ಥವು ಕಣ್ಣು ಮುಂದೆ ಇರುವಾಗ ಅದರ ಜ್ಞಾನವು ಬಹುಬೇಗ ಆಗುತ್ತದೆಂಬುವದು ನಿಜವು. ಆದರೆ ಯಾರ ದರ್ಶನೇಂದ್ರಿಯವು ವಿಕಸಿತವಾಗಿರುತ್ತದೋ ಅವರಿಗೆ ಮಾತ್ರ ಇಂಥ ಜ್ಞಾನವು ಬಹುಬೇಗ ಆಗುತ್ತದೆ. ಬಡವೆಯನ್ನು ಹ್ಯಾಗೆ ನೋಡಬೇಕು? ಅದರ ಜ್ಞಾನವನ್ನು ಹ್ಯಾಗೆ ಮಾಡಿಕೊಳ್ಳಬೇಕು? ಅದರ ಉಪಯೋಗವೇನು? ಇವೇ ಮುಂತಾದ ಸಂಗತಿಗಳನ್ನು, ಬಡವೆಯನ್ನು ನೋಡಿದ ಕೂಡಲೇ ಇಲ್ಲವೆ, ಬಡವೆಯನ್ನು ತೋರಿಸಿ ಗುರುಗಳು ಹೇಳಿದ ಕೂಡಲೇ, ತಿಳುಕೊಳ್ಳುವಷ್ಟು ಚುರುಕು ಬುದ್ಧಿ

ಯುಳ್ಳವರಿಗೆ ಮಾತ್ರ, ಪದಾರ್ಥದರ್ಶನದಿಂದ ಲಾಭವಾಗಬಹುದು. ಆದರೆ ಹುಡುಗರಿಗೆ—ಪದಾರ್ಥವನ್ನು ಹ್ಯಾಗೆ ನೋಡಬೇಕು? ಅವನ್ನು ಕೈಯಲ್ಲಿ ಹ್ಯಾಗೆ ಹಿಡಿಯಬೇಕು?—ಈ ಮುಂತಾದ ಸಂಗತಿಗಳಿಂದಲೇ ಶಿಕ್ಷಣವನ್ನು ಆರಂಭಿಸಬೇಕಾಗುತ್ತದೆ.

ಈ ಸಂಗತಿಯು ಪೇಸ್ತಾಲೊತ್ಸಿಯ ಶಿಕ್ಷಣಪದ್ಧತಿಯಲ್ಲಿ ಇಲ್ಲೆಂಬದು ಪ್ರಬೆಲನ ಲಕ್ಷ್ಯಕ್ಕೆ ಬಂತು. ಪೆಸ್ತಾಲೊತ್ಸಿಯ ಶಿಕ್ಷಣಪದ್ಧತಿಯನ್ನು ಕಲಿತು, ಪ್ರಬೆಲನು ತಿರುಗಿ ತನ್ನ ಊರೊಳಗಿನ ಮೊದಲಿನ ಸಾಲಿಗೆ ಬಂದನು. ಆ ಸಾಲಿಯ ಮುಖ್ಯ ಶಿಕ್ಷಕನು ಪ್ರಬೆಲನ ಗೆಳೆಯನಿದ್ದನು. ಅವನು ಪ್ರಬೆಲನ ಸ್ವತಃ ಸಿದ್ಧವಾದ ಹೊಸ ಹೊಸ ಕಲ್ಪನೆಗಳನ್ನು ಕಂಡು, ಅವನಿಂದ ಶಿಕ್ಷಣಪದ್ಧತಿಯಲ್ಲಿ ಬಳ್ಳೇ ಸುಧಾರಣೆಯಾಗುವದೆಂದು ತಿಳಿದು, ಪ್ರಬೆಲನಿಗೆ ಸೂಚಿಸಿದ್ದೇನಂದರೆ,—ಅನ್ಯರು ಸ್ಥಾಪಿಸಿದ ಸಾಲಿಯಲ್ಲಿ ಶಿಕ್ಷಕನಾಗಿ ನಿಂತು ಸುಧಾರಣೆಯನ್ನುಂಟು ಮಾಡುವದು ಅಸಂಭವವೇ. ಆದದರಿಂದ, ಸ್ವತಂತ್ರವಾದ ಸಾಲಿಯನ್ನು ಸ್ಥಾಪಿಸಿ, ಸ್ವಂತ ಕಲ್ಪನೆಗೆ ಸತ್ಯ ರೂಪವನ್ನು ಕೊಟ್ಟರೆ ಮಾತ್ರ, ಏನಾದರೂ ಲಾಭ ವುಂಟು. ಈ ಆಲೋಚನೆಯು ಎಲ್ಲ ಬಗೆಯಿಂದ ಪ್ರಬೆಲನ ಮನಸಿಗೆ ಬಂದದ್ದರಿಂದ, ಅವನು ತನ್ನ ಒಬ್ಬ ಗೆಳೆಯನ ಸಹಾಯದಿಂದ, ತನ್ನ ಕಲ್ಪನೆಗಳನ್ನು ಅನುಸರಿಸಿ ಹುಡುಗರಿಗೆ ಕಲಿಸುವದಕ್ಕಾಗಿ, ಒಂದು ಸಾಲಿಯನ್ನು ಸ್ಥಾಪಿಸಿದನು. ಈ ಸಾಲಿಗೆ ಐದೇ ಹುಡುಗರು ಬಂದರು. ಆದರೂ ಅವನು ಎದೆಗುಂದದೆ, ಅಷ್ಟೇ ಹುಡುಗರಿಗೆ ತನ್ನ ಪದ್ಧತಿಯಂತೆ ಕಲಿಸುವ ಕ್ರಮವನ್ನು ಆರಂಭಿಸಿದನು. ಅವನ ಪದ್ಧತಿಯು ಎಷ್ಟು ಚಲೋದು! ಅದನ್ನು ಎಷ್ಟೆಂತ ವರ್ಣಿಸಬೇಕು! ಅವನು ಹುಡುಗರನ್ನು ಹೊಡೆಯಲಿಲ್ಲ, ಬಡೆಯಲಿಲ್ಲ; ಬೆದರಿಕೆ

ಯನ್ನಾಗಲಿ, ಬಲಾತ್ಕಾರವನ್ನಾಗಲಿ ತೋರಿಸಲಿಲ್ಲ. ಕೆಟ್ಟಮಾತುಗಳಂತೂ ಅವನ ಬಾಯಿಂದ ಎಂದೂ ಬರುತ್ತಿದ್ದಿಲ್ಲ. ಹುಡುಗರಿಂದ ಮಾಡಿಸತಕ್ಕ ಕೆಲಸಗಳನ್ನೆಲ್ಲ ಸವಿ ಸವಿ ಮಾತುಗಳಿಂದಲೇ ಮಾಡಿಸುತ್ತಿದ್ದನು. ಒಂದು ವೇಳೆ ಕೆಲವೊಬ್ಬ ಹುಡುಗನಿಂದ ಏನಾದರೂ ತಪ್ಪು ಆದರೆ, ಅವನು ಅವರ ನಿಜಸ್ವರೂಪವನ್ನು ಅವನಿಗೆ ತಿಳಿಸಿ ಹೇಳಿ, ಇದರಿಂದ ಪ್ರೀತಿಗೆ ಅಪಾತ್ರನಾಗುತ್ತೇನೆಂದು ತನ್ನೊಳಗೆ ತಾನೇ ತಿಳಿಕೊಳ್ಳುವ ಹಾಗೆ ಮಾಡಿ, ಅವನನ್ನು ಹಾದಿಗೆ ತರುತ್ತಿದ್ದನು. ತನ್ನ ವಿದ್ಯಾರ್ಥಿಗಳೆಲ್ಲರು ತನ್ನ ಮಕ್ಕಳೇ ಎಂದು ಭಾವಿಸಿ ಕೊಂಡು, ಅವರನ್ನು ನೋಡಿ ಬಹಳ ಅಕ್ಕರತೆ ಪಡುವನು. ಅವರ ಮೇಲೆ ಅವನ ಪ್ರೀತಿಯು ಇಷ್ಟೆಂತ ಹೇಳಕೂಡದು. ಹೀಗಿರಲಾಗಿ, ಒಂದಾನೊಂದು ಸಮಯದಲ್ಲಿ ಅವನ ಮನಸಿನಲ್ಲಿ ಬಂದದ್ದೇನೆಂದರೆ,—ಹುಡುಗರ ಎಲ್ಲ ಪ್ರಕಾರದ ವ್ಯವಸಾಯಗಳೂ, ಅವರು ತಮ್ಮ ತಾಯಂದಿರೊಡನೆ ನಡಕೊಳ್ಳುವ ನಡತೆಗಳೂ, ಮುಂತಾದ ಸಂಗತಿಗಳನ್ನು ಪರೀಕ್ಷಿಸಿ ನೋಡಿ, ಅವುಗಳನ್ನು ಅನುಸರಿಸಿ, ಶಿಕ್ಷಣದ ಕ್ರಮವನ್ನು ಗೊತ್ತು ಮಾಡಬೇಕು. ಈ ಆಲೋಚನೆಯಿಂದ ಆತನು ಊರಲ್ಲಿ ಅಡ್ಡಾಡಿ, ತನ್ನ ಇಷ್ಟಕಾರ್ಯವನ್ನು ನೆರವೇರಿಸ ಹತ್ತಿದನು. ಫ್ರಬೆಲನು ಬೇಕಾದವರ ಕಡೆಯಿಂದ ತನಗೆ ಆವಶ್ಯಕವಾದ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಿದ್ದನು. ಅವನಲ್ಲಿರುವ ಅನೇಕ ಸದ್ಗುಣಗಳಲ್ಲಿ ಇದೊಂದು ಮುಖ್ಯವಾದ ಗುಣವಿತ್ತು. ದೊಡ್ಡವರಾಗಲಿ ಸಣ್ಣವರಾಗಲಿ, ಹೆಂಗಸೇ ಆಗಲಿ ಗಂಡಸೇ ಆಗಲಿ, ಯಾರಿಂದಾದರೂ ತನಗೆ ಜ್ಞಾನವು ದೊರೆಯುವ ಹಾಗಿದ್ದರೆ, ಅದನ್ನು ಸಂಪಾದಿಸಿಕೊಳ್ಳಲಿಕ್ಕೆ ಅವನು ಹಿಂಜರಿಯುತ್ತಿದ್ದಿಲ್ಲ. ಸಾಮಾನ್ಯ ಜನ

ರಂತೆ ಅಧಿಕಾರದಿಂದ ಉಬ್ಬಿ ನಡೆಯುವದನ್ನೂ, ತಾನು ಸರ್ವಜ್ಞನೆಂದು ತಿಳುಕೊಂಡು ಹೆಮ್ಮೆ ತೋರಿಸುವದನ್ನೂ, ಅವನು ಸ್ವಪ್ನದಲ್ಲಿ ಸಹ ಅರಿಯನು.

ಸ್ವತಃಸಿದ್ಧವಾದ ಶಿಕ್ಷಣವನ್ನು ಪಡೆಯಲಿಕ್ಕೆ ಸೃಷ್ಟಿಯೇ ಮೇಲಾದ ಶಾಲೆಯು. ಇಂಥ ಶಾಲೆಯು ಮತ್ತೊಂದಿಲ್ಲ. ಆದರೆ ಸೃಷ್ಟಿಯನ್ನು ಪರೀಕ್ಷಿಸಿ ನೋಡುವ ಕೆಲಸವು ಸುಲಭವೆಂದು ಯಾರೂ ತಿಳಿಯಲಾಗದು. ಆ ಕೆಲಸವು ಎಲ್ಲಕ್ಕೂ ಬಿಗಿಯಾದದ್ದು. ನೀವೇ ನೋಡಿರಿ! ಹಣ್ಣು ಗಿಡದ ಮೇಲಿಂದ ಉದುರಿ, ತನ್ನಿಂದ ತಾನೇ ನೆಲಕ್ಕೆ ಬೀಳುವದನ್ನು ಸಾವಿರಾರು ಜನರು ನೋಡಿದ್ದರು. ಸರ್ ಐಝಾಕನ್ಯೂಟನನೂ ನೋಡಿದನು. ಆದರೆ ಈತನ ನೋಡುವಿಕೆಯಿಂದ ಯಾವತ್ತು ಸೃಷ್ಟಿಗೆ ಸಂಬಂಧಿಸಿದ ಗುರುತ್ವಾಕರ್ಷಣದ ನಿಯಮವು ಪ್ರಕಟವಾಯಿತು. ಉಳಿದವರು ಕಣ್ಣುಳ್ಳವರಾದರೂ ಕುರುಡರಂತೆಯೇ ಆಗಿಹೋದರು. ನಮ್ಮಲ್ಲಿರುವದೊಂದು ದೊಡ್ಡ ಕೊರತೆಯು ಯಾವದೆಂದರೆ—ನಮ್ಮಲ್ಲಿ ಅವಲೋಕನ ಶಕ್ತಿ ಇಲ್ಲ. ಆದರೆ ಇದು ನಮಗೆ ಅತ್ಯವಶ್ಯವಾಗಿ ಬೇಕಾದದ್ದು. ಸೃಷ್ಟಿಯ ಅವಲೋಕನದಿಂದ ಇದುವರೆಗೆ ದೊಡ್ಡ ದೊಡ್ಡ ಕಾರ್ಯಗಳಾಗಿವೆ. ಹುಡುಗರನ್ನೂ, ಅವರ ಚಿಕ್ಕಂದಿನ ಸ್ವಾಭಾವಿಕ ಕೃತಿಗಳನ್ನೂ ಅವಲೋಕಿಸಿದ್ದರಿಂದ, ಫ್ರೊಬೆಲನ ಮನಸಿನಲ್ಲಿ ಅತ್ಯಂತ ಮನೋವೇಧಕವಾದ ಶಿಕ್ಷಣಪದ್ಧತಿಯು ಉದಯವಾಯಿತು. ತನ್ನ ಮನಸಿನಲ್ಲಿ ಬಂದಿರುವ ಈ ಶಿಕ್ಷಣಪದ್ಧತಿಯು ಎಲ್ಲಬಗೆಯಿಂದ ಗ್ರಾಹ್ಯವಾಗಿಯೂ ಶ್ರೇಯಸ್ಕರವಾಗಿಯೂ ಇರುವದೆಂಬದಾಗಿ ಅವನು ಮನಗಂಡನು.

ನಾವು ಕೈಕೊಂಡ ಕೆಲಸವು ಶ್ಲಾಘ್ಯವಲ್ಲೆಂದು ನಮ್ಮ ಮ

ನಸಿಗೆ ತಿಳಿದರೆ, ಅದು ಒಳ್ಳೇ ರೀತಿಯಿಂದ ಎಂದಿಗೂ ಸಿದ್ಧಿಗೆ ಹೋಗಲಾರದೆಂದು ನಮಗೆ ತೋರುತ್ತದೆ. ಇಂದಿಗೆ ಅಮೇರಿಕ ಮುಂತಾದ ಎಷ್ಟೋ ದೇಶಗಳಲ್ಲಿ ಫ್ರಬೆಲನ ಶಿಕ್ಷಣಪದ್ಧತಿಯು ಒಳ್ಳೇ ಭರದಿಂದ ನಡೆಯುತ್ತದೆ. ಅದು ಬಹಳೇ ಉತ್ತಮವಾದದ್ದು. ಹುಡುಗರಿಗೆ ಸಚ್ಛಿಕ್ಷಣವು ಅದರಿಂದಲೇ ದೊರೆಯುತ್ತದೆ. ಮನುಷ್ಯನೆಂಬ ಹೆಸರಿಗೆ ಯಥಾರ್ಥವಾಗಿ ಒಪ್ಪುತ್ತಿರುವ ಹುಡುಗನು ಈ ಶಿಕ್ಷಣಪದ್ಧತಿಯಿಂದ ಬಲು ಬೇಗ ತಿದ್ದಲ್ಪಡುವನು. ಆದದರಿಂದ, ಈ ಪದ್ಧತಿಯನ್ನು ನಮ್ಮ ದೇಶದಲ್ಲಿ ಆದಷ್ಟು ಹೆಚ್ಚಿಗೆ ಹಬ್ಬಿಸಲಿಕ್ಕೆಬೇಕು. ಇದರ ಜ್ಞಾನವು ಎಲ್ಲ ಕಡೆಯಲ್ಲಿಯೂ ಪಸರಿಸುವದು ಹಿತವು. ಈ ಪದ್ಧತಿಯನ್ನು ಅನುಸರಿಸಲಿಕ್ಕೆ ನಾವೆಲ್ಲರೂ ಯತ್ನಿಸತಕ್ಕದ್ದು. ಇನ್ನು ಪ್ರಕೃತ ವಿಷಯವನ್ನು ಸಾಗಿಸೋಣ.

(ಮುಂದಕ್ಕೆ ಸಾಗುವದು.)

FORMING THE HABITS OF LITTLE CHILDREN.

ಹುಡುಗರಿಗೆ ಚಿಕ್ಕಂದಿನಲ್ಲಿ ಕಲಿಸತಕ್ಕ ನಡತೆಗಳು.

ನಾವು ಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ, ನಮ್ಮ ದೇಶದಜನರಿಗೆ ಬುನಾದಿಯಲ್ಲಿ ಶಿಕ್ಷಣದ ವ್ಯಾಪಕಾರ್ಥವು ಸರಿಯಾಗಿ ಗೊತ್ತಿತ್ತೆಂದು ತೋರುತ್ತದೆ. ಆದರೆ ಮುಂದೆ ಮುಸಲ್ಮಾನರ ಆಳಿಕೆಯೆಂಬ ಕಗ್ಗತ್ತಲೆಯಲ್ಲಿ ನಾಲ್ಕೂ ಕಡೆಗೆ ಅವ್ಯವಸ್ಥೆಯುಂಟಾಗಿ, ಶಿಕ್ಷಣದ ಕೆಲಸವು ಕಟ್ಟಾಯಿತು. ಆಗಾಗ್ಗೆ ವಿದ್ಯಾಪಕ್ಷಪಾತಿಗಳಾದ ಕೆಲವರು ಅರಸರು ಪಟ್ಟಕ್ಕೆ ಬಂದರು. ಅವರೂ ವಿದ್ಯಾಗುರುಗಳೆಂಬ ಬಿರುದಿಗೆ ತಕ್ಕವರು

ಬಹಳ ಜನರಾಗಲಿಲ್ಲ. ಇತ್ತಲಾಗಿ, ಇಂಗ್ಲಿಷರ ರಾಜ್ಯವಾದಂದಿನಿಂದ ಸರಕಾರದವರೇ ಶಿಕ್ಷಣದ ಕೆಲಸವನ್ನು ಕೈಕೊಂಡಿರುತ್ತಾರೆ. ಮತ್ತು ಸ್ವಲ್ಪಕಾಲದಲ್ಲಿಯೇ ಸದ್ಗುರುಗಳೆಂಬ ಬಿರುದಿಗೆ ತಕ್ಕವರಾದ ಜನರು ಅಲ್ಲಲ್ಲಿಗೆ ತಲೆದೋರುವರೆಂದು ತೋರುತ್ತದೆ. ಆದರೆ ಸದ್ಯಕ್ಕೆ ಶಿಕ್ಷಣದ ನಿಜಸ್ವರೂಪ ತಿಳಿದಂಥವರು ಬಹು ಜನರು ಇದ್ದ ಹಾಗೆ ಕಾಣುವದಿಲ್ಲ. ಕನಿಷ್ಠ ಪ್ರತಿಯ ಶಾಲೆಗಳ ಶಿಕ್ಷಕರಂತೂ, ಯಂತ್ರಗಳಂತೆ ಹಾಗೂ ಹೀಗೂ ಅಭ್ಯಾಸ ಮಾಡಿಸುವದೇ ಶಿಕ್ಷಣವೆಂದು ತಿಳಕೊಂಡು, ಅದರಲ್ಲಿಯೇ ತೊಡಗಿರುತ್ತಾರೆ. ಅವರ ಒಂದು ರೀತಿಯಿಂದ ನೋಡಿದರೆ, ಈ ವಿಷಯವಲ್ಲಿ ಅವರಿಗೆ ದೋಷ ಕೊಡುವ ಹಾಗಿಲ್ಲ; ಅವರು ಹೀಗೆ ಮಾಡಲೇ ಬೇಕಾಗಿರುವದು.

ಹುಡುಗರಲ್ಲಿ ನೀತಿಯನ್ನೂ, ಶರೀರಸಂಪತ್ತಿಯನ್ನೂ ನೆಲೆಗೊಳಿಸಿ, ಅವರ ಬುದ್ಧಿಯನ್ನು ಬಲಪಡಿಸುವದೇ ಸಚ್ಛಿಕ್ಷಣದ ಲಕ್ಷಣವು. ಶರೀರಸಂಪತ್ತಿಯನ್ನೂ, ನೀತಿಯನ್ನೂ, ಬುದ್ಧಿಯನ್ನೂ ಬೆಳಸುವ ಕೆಲಸವು ಸರಿಯಾಗಿ ಸಾಗಿದರೆ, ಶಿಕ್ಷಣಕ್ಕೆ ಪೂರ್ಣತೆಯೂ ಗೌರವವೂ ಬರುವವು. ಶರೀರಸಂಪತ್ತಿಯನ್ನೂ ನೀತಿಯನ್ನೂ ನೆಲೆಗೊಳಿಸಲಿಕ್ಕೆ, ಶಿಕ್ಷಕರಿಗೆ ಜನರ ಸಹಾಯವೂ ಮುಖ್ಯವಾಗಿ ತಾಯಿತಂದೆಗಳ ಸಹಾಯವೂ ಬೇಕು. ಆದರೆ ಅಜ್ಞಾನವೆಂಬ ತಿಮಿರವು ಅಲ್ಲಲ್ಲಿಗೆ ಮುಸುಕಿಕೊಂಡಿರುವ ಕಾರಣ, ಈ ಸಹಾಯದೊರೆಯುವದು ಒಮ್ಮೊಮ್ಮೆ ದುರ್ಲಭವಾಗಿ ತೋರುವದು. ಆದರೂ ಶಿಕ್ಷಕರು ಕೈಮುಚ್ಚಿಕೊಂಡು ಸುಮ್ಮನೇ ಕೂಡ್ರುವದು ಸರಿಯಲ್ಲ. ಅವರು ತಮ್ಮಿಂದಾದಷ್ಟು ಸ್ವಂತ ಆಚರಣೆಯಿಂದಲೂ, ಬೋಧನೆಯಿಂದಲೂ ಈ ಕೆಲಸವನ್ನು ನೆರವೇರಿಸಲಿಕ್ಕೆ ಯತ್ನಿಸಬೇಕು. ಶರೀರಸಂಪತ್ತಿಯ ವಿಷಯದಲ್ಲಿ

ವಸ್ತುತಃ ಶಿಕ್ಷಕರಿಂದ ಆಗುವಂಥ ಕೆಲಸವು ಸ್ವಲ್ಪವೇ ಇರುವದು. ಅದನ್ನು ಪ್ರಸಂಗಾನುಸಾರವಾಗಿ ಸೂಚಿಸುವೆವು. ಆದರೆ ಮುಖ್ಯವಾಗಿ ನೀತಿಯ ಸಂಬಧದಿಂದ ಶಿಕ್ಷಕರು ಏನೇನು ಮಾಡತಕ್ಕದ್ದೆಂಬದನ್ನು ಇಲ್ಲಿ ವಿವರಿಸಬೇಕೆಂದು ನಮ್ಮ ಆಲೋಚನೆಯುಂಟು.

ನೀತಿ ಶಿಕ್ಷಣದ ಕೆಲವು ಸಂಗತಿಗಳು ತಕ್ಕ ಸಹಾಯ ಸಿಕ್ಕ ಹೊರ್ತು, ಶಿಕ್ಷಕರಿಂದಲೇ ನೆಲೆಗೊಳ್ಳುವಂತೆ ಇಲ್ಲ. ಆದರೆ ಈ ವಿಷಯದಲ್ಲಿ ಶಿಕ್ಷಕರು ಉದಾಸೀನರಾಗದೆ ಮೇಲಿಂದಮೇಲೆ ಹುಡುಗರಿಗೆ ಬೋಧಿಸಬೇಕು. ಮತ್ತು ಅವರ ತಾಯಿತಂದೆಗಳಿಗೆ ಆಗಾಗ್ಗೆ ತಿಳಿಸಿ, ಅವರು ಸಹಾಯ ಮಾಡುವಂತೆ ಅವರ ಮನಸು ಒಲಿಸಬೇಕು. 'ಮೂರು ವರ್ಷದ ಬುದ್ಧಿ ಮೂವತ್ತು ವರ್ಷಕ್ಕೆ' ಎಂಬ ಗಾದೆಯಂತೆ ಚಿಕ್ಕಂದಿನಲ್ಲಿ ಒಮ್ಮೆ ಹತ್ತಿದಂಥ ನಡತೆಗಳು ಕಡೆತನಕ ನಿಲ್ಲುವವು. ಆದಕಾರಣ, ತಾಯಿತಂದೆಗಳೂ ಶಿಕ್ಷಕರೂ ಕೂಡಿ, ಚಿಕ್ಕಹುಡುಗರಿಗೆ ಒಳ್ಳೇ ನಡತೆಗಳನ್ನು ಕಲಿಸುವ ವಿಷಯದಲ್ಲಿ ಬಹಳೇ ಎಚ್ಚರ ಪಡಲಿಕ್ಕೆ ಬೇಕು. ಆ ನಡತೆಗಳು ಯಾವವೆಂದರೆ:—

ಬೆಳಿಗ್ಗೆ ಬೇಗ ಏಳುವದು.—ಹುಡುಗರು ನಿತ್ಯದಲ್ಲಿ ಬೆಳಗ್ಗೆ ಬೇಗ ಏಳುವದರಿಂದ ಅವರಿಗೆ ಬಹಳ ಹಿತವಾಗುತ್ತದೆ. ಅವರ ಮೈಯೊಳಗಿನ ಆಲಸ್ಯವು ಹೋಗಿ, ಅವರು ಜಾಗ್ರತೆಯುಳ್ಳವರಾಗುತ್ತಾರೆ. ಇದರಿಂದ ವಿದ್ಯಾಭ್ಯಾಸ ಮುಂತಾದ ಕೆಲಸಗಳು ಸುಸೂತ್ರವಾಗಿ ಸಾಗುತ್ತವೆ. ಬೆಳಗಿನ ಸಮಯದಲ್ಲಿ ಮನಸು ಸ್ವಚ್ಛವಾಗಿರುವದರಿಂದಲೂ, ವೇಳೆ ಶಾಂತವಾಗಿರುವದರಿಂದಲೂ, ನಾವು ಕೈಕೊಂಡ ಯಾವ ಕೆಲಸವಾದರೂ ಬೇಗ ಸಾಗಿ ಚನ್ನಾಗಿ ಆಗುತ್ತದೆ. ಇದರಿಂದ ಮನಸಿಗೆ ಬಹಳ ಆನಂದ ವಾಗುತ್ತದೆ. ಈ

ಆನಂದದಿಂದ ದಿನಾಲು ನಾವು ಹೀಗೇ ಬೇಗ ಎದ್ದು, ನಮ್ಮ ಕೆಲಸಗಳನ್ನೆಲ್ಲ ನೆರವೇರಿಸಿಕೊಳ್ಳಬೇಕೆಂಬ ಸದ್ವಿಚಾರವು ಮನಸಿನಲ್ಲಿ ನೆಲೆಗೊಳ್ಳುತ್ತದೆ. ಈ ಸದ್ವಿಚಾರವೇ ಮನುಷ್ಯನ ನಿಜವಾದ ಸುಧಾರಣೆಗೆ ಕಾರಣವಾಗಿದೆ. ಬೇಗ ಮಲಗಿ ಬೇಗನೇ ಎದ್ದರೆ, ಸೌಖ್ಯವೂ, ಸಂಪತ್ತೂ, ಬುದ್ಧಿಯೂ ಬೆಳೆಯುತ್ತವೆ. ಈ ಮೇರೆಗೆ ಬೆಳಿಗ್ಗೆ ಬೇಗ ಏಳುವವರಿಗೆ ಅನೇಕ ಲಾಭಗಳಾಗುತ್ತವೆ. ಇವಲ್ಲದೆ ಇನ್ನೊಂದು ಬಹು ದೊಡ್ಡ ಲಾಭ ಉಂಟು. ಅದು ಯಾವದೆಂದರೆ—ಬೆಳಿಗ್ಗೆ ಬೇಗ ಏಳುವದರಿಂದ ಆಯುಷ್ಯವು ಬೆಳೆಯುತ್ತದೆ.

(ಮುಂದಕ್ಕೆ ಸಾಗುವದು.)

NOTES ON GRAMMAR.

ಗ್ರಂಥದ ಮೇಲಿಂದ ವ್ಯಾಕರಣ ಹೇಳುವದು.

(೨೦ ನೇ ಪುಟದಿಂದ ಮುಂದೆ ಸಾಗಿದ್ದು.)

ಇವನ್ನೆಲ್ಲಾ ಯಾವಕ್ರಮದಿಂದ ಹೇಳಬೇಕೆಂಬದನ್ನು ತಿಳಿಸುವದಕ್ಕಾಗಿ, ಇಲ್ಲಿ ಕೆಲವು ವಾಕ್ಯಗಳ ವ್ಯಾಕರಣ ಮಾಡಿ ತೋರಿಸುತ್ತೇವೆ. ವಿದ್ಯಾರ್ಥಿಗಳು ಅದನ್ನು ಓದಿಕೊಂಡು ಅದೇಪ್ರಕಾರ ವ್ಯಾಕರಣ ಮಾಡುತ್ತಿರಬೇಕು.

“ಬೇರೆ ಬೇರೆ ದೇಶಗಳ ನಿವಾಸಿಗಳು ಒಬ್ಬರಿಗೊಬ್ಬರು ಬಹು ಮಾತ್ಸರ್ಯದಿಂದ ಜಗಳಾಡುತ್ತಾರೆ.”

ಈ ವಾಕ್ಯದಲ್ಲಿ ‘ನಿವಾಸಿಗಳು’ ಕರ್ತೃ, ‘ಜಗಳಾಡುತ್ತಾರೆ’ ಕ್ರಿಯಾಪದ, ಅಕರ್ಮಕ ಕರ್ತರಿ ಪ್ರಯೋಗ.

ಬೇರೆ ಬೇರೆ—ಪ್ರಕಾರವಾಚಕ ವಿಶೇಷಣ, ಇವರ ವಿಶೇಷ್ಯ ‘ದೇಶಗಳು.’

ದೇಶಗಳ—'ದೇಶ' ರೂಢನಾಮ, ಅಕಾರಾಂತ, ನಪುಂಸಕಲಿಂಗ, ಷಷ್ಠೀ ಬಹುವಚನ. ಇವರ ಅರ್ಥಸಂಬಂಧ 'ನಿವಾಸಿಗಳ' ಕಡೆಗೆ.

ನಿವಾಸಿಗಳು—'ನಿವಾಸಿ' ಅನ್ವರ್ಥಕನಾಮ, ಇಕಾರಾಂತ, ಪುಂಸ್ತ್ರೀಲಿಂಗ, ಪ್ರಥಮಾ ಬಹುವಚನ. ಇವರ ಅರ್ಥ ಕರ್ತೃ, 'ಜಗಳಾಡುತ್ತಾರೆ' ಎಂಬ ಕ್ರಿಯಾಪದಕ್ಕೆ.

ಒಬ್ಬರಿಗೊಬ್ಬರು—ರೀತಿವಾಚಕ ಕ್ರಿಯಾವಿಶೇಷಣ, 'ಜಗಳಾಡುತ್ತಾರೆ' ಎಂಬ ಕ್ರಿಯೆಗೆ.

ಬಹು—ಸಾಮಾನ್ಯ ಸಂಖ್ಯಾವಾಚಕ ವಿಶೇಷಣ 'ಮಾತ್ಸರ್ಯಕ್ಕೆ.'

ಮಾತ್ಸರ್ಯದಿಂದ—'ಮಾತ್ಸರ್ಯ' ಭಾವವಾಚಕನಾಮ, ಅಕಾರಾಂತ, ನಪುಂಸಕಲಿಂಗ, ತೃತೀಯಾ ಏಕವಚನ. ಇವರ ಅರ್ಥ ಕಾರಣ, 'ಜಗಳಾಡುತ್ತಾರೆ' ಎಂಬ ಕ್ರಿಯೆಗೆ.

ಜಗಳಾಡುತ್ತಾರೆ—ಕ್ರಿಯಾಪದ, 'ಜಗಳಾಡು' ಧಾತು, ಅಕರ್ಮಕ, ಸಂಭವಾರ್ಥ, ವರ್ತಮಾನಕಾಲ, ಪುಂಸ್ತ್ರೀಲಿಂಗ, ಪ್ರಥಮಪುರುಷ, ಬಹುವಚನ.

---

* ಈ ಶಬ್ದದ ವ್ಯಾಕರಣದ ವಿಷಯದಲ್ಲಿ ಮತಭೇದವಾಗಬಹುದು. ಇದಕ್ಕೂ ಸಯುಕ್ತಿಕವಾದ ಮತವನ್ನು ಯಾರಾದರು ತಿಳಿಸಿದರೆ, ಅದನ್ನು ಸಂತೋಷದಿಂದ ಸ್ವೀಕರಿಸಿ ಪ್ರಸಿದ್ಧ ಮಾಡುವೆವು.

† ಅವ್ಯಯಗಳಲ್ಲದ ಬೇರೆ ಶಬ್ದಗಳು ಕ್ರಿಯೆಗೆ ವಿಶೇಷಣಗಳಾದರೆ "ಕ್ರಿಯಾವಿಶೇಷಣ" ಅನ್ನಬೇಕು, ಅವ್ಯಯವಿದ್ದರೆ "ಕ್ರಿಯಾವಿಶೇಷಣಾವ್ಯಯ" ಅನ್ನಬೇಕು.

"ಎಷ್ಟೋ ಹಕ್ಕಿಗಳ ಗೂಡುಗಳು ಒಳ್ಮೈಯಲ್ಲಿ ನೂಲಿನಿಂದಲೂ, ರೇಸಿಮೆಯಿಂದಲೂ ಹೊದಿಸಿರುತ್ತವೆ."

ಈ ವಾಕ್ಯದಲ್ಲಿ 'ಹಕ್ಕಿಗಳಿಂದ' ಅಧ್ಯಾಹೃತ ಕರ್ತೃ; 'ಗೂಡುಗಳು' ಕರ್ಮ, 'ಹೊದಿಸಿರುತ್ತವೆ' ಕ್ರಿಯಾಪದ; ಸಂಕ್ಷಿಪ್ತ ಕರ್ಮಣಿಪ್ರಯೋಗ.

ಎಷ್ಟೋ-ಸಾಮಾನ್ಯ ಸಂಖ್ಯಾವಾಚಕ ವಿಶೇಷಣ 'ಹಕ್ಕಿಗಳಿಗೆ.'

ಹಕ್ಕಿಗಳ—'ಹಕ್ಕಿ' ರೂಢನಾಮ, ಇಕಾರಾಂತ, ನಪುಂಸಕಲಿಂಗ, ಷಷ್ಠೀ ಬಹುವಚನ. ಇದರ ಅರ್ಥ ಸಂಬಂಧ, 'ಗೂಡುಗಳಿಗೆ.'

ಗೂಡುಗಳು—'ಗೂಡು' ರೂಢನಾಮ, ಉಕಾರಾಂತ, ನಪುಂಸಕಲಿಂಗ, ಪ್ರಥಮಾ ಬಹುವಚನ. ಇದರ ಅರ್ಥ ಕರ್ಮ, 'ಹೊದಿಸಿರುತ್ತವೆ' ಎಂಬ ಕ್ರಿಯೆಗೆ.

ಒಳ್ಮೈಯಲ್ಲಿ—'ಒಳ್ಮೈ' ಗಮಕಸಮಾಸ, ಐಕಾರಾಂತ, ನಪುಂಸಕಲಿಂಗ, ಸಪ್ತಮೀ ಏಕವಚನ. ಇದರ ಅರ್ಥ ಸ್ಥಾನ,*

ನೂಲಿನಿಂದಲೂ—'ನೂಲು' ರೂಢನಾಮ, ಉಕಾರಾಂತ, ನಪುಂಸಕಲಿಂಗ, ತೃತೀಯಾ ಏಕವಚನ. ಇದರ ಅರ್ಥಸಾಧನ.

ರೇಸಿಮೆಯಿಂದಲೂ—'ರೇಸಿಮೆ' ರೂಢನಾಮ, ಎಕಾರಾಂತ, ನಪುಂಸಕಲಿಂಗ, ತೃತೀಯಾ ಏಕವಚನ. ಇದರ ಅರ್ಥಸಾಧನ.

---

* ಕಾರಕಗಳ ಸಂಬಂಧವು ಯಾವಾಗಲೂ ಕ್ರಿಯೆಯ ಕಡೆಗೆ ಇರುತ್ತದೆ

ಹೊದಿಸಿರುತ್ತವೆ—ಸಂಯುಕ್ತ ಕ್ರಿಯಾಪದ; ‘ಹೊದಿಸಿರು’ ಧಾತು ಸಕರ್ಮಕ, ಸಂಭವಾರ್ಥ, ವರ್ತಮಾನಕಾಲ, ನಪುಂಸಕಲಿಂಗ, ಪ್ರಥಮಪುರುಷ, ಬಹುವಚನ.

“ತೊನಸಿಗಳು ದನಗಳ ಸುತ್ತುಮುತ್ತು ಹಾರಾಡಿ, ಅವುಗಳಿಗೆ ಉಪದ್ರವ ಕೊಡುವದನ್ನು ನೀನು ನೋಡಿದ್ದೀಯಾದೀತು.”

ಈ ವಾಕ್ಯದಲ್ಲಿ ‘ನೀನು’ ಕರ್ತೃ, ಉಪದ್ರವ ಕೊಡುವದನ್ನು ಕರ್ಮ, ನೋಡಿದ್ದೀಯಾದೀತು ಕ್ರಿಯಾಪದ. ಭಾವಿಪ್ರಯೋಗ*.

☞ * ‘ನೋಡಿದ್ದೀ’ ಎಂಬ ಕ್ರಿಯಾಪದದಿಂದ ಸೂಚಿತವಾಗುವ ‘ನೋಡಿದ್ದು’ ಎಂಬ ಕ್ರಿಯಾನಾಮವು ‘ಆದೀತು’ ಎಂಬ ಕ್ರಿಯಾಪದಕ್ಕೆ ಆಖ್ಯಾಪದವಾಗಿದೆ.

(ಮುಂದಕ್ಕೆ ಸಾಗುವದು.)

DEPARTMENTAL NOTICE.

ವಿದ್ಯಾಖಾತೆಯ ಸಂಬಂಧದ ನೋಟೀಸು.

ಯಾವತ್ತು ಕನ್ನಡ ಶಿಕ್ಷಕ ಜನರಿಗೂ ವಿದ್ಯಾರ್ಥಿಗಳಿಗೂ ತಿಳಿಸುವದೇನಂದರೆ:—

ಸನ್ ೧೮೭೮ನೇ ಇಸವಿಯ ಅಕ್ಟೋಬರ ತಿಂಗಳ ಶಾಲಾಪತ್ರಕದ ೧೪ನೇ ೧೫ನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳಿಗೆ ಅನುಸಾರವಾಗಿ, "ವರ್ಥ ಸಾಹೇಬರ ಇನಾಮಿನ ಪರೀಕ್ಷೆಯು" ಕನ್ನಡ ಭಾಷೆಯಲ್ಲಿ ಬರುವ ಅಕ್ಟೋಬರ ತಿಂಗಳ ೧ನೇ ತಾರೀಖು ಬುಧವಾರದಿವಸ, ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಆಗುವದು. ನಾಲ್ವತ್ತು ರುಪಾಯದ್ದೊಂದು, ಇಪ್ಪತ್ತು ರುಪಾಯದ್ದೊಂದು, ಹೀಗೆ ಎರಡು ಇನಾಮುಗಳು ಇರುತ್ತವೆ. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರು, ಬರುವ ಸೆಪ್ಟಂಬರ ತಿಂಗಳ ೧ನೇ ತಾರೀಖಿಗೆ ಅಥವಾ ಅದಕ್ಕೂ ಪೂರ್ವದಲ್ಲಿ ನಮ್ಮ ಕಡೆಗೆ ಬಂದು ಮುಟ್ಟುವಂತೆ, ತಮ್ಮ ಅರ್ಜಿಗಳನ್ನು ಕಳುಹಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಪರೀಕ್ಷೆಯು ಬೆಳಗಿನ ೧೦೩ ಘಂಟೆಗೆ ಆರಂಭವಾಗುವದು.

ಧಾರವಾಡ,
೧೧ನೇ ದಿಸೆಂಬರು ೧೮೭೮.

(Signed) S. V. PATWARDHAN,
ಎಜುಕೇಶನಲ ಇನಸ್ಪೆಕ್ಟರ, ದಕ್ಷಿಣ ಭಾಗ.

CORRESPONDENCE.

ಪತ್ರವ್ಯವಹಾರ.

ವಿಜಾಪೂರ ಜಿಲ್ಲೆಯೊಳಗಿನ ಆಲಮೇಲ ಸಾಲಿಯಲ್ಲಿ ಕಳೆದ ದಿಸೆಂಬರ ತಿಂಗಳ ೩ನೇ ತಾರೀಖಿನ ದಿವಸ ಆದ ಬಕ್ಷೀಸ ಸಮಾರಂಭವ ನೋಡಲಿಕ್ಕೆ ಹೋದ ಒಬ್ಬ ಗೃಹಸ್ಥನು ಬಹು ಚಮತ್ಕಾರದ ಭಾಷಾರಚನೆಯುಳ್ಳ ಒಂದು ಪತ್ರವನ್ನು ಈ ತಿಂಗಳಲ್ಲಿ ಬರೆದಿದ್ದಾನೆ. ಅವರ ಅಭಿಪ್ರಾಯವೇನಂದರೆ—

ಆಲಮೇಲ ಶಾಲೆಗೆ ಹೆಡ್ ಮಾಸ್ತರರಾಗಿ ಬೆಳಗಾವಿ ಜಿಲ್ಲೆಯಿಂದ ಹೊಸದಾಗಿ ನೇಮಿಸಲ್ಪಟ್ಟ ರಾ. ಭೀಮಾಜಿ ನಾರಾಯಣ ಯಾರ್ದಿ ಎಂಬವರು ಹುಡುಗರಿಂದ ಚನ್ನಾಗಿ ಅಭ್ಯಾಸ ಮಾಡಿಸುತ್ತಾರೆ. ವಾರ್ಷಿಕ ಪರೀಕ್ಷೆಯೊಳಗೆ ೫೮ರಲ್ಲಿ ೬೩ ವಿದ್ಯಾರ್ಥಿಗಳು ಪಾಸಾದರು. ಈ ಮಾಸ್ತರರ ವಿಷಯಕ್ಕೆ ಮಿ. ದಿವೇಕರ ಅ. ಡಿ. ಇನ್ಸಪೆಕ್ಟರ ಇವರು ಒಳ್ಳೇ ಸಿಫಾರಸು ಬರೆದಿರುತ್ತಾರೆ. ರಾ. ಸಾ. ಗೋವಿಂದರಾವ ದಾತಾರ ಮಾಮಲೇದಾರ ಇವರು ಬಕ್ಷೀಸ ಸಮಾರಂಭದ ದಿವಸ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಸರಕಾರೀ ಇನಾಮಿನ ಪುಸ್ತಕಗಳು ಸ್ವಲ್ಪ ಇದ್ದಕಾರಣ, ಊರೊಳಗಿನ ಶೆಟ್ಟಿ ಸಾವಕಾರರಿಂದ ವರ್ಗಣಿ ಕೂಡಿಸಿ, ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆಲ್ಲರಿಗೆ ಉತ್ತೇಜನ ಬರುವಹಾಗೆ ಹೆಚ್ಚಿಗೆ ಪುಸ್ತಕಗಳನ್ನು ಇನಾಮು ಕೊಟ್ಟು, ಜನರಿಗೆ ವಿದ್ಯೆಯ ಅಭಿರುಚಿ ಹತ್ತುವಂತೆ ಪ್ರಸಂಗಕ್ಕೆ ತಕ್ಕ ಭಾಷಣವನ್ನು ಮಾಡಿದರು. ತಾರೀಖು ೨೦ | ೧ | ೯೦ ಇಸವಿ.

ಪ್ರಕಟನೆ.

ಈ ಪುಸ್ತಕದ ಸಂಬಂಧದ ಯಾವತ್ತು ಪತ್ರ ವ್ಯವಹಾರವನ್ನು ಮೊದಲಿನಂತೆ ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಧಾರವಾಡ ಇವರ ಕೂಡ ಇಡತಕ್ಕದ್ದು.

ತಾಲೂಕ ಮಾಸ್ತರರು ಮೂರು ಮೂರು ತಿಂಗಳ ಚಂದಾ ಹಣವನ್ನು ಮುಂಗಡ ವಸೂಲು ಮಾಡಿ ಪ್ರಿನ್ಸಿಪಾಲರ ಕಡಿಗೆ ಕಳುಹಿಸ ಬೇಕು. ಯಾರಕಡಿಂದ ಎಷ್ಟು ಹಣಾ ಸಲ್ಲಿತೆಂಬದನ್ನು ಈ ಪುಸ್ತಕದ ಕೊನೆಯಲ್ಲಿ ಪ್ರಕಟಿಸುವೆವು. ಬೇರೆ ಪಾವತಿ ದೊರೆಯಲಿಕ್ಕಿಲ್ಲ.

ಚಂದಾಹಣ. ವರ್ಷಕ್ಕೆ ಮುಂಗಡ ೧೦ ಆಣೆ.
ಅಂಚೇವೆಚ್ಚ ... ... ೩ ಆಣೆ.
ಅಂತು ೧೩ ಆಣೆ.

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೨[illegible]] ಮಾರ್ಚ ೧೮೯೦. [ಸಂಚಿಕೆ ೩.

ಅನುಕ್ರಮಣಿಕೆ.

ಪುಟ.
೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು... ... ೪೯
೨. ಮೂಲಾಕ್ಷರದ ವರ್ಗಗಳನ್ನು ಕಲಿಸುವ ಶಿಕ್ಷಕರಿಗೆ ಸೂಚನೆಗಳು. ೫೫
೩. ಹಿಂದುಸ್ಥಾನದೊಳಗಿನ ವಿದ್ಯಾಪ್ರಸಾರ ... ೬೩
೪. ಪ್ರಕಟನೆ. ೬೯

CONTENTS.

1. Educational Intelligence and Useful Notes.......49
2. Hints to Teachers of Infant-Classes 55
3. Education in British India 63
4. Notice...69

DHARWAR:
PRINTED AT THE KARANATIC BOOK DEPOT PRESS,
1890.

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೬.] ಮಾರ್ಚ ೧೮೯೦. [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಸರಕಾರದವರು ಕನಿಷ್ಠಪ್ರತಿಯ ಶಿಕ್ಷಣಕ್ಕೆ ವಿಶೇಷಲಕ್ಷ್ಯಪೂರೈಸಿವಂತೆ ತೋರುತ್ತದೆ. ಈ ಪ್ರಕಾರದ ಶಿಕ್ಷಣವನ್ನು ಹಬ್ಬಿಸುವದಕ್ಕಾಗಿ, ಅವರು ಈವರ್ಷ ಪ್ರೊವಿನ್ಶಲ್ ಫಂಡಿನೊಳಗಿಂದ ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳಿಗೆ ಒಟ್ಟಿಗೆ ಒಂದುಲಕ್ಷ ರೂಪಾಯಿ ಹೆಚ್ಚಿಗೆ ಕೊಟ್ಟರು. ಅದರ ವಿವರವು ಹ್ಯಾಗಂದರೆ:—ಉತ್ತರಭಾಗಕ್ಕೆ ೩೦೦೦೦ ರೂಪಾಯಿ, ಮಧ್ಯಭಾಗಕ್ಕೆ ೧೫೦೦೦ ರೂಪಾಯಿ, ನಮ್ಮದಕ್ಷಿಣ ಭಾಗಕ್ಕೆ ೨೫೦೦೦ ರೂಪಾಯಿ, ಸಿಂಧಪ್ರಾಂತಕ್ಕೆ ೩೦೦೦೦ ರೂಪಾಯಿ.

ಇದರಿಂದ ಬಡ ಶಿಕ್ಷಕರ ಸಂಬಳವನ್ನು ಹೆಚ್ಚುಮಾಡಲಿಕ್ಕೂ ಅವಶ್ಯವಿದ್ದಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸಲಿಕ್ಕೂ ಅನುಕೂಲವಾಗುವದು.

ನಿಜಾಮ ಸರಕಾರದವರು ತಮ್ಮ ಸಂಸ್ಥಾನದ ಖರ್ಚಿನಿಂದ ಹನ್ನೆರಡು ಜನ ವಿದ್ಯಾರ್ಥಿಗಳನ್ನು ವಿಲಾಯತಿಗೆ ವಿದ್ಯಾಭ್ಯಾಸಕ್ಕಾಗಿ ಕಳಿಸಬೇಕೆಂದು ಗೊತ್ತು ಮಾಡಿದ್ದಾರೆ. ಪ್ರತಿಒಬ್ಬ ವಿದ್ಯಾರ್ಥಿಗೆ ವರ್ಷಕ್ಕೆ ೩೦೦ ಪೌಂಡು, ಅಂದರೆ ತಿಂಗಳಿಗೆ ಸುಮಾರು ೩೫೦ ರೂಪಾಯಿ, ಸ್ಕಾಲರಶಿಪ್ಪು ಕೊಡುವರು. ಈವರ್ಷ ಮ್ಯಾಟ್ರಿಕ್ಯುಲೇಶನ ಪರೀಕ್ಷೆಯನ್ನು ಕೊಟ್ಟ ವಿದ್ಯಾರ್ಥಿಗಳ ಪರೀಕ್ಷೆ ತಕ್ಕೊಂಡು, ಹೆಚ್ಚಿನ ಯೋಗ್ಯತೆಯನ್ನು ತೋರಿಸುವ ನಾಲ್ವರನ್ನು ಆರಿಸಿ, ಅವರನ್ನು ಕಳುಹಿಸುವರು. ಮುಂದಿನ ವರ್ಷ ಎಫ್. ಏ. ಪರೀಕ್ಷೆಯಲ್ಲಿ ಇಳಿದ ನಾಲ್ಕು ಜನ ವಿದ್ಯಾರ್ಥಿಗಳನ್ನು ಇದೇಮೇರೆಗೆ ಆರಿಸಿ ಕಳುಹಿಸುವರು. ಅದರ ಮುಂದಿನವರ್ಷ ಬಿ. ಏ. ಪರೀಕ್ಷೆಯಲ್ಲಿ ಇಳಿವವರನ್ನು ಹೀಗೇ ಆರಿಸಿ ಕಳುಹಿಸುವರು. ಪ್ರತಿಒಬ್ಬ ವಿದ್ಯಾರ್ಥಿಯು ನಾಲ್ಕು ವರ್ಷಗಳವರೆಗೆ ಇಗ್ಲಂಡ ದೊಳಗಿನ ಯಾವದೊಂದು ವಿಶ್ವವಿದ್ಯಾಲಯವಲ್ಲಿ ನಿಂತು, ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ, ಬೇಸಾಯವಿದ್ಯೆ ಇಲ್ಲವೆ ತನಗೆಬೇಕಾದ್ದೊಂದು ಉದ್ಯೋಗ ಮಾಡಲಿಕ್ಕೆ ಅವಶ್ಯವಾದ ಶಾಸ್ತ್ರದ ಅಭ್ಯಾಸವನ್ನು ಮಾಡಿ, ಪದವಿಯನ್ನು ಪಡೆದು, ತಿರುಗಿ ತನ್ನ ದೇಶಕ್ಕೆ ಬಂದು, ಆ ಉದ್ಯೋಗವನ್ನು ಕೈಕೊಳ್ಳಬೇಕು. ಆದರೆ ಈ ವಿದ್ಯಾರ್ಥಿಗಳು ಕಾಯದೆಗಳನ್ನು ಮಾತ್ರ ಕಲಿಯಕೂಡದೆಂತಲೂ, ಇವರ ವಯಸ್ಸು ೧೩ಕ್ಕಿಂತ ಕಡಿಮೆ ೨೫ಕ್ಕಿಂತ ಹೆಚ್ಚು ಇರಕೂಡದೆಂತಲೂ ಕಟ್ಟುಮಾಡಿದ್ದಾರೆ. ಈಸ್ಕಾಲರಶಿಪ್ಪುಗಳು ನಿಜಾಮನ ರಾಜ್ಯದೊಳಗಿನವರಿಗೆ ಮಾತ್ರ ದೊರೆಯುವವು.

ನಿಜಾಮು ಸರಕಾರದವರು ಇಂಗ್ಲಿಷ ಸರಕಾರಕ್ಕೆ ಒಂದುಲಕ್ಷ ಅರುವತ್ತು ಸಾವಿರ ರೂಪಾಯಿ ಕಪ್ಪ ಕೊಡುತ್ತಾರೆ. ತ್ರಾವಣಕೋರದ ಮಹಾರಾಯರು ಏಳುಲಕ್ಷ ಎಂಬತ್ತುಮೂರುಸಾವಿರ ರೂಪಾಯಿ, ಮೈಸೂರವರು ಇಪ್ಪತ್ತುನಾಲ್ಕು ಲಕ್ಷ ಐವತ್ತು ಸಾವಿರ ರೂಪಾಯಿ, ಬಡೋದೆಯವರು ಮೂರು ಲಕ್ಷ ಎಂಬತ್ತೆಂಟು ಸಾವಿರ ರೂಪಾಯಿ ಕಪ್ಪ ಕೊಡುತ್ತಾರೆ.

ಸ್ವಿತ್ಸರ್ಲಂಡದಲ್ಲಿ ಕುರುಡರ ಸಲುವಾಗಿ ಒಂದು ಘಡಿಯಾಲವನ್ನು ಶೋಧಿಸಿ ತೆಗೆದಿದ್ದಾರೆ. ಅಲ್ಲಿಯ ಜನರಉದ್ಯೋಗವೂ ಶೋಧವೃಷ್ಟಿಯೂ ಎಷ್ಟು ನೋಡಿರಿ!!

" ಫೋರ್ಟ್ನೈಟ್ಲಿರಿವ್ಯೂ " ಎಂಬ ವರ್ತಮಾನ ಪತ್ರದಲ್ಲಿ ಈ. ಬೀ. ಲ್ಯಾನಿನ್ ಎಂಬ ಗೃಹಸ್ಥನು ರಶಿಯನ್ ಜನರಗುಣ ಸ್ವಭಾವಗಳಬಗ್ಗೆ ಅನೇಕ ನಿಬಂಧಗಳನ್ನು ಬರೆಯುತ್ತಲಿದ್ದಾನೆ. ರಶಿಯನ್ ಜನರು ತಮ್ಮ ಆಯುಷ್ಯಕ್ರಮಣವನ್ನು ಹ್ಯಾಗೆ ಮಾಡುತ್ತಾರೆ? ಅವರ ನಡೆನುಡಿಗಳೂ ಆಚಾರ ವಿಚಾರಗಳೂ ಹ್ಯಾಗೆ? ಅವರಲ್ಲಿ ತೋರುವ ವೈಲಕ್ಷಣ್ಯಗಳು ಯಾವವು? ಅರಸರಿಗೂ ಪ್ರಜೆಗಳಿಗೂ ಸಂಬಂಧವು ಹ್ಯಾಗೆ? ಅವರ ರಾಜ್ಯದಾಡಳಿತೆ ಯಾವಪ್ರಕಾರದ್ದು? ಈ ಮುಂತಾದ ಸಂಗತಿಗಳಬಗ್ಗೆ ಬಹು ಮನೋಹರವಾದ ವೃತ್ತಾಂತಗಳನ್ನು ಆ ಗೃಹಸ್ಥನು ಪ್ರಕಟಿಸುತ್ತಾ ಇದ್ದಾನೆ. ಯುರೋಪ ಖಂಡದ ಯಾವತ್ತು ದೇಶಗಳಲ್ಲಿ ರಶಿಯ ದೇಶವು ವಿದ್ಯದ ಸಂಬಂಧದಿಂದ ಬಹಳೇ ಹಿಂದಿರುತ್ತದೆಂದು ತೋರುತ್ತದೆ. ಸರಕಾರದವರು ತಮ್ಮ ಪ್ರಜೆಗಳಿಗೆ ತಕ್ಕಮಟ್ಟಿಗಾದರೂ ಸ್ವತಂತ್ರರಾಗಿ ನಡೆಯಗೊಡದೆ, ಅವರ

ಸಂಸಾರಕ್ರಮದ ಸಣ್ಣ ಸಣ್ಣ ಮಾತುಗಳಲ್ಲಿ ಸಹ ಕೈಹಾಕುತ್ತಾರೆ. ಇಂಥಮಾತಿನಲ್ಲಿ ಕೈಹಾಕಬೇಕು, ಇಂಥಾದರಲ್ಲಿ ಹಾಕಬಾರದು ಎಂಬ ಬಗ್ಗೆ ಏನೂ ವಿಧಿ ನಿಷೇಧವಿಲ್ಲದ ಮೂಲಕ, ಈ ವಿಷಯದಲ್ಲಿ ಕಲ್ಪನೆ ಮಾಡುವದು ಸಹ ನಮ್ಮ ಹಿಂದೂನಿವಾಸಿಗಳಿಗೆ ತೀರ ಅಶಕ್ಯವಾಗಿರುವದು. ಮೇಲ್ತರದ ಶಿಕ್ಷಣದ ಸಂಬಂಧದಿಂದ ಯಾವನಾದರೊಬ್ಬ ಗೃಹಸ್ಥನು ತನ್ನ ಮಗನನ್ನು ಹೈಸ್ಕೂಲಿನಲ್ಲಿ ಸೇರಿಸುವದಕ್ಕೆ ಪೂರ್ವದಲ್ಲಿ, ಅವನಿಗೆ ಉಂಟಾಗುವ ಎಡರುಗಳು ಎಷ್ಟೆಂತ ಹೇಳಬೇಕು? ಈ ಎಡರುಗಳನ್ನು ನೋಡಿದರೆ, ಜ್ಞಾನಸಂಪಾದಿಸಬೇಕೆಂದು ಅತ್ಯಂತ ಆತುರನಾಗಿರುವ ಮನುಷ್ಯನಾದರೂ ಹಿಂಜರಿಯುವನು. ಲ್ಯಾನಿನ್ ಸಾಹೇಬನು ಹೇಳುವದೇನಂದರೆ—ಮೇಲ್ತರದ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸುವದಕ್ಕೆ ಜನರಲ್ಲಿ ಹಣದ ಅನುಕೂಲತೆಯುಂಟು; ಅಂಥ ಶಿಕ್ಷಣವನ್ನು ಹೊಂದಲಿಕ್ಕೆ ಮಕ್ಕಳಲ್ಲಿ ಬುದ್ಧಿಸಾಮರ್ಥ್ಯಉಂಟು; ಈ ಪ್ರಕಾರದ ಶಿಕ್ಷಣಕೊಡುವ ಶಾಲೆಗಳೂ ಉಂಟು. ಇಷ್ಟೆಲ್ಲ ಇದ್ದರೂ ತೀರಿತೆಂಬ ಹಾಗಿಲ್ಲ. ಇದೆಲ್ಲ ಇರುವದಲ್ಲದೆ, ತಂದೆಯು ಒಂದು ಅರ್ಜಿಯನ್ನು ತಯಾರ ಮಾಡಬೇಕಾಗುತ್ತದೆ. ಅದರೊಳಗೆ ತಾಯಿತಂದೆಗಳೂ, ಮಕ್ಕಳೂ, ಬಂಧುಬಳಗದವರೂ, ಸೇವಕರೂ, ಆಶ್ರಿತರೂ ಮುಂತಾದವರ ವೃತ್ತಾಂತವನ್ನು ಚನ್ನಾಗಿ ತಿಳಿಯುವಹಾಗೆ ಸಂಕ್ಷಿಪ್ತವಾಗಿ ಬರೆಯಬೇಕಾಗುತ್ತದೆ. ಮತ್ತು ತಂದೆಯು ತನ್ನ ಮಗನಿಗೆ ಯಾವಪ್ರಕಾರದ ಮೇಲ್ತರದ ಶಿಕ್ಷಣವನ್ನು ಕೊಡಿಸಬೇಕೆಂದು ಅಪೇಕ್ಷಿಸುತ್ತಾನೋ, ಆ ಪ್ರಕಾರದ ಶಿಕ್ಷಣವು ಸ್ವತಃ ತನಗೆ ಉಂಟೋ ಇಲ್ಲವೋ, ಎಂಬದನ್ನು ಸಹ ಆ ಅರ್ಜಿಯಲ್ಲಿ ಕಾಣಿಸಬೇಕು. ತಂದೆಗೆ ಆ ತರದ ಶಿಕ್ಷಣವು ಇರದೆ ಇದ್ದಲ್ಲಿ,

ಮಗನಿಗೆ ಅದು ದೊರೆಯುವದೇಇಲ್ಲ. ಕಡೆಗೆ, ಆ ಅರ್ಜಿಯಲ್ಲಿ ತಂದೆಯು ತನ್ನ ಉದ್ಯೋಗದ ವಿವರವನ್ನೂ, ತನ್ನ ವಾರ್ಷಿಕ ಉತ್ಪನ್ನವನ್ನೂ ತೋರಿಸಬೇಕು. ಇದಲ್ಲದೆ ತನ್ನ ಮನೆಯೊಳಗೆ ಎಷ್ಟು ಕೋಣೆಗಳುಂಟು? ಸೇವಕರು ಎಷ್ಟು ಜನರು? ಮಗನು ಮುಂದೆ ಯಾವ ಉದ್ಯೋಗವನ್ನು ಮಾಡಬೇಕೆಂಬ ಆಲೋಚನೆಯುಂಟು? ಈ ಯಾವತ್ತು ಸಂಗತಿಗಳ ವಿವರವನ್ನು ಆ ಅರ್ಜಿಯೊಳಗೆ ಬರೆಯಬೇಕು. ತಂದೆಯು ಕುಲೀನ ವಂಶದೊಳಗೆ ಹುಟ್ಟಿದವನೂ, ದ್ರವ್ಯವುಳ್ಳವನೂ, ಸ್ವತಃ ವಿದ್ವಾಂಸನೂ ಇರದಿದ್ದರೆ, ಅವನ ಮಕ್ಕಳು ಗ್ರೀಕ್, ಲಾಟಿನ್ ಭಾಷೆಗಳನ್ನು ಕಲಿಯಲಿಕ್ಕೆ ತೀರ ಅಯೋಗ್ಯರೆಂದು ಸರಕಾರದವರು ತಿಳಿಯುತ್ತಾರೆ. ಈ ಭಾಷೆಗಳ ಅಭ್ಯಾಸ ಮಾಡಗೊಡುವದೆಂದರೆ ಒಂದು ಬಗೆಯ ವಿಶೇಷವಾದ ಹಕ್ಕು ಕೊಡೋಣವೆಂದು ಅವರ ತಿಳುವಳಿಕೆಯುಂಟು. ಆದರೆ ಆ ಮಹತ್ವಾಕಾಂಕ್ಷೆಯುಳ್ಳ ತಂದೆಯು, ಮೇಲೆ ವಿವರಿಸಿದ ಯಾವತ್ತು ಸಂಗತಿಗಳ ವಿಷಯದಲ್ಲಿ ಸರಕಾರದವರ ನಿಯಮಗಳಿಗೆ ಅನುಸರಿಸಿ ನಡೆದಾಗ್ಯೂ, ಅವನ ಕೋರಿಕೆಯು ಕೊನೆಗಾಣುವದೆಂಬ ನಿಶ್ಚಯವಿಲ್ಲ. ಸ್ವಲ್ಪ ತಿಂಗಳುಗಳ ಕೆಳಗೆ ನಾನೂರು ಜನ ಗೃಹಸ್ಥರು ಮೇಲಿನ ಯಾವತ್ತು ಸಂಗತಿಗಳನ್ನು ಕುರಿತು ಸರಕಾರದವರ ಖಾತ್ರಿ ಮಾಡಿಕೊಟ್ಟಾಗ್ಯೂ, ಅವರಿಗೆ ನಿಮ್ಮ ಮಕ್ಕಳನ್ನು ಹೈಸ್ಕೂಲುಗಳಲ್ಲಿ ತೆಗೆದುಕೊಳ್ಳುವದಿಲ್ಲ, ಎಂದು ಖಂಡಿತವಾಗಿ ಹೇಳಿ ಕಳುಹಿಸಿದ ಬಗ್ಗೆ ಸರಕಾರೀ ಕಾಗದ ಪತ್ರಗಳ ಆಧಾರಗಳು ನನ್ನ ಬಳಿಯಲ್ಲಿ ಉಂಟು, ಎಂದು ಲ್ಯಾನಿನ್ ಸಾಹೇಬನು ಬರೆಯುತ್ತಾನೆ.

ಕಾಗದದ್ದೊಂದು ದೊನ್ನೆಯನ್ನು ಮಾಡಿ ಅದನ್ನು ದೀಪದ ಮೇಲೆ ಹಿಡಿದರೆ, ಅದು ಕೂಡಲೇ ಸುಟ್ಟು ಹೋಗುತ್ತದೆ. ಆದರೆ ಆ ದೊನ್ನೆಯೊಳಗೆ ನೀರು ಅಥವಾ ಎಣ್ಣೆ ತುಂಬಿ, ದೀಪದ ಮೇಲೆ ಹಿಡಿದರೆ ಅದು ಬೇಗ ಸುಡುವದಿಲ್ಲ. ನೋಡಿದರೆ ನೀರು ಸಳಮಳ ಕುದಿಯುತ್ತಿರುತ್ತದೆ. ಪ್ರಸಂಗೋಪಾತ್ತಾಗಿ, ಕಾಗದದ ದೊನ್ನೆಯೊಳಗೆ ಅನ್ನವನ್ನು ಸಹ ಮಾಡಬಹುದು, ಇಲ್ಲವೆ ಕಡಬು ಕರಿಯಬಹುದು. ಇದೇ ಮೇರೆಗೆ, ತಾಮ್ರದ ಇಲ್ಲವೆ ಹಿತ್ತಾಳಿಯ ಪಂಚಪಾತ್ರೆಗೆ ಕಾಗದವನ್ನು ಬಿಗಿಯಾಗಿ ಸುತ್ತಿ, ಅದನ್ನು ದೀಪದ ಮೇಲೆ ಹಿಡಿದರೆ, ಆ ಕಾಗದವಾದರೂ ಸುಡುವದಿಲ್ಲ. ಇದು ಎಷ್ಟು ಚಮತ್ಕಾರದ ಸಂಗತಿ ನೋಡಿರಿ ! ಇದರ ಕಾರಣವೇನಂದರೆ, ನೀರು ಹಾಕಿದ ದೊನ್ನೆಯನ್ನು ದೀಪದ ಮೇಲೆ ಹಿಡಿದಾಗ, ಉಷ್ಣತೆಯು ಮಂದವಾಹಕವಾದ ನೀರೊಳಗೆ ಹಬ್ಬುತ್ತಾ ಹೋಗುತ್ತದೆ. ಕಾಗದವನ್ನು ಸುಡುವಷ್ಟು ಉಷ್ಣತೆಯು ಕಾಗದದ ಮೇಲೆ ಕೂಡಬೀಳುವದಿಲ್ಲ. ಇದೇಪ್ರಕಾರ, ಪಂಚಪಾತ್ರೆಯು ಶೀಘ್ರವಾಹಕವಾಗಿರುವದರಿಂದ, ಕಾಗದದ ಮೇಲೆ ಶೆಕೆ ಜಮೆಯಾಗದೆ, ಪಂಚಪಾತ್ರೆಯು ತುಂಬ ಪಸರಿಸುತ್ತ ಹೋಗುವವರಿಂದ, ಆ ಪಂಚಪಾತ್ರೆ ಕಾದಾಗ್ಯೂ ಅವಕ್ಕೆ ಸುತ್ತಿದ ಕಾಗದವು ಸುಡುವದಿಲ್ಲ. ಒಮ್ಮೊಮ್ಮೆ ಗಾರುಡಿಗರು ಮುತ್ತಲೆಲೆಯ ದೊನ್ನೆಯೊಳಗೆ ಬುರುಬುರಿಯನ್ನು ಕರಿದು, ಜನರನ್ನು ಆಶ್ಚರ್ಯಗೊಳಿಸುತ್ತಾರೆ. ಇದು ಅಸಂಭಾವ್ಯವಾಗಿ ತೋರಿದಾಗ್ಯೂ ವಸ್ತುತಃ ನಿಜವಿರುತ್ತದೆ.

HINTS TO TEACHERS OF INFANT--CLASSES.

ಮೂಲಾಕ್ಷರದ ವರ್ಗಗಳನ್ನು ಕಲಿಸುವ ಶಿಕ್ಷಕರಿಗೆ ಸೂಚನೆಗಳು.*

ಮೂಲಾಕ್ಷರಗಳನ್ನು ಕಲಿಯುವ ಹುಡುಗರನ್ನು ಚೆನ್ನಾಗಿ ವ್ಯವಸ್ಥೆಯಿಂದ ನಡಿಸಿಕೊಳ್ಳುವದೂ, ಅವರಿಗೆ ತಕ್ಕ ಶಿಕ್ಷಣವನ್ನು ಕೊಡುವದೂ ಬಹು ಪ್ರಯಾಸದ ಕೆಲಸವಾಗಿದೆ. ನಮ್ಮ ಕನ್ನಡ ಶಾಲೆಗಳಲ್ಲಿ ಈ ವಿಷಯದ ಕಡೆಗೆ ಎಷ್ಟು ಲಕ್ಷ್ಯ ಕೊಡತಕ್ಕದ್ದೋ, ಅಷ್ಟು ಇದುವರೆಗೆ ಕೊಟ್ಟಂತೆ ತೋರುವದಿಲ್ಲ. ಆದರೆ ಟ್ರೇನಿಂಗ ಕಾಲೇಜದಲ್ಲಿ ಚೆನ್ನಾಗಿ ತಯಾರಾದಂಥ ಶಿಕ್ಷಕರ ಸಂಖ್ಯೆಯು ಬೆಳೆದ ಹಾಗೆ, ಈ ಸ್ಥಿತಿಯು ಸುಧಾರಿಸಬಹುದು. ಚಿಕ್ಕ ಬಾಲಕರಿಗೆ ಕಲಿಸಲಿಕ್ಕೆ ಶಾಲೆಯಲ್ಲಿರುವ ಯಾವತ್ತು ಶಿಕ್ಷಕರಲ್ಲಿ ಮೇಲಾದ ಶಿಕ್ಷಕನನ್ನು ಯೋಜಿಸಬೇಕು.

---

* ಈ ಸೂಚನೆಗಳನ್ನು ಸಿಂಧ ಪ್ರಾಂತದ ಎಜುಕೇಶನಲ್ ಇನ್ಸಪೆಕ್ಟರರಾದ ಮಿ. ಜೇಕಬ ಸಾಹೇಬರು, ತಮ್ಮ ಪ್ರಾಂತದೊಳಗಿನ ಶಾಲೆಗಳ ಶಿಕ್ಷಕರ ಉದ್ದಿಶ್ಯವಾಗಿ, ಡಿಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರರಿಗೆ ಮಾಡಿದ್ದಾರೆ. ಇವು ವರಿಷ್ಠಾಧಿಕಾರಿಗಳ ಮನಸಿಗೆ ಬಂದದ್ದರಿಂದ, ಡಿಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರರ ಕಾಯದೆಗೆ ಪುರವಣಿಯಾಗಿ ಜೋಡಿಸಲ್ಪಟ್ಟಿರುತ್ತವೆ. ಇವುಗಳನ್ನು ಭಾಷಾಂತರಿಸಿ, ನಮ್ಮ ದಕ್ಷಿಣ ಭಾಗದೊಳಗಿನ ಕನ್ನಡ ಶಾಲೆಗಳ ಶಿಕ್ಷಕರಿಗೆ ತಿಳಿಯುವ ಹಾಗೆ ಪ್ರಕಟಿಸಬೇಕೆಂದು, ಈ ಭಾಗದ ಎಜುಕೇಶನಲ್ ಇನ್ಸಪೆಕ್ಟರ ಸಾಹೇಬರ ಕಡೆಯಿಂದ ಬರೆದು ಬಂದಪ್ರಕಾರ, ಇವು ಇಲ್ಲಿ ಭಾಷಾಂತರಿಸಲ್ಪಟ್ಟವೆ. ಈ ಸೂಚನೆಗಳನ್ನು ನಮ್ಮ ಶಿಕ್ಷಕರು ಅಕ್ಷರಶಃ ಅನುಸರಿಸಬೇಕೆಂತಲ್ಲ. ಆದರೆ ನಮ್ಮ ಶಾಲೆಯ ಸ್ಥಿತಿರೀತಿಗಳನ್ನು ನೋಡಿ, ತಮಗೆ ಅನುಕೂಲವಾಗುವಂತೆ ಅಲ್ಪಸ್ವಲ್ಪ ಹೆಚ್ಚು ಕಡಿಮೆ ಮಾಡಿ, ಇವುಗಳಲ್ಲಿಯ ತತ್ವಗಳನ್ನು ಅನುಲಕ್ಷಿಸಿ, ಶಿಕ್ಷಣದ ಕೆಲಸವನ್ನು ಸಾಗಿಸತಕ್ಕದ್ದು.

ಜ್ಞಾನೇಂದ್ರಿಯಗಳನ್ನೂ ವಿಚಾರಶಕ್ತಿಯನ್ನೂ ಮೆಲ್ಲ ಮೆಲ್ಲನೆ ಬೆಳಿಸುವದೇ ಶಿಕ್ಷಣದ ಮುಖ್ಯ ಉದ್ದೇಶವೆಂಬದನ್ನು ಎಂದಿಗೂ ಮರೆಯಕೂಡದು. ಸಣ್ಣ ಹುಡುಗರ ಲಕ್ಷ್ಯವು ಯಾವದೊಂದು ವಿಷಯದ ಕಡೆಗೆ ಒಂದೇಸವನಾಗಿ ಒಂದು ತಾಸಿಗಿಂತ ಹೆಚ್ಚು ಹತ್ತಲಾರದೆಂಬದನ್ನು ಶಿಕ್ಷಕನು ನೆನಪಿನಲ್ಲಿಟ್ಟು, ಒಂದೇ ವಿಷಯವನ್ನು ತಾಸಿಗಿಂತ ಹೆಚ್ಚು ಹೊತ್ತು ಕಲಿಸಬಾರದು. ಮತ್ತು ಶಾಲೆ ನಡೆಯುವ ವೇಳೆಯಲ್ಲಿ, ಅಂದರೆ ಬೆಳಗ್ಗೆ ಮೂರು ತಾಸು, ಮಧ್ಯಾನ್ಹದಲ್ಲಿ ಮೂರು ತಾಸು, ಏಕಪ್ರಕಾರವಾಗಿ ಹುಡುಗರನ್ನು ಕೂಡ್ರಿಸದೆ, ನಡುನಡುವೆ ಪದಗಳನ್ನು ಅನ್ನಲಿಕ್ಕೂ, ಕವಾಯಿತು ಮಾಡಲಿಕ್ಕೂ ಕಲಿಸಬೇಕು. ಚಿಕ್ಕ ಹುಡುಗರು ಕಲಿಯತಕ್ಕ ಪಾಠಗಳು ಯಾವವೆಂದರೆ:—

(ಅ). ೧೦೦ ರ ವರೆಗೆ ಅಂಕಿ, ಮತ್ತು ೧೦ ರ ವರೆಗೆ ಮಗ್ಗಿ.
(ಬ). ಮೂಲಾಕ್ಷರಗಳನ್ನು ಓದುವದು.
(ಕ). ದಿನಾಪ್ರತಿ ದೃಷ್ಟಿಗೆಬೀಳುವ ಒಡವೆಗಳನ್ನೂ, ಭೂಮಿತಿಯ ಆಕೃತಿಗಳನ್ನೂ, ಬಣ್ಣಗಳನ್ನೂ, ನೋಡುವದು, ಪರೀಕ್ಷಿಸುವದು, ಸರಿಹಚ್ಚುವದು, ವರ್ಗೀಕರಣ ಮಾಡುವದು.
(ಡ). ಮನೋರಂಜಕವಾದ ಸುಲಭ ಕಥೆಗಳನ್ನು ಕೇಳುವದು, ಮತ್ತು ಅವುಗಳ ಸಂಬಂಧದಿಂದ ಮಾಡಿದ ಪ್ರಶ್ನೆಗಳಿಗೆ ಉತ್ತರ ಕೊಡುವದು.
(ಇ). ಮನೆಯೊಳಗೆ ಹಾಡತಕ್ಕಂಥ ಹಾಡುಗಳನ್ನು ಬಾಯಿಪಾಠ ಮಾಡುವದು, ಮತ್ತು ಹಾಡುವದು.
(ಫ). ವರ್ಗದಲ್ಲಿ ಕವಾಯಿತು ಮಾಡುವದು.

ಆರು, ಏಳು ವರ್ಷ ವಯಸ್ಸಿನ ಇಪ್ಪತ್ತು ಹುಡುಗರ ವರ್ಗಕ್ಕೆ ಕೆಳಗೆ ಸೂಚಿಸಿದಂತೆ ವೇಳಾಪತ್ರಕವಿಗತಕ್ಕದ್ದು. ಆದರೆ ವರ್ಗದೊಳಗೆ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರು ಬಹಳ ಮಂದಿ ಇದ್ದರೆ, ಪಾಠಗಳನ್ನು ನಡಿಸುವ ಅವಧಿಯನ್ನು ಕಡಿಮೆ ಮಾಡಿ, ವಿಷಯಗಳನ್ನು ಮೇಲಿಂದ ಮೇಲೆ ಬದಲಿಸತಕ್ಕದ್ದು:—

ಸೋಮವಾರ

೧ ನೇ ತಾಸು—೧೦೦ ರ ವರೆಗೆ ಅಂಕಿ ಎಣಿಸುವದು (ಮಗ್ಗಿಗಳನ್ನು ವರ್ಷದ ಉತ್ತರಾರ್ಧದಲ್ಲಿ ಕಲಿಸಬೇಕು). ಅಂಕಿಗಳನ್ನು ಕಲಿಸುವಾಗ ಗುಂಡು, ಹರಳು ಮುಂತಾದವುಗಳನ್ನೂ, ಅಂಕಿಯ ಇಸ್ಪೇಟುಗಳನ್ನೂ ಉಪಯೋಗಿಸಬೇಕು.

೨ ನೇ ತಾಸು—ಪದ್ಯಗಳನ್ನು ಸ್ವರದಿಂದ ಹಾಡಲಿಕ್ಕೆ ಕಲಿಸಿ ಬಾಯಿಪಾಠ ಅನ್ನಿಸುವದು (ಅರ್ಧ ತಾಸು). ಮೂಲಾಕ್ಷರಗಳನ್ನೂ, ೧ ರಿಂದ ೧೦೦ ರ ವರೆಗೆ ಅಂಕಿಗಳನ್ನೂ, ಇಸ್ಪೇಟುಗಳ ಮೇಲಿಂದ ಓದಲಿಕ್ಕೂ ಬರೆಯಲಿಕ್ಕೂ ಕಲಿಯುವದು. ಮತ್ತು ಈ ಅಕ್ಷರ ಅಂಕಿಗಳನ್ನು ಪಟದ ಮೇಲಿನ ಅಕ್ಷರ ಅಂಕಿಗಳಿಗೆ ಸರಿಹಚ್ಚಿ ನೋಡುವದು (ಒಂದು ತಾಸು).

ಮುಂಜಾನೆ.

೩ನೇ ತಾಸು. ಸೂಚನೆ.—ಪಟದ ಮೇಲಿನ ಅಕ್ಷರಅಂಕಿಗಳನ್ನೂ ಇಸ್ಪೇಟಿನ ಮೇಲಿನ ಅಕ್ಷರ ಅಂಕಿಗಳನ್ನೂ ಹೊಂದಿಸಿ ನೋಡಿ, ಸರಿ ಇರುವದನ್ನು ತಿಳುಕೊಳ್ಳಲಿಕ್ಕೆ ಬರುವ ಹಾಗೆ, ಪ್ರತಿ ಒಬ್ಬ ಹುಡುಗನ ಕೈಯಲ್ಲಿ ಇಸ್ಪೇಟುಗಳನ್ನು ಕೊಡಲಿಕ್ಕೆ ಬೇಕು.

ವರ್ಗದಲ್ಲಿ ಹಾಡಿಸುತ್ತಾ ಕವಾಯಿತು ಮಾಡಿಸುವದು (ಅರ್ಧತಾಸು).

ಮಧ್ಯಾಹ್ನ.

೧ನೇ ತಾಸು—ಬಡವೆಯ ಪಾಠ.

೨ನೇ ತಾಸು—ಹಾಡು ಕಲಿಸುವದು (ಅರ್ಧತಾಸು), ಕವಾಯಿತು (ಅರ್ಧತಾಸು), ಅಥವಾ ಎರಡೂ ಕೂಡಿ ಒಂದು ತಾಸು.

೩ನೇ ತಾಸು—ಕಥೆಯನ್ನು ಕೇಳಿ ಆ ಸಂಬಂಧದಿಂದ ಮಾಡಿದ ಪ್ರಶ್ನಗಳಿಗೆ ಉತ್ತರ ಕೊಡೋಣ (ಸೋಮವಾರ, ಗುರುವಾರ). ಮಂಗಳವಾರ, ಬುಧವಾರ, ಶುಕ್ರವಾರ ಕೆಳಗೆ ಬರೆದ ಪಾಠಗಳಲ್ಲಿ ಯಾವದಾದರೊಂದು ಪಾಠವನ್ನು ಹುಡುಗರ ಕೈಯಿಂದ ಮಾಡಿಸಬೇಕು.

ಕಟ್ಟಿಗೆಯ ತುಂಡುಗಳನ್ನು ಜೋಡಿಸಿ ಅಕ್ಷರಗಳನ್ನಾಗಲಿ ಆಕೃತಿಗಳನ್ನಾಗಲಿ ಹುಟ್ಟಿಸೋಣ; ಕಾಗದಗಳನ್ನು ಮಡಿಚಿ ಗಿಳಿ, ನವಿಲು ಮುಂತಾದವುಗಳ ಆಕಾರಗಳನ್ನು ಮಾಡೋಣ; ಇಟ್ಟಂಗಿಗಳನ್ನು ರಚಿಸಿ

ಮಧ್ಯಾಹ್ನ.

ಮನೆ, ಗುಡಿ, ತೇರು ಮುಂತಾದವುಗಳನ್ನು ಕಟ್ಟೋಣ; ಮಣ್ಣಿನ ಹಲಿಗೆಯ ಮೇಲೆ ಗೆರೆಗಳನ್ನೂ ಆಕೃತಿಗಳನ್ನೂ ತೆಗಿಯೋಣ; ಕಾಗದದ ಮೇಲೆ ಮಾದರಿಯನ್ನಿಟ್ಟು ಸೂಜಿಯಿಂದ ತೂತುಗಳನ್ನು ಮಾಡಿ ಅಂಥಾದೇ ಆಕೃತಿಯನ್ನುಂಟು ಮಾಡೋಣ; ಬಣ್ಣದ ದಾರದಿಂದ ಟಿಬ್ಬಿ ಹಾಕಿ ಕಾಗದದ ಮೇಲೆ ಗೆರೆಗಳನ್ನಾಗಲಿ, ಸಾದಾ ಆಕೃತಿಗಳನ್ನಾಗಲಿ ತೆಗಿಯೋಣ; ಕಾಗದವನ್ನು ಕತ್ತರಿಸಿ ಆಕೃತಿಗಳನ್ನು ಮಾಡೋಣ; ಕಾಗದದ ಪಟ್ಟಿಗಳನ್ನು ತಕ್ಕೊಂಡು ಚಾಪಿ ಹೆಣಿವಂತೆ ಹೆಣಿಯೋಣ; ಸಣ್ಣ ಮರಡುಗಳಿಂದ ಜೋಡಿಸಲ್ಪಟ್ಟ ಕಟ್ಟಿಗೆಯ ಪಟ್ಟಿಗಳನ್ನು ಬೇಕಾದ ಹಾಗೆ ಮಡಿಚಿ ಆಕೃತಿಗಳನ್ನುಂಟು ಮಾಡೋಣ; ಹಲಿಗೆಯ ಮೇಲೆ ಕಾಗದದ ಆಕೃತಿಗಳನ್ನು ಅಂಟಿಸೋಣ; ಕೆಸರಿನ ಮುದ್ದೆ ತಕ್ಕೊಂಡು ಮಣಿಯ ಮೇಲೆ ಗೊಂಬಿ, ಬಸವಣ್ಣ, ದೋಣಿ, ಗಡಿಗಿ ಮುಂತಾದ ಆಟಗೆಗಳನ್ನು ಮಾಡೋಣ; ಕಾಗದದ ಮೇಲೆ ಇಲ್ಲವೆ ಹಲಿಗೆಯ ಮೇಲೆ ಬಣ್ಣಗಳನ್ನು ಬರಿಯೋಣ; ಸ್ಲೇಟಿನ ಮೇಲೆ ಗೆರೆಗಳನ್ನೂ ಸಾದಾ ಆಕೃತಿಗಳನ್ನೂ ತೆಗಿಯೋಣ.

ಸೂಚನೆ—೧. ಶಾಲೆಯು ದಿನಾಲು ಬೆಳಿಗ್ಗೆ ಒಂದೇ ಹೊತ್ತು ಕೂಡುತ್ತಿದ್ದರೆ, ಮೇಲಿನ ವೇಳಾಪತ್ರಕದಲ್ಲಿ ಮುಂಜಾನೆ ಮಾಡಲಿಕ್ಕೆ ಹೇಳಿದ ವಿಷಯಗಳನ್ನು ಸೋಮವಾರ, ಬುಧವಾರ, ಶುಕ್ರವಾರ ನಡಿಸಬಹುದು. ಮಧ್ಯಾನ್ಹದ ಪಾಠಗಳನ್ನು ಮಂಗಳವಾರ, ಗುರುವಾರ, ಶನಿವಾರ ಸಾಗಿಸಬಹುದು.

೨. ಮೇಲಿನ ವೇಳಾಪತ್ರಕದಲ್ಲಿ ಅವಶ್ಯಕವಾದ ಹೆಚ್ಚು ಕಡಿಮೆಗಳನ್ನು ಮಾಡಿದರೆ, ಅದು ಮೊದಲನೇ ಇಯತ್ತೆಯ ಹುಡುಗರಿಗೆ ಸಹ ಉಪಯೋಗಿಸುವದು. ಮೂಲಾಕ್ಷರದ ವರ್ಗಕ್ಕೆ ಕಲಿಸತಕ್ಕ ಒಡವೆಯ ಪಾಠವೂ ಕೈಯಿಂದ ಮಾಡಿಸತಕ್ಕ ಪಾಠವೂ ಬಹಳ ಸಸಾರ ಇರಬೇಕು. ಬರಬರುತ್ತ ತುಸು ಬಿಗಿಯಾದ ಪಾಠಗಳನ್ನು ಮೊದಲನೇ ಇಯತ್ತೆಯವರಿಗೆ ಇಡತಕ್ಕದ್ದು. ಹುಡುಗರು ಮೇಲಿನ ವರ್ಗಗಳಿಗೆ ಹೋದ ಹೋದ ಹಾಗೆ, ಅವರಿಗೂ ಈ ತರದ ಪಾಠಗಳನ್ನು ಮತ್ತೆ ಕಲಿಸುವದರಿಂದ ಬಹಳ ಉಪಯೋಗವಾಗುವದು. ಕಿಂಡರ್‌ಗಾರ್ಟನ್ ಪದ್ಧತಿಯಂತೆ ಕಲಿಯದಂಥ ಶಾಲೆಯೊಳಗಿನ ದೊಡ್ಡ ದೊಡ್ಡ ಹುಡುಗರಿಗಾದರೂ ಕೆಲವು ಒಡವೆಯ ಪಾಠಗಳನ್ನು ಕಲಿಸುವದರಿಂದ ಬಹಳ ಹಿತವಾಗುವದು. ಒಡವೆಯ ಪಾಠವನ್ನು ಕಲಿಸುವಾಗ ಅವಶ್ಯವಾಗಿ ಲಕ್ಷ್ಯದಲ್ಲಿಡತಕ್ಕದ್ದೇನಂದರೆ:—

(ಅ). ವರ್ಗದೊಳಗಿನ ಪ್ರತಿಒಬ್ಬ ಹುಡುಗನು ಆಕೃತಿಗಳನ್ನು, ಬಣ್ಣದ ಇಸ್ಪೇಟುಗಳನ್ನು, ಇಲ್ಲವೆ ವರ್ಗದಲ್ಲಿ ನಡೆದ ಪಾಠಕ್ಕೆ ಸಂಬಂಧಿಸಿದ ಬೇರೆ ಒಡವೆಗಳನ್ನು ತನ್ನ ಕೈಯಲ್ಲಿ ತಕ್ಕೊಂಡು, ಅವುಗಳನ್ನು ಪರೀಕ್ಷಿಸಬೇಕು. ಮತ್ತು ಆ ಪದಾರ್ಥದ ಬೇರೆ ಬೇರೆ ಭಾಗಗಳನ್ನು ಮಾಡಲಿಕ್ಕೆ ಬರುವಹಾಗಿದ್ದರೆ, ಮಾಡಿ ನೋಡಬೇಕು.

(ಬ). ಶಿಕ್ಷಕನು ಹುಡುಗರಿಗೆ ಆದಷ್ಟು ಸ್ವಲ್ಪ ಹೇಳಬೇಕು. ಮತ್ತು ಸುಲಭವಾದ ಪ್ರಶ್ನಗಳನ್ನು ಮಾಡಿ, ಆದಷ್ಟು ಹೆಚ್ಚು ಉತ್ತರಗಳನ್ನು ಅವರ ಬಾಯಿಂದಲೇ ಹೊರಡಿಸ ಬೇಕು. ಹೀಗೆ ಮಾಡದೆ, ಒಡವೆಯನ್ನು ತನ್ನ ಕೈಯಲ್ಲಿ ಹಿಡುಕೊಂಡು, ಅವರ ವಿಷಯಕ್ಕೆ ತಾನು ಹೇಳತಕ್ಕದ್ದನ್ನೆಲ್ಲ ಹುಡುಗರಿಗೆ ಹೇಳಿಕೊಟ್ಟು, ಆಮೇಲೆ ಹೇಳಿದ್ದನ್ನೆಲ್ಲ ತಿರುಗಿ ಕೇಳಿದರೆ, ಅವರ ವಿಚಾರಶಕ್ತಿಯನ್ನು ಬೆಳಸಿದ ಹಾಗೆ ಆಗುವದಿಲ್ಲ. ಈ ರೀತಿಯಿಂದ ಕಲಿಸಿದರೆ, ಒಡಕು ಹರಿವೆಯೊಳಗೆ ನೀರು ತುಂಬಿದಂತೆ, ಅವರ ಮನಸಿನೊಳಗೆ ಎಷ್ಟೋ ಮಾತುಗಳನ್ನು ಸೇರಿಸಲಿಕ್ಕೆ ಯತ್ನಮಾಡಿದಹಾಗೆ ಮಾತ್ರ ಆಗುತ್ತದೆ. ಇದು ಸಣ್ಣ ಹುಡುಗರಿಗೆ ಕಲಿಸತಕ್ಕ ಪದ್ಧತಿಯೇ ಅಲ್ಲ. ಹೀಗೆ ಎಂದಿಗೂ ಕಲಿಸ ಬಾರದು. ಹುಡುಗರು ತಮ್ಮ ಬುದ್ಧಿಯನ್ನು ವೆಚ್ಚಮಾಡಿ ಶ್ರಮಬಟ್ಟು ಗಳಿಸಿದ ಜ್ಞಾನವು ಸ್ಥಿರವಾಗಿ ನಿಲ್ಲುತ್ತದೆ. ಆದಕಾರಣ, ಈ ಬಗೆಯಾಗಿ ಅಭ್ಯಾಸ ಮಾಡಿಸುವದೇ ಶಿಕ್ಷಣದ ತಕ್ಕ ಪದ್ಧತಿಯಾಗಿದೆ. ಇದನ್ನೇ ಶಿಕ್ಷಕರು ಕೈಕೊಳ್ಳಬೇಕು.

ಯಾವದೊಂದು ಒಡವೆಯ ಜ್ಞಾನವನ್ನು ಸಂಪಾದಿಸುವದಾದರೆ, ಅದನ್ನು ಮೊದಲು ಜ್ಞಾನೇಂದ್ರಿಯಗಳಿಂದ ಚನ್ನಾಗಿ ತಿಳಿದುಕೊಳ್ಳಬೇಕು. ಆಮೇಲೆ, ಅದರ ಆಕಾರ, ವಿಸ್ತಾರ, ಬಣ್ಣ, ತೂಕ, ರುಚಿ, ವಾಸನೆ, ಪಾರದರ್ಶಕತ್ವ ಮುಂತಾದವುಗಳನ್ನು

ಅವಲೋಕಿಸ ಬೇಕು. ಬಳಿಕ, ಅದರ ಬೇರೆ ಬೇರೆ ಭಾಗಗಳನ್ನು ಒಂದಕ್ಕೊಂದು ಸರಿಹಚ್ಚಿ ನೋಡಬೇಕು. ಉದಾಹರಣಾರ್ಥವಾಗಿ—ಸಮಾನ ಉದ್ದಗಲಪಿಂಡವುಳ್ಳ ಘನಾಕೃತಿಯೊಳಗೆ ಅಂಚುಗಳ ಉದ್ದ, ಅಗಲ, ದಪ್ಪ ಎಷ್ಟೆಷ್ಟು? ಒಟ್ಟಿಗೆ ಅಂಚುಗಳೆಷ್ಟು? ಕೋನಗಳೂ, ಮೇಲ್ಮೈಗಳೂ ಎಷ್ಟೆಷ್ಟು? ಇತ್ಯಾದಿ. ಕಡೆಗೆ, ಆ ಒಡವೆಯನ್ನು ಆಕಾರ, ವಿಸ್ತಾರ, ಬಣ್ಣ ಮುಂತಾದವುಗಳ ಸಂಬಂಧದಿಂದ ಬೇರೆ ಒಡವೆಗಳಿಗೆ ಸರಿ ಹಚ್ಚಿ ನೋಡಿ, ಅವನ್ನು ಯಾವದಾದರೊಂದು ವರ್ಗದಲ್ಲಿ ಸೇರಿಸತಕ್ಕದ್ದು. ಮತ್ತು ಆ ಒಡವೆಯಿಂದ ಏನಾದರೂ ಉಪಯೋಗವಾಗುತ್ತಿದ್ದರೆ, ಅದನ್ನು ಹೇಳತಕ್ಕದ್ದು. ಇಷ್ಟೆಲ್ಲ ಮಾಡಬೇಕಾದರೆ, ಆ ಹುಡುಗನ ಕೈಯಲ್ಲಿ ಒಡವೆ ಇರುವದು ಅವಶ್ಯವಾದದ್ದೆಂದು ಸಹಜವಾಗಿ ತೋರುವದು. ಆದರೆ ಒಡವೆಯು ಕೈಗೆ ಶೇರವಹಾಗಿದ್ದರೆ, ಕೈಲಾದಮಟ್ಟಿಗೆ ಆ ಒಡವೆಯ ಸಮೀಪಕ್ಕೆ ಹೋಗಿ, ಅದರ ಬಗ್ಗೆ ವಿಚಾರ ಮಾಡತಕ್ಕದ್ದು.

ಚಿಕ್ಕ ಹುಡುಗರಿಗೆ ಸುಲಭವಾದ ಭೂಮಿತಿಯ ಆಕೃತಿಗಳನ್ನು ಕಲಿಸುವ ಯೋಗ್ಯ ಪದ್ಧತಿಯು ಯಾವದೆಂದರೆ—ಮೊದಲು ಘನಾಕೃತಿಗಳ ವಿಷಯಕ್ಕೆ ಕಲಿಸತಕ್ಕದ್ದು. ರೇಖೆ, ಕೋನ, ಮೇಲ್ಮೈಗಳ ಜ್ಞಾನವನ್ನು ಆರಂಭದಲ್ಲಿ ಮಾಡಿಕೊಡಬಾರದು. ಆಕೃತಿಗಳನ್ನು ಕಲಿಸುವ ಕ್ರಮವು ಹ್ಯಾಗೆಂದರೆ:—

(೧)—ಘನಾಕೃತಿಗಳು:

ಗುಂಡು, ಸಿಲಿಂಡರ ಅಂದರೆ ರೂಲಿನಂಥ ಘನಾಕೃತಿ, ಚೌಕ ಘನಾಕೃತಿ, ಚಚ್ಚೌಕ (ಸಮಾನ ಉದ್ದಗಲ ಪಿಂಡವುಳ್ಳ) ಘನಾಕೃತಿ.

(೨)—ಮೇಲ್ಮೈಗಳು:

ಹಲಿಗೆ ಕಾಗದಗಳ ಪಾತಳಿಗಳು.

(೩)–ಗೆರೆಗಳು ಇಲ್ಲವೆ ಅಂಚುಗಳು (ಸರಳ, ವಕ್ರ, ಜೊಂಕ ಜೊಂಕ):

ಕೋಲುಗಳು, ಸ್ಲೇಟುಗಳ ಮೇಲೆಯೂ ಕರೇ ಹಲಿಗೆಯ ಮೇಲೆಯೂ ತೆಗಿದ ಗೆರೆಗಳು, ಉಂಗುರಗಳು, ದಾರಗಳು; ಆಕೃತಿಯ ಪೆಟ್ಟಿಗೆಯೊಳಗಿನ ಕಟ್ಟಿಗೆಯ ಆಕೃತಿಗಳ ಅಂಚುಗಳನ್ನು ದೃಷ್ಟಾಂತಕ್ಕಾಗಿ ಉಪಯೋಗಿಸಬಹುದು.

(೪)—ಬಿಂದುಗಳು, ಮೂಲೆಗಳು ಅಥವಾ ಕೋನಗಳು:

ಆಕೃತಿಯ ಪೆಟ್ಟಿಗೆಯೊಳಗಿನ ಮೂಲೆಯುಳ್ಳ ಆಕೃತಿಗಳ ಸಹಾಯದಿಂದ ಕೋನಗಳ ಜ್ಞಾನವನ್ನು ಮಾಡಿಕೊಡಬಹುದು; ಮತ್ತು ಕಾಗದದ ಮೇಲೆ ಚೌರಸವನ್ನಾಗಲಿ ತ್ರಿಕೋನವನ್ನಾಗಲಿ ತೆಗೆದು, ಕೋನವಿದ್ದಲ್ಲಿ ಸೂಜಿಯಿಂದ ಚುಚ್ಚಿ ಬಿಂದುಗಳನ್ನು ತಿಳಿಸಬಹುದು.

(ಮುಂದಕ್ಕೆ ಸಾಗುವದು.)

EDUCATION IN BRITISH INDIA.

ಹಿಂದುಸ್ಥಾನದೊಳಗಿನ ವಿದ್ಯಾ ಪ್ರಸಾರ.

ಈಗ ನಮ್ಮ ದೇಶದ ವಿದ್ಯಾಸುಧಾರಣೆಯ ಸಂಬಂಧದಿಂದ ಜನರ ಅಭಿಪ್ರಾಯಗಳು ಬೇರೆ ಬೇರೆಯಾಗಿವೆ. ಕೆಲವರು— ವಿದ್ಯೆ ಬಹಳ ಅಗ್ಗವಾಗಿದೆ; ಸಣ್ಣ ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಸರಟಫಿಕೀಟು ಪಡೆದ ಜನರು ಬಹುಮಂದಿ ಆಗಿದ್ದಾರೆ; ಅವರಲ್ಲಿ ಕೆಲವರು ಉಪಜೀವನಕ್ಕೆ ಸರಿಯಾದ ಮಾರ್ಗವು ದೊರೆಯದೆ ಪೇಚಾಟದಲ್ಲಿ ಬಿದ್ದಿರುತ್ತಾರೆ; ಹೀಗೇ ವಿದ್ಯೆಬೆಳೆಯುತ್ತಾ ನಡೆವರೆ ಮುಂದಿನವರ ಗತಿ ಏನಾಗುವದೋ ಏನೋ?— ಎಂದು ಚಿಂತಿಸುತ್ತಾ ಇದ್ದಾರೆ. ಬೇರೆ ಕೆಲವರು—ನಮ್ಮ ದೇಶ

ದೊಳಗೆ ಪ್ರಾಚೀನಕಾಲದಲ್ಲಿ ನಾನಾಪ್ರಕಾರದ ವಿದ್ಯಾಕಲಾಕೌಶಲ್ಯಗಳಲ್ಲಿ ಪಾರಂಗತರಾದಂಥ ಪಂಡಿತರು ಅನೇಕ ಜನರಿದ್ದರು; ಅವರಿಂದ ನಮ್ಮ ದೇಶವು ಒಳ್ಳೇ ಊರ್ಜಿತ ಸ್ಥಿತಿಯನ್ನು ಹೊಂದಿತ್ತು; ಈಗ ಅದರ ವಿಪರೀತಸ್ಥಿತಿಯು ನಮ್ಮಲ್ಲಿ ತೋರುತ್ತದೆ. ಜನರು ಬಡವರಾದರು. ಅವರ ಧೈರ್ಯಶೌರ್ಯಗಳು ಕುಂದಿವವು. ಸ್ವಾತಂತ್ರ್ಯವು ನಷ್ಟವಾಯಿತು. ಒಂದು ವಿದ್ಯೆಯಲ್ಲಾದರೂ ನಿಪುಣರಾದ ವಿದ್ವಾಂಸರನ್ನು ಕಾಣುವದು ಅಪರೂಪ. ಇದರಿಂದ ನಮ್ಮ ದೇಶವು ನಾಗರಿಕತನದಲ್ಲಿ ತೀರ ಹಿಂದೆ ಬಿತ್ತು. ಇಂಗ್ಲಂಡ, ಫ್ರಾನ್ಸ, ಜರ್ಮನಿ, ಯುನೈಟೆಡಸ್ಟೇಟ್ಸ ಮುಂತಾದ ರಾಷ್ಟ್ರಗಳು ಸುಧಾರಣೆಯಲ್ಲಿ ನಾಮೇಲು, ನೀಮೇಲು, ಎಂದು ಮುಂದರಿಸುತ್ತಲಿವೆ. ಆದರಿಂದ ನಮ್ಮ ದೇಶವು ಎಷ್ಟೋ ಪ್ರಪಂಚದ ಒಡವೆಗಳ ಸಲುವಾಗಿ ಸಹ ಈ ರಾಷ್ಟ್ರಗಳನ್ನು ಆಶ್ರಯಿಸ ಬೇಕಾಗಿದೆ. ಇಷ್ಟು ನಿಕೃಷ್ಟಸ್ಥಿತಿ ಒದಗಿದಾಗ್ಯೂ ಆ ರಾಷ್ಟ್ರಗಳ ಸುಧಾರಣೆಯ ಕಾರಣಗಳನ್ನು ತಿಳುಕೊಂಡು, ತಮ್ಮ ಹೀನಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಯಾವಬಗೆಯ ಯತ್ನವನ್ನಾದರೂ ನಮ್ಮ ಜನರು ಮಾಡಲೊಲ್ಲರು. ಇನ್ನು ಮುಂದೆ ನಮ್ಮ ಅವಸ್ಥೆ ಏನಾಗುವದೋ?—ಎಂಬ ವಿಚಾರದೊಳಗೆ ಮಗ್ನರಾಗಿದ್ದಾರೆ.

ಈ ಭಿನ್ನಭಿನ್ನವಾದ ಅಭಿಪ್ರಾಯಗಳಲ್ಲಿ ಎರಡನೇ ಅಭಿಪ್ರಾಯವು ನಮಗೆ ಎಷ್ಟೋ ಪಾಲಿನಿಂದ ಗ್ರಾಹ್ಯವಾಗಿ ತೋರುತ್ತದೆ. ಇದರ ಪುಷ್ಟೀಕರಣಾರ್ಥವಾಗಿ, ಹಿಂದುಸ್ಥಾನ ಸರಕಾರದವರು ಯಾವತ್ತು ಬ್ರಿಟಿಶ್ ಇಂಡಿಯದೊಳಗಿನ ವಿದ್ಯಾವೃದ್ಧಿಯ ಸಂಬಂಧದಿಂದ ಬಳಗಣಿಯಲ್ಲಿ ಪ್ರಕಟಿಸಿದ ೧೮೮೮–೮೯ನೇ ವರ್ಷದ ರಿಪೋರ್ಟಿನ ಸಾರಾಂಶವನ್ನು ಕೆಳಗಿನ ಕೋಷ್ಟಕದೊಳಗೆ ಕೊಟ್ಟಿದ್ದೇವೆ:—

ಬ್ರಿಟಿಶ್ ಇಂಡಿಯ ದೊಳಗಿನ ಯಾವತ್ತು ಪ್ರಕಾರದ ವಿದ್ಯಾಲಯಗಳ ಮತ್ತು ವಿದ್ಯಾರ್ಥಿಗಳ ವಿವರ.

ಯಾವಪ್ರಕಾರದ ವಿದ್ಯಾಲಯ.		ವಿದ್ಯಾಲಯಗಳ ಸಂಖ್ಯೆ.		ವಿದ್ಯಾರ್ಥಿಗಳ ಸಂಖ್ಯೆ.	
		೧೮೮೭–೮೮	೧೮೮೮–೮೯	೧೮೮೭–೮೮	೧೮೮೮–೮೯
* ಸರಕಾರೀ ಶಾಲೆಗಳು.	ಗಂಡು ...	೮೯೭೬೬	೮೭೯೦೨	$	೨೭೯೧೬೪೯
	ಹೆಣ್ಣು ...	೪೮೭೦	೪೯೬೩	$	೨೫೫೬೦೨
	ಅಂತು ...	೯೪೬೩೬	೯೨೮೬೫	೩೦೨೧೭೨೧	೩೦೪೭೨೫೧
ಖಾಸಗಿ †	ಗಂಡು ...	೩೬೩೪೭	೩೭೨೪೩	$	೪೬೨೩೪೭
	ಹೆಣ್ಣು ...	೨೧೪೨	೧೬೦೧	$	೩೪೬೫೯
	ಅಂತು ...	೩೮೪೮೯	೩೮೮೪೪	೪೩೯೧೨೩	೪೯೭೦೦೬
ಒಟ್ಟು ಶಾಲೆಗಳು ...		೧೩೩೧೨೫	೧೩೧೭೦೯	೩೪೬೦೮೪೪	೩೫೪೪೨೫೭
ಸರಕಾರೀ ಶಾಲೆಗಳ ವಿವರ.					
ಆರ್ಟ್ಸ್ ಕಾಲೇಜ ...		$	೯೮	೧೦೩೨೮	೧೧೨೫೦
ಪ್ರೊಫೆಶನಲ್ ಕಾಲೇಜ ...		$	೨೬	೨೮೬೧	೨೬೯೧
ಮಧ್ಯಮ ಪ್ರ. ಶಾಲೆಗಳು ...		$	೪೬೯೯	೪೪೧೮೭೬	೪೫೨೦೫೮
ಕನಿಷ್ಠ ಪ್ರತಿಯ ಶಾಲೆಗಳು.		$	೮೭೪೬೨	೨೫೫೦೩೮೪	೨೫೬೩೨೯೪
ಟ್ರೇನಿಂಗಸ್ಕೂಲುಗಳು ...		$	೧೪೪	೪೭೬೧	೪೯೩೭
ವಿಶೇಷ ಪ್ರತಿಯ ಶಾಲೆಗಳು...		$	೪೩೬	೧೧೫೧೧	೧೩೦೨೧

---

* ಸರಕಾರೀ ಶಾಲೆಗಳೊಳಗೆ—ಸರಕಾರದವರು ತಮ್ಮ ಖರ್ಚಿನಿಂದ ಇಟ್ಟ ಶಾಲೆಗಳೂ, ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಖರ್ಚಿನಿಂದ ಇಟ್ಟ ಶಾಲೆಗಳೂ, ಸರಕಾರದಿಂದ ‘ಗ್ರಾಂಟ ಇನ್ ಏಡ’ ವನ್ನು ಸಂಪಾದಿಸುವ ಶಾಲೆಗಳೂ, ಸರಕಾರೀ ಇಯತ್ತೆಗಳಂತೆ ಅಭ್ಯಾಸ ನಡಿಸುವ ಇತರ ಯಾವತ್ತು ಶಾಲೆಗಳೂ ಬರುತ್ತವೆ.

† ಖಾಸಗೀ ಶಾಲೆಗಳಂದರೆ,—ಅರಬಿ, ಫಾರ್ಸಿ, ಸಂಸ್ಕೃತ ಮುಂತಾದ ಪ್ರಾಚೀನ ಭಾಷೆಗಳನ್ನು ಕಲಿಸುವ ಶಾಲೆಗಳು, ಹಳೇ ಪದ್ಧತಿಯಂತೆ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಶಾಲೆಗಳು, ಮುಸಲ್ಮಾನರ ಕುರಾನವನ್ನು ಕಲಿಸುವ ಶಾಲೆಗಳು ಇತ್ಯಾದಿ.

§ ಅಂಕಿಗಳು ದೊರೆಯಲಿಲ್ಲ.

ಬ್ರಿಟಿಶ ಇಂಡಿಯದೊಳಗೆ, ೧೩೬೫೭೬೯೦೮ ಜನ ಗಂಡಸರೂ, ೧೩೨೬೭೫೭೮ ಜನ ಹೆಂಗಸರೂ ಕೂಡಿ, ಒಟ್ಟಿಗೆ ೨೩೯೧೮೪೪೪೬ ಜನಸಂಖ್ಯೆಯುಂಟು. ಇನ್ನು ಜನಸಂಖ್ಯೆ ನೂರು ಇದ್ದರೆ, ಅವರಲ್ಲಿ ಸಾಧಾರಣವಾಗಿ ಹದಿನೈದು ಮಂದಿ ಸಾಲಿಗೆ ಹೋಗುವ ವಯಸ್ಸಿನವರಿರುತ್ತಾರೆಂದು ಗೊತ್ತು ಮಾಡಲ್ಪಟ್ಟದೆ. ಈ ಲೆಕ್ಕದಿಂದ ನೋಡಿದರೆ, ಸಾಲಿಗೆ ಹೋಗುವ ವಯಸ್ಸಿನ ಒಟ್ಟು ಗಂಡುಹುಡುಗರಲ್ಲಿ ನೂರಕ್ಕೆ ೨೦. ೭ ಹುಡುಗರು ಸಾಲಿಗಳಲ್ಲಿ ಅಭ್ಯಾಸ ಮಾಡುತ್ತಾರೆಂದು ತಿಳಿಯುತ್ತದೆ. ಹೆಣ್ಣುಹುಡುಗರ ಸಂಬಂಧದಿಂದ ಈ ಪ್ರಮಾಣವು ನೂರಕ್ಕೆ ೧. ೮ ಮಾತ್ರ ಹೊರಡುತ್ತದೆ. ಇದರಿಂದ ಸ್ತ್ರೀಶಿಕ್ಷಣವು ನಮ್ಮ ದೇಶದಲ್ಲಿ ಎಷ್ಟು ಹಿಂದಿರುತ್ತದೆಂಬುವದು ವ್ಯಕ್ತವಾಗುತ್ತದೆ. ಗಂಡು ಹೆಣ್ಣು ಹುಡುಗರ ಸಂಖ್ಯೆಗಳನ್ನು ಕೂಡಿಸಿ ಒಟ್ಟಿಗೆ ಸರಾಸರಿ ತೆಗೆದರೆ, ಈ ಪ್ರಮಾಣವು ನೂರಕ್ಕೆ ೧೧. ೨ ಹೊರಡುತ್ತದೆ. ಇದರಿಂದ ನೂರು ಹುಡುಗರಲ್ಲಿ ೧೧ ಹುಡುಗರೇ ಓದುಬರಹ ಕಲಿಯುವವರು, ೮೯ ಹುಡುಗರು ಅಕ್ಷರಶೂನ್ಯರು ಎಂದು ಸ್ಪಷ್ಟವಾಗುತ್ತದೆ. ಇದು ಸಮಾಧಾನಕರವಾದ ಸ್ಥಿತಿಎಂದು ಎಣಿಸಬಹುದೋ? ಇಂಗ್ಲಂಡ, ಫ್ರಾನ್ಸ, ಜರ್ಮನಿ*, ಯುನೈಟೆಡಸ್ಟೇಟ್ಸ ಮುಂತಾದ ಸುಧಾರಿಸಿದ

---

* ಜರ್ಮನಿ, ಫ್ರಾನ್ಸ ಮುಂತಾದ ಕೆಲವು ದೇಶಗಳಲ್ಲಿ ಯಾವತ್ತು ಜನರು ವಿದ್ಯೆ ಕಲಿಯಲಿಕ್ಕೇ ಬೇಕೆಂದು ಸರಕಾರದವರು ಕಟ್ಟಳೆ ಮಾಡಿದ್ದಾರೆ. ಯುನೈಟೆಡಸ್ಟೇಟ್ಸ ಎಂಬಲ್ಲಿ ೧೮೭೦ ರಿಂದ ೧೮೯೦ರ ವರೆಗೆ, ಅಂದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ವಿದ್ಯಾಪ್ರಸಾರವು ಬಹಳೇ ಭರದಿಂದ ಸಾಗಿರುವದು. ಅಲ್ಲಿ ಈಗ ವೈದ್ಯಶಾಸ್ತ್ರ, ಕಾಯದೆ ಮುಂತಾದ ಗಹನ ವಿಷಯಗಳಲ್ಲಿ ದೊಡ್ಡ ದೊಡ್ಡ ಪರೀಕ್ಷೆಗಳನ್ನು ಕೊಟ್ಟು ಗಂಡಸರನ್ನು ಸರಿಗಟ್ಟುವ ಎಷ್ಟೋ ಜನ ಹೆಂಗಸರು ತಯಾರಾಗಿದ್ದಾರೆ. ಇಂಗ್ಲಂಡದಲ್ಲಿ ಎಷ್ಟೋ ಜನ ಹೆಂಗಸರು ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದು ಪ್ರಸಿದ್ಧಿ ಹೊಂದಿದ್ದಾರೆ.

ದೇಶಗಳನ್ನು ನೋಡಿವರೆ, ನಮ್ಮ ದೇಶವಲ್ಲಿ ಅಜ್ಞಾನವು ಎಷ್ಟು ಇರುತ್ತದೆಂಬದು ಚನ್ನಾಗಿ ತಿಳಿಯುವದು. ಆ ದೇಶಗಳಲ್ಲಿ ವಿದ್ಯ ಕಲಿತ ಗಂಡುಹುಡುಗರ ಪ್ರಮಾಣವು ನೂರಕ್ಕೆ ೭೦ರಿಂದ ೯೯ ರವರೆಗೆ, ಹೆಣ್ಣುಹುಡುಗರ ಪ್ರಮಾಣವು ನೂರಕ್ಕೆ ೬೫ರಿಂದ ೭೫ರ ವರೆಗೆ ಇರುವದು!

ನಮ್ಮ ದೇಶ ದೊಳಗೆ ಶಾಲೆಗೆ ಹೋಗುವ ಒಟ್ಟು ವಿದ್ಯಾರ್ಥಿಗಳ ಜಾತಿ ಧರ್ಮವನ್ನು ಅನುಲಕ್ಷಿಸಿ ವರ್ಗೀಕರಣ ಮಾಡಿದರೆ, ಹಿಂದೂ ಜಾತಿಯ ವಿದ್ಯಾರ್ಥಿಗಳು ೨೪೧೮೫೭೭, ಮುಸಲ್ಮಾನರು ೭೮೨೪೪೯, ಯುರೋಪಿಯನರು ಮತ್ತು ಯುರೇಜಿಯನರು ೨೮೯೪೭, ನೇಟಿವ ಕ್ರಿಸ್ತಿ ಜನರು ೩೪೮೩೬, ಇತರ ಧರ್ಮದವರು ೧೯೯೩೬೦ ಇರುತ್ತಾರೆ.

ನಮ್ಮ ದೇಶವಲ್ಲಿ ಒಟ್ಟು ಹಿಂದೂಪ್ರಜೆಗಳು ೧೪೪೭೮೫೮೧೫, ಮುಸಲಮಾನರು ೪೫೧೨೩೦೮೮ ಇರುತ್ತಾರೆ. ಅಂದರೆ ಸಾಲಿಗೆಹೋಗುವ ವಯಸ್ಸಿನ ನೂರು ಹಿಂದೂ ಜಾತಿಯ ಹುಡುಗರಲ್ಲಿ ೧೧.೫ ಜನರು ಸಾಲಿಯಲ್ಲಿ ಕಲಿಯುತ್ತಾರೆ. ಆದರೆ ಮುಸಲಮಾನರ ಸಂಬಂಧದಿಂದ ಈ ಪ್ರಮಾಣವು ೧೨ಕ್ಕಿಂತ ಹೆಚ್ಚು ಹೊರಡುತ್ತದೆ. ಹಿಂದೂ ಜನರಲ್ಲಿ ಉಚ್ಚವರ್ಣದವರು ವಿದ್ಯಾಭ್ಯಾಸದಲ್ಲಿ ಮುಂದಾಗಿರುವರೆಂಬ ಸಂಗತಿಯನ್ನು ಲಕ್ಷ್ಯಕ್ಕೆ ತಂದರೆ, ಆ ಜಾತಿಯ ನೀಚವರ್ಣದವರಿಗೆ ವಿದ್ಯದ ಸಂಪರ್ಕವೇ ಇಲ್ಲೆಂದರೂ ಸಲ್ಲುವದು. ಆದವರಿಂದ, ಮುಸಲಮಾನರಿಗಿಂತ ನೀಚವರ್ಣದ ಹಿಂದೂ ಜಾತಿಯ ಜನರು ದಯೆಯುಳ್ಳ ಸರಕಾರದವರ ಕೃಪಾಕಟಾಕ್ಷಕ್ಕೆ ವಿಶೇಷ ಪಾತ್ರರಾಗಿರುತ್ತಾರೆ. ಅವರಿಗೆ ತಕ್ಕಮಟ್ಟಿಗೆ ಉತ್ತೇಜನ ದೊರೆಯಬೇಕೆಂದು, ನಮ್ಮ ಇಲಾಖೆಯಲ್ಲಿ ಮಿಡಲ್‌ಸ್ಕೂಲ್ ಸ್ಕಾಲರಶಿಪ್ಪು ಒಂದು, ಹೈಸ್ಕೂಲ್

ಸ್ಕಾಲರಶಿಪ್ಪು ಬಾಮು, ಹೀಗೆ ಎರಡು. ಸಾಲರಶಿಪ್ಪುಗಳು ಪ್ರತಿ ವರ್ಷ ಕೊಡಲ್ಪಡುತ್ತವೆ ಎಂಬದು ನಮ್ಮ ವಾಚಕರಿಗೆ ಗೊತ್ತಿರಬಹುದು.

ಬ್ರಿಟಿಶ್ ಇಂಡಿಯದೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚಿನ ವಿವರ:-

ಹೆಸರು.	೧೮೮೭-೮೮	೧೮೮೮-೮೯
	ರೂಪಾಯಿ.	ರೂಪಾಯಿ.
ಪ್ರತ್ಯಕ್ಷ ವಿದ್ಯಾಭ್ಯಾಸಕ್ಕೆ ...	೨೦೯೦೯೮೦೯	೨೧೩೪೪೮೪೦ †
ಪ್ರೊಫೆಶನಲ್ ಕಾಲೇಜಗಳಿಗೆ ...	೭೧೧೪೭೧	೬೭೪೧೪೪
ಆರ್ಟ್ಸ ಕಾಲೇಜಗಳಿಗೆ ...	೧೮೦೧೬೪೦	೧೮೫೧೫೮೬
ಮಧ್ಯಮಪ್ರತಿಯ ಶಾಲೆಗಳಿಗೆ ...	೮೬೬೭೧೧೭	೮೯೦೮೮೭೭
ಕನಿಷ್ಠಪ್ರತಿಯ ಶಾಲೆಗಳಿಗೆ ...	೮೩೮೮೮೯೭	೮೪೯೯೮೧೫
ಟ್ರೇನಿಂಗ ಸ್ಕೂಲುಗಳಿಗೆ ...	೫೬೬೧೪೬	೫೭೧೪೪೮
ವಿಶೇಷಪ್ರತಿಯ ಶಾಲೆಗಳಿಗೆ ...	೮೦೩೫೩೭	೮೩೮೯೭೦
ಇತರ ಖರ್ಚು * ...	೫೨೮೧೪೭೧	೫೭೪೭೪೮೪ †
ಒಟ್ಟು ಖರ್ಚು ರೂಪಾಯಿ ...	೨೬೧೯೧೨೮೦	೨೭೦೯೨೩೨೪

ಮೇಲಿನ ಕೋಷ್ಟಕದೊಳಗೆ ತೋರಿಸಿದಂತೆ ಹಿಂದುಸ್ಥಾನದಲ್ಲಿ ವಿದ್ಯಾಖಾತೆಯ ಒಟ್ಟು ಖರ್ಚು ೨೭೦೯೨೩೨೪ ರೂಪಾಯಿ ಆಗಿರುತ್ತದೆ. ಇದರೊಳಗೆ ಖುದ್ದ ಸರಕಾರಕ್ಕೆ ಸುಮಾರು ಎಪ್ಪ

---

* ಈ ರಕಮಿನೊಳಗೆ ಶಾಲಾಗೃಹಗಳು, ಮೇಜು, ಖುರ್ಚಿ, ಯಂತ್ರಮುಂತಾದ ಸಾಮಾನುಗಳು, ಯುನಿವರ್ಸಿಟಿ, ಡಿರೆಕ್ಟರರ ಮತ್ತು ಇನ್ಸಪೆಕ್ಟರರ ಸಂಬಳ, ಅವರ ಕಚೇರಿಗಳ ಸಂಬಂಧದ ಖರ್ಚು, ಸ್ಕಾಲರಶಿಪ್ಪುಗಳು, ಇತರ ಕಿರುಕುಳ ಖರ್ಚು ಮುಂತಾದವುಗಳೆಲ್ಲ ಬರುತ್ತವೆ.

† ಮೂಲ ರಿಪೋರ್ಟಿನ ಅಂಕಿಗಳಿಗೂ ಅದಕ್ಕೆ ಜೋಡಿಸಿದ ಕೋಷ್ಟಕಗಳ ಅಂಕಿಗಳಿಗೂ ಮೇಳವಿಲ್ಲ!!

ತ್ತುನಾಲ್ಕು ಲಕ್ಷ ರೂಪಾಯಿ ಮಾತ್ರ ಖರ್ಚು ಬೀಳುತ್ತದೆ. ನಮ್ಮ ದೇಶದ ಒಟ್ಟು ಕಂದಾಯವು ಸುಮಾರು ಎಂಬತ್ತುನಾಲ್ಕು ಕೋಟಿ ರೂಪಾಯಿ ಇರುತ್ತದೆ, ಅಂದರೆ ಕಂದಾಯದ ಸುಮಾರು ೧/೧೧೪ ನೇ ಪಾಲು ವಿದ್ಯಕ್ಕೆ ಖರ್ಚು ಮಾಡಿದಂತೆ ಆಯಿತು! ಆದರೆ ಇಗ್ಲಂಡದಲ್ಲಿ ಕಂದಾಯದ ೧/೧೮ ನೇ ಪಾಲು ವಿದ್ಯಕ್ಕೆ ಖರ್ಚು ಮಾಡುತ್ತಾರೆ.

ವಿದ್ಯಾಖ್ಯಾತೆಯ ಯಾವತ್ತು ಖರ್ಚಿನೊಳಗಿಂದ ಫೀ ಹಣ ೨೬೮೫೩೭೭ ರೂಪಾಯಿ, ವರ್ಗಣಿ ಮುಂತಾದ ಬಾಬುಗಳಿಂದ ಆಗುವ ಉತ್ಪನ್ನ ೫೯೧೦೪೫೯ ರೂಪಾಯಿ ವಜಾ ಹೋಗಲಾಗಿ, ಉಳಿವದ್ದರಲ್ಲಿ ಸರಕಾರಕ್ಕೆ ೨೩೯೨೮೨೦ ರೂಪಾಯಿ, ಲೋಕಲಫಂಡಿಗೆ ೪೨೮೪೪೨೪ ರೂಪಾಯಿ, ಮ್ಯುನಿಸಿಪಾಲಿಟಿಗಳಿಗೆ ೧೩೧೪೧೯೯ ರೂಪಾಯಿ, ಖರ್ಚು ಬಿದ್ದಿರುತ್ತದೆ. ಇದರಿಂದ ಸರಕಾರವು ಪ್ರತಿ ಒಬ್ಬ ವಿದ್ಯಾರ್ಥಿಯ ಸಲುವಾಗಿ ತಿಂಗಳಿಗೆ ಸುಮಾರು ೩ ಆಣೆ ೩ ಪೈ ಖರ್ಚು ಮಾಡಿದಂತೆ ಆಗುತ್ತದೆ.

NOTICE.

ಪ್ರಕಟನೆ.

ದಕ್ಷಿಣ ಭಾಗದೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ವಿ. ವಿ. ನಿಮಗೆ ಈ ಶಾಲಾಪತ್ರಕವನ್ನು ಕಳಿಸಿರುತ್ತೇವೆ. ಇವನ್ನು ತೆಗೆದುಕೊಳ್ಳುವ ಮನಸ್ಸಿಲ್ಲದಿದ್ದರೆ, ಅವರಂತೆ ನಮಗೂ ನಿಮ್ಮ ತಾಲೂಕ ಮಾಸ್ತರರಿಗೂ ತಿಳಿಸಬೇಕು. ಅಂದರೆ ಈ ಪತ್ರಕವನ್ನು ಮುಂದೆ ನಿಮ್ಮ ಕಡೆಗೆ ಕಳಿಸುವದು ಬಂದ ಮಾಡಲಾದೀತು.

೧. ಶಾಲಾಪತ್ರಕದ ವರ್ಗಣಿಯನ್ನು ಮುಂಗಡ ಮೂರು ತಿಂಗಳದ್ದಾದರೂ ಕೊಡಲಿಕ್ಕಬೇಕು. ಅದರಂತೆ ತಾಲೂಕ ಮಾಸ್ತರರು ಯಾವತ್ತು ಮಾಸ್ತರರಕಡೆಯಿಂದ ವರ್ಗಣೀ ವಸೂಲು ಮಾಡಿ, ಮನಿಆರ್ಡರಿನಿಂದ ನಮ್ಮ ಕಡೆಗೆ ಕಳಸಬೇಕು. ವರ್ಗಣಿ ವಸೂಲು ಮಾಡುವ ಕ್ರಮ ಹ್ಯಾಗಂದರೆ:—

ಮಾರ್ಚ ತಿಂಗಳಲ್ಲಿ—ಎಪ್ರಿಲ್, ಮೇ, ಜೂನ ಈ ಮೂರು ತಿಂಗಳುಗಳ ವರ್ಗಣೀ ವಸೂಲು ಮಾಡತಕ್ಕದ್ದು.
ಜೂನ— „ ಜುಲಾಯಿ, ಆಗಷ್ಟ, ಸಪ್ಟಂಬರ „
ಸಪ್ಟಂಬರ— „ ಆಕ್ಟೋಬರ, ನೊವೆಂಬರ, ದಿಸೆಂಬರ „
ದಿಸೆಂಬರ— „ ಜಾನೆವರಿ, ಫೆಬ್ರುವರಿ, ಮಾರ್ಚ „

ಈ ಪ್ರಕಾರ ಹಣ ವಸೂಲ ಮಾಡಿ ನಮ್ಮ ಕಡೆಗೆ ಕಳಿಸಿದರೆ, ಕೆಲಸನಡಿಸಲಿಕ್ಕೆ ಅನುಕೂಲವಾಗಿ ಯಾರಿಗೂ ತೊಂದರೆಯಾಗಲಿಕ್ಕಿಲ್ಲ. ಪ್ರತಿ ಒಂದು ತಿಂಗಳಿಗೆ ಒಂದು ಆಣೆ ಮೂರು ಪೈಯಂತೆ ಯಾವತ್ತು ಮಾಸ್ತರರ ಕಡೆಯಿಂದ ವರ್ಗಣೀ ವಸೂಲು ಮಾಡತಕ್ಕದ್ದು. ಈ ವರ್ಷ ದಿಸೆಂಬರ ಮತ್ತು ಮಾರ್ಚ ಈ ಎರಡು ಹಪ್ತೆಗಳನ್ನು ಒಮ್ಮೆಲೇ ಈ ತಿಂಗಳಲ್ಲಿ ವಸೂಲಮಾಡಿ, ನಮ್ಮ ಕಡೆಗೆ ಕಳಸಬೇಕು. ಈ ಕೆಲಸದಲ್ಲಿ ತಾಲೂಕ ಮಾಸ್ತರರಿಂದ ಆದಷ್ಟು ಸಹಾಯ ಸಿಕ್ಕೀತೆಂದು ನಾವು ಪೂರಾ ನಂಬಿದ್ದೇವೆ.

೨. ಶಾಲಾಪತ್ರಕವನ್ನು ಕೈಲಾದಮಟ್ಟಿಗೆ ಒಳ್ಳೇರೀತಿಯಿಂದ ಸಾಗಿಸಬೇಕೆಂದು ನಿಶ್ಚಯ ಮಾಡಿರುತ್ತೇವೆ. ಅದರಲ್ಲಿ ಬರುವ ವಿಷಯಗಳು ಯಾವವೆಂದರೆ:—

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.
೨. ಶಾಲೆಯನ್ನು ನಡಿಸುವ ಸಂಬಂಧದ ಇಲ್ಲವೆ ಶಿಕ್ಷಣ ಸಂಬಂಧದ ನಿಬಂಧಗಳು.

೩. ಉಪಯುಕ್ತ ನಿಂಬಧಗಳು.

೪. ಶಾಸ್ತ್ರೀಯ ವಿಷಯ, ಭಾಷಾ, ವ್ಯಾಕರಣ, ಸಾಹಿತ್ಯ ಮುಂತಾದವು.

೫. ವಿದ್ಯಾಖಾತೆಯ ನೋಟೀಸುಗಳು.

೬. ಪತ್ರವ್ಯವಹಾರ, ಸುಭಾಷಿತಗಳು, ಮನೋರಂಜಕ ವಿಷಯಗಳು, ಇತ್ಯಾದಿ.

ಈ ಕೆಲಸವು ಚೆನ್ನಾಗಿ ಸಾಗಬೇಕಾದರೆ, ಯಾವತ್ತು ಮಾಸ್ತರರ ಸಹಾಯವು ಅವಶ್ಯವಾಗಿ ಬೇಕು. ಅನುಭವವುಳ್ಳ ಮಾಸ್ತರರು ತಮ್ಮ ಅನುಭವವ ಫಲವು ಹೊಸದಾಗಿ ಕೆಲಸದೊಳಗೆ ಸೇರಿದ ಶಿಕ್ಷಕರಿಗೆ ಆಗುವಂತೆ ಆಗಾಗ್ಗ ನಿಬಂಧಗಳನ್ನು ಬರೆದು ಕಳುಹಿಸಬೇಕು. ಶಾಲೆಯನ್ನು ನಡಿಸುವವರಲ್ಲಿಯೂ, ಬೇರೆ ಬೇರೆ ವರ್ಗಗಳನ್ನು ಕಲಿಸುವದರಲ್ಲಿಯೂ ಯಾವ ಯಾವ ತೊಂದರೆಗಳು ಬರುತ್ತವೆ? ಅವುಗಳನ್ನು ಹ್ಯಾಗೆ ಪರಿಹರಿಸಬೇಕು? ಯಾವ ಜನರು ವಿದ್ಯಕ್ಕೆ ಉತ್ತೇಜನ ಕೊಡುತ್ತಾರೆ? ಹಳ್ಳಿಯಜನರಲ್ಲಿ ವಿದ್ಯವ ಅಭಿರುಚಿಯನ್ನು ಹುಟ್ಟಿಸುವದಕ್ಕೆ ಒದಗುವ ಅಡಚಣಿಗಳು ಯಾವವು? ಅವನ್ನು ಪರಿಹರಿಸಲಿಕ್ಕೆ ಉಪಾಯವೇನು? ಪರೀಕ್ಷೆ, ಸಭೆ, ಮುಂತಾದವುಗಳ ವೃತ್ತಾಂತ, ಇವೇ ಮುಂತಾದ ಸಂಗತಿಗಳ ವಿಷಯವಾಗಿ ಬರೆಯುತ್ತಿರಬೇಕು. ಮತ್ತು ಈಗ ಶಾಲೆಗಳಲ್ಲಿ ನಡೆಯುವ ೫ನೇ ೬ನೇ ಪುಸ್ತಕಗಳೊಳಗಿನ ಕಠಿಣಪಾಠಗಳನ್ನು ಕಲಿಸುವಾಗ ಏನಾದರೂ ಅಡಚಣಿಗಳಾಗಲಿ, ಸಂಶಯಗಳಾಗಲಿ ಬಂದರೆ ಅವುಗಳನ್ನೂ, ಇತಿಹಾಸ, ಗಣಿತ, ಭಾಷಾವಿಷಯ, ಶಾಸ್ತ್ರೀಯವಿಷಯ ಮುಂತಾದವುಗಳನ್ನೂ ಕುರಿತು ಈ ಪುಸ್ತಕದಲ್ಲಿ ಚರ್ಚೆ ನಡಿಸತಕ್ಕದ್ದು. ಮಾಸ್ತರರು ಇಂಥ ಉಪಯುಕ್ತವಾದ ವಿಷಯ

ಗಳ ಮೇಲೆ ನಿಬಂಧಗಳನ್ನಾಗಲಿ, ಪತ್ರಗಳನ್ನಾಗಲಿ ಬರೆದು ನಮ್ಮ ಕಡೆಗೆ ಕಳುಹಿಸಿದರೆ, ಅವಕ್ಕೆ ಅನುಕೂಲವಾದಂತೆ ಸ್ಥಳಕೊಡುವೆವು. ಈ ಕೆಲಸವನ್ನು ಲಕ್ಷ್ಯಪೂರ್ವಕವಾಗಿ ಮಾಡಿದರೆ, ಅವರು ತಮ್ಮ ಬಿರುದಿಗೆ ಸರಿಯಾದ ದೊಡ್ಡದೊಂದು ಕರ್ತವ್ಯವನ್ನು ನೆರವೇರಿಸಿದಂತೆ ಆಗುವದು. ಮತ್ತು ಈ ಮೇರೆಗೆ ಮಾಸಿಕ ಪುಸ್ತಕಗಳಲ್ಲಿ ತಮ್ಮ ವಿಚಾರಗಳನ್ನು ಪ್ರಕಟಿಸಿದರೆ ತಮ್ಮ ವೇಳೆಯನ್ನು ಯೋಗ್ಯ ರೀತಿಯಿಂದ ವೆಚ್ಚ ಮಾಡಿದಂತೆ ಆಗುವದು.

೩. ಈ ಪತ್ರಕವು ಮಾಸ್ತರ ಜನರ ಉಪಯೋಗಕ್ಕಾಗಿಯೇ ಮುದ್ರಿಸಲ್ಪಡುತ್ತದೆ. ಆದದರಿಂದ, ಅವರು ಇದಕ್ಕೆ ಆಶ್ರಯ ಕೊಡುವದು ತಕ್ಕದ್ದಾಗಿದೆ. ಗಾವಠಿ ಶಾಲೆಗಳ ಮಾಸ್ತರರಲ್ಲಿ ಯಾರಾದರೂ ಈ ಪತ್ರಕವನ್ನು ತೆಗೆದುಕೊಳ್ಳಲಿಕ್ಕೆ ಇಚ್ಛಿಸಿದರೆ, ಅವರು ತಾಲೂಕ ಮಾಸ್ತರರ ಕಡೆಗೆ ಹದಿನೈದು ಆಣೆ ಭರಣಾಮಾಡಿ, ಅವರ ಪಾವತಿಯನ್ನು ನಮ್ಮ ಕಡೆಗೆ ಕಳಿಸಿ ಪತ್ರ ಪಡೆಯಬೇಕು. ಅಂದರೆ ನಾವು ಈ ಪತ್ರಕವನ್ನು ಅವರಿಗೆ ಕಳುಹಿಸುವೆವು.

RAOJI B. KARANDIKAR,
ವ್ಯವಸ್ಥಾಪಕ, ಕ. ಶಾ. ಪತ್ರಕ.

ತಾಜಾಕಲಮು:—ವರ್ಗಣಿಯ ಹಣದ ವ್ಯವಸ್ಥೆಯು ಹೊಸದಾದದರಿಂದ ಯಾವತ್ತು ತಾಲೂಕ ಮಾಸ್ತರರು ಈ ಕೆಲಸವನ್ನು ಲಕ್ಷ್ಯಪೂರ್ವಕವಾಗಿಮಾಡಿ, ಮೇಹರ್ಬಾನಗಿಯಿಂದ ತೀವ್ರ ಹಣ ಕಳುಹಿಸುವರೆಂದು ಕೋರುತ್ತೇವೆ.

R. B. KARANDIKAR,
ವ್ಯವಸ್ಥಾಪಕ, ಕ. ಶಾ. ಪತ್ರಕ.

ಪುಸ್ತಕ ಮಾರಲಿಕ್ಕೆ ಸಿದ್ಧವಾಗಿದೆ.

ಶಬ್ದಮಂಜರಿ ಕೋಶವು:— ಈ ಪುಸ್ತಕವನ್ನು ಕೈ. ವಾ. ಗಂಗಾಧರ ಮಡಿವಾಳೇಶ್ವರ ಇವರು ರಚಿಸಿದ್ದು, ಆ ಪುಸ್ತಕಗಳು ಈಗ ಜನರಿಗೆ ಸಿಗುವದು ದುರ್ಲಭವಾದ್ದರಿಂದಾ ಅದನ್ನು ಒಳ್ಳೇ ದಪ್ಪ ಕಾಗದದ ಮೇಲೆ ಸುಂದರಾಕ್ಷರಗಳಿಂದ ಛಾಪಿಸಿ ಮೊದಲಿನದಕಿಂತಲೂ ೫೦೦೦ ಶಬ್ದಗಳನ್ನೂ ಶಬ್ದವ್ಯುತ್ಪತ್ತಿಯನ್ನೂ ಹೆಚ್ಚಿಗೆ ಹಾಕಿ ತಯಾರುಮಾಡಿದ್ದೇವೆ. ಅದರ ಬೆಲೆ ೪ ರೂಪಾಯಿ, ಟಪಾಲಹಾಸಲು ೪ ಆಣೆ, ಪುಸ್ತಕವು ಸಂಗ್ರಹಾಕ್ಕೆ ಯೋಗ್ಯವಾದದ್ದೆಂಬದು ಅದನ್ನು ನೋಡಿದರೆ ತಿಳಿಯುವದು.

ಧಾರವಾಡ, ೨೮-೪-೧೦. | ಚನ್ನವೀರ ಫಕೀರಪ್ಪ,
ಪ್ರೊಪ್ರೈಟರ್, ಕರ್ನಾಟಕ ಬುಕ್‌ಡಿಪೋ ಪ್ರೆಸ್.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಏಪ್ರಿಲ ೧೮೯೦. [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಹೋದ ಸಪ್ಟಂಬರ ತಿಂಗಳಲ್ಲಿ ನದಿಯಾದ (ಗುಜರಾಥ) ಎಂಬಲ್ಲಿ ಆರನೇ ಇಯತ್ತೆಯಂತೆ ಪರೀಕ್ಷೆಯಾಯಿತು. ಆಗ ಒಬ್ಬ ಹುಡುಗನು ಮತ್ತೊಬ್ಬನ ಹೆಸರಿನಿಂದ ಪರೀಕ್ಷೆಗೆ ಕೂತು, ಯಾವತ್ತು ಪ್ರಶ್ನದ ಕಾಗದಗಳನ್ನು ಬರೆದು ಕೊಟ್ಟನು. ಬಳಿಕ ಬಾಯಿಪರೀಕ್ಷೆ ನಡೆದಿರುವಾಗ ಅವನ ಮೋಸವು ಹೊರಬಿದ್ದು, ಅವನು ಎರಡನೆಯವರ ಹೆಸರಿನಿಂದ ಪರೀಕ್ಷೆಗೆ ಕೂತು ಮೋಸ ಮಾಡಿದನೆಂತಲೂ, ಸುಳ್ಳು ಹೆಸರು ಹಾಕಿ ಕಾಗದಗಳನ್ನು ಬರೆದನೆಂತಲೂ, ಅವನ ಮೇಲೆಯೂ ಈ ಅಪರಾಧಗಳನ್ನು ನಡಸುವವರಲ್ಲಿ ಅವನಿಗೆ ಸಹಾಯ ಮಾಡಿದವನ ಮೇಲೆಯೂ ತಪ್ಪುಗಳನ್ನು ಹೊರಿಸಿ, ಅವರಿಬ್ಬರನ್ನು ನ್ಯಾಯವಿಚಾರಣೆಗಾಗಿ ಸೆಶನ್ಸ ಕೋರ್ಟಿಗೆ ಕಳಿಸಿದರು. ಅಹಮ್ಮದಾಬಾದದ ಜಾಯಿಂ

ಸೆಶನ್ ಜಜ್ಜರಾದ ರಾ. ಬ. ವೆಂಕಟರಾವ ರುಕ್ಮಾಂಗದ ಇನಾಮದಾರ ಇವರು ಅದರ ವಿಚಾರಣೆ ಮಾಡಿ, ಅವರಿಬ್ಬರೂ ಅಪರಾಧಿಗಳೆಂದು ತೀರ್ಪು ಮಾಡಿ ಅವರಿಗೆ ಪ್ರತಿ ಒಂದು ಅಪರಾಧಕ್ಕೆ ಆರಾರು ತಿಂಗಳ ಸಖ್ತಮಜೂರೀ ಕೈದಿನ ಶಿಕ್ಷೆಯನ್ನು ಕೊಟ್ಟರು. ಅವರ ಮೇಲೆ ಹೈಕೋರ್ಟಿಗೆ ಅಪೀಲು ಆಗಲಾಗಿ, ನಾಮದಾರ ಹೈಕೋರ್ಟಿನವರು ಯಾವತ್ತು ಕಾಗದಪತ್ರಗಳನ್ನು ತರಿಸಿ ನೋಡಿ, ಹುಡುಗರು ಅಪರಾಧ ಮಾಡಿದ್ದು ನಿಜವು ಎಂದು ನಿರ್ಣಯಿಸಿದರು. ಆದರೆ ಕೆಳಗಿನ ಕೋರ್ಟಿನವರು ಕೊಟ್ಟ ಶಿಕ್ಷೆಯನ್ನು ಕಡಿಮೆ ಮಾಡಿದರು. ಇದೇಪ್ರಕಾರ ಹಿಂದಕ್ಕೆ ಮುಲಕೀ ಪರೀಕ್ಷೆಯಲ್ಲಿ ಪಾಸಾದ ಇಬ್ಬರು ಮೂರುಮಂದಿ ಉಮೇದವಾರರು ತಮ್ಮ ಸರ್ಟಿಫಿಕೀಟಿನ ಗುಣಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಮಾಡಿದ್ದರಿಂದ ಶಿಕ್ಷೆಯನ್ನು ಹೊಂದಿದ ಸಂಗತಿಯು ನಮ್ಮ ವಾಚಕರಿಗೆ ಗೊತ್ತಿರಬಹುದು. ಇಂಥ ಕೆಟ್ಟ ಕೆಲಸಗಳಿಂದ ಮುಂದೆ ಬೆಳೆದು ಬಾಳತಕ್ಕ ಪ್ರಾಯಸ್ಥರಿಗೆ ಉಂಟಾಗುವ ಕಲಂಕವನ್ನು ಲಕ್ಷ್ಯಕ್ಕೆ ತಂದು, ನಮ್ಮ ಮಾಸ್ತರ ಜನರು ಬೋಧನೆಯಿಂದಲೂ ಸದಾಚಾರದಿಂದಲೂ ತಮ್ಮ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತನವನ್ನು ನೆಲೆಗೊಳಿಸಲಿಕ್ಕೆ ಮನಃಪೂರ್ವಕವಾಗಿ ಯತ್ನಿಸಬೇಕು.

ನಮ್ಮ ಇಲಾಖಾಧಿಪತಿಗಳಾದ ನಾಮದಾರ ಲಾರ್ಡ ರೇ ಧೊರೆಗಳು ಐದು ವರ್ಷದ ಮುದ್ದತು ತೀರಿದ್ದರಿಂದ ಈ ತಿಂಗಳ ೧೨ನೇ ತಾರೀಖಿಗೆ ವಿಲಾಯತಿಗೆ ತಿರಿಗಿ ಹೋದರು. ಇವರಿಗೆ ಪುಣೆಯಲ್ಲಿ ಇದೇ ತಿಂಗಳ ೧ನೇ ತಾರೀಖಿಗೆ “ದಕ್ಷಿಣದೊಳಗಿನ ವಿದ್ಯಾಪ್ರಸಾರಕ ಮಂಡಳಿ” ಎಂಬ ಸಭೆಯವರಿಂದ ಒಂದು

ಮಾನಪತ್ರವು ಕೊಡಲ್ಪಟ್ಟಿತು. ಆ ಪ್ರಸಂಗದಲ್ಲಿ ಲಾರ್ಡ್. ರೇ ಧೊರೆಗಳು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕಂಥ ಎಷ್ಟೋ ಮಾತುಗಳನ್ನು ಹೇಳಿದರು. ಹುಡುಗರಿಗೆ ವಿದ್ಯಕಲಿಸಿ ಅವರನ್ನು ಹ್ಯಾಗೆ ತಯಾರು ಮಾಡಬೇಕೆಂಬಬಗ್ಗೆ ಅವರು ಅಂದದ್ದೇನೆಂದರೆ—"ಶಿಕ್ಷಕರು ಕೇವಲ ಯಂತ್ರಗಳಂತೆ ಕೆಲಸ ಮಾಡಿದರೆ ಅದರಿಂದ ಏನೂ ಉಪಯೋಗವಾಗದು. ಅವರು ವಿದ್ಯಾರ್ಥಿಗಳ ವಿಚಾರಶಕ್ತಿಯೂ ಶೋಧಕಬುದ್ಧಿಯೂ ಬೆಳೆಯುವಂತೆ ಶಿಕ್ಷಣವನ್ನು ಕೊಡಲಿಕ್ಕೆ ಬೇಕು. ಮೇಲಾದ ಶಿಕ್ಷಣ ದೊರೆತು ವಿದ್ಯಾವೃದ್ಧಿಯಾಗಬೇಕಾದರೆ, ವಿದ್ಯಾರ್ಥಿಗಳ ಗ್ರಾಹಕಶಕ್ತಿಯು ವಿಕಸಿತವಾಗಲಿಕ್ಕೆ ಬೇಕು. ಇತಲಿ ದೇಶದೊಳಗೆ ಸಿಸಿರೊ ಎಂಬ ಒಬ್ಬ ಪಂಡಿತನು ಆಗಿ ಹೋದನು. ಆತನ ಮಗನ ಶಿಕ್ಷಕನು ಅವನನ್ನು ಹಗಲೂ ಇರುಳೂ ತನ್ನ ಹತ್ತಿರ ಇಟ್ಟುಕೊಂಡು, ಅವನಿಗೆ ಮಾತು ಕಥೆಗಳನ್ನು ಹೇಳುತ್ತಿದ್ದನು. ಶಿಕ್ಷಕರೂ ಪ್ರೊಫೆಸರರೂ ವಿದ್ಯಾರ್ಥಿಗಳೊಡನೆ ಹೀಗೇ ವರ್ತಿಸತಕ್ಕದ್ದು. ಕೊಟ್ಟ ಪಾಠಗಳನ್ನು ಒಪ್ಪಿಸಿಕೊಳ್ಳುವದೂ, ಗೊತ್ತುಮಾಡಲ್ಪಟ್ಟ ವಿಷಯಗಳ ಮೇಲೆ ವ್ಯಾಖ್ಯಾನ ಕೊಡುವದೂ, ಇಷ್ಟರಿಂದಲೇ ಶಿಕ್ಷಣದ ಕೆಲಸವು ಮುಗಿಯಿತೆಂದು ತಿಳಿಯಕೂಡದು. ಶಿಕ್ಷಕರು ಹುಡುಗರೊಳಗೆ ಯಾವಾಗಲೂ ಕೂಡಿಕೊಂಡಿದ್ದು ಅವರೊಡನೆ ಮನಸು ಬಿಚ್ಚಿ ಮಾತಾಡುತ್ತಿರಬೇಕು. ಕಡೆಗೆ ವಿದ್ಯಾರ್ಥಿಗಳ ಮನಸು ಎಷ್ಟರ ಮಟ್ಟಿಗೆ ತಯಾರಾಗಬೇಕೆಂದರೆ, ಯಾರೊಬ್ಬರು ಅವರಿಗೆ ಏನಾದರೂ ಹೇಳಿದರೆ ಅವನ್ನು ಸುಮ್ಮನೇ ನಂಬದೆ, ಯಾವದೊಂದು ಮಾತನ್ನು ಅಂಗೀಕರಿಸುವದಕ್ಕೆ ಮುಂಚೆ ಅದರ ಸ್ಥಿತಿಯ ಬಗ್ಗೆ ಅವರು ತಮ್ಮ ಮನಸಿನ ಪೂರಾ ಖಾತ್ರಿ ಮಾಡಿಕೊಳ್ಳಬೇಕು."

ರೀ· ಪ್ರಭುಗಳು ಈ ಸಭೆಯವರ ಶಾಲೆಯಲ್ಲಿ ಒಂದುವಾರ್ಷಿಕ ಇನಾಮು ಇಟ್ಟು ಸತ್ಯಭಾಷಣ ಸದ್ವರ್ತನೆಗಳಿಂದ ಮೇಲಾದ ವಿದ್ಯಾರ್ಥಿಗೆ ಅದನ್ನು ಕೊಡತಕ್ಕದ್ದೆಂದು ಗೊತ್ತುಮಾಡಿದ್ದಾರೆ.

* * *

ನಮ್ಮ ಹೊಸ ಗವ್ಹರ್ನರರಾದ ನಾಮದಾರ ಲಾರ್ಡಹ್ಯಾರಿಸ್ ಸಾಹೇಬರು ಈ ತಿಂಗಳ ೧೦ ನೇ ತಾರೀಖಿಗೆ ಬಂದು ವಾಡಿಕೆಯಂತೆ ಪ್ರಮಾಣಮಾಡಿ ತಮ್ಮ ಅಧಿಕಾರವನ್ನು ಕೈಕೊಂಡರು.

* * *

ಟ್ರೇನಿಂಗಕಾಲೇಜದ ಷಾಣ್ಮಾಸಿಕ ಪರೀಕ್ಷೆಯು ಈ ತಿಂಗಳ ೧೪ ನೇ ತಾರೀಖಿಗೆ ಆರಂಭವಾಗಿ ೨೧ನೇ ತಾರೀಖಿಗೆ ಮುಗಿಯಿತು. ಈ ಪರೀಕ್ಷೆಯ ಕನ್ನಡ ಭಾಷಾವಿಷಯದ ಪ್ರಶ್ನೆಗಳನ್ನು ಮುಂದೆಕೊಟ್ಟಿದ್ದೇವೆ.

* * *

ಬಂಗಾಲ ಪ್ರಾಂತದೊಳಗಿನ ಇಬ್ಬರು ಹೆಣ್ಣುಹುಡುಗರು ಕೇಂಬ್ರಿಜದಲ್ಲಿರುವ ನ್ಯೂನ್‌ಹ್ಯಾಮ್ ಕಾಲೇಜಕ್ಕೆ ವಿದ್ಯಾಭ್ಯಾಸ ಮಾಡುವದಕ್ಕಾಗಿ ವಿಲಾಯತಿಗೆ ಹೋಗತಕ್ಕವರಿದ್ದಾರೆ. ಅವರಲ್ಲಿ ಮಿಸ್‌ಬಿಹಾರಾಯ ಎಂಬವಳು ಆರ್ಟ್ಸ ಕಾಲೇಜದ ಪೀ. ಈ. ಪರೀಕ್ಷೆಯನ್ನು ಕೊಟ್ಟಿದ್ದಾಳೆ. ಮತ್ತು ಇಂದೋಮತಿ ಸೇನ ಎಂಬವಳು ಹೋದವರ್ಷ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾದಳು. ಇಬ್ಬರೂ ಹೆಣ್ಣುಮಕ್ಕಳು ಬಹಳ ಚುರುಕುಬುದ್ಧಿಯವರಿದ್ದಾರಂತೆ.

* * *

ಹಿಂದುಸ್ಥಾನ ಸರಕಾರದವರು ವರ್ಷಕ್ಕೆ ಇನ್ನೂರು ಪಾಂಡಿನದೊಂದು ಸ್ಕಾಲರಶಿಪ್ಪನ್ನು ಇಂಗ್ಲಂಡಕ್ಕೆ ಹೋಗಿ ವಿದ್ಯಾ

ಭ್ಯಾಸ ಮಾಡಲಿಚ್ಛಿಸುವ ಗ್ರ್ಯಾಜುಏಟನಿಗೆ ಕೊಡುವೆವೆಂದು ಪ್ರಕಟಿಸಿದ್ದಾರೆ. ಇದು ಮೂರು ವರ್ಷಕ್ಕೊಮ್ಮೆ ಮುಂಬಯಿ ಇಲಾಖೆಯ ಗ್ರ್ಯಾಜುಏಟನಿಗೆ ದೊರೆಯುವದು. ಈ ಸಂಬಂಧದಿಂದ ಮುಂಬಯಿ ಯುನಿವರ್ಸಿಟಿಯು (ವಿದ್ಯಾಪೀಠದ) ಸಿನೇಟದವರು ವಿಚಾರ ಮಾಡಿ ಮೂರು ವರ್ಷಗಳಲ್ಲಿ ಪಾಸಾದ ಗ್ರ್ಯಾಜುಏಟರಲ್ಲಿ ಮೇಲಾದವನಿಗೆ ಅದನ್ನು ಕೊಡಬೇಕೆಂದು ಗೊತ್ತು ಮಾಡಿದ್ದಾರೆ.

FORMING THE HABITS OF LITTLE CHILDREN.

ಹುಡುಗರಿಗೆ ಚಿಕ್ಕಂದಿನಲ್ಲಿ ಕಲಿಸತಕ್ಕ ನಡತೆಗಳು.

(೧೨ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಜಗತ್ತಿನಲ್ಲಿ ಆಯುಷ್ಯವೆಂಬದು ಬಹಳ ಹೆಚ್ಚಿನ ಪದಾರ್ಥವು. ಯಾಕಂದರೆ, ಇತರ ಪದಾರ್ಥಗಳು ದ್ರವ್ಯಸಾಧ್ಯಗಳಾಗಿವೆ; ಆದರೆ ಆಯುಷ್ಯವು ಹಾಗಿಲ್ಲ. ಆದವರಿಂದ, ಅದನ್ನು ಬೆಳಸುವ ಉಪಾಯವಾದರೂ ಬಹು ಮಹತ್ವದ್ದಾಗಿದೆ ಇಷ್ಟೇ ಅಲ್ಲ, ಅದರಷ್ಟು ಮಹತ್ವದ ಕೆಲಸವು ಮತ್ತೊಂದಿಲ್ಲೆಂಬದಕ್ಕೆ ಸಂಶಯವೇ ಇಲ್ಲ. ಆಯುಷ್ಯವನ್ನು ಬೆಳಸುವ ಕೆಲಸವು ಇಷ್ಟು ಗೌರವವುಳ್ಳದ್ದಾದರೂ ಅದರಲ್ಲಿ ಒಂದು ವಿಶೇಷ ಗುಣ ಉಂಟು. ಅದು ಯಾವದೆಂದರೆ—ಈ ಕೆಲಸವು ಪರಾಧೀನದ್ದಲ್ಲ; ಮತ್ತು ಇದು ಇಂಥವರಲ್ಲಿಯೇ ಇರಬೇಕೆಂಬ ನಿಯಮವಿಲ್ಲ. ಮನುಷ್ಯನಿಗೆ ಅದರ ಬಯಕೆ ಬಂದಿದ್ದರೆ ಸಾಕು, ಆವನ ಕೈಯಲ್ಲಿಯೇ ಅದು ಇರುತ್ತದೆ. ಇನ್ನು, ಅವನು ಅರಸನೇ ಆಗಲಿ ತಿರುಕನೇ ಆಗಲಿ, ದೊಡ್ಡವನಾಗಲಿ ಸಣ್ಣವನಾಗಲಿ, ಗಂಡಸಾಗಲಿ ಹೆಂಗಸಾಗಲಿ, ಪಂಡಿತನಾಗಲಿ ಅಕ್ಷರ ಶತ್ರು

ವಾಗಲಿ, ಯಾವನಿದ್ದರೂ ಅವನನ್ನು ಅದು ನೋಡುವದಿಲ್ಲ. ತನ್ನನ್ನು ಮನಮುಟ್ಟಿ ಬಯಸಿದವರ ಕಡೆಗೆ ಅದು ತಪ್ಪದೆ ಹೋಗುತ್ತದೆ. ಆ ಉಪಾಯವು ಯಾವದೆಂದರೆ,—ಬೆಳಗ್ಗೆ ಬೇಗ ಏಳುವದೇ. ಇತಿಹಾಸವನ್ನು ಚನ್ನಾಗಿ ಓದಿನೋಡಿದರೆ, ಬಹು ಪ್ರಾಚೀನ ಕಾಲದಿಂದ ಇದುವರೆಗೆ ವಿದ್ಯದಿಂದಾಗಲಿ, ವಿತ್ತದಿಂದಾಗಲಿ, ವಿಚಾರದಿಂದಾಗಲಿ, ಸದ್ಗುಣಗಳಿಂದಾಗಲಿ ಉತ್ತಮ ಪದವಿಯನ್ನು ಹೊಂದಿದ ಜನರೆಲ್ಲರು ಬೆಳಗ್ಗೆ ಬೇಗ ಏಳುತ್ತಿದ್ದರೆಂದು ತಿಳಿಯುತ್ತದೆ. ಪೂರ್ವಕಾಲದಲ್ಲಿ ನಮ್ಮ ಮುನಿಗಳೆಲ್ಲರು ಬಳ್ಳೇ ಬೆಳಗ್ಗೆ ಎದ್ದು, ಪ್ರಾತರ್ವಿಧಿಗಳನ್ನೂ ದೇವತಾಸ್ಮರಣೆಯನ್ನೂ ಮಾಡಿ, ಸೂರ್ಯೋದಯಕಾಲಕ್ಕೆ ಸೂರ್ಯನಿಗೆ ಅರ್ಘ್ಯ ಕೊಡಲಿಕ್ಕೆ ಸಿದ್ಧರಾಗುತ್ತಿದ್ದರು. ಬೆಳಗ್ಗೆ ಏಳುವದು ಎಷ್ಟು ಮಹತ್ವದ್ದೆಂಬುದು ಕೆಳಗೆ ಬರೆದ ಪ್ರಮಾಣಗಳಿಂದ ಸ್ಪಷ್ಟವಾಗುವದು.

ಸೂರ್ಯೋದಯೇಚಾಸ್ತಮಯೇಶಯಾನಂ ||
ವಿಮುಂಚತಿಶ್ರೀರಪಿಚಕ್ರಪಾಣಿನಂ || ೧ ||

ಅರ್ಥ.—ಸೂರ್ಯನ ಉದಯಾಸ್ತ ಸಮಯಗಳಲ್ಲಿ ಮಲಗುವವನು ವಿಷ್ಣುವಾದರೂ ಅವನನ್ನು ಲಕ್ಷ್ಮಿಯು ಬಿಟ್ಟು ಬಿಡುತ್ತಾಳೆ.

ಕೋಳಿಕೂಗದಮುನ್ನ ಏಳುವದು ನಿತ್ಯದಯಾಳುದೇವ
ರನು ಭಕ್ತಿಯಿನ್ನೆನವರೆ ಆಳಿನಾಳಯ್ಯಸರ್ವಜ್ಞ || ೨ ||

ಇವಲ್ಲದೆ, ಬೆಳಗ್ಗೆ ಬೇಗ ಏಳಬೇಕೆಂಬ ಬಗ್ಗೆ ಸರ್ವಮಾನ್ಯವಾದ ಪ್ರಾಚೀನ ಪ್ರಮಾಣಗಳು ಯಾವವೆಂದರೆ—

ರಾತ್ರೇಃಪಶ್ಚಿಮಯಾಮಸ್ಯ ಮುಹೂರ್ತೋಯಸ್ತೃತೀ
ಯಕಃ || ಸಬ್ರಾಹ್ಮಣಇತಿವಿಜ್ಞೇಯೋ ವಿಹಿತಃಸತು
ಬೋಧನೇ|| ೧ ||

ಅರ್ಥ.—ರಾತ್ರಿಯ ಕಡೇ ಪ್ರಹರದ ಮೂರನೇ ಮುಹೂರ್ತವು 'ಬ್ರಾಹ್ಮ' ವೆಂಬ ಹೆಸರುಳ್ಳದ್ದು; ಅದು ಎಚ್ಚರಿಕೆಯಿಂದ ಇರಲಿಕ್ಕೆ ತಕ್ಕದ್ದಾಗಿದೆ.

ಬ್ರಾಹ್ಮೇಮುಹೂರ್ತೇ ಚೋತ್ಥಾಯಧರ್ಮಮರ್ಥಂವಿ
ಚಿಂತಯೇತ್ ॥ ಕಾಯಕ್ಲೇಶವಿನಾಶಾರ್ಥಂಧ್ಯಾಯೀತ
ಪರಮೇಶ್ವರಂ ॥ ೨ ॥

ಅರ್ಥ.—ಬ್ರಾಹ್ಮಮುಹೂರ್ತದಲ್ಲಿ ನಿದ್ರೆಯ ಬಿಟ್ಟು ಎದ್ದು ಲೌಕಿಕ ವಿಚಾರಗಳನ್ನೂ ಪಾರಮಾರ್ಥಿಕ ವಿಚಾರಗಳನ್ನೂ ಮಾಡಿಕೊಳ್ಳಬೇಕು.

ಬ್ರಾಹ್ಮೇಮುಹೂರ್ತೇಯಾ ನಿದ್ರಾಸಾಪುಣ್ಯಕ್ಷಯಕಾರಿ
ಣೀ ॥ ತಾಂಕರೋತಿಚಯೋಮೋಹಾತ್ಪಾದಕೃಚ್ಛ್ರೇ
ಣಶುದ್ಧ್ಯತಿ ॥ ೩ ॥

ಅರ್ಥ.—ಬ್ರಾಹ್ಮಮುಹೂರ್ತದಲ್ಲಿ ಬರುವ ನಿದ್ರೆಯು ಪುಣ್ಯಕ್ಷಯವನ್ನು ಮಾಡುತ್ತದೆ. ಇದನ್ನು ತಿಳಿಯದೆ ಯಾವನಾದರು ಆ ನಿದ್ರೆಗೆ ಆಸ್ಪದ ಕೊಟ್ಟರೆ ಅವನು ಪಾದಕೃಚ್ಛ್ರವೆಂಬ ವ್ರತವನ್ನು ಮಾಡಿ ಶುದ್ಧನಾಗಬೇಕಾಗುತ್ತದೆ.

ಪ್ರದೋಷ ಪಶ್ಚಿಮೌಯಾಮೌವೇದಾಭ್ಯಾಸೇನ ತೌನ
ಯೇತ್ । ಪ್ರಹರದ್ವಯಂಶಾಯೀತುಬ್ರಹ್ಮಭೂಯಾಯಕ
ಲ್ಪತೇ ॥೪॥

ಅರ್ಥ.—ರಾತ್ರಿಯ ಮೊದಲನೇ ಪ್ರಹರವನ್ನೂ ಕಡೆಯ ಪ್ರಹರವನ್ನೂ ವೇದಾಭ್ಯಾಸದಲ್ಲಿ ಕಳೆಯಬೇಕು. ಇವುಗಳ ನಡುವಿನ ಎರಡು ಪ್ರಹರಗಳನ್ನು ನಿದ್ರೆಯಲ್ಲಿ ಕಳೆಯಬೇಕು. ಹೀಗೆ ಮಾಡುವವನು ಬ್ರಹ್ಮಸಾಯುಜ್ಯವನ್ನು ಪಡೆಯುತ್ತಾನೆ.

ಅತಿಕ್ರಮ್ಯಾಪರಾಂರಾತ್ರಿಂವಿದ್ಯಯಾನಪುನಃಸ್ವಪೇತ್ ।
ಸ್ಮೃತ್ವಾಜಗತ್ಪತಿಂದೇವಂ ಸ್ತೋತ್ರಾಣ್ಯಪಿಚಸಂಜಪೇ
ತ್ ॥ ೫ ॥

ಅರ್ಥ.—ರಾತ್ರಿಯ ಕಡೆಯ ಪ್ರಹರವನ್ನು ವಿದ್ಯಾಭ್ಯಾಸದಲ್ಲಿ
ಕಳೆಯಬೇಕು. ಪುನಃ ಮಲಗಬಾರದು. ಜಗದೊಡೆಯನನ್ನು
ಸ್ಮರಿಸಿ ಪುಣ್ಯಸ್ತೋತ್ರಗಳನ್ನು ಜಪಿಸಬೇಕು.

ಇದರಿಂದ ಬೆಳಗ್ಗೆ ಬೇಗ ಏಳುವ ಪರಿಪಾಠವು ಪೂರ್ವದಲ್ಲಿ
ಇತ್ತೆಂಬುದೂ ಅದರ ಗೌರವವು ಎಷ್ಟೆಂಬುದೂ ವ್ಯಕ್ತವಾಗು
ತ್ತದೆ. ಯಾವನು ಬೆಳಗ್ಗೆ ತಡಮಾಡಿ ಏಳುವನೋ ಅವನ ಎಲ್ಲ
ಕೆಲಸಗಳಿಗೂ ತೊಂದರೆಯಾಗುತ್ತದೆ, ಎಂದು ಬೆಂಜಾಮಿನ ಫ್ರಾಂ
ಕ್ಲಿನನು ಅನ್ನುತ್ತಾನೆ. ಬೆಳಗ್ಗೆ ಬೇಗ ಏಳದೆ ಭಾಗ್ಯವಂತ
ನಾನ ಒಬ್ಬ ಮನುಷ್ಯನನ್ನಾದರೂ ನಾನು ನೋಡಲಿಲ್ಲ, ಎಂದ
ಡೀನಸ್ವಿಫ್ಟನೆಂಬ ಪ್ರಸಿದ್ಧ ಗ್ರಂಥಕಾರನು ಬರೆಯುತ್ತಾನೆ. ಅದ
ರೆ ಈಗ ನಮ್ಮಲ್ಲಿ ಇದರ ವಿಪರೀತ ಸ್ಥಿತಿಯು ಕಂಡುಬರುತ್ತದೆ.

ಬೆಳಗ್ಗೆ ತಡಮಾಡಿ ಏಳುವ ಚಾಳಿಯು ನಮ್ಮ ದೇಶದಲ್ಲಿಯೇ
ಬೆಳೆಯುತ್ತ ನಡೆದದೆ ಎಂಬ ಹಾಗಿಲ್ಲ. ಫ್ರಾನ್ಸದೇಶದ ರಾಜಧಾನಿ
ಯಾದ ಪಾರಿಸ ಪಟ್ಟಣದೊಳಗೆ ಹದಿನಾಲ್ಕನೇ ಶತಮಾನದಲ್ಲಿ
ಅಂಗಡಿಕಾರರು ಬೆಳಗಿನ ನಾಲ್ಕು ಗಂಟೆಗೆ ತಮ್ಮ ತಮ್ಮ ಅಂಗ
ಡಿಗಳನ್ನು ತೆರೆಯುತ್ತಿದ್ದರು. ಈಗ ಏಳು ಬಡಿಯುತ್ತಲೆ ತೆರೆ
ಯುತ್ತಾರೆ. ಇವಕ್ಕೆ ಕಾರಣವೇನಂದರೆ, ಜನರು ಪೂರ್ವರಾತ್ರಿ
ಯಲ್ಲಿ ಬಹಳ ಹೊತ್ತಿನ ವರೆಗೆ ಜಾಗರಣೆ ಮಾಡುತ್ತಾರೆ. ಈ
ಪದ್ಧತಿಯು ಒಳ್ಳೇದಲ್ಲ.

ಹದಿನೆಂಟನೇ ಶತಮಾನದಲ್ಲಿ ಫ್ರಾನ್ಸದೇಶದೊಳಗೆ ಬಫೋನ
ನೆಂಬ ಒಬ್ಬ ವಿದ್ವಾಂಸನು ಆಗಿಹೋದನು. ಅವನು ಎಷ್ಟೋ

ದೊಡ್ಡದೊಡ್ಡ ಗ್ರಂಥಗಳನ್ನು ಬರೆದಿದ್ದಾನೆ. ಅವನು ತನ್ನ ಚರಿತ್ರವಲ್ಲಿ ಬರೆದದ್ದೇನಂದರೆ—ನನಗೆ ತಾರುಣ್ಯವಲ್ಲಿ ನಿದ್ರೆಯ ಬಾಧೆಯು ಬಹಳ ಇತ್ತು. ಅದು ನನ್ನ ಆಯುಷ್ಯದ ಬಹಳ ವೇಳೆಯನ್ನು ಕದಿಯುತ್ತಿತ್ತು. ಆದರೆ ನನ್ನ ಸೇವಕನಾದ ಯೋಸೇಫನೆಂಬವನು ಈ ನನ್ನ ಕೆಟ್ಟ ಚಾಳಿಯನ್ನು ಬಿಡಿಸಿದನು. ಹ್ಯಾಗಾದರೂ ಚಿಂತೆಯಿಲ್ಲ, ಬೆಳಗ್ಗೆ ಆರು ಬಡಿಯುವದರೊಳಗೆ ನನ್ನನ್ನು ಎಬ್ಬಿಸು, ಈ ಕೆಲಸಕ್ಕಾಗಿ ನಿನಗೆ ತಿಂಗಳಗೊಮ್ಮೆ ಎರಡೂವರೆ ರೂಪಾಯಿ ಇನಾಮು ಕೊಡುತ್ತೇನೆ, ಎಂದು ನಾನು ಅವನಿಗೆ ಹೇಳಿದ್ದೆನು. ಅವನು ಅದೇಪ್ರಕಾರ ಮಾಡುತ್ತಿದ್ದನು. ಆದರೆ ಇದಕ್ಕಾಗಿ ಅವನು ಎಷ್ಟೋ ದಿವಸಗಳವರೆಗೆ ನನ್ನಿಂದ ಬೈಸಿಕೊಳ್ಳಬೇಕಾಯಿತು. ಹೀಗೆ ಕೆಲವು ಕಾಲ ಕಳೆದ ಬಳಿಕ ಕಡೆಗೆ ನನಗೆ ಬೇಗ ಏಳುವ ಅಭ್ಯಾಸವು ಹತ್ತಿತು. ನಾನು ಬೆಳಗ್ಗೆ ಬೇಗ ಏಳುತ್ತಿದ್ದದರಿಂದಲೇ ಅನೇಕ ಗ್ರಂಥಗಳನ್ನು ಬರೆದಿದ್ದೇನೆ. ಇಲ್ಲದಿದ್ದರೆ, ಅವುಗಳನ್ನು ಬರೆಯುವದು ನನ್ನಿಂದ ಆಗುತ್ತಿದ್ದಿಲ್ಲ.

ಪ್ರಶಿಯಾ ದೇಶದ ಅರಸನಾದ ಎರಡನೇ ಫ್ರೇಡರಿಕನು ಬಲು ಮುದುಕನೂ ಬಲಗುಂದಿದವನೂ ಆಗಿದ್ದರೂ, ಬೆಳಗಿನ ನಾಲ್ಕು ಬಡೆದ ಬಳಿಕ ನನ್ನನ್ನು ಮಲಗಗೊಡಬೇಡಿರೆಂದು ಸೇವಕರಿಗೆ ಹೇಳಿ ಬಿಟ್ಟಿದ್ದನು. ಪೀಟರ-ದಿ-ಗ್ರೇಟನೆಂದು ಹೆಸರಾದ ರಶಿಯಾ ದೇಶದ ಸಾರ್ವಭೌಮರಾಜನು ಲಂಡನ ಪಟ್ಟಣದ ಉದ್ಯೋಗ ಶಾಲೆಯಲ್ಲಿ ಬಡಿಗತನವನ್ನು ಕಲಿಯುತ್ತಿರುವಾಗಲೂ, ಸಿಂಹಾಸನದ ಮೇಲೆ ಕೂತು ರಾಜ್ಯಭಾರ ಮಾಡುತ್ತಿರುವಾಗಲೂ, ಹೊತ್ತು ಮೂಡುವದಕ್ಕೆ ಮೊದಲೇ ಏಳುತ್ತಿದ್ದನು. ಅವನು ಅನ್ನುತ್ತಿದ್ದದ್ದೇನಂದರೆ—ಕೈಲಾದಮಟ್ಟಿಗೆ ಆಯುಷ್ಯವನ್ನು ಬೆಳಸಿ

ಕೊಳ್ಳಬೇಕೆಂದು ನನ್ನ ಮನಸಿನಲ್ಲಿ ಉಂಟು. ಆದದರಿಂದ, ನಾನು ಆದಷ್ಟು ತುಸು ಹೊತ್ತು ಮಲಗುತ್ತೇನೆ. ಆಯುಷ್ಯವನ್ನು ಬೆಳಸಲಿಕ್ಕೆ ಪ್ರಶಸ್ತ ಮಾರ್ಗವು ಇದೇ. ಇದು ಪೀಟರ-ದಿ-ಗ್ರೇಟನ ಕೈಯಲ್ಲಿ ಹ್ಯಾಗೆ ಇತ್ತೋ, ಹಾಗೇ ಎಲ್ಲರ ಕೈಯಲ್ಲಿಯೂ ಉಂಟು. ಆದರೆ ಅದನ್ನು ಉಪಯೋಗಿಸಿಕೊಳ್ಳುವ ಬಯಕೆ ಮಾತ್ರ ಬೇಕು. ಒಬ್ಬನು ಮೂವತ್ತು ವರ್ಷಗಳವರೆಗೆ ಒಂದೊಂದು ತಾಸು ಬೆಳಕು ಹರಿಯುವ ಪೂರ್ವದಲ್ಲಿ ಎದ್ದರೆ, ಆವನಿಗೆ ಎಚ್ಚರಿಕೆಯ ಸ್ಥಿತಿಯಲ್ಲಿ ೧೦೯೫೦ ತಾಸುಗಳು ಹೆಚ್ಚಿಗೆ ದೊರೆಯುತ್ತವೆ. ಇಷ್ಟು ಆಯುಷ್ಯವು ಬೆಳೆಯಿತೆಂತಲೇ ತಿಳಿಯತಕ್ಕದ್ದು. ನಿದ್ರೆಯು ಒಂದು ರೀತಿಯಿಂದ ನೋಡಿದರೆ ಮರಣವು, ಎಂದು ಗ್ರಿಸದೇಶದ ಪ್ರಖ್ಯಾತ ತತ್ವಜ್ಞಾನಿಯಾದ ಸಾಕ್ರೆತೀಸನು ಅನ್ನುತ್ತಿದ್ದನು. ಇದರಿಂದ, ಜಾಗ್ರತಾವಸ್ಥೆಯಲ್ಲಿ ಹೆಚ್ಚಾಗಿ ದೊರೆವಷ್ಟು ವೇಳೆ ಆಯುಷ್ಯವು ಬೆಳೆಯುವದೆಂಬದು ನಿಜವು. ಆ ಕಾರಣ, ಆಯುಷ್ಯವನ್ನು ಬೆಳಸುವದು ಒಂದು ಬಗೆಯಿಂದ ನಮ್ಮ ಕೈಯಲ್ಲಿಯೇ ಇರುತ್ತದೆಂದು ಹೇಳಬಹುದು.

ಆದರೆ ಈ ವಿಷಯದಲ್ಲಿ ಇನ್ನೊಂದು ಆಲೋಚನೆ ಉಂಟು. ಅದೇನಂದರೆ—ನಿದ್ರೆಯೊಳಗಿನ ವೇಳೆಯನ್ನು ಎಚ್ಚರಿಕೆಯಲ್ಲಿ ಕಳೆಯಬೇಕೆಂಬದಿಷ್ಟರಿಂದಲೇ ನಮ್ಮ ಆಯುಷ್ಯವು ಬೆಳೆಯುವದೆಂದು ತಿಳಿಯಲಾಗದು. ಇಂಥ ವೇಳೆಯನ್ನು ತಕ್ಕ ಕೆಲಸದಲ್ಲಿ ಕಳೆಯಲಿಕ್ಕೆ ಬೇಕು. ಹಾಗೆ ಮಾಡದೆ ಬೆಳಗ್ಗೆ ನಾಲ್ಕು ಬಡಿಯುವಾಗ ಎದ್ದು, ಏಳು ಬಡಿಯುವವರೆಗೆ ಕೈಕಾಲುಗಳನ್ನು ತಿಕ್ಕುತ್ತಾ ಸುಮ್ಮನೇ ಕೂತರಾಯಿತೇ? ಇದೇನು ಆಯುರ್ವೃದ್ಧಿಯಲ್ಲ. ಕೆಟ್ಟಚಾಳಿ ಅನ್ನಬಹುದು. ಇದನ್ನು ಲಕ್ಷ್ಯದ

ಲ್ಲಿಟ್ಟು ಯಾವದಾದರೊಂದು ಹಿತದ ಕೆಲಸವನ್ನು ಮಾಡುವದೆ ಆಯುಷ್ಯವನ್ನು ಬೆಳಸಿದ್ದು ಸಾರ್ಥಕವಾಗುವದು.

(ಮುಂದಕ್ಕೆ ಸಾಗುವದು.)

HINTS TO TEACHERS OF INFANT--CLASSES.

ಮೂಲಾಕ್ಷರದ ವರ್ಗಗಳನ್ನು ಕಲಿಸುವ ಶಿಕ್ಷಕರಿಗೆ ಸೂಚನೆಗಳು.

(೬೩ನೇ ಪುಟದಿಂದ ಮುಂದೆ ಸಾಗಿದ್ದು.)

ಶಿಕ್ಷಕನು ಗುಂಡು, ಸಿಲಿಂಡರ, ಘನ (ಸಮಾನ ಉದ್ದಗಲ ಪಿಂಡಗಳುಳ್ಳ ಘನಾಕೃತಿ) ಇವುಗಳ ಆಕಾರ, ಬಣ್ಣ, ಗತಿಗಳನ್ನು ತಿಳಿಸಬೇಕು. ಈ ಮೂರೂ ಒಡವೆಗಳನ್ನು ಹುಡುಗರ ಕೈಯಲ್ಲಿ ಕೊಟ್ಟು, ಅವರಿಗೆ ಬಗೆಬಗೆಯ ರೀತಿಯಿಂದ ಒಂದಕ್ಕೊಂದು ಸರಿಹಚ್ಚಿ ನೋಡುವದಕ್ಕೆ ಹೇಳಿ, ಅವುಗಳಲ್ಲಿ ತೋರುವ ಭೇದವನ್ನು ಬಹಳ ಲಕ್ಷ್ಯಪೂರ್ವಕವಾಗಿ ವಿಂಗಡಿಸಬೇಕು. ಕೆಂಪು, ಕಿತ್ತಳೆ, ಹಳದಿ, ಹಸುರು, ನೀಲಿ, ಊದಿ ಈ ಮುಖ್ಯ ಬಣ್ಣಗಳನ್ನು ತೋರಿಸುವ ಆರು ಸಣ್ಣ ಸಣ್ಣ ಗುಂಡುಗಳನ್ನಾಗಲಿ, ಹಣ್ಣುಗಳನ್ನಾಗಲಿ, ಎಲೆಗಳನ್ನಾಗಲಿ ತಕ್ಕೊಂಡು, ಈ ಬಣ್ಣಗಳನ್ನು ಚನ್ನಾಗಿ ತಿಳಿಸಿಕೊಡಬೇಕು. ಉಳಿದ ಕಪ್ಪು, ಕಂದಿ, ಬೂದಿ, ಬಿಳಿ ಬಣ್ಣಗಳನ್ನು ಪಟದ ಮೇಲಿಂದ ಮುಂದೆ ಕಲಿಸಬಹುದು. ಆಕೃತಿಯಪೆಟ್ಟಿಗೆಯಲ್ಲಿರುವ ಇಪ್ಪತ್ತೇಳು ಸಣ್ಣ ಘನಗಳನ್ನು ತಕ್ಕೊಂಡು, ದೊಡ್ಡ ಘನಗಳನ್ನೂ ಬೇರೆ ತರದ ಆಕೃತಿಗಳನ್ನೂ ರಚಿಸಿ ತೋರಿಸಬೇಕು. ಬಳಿಕ ಅವುಗಳನ್ನು ಬೇರೆ ಬೇರೆ ಮಾಡಿ, ಹುಡುಗರಿಗೆ ಪುನಃ ಅವುಗಳನ್ನು ಮೊದಲಿನಂತೆ ರಚಿಸಲಿಕ್ಕೆ ಹೇಳಬೇಕು. ಭೂಮಿತಿಯ ಆಕೃ

ತಿಗಳ ಪಟದ ಕೆಳಭಾಗದಲ್ಲಿ ಘನಗಳ ಮತ್ತು ಘನಾಕೃತಿಗಳ ಬದಿಗಳನ್ನು ಬಿಚ್ಚಿ ಒಂದೇ ಪಾತಳಿಯಲ್ಲಿ ಬರುವಂತೆ ಇಟ್ಟರೆ ಆಗುವ ಆಕೃತಿಗಳು ತೋರಿಸಲ್ಪಟ್ಟವೆ. ಪ್ರತಿಒಬ್ಬ ಹುಡುಗನ ಕೈಯಲ್ಲಿ ಈ ಆಕೃತಿಗಳ ಕಾಗದದ ಮಾದರಿಗಳನ್ನು ಕೊಟ್ಟು, ಘನಗಳನ್ನಾಗಲಿ ಘನಾಕೃತಿಗಳನ್ನಾಗಲಿ ರಚಿಸುವದಾದರೆ, ಕಾಗದವನ್ನು ಹ್ಯಾಗೆ ಹ್ಯಾಗೆ ಮಡಿಚಬೇಕೆಂಬದನ್ನು ಕಲಿಸಬೇಕು. ಪಟದ ಮೇಲೆ ಬಿಂದುಗಳಿಂದ ತೋರಿಸಲ್ಪಟ್ಟ ರೇಖೆಗಳು ಕಾಗದವನ್ನು ಎಲ್ಲೆಲ್ಲಿ ಮಡಿಚಬೇಕೆಂಬದನ್ನು ತಿಳಿಸುತ್ತವೆ. ಆ ನಮೂನೆಗಳನ್ನು ನೋಡಿ, ಅದಕ್ಕೂ ದೊಡ್ಡ ನಮೂನೆಗಳನ್ನು ಶಿಕ್ಷಕನಾಗಲಿ ಹುಡುಗನಾಗಲಿ ಮಾಡಬೇಕು. ಅವನು ಅವುಗಳ ಆರು ಬದಿಗಳಿಗೆ ಆರು ತರದ ಮುಖ್ಯ ಬಣ್ಣಗಳನ್ನು ಹಚ್ಚಿ ಅಂಚುಗಳನ್ನು ಕೂಡಿಸಿ ಹೊಲಿಯಬಹುದು.

ಆಕೃತಿಯ ಪೆಟ್ಟಿಗೆಯೊಳಗಿನ ಉಳಿದ ಆಕೃತಿಗಳ ಜ್ಞಾನವನ್ನು ಬಹಳ ವಿಚಾರದಿಂದಲೂ ಎಚ್ಚರದಿಂದಲೂ ಮಾಡಿಕೊಡತಕ್ಕದ್ದು. ಅವು ೨ ಇಂಚು ಪಿಂಡವುಳ್ಳ ಕಟ್ಟಿಗೆಯಿಂದ ಮಾಡಲ್ಪಟ್ಟಿರುವಕಾರಣ, ನಿಜವಾಗಿ ಘನಾಕೃತಿಗಳೇ ಇರುತ್ತವೆ. ಅವುಗಳಲ್ಲಿ ತ್ರಿಕೋನದಂಥ ಒಂದು ಆಕೃತಿಯನ್ನು ಒಬ್ಬ ಹುಡುಗನ ಕೈಯಲ್ಲಿ ಕೊಡಲಾಗಿ, ಆ ಹುಡುಗನು ಅದನ್ನು ನೋಡಿ, ತ್ರಿಕೋನಕ್ಕೆ ಎರಡು ಮೈಗಳೂ ಮೂರು ಅಂಚುಗಳೂ, ಇಲ್ಲವೆ ಐದು ಮೈಗಳೂ ಆರು ಅಂಚುಗಳೂ, ಅಥವಾ ಐದು ಮೈಗಳೂ ಒಂಬತ್ತು ಅಂಚುಗಳೂ ಇರುತ್ತವೆಂದು ಹೇಳಬಹುದು. ತನ್ನ ಕೈಯಲ್ಲಿದ್ದ ಆಕೃತಿಯನ್ನು ನೋಡಿ ಅದರೊಳಗೆ ಇದ್ದ ಹಾಗೆ ಅವನು ಹೇಳಿದರೆ, ಅದು ತಪ್ಪು ಎಂದು ಆ ಹುಡುಗರಿಗೆ ದೋಷ ಕೊಡಲಿಕ್ಕೆ ಮಾರ್ಗವಿಲ್ಲ. ಇದರಿಂದ ಹುಡುಗರಿಗೆ ತ್ರಿಕೋನವೆಂದರೇನು ಎಂಬದು ಚನ್ನಾಗಿ ತಿಳಿಯದೆ, ಅವ

ರು ಗೊಂದಲದಲ್ಲಿ ಮಾತ್ರ ಬೀಳುವರು. ಆದದರಿಂದ, ಶಿಕ್ಷಕನು ಕಾಗದವನ್ನು ಕತ್ತರಿಸಿ, ಆ ಬೇರೆ ಬೇರೆ ಆಕೃತಿಗಳ ಮಾದರಿಗಳನ್ನು ಮಾಡಿ ಅವುಗಳನ್ನೇ ಯಾವಾಗಲೂ ಅವರ ಕೈಯಲ್ಲಿ ಕೊಡುತ್ತಿರಬೇಕು. ಕಾಗದದ ಆಕೃತಿಗಳನ್ನು ಕಟ್ಟಿಗೆಯ ಆಕೃತಿಗಳಂತೆ ತನ್ನ ವರ್ಗದ ಯಾವತ್ತು ಹುಡುಗರಿಗೆ ಸಾಲುವಷ್ಟು ತಾನು ಸ್ವತಃ ಕತ್ತರಿಸಿ ತಯಾರ ಮಾಡಿಟ್ಟಿರಬೇಕು. ಒಂದೊಂದು ಆಕೃತಿಯ ವಿಷಯಕ್ಕೆ ಕಲಿಸುವಾಗ ಪ್ರತಿ ಒಬ್ಬ ಹುಡುಗನ ಕೈಯಲ್ಲಿ ಅಂಥಾದೇ ಒಂದೊಂದು ಕಾಗದದ ಮಾದರಿಯನ್ನು ಕೊಟ್ಟಿರಲಿಕ್ಕೆ ಬೇಕು. ವರ್ತುಲ, ಚೌರಸ, ಕಾಟಕೋನಚೌಕೋನ, ಕೋನ, ತ್ರಿಕೋನ, ಅಂಡಾಕೃತಿ ಮುಂತಾದ ಭೂಮಿತಿಯೊಳಗಿನ ಆಕೃತಿಗಳ ಹೆಸರುಗಳನ್ನು ಹುಡುಗರಿಗೆ ಆರಂಭದಲ್ಲಿ ಕಲಿಸಬಾರದು. ಈ ಆಕೃತಿಗಳೆಲ್ಲ ಹುಡುಗರ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಿದ ಬಳಿಕ, ಈ ಹೆಸರುಗಳನ್ನು ಹೇಳಬಹುದು. ಮೊದಲು ಅವರಿಗೆ ತಿಳಿಯುವಂತೆ ರೂಢಿಯೊಳಗಿನ ಹೆಸರುಗಳನ್ನು ಹೇಳುವದು ಒಳ್ಳೇದು. ಉದಾಹರಣಾರ್ಥವಾಗಿ ವರ್ತುಲಕ್ಕೆ “ಬಳೆ” ಎಂಬ ಹೆಸರನ್ನಿಡಬಹುದು. ಕಾಟಕೋನ, ಲಘುಕೋನ, ವಿಶಾಲಕೋನ, ಸಮಭುಜತ್ರಿಕೋನ, ಸಮದ್ವಿಭುಜತ್ರಿಕೋನ, ವಿಷಮಭುಜತ್ರಿಕೋನ, ಕಾಟಕೋನತ್ರಿಕೋನ, ಲಘುಕೋನತ್ರಿಕೋನ, ಸಮಾಂತರ ರೇಖೆಗಳು, ಸಮಾಂತರಭುಜ ಚೌಕೋನ, ರಾಂಬಸ, ರಾಂಬೊಯಿಡ್, ಪಂಚಕೋನಾಕೃತಿ, ಷಟ್ಕೋನಾಕೃತಿ, ಅಷ್ಟಕೋನಾಕೃತಿ ಮುಂತಾದ ಹೆಸರುಗಳನ್ನು ಮೂಲಾಕ್ಷರದ ವರ್ಗಕ್ಕೆ ಎಂದಿಗೂ ಕಲಿಸಬಾರದು. ಇವುಗಳನ್ನೆಲ್ಲ ಆರನೇ ಇಯತ್ತೆಯವರ್ಗಕ್ಕೆ ಸಿದ್ಧಾಂತ ಆರಂಭ ಮಾಡಿದಮೇಲೆ ಕಲಿಸ

ಬಹುದು. ಈ ಆಕೃತಿಗಳನ್ನು ಕಲಿಸುವಾಗ ಶಿಕ್ಷಕನು ಚಿಕ್ಕ ಹುಡುಗರಿಗೆ ತಿಳಿಯುವಂಥ ರೂಢಿಯೊಳಗಿನ ಸುಲಭವಾದ ಹೆಸರುಗಳನ್ನು ಯೋಜಿಸತಕ್ಕದ್ದು.

ಬಣ್ಣದ ಪಟದ ಮೇಲಿಂದ ಚಿಕ್ಕ ಹುಡುಗರಿಗೆ ಮೊದಲು ಕೆಂಪು, ಕಿತ್ತಳೆ, ಹಳದಿ, ಹಸುರು, ನೀಲಿ, ಊದಿ* ಎಂಬ ಆರು ಮುಖ್ಯ ಬಣ್ಣಗಳನ್ನು ಮಾತ್ರ ತಿಳಿಸಿಕೊಡಬೇಕು. ಈ ಬಣ್ಣಗಳೂ ಇವುಗಳ ಹೆಸರುಗಳೂ ಚೆನ್ನಾಗಿ ತಿಳಿದು ದಿನಾಲು ಹುಡುಗರ ದೃಷ್ಟಿಗೆ ಬೀಳುವ ಪದಾರ್ಥಗಳಿಂದ ಇದು ಇಂಥಾ ಬಣ್ಣದ ಪದಾರ್ಥವೆಂದು ಗೊತ್ತು ಹಿಡಿಯುವಷ್ಟು ಜ್ಞಾನವಾದ ಬಳಿಕ, ಹುಡುಗರಿಗೆ ಪಟದ ಮೇಲೆ ತೋರಿಸಿರುವ ಮುಖ್ಯ ಬಣ್ಣಗಳ ಬೇರೆ ಬೇರೆ ಪ್ರಕಾರಗಳನ್ನು ಕಲಿಸಬಹುದು. ಆದರೆ ಈ ಬೇರೆ ಬೇರೆ ಪ್ರಕಾರದ ಬಣ್ಣಗಳ ಹೆಸರುಗಳನ್ನು ಮಾತ್ರ ಕಲಿಸಲಿಕ್ಕೆ ಯತ್ನಿಸಬಾರದು. ಈ ಮಿಶ್ರ ಬಣ್ಣಗಳಲ್ಲಿ ಯಾವದೊಂದು ಬಣ್ಣವು ಅವರು ದಿನಾಲು ನೋಡುವ ಯಾವದೊಂದು ಪದಾರ್ಥದ ಬಣ್ಣವನ್ನು ಹೋಲುತ್ತಿದ್ದರೆ ಇಂಥಾ ಬದನೆಯ ಬಣ್ಣದಂಥ ಬಣ್ಣ ಎಂದು ಮಾತ್ರ ಕಲಿಸಬಹುದು. ಸ್ವಲ್ಪ ಹಳದಿ ಬಣ್ಣವಿದ್ದರೆ ಹುಡುಗರಿಗೆ ಇದು ಲಿಂಬೇ ಹಣ್ಣಿನ ಬಣ್ಣ ಎಂಬ ಹೆಸರನ್ನು ಮಾತ್ರ ಹೇಳಿಕೊಡಬಹುದು. ಬಳಿಕ ಕಪ್ಪು, ಕಂದಿ, ಬೂದಿ, ಬಿಳೇ ಬಣ್ಣಗಳನ್ನು ಇದೇಪ್ರಕಾರ ಕಲಿಸಬೇಕು. ಕಟ್ಟಕಡೆಗೆ ಬಣ್ಣದ ಆಕೃತಿಗಳ ಪಟದ ಮೇಲಿಂದ ಆಕೃತಿಗಳನ್ನೂ ಬಣ್ಣಗಳನ್ನೂ ಕೂಡಿಸಿ ಒಮ್ಮೆಲೇ ಕಲಿಸಬೇಕು.

(ಮುಂದಕ್ಕೆ ಸಾಗುವದು.)

---

* ಈ ಆರು ಬಣ್ಣಗಳನ್ನು ಅರಿಥಮೆಟಿಕಾನದ ಗುಂಡುಗಳಿಂದಲೂ ತಿಳಿಸಬಹುದು.

NOTES ON GRAMMAR.

ಗ್ರಂಥದ ಮೇಲಿಂದ ವ್ಯಾಕರಣ ಹೇಳುವದು.

(೪೬ನೇ ಪುಟದಿಂದ ಮುಂದೆ ಸಾಗಿದ್ದು.)

ತೊನಸಿಗಳು—'ತೊನಸಿ' ರೂಢನಾಮ, ಇಕಾರಾಂತ, ನಪುಂಸಕಲಿಂಗ, ಪ್ರಥಮಾ ಬಹುವಚನ. ಇವರ ಅರ್ಥ—ಕರ್ತೃ, 'ಕೊಡುವದನ್ನು' ಎಂಬ ಕ್ರಿಯಾನಾಮಕ್ಕೆ.

ದನಗಳ—'ದನ' ರೂಢನಾಮ, ಅಕಾರಾಂತ, ನಪುಂಸಕಲಿಂಗ, ಷಷ್ಠೀ ಬಹುವಚನ. ಇದರ ಅರ್ಥಸಂಬಂಧ, 'ಸುತ್ತುಮುತ್ತು' ಎಂಬ ಕ್ರಿಯಾವಿಶೇಷಣಕ್ಕೆ.

ಸುತ್ತುಮುತ್ತು—ಸ್ಥಳವಾಚಕ ಕ್ರಿಯಾವಿಶೇಷಣಾವ್ಯಯ 'ಹಾರಾಡಿ' ಎಂಬ ಕ್ರಿಯೆಗೆ.

ಹಾರಾಡಿ—'ಹಾರಾಡು' ಎಂಬ ಅಕರ್ಮಕ ಧಾತುವಿನ ಭೂತ ಕ್ರಿಯಾನ್ಯೂನ, ಇದರ ಅರ್ಥ ರೀತಿ, 'ಉಪದ್ರವ ಕೊಡು' ಎಂಬ ಕ್ರಿಯೆಗೆ.

ಅವುಗಳಿಗೆ—'ಅದು' ದರ್ಶಕಸರ್ವನಾಮ, ನಪುಂಸಕಲಿಂಗ, ಚತುರ್ಥೀ ಬಹುವಚನ. ಇದರ ಅರ್ಥ ಸಂಪ್ರದಾನ, 'ಉಪದ್ರವಕೊಡು' ಎಂಬ ಕ್ರಿಯೆಗೆ.

ಉಪದ್ರವ ಕೊಡುವವದನ್ನು—'ಉಪದ್ರವ ಕೊಡುವದು' ಕ್ರಿಯಾನಾಮ, ನಪುಂಸಕಲಿಂಗ, ದ್ವಿತೀಯಾ ಏಕವಚನ. ಇವರಅರ್ಥ ಕರ್ಮ, 'ನೋಡಿದ್ದೀ' ಎಂಬ ಕ್ರಿಯೆಗೆ.

ನೋಡಿದ್ದೀ* ಆದೀತು—ಕ್ರಿಯಾಪದ, 'ಆಗು' ಧಾತು, ಅಕರ್ಮಕ, ಸಂಶಯಾರ್ಥ, ಭವಿಷ್ಯತ್ಕಾಲ, ಪ್ರಥಮ ಪುರುಷ, ನಪುಂಸಕಲಿಂಗ, ಏಕವಚನ.

"ಉಪ್ಪು ಮುಂತಾದ ಖನಿಜಗಳುಳ್ಳ ಪದಾರ್ಥಗಳೂ ನೀರೂ ಈ ತರದ ಆಹಾರಗಳಾಗಿವೆ."

ಈ ವಾಕ್ಯದಲ್ಲಿ 'ಪದಾರ್ಥಗಳೂ ನೀರೂ' ಕರ್ತೃ, 'ಇವೆ' ಕ್ರಿಯಾಪದ, ಅಕರ್ಮಕ ಕರ್ತರಿಪ್ರಯೋಗ.

ಉಪ್ಪು ಮುಂತಾದ—ಬಹುವ್ರೀಹಿವಿಶೇಷಣ, ಇದರ ವಿಶೇಷ್ಯ ಖನಿಜಗಳು.

ಖನಿಜಗಳುಳ್ಳ—ಗುಣವಾಚಕವಿಶೇಷಣ, ಇದರ ವಿಶೇಷ್ಯ ಪದಾರ್ಥಗಳು.

ಪದಾರ್ಥಗಳೂ—'ಪದಾರ್ಥ' ರೂಢನಾಮ, ಅಕಾರಾಂತ, ನಪುಂಸಕಲಿಂಗ, 'ಪದಾರ್ಥಗಳು' ಪ್ರಥಮಾ ಬಹುವಚನ. ಇದರ ಅರ್ಥ ಕರ್ತೃ, 'ಇವೆ' ಎಂಬ ಕ್ರಿಯೆಗೆ.

'ಊ' ಸಮುಚ್ಚಯಕ ನಿಪಾತ.

ನೀರೂ—'ನೀರು' ರೂಢನಾಮ, ಉಕಾರಾಂತ, ನಪುಂಸಕಲಿಂಗ, ಪ್ರಥಮಾ ಏಕವಚನ. ಇದರ ಅರ್ಥ ಕರ್ತೃ

'ಊ' ಸಮುಚ್ಚಯಕ ನಿಪಾತ.

ಈ ತರದ—ಗುಣವಿಶೇಷಣ, ಇದರ ವಿಶೇಷ್ಯ 'ಆಹಾರ'

ಆಹಾರಗಳಾಗಿ—ರೀತಿವಾಚಕ ಕ್ರಿಯಾವಿಶೇಷಣಾವ್ಯಯ.

---

* ಇದರ ಬಗ್ಗೆ ಮತಭೇದವಾಗಬಹುದು. ಈ ಬಗ್ಗೆ ಶಿಕ್ಷಕರು ತಮ್ಮ ಅಭಿಪ್ರಾಯ ತಿಳಿಸಿ ಚರ್ಚೆ ನಡಿಸುವದು ವಿಹಿತವು.

ಇವೆ–ಕ್ರಿಯಾಪದ 'ಇರು' ಧಾತು, ಅಕರ್ಮಕ, ಸಂಭವಾರ್ಥ, ವರ್ತಮಾನಕಾಲ, ಪ್ರಥಮಪುರುಷ, ನಪುಂಸಕಲಿಂಗ, ಬಹುವಚನ.

೧ "ಅದರಿಂದ ವಿದ್ಯುತ್ತಿನಿಂದಾಗುವ ಯಾವತ್ತು ಚಮತ್ಕಾರಗಳನ್ನು ನೋಡಬಹುದು."

ಈ ವಾಕ್ಯದಲ್ಲಿ "ನಾವು" ಅಧ್ಯಾಹೃತಕರ್ತೃ, 'ಚಮತ್ಕಾರಗಳನ್ನು' ಕರ್ಮ, 'ನೋಡಬಹುದು' ಕ್ರಿಯಾಪದ, ಭಾವಿ ಪ್ರಯೋಗ.

ಅವರಿಂದ–'ಅದು' ದರ್ಶಕಸರ್ವನಾಮ, ನಪುಂಸಕಲಿಂಗ, ತೃತೀಯಾ ಏಕವಚನ, ಇದರ ಅರ್ಥ ಸಾಧನ.

ವಿದ್ಯುತ್ತಿನಿಂದ–'ವಿದ್ಯುತ್ತು' ರೂಢನಾಮ, ಉಕಾರಾಂತ, ನಪುಂಸಕಲಿಂಗ, ತೃತೀಯಾ ಏಕವಚನ, ಇದರ ಅರ್ಥ ಕಾರಣ.

ಆಗುವ–'ಆಗು' ಎಂಬ ಅಕರ್ಮಕ ಧಾತುವಿನ ವರ್ತಮಾನ ಕೃದ್ವಾಚಕ ವಿಶೇಷಣ ಇದರ ವಿಶೇಷ್ಯ ಚಮತ್ಕಾರಗಳು.

ಯಾವತ್ತು–ಪರಿಮಾಣವಾಚಕವಿಶೇಷಣ, ಇದರ ವಿಶೇಷ್ಯ 'ಚಮತ್ಕಾರಗಳು'

ಚಮತ್ಕಾರಗಳನ್ನು–'ಚಮತ್ಕಾರ' ಭಾವವಾಚಕನಾಮ, ಅಕಾರಾಂತ, ನಪುಂಸಲಿಂಗ, ದ್ವಿತೀಯಾ ಬಹುವಚನ. ಇದರ ಅರ್ಥ ಕರ್ಮ.

ನೋಡಬಹುದು–ಕ್ರಿಯಾಪದ, 'ನೋಡು' ಧಾತು, ಅಕರ್ಮಕ, ಸಂಭವಾರ್ಥ, ನಪುಂಸಕಲಿಂಗ, ಪ್ರಥಮಪುರುಷ, ಏಕವಚನ.

(ಮುಂದಕ್ಕೆ ಸಾಗುವದು.)

DHARWAR TRAINING COLLEGE, TERMINAL EXAMINATION QUESTIONS.

KANARESE.

ಧಾರವಾಡ ಟ್ರೇನಿಂಗ ಕಾಲೇಜದ ಷಾಣ್ಮಾಸಿಕ ಪರೀಕ್ಷೆಯ ಕನ್ನಡ ಭಾಷಾವಿಷಯದ ಪ್ರಶ್ನೆಗಳು.

೧ನೇ ವರ್ಷದ ವರ್ಗ.

೧. ಕ್ಷ, ಜ್ಞ ವರ್ಣಗಳು ಮೂಲಾಕ್ಷರಗಳಲ್ಲಿ ಬರುವವೋ ಇಲ್ಲವೋ? ಕಾರಣಸಹಿತವಾಗಿ ಬರೀರಿ.

೨. ಯ, ವಕಾರಾದಿ ಕನ್ನಡಶಬ್ದಗಳು ಉಂಟೋ? ನಿಮ್ಮ ಉತ್ತರವನ್ನು ಉದಾಹರಣಗಳಿಂದ ಸ್ಪಷ್ಟಮಾಡಿರಿ.

೩. ಮ, ನ, ಣ ಕಾರಗಳಿಗೆ ಸ್ವರ ಪರವಾದರೆ ಒದಗುವ ಸಂಧಿವಿಕಾರಗಳನ್ನು ಉದಾಹರಣಗಳಸಹಿತವಾಗಿ ಬರೀರಿ. ೧೫

೪. ತದ್ಭವಗಳಲ್ಲಿ ಸಂಯುಕ್ತ ವರ್ಣಗಳಿಗೆ ಬರುವ ವಿಕಾರಗಳನ್ನೂ ಉದಾಹರಣಗಳನ್ನೂ ವಿವರಿಸಿರಿ. ೧೦

೫. ಅ, ಇಳಿ, ಎ, ಪು, ಇಕೆ, ಮ ಪ್ರತ್ಯಯಗಳಿಂದ ಉಂಟಾದ ಶಬ್ದಗಳನ್ನೂ ಕೆಲವು ಯಾವ ಅರ್ಥದವೆಂಬದನ್ನೂ ಬರೀರಿ. ೬

೬. ಅಟ್ಟು, ಅಳಿ, ಒಪ್ಪು, ಅರಿ, ದಿರ್ ಧಾತುಗಳಿಂದ ಉಂಟಾದ ಭಾವಾರ್ಥಕ ಶಬ್ದಗಳನ್ನೂ ಓದು, ಏರು, ಗಳಿಸು, ತಿನ್ನು, ಕಡಿ, ಕೆಡವು ಧಾತುಗಳಿಂದ ಉಂಟಾದ ಕರ್ತೃರ್ಥಕ ಶಬ್ದಗಳನ್ನೂ ಬರೀರಿ. ೧೧

೭. ಕೆಳಗಿನ ವಾಕ್ಯದ ಅರ್ಥವನ್ನು ಸ್ವಲ್ಪದರಲ್ಲಿ ಸ್ಪಷ್ಟವಾಗಿ ಬರೀರಿ. ೫

“ವಿಮಾನಗಳು ಹೊಗೆ ಬಂಡಿಗಳಂತೆ, ಪ್ರವಾಸಿಗಳನ್ನು ಯಾವ ದಿವಸ ಬೇಕಾದಲ್ಲಿಂದ ಬೇಕಾದಲ್ಲಿಗೆ ತೆಗೆದುಕೊಂಡು ಹೋಗುವವೋ ಆ ದಿವಸವು ಭೂಲೋಕಕ್ಕೆ ಸ್ವರ್ಗದ ಸ್ವರೂಪವನ್ನುಂಟುಮಾಡುವ ಯುಗದ ಮೊದಲಿನದಿವಸವೆಂದು ಎಣಿಸಲ್ಪಡುವದು.”

೮. ಪ್ರಾಚೀನ ದೇವಾಲಯಗಳು ಈ ಊರಲ್ಲಿ ಇದ್ದಷ್ಟೇ ಕ

ರ್ನಾಟಕದಲ್ಲಿ ಎಲ್ಲಿ ಇಲ್ಲೆಂದು ತೋರುತ್ತದೆ. ಈ ವಾಕ್ಯವನ್ನು ತಿದ್ದಿರಿ, ತಿದ್ದಲ್ಪಟ್ಟವಾಕ್ಯದ ಕಡೇ ನಾಲ್ಕು ಪದಗಳುಳ್ಳ ವಾಕ್ಯದ ವ್ಯಾಕರಣಹೇಳಿರಿ, ತಿದ್ದಿದವಾಕ್ಯಕ್ಕೂ ಕೊಟ್ಟವಾಕ್ಯಕ್ಕೂ ಇರುವ ಅರ್ಥಭೇದವನ್ನು ಹೇಳಿರಿ. ೧೨

೯. ಕೆಳಗಿನ ವಾಕ್ಯಗಳನ್ನು ತಿದ್ದಿ ಅದಕ್ಕೆ ಕಾರಣಗಳನ್ನು ಬರೀರಿ.

(ಅ) ಬಾಗಿಲಿಕ್ಕಿಕೊಂಡು ಕೋಣೆಯೊಳಗೆ ಅಡಿಗಿಯಮಾಡ ಹೋದರೆ, ಮೈಯಲ್ಲಿ ಬೆವರು ಸೋರಹತ್ತುತ್ತದೆ.

(ಬ) ತನುಜರನುಜರೊಳು ಕೋಪವಹಿಡಿಯದವ ಜಾಣ. ೪.

೧೦. ಬಿಸುಟನೈ ಬಳಿಕಡವಿಯೊಳಗಾ । ಯಸನಸೈರಿಸಲಾರದಾ
ಶ್ರಮ । ಋಷಿಗಳಿಡೆಯಲ್ಲಾಪ್ತದಮಯಂತಿಯನು ವಿಪಿ
ನದಲೀ ॥ ನುಸುಳಿದನು ಬಳಿಕೊಬ್ಬನೇಸಂಧಿಸಿದಕರ್ಕೋ
ಟಕನದೆಸೆಯಿಂ । ದಸುವನೀಗದೆಸಾರಿದನು ಋತುಪರ್ಣ
ಭೂಪತಿಯಾ ॥ ೧ ॥

ಬಂದುದೆನಗಾಹಾರ ಭಾಷೆನು । ತೆಂದು ಮಾಡಿದ ಸುಕೃ
ತವೋತಾ । ನಿಂದು ಕೈಗೂಡಿತ್ತಯತ್ನದಲೆನುತಪುಟನೆಗೆ
ಡೂ ॥ ಮುಂದೆನಿಂದನು ಮೃತ್ಯುವಿನವೋ । ಲಂದುಬಾ
ಯ್ದಿರ ದಡ್ಡವಿಸಿಗಿರಿ । ಯಂದದಲಿಗರ್ಜಿಸುತಘನಗಂಭೀ
ರನಾದದಲೀ ॥ ೨ ॥

ಈ ಎರಡೂ ಕವಿತೆಗಳನ್ನು ಅನ್ವಯಕ್ಕೆ ಸರಿಯಾಗಿ ಬರೀರಿ. ೧೦

೧೧. ನಳನು ನೀನಹುದೆನಲು ಕಣ್ಗಳ । ಜಲದಝಾಡಿಯಲಪ್ಪಿ
ತುರಗಾ । ನಳಿಯಹೃದಯವನರಿದನಾತನೊಳಕ್ಷಹೃದ
ಯವನೂ ॥ ನಳಮಹೀಪತಿಯರಿದನವನಿಂ । ದೊಲವು
ಮಿಗೆರಥವೇರಿಭೂಮಿಪ । ತಿಲಕರಿಬ್ಬರುಸಾರಿದರು ಭೀ
ಮಕನಪಟ್ಟಣವಾ ॥ ೧ ॥

ಈ ಪದ್ಯದೊಳಗಿನ ಸಮಾಸಗಳ ಹೆಸರುಗಳನ್ನು ಹೇಳಿ ವಿಗ್ರಹ ಮಾಡಿರಿ.

೧೫

೨ನೇ ವರ್ಷದ ವರ್ಗ.

೧. ಪ್ರಕೃತಿ ಸ್ವರಲೋಪದ ಐದು ಸಧಿ ನಿಯಮಗಳನ್ನೂ ಅವುಗಳ ಅಪವಾದಗಳನ್ನೂ ಉದಾಹರಣಗಳಸಹಿತ ಬರೀರಿ. ೧೦

೨. ಹಳೆಗನ್ನಡ ಶಬ್ದಗಳು ಹೊಸಗನ್ನಡದಲ್ಲಿ ಬರುವಾಗಆಗುವ ವಿಕಾರಗಳನ್ನು ಬರೆದು, ಉದಾಹರಣಗಳಿಂದ ಸ್ಪಷ್ಟ ಮಾಡಿರಿ. ೫

೩. ಸಂಸ್ಕೃತದ ಯಾವ ಯಾವ ಶಬ್ದಗಳು ಕನ್ನಡದಲ್ಲಿ ಬರುವದಿಲ್ಲ; ಉದಾಹರಣಗಳನ್ನು ಕೊಡಿರಿ. ಮತ್ತು ಅಪವಾದಗಳನ್ನು ಹೇಳಿ ಉದಾಹರಣಗಳನ್ನು ಕೊಡಿರಿ. ೫

೪. ಅಕಾರಾಂತ ಬಂಧುವಾಚಕಗಳಿಗೂ ಸರ್ವನಾಮಗಳಿಗೂ ವಿಭಕ್ತಿಪ್ರತ್ಯಯಗಳನ್ನು ಹಚ್ಚುವ ನಿಯಮ ಹೇಳಿ, ಹಳೆಗನ್ನಡ ಹೊಸಗನ್ನಡ ವಿಭಕ್ತಿರೂಪಗಳನ್ನು ಬರೀರಿ. ೧

೫. ಆ, ಉತ್, ನಿ, ನಿರ್, ಪರಿ, ಈ ಉಪಸರ್ಗಗಳನ್ನು ಹಚ್ಚಿ ಉಂಟಾಗುವ ಅರ್ಥ ಭೇದಗಳನ್ನು ತೋರಿಸಿರಿ. ೧೦

೬. ಭಾವಪ್ರತ್ಯಯಗಳು ಎಂಥ ಶಬ್ದಗಳ ಮೇಲೆ ಬರುವದಿಲ್ಲ? ಅ, ಅನ ಎಂಬ ಭಾವಪ್ರತ್ಯಯಗಳಿಂದಾದ ಶಬ್ದಗಳು ಸಂಸ್ಕೃತದ ಸ್ತ್ರೀಲಿಂಗಗಳು ಯಾವಾಗ ಆಗುವವು?

೭. ಇದು ಶುದ್ಧಾವಸ್ಥೆಯಲ್ಲಿ ಮೇಣದಂತೆ ಮೃದು, ಅರ್ಧಪಾರದರ್ಶಕ, ವರ್ಣಹೀನ ಇರುತ್ತದೆ. ಈ ವಾಕ್ಯದ ವ್ಯಾಕರಣ ಹೇಳಿರಿ. ೧೦

ಕೆಳಗಿನ ವಾಕ್ಯಗಳನ್ನು ತಿದ್ದಿ ಕಾರಣಗಳನ್ನು ಬರೀರಿ. ೨೦

(ಅ) ಹೊಟ್ಟೆ ಹೊರಕೊಳ್ಳುವ ಪೂರ್ತೆ ನೀವುಮಾಡತಕ್ಕ ಅಭ್ಯಾಸವು ತಕ್ಕಮಟ್ಟಿಗೆ ಆಗಿದೆ; ಆದರೆ ಮನುಷ್ಯಜನ್ಮಕ್ಕೆ ಬಂದು ಹ್ಯಾಗಾದರೂ ಹೊಟ್ಟೆಹೊರಕೊಂಡರೆ, ಕೃತಕೃತ್ಯರಾದಿರಿ, ಎಂದು ತಿಳಿಯುವದು ಎಷ್ಟುಮಾತ್ರವೂ ಸರಿಯಲ್ಲ.

(ಬ) ಇಲ್ಲಿ ಇದನ್ನು ಕುರಿತು ಹೇಳತಕ್ಕದ್ದು ಅವಶ್ಯ ತೋರುತ್ತದೆ.

(ಕ) ಐದನೇ ಪುಸ್ತಕದಲ್ಲಿ ಸೃಷ್ಟಪದಾರ್ಥಗಳೂ, ಅವುಗಳ ಗುಣಧರ್ಮಗಳೂ, ಹವೆ, ನಾದ, ಶಕೆ, ಪ್ರಕಾಶ, ವಿದ್ಯುತ್, ಮುಂತಾದ ಸಂಗತಿಗಳ ಜ್ಞಾನವನ್ನು ಮಾಡಿಕೊಟ್ಟದ್ದರಿಂದ ನಿಮ್ಮ ಜಿಜ್ಞಾಸೆಯು ಹೆಚ್ಚು ಬಲಪಡಲಿಕ್ಕೆ ಕಾರಣವಾಯಿತು.

೯. ಕೆಳಗಿನ ಕವಿತೆಯ ಪೂರ್ವಾಪರ ಸಂಬಂಧವನ್ನೂ, ಭಾವಾರ್ಥವನ್ನೂ ಬರೀರಿ.

ಅಸಮಸಾಯಕನೆಂದು ಬಣ್ಣಿಪರ್ನಿನ್ನನಿಂ । ದಸಮಸಾ
ಯಕನಾನೊನೀನೊ ನೋಡೆನುತಪೊಸ । ಮಸೆಯವಿಸಿಖಂ
ಗಳಂ ಸುರಿದಂಸುಧನ್ವನಾತನಕಣೆಗಳಂ ಖಂಡಿಸಿ ॥ ವಸು
ಮತಿಗೆವೀರನೀನಸಮಸಾಯಕನಾದೊ । ಡುಸುರೆನಗೆಯ
ಸಮಸಾಯಕರಾರ್ತ್ರಿಲೋಕದೋ । ಳ್ಪುಸಿಯಬೇಡೆನುತ
ಕೂರಂಬುಗಳನಂಬರಕೆತುಂಬಿದಂ ಶಂಬರಾರಿ ॥ ೧ ॥

ಕೆಳಗೆ ಬರೆದ ಕವಿತೆಯ ಪದಗಳನ್ನು ಅನ್ವಯದಂತೆ ಇಟ್ಟುತೋರಿಸಿರಿ. ಮತ್ತು ಪೂರ್ವಾಪರ ಸಂಬಂಧವನ್ನೂ ಭಾವಾರ್ಥವನ್ನೂ ಬರೀರಿ. ೧೦

ಬಲ್ಗೆನನುಸಾಲ್ವನೆಂದಳವಿಯಂಬಿಟ್ಟಡಾಂ । ಬಿಲ್ಲಾಳೆ ಪೇಳ್ಧ
ರ್ಮರಾಜನವರಂಕಾಣ್ಬ । ನಲ್ಲಕಾಣಿಸುವೆನೀಗಳೆಧರ್ಮರಾಜನ
ವರಂತರಹರಿಸ್ಸುನಿನ್ನನೂ ॥ಎಲ್ಲಿತೋರಿಸುರಜ್ರಿಗಸದಳದಬಲ್ಮೆ
ಯುಂ । ಕೊಲ್ಲಬೇಕಾದೊಡಿದ್ದಪೆನೆನುತಕೋಲ್ಗಳಂ । ಚಲ್ಲಿದಂ
ಹಂಸಧ್ವಜನಸುತಂ ಕಾಸಿರಾಜನಸುತಂ ಘಾಸಿಯಾಗೆ ॥ ೧ ॥

ಕೆಳಗಿನ ಪದ್ಯದ ಪದಚ್ಛೇದ ಮಾಡಿ ಬರೀರಿ. ಮತ್ತು ಅದರೊಳಗಿನ ಸಮಾಸಗಳನ್ನೂ ವಿಗ್ರಹಗಳನ್ನೂ ಬರೀರಿ.

ಕಾದವುಭಟರಕೈದುಗಳ್ಪಿಡಿಯಲರಿದೆನೆ । ಲ್ಕಾದವು ಶರಾಗ್ನಿ
ಗಾಹುತಿಗಜಹಯಾದಿಗ । ಳ್ಕಾದವು ಧನಂಜಯನ ಮುಂದೆ
ಮ್ಮ ಬಲಮೊಂದುಕಲಿಸುಧನ್ವಂಕೆರಳ್ದು ॥ ಕೋದಂಡಕತಿವೇ
ಗದೊಳ್ವಾರುಣಾಸ್ತ್ರಮುಂ । ಕೋದಂಡಲೆವಶಿಖಿಜ್ವಾಲೆಯುಂ
ನಿಲಿಸಲಿದ್ । ಕೋದಂಡಮುನ್ನೊಳೆನುತಾರ್ದು ತೆಗೆದೆಚ್ಚಡು
ರಿನಂದಿಜಲಮಯಮಾಗಲು ॥ ೧ ॥

೩ನೇ ವರ್ಷದವರ್ಗ.

೧ ಕೆಳಗೆ ಬರೆದಶಬ್ದಗಳ ವಿಗ್ರಹ, ಅರ್ಥ, ಸಂಧಿನಿಯಮಗಳನ್ನು ಬರೀರಿ. ೧೮

ಇಂಚರ, ಒಚ್ಚೇರೆ, ಪೊಂಜುರಿಗೆ, ತಣ್ಣೀರು, ಪೂಸ್ರಣಾಂಬಂ, ಪರಿಕಾಲ್, ಇರ್ಭಾಸಿರಂ, ಕುಡುವಿಲ್ಲಂ, ನಾಳ್ಪಗರಣಮುಂ, ಕಾಳ್ಪರಂ, ಕೈವಿಡಿ, ನರಂಬೊಲ್.

೨. ತದ್ಭವಗಳಲ್ಲಿ ಗ, ಜ, ಡ, ದ, ಸ, ಣ, ವರ್ಣಗಳಲ್ಲಿ ಪ್ರತಿಯೊಂದು ಯಾವ ಯಾವ ವರ್ಣಗಳಿಗೆ ಆದೇಶವಾಗಿ ಬರುತ್ತದೆ? ಉದಾಹರಣಗಳನ್ನು ಕೊಡಿರಿ. ೬

೩. ಸಂಸ್ಕೃತ ಅಕಾರಾಂತ ಇಕಾರಾಂತ ಶಬ್ದಗಳು ಕನ್ನಡ ವಿಭಕ್ತಿಗಳನ್ನು ಹೊಂದುವಾಗ ಅವುಗಳ ಅಂತ್ಯವರ್ಣಗಳಿಗೆ ಆಗುವ ವಿಕಾರಗಳನ್ನು ಬರೀರಿ. ಮತ್ತು ಎಂಥ ದೀರ್ಘಾಂತ ಶಬ್ದಗಳು ವಿಕಾರವಾಗದೆ ಕನ್ನಡ ವಿಭಕ್ತಿಗಳನ್ನು ಹೊಂದುವವು? ೧೦

೪. ಅರೆ ಶಬ್ದದಮೂರೂ ಲಿಂಗಗಳ ಹಳೆಗನ್ನಡ ವಿಭಕ್ತಿರೂಪಗಳನ್ನು ಬರೀರಿ. ಪುಂಸ್ತ್ರೀಲಿಂಗಗಳಲ್ಲಿ ಏಕವಚನವಾಗುವದೋ, ಇಲ್ಲವೋ? ಕಾರಣ ಬರೀರಿ. ೮

೫. ಧಾತುಗಳನ್ನು ಹುಟ್ಟಿಸುವ ಪ್ರತ್ಯಯಗಳನ್ನು ಹೇಳಿ, ಅವುಗಳಿಂದ ಹೊಸಧಾತುಗಳನ್ನು ಹುಟ್ಟಿಸಿ ತೋರಿಸಿರಿ. ೫

೬. ದ, ದಪಗಳು ಯಾವ ಯಾವ ಆಖ್ಯಾತಪ್ರತ್ಯಯಗಳ ಪೂರ್ವದಲ್ಲಿ ಧಾತುಗಳ ಮೇಲೆ ಬರುತ್ತವೆ? ಅವುಬರುವಾಗ ನಡುವೆ ಬರುವ ಆಗಮ ಯಾವದು? ಅದರನಿಯಮವನ್ನು ಉದಾಹರಣಸಹಿತ ಬರೀರಿ. ೭

೭. ಸಲಿಗೆ, ಸಲೆ, ಸಾಲ, ಮಿಗೆ, ಮಿಾನ್, ಪೊಯ್ತು, ನಲ್ಲ, ನೆಲೆ, ಈ ಶಬ್ದಗಳ ಉತ್ಪತ್ತಿ ಬರೀರಿ. ಪ್ರಕೃತಿ, ಪ್ರತ್ಯಯದ ಅರ್ಥ, ಶಬ್ದದ ಅರ್ಥ, ಇವೆಲ್ಲ ಇರಬೇಕು. ೧೦

೮. ಸಂಸ್ಕೃತ ಶಬ್ದದ ವ್ಯುತ್ಪತ್ತಿಯಲ್ಲಿ ಅನಭೂತಾರ್ಥಕ ಪ್ರತ್ಯಯಗಳು ಯಾವ ಯಾವ ಅರ್ಥಗಳಲ್ಲಿ ಪ್ರಕೃತಿಗಳ ಮೇ

ಲೆ ಬರುತ್ತವೆ? ಉದಾಹರಣಸಹಿತ ಹೇಳಿರಿ. ಮತ್ತು ತನ, ತ್ವ, ಯ, ಈ ಮೂರೂ ಭಾವಾರ್ಥಕಪ್ರತ್ಯಯಗಳಲ್ಲಿ ಯಾವ ಎರಡು ಪ್ರತ್ಯಯಗಳಿಗೆ ಯಾವತರದ ಸಾಮ್ಯವದೆ? ಉದಾಹರಣಗಳಸಹಿತ ಬರೀರಿ. ೧೦

ಗದ್ಯಪದ್ಯಗಳು.

೧. ಕೆಳಗಿನ ವಾಕ್ಯಗಳ ಅರ್ಥ ಬರೀರಿ.

(ಅ). ಬಿಲ್ಲುಗಳಲ್ಲಿ ಗುಣಭೇದವಿತ್ತಲ್ಲದೆ ಶೂದ್ರಕನ ರಾಜ್ಯದಲ್ಲಿದ್ದಿಲ್ಲ.

(ಬ). ಚಂದ್ರ ಖಡ್ಗ ಮೈಜೋಡುಗಳಲ್ಲಿ ಕಲಂಕವಿತ್ತಲ್ಲದೆ ಅಲ್ಲಿ ಇದ್ದಿಲ್ಲ.

(ಕ). ಒಂದು ದಿನ ಮುಂಜಾವಿನಲ್ಲಿ ಸೂರ್ಯನು ಮೂಡಣದಿಂದ ಮೇಲಕ್ಕೇರಿ ಬರುವಾಗ ಕಾಂತಿಗುಂದಿದ ಚಂದ್ರನು ವಿರಹ ದುಃಖವನ್ನು ಸೈರಿಸಲಾರದೆ, ಪಡುವಣ ಕಡಲ ಕಡೆಯುದಂಡೆಯು ಕಡೆಗೆ ಇಳಿಯುಹತ್ತಿದನು.

೨. ಕೆಳಗಿನ ವಾಕ್ಯಗಳನ್ನು ತಿದ್ದಿರಿ. ಮತ್ತು ತಿದ್ದಿದ್ದಕ್ಕೆ ಕಾರಣ ಹೇಳಿರಿ. ಪರಭಾಷೆಯ ಶಬ್ದಗಳಿಗೆ ಬದಲಾಗಿ ಅಚ್ಚಗನ್ನಡ ಶಬ್ದಗಳನ್ನು ಹಾಕಿರಿ.

(ಅ). ವಿದ್ಯಾರ್ಥಿಗಳ ನಡೆನುಡಿಗಳನ್ನು ತಿದ್ದುವದು ಮತ್ತು ಬುದ್ಧಿ ಬಲಿಸುವದು ಇದು ಮುಖ್ಯವಾದ ಕೆಲಸವು.

(ಬ). ಪುಚ್ಛಗಳು ಬಲಿತಿದ್ದಿಲ್ಲಾದ್ದರಿಂದ ನನಗೆ ಹಾರುವಶಕ್ತಿ ಇಲ್ಲದ ಮೂಲಕವಾಗಿ ನಾನೂ ನನ್ನ ತಂದೆಯೂ ನಮ್ಮ ಗೂಡಿನಲ್ಲಿ ಸ್ವಸ್ಥವಾಗಿ ಕೂತುಕೊಂಡೆವು.

(ಕ). ತುಕಾರಾಮ ಮುಂತಾದವರು ದರಿದ್ರಾವಸ್ಥೆಯಲ್ಲಿದ್ದಾಗ್ಯೂ ತೃಪ್ತಿಯುಳ್ಳವರಾಗಿದ್ದರಿಂದ ಅವರು ಸುಖದಿಂದ ಕಾಲಕಳೆದರು.

(ಡ). ಮಂಜಿನ ಹನಿಗಳಿಂದ ಯುಕ್ತವಾಗಿ ತಂಪಾದಂಥ ತಾ

ಪರೆ ಗೊಳದಮೇಲೆ ಹಾದು ತಂಪಾದ ತಂಗಾಳಿಬೀಸ ಹತ್ತಿತು.

೩. ಕೆಳಗಿನ ಕಂದದ ಅನ್ವಯವನ್ನು ಬರೆದು ಅರ್ಥವನ್ನು ಸ್ಪಷ್ಟವಾಗಿ ಬರೀರಿ?

(ಅ) ಕಂದ॥ ಮೊರೆನಳಿನಿಯುರವಮಿಷದಿಂ । ದರವಿಂಡಿಸಿಪಾಡೆ
ಮುಚ್ಚಿ ಮುತ್ತಿನಸರವುಂ ॥ ಸರಸಿತೆರೆಗೈಯ್ಯಾಳೀವಂ ।
ತಿರಜಲಕಣಮಾಲೆ ಮೇಲದೇಂರಂಜಿಸಿತೋ ॥ ೧ ॥

(ಬ). ಕೆಳಗಿನ ಕವಿತೆಯ ಅನ್ವಯವನ್ನೂ ಅರ್ಥವನ್ನೂ ಬರೀರಿ. ಮತ್ತು ಕವಿತ್ವದಲ್ಲಿ ವ್ಯಾಕರಣ ಸಂಬಂಧದ ದೋಷ ಇದ್ದರೆ ತಿದ್ದಿರಿ.

ದೇವಿನೋಡೀತನು ಭವಾನೀ । ದೇವಿಯುರಸನು ಗುಹಗಣಪ
ಮು । ಖ್ಯಾದಿ ಭೂತಪ್ರಮಥಗಣವಿದೆ ನೋಡುನೀನವರಾ ॥
ತೀವಿಕೊಂಡಿದೆ ಮುಂದೆವರರಾ । ಜೀವ ಭವಸನಕಾದಿಗಳು
ಸುರದೇವ ಮುಖ್ಯಸಮಸ್ತರಿವರನು ನೋಡುನೀನೆಂದಾ ॥೧॥

(ಕ). ಕೆಳಗಿನ ಕವಿತೆಯೊಳಗಿನ ಅನ್ವಯಾರ್ಥವನ್ನೂ, ಅದರೊಳಗಿನ ಸಮಾಸಗಳನ್ನೂ, ಅವುಗಳ ವಿಗ್ರಹಗಳನ್ನೂ ಬರೀರಿ.

ಕೊರದವಂಗೋಪಾಂಗಮುಂ ಪಾರ್ಥನಂಬುಗಳ್ । ತೆರೆದ
ಜಾಳಾಂದ್ರ ದಂತಾಯ್ತುಗಿದ ಬಟ್ಟೆಗಳ್ । ಕರೆದ ಪೇರ್ಮು
ಳೆಯಿಂದನೆನೆದಜಾಜಿನಗಿರಿಯೊಳಿಳಿವಕೆಂಬೋನಲ್ಗಳ॥ ತೆರೆದ
ಲೆಸೆದವು ರಕ್ತಧಾರೆಗಳ್ಕಾಯದೋ । ಕ್ರೂರದನೊಡಲಂ ನಿ
ಮಿಷಕೊಡನೆತರಹರಿಸಿದಂ । ಜರದನರ್ಜುನನಂರಣಾಗ್ರದೋ
ಳ್ಕ್ರೂರದಲಿಸಿ ಬಭ್ರುವಾಹನಂಕನಲ್ದು ॥ ೧ ॥

ಅವಶ್ಯ ಲಕ್ಷಕೊಡಿರಿ ಮತ್ತು [illegible] ಬಿಡಬೇಡಿರಿ!

ಅಯ್ಯಾ, ವೀರಶೈವ ಮತದಲ್ಲಿ ಧುರೀಣರಾದ × × × ಬಂಧುಗಳಿರಾ! ನೀವು ಈಗ ಪಡತಕ್ಕ ಕಷ್ಟ ಶ್ರಮಗಳನ್ನು ನೋಡಿ, ನಮ್ಮ ಮತೋತ್ಪತ್ತಿಯ ನಿಶ್ಚಯವನ್ನೂ ವೃದ್ಧಿಯನ್ನೂ ಮಾಡಬೇಕೆಂದು ರಾ. ಬಾ. ಗುರುಸಿದ್ದಪ್ಪಾ ಅಣ್ಣಾ ಡಿ.॥ ಡಿ.॥ ಕಲೆಕ್ಟರ್ ಮತ್ತು ರಾ. ಸಾ. ರುದ್ರಗೌಡಾ ಅಣ್ಣಾ ದಪ್ತರದಾರ ಇವರು ಬಹು ಶ್ರಮ ಪಟ್ಟು ನಮ್ಮ ಮತವನ್ನು ಉದ್ಧರಿಸಿ, ಆ ಸಂಬಂಧವಾಗಿ ಈಗ ೩ ವರ್ಷದ ಕೆಳಗೆ ಧಾರವಾಡದಲ್ಲಿ ಒಂದು ಸಭೆಯನ್ನು ಏರ್ಪಡಿಸಿ ಅದರಲ್ಲಿ ದೊಡ್ಡ ದೊಡ್ಡ ವಿದ್ವಾಂಸರನ್ನು ತರಿಸಿ, ಅವರಿಂದ ವೇದಾಗಮಪುರಾಣಾಂತರ್ಗತವಾದ ನಿಮ್ಮ ಮತದ "ವೀರಶೈವಾಚಾರ ನಿರ್ಣಯ ಚಿಂತಾಮಣಿ" ಎಂಬ ಪುಸ್ತಕವನ್ನು ರಾ. ರಾ. ರಘಪ್ಪಣ್ಣಾ ವಡ್ಡಿ ಇವರಿಂದ ಬರಸಿ ಒಳ್ಳೇ ದಪ್ಪ ಕಾಗದಮೇಲೆ ಸುವಾಚ್ಯ ಅಕ್ಷರಗಳಿಂದ ಮುದ್ರಿಸಲುಪಕ್ರಮಿಸಿದ್ದಾರೆ, ಅದರೊಳಗೆ ಅಡಗಿರುವ ವಿಷಯಂಗಳು:—

೧. ಮತವು ಯಾವಕಾಲದಲ್ಲಿ ಯಾವ ಪ್ರಕಾರ ನಡಕೊಂತ ಬಂದ ಸವಿಸ್ತರ.

೨. ಪಂಚಾಚಾರ್ಯ ಉತ್ಪತ್ತಿ ಆಗಮಪ್ರಕಾರ.

೩. ಲಿಂಗಧಾರಣವಿಧಾನ, ವಿವಾಹವಿಧಿ, ಪಾಠಶಾಲಾ ಸ್ಥಾಪನೆಯಿಂತು ಮರಣದವರೆಯಂತರ ಮಾಡತಕ್ಕ ಸಂಸ್ಕಾರಗಳನ್ನೂ ಸರಿಯಾಗಿ ವೇದೋಕ್ತ ವಿಧಿಪ್ರಕಾರ ಬರೆದು ಅರ್ಥಸಹ ಗ್ರಂಥರಚನೆಕ್ಕೆ ಪ್ರಾರಂಭ ವಾಗಿದೆ, ಇದು ಡೆಮಿ ಅಷ್ಟಪತ್ರಿ ಸಾಧಾರಣ ೬೦೦ ಪೃಷ್ಟಗಳಾಗುವವು. ಇದರ ಮುಂಗಡ ವರ್ಗಣಿ ಅಂದರೆ ಬರುವ [illegible]ಂಗಳು ಪೂರೈಸುವದರೊಳಗೆ ಕಳುಹಿಸಿದರೆ ಟಪಾಲು ಹಾಸಲು ಸಹಿತ ವಂದು ರೂಪಾಯಿ ಯಂತು ಅಷ್ಟೆ. ಹಿಂದಿನಿಂದ ಹೆಚ್ಚು ಬೀಳುವದು. ಈ ಅಮೋಲ್ಯ ಪುಸ್ತಕವನ್ನೂ ಸಂಗ್ರಹಿಸದೆ ಬಿಡಬೇಡಿರಿ. ಇದರಿಂದ ನಿಮ್ಮ ಮತದ ಸರಿ ತಿಳಿಯುವದಲ್ಲದೆ ನಿಮಗೆ ಗೊತ್ತಿಲ್ಲದ ಸಂಗತಿಗಳು ಸಹ ಬಂದವೆ. ಇದನ್ನೂ ನಿಮ್ಮ ಸ್ನೇಹಿತರಿಗೂ ನಿಮ್ಮ ಪುರಮಸ್ತರಿಗೂ ತಿಳಿಸಿ ಅವರಿಂದ ಮತ್ತು ನಿಮ್ಮ ಇತರ ಸ್ನೇಹಿತರಿಂದ ಇನ್ನೂ ಅನೇಕ ಹಸ್ತದಿಂದ ಸಹಾಯ ಮಾಡಿ ಈ ಕೆಲಸವನ್ನೂ ನೆರವೇರಿಸುವದು ತಮಗೆ ಕೂಡಿದ್ದೆಯೆಂದು ಕೋರುವ,

ಧಾರವಾಡ, ಚನ್ನವೀರ ಫಕೀರಪ್ಪ,
28–4–90. { ಪ್ರೊಪ್ರೈಟರ್, ಕರ್ನಾಟಕ ಬುಕ್ ಡಿಪೋ ಪ್ರೆಸ್.

ಪುಸ್ತಕ ಮಾರಲಿಕ್ಕೆ ಸಿದ್ಧವಾಗಿದೆ.

ಶಬ್ದಮಂಜರಿ ಕೋಶವು:—ಈ ಪುಸ್ತಕವನ್ನು ಕೈ. ವಾ. ಗಂಗಾಧರ ಮಡಿವಾಳೇಶ್ವರ ತುರಮರಿ ಇವರು ರಚಿಸಿದ್ದು, ಇದರ ಪ್ರತಿಗಳು ಈಗ ಜನರಿಗೆ ಸಿಗುವದು ದುರ್ಲಭವಾದ್ದರಿಂದ, ಅವನ್ನು ಒಳ್ಳೇ ದಪ್ಪ ಕಾಗದದ ಮೇಲೆ ಸುವಾಚ್ಯ ಮೊಳೆಗಳಿಂದ ಛಾಪಿಸಿ, ಮೊದಲಿಗಿಂತಲೂ ೫೦೦೦ ಶಬ್ದಗಳನ್ನೂ ಶಬ್ದವ್ಯುತ್ಪತ್ತಿಯನ್ನೂ ಹೆಚ್ಚಿಗೆ ಹಾಕಿ ತಯಾರು ಮಾಡಿದ್ದೇವೆ. ಅದರ ಬೆಲೆ ೪ ರೂಪಾಯಿ, ಟಪಾಲ ಹಾಸಲು ೪ ಆಣೆ, ಪುಸ್ತಕವು ಸಂಗ್ರಹಕ್ಕೆ ಎಷ್ಟು ಯೋಗ್ಯವಾದದ್ದೆಂಬದು ಅದನ್ನು ನೋಡಿದರೆ ತಿಳಿಯುವದು.

ಧಾರವಾಡ, 28–4–90.

ಚನ್ನವೀರ ಫಕೀರಪ್ಪ,
ಪ್ರೊಪ್ರೈಟರ್, ಕರ್ನಾಟಕ ಬುಕ್‌ಡಿಪೋ ಪ್ರೆಸ್

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದನೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಮೇ ೧೮೯೦. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ಇಲಾಖೆಯಲ್ಲಿ ನಡೆಯುವ ದೇಶೀಯ ಭಾಷೆಗಳನ್ನು ಯುನಿವರ್ಸಿಟಿಯಲ್ಲಿ ಸೇರಿಸುವದಕ್ಕಾಗಿ ಏನಾದರೂ ವಿಶೇಷ ಪ್ರಯತ್ನ ಮಾಡಬೇಕೆಂದು ಪುಣೆಯೊಳಗಿನ ಕೆಲ ಗೃಹಸ್ಥರ ಮನಸಿನಲ್ಲಿ ಬಂದದೆ. ಮತ್ತು ಈ ವಿಷಯವನ್ನು ಕುರಿತು ಆಲೋಚನೆ ಮಾಡುವದಕ್ಕಾಗಿ ಜೂನ ತಿಂಗಳ ಆರಂಭಕ್ಕೆ ಪುಣೆಯಲ್ಲಿ ಒಂದು ಸಭೆ ನೆರೆಯತಕ್ಕದ್ದದೆ. ಈ ಸಭೆಯ ಅಧ್ಯಕ್ಷಸ್ಥಾನವನ್ನು ಎಲ್ಫಿನ್ಸ್ಟನ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ರಾ. ಸಾ. ವಾಮನ ಆಬಾಜಿ ಮೋಡಕ ಎಂಬವರು ಸ್ವೀಕರಿಸುವರೆಂತಲೂ ಪ್ರೊಫೆಸರ ಗೋಪಾಳ ಗಣೇಶ ಅಗರಕರ ಮತ್ತು ಪ್ರಿನ್ಸಿಪಾಲ ವಾಮನ ಶಿವರಾಮ ಆಪಟೆ ಎಂಬವರು ಆನರರಿ ಸೆಕ್ರೆಟರಿಗಳಾಗುವರೆಂತಲೂ ಕೇಳುತ್ತೇವೆ.

ಡೆಕ್ಕನ್‌ಕಾಲೇಜದ ವಿದ್ಯಾರ್ಥಿಗಳು ಫೀ ಕಡಿಮೆ ಮಾಡಬೇಕೆಂದು ಮುಂಬಯಿ ಸರಕಾರದವರಿಗೆ ಅರ್ಜಿ ಮಾಡಿಕೊಂಡಿದ್ದರು. ಈ ವಿಷಯವಲ್ಲಿ ಆಲೋಚನೆ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸುವದಕ್ಕಾಗಿ, ಸರಕಾರದವರು ಮೆ॥ ಚಾಟಫೀಲ್ಡ ಸಾಹೇಬ, ಪ್ರೊಫೆಸರ ವರ್ಡ್ಸ್‌ವರ್ಥ ಮತ್ತು ಡಾಕ್ತರ್ ಮ್ಯಾಕಿಕನ್ ಈ ಮೂವರ ಕಮಿಟಿ ನೇಮಿಸಿ ಆ ಅರ್ಜಿಯನ್ನು ಇವರ ಕಡೆಗೆ ಕಳಿಸಿದ್ದರಿಂದ ಇವರು ಮೊದಲಿನಂತೆ ವರ್ಷಕ್ಕೆ ಅರುವತ್ತು ರೂಪಾಯಿ ಫೀ ಇಡಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆಂಬ ವರ್ತಮಾನವು 'ಬೊಂಬೆ ಗ್ಯಾಝೆಟ' ಎಂಬ ವರ್ತಮಾನಪತ್ರದಿಂದ ತಿಳಿಯುತ್ತದೆ. ಡೆಕ್ಕನ್ ಕಾಲೇಜದ ಪ್ರಿನ್ಸಿಪಾಲರಾದ ಮೆಹರಬಾನ ಆಕ್ಸನ್ ಹ್ಯಾಮ್ ಸಾಹೇಬರ ಅಭಿಪ್ರಾಯವನ್ನಾದರೂ ಸರಕಾರದವರು ತಕ್ಕೊಳ್ಳಬಹುದೆಂತಲೂ ಬಹುತರವಾಗಿ ಕಾಲೇಜದ ಫೀ ವರ್ಷಕ್ಕೆ ಎಂಬತ್ತು ರೂಪಾಯಿ ಆಗುವದೆಂತಲೂ ವರ್ತಮಾನ ಉಂಟು. ಯುರೋಪಖಂಡದೊಳಗಿನ ದೇಶಗಳಲ್ಲಿ ಉಚ್ಚ ಪ್ರತಿಯ ಶಿಕ್ಷಣವು ಜನರಿಗೆ ಎಷ್ಟು ಬೆಲೆಗೆ ದೊರೆಯುವದೋ ಅದಕ್ಕಿಂತ ಈ ದೇಶವಲ್ಲಿ ಆ ಶಿಕ್ಷಣ ದೊರೆಯಲಿಕ್ಕೆ ಹೆಚ್ಚು ಬೆಲೆ ಬೀಳುತ್ತದೆ, ಇದು ಸರಿಯಲ್ಲ ಎಂಬ ಅಭಿಪ್ರಾಯವನ್ನು ಪ್ರೊಫೆಸರ ವರ್ಡ್ಸ್‌ವರ್ಥ ಸಾಹೇಬರು ಬಳಗಡೆಯಲ್ಲಿ ಪ್ರಕಟಿಸಿದ್ದಾರೆ. ಅರುವತ್ತು ರೂಪಾಯಿ ಇದ್ದಲ್ಲಿ ಎಂಬತ್ತು ರೂಪಾಯಿ ಫೀ ಇಟ್ಟರೂ ಬಡವಿದ್ಯಾರ್ಥಿಗಳಿಗೆ ಅದು ಬಹಳವೆಂದು ತೋರುವದು. ಆದರೆ ತಿಂಗಳಿಗೆ ಹತ್ತು ಹತ್ತು ರೂಪಾಯಿ ಫೀ ಕೊಡುವದಕ್ಕಿಂತ ವರ್ಷಕ್ಕೆ ಎಂಬತ್ತು ರೂಪಾಯಿ ಕೊಡುವದು ಒಳ್ಳೇದೆಂದು ತಿಳಿದು ವಿದ್ಯಾರ್ಥಿಗಳು ಸಂತೋಷ ಪಡುವರೆಂಬದಕ್ಕೆ ಸಂಶಯವಿಲ್ಲ.

ARTESIAN WELLS.

ಆರ್ಟೀಸಿಯನ್ ಬಾವಿಗಳು.

ಮಳೆ ಬಿದ್ದ ಮೇಲೆ ಎಲ್ಲಿ ನೋಡಿದರೂ ನೀರೇನೀರಾಗ
ತ್ತದೆ. ಆ ನೀರಿನ ವಿನಿಯೋಗವು ಮೂರು ಪ್ರಕಾರದಿಂದ ಆಗ
ತ್ತದೆ:—(೧) ತುಸು ನೀರು ಹೊಳೆ ಹಳ್ಳಗಳಿಗೆ ಕೂಡುತ್ತದೆ
(೨) ತುಸು ನೀರು ಉಗಿಯಾಗಿ ಅಂತರಿಕ್ಷಕ್ಕೆ ಹೋಗುತ್ತದೆ
ಆ ಉಗಿಯಿಂದ ಮೋಡಗಳಾಗಿ ಅವು ಮಳೆಯ ರೂಪದಿಂದಾ
ಲಿ, ಆಣೆಕಲ್ಲಿನ ರೂಪದಿಂದಾಗಲಿ, ಬರ್ಫದ ರೂಪದಿಂದಾಗ
ಭೂತಲದ ಮೇಲೆ ಬೀಳುತ್ತವೆ; (೩) ಮತ್ತು ಉಳಿದ ನೀ
ರು ಭೂಮಿಯಲ್ಲಿ ಇಂಗುತ್ತದೆ.

ಬಾವಿಗಳನ್ನು ಅಗಿಯುವಾಗ ಹತ್ತುವ ಶಲೆಗಳು ಭೂಮಿ
ಯೊಳಗೆ ಮಳೆಯ ನೀರು ಇಂಗಿರುವದರಿಂದಲೇ ಉಂಟಾಗು
ತ್ತವೆ. ಸಾಧಾರಣವಾಗಿ, ಬಾವಿಗಳು ಇಪ್ಪತ್ತರಿಂದ ನಾಲ್ವತ್ತು
ನಾಲ್ವತ್ತೈದು ಮೊಳ ಉದ್ದ ಇರುತ್ತವೆ; ಮತ್ತು ಬಾವಿಗಳ
ಸುತ್ತುಮುತ್ತಲು ಮಳೆ ಬಿದ್ದು ಇಂಗಿದ ನೀರು ಅವುಗಳಲ್ಲಿ ಶಲ
ಗಳ ರೂಪದಿಂದ ಹರಿಯುತ್ತದೆ. ಒಂದು ವರ್ಷ ಮಳೆಯು
ಕಡಿಮೆ ಬಿದ್ದರೆ, ಈ ಬಾವಿಗಳೊಳಗಿನ ನೀರು ಬತ್ತಿ ಹೋ
ಗುತ್ತದೆ.

ಫ್ರಾನ್ಸ ದೇಶದಲ್ಲಿ 'ಆರ್ತವಾ' ಎಂಬವನೊಬ್ಬನು ನೆಲದೊ
ಳಗೆ ಬಹಳ ಉದ್ದವಾದ ಕಬ್ಬಿಣದ ಕೊಳವೆಗಳನ್ನು ಇ
ಬಿಟ್ಟು ನೀರು ತೆಗೆಯುವದೊಂದು ಯುಕ್ತಿಯನ್ನು ಯೋಚಿಸಿ
ದ್ದಾನೆ. ಇಂಥ ಬಾವಿಗಳಿಗೆ ಅವನ ಹೆಸರಿನ ಮೇಲಿಂದ 'ಆರ್ಟೀ
ಸಿಯನ್ ಬಾವಿಗಳು' ಎಂಬ ಹೆಸರು ಬಿದ್ದದೆ. ಎಷ್ಟೋ
ಪ್ರದೇಶಗಳಲ್ಲಿ ಭೂಮಿಯ ರಚನೆಯನ್ನು ಅನುಸರಿಸಿ, ಮಳ

ಯು ನೀರು ನೂರಾರು ಮೈಳ ಉದ್ದ ಇಳಿದು, ಅಲ್ಲಿಂದ ಮೆಲ್ಲ ಮೆಲ್ಲನೆ ಹರಿಯುತ್ತ ಹೋಗಿ, ಯಾವದಾದರೊಂದು ದೊಡ್ಡ ನದಿಗೆ ಇಲ್ಲವೆ ಸಮುದ್ರಕ್ಕೆ ಕೂಡುತ್ತದೆ. ನೆಲದೊಳಗಿನ ಪ್ರವಾಹಗಳಿಗೆ ‘ನೀರಿನ ಶಿರಗಳು’ ಎಂಬ ಪಾರಿಭಾಷಿಕ ಸಂಜ್ಞೆಯುಂಟು. ಭೂಮಿಯ ಹೊಟ್ಟೆಯೊಳಗೆ ಕೆಲವು ಕಡೆಯಲ್ಲಿ ಕಟಕವು ಬಟ್ಟಲವ ಆಕಾರವಂತೆ ನಡುವೆ ತಗ್ಗಾಗಿ ಇರುತ್ತದೆ; ಅವರೊಳಗಿಂದ ಮೇಲೆ ಹೇಳುವ ಪ್ರವಾಹವು ಹರಿಯುತ್ತ ಹೋಲಾಗಿ, ಅಲ್ಲಿ ಬಹಳ ನೀರು ನಿಂತಿರುತ್ತದೆ. ಈ ನೀರಿನ ‘ಶಿರನ್ನು’ ಅಂದರೆ ಪೃಥ್ವಿಯ ಹೊಟ್ಟೆಯೊಳಗೆ ನೂರಾರು ಮೈಳದ ಕೆಳಗೆ ಹರಿಯುವ ಪ್ರವಾಹವನ್ನು ಕಬ್ಬಿಣದ ಕೊಳವೆಯಿಂದ ಭೇದಿಸಿ, ಆ ನೀರು ಭೂಮಿಯ ಮೇಲೆ ತರುತ್ತಾರೆ. ಈ ‘ಆರ್ಟಿಸಿಯನ್’ ಯುಕ್ತಿಯ ಮುಖ್ಯ ಉದ್ದೇಶವು ಸಫಲವಾದ ಕಾರಣ, ನೀರು ಕೊಳವೆಯೊಳಗಿಂದ ಕಾರಂಜಿಯಂತೆ ಮೇಲಕ್ಕೆ ಪುಟಿಯುತ್ತದೆ. ಇಂಥ ಬಾವಿಗಳಿಗೆ ‘ಆರ್ಟೀಸಿಯನ್ ಬಾವಿಗಳು’ ಅನ್ನುವರು.

ಪಾರಿಸ ಪಟ್ಟಣದ ಹತ್ತರ ‘ಗ್ರೆನೆಲ್’ ಎಂಬ ಊರಲ್ಲಿ ಒಂದು ಸಾವಿರ ಆರು ನೂರು ಫೂಟು ಉದ್ದವಾದ ಕಬ್ಬಿಣದ ಕೊಳವೆಯನ್ನು ಭೂಮಿಯೊಳಗೆ ಹೂಳಿದರೂ ನೀರು ಹತ್ತಲಿಲ್ಲ. ಆದದರಿಂದ, ಮತ್ತೂ ಇಸ್ನೂರು ಫೂಟು ಉದ್ದ ಮಟ್ಟಿ, ಹಸುರು ಉಸುಬು ಇವುಗಳ ಥರಗಳೊಳಗಿಂದ ಆ ಕೊಳವೆಯನ್ನು ಕೆಳಗೆ ಇಳಿಸಿದ ಕೂಡಲೆ, ಕಾರಂಜಿಯಂತೆ ನೀರು ಬಳ್ಳೇ ಕಸುವಿನಿಂದ ಮೇಲಕ್ಕೆ ಪುಟಿಯ ಹತ್ತಿತು. ಈ ಚಮತ್ಕಾರವನ್ನು ಈಗಲೂ ಕಾಣಬಹುದು. ನೀರು ತೆರಪಿಲ್ಲದೆ ಒಂದೇಸವನಾಗಿ ಹಾರುತ್ತಿರುತ್ತದೆ. ಈ ಕೊಳವೆಯೊಳಗಿಂದ ದಿನಾಲು ಐದು

ಲಕ್ಷ ಗ್ಯಾಲನ್ ನೀರು ಹೊರಗೆ ಬರುತ್ತಿರುತ್ತದೆ. ಈ ನೀರಿ ಸ್ವಲ್ಪ ಗಂಧಕದ ವಾಸನೆ ಉಂಟು; ಇವಲ್ಲದೆ ನೀರು ಸ್ವಲ್ ಬೆಚ್ಚಗೆ ಇರುತ್ತದೆ. ಇನ್ನು, ಆರ್ಟೀಸಿಯನ್ ಬಾವಿಗಳನ್ನು ಅಗೆಯುವ ಯಂತ್ರವು ಹ್ಯಾಗಿರುತ್ತದೆ? ಅದರ ಉಪಯೋಗವ ನ್ನು ಹ್ಯಾಗೆ ಮಾಡಬೇಕು? ಎಂಬದರ ವಿಷಯವಾಗಿ ಸ್ವಲ್ಪ ವಿವರಿಸೋಣ.—ಕಟ್ಟಿಗೆಗೆ ತೂತು ತೆಗೆಯುವ ಬಡಿಗರ ಹಿಡಿಸ ಳದಂಥ ಅತಿ ದೊಡ್ಡ "ಬೋರರ" (ಅಗಿಯುವಂಥಾದು) ಎಂಬ ಯಂತ್ರವನ್ನು ಕಬ್ಬಿಣದ ಕೊಳವೆಯೊಳಗಿಂದ ನೆಲದೊಳ ತಿರವುತ್ತಾರೆ. ಅದರಿಂದ ಅದರ ತುದಿಯಿಂದ ಅಗಿಯಲ್ಪಡುವ ಮಣ್ಣೂ ಕಲ್ಲೂ ಆ ಯಂತ್ರದ ತುದಿಯ ಹತ್ತಿರಿರುವ ಸಣ್ಣ ದೊಂದು ಗೋಲಾಕಾರ ಪೊಳ್ಳು ಭಾಗದಲ್ಲಿ ಬಂದು ತುಂಬು ತ್ತವೆ. ಆ ಕಲ್ಲು ಮಣ್ಣು ತೆಗೆಯುವದಕ್ಕೋಸ್ಕರ ಯಂತ್ರ ಬೇರೆ ಬೇರೆ ಭಾಗಗಳನ್ನು ಪ್ರತಿಒಂದು ಸಾರಿ ಬಿಚ್ಚಿ ಪುನ ಜೋಡಿಸಬೇಕಾಗುತ್ತದೆ.

ಈ ಮೇರೆಗೆ ನೆಲವನ್ನು ಅಗಿದು ಒಂದು ಕಬ್ಬಿಣದ ಕೊಳವೆ ಯನ್ನು ಭೂಮಿಯೊಳಗೆ ಹೂಳಿದ ಬಳಿಕ, ಅದರ ಮೇಲೆ ಸರಿ ಯಾಗಿ ಕೂಡುವಂತೆ ಮತ್ತೊಂದು ಕೊಳವೆಯನ್ನು ಇಳಿಬಿಡ ಬೇಕಾಗುತ್ತದೆ. ಹೀಗೆ ಬೇಕಾದಷ್ಟು ಕೊಳವೆಗಳನ್ನು ಒಂ ದರಮೇಲೊಂದು ನೀರು ಹತ್ತುವವರೆಗೆ ಕೂಡಿಸುತ್ತ ಹೋ ಗಬೇಕು. ಇದರಿಂದ ಭೂಮಿಯಲ್ಲಿ ಸಾವಿರಾರು ಫೂಟು ಆಳವಾಗಿ ಹರಿಯುವ ನೀರಿನ ಪ್ರವಾಹದವರೆಗೆ ಕೊಳವೆಯನ್ನು ಮುಟ್ಟಿಸುವದಕ್ಕೆ ಎಷ್ಟು ಪ್ರಯಾಸ ಪಡಬೇಕಾಗುತ್ತದೆಂಬವನ್ನು ಓದುವವರೇ ತರ್ಕಿಸಬಹುದು. ಆರ್ಟೀಸಿಯನ್ ಕೊಳವೆಯೊಳಗಿಂದ ಮೊದಲು ನೀರು ಹೊರಬೀಳಲಾಗಿ, ಒಮ್ಮೊಮ್ಮೆ ಸಣ್ಣ

ಸಣ್ಣ ಮೀನಗಳೂ ಕೆಲವು ವನಸ್ಪತಿಗಳೂ ಅದರಗೂಡ ಬರುತ್ತವೆ, ಇದು ಬಹು ಆಶ್ಚರ್ಯಕರವಾದ ಸಂಗತಿಯೇ ಸರಿ. 'ಇಂಥ ಪ್ರದೇಶಗಳಲ್ಲಿ ಭೂಮಿಯ ಹೊಟ್ಟೆಯೊಳಗೆ ಇಂತಿಷ್ಟು ಅಂತರದ ಮೇಲೆ ನೀರಿನ ಪ್ರವಾಹಗಳು ಹರಿಯುತ್ತವೆ' ಎಂಬುದು ಭೂಗರ್ಭಶಾಸ್ತ್ರದ ಜ್ಞಾನವು ಚನ್ನಾಗಿ ಇದ್ದಂಥವರಿಗೆ ಮಾತ್ರ ತಿಳಿಯುವದು; ಬೇರೆ ಜನರಿಗೆ ತಿಳಿಯುವದು ಕಠಿಣವು.

ಇಂಗ್ಲಿಷ ಸರಕಾರದವರು ಅಬಿಸೀನಿಯ ದೇಶವಮೇಲೆ ದಂಡೆತ್ತಿ ಹೋಗುವ ಸಮಯದಲ್ಲಿ ಉಸುಬಿನ ಬೈಲೊಳಗಿಂದ ಪಯಣ ಮಾಡುವ ಪ್ರಸಂಗವು ಒದಗಲು, ಆ ಸ್ಥಲದಲ್ಲಿ ಮೇಲೆ ಬರೆದ ಹಂಚಿಕೆಯಿಂದ ಕೊಳವೆಯನ್ನು ಉಪಯೋಗಿಸಿ ನೆಲದೊಳಗಿಂದ ನೀರು ತೆಗೆಯಬೇಕಾಯಿತು. ನಮ್ಮ ದೇಶದಲ್ಲಿ ಯಾವಾಗಲೂ ನೀರಿನ ಕೊರತೆ ಇದ್ದ ಸ್ಥಳಗಳಲ್ಲಿ ಆರ್ಟೀಸಿಯನ್ ಬಾವಿಗಳನ್ನು ಅಗಿಯುವ ಯತ್ನವನ್ನು ಅವಶ್ಯವಾಗಿ ಮಾಡಬೇಕು.

ಮದ್ರಾಸದ ದಕ್ಷಿಣಕ್ಕೆ ಸುಮಾರು ನೂರಾಐವತ್ತು ಮೈಲಿನ ಮೇಲೆ ಪುದುಚೆರಿ ಎಂಬದೊಂದು ಬಹು ರಮಣೀಯವಾದ ಪ್ರಸಿದ್ಧ ಫ್ರೆಂಚರ ಪಟ್ಟಣ ಉಂಟು. ಅಲ್ಲಿ ಉದ್ಯೋಗಿಗಳಾದ ಫ್ರೆಂಚ ಜನರು ನಾಲ್ಕೈದು ಆರ್ಟೀಸಿಯನ್ ಬಾವಿಗಳನ್ನು ತೆಗೆದಿದ್ದಾರೆ. ಅಲ್ಲಿರುವ ಉದ್ಯಾನವನದೊಳಗೆ ಒಂದು ಬಾವಿಯುಂಟು. ಅದರ ನೀರು ಸುಮಾರು ೧೫೦ ಎಕರೆ ಭೂಮಿಗೆ ಪೂರೈಸುತ್ತದೆ.

FROEBEL'S KINDER-GARTEN SYSTEM.

ಫ್ರೇಬೆಲನ ಶಿಶು-ಶಿಕ್ಷಣಪದ್ಧತಿ.

(೮೦ನೇ ಪುಟದಿಂದ ಮುಂದೆ ಸಾಗಿದ್ದು).

ಫ್ರೇಬೆಲನ ಸಾಲೆಯು ಇದ್ದ ಪ್ರಾಂತದಲ್ಲಿ 'ಡ್ಯೂಕ್ ಆಫ್
ಮೈನಿನ್‌ಗೆನ್' ಎಂಬವನೊಬ್ಬ ಸರದಾರನು ಇರುತ್ತಿದ್ದನು. ಫ್ರೆ
ಬೆಲನ ಶಿಕ್ಷಣ ಪದ್ಧತಿಯ ಕೀರ್ತಿಯು ಆ ಸರದಾರನ ಕಿವಿ
ಮುಟ್ಟಿತು. ಮತ್ತು ತನ್ನ ಶಿಕ್ಷಣಪದ್ಧತಿಯನ್ನು ಹಬ್ಬಿಸು
ವಿಷಯದಲ್ಲಿ ಫ್ರೇಬೆಲನು ಬಹು ಕಷ್ಟ ಪಡಬೇಕಾಗುತ್ತದೆ, ಎಂ
ಬದಾವರೂ ಆ ಸರದಾರನಿಗೆ ತಿಳಿಯಿತು. ಆದದರಿಂದ, ಫ್ರೇಬೆ
ನನ್ನು ಕರಿಸಿ, ತನ್ನ ಹತ್ತರ ಇಟ್ಟುಕೊಂಡು, ತನ್ನ ಮಗ
ಗೆ ಕಲಿಸಬೇಕು, ಅಂದರೆ ಹತ್ತೆಂಟು ಹುಡುಗರನ್ನು ಕೂ
ಸುವ ಶ್ರಮವೂ ಯೋಗ್ಯತೆಯನ್ನರಿಯದೆ ಕುಚೇಷ್ಟೆಯ
ಮಾಡುವ ಜನರಿಂದ ಆಗುವ ಕಾಟವೂ ಅವನಿಗೆ ಆಗಲಿಕ್ಕಿಲ್ಲ
ಎಂದು ಆ ಸರದಾರನ ಮನಸಿನಲ್ಲಿ ಬಂದದರಿಂದ, ಅವನು ಈ
ಅರ್ಥದ ಒಂದು ಪತ್ರವನ್ನು ಬರೆದು ಫ್ರೇಬೆಲನಿಗೆ ಕಳುಹಿಸಿದ
ನು. ಅದಕ್ಕೆ ಫ್ರೇಬೆಲನು ಆ ಸರದಾರನಿಗೆ ಪ್ರತ್ಯುತ್ತರವಾಗಿ
ಬರೆದದ್ದೇನಂದರೆ—ನಿಮ್ಮ ಮಗನು ನಿಮ್ಮ ಮನೆಯಲ್ಲಿಯೇ
ಇದ್ದರೆ, ನನ್ನ ಶಿಕ್ಷಣಪದ್ಧತಿಯಿಂದ ಅವನನ್ನು ತಿದ್ದುವದು
ಎಂದಿಗೂ ಆಗಲಿಕ್ಕಿಲ್ಲ. ನಾನು ಸರದಾರನ ಮಗನು, ಎಲ್ಲರ
ಲ್ಲಿ ಶ್ರೇಷ್ಠನು, ಎಂಬ ಅಭಿಮಾನವು ಅವನ ಮನಸಿನಲ್ಲಿರುವವ
ರೆಗೆ ನನ್ನ ಶಿಕ್ಷಣದಿಂದ ಅವನಿಗೆ ಏನೂ ಲಾಭವಾಗಲಿಕ್ಕಿಲ್ಲ.
ನನ್ನ ಶಿಕ್ಷಣಪದ್ಧತಿಯಿಂದ ಅವನಿಗೆ ಏನಾದರೂ ಉಪಯೋಗ
ವಾಗಬೇಕೆಂದು ತಮ್ಮ ಮನಸಿನಲ್ಲಿದ್ದರೆ, ಅವನನ್ನು ನನ್ನ
ಶಾಲೆಯಲ್ಲಿರುವ ಹುಡುಗರ ಕೂಡ ಅಭ್ಯಾಸ ಮಾಡಲಿಕ್ಕೆ ಕಳು

ಒಸಿಕೊಡಿರಿ. ಹೂಗಳು ಅರಳಲಿಕ್ಕೆ ಸೂರ್ಯನ ಪ್ರಕಾಶವೂ ಉಷ್ಣತೆಯೂ ಹ್ಯಾಗೆ ಬೇಕಾಗುವವೋ ಹಾಗೇ ಇದೂ ಉಂಟು. ಯಾವಾಗಲೂ ನೆಳಲಲ್ಲಿರುವ ಹೂವಿನ ಗಿಡಗಳು ಎಂದೂ ವಿಕಾಸ ಹೊಂದುವದಿಲ್ಲ. ಅದೇಪ್ರಕಾರ ಸರ್ವಕಾಲ ಮನೆಯಲ್ಲಿರುವ ಹುಡುಗರ ಸ್ಥಿತಿಯು ಆಗುತ್ತದೆ. ಯಾವ ಸ್ಥಳದಲ್ಲಿ ಬಹು ಜನರ ಚಿಕ್ಕ ಮಕ್ಕಳು ಕೂಡಿ ಅಭ್ಯಾಸ ಮಾಡುತ್ತಾ, ಅತ್ತ ಇತ್ತ ಆಡುತ್ತಾ, ಹಾರ್ಯಾಡುತ್ತಾ ಕಾಲಕಳೆಯುವರೋ ಆ ಸ್ಥಳದಲ್ಲಿ ಹುಡುಗರ ಬುದ್ಧಿಯು ವಿಕಸಿತವಾಗುತ್ತದೆ. ಅವರ ಮನಸಿನಲ್ಲಿ ದೊಡ್ಡವರು, ಸಣ್ಣವರು, ಎಂಬ ದುರ್ಭಾವನೆಗಳು ಬರುವದೇ ಇಲ್ಲ. ಇದು ಎಷ್ಟು ದೊಡ್ಡ ಲಾಭವು ನೋಡಿರಿ!

ಈ ಪತ್ರವನ್ನು ನೋಡಿದಾಕ್ಷಣವೇ ಆ ಸರದಾರನಿಗೆ ಬಹಳ ಆಶ್ಚರ್ಯವಾಯಿತು. ನಾವು ಇಷ್ಟು ಉದಾರಾಶ್ರಯವನ್ನು ಕೊಡುತ್ತೇವೆಂದರೂ ಈ ವಿಲಕ್ಷಣ ಮನುಷ್ಯನು ಒಲ್ಲೆನೆನ್ನುತ್ತಾನಲ್ಲ! ಇವನಿಗೆ ಏನನ್ನಬೇಕು? ಎಂದು ಅವನು ತನ್ನ ಮನಸಿನಲ್ಲಿ ಅಂದುಕೊಂಡನು. ಆದರೂ ತನ್ನ ಮಗನನ್ನು ಫ್ರೇಬೆಲನ ಸಾಲಿಗೆ ಕಳುಹಿಸಲಾರಂಭಿಸಿದನು. ಆ ಹುಡುಗನು ಸಾಲಿಗೆ ಹೋಗಹತ್ತಿ ಸ್ವಲ್ಪ ದಿವಸಗಳಾಗುವಷ್ಟರೊಳಗೆ, ಒಂದಾನೊಂದು ದಿವಸ ಮನೆಗೆ ಬಂದು ಒಬ್ಬ ಸಾಲೀ ಹುಡುಗನು ನನ್ನನ್ನು ಹೊಡೆದನೆಂದು ದೊಡ್ಡ ದನಿಯಿಂದ ಅಳುತ್ತ ತನ್ನ ತಾಯಿಯ ಮುಂದೆ ದೂರು ಹೇಳಿದನು. ಅವನ್ನು ಕೇಳಿ ಆ ಸರದಾರನಿಗೆ ಸಹಜವಾಗಿ ಬಹಳ ಸಿಟ್ಟು ಬಂತು. ‘ಸಹಜವಾಗಿ’ ಎಂದು ಬರೆದ ಕಾರಣವೇನಂದರೆ, ಆ ಕಾಲಕ್ಕೆ ಜರ್ಮನಿಯಲ್ಲಿ ಶ್ರೀಮಂತರಿಗೂ ಸಾಮಾನ್ಯಜನರಿಗೂ

ಅತ್ಯಂತ ದ್ವೇಷವಿತ್ತು. ಸಾಮಾನ್ಯ ಜನರನ್ನು ಕಾಡುವದು ತಮ್ಮ ಸುಖಕ್ಕೆ ಎಳ್ಳಷ್ಟಾದರೂ ವಿಘ್ನವಾಗಗೊಡದೆ ಇರುವದೂ ಇವೇ ನಾವು ಮಾಡತಕ್ಕ ಮುಖ್ಯ ಕಾರ್ಯಗಳೆಂದು ಶ್ರೀಮಂತ ಜನರು ತಿಳಿಯುತ್ತಿದ್ದರು. ಆಗ ಆ ಜನರು ಬೇಕಾದದ್ದು ಮಾಡಲಿಕ್ಕೆ ಸಮರ್ಥರಿದ್ದರು. ಯಾವನೊಬ್ಬನನ್ನು ಗಡಿದಾಟಿಸುವದು ಅಥವಾ ಅವನನ್ನು ತಮ್ಮ ಮನಸಿಗೆ ಬಂದಂತೆ ಶಿಕ್ಷಿಸುವದು ಅವರ ಕೈಯಲ್ಲಿ ಇತ್ತು.

ಸಾರಾಂಶವೇನೆಂದರೆ, ಈಗ ನಾವು ರಶಿಯದೇಶದ ಸಂಬಂಧದಿಂದ ಯಾವ ಸುದ್ದಿಗಳನ್ನು ಕೇಳುತ್ತೇವೋ ಆ ಪರಿಯ ಬಲಾತ್ಕಾರವು ಆಗ ಜರ್ಮನಿಯಲ್ಲಿ ನಡೆಯುತ್ತಿತ್ತು. ಇಂಥ ಸ್ಥಿತಿಯಲ್ಲಿ, ಒಬ್ಬ ಯಃಕಶ್ಚಿತ ಮನುಷ್ಯನ ಮಗನು ಸರದಾರನ ಮಗನನ್ನು ಸಕಾರಣವಾಗಿ ಹೊಡೆದರೂ ಅದು ಆ ಸರದಾರನು ಸಿಟ್ಟಾಗಲಿಕ್ಕೆ ಕ್ಷುಲ್ಲಕ ಕಾರಣವೆನ್ನಬಹುದೇ? ಆ ಸರದಾರನಿಗೆ ಸಿಟ್ಟು ಬಂದಕೂಡಲೆ ಅವನು ತನ್ನ ಮಗನಿಗೆ ಅಂದದ್ದೇನೆಂದರೆ—'ನಿನ್ನನ್ನು ಹೊಡೆದವನ ಹೆಸರು ಹೇಳು; ಅವನ ಮನೆಯವರನ್ನೆಲ್ಲ ಹದ್ದುಪಾರ ಮಾಡಿ ಬಿಡುತ್ತೇನೆ.' ಇದನ್ನು ಕೇಳಿದ ಕೂಡಲೆ ಆ ಹುಡುಗನು ಅಳುವದನ್ನು ಬಿಟ್ಟು ತನ್ನ ತಂದೆಗೆ ಅಂದದ್ದೇನೆಂದರೆ,—ಅಪ್ಪಾ, ಇಂಥ ಸಣ್ಣ ಮಾತಿಗೆ ಇಷ್ಟು ದೊಡ್ಡ ಶಿಕ್ಷೆಯು ತಕ್ಕದ್ದಲ್ಲ. ಇದಲ್ಲದೆ, ಅವನು ನನ್ನನ್ನು ಸುಮ್ಮನೆ ಹೊಡೆಯಲಿಲ್ಲ; ನಾನು ಅವನಿಗೆ ಕುಚೇಷ್ಟೆ ಮಾಡಿದ್ದರಿಂದ ಅವನು ನನ್ನನ್ನು ಹೊಡೆದನು. ಅವನದೇನು ತಪ್ಪು? ನೀವು ಅವನಿಗೆ ಬಹು ಕ್ರೂರ ಶಿಕ್ಷೆಯನ್ನು ಮಾಡುವೆವೆಂದು ಅನ್ನುತ್ತೀರಿ. ಆದದರಿಂದ, ನಾನು ಅವನ ಹೆಸರು ಹೇಳುವದಿಲ್ಲ. ತನ್ನ ಮಗನ ಜಾಣತನದ ಮಾತುಗಳ

ನ್ನು ಕೇಳಿ, ಆ ಸರದಾರನಿಗೆ ಬಹಳ ಆಶ್ಚರ್ಯವಾಯಿತು. ನನ್ನ ಮಗನಿಗೆ ಎರಡನೇ ಹುಡುಗನು ಹೊಡೆದದ್ದು ಸಕಾರಣವೋ ನಿಷ್ಕಾರಣವೋ ಎಂಬವನ್ನು ವಿಚಾರಿಸದೆ ನಾನು ಸಿಟ್ಟಿಗೆದ್ದೆನು. ಇವನು ಚಿಕ್ಕವನಾದರೂ ಸಿಟ್ಟಿಗೇಳದೆ, ಇಂಥ ವಿವೇಕದ ಮಾತುಗಳನ್ನಾಡಿ, ನನ್ನ ಕೋಪವನ್ನು ಇಳಿಸಿದನು. ಇದೇನು ಚಮತ್ಕಾರವಿರಬಹುದು? ಎಂದು ಆಲೋಚಿಸಿಕೊಂಡು, ಕಡೆಗೆ ಇದೆಲ್ಲ ಫ್ರೇಬೆಲನ ಶಿಕ್ಷಣದ ಫಲವೆಂದು ತಿಳಿದು ಅವನು ಈ ಯಾವತ್ತು ಸಂಗತಿಗಳನ್ನು ಬರೆದು ಫ್ರೇಬೆಲನಿಗೆ ತಿಳಿಸಿ, ತನಗಾದ ಆಶ್ಚರ್ಯವನ್ನು ಪ್ರಕಟಿಸಿದನು. ಫ್ರೇಬೆಲನು ಆ ಪತ್ರಕ್ಕೆ ಪ್ರತ್ಯುತ್ತರವಾಗಿ ಆ ಸರದಾರನಿಗೆ ಒಂದು ಪತ್ರವನ್ನು ಬರೆದನು. ಅವರಲ್ಲಿ ಶಿಕ್ಷಣಪದ್ಧತಿಯ ಮೂಲತತ್ವದ ವಿಷಯವೂ ಅವನ ಚರಿತ್ರವೂ ವಿಸ್ತಾರವಾಗಿ ವಿವರಿಸಲ್ಪಟ್ಟವೆ. ಇಲ್ಲಿ ಆ ಪತ್ರದ ಆಧಾರದಿಂದಲೇ ಅವನ ಚರಿತ್ರವನ್ನು ಬರೆದಿದ್ದೇವೆ. ನ್ಯಾಯಬುದ್ಧಿಯನ್ನು ಹುಟ್ಟಿಸುವದೇ ಫ್ರೇಬೆಲನ ಶಿಕ್ಷಣದ ಮುಖ್ಯ ಬೀಜವು. ದಯೆ ಮತ್ತು ನ್ಯಾಯಬುದ್ಧಿ ಎಂಬವರಿಬ್ಬರು ಅಕ್ಕರದ ಅಕ್ಕತಂಗಿಯರಾಗಿದ್ದಾರೆ. ಅವರಿಬ್ಬರು ಒತ್ತಟ್ಟಿಗೆ ಇರುವದು ಬಹಳ ಹಿತಕರವು. ಮತ್ತು ಅವರಾದರೂ ಒಬ್ಬರನ್ನೊಬ್ಬರು ಅಗಲದೆ ಒಂದೇ ಕಡೆಯಲ್ಲಿ ಇರುತ್ತಾರೆ. ನ್ಯಾಯಬುದ್ಧಿಯು ಉದಯವಾಯಿತೆಂದರೆ, ಅಲ್ಲಿ ದಯೆಯು ತಲೆದೋರುವದು ಸ್ವಾಭಾವಿಕವೇ. ಇದಕ್ಕೆ ಆ ಸರದಾರನ ಮಗನೇ ದೃಷ್ಟಾಂತವು. ಅವನು ತನ್ನ ಮನೆಯಲ್ಲಿಯೇ ಇದ್ದಿದ್ದರೆ, ಅವನ ಮನಸಿನಲ್ಲಿ ನ್ಯಾಯಬುದ್ಧಿಯು ಹುಟ್ಟುತ್ತಿತ್ತೋ? ಅವನು ಸಾಮಾನ್ಯ ಜನರ ಮಕ್ಕಳೊಡನೆ ಸಾಲಿಯಲ್ಲಿ ಕಲಿಯಹತ್ತಿದ್ದರಿಂದಲೂ ಫ್ರೇಬೆಲನಂಥ ಉತ್ಕೃಷ್ಟ ಶಿಕ್ಷಕ

ನು ಒಳ್ಳೇ ಪದ್ಧತಿಯಿಂದ ಆ ಹುಡುಗನಿಗೆ ಕಲಿಸಹತ್ತಿದ್ದರಿಂದಲೂ ಅವನಲ್ಲಿ ನ್ಯಾಯಬುದ್ಧಿಯು ನೆಲೆಗೊಂಡಿತೆಂದು ಹೇಳಬಹುದು.

ಈ ಮೇರೆಗೆ ಸಾಲೆಯನ್ನು ಹಾಕಿ ಶಿಕ್ಷಣದ ಕೆಲಸವನ್ನು ಆರಂಭಿಸುವವರೆಗೆ, ಫ್ರೇಬೆಲನ ಚರಿತ್ರವು ಆಯಿತು. ಅವನು ಮರಣ ಹೊಂದಿದರೂ ಅಮರನಾಗಿದ್ದಾನೆ; ಮತ್ತು ಎಲ್ಲಿಯತನಕ ಹುಡುಗರು ಇರುವರೋ, ಎಲ್ಲಿಯತನಕ ಶಿಕ್ಷಣವು ಸಾಗುವದೋ ಅಲ್ಲಿಯತನಕ ಅಂತೂ, ಅವನು ನಿಶ್ಚಯವಾಗಿ ಅಮರನಾಗಿ ಇರುವನು. ಈವೊತ್ತು ಈ ವ್ಯಾಖ್ಯಾನವನ್ನು ಇಲ್ಲಿಗೇ ಮುಗಿಸೋಣ. ಫ್ರೇಬೆಲನ ಚರಿತ್ರವನ್ನು ಎಲ್ಲರೂ ಧ್ಯಾನದಲ್ಲಿಡಬೇಕು. ಫ್ರೇಬೆಲನಂಥ, ಅವನ ಪದ್ಧತಿಯಂತೆ ಕಲಿಸುವಂಥ ಶಿಕ್ಷಕರು ನಮ್ಮ ದೇಶದಲ್ಲಿ ಅವಶ್ಯವಾಗಿ ಬೇಕು. ಬೇಕಾದವನು ಸಾಲೀ ಹಾಕಿಕೊಂಡು ಬೇಕಾದಂತೆ ಏನಾದರೂ ಕಲಿಸುವದು ಒಳ್ಳೇದಲ್ಲ. ಚಿಕ್ಕ ಬಾಲಕರು ಭಾವೀಕಾಲದ ದೊಡ್ಡ ಮನುಷ್ಯರಾಗಿದ್ದಾರೆ. ಅವರಿಗೆ ಈ ಹೊತ್ತು ನಾವು ಕಲಿಸಿದಂತೆ ಮುಂದೆ ಅವರ ಮನಸಿನ ಸ್ಥಿತಿಯಾಗುವದು, ಎಂಬದನ್ನು ಶಿಕ್ಷಕರೆಲ್ಲರು ಲಕ್ಷ್ಯದಲ್ಲಿಡಬೇಕು. ಇದನ್ನು ಚನ್ನಾಗಿ ಲಕ್ಷ್ಯದಲ್ಲಿಟ್ಟರೆ ಮಾತ್ರ ಶಿಕ್ಷಣದ ಕೆಲಸದ ನಿಜವಾದ ಗೌರವವು ಎಷ್ಟೆಂಬದು ತಿಳಿಯುವದು; ಇಲ್ಲದಿದ್ದರೆ, ಶಿಕ್ಷಣದ ಕೆಲಸವು ಗೌರವವುಳ್ಳದ್ದೆಂದು ನಮಗೆ ಎಂದೂ ತೋರಲಿಕ್ಕಿಲ್ಲ.

ಎಷ್ಟೋ ಜನರು—“ಸಣ್ಣ ಹುಡುಗರಿಗೆ ಕಲಿಸುವದಕ್ಕೆ ಪಾಂಡಿತ್ಯವ್ಯಾತಕ್ಕೆ? ಬೇಕಾದವನು ಆ ಕೆಲಸವನ್ನು ಮಾಡಬಹುದು.”—ಎಂದು ತಿಳಿಯುತ್ತಾರೆ. ಆದರೆ ಈ ಗ್ರಹಿಕೆಯು ಎಷ್ಟು ತಪ್ಪಿನದು ನೀವೇ ನೋಡಿರಿ! ಸಣ್ಣ ಹುಡುಗರಿಗೆ ಕಲಿ

ಸುವವನು ಬಹಳ ವಿದ್ವಾಂಸನಾಗಿರಲಿಕ್ಕೆ ಬೇಕು. ಅಂಥಿಂಥವರಿಂದ ಈ ಕೆಲಸವು ಎಂದಿಗೂ ಚನ್ನಾಗಿ ಸಾಗಲಿಕ್ಕಿಲ್ಲ ಇಷ್ಟೇ ಅಲ್ಲ; ಅವರೆ ಅಂಥ ಶಿಕ್ಷಣದಿಂದ ಹುಡುಗರಿಗೆ ಅಪಾಯವಾಗುವದು. ಸಣ್ಣ ಹುಡುಗರಿಗೆ ಕಲಿಸುವವನಲ್ಲಿ ಅನೇಕ ಸದ್ಗುಣಗಳಿರಲಿಕ್ಕೆ ಬೇಕು. ಅವುಗಳಲ್ಲಿ ಮೊದಲಿನ ಗುಣವು ವಿದ್ವತ್ತೆಯು. ಮತ್ತು ವಿದ್ವತ್ತೆಯ ಆದಿ ಲಕ್ಷಣವು ಅವಲೋಕನ ಶಕ್ತಿಯೇ. ಈ ಅವಲೋಕನ ಶಕ್ತಿ ಇಲ್ಲದ ಮನುಷ್ಯನು ಶಿಕ್ಷಣದ ಕೆಲಸಕ್ಕೆ ತಕ್ಕವನಲ್ಲ. ತನ್ನ ಕೈಕೆಳಗಿರುವ ಚಿಕ್ಕ ಬಾಲಕರ ಬುದ್ಧಿ ಸಾಮರ್ಥ್ಯವು ಎಷ್ಟೆಂಬದನ್ನು ಅವಲೋಕಿಸಿ ಚನ್ನಾಗಿ ತಿಳುಕೊಳ್ಳದವನು ಅವರಿಗೆ ತಕ್ಕ ಮಾರ್ಗವನ್ನು ಹ್ಯಾಗೆ ತೋರಿಸುವನು? ಅವರನ್ನು ಹ್ಯಾಗೆ ತಿದ್ದುವನು? ಇದೊಂದು ಅವಲೋಕನ ಶಕ್ತಿಯ ಉಪಯೋಗವು. ಅವಲೋಕನ ಶಕ್ತಿಯೆಂಬ ಶಬ್ದದ ವ್ಯಾಪಕಾರ್ಥವನ್ನು ಹಿಂದೆ ಹೇಳಿರುತ್ತೇವೆ.

ಶಿಕ್ಷಕನಲ್ಲಿ ಅವಶ್ಯವಾಗಿರತಕ್ಕ ಬೇರೆ ಗುಣಗಳು ಯಾವವೆಂದರೆ—ಅಭಿಜ್ಞತೆಯೂ ದೀರ್ಘೋದ್ಯೋಗವೂ. ಕೆಲವೊಂದು ಸಂಗತಿಯನ್ನು ಯಾವ ಬಗೆಯಿಂದ ತಿಳಿಸಿಕೊಟ್ಟರೆ, ಹುಡುಗರಿಗೆ ಬೇಗ ತಿಳಿದೀತೆಂಬ ಜ್ಞಾನವು ಹುಡುಗರ ಗ್ರಾಹಕಶಕ್ತಿ ಎಷ್ಟೆಂಬದನ್ನು ತಿಳುಕೊಳ್ಳುವ ಜ್ಞಾನವನ್ನು ಅವಲಂಬಿಸಿರುತ್ತದೆ. ಇದೇಮೇರೆಗೆ ಉಪಯೋಗಾನುಪಯೋಗ, ಸಾಂದರ್ಭಾಸಾಂದರ್ಭ ಮುಂತಾದ ಸಂಗತಿಗಳ ಜ್ಞಾನವಾದರೂ ಉಂಟು. ಈ ಮೂರು ಪ್ರಕಾರದ ಜ್ಞಾನವು ಅಭಿಜ್ಞತೆಯ ಹೊರ್ತು ಇರಲಾರದು. ಮೇಲೆ ಹೇಳಿದ ಮೂರು ಪ್ರಕಾರದ ಜ್ಞಾನವುಳ್ಳವನೇ ನಿಜವಾಗಿ ಅಭಿಜ್ಞನೆನಿಸುತ್ತಾನೆ. ಅವನೇ

ಶಿಕ್ಷಕನಾಗಲಿಕ್ಕೆ ಯೋಗ್ಯನು. ಹುಡುಗರ ಮನಸು ಪಡಿಯಚ್ಚಿನಂತೆ ಇರುತ್ತದೆ. ಪಡಿಯಚ್ಚು ಹ್ಯಾಗೆ ಹ್ಯಾಗೆ ಚಲೋದಿರುವದೋ ಹಾಗೆ ಹಾಗೆ ಅದರಲ್ಲಿ ಹುಟ್ಟುವ ವಸ್ತುಗಳು ಹೆಚ್ಚೆಚ್ಚು ಚಂದವಾಗಿ ಕಾಣುತ್ತವೆ. ಅದೇ ಅಸಡ್ಡಾಳವಾಗಿದ್ದರೆ ಅವರಿಂದಾಗುವ ಒಡಿವೆಗಳು ಹ್ಯಾಗೆ ನೆಟ್ಟಗಾಗುವವು? ಇದೇಮೇರೆಗೆ, ಹುಡುಗರ ಮನಸು ಹ್ಯಾಗೆ ಹ್ಯಾಗೆ ಸುಧಾರಿಸಲ್ಪಡುವದೋ ಹಾಗೆ ಹಾಗೆ ಅವರ ವಿಚಾರಶಕ್ತಿಯು ಉತ್ತಮೋತ್ತಮವಾಗುತ್ತ ಹೋಗುವದು. ಅವರ ವಿಚಾರಶಕ್ತಿ ಬೆಳೆದಂತೆ ಅವರ ಕೈಯಿಂದ ದೊಡ್ಡ ದೊಡ್ಡ ಕೆಲಸಗಳಾಗುವವು. ಮನುಷ್ಯರಲ್ಲಿಯೂ ಇತರ ಜೀವರಾಶಿಗಳಲ್ಲಿಯೂ ಇರುವ ದೊಡ್ಡ ಭೇದವು ಯಾವದೆಂದರೆ,—ನಮ್ಮ ಚಿಕ್ಕ ಬಾಲಕರು ತೀರ ಬಲಹೀನರೂ, ತೀರ ಕೋಮಲರೂ, ಎಲ್ಲ ಬಗೆಯಿಂದ ಪರತಂತ್ರರೂ ಇರುತ್ತಾರೆ. ಇಂಥ ಲಕ್ಷಣವು ಇತರ ಪ್ರಾಣಿಗಳಲ್ಲಿ ಕಾಣುವದಿಲ್ಲ. ನಮ್ಮ ಕೂಸುಗಳ ಶರೀರಸಂರಕ್ಷಣವು ಎಲ್ಲ ಬಗೆಯಿಂದಲೂ ಪರರ ಕೈಯಲ್ಲಿ ಇರುತ್ತದೆ. ಅವರಿಗೆ ತಿನ್ನಲಿಕ್ಕೆ ಬರುವದಿಲ್ಲ. ಕುಡಿಯಲಿಕ್ಕೆ ಬರುವದಿಲ್ಲ. ತಲೆಯನ್ನು ಎತ್ತಲಿಕ್ಕೆ ಬರುವದಿಲ್ಲ. ಈ ಪರತಂತ್ರತ್ವವು ಎಷ್ಟೋ ಸದ್ಗುಣಗಳ ಉದಯಕ್ಕೆ ಕಾರಣವಾಗಿದೆ. ಎಲ್ಲ ಪರಿಯಿಂದಲೂ ಕೂಸುಗಳು ದುರ್ಬಲವಾಗಿರುವವನ್ನು ಕಂಡು ನಮ್ಮ ಮನಸಿನಲ್ಲಿ ದಯೆ ಹುಟ್ಟುತ್ತದೆ. ಆ ದಯೆಯಿಂದಲೇ ಪ್ರೇಮವು ಹುಟ್ಟುತ್ತದೆ. ಅಲ್ಲಿಂದ ಹುಡುಗರನ್ನು ಜೋಪಾನ ಮಾಡುತ್ತಾ ಹೋದಂತೆ ಆ ಪ್ರೇಮವು ಬೆಳೆಯುತ್ತ ನಡೆಯುತ್ತದೆ. ಮುಂದೆ ಕೂಸುಗಳು ತಮಗೆತಾವೇ ತುಸು ತುಸು ನೋಡೋಣ, ನಗೋಣ, ಆಡೋಣ ಮುಂತಾದ ವ್ಯಾಪಾರಗಳನ್ನು ಮಾಡಹತ್ತಿದವೆಂದರೆ, ಉತ್ತರೋತ್ತ

ರವಾಗಿ ಬೆಳೆಯುತ್ತಿರುವ ಆ ಕೂಸುಗಳ ಶಕ್ತಿವಿಕಾಸವನ್ನು ನೋಡುವ ಲವಲವಿಕೆಯು ಅಂತಃಕರಣದಲ್ಲಿ ಹುಟ್ಟುತ್ತದೆ. ಮಕ್ಕಳು ತಮಗೆ ತಾವೇ ಆಡಹತ್ತಿದಮೇಲೆ, ತಾಯಿತಂದೆಗಳು ಅವರನ್ನು ನೋಡಿ ಕೌತುಕಪಡುವರು. ಹುಡುಗರ ದುರ್ಬಲತ್ವದಿಂದ ತಾಯಿತಂದೆಗಳಲ್ಲಿ ಮೇಲೆ ಹೇಳಿದ ಮೇರೆಗೆ ದಯೆ, ಪ್ರೇಮ ಮುಂತಾದ ಗುಣಗಳು ತಲೆದೋರುವಂತೆಯೇ ಹುಡುಗರಲ್ಲಿ ಆ ದುರ್ಬಲತ್ವದ ಮೂಲಕವಾಗಿ ಕೃತಜ್ಞತೆ ಮುಂತಾದ ಗುಣಗಳು ತಲೆದೋರಹತ್ತುತ್ತವೆ. ನಾವು ತೀರ ಬಲಹೀನರೂ ಎಲ್ಲ ಪರಿಯಿಂದ ಪರಾಧೀನರೂ ಆಗಿದ್ದಾಗ, ನಮ್ಮ ತಾಯಿತಂದೆಗಳು ನಮ್ಮ ಸಲುವಾಗಿ ಹಗಲೂ ಇರುಳೂ ಚಿಂತಿಸಿದರು, ನಮ್ಮನ್ನು ಜೋಪಾನ ಮಾಡಿದರು, ಬೇನೆ ಬೇಸರಿಕೆ ಬಂದಾಗ ಪರಿಪರಿಯ ಆರೈಕೆ ಮಾಡಿ ನಮ್ಮನ್ನು ಬದುಕಿಸಿಕೊಂಡರು, ಎಂಬದು ಸಹಜವಾಗಿ ಹುಡುಗರ ಮನಸಿನಲ್ಲಿ ಬಂದು, ಅವರಲ್ಲಿ ಕೃತಜ್ಞತೆ ಮುಂತಾದ ಅತ್ಯುತ್ತಮ ಗುಣಗಳ ಉದಯವಾಗುತ್ತದೆ. ಅಭಿಜ್ಞತೆಯೆಂದರೆ ಏನೆಂಬದನ್ನು ಮೇಲೆ ಹೇಳಿದ್ದೇವೆ. ಮನುಷ್ಯನಲ್ಲಿರುವ ತನ್ನ ಹಾಗು ಪರರ ಗುಣಗಳ ಪರೀಕ್ಷೆಯೇ ಅಭಿಜ್ಞತೆಯು. ಈ ಗುಣವು ಶಿಕ್ಷಕನಲ್ಲಿ ಯಾಕೆ ಇರಬೇಕೆಂಬದರ ಕಾರಣವು ಹಿಂದೆ ಹೇಳಲ್ಪಟ್ಟದೆ.

ಇನ್ನು, ದೀರ್ಘೋದ್ಯೋಗವೆಂಬ ಎರಡನೇ ಗುಣವಾದರೂ ಶಿಕ್ಷಕನಲ್ಲಿ ಅವಶ್ಯವಾಗಿ ಬೇಕು. ಈ ಗುಣವಿಲ್ಲದವನು ಸಚ್ಛಿಕ್ಷಕನ ಪದವಿಗೆ ಎಂದೂ ಯೋಗ್ಯನಾಗನು. ದೀರ್ಘೋದ್ಯೋಗದ ಮೂಲವು ಶಾಂತ ಸ್ವಭಾವವೇ. ಹುಡುಗರಿಗೆ ಒಮ್ಮೆ ಹೇಳಿದ್ದು ತಿಳಿಯದಿದ್ದರೆ, ಸಿಟ್ಟಗೇಳದೆ ಸಮಾಧಾನದಿಂದ ಮತ್ತೊಮ್ಮೆ ತಿಳಿಸಿ ಹೇಳಲಿಕ್ಕೆ ಬೇಕು.

HINTS TO TEACHERS OF INFANT--CLASSES.

ಮೂಲಾಕ್ಷರದ ವರ್ಗಗಳನ್ನು ಕಲಿಸುವ ಶಿಕ್ಷಕರಿಗೆ ಸೂಚನೆಗಳು.

(೮೬ನೇ ಪುಟದಿಂದ ಮುಂದೆ ಸಾಗಿದ್ದು.)

ಆರು ಬಣ್ಣದ ಗುಂಡುಗಳು, ಅರಿಥಮೆಟಿಕಾನ್, ಬಣ್ಣದ ಆಕೃತಿಗಳ ಪಟ, ಇವುಗಳ ಹೊರ್ತು ಶಿಕ್ಷಕರು ಆರು ಮುಖ್ಯ ಬಣ್ಣಗಳನ್ನೂ, ಕಂದಿ, ಬೂದಿ ಬಣ್ಣಗಳನ್ನೂ, ತಿಳಿಸಿ ಕೊಡಲಿಕ್ಕೆ ಬರುವಂತೆ ಬೇರೆ ಬೇರೆ ಬಣ್ಣದ ನೂಲಿನಲಡಿಗಳನ್ನಾಗಲಿ, ಉಣ್ಣೆಯಲಡಿಗಳನ್ನಾಗಲಿ, ರೇಶಿಮೆಯಲಡಿಗಳನ್ನಾಗಲಿ ಸಂಗ್ರಹಿಸಬೇಕು. ಪಾಠವನ್ನು ಹೇಳುವ ಕಾಲಕ್ಕೆ ಇವುಗಳನ್ನೆಲ್ಲ ಕೂಡಿಸಿ ಇಟ್ಟಿರಬೇಕು. ಮತ್ತು ಶಿಕ್ಷಕನು ಯಾವದೊಂದು ಬಣ್ಣವನ್ನು ಹೆಸರುಗೊಂಡ ಕೂಡಲೆ, ವಿದ್ಯಾರ್ಥಿಗಳು ಆ ಬಣ್ಣದ ಲಡಿಯನ್ನು ಹುಡುಕಿ, ತಂದು ಕೊಡಬೇಕು. ಆ ಮೇಲೆ ಮೊದಲು ಕೆಂಪು, ಕಿತ್ತಳೆ, ಹಳದಿ, ಹಸುರು, ನೀಲಿ, ಊದಿ ತರುವಾಯ ಕಂದಿ, ಬೂದಿ ಈ ಕ್ರಮದಿಂದ ಬಣ್ಣಗಳು ಬರುವಂತೆ ಆ ಲಡಿಗಳನ್ನೆಲ್ಲ ಸಾಲಾಗಿ ತೂಗಹಾಕಬೇಕು. ಈ ಪಾಠವನ್ನು ಕಲಿಸುವಾಗ ಬಿಳೀ ಬಣ್ಣವನ್ನೂ, ಕಪ್ಪು ಬಣ್ಣವನ್ನೂ ಬಿಟ್ಟುಬಿಡಬೇಕು. ಹುಡುಗರು ಚಿಕ್ಕಂದಿನಲ್ಲಿ ಇವೆರಡೂ ಬಣ್ಣಗಳೇ ಎಂದು ತಿಳುಕೊಳ್ಳುತ್ತಾರೆ; ಮತ್ತು ರೂಢಿಯಲ್ಲ್ಯಾದರೂ ಇವು ಬಣ್ಣಗಳಲ್ಲಿ ಎಣಿಸಲ್ಪಡುತ್ತವೆ; ಆದಕಾರಣ ಬಣ್ಣದ ಆರಂಭದ ಪಾಠಗಳಲ್ಲಿ ಇವುಗಳನ್ನು ಸೇರಿಸುವದು ಅವಶ್ಯವಾಯಿತು. ಆದರೆ ಈಗ ಅವುಗಳನ್ನು ಬೇರೆ ಮಾಡಬಹುದು. ಮತ್ತು ವಿದ್ಯಾರ್ಥಿಗಳು ಆರನೇ ಇಯತ್ತೆಗೆ ಹೋಗಿ ಆರನೇ ಪುಸ್ತಕ ಕಲಿಯಹತ್ತಿದರೆಂದರೆ, ಬಿಳೀ ಬಣ್ಣವು ಮುಖ್ಯ

ಳಿರು ಬಣ್ಣಗಳ ಸಂಯೋಗವೆಂತಲೂ ಕಪ್ಪು ಬಣ್ಣವು ಬಣ್ಣದ ಅಭಾವವೆಂತಲೂ ಹುಡುಗರಿಗೆ ತಿಳಿಸಿಕೊಡಬೇಕು.

ಇಷ್ಟೆಲ್ಲ ಕಲಿಸಿದ ಬಳಿಕ ಶಿಕ್ಷಕನು ಅನುಕೂಲವಿದ್ದರೆ, ಲೋಲಕದಿಂದ ಕೆಲವು ಸುಲಭವಾದ ಪ್ರಯೋಗಗಳನ್ನು ಮಾಡಿ ಹುಡುಗರಿಗೆ ತೋರಿಸಬಹುದು. ಮತ್ತು ಪೇಟೆಯಲ್ಲಿ ದೊರೆಯುವ ಪೇವಡಿ, ಇಂಗಳೀಕ ಮುಂತಾದ ಬಣ್ಣಗಳಿಗೂ ಲೋಲಕದಿಂದ ಪ್ರಕಾಶ ಕಿರಣದ ಪೃಥಕ್ಕರಣವಾಗಿ ಹುಟ್ಟುವ ಬೇರೆ ಬೇರೆ ಬಣ್ಣಗಳಿಗೂ ಇರುವ ಭೇದವನ್ನು ಕಲಿಸಬಹುದು.

ಒಡವೆಯ ಪಾಠಗಳನ್ನು ಕಲಿಸುವದೂ, ಹುಡುಗರಿಗೆ ಬುದ್ಧಿ ಬರುವ ಕಥೆಗಳನ್ನು ಹೇಳುವದೂ, ಗೌರವದ ಕೆಲಸಗಳಾಗಿರುವದರಿಂದ, ಇವುಗಳನ್ನು ಶಾಲೆಯೊಳಗಿನ ಮೇಲಾದ ಶಿಕ್ಷಕನೇ ಕೈಕೊಳ್ಳಬೇಕು. ಮತ್ತು ಆತನು ಈ ವಿಷಯಗಳನ್ನು ಮನೆಯೊಳಗೆ ಚನ್ನಾಗಿ ಸಿದ್ಧಮಾಡಿಕೊಂಡು ಬರುವದು ಅತ್ಯವಶ್ಯಕವಾದದ್ದೆಂದು ತಿಳಿಯತಕ್ಕದ್ದು. ಆತನು ಹೀಗೆ ಮಾಡಿದ ಹೊರ್ತು ಆತನ ಶಿಕ್ಷಣದಿಂದ ಹುಡುಗರಿಗೆ ಏನೂ ಉಪಯೋಗವಾಗದು. ಕಲ್ಪಿತ ಕಥೆಗಳು, ರೂಢಿಯೊಳಗಿನ ದೃಷ್ಟಾಂತಗಳು, ಚರಿತ್ರಗಳು, ಹುಡುಗರ ದೃಷ್ಟಿಗೆ ಬೀಳುವ ಚಿತ್ರಗಳು ಇಲ್ಲವೆ ಸಜೀವ ಅಥವಾ ನಿರ್ಜೀವ ಪದಾರ್ಥಗಳು ಇವೇ ಮುಂತಾದ ವಿಷಯಗಳನ್ನು ಕುರಿತು ಕಥೆಗಳನ್ನು ಹೇಳಬೇಕು. ಒಡವೆಯ ಪಾಠದ ಕೆಲವು ವಿಷಯಗಳು ಕೆಳಗೆ ಬರೆಯಲ್ಪಟ್ಟಿವೆ. ಅವುಗಳಲ್ಲಿ ಕಠಿಣ ವಿಷಯಗಳನ್ನು ಮೊದಲನೇ ಇಯತ್ತೆಯ ವರ್ಗಕ್ಕೆ ಕಲಿಸಬಹುದು.

ಗ್ರಾಮ್ಯ ಪಶುಗಳು, ಕಾಡು ಪಶುಗಳು, ಹುಳಗಳು, ತತ್ತಿ, ಸಸಿ, ಗಿಡ, ಎಲೆ, ಹೂ, ಹಣ್ಣು (ಸವಿ, ಹುಳಿ, ಕಹಿ), ಸಕ್ಕರಿ,

ಉಪ್ಪು, ಇದ್ದಲಿ, ಕಲ್ಲಿದ್ದಲಿ, ಕಾಜು, ರಬ್ಬರು, ಚೆಂಡು, ತೊಗಲು, ಅರಳಿ, ರೇಶಿಮೆ, ಉಣ್ಣೆ, ಬಟ್ಟೆಗಳು (ನೂಲಿನವು, ರೇಶಿಮೆಯವು ಅಥವಾ ಉಣ್ಣೆಯವು), ಟಾಚಣಿ, ಸೂಜಿ, ಕಬ್ಬಿಣ, ತಾಮ್ರ, ಹಿತ್ತಾಳಿ, ಸೀಸ, ಬೆಳ್ಳಿ, ಬಂಗಾರ, ಉಸುಬು, ಜಿಗಟ ಮಣ್ಣು, ಮಟ್ಟಿ, ಬೆಣಚಗಲ್ಲು, ಸ್ಲೇಟು, ಸೀಸಪೆನಶೀಲು, ಗಲಗು, ಕಾಗದ, ಬತ್ತಖರಡ, ಮಶಿ (ಕರಿದು, ಕೆಂಪದು), ಅಂಟು, ಅರಗು, ಸರಿ, ಪತ್ರ, ಕಾಗದದ ಚೀಲ, ಪುಸ್ತಕ, ಚೂರಿ, ಕತ್ತರಿ, ದೀಪದಕಡ್ಡಿ, ಗಂಟೆ, ಬಡಿಗಿ, ಬೆತ್ತ, ಕಬ್ಬಿಣದ ಅಥವಾ ತಾಮ್ರದ ತಂತಿ, ನೀರು, ಹಾಲು, ಎಣ್ಣೆ, ಸಾಧಾರಣ ಉದ್ಯೋಗಗಳು—ಮುಖ್ಯವಾಗಿ ತಮ್ಮ ಜಿಲ್ಲೆಯೊಳಗೆ ನಡೆಯುತಕ್ಕಂಥವುಗಳು ಅಂದರೆ—ಬಡಿಗ, ಕಂಬಾರ, ನೇಯಕಾರ, ಕಂಚುಗಾರ, ಮುಂತಾದವರ ಹೋರೆಗಳನ್ನು ತಕ್ಕೊಳ್ಳುವದು ಒಳ್ಳೇದು. ಅನ್ನ, ವಸ್ತ್ರ, ಗಾಳಿ, ಮೋಡಗಳು, ಮಳಿ, ಮಂಜು, ಇಬ್ಬನಿ, ಋತುಗಳು; ಅಂಗಡಿ, ಟಪಾಲಕಟ್ಟೆ (ಆ ಹಳ್ಳಿಯಲ್ಲಿದ್ದರೆ), ಲೋಹಮಾರ್ಗ, ಬಟ್ಟೆಗಳಿಗೆ ಗಂಜಿ ಮಾಡುವದು, ಸೈರು, ಮೊಳ, ಅವರ ಭಾಗಗಳು (ಈ ಅಳತೆಯ ಕೋಷ್ಟಕವು ಹುಡುಗರಿಗೆ ಚನ್ನಾಗಿ ತಿಳಿವ ಬಳಿಕ ಸಣ್ಣ ಸಣ್ಣ ಪದಾರ್ಥಗಳ ಅಳತೆಗಳನ್ನು ಕೇಳಿ ಸ್ಥೂಲಮಾನದಿಂದ ಅವರ ಬಾಯಿಂದ ಉತ್ತರ ಹೊರಡಿಸಬೇಕು. ಬಳಿಕ, ಆ ಪದಾರ್ಥಗಳನ್ನು ಅವರೆದುರಿಗೆ ಅಳೆಯಬೇಕು. ಇದೇಮೋರೆಗೆ ಶಾಲೆಯೊಳಗಿನ ಸಾಮಾನು, ಶಾಲಾಗೃಹ, ಹುಡುಗರ ನಿಲವು ಮುಂತಾದವುಗಳನ್ನು ಬರೆದಿಡಬಹುದು); ಕಟ್ಲೆಗಳು (ತೂಕದ ಸೇರು, ತೊಲಿ ಅವುಗಳ ಭಾಗಗಳು) ಮತ್ತು ತಕ್ಕಡಿ (ಹುಡುಗರಿಗೆ ಸಣ್ಣ ಸಣ್ಣ ಪದಾರ್ಥಗಳನ್ನು ಸ್ವತಃ ತೂಗಲಿಕ್ಕೆ ಹೇಳಬೇಕು.

ಉದಾಹರಣಾರ್ಥವಾಗಿ ಆಕೃತಿಯ ಪೆಟ್ಟಿಗೆಯೊಳಗಿನ ಘನಗಳು ಮತ್ತು ಗುಂಡು, ಉಸುಬಿನ ಘಡಿಯಾಲ, ಹಣ್ಣು, ಕಾಯಿಪಲ್ಯ ಇತ್ಯಾದಿ), ಅಳತೆಯಕೋಷ್ಟಕ ಸೇರು, ಅದರ ಭಾಗಗಳು.

ಶಿಕ್ಷಕನು ಸಣ್ಣ ಹುಡುಗರಿಗೆ ಸ್ಪಷ್ಟವಾದ ಸುಲಭ ಭಾಷೆಯಿಂದಲೂ ಒಳ್ಳೇ ಉಲ್ಲಾಸ ವೃತ್ತಿಯಿಂದಲೂ ಒಡವೆಯ ಪಾಠಗಳನ್ನು ಕಲಿಸಬೇಕು; ಮತ್ತು ಕಥೆಗಳನ್ನಾದರೂ ಹೀಗೇ ಹೇಳಬೇಕು. ಶಿಕ್ಷಕನು ಲಕ್ಷ್ಯದಲ್ಲಿಡತಕ್ಕಂಥ ಮುಖ್ಯ ಸಂಗತಿಗಳು ಯಾವವೆಂದರೆ:—

(ಅ) ಹುಡುಗರಿಗೆ ಚೆನ್ನಾಗಿ ತಿಳಿಯುವಂತೆ ತಾನು ಪಾಠವನ್ನು ಹೇಳುವದು.

(ಬ) ಹುಡುಗರ ಲಕ್ಷ್ಯವನ್ನು ತನ್ನ ಕಡೆಗೆ ಎಳಕೊಂಡು ಪಾಠದಲ್ಲಿ ಅವರಿಗೆ ಅಭಿರುಚಿ ಹುಟ್ಟುವಂತೆ ಮಾಡುವದು.

(ಕ) ಅವರ ಬೆಳೆಯುವ ಬುದ್ಧಿಯನ್ನು ದಿನಾಲು ಬಲಪಡಿಸಿ ತಿದ್ದುತ್ತ ಹೋಗುವದು.

ಇಷ್ಟೆಲ್ಲಾ ಚೆನ್ನಾಗಿ ಕೈಗೂಡಬೇಕಾದರೆ, ಶಿಕ್ಷಕನು ತಾನು ಕಲಿಸತಕ್ಕ ವಿಷಯವನ್ನು ಚೆನ್ನಾಗಿ ತಿಳಕೊಂಡಿರಬೇಕು. ಶಿಕ್ಷಕನಿಗೆ ವಿಷಯದ ಜ್ಞಾನವು ಪೂರ್ಣವಾಗಿರಬೇಕು. ಅಪೂರ್ಣ ಜ್ಞಾನದಿಂದ ಅವನ ಕಾರ್ಯವು ಸಾಗದು. ಅವನ ಜ್ಞಾನವು ಮೋಡಗಳು ಮುಸುಕು ಹಾಕಿದ ಆಕಾಶದಂತೆ ಅಥವಾ ಮಂಜುಗವಿದ ಪ್ರದೇಶವಂತೆ ಇರಕೂಡದು. ಚಂದ್ರಪ್ರಕಾಶವಂತೆ ಇದ್ದರೂ ಅದರಿಂದ ಏನೂ ಉಪಯೋಗವಾಗದು. ಅದು ನಿಜವಾದ ಸೂರ್ಯ ಪ್ರಕಾಶವನ್ನೇ ಹೋಲುತ್ತಿರಬೇಕು. ಶಿಕ್ಷಕನು ಹುಡುಗರ ಮನಸ್ಸನ್ನು ಎಷ್ಟರಮಟ್ಟಿಗೆ ತಿಳಕೊಂ

ಡಿದ್ದಾನೆ, ಅವರನ್ನು ಮೆಲ್ಲ ಮೆಲ್ಲನೆ ಹ್ಯಾಗೆ ತಿದ್ದುತ್ತಾ ನಡಿದಿದ್ದಾನೆ ಎಂಬದು ಪಾಠ ಕಲಿಸುತ್ತಿರುವಾಗ ಹುಡುಗರ ಮುಖಲಕ್ಷಣಗಳಿಂದಲೂ ಶಿಕ್ಷಕನು ಮಾಡಿದ ಪ್ರಶ್ನೆಗಳಿಗೆ ಅವರಿಂದ ಹೊರಡುವ ಉತ್ತರಗಳಿಂದಲೂ ಸ್ಪಷ್ಟವಾಗುವದು. ಇದೇ ಶಿಕ್ಷಕನ ಕೆಲಸವು ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬದನ್ನು ಪರೀಕ್ಷಿಸುವ ತಕ್ಕ ಒರೆಗಲ್ಲು.

ಶಿಕ್ಷಕನು ಮೂಲಾಕ್ಷರದ ವರ್ಗದ ಸಲುವಾಗಿ ಇಪ್ಪತ್ತು ಪಾಠ, ಮೊದಲನೇ ಇಯತ್ತೆಯ ಸಲುವಾಗಿ ಇಪ್ಪತ್ತು ಪಾಠ, ಹೀಗೆ ಸುಮಾರು ನಾಲ್ವತ್ತು ಒಡವೆಯ ಪಾಠಗಳನ್ನು ಸಂಗ್ರಹಿಸಿ ಆ ವಿಷಯಗಳ ಹೆಸರುಗಳನ್ನು ತನ್ನ ಸ್ವಂತ ಸ್ಮರಣ ವಹಿಯೊಳಗೆ ಬರೆದಿಡಬೇಕು. ಇವುಗಳಲ್ಲಿ ಪ್ರತಿ ಒಂದು ಪಾಠವನ್ನು ವರ್ಷದೊಳಗೆ ಎರಡು ಮೂರು ಸಾರೆ ಹುಡುಗರಿಂದ ಮಾಡಿಸಿರಬೇಕು. ಮತ್ತು ವಾರ್ಷಿಕ ಪರೀಕ್ಷೆಯ ಕಾಲಕ್ಕೆ ಡಿಪುಟಿ ಇನ್ಸ್ಪೆಕ್ಟರರು ಈ ಮೇರೆಗೆ ಕಲಿಸಿದ ಪಾಠಗಳಲ್ಲಿ ಒಂದೆರಡು ಪಾಠಗಳನ್ನು ಆರಿಸಿ, ತಮ್ಮ ಎದುರಿಗೆ ಶಿಕ್ಷಕನಿಗೆ ಕಲಿಸಲಿಕ್ಕೆ ಹೇಳಬೇಕು. ಶಿಕ್ಷಕನು ಪಾಠವನ್ನು ಕಲಿಸಿ ಪ್ರಶ್ನಮಾಡ ಹತ್ತಲಾಗಿ, ಡಿಪುಟಿ ಇನ್ಸ್ಪೆಕ್ಟರರು ಸ್ವತಃ ಕೆಲವು ಪ್ರಶ್ನೆಗಳನ್ನು ಮಾಡಿ, ಹುಡುಗರಿಗೆ ಆ ಪಾಠದ ಜ್ಞಾನವು ಎಷ್ಟರ ಮಟ್ಟಿಗೆ ಆಗಿರುತ್ತದೆ ಎಂಬವನ್ನು ಚನ್ನಾಗಿ ಮನಗಾಣಬೇಕು.

ಮುಸಲ್ಮಾನರಲ್ಲಿಯೂ ಹಿಂದೂ ಜನರಲ್ಲಿಯೂ ಸಣ್ಣ ಸಣ್ಣ ಹುಡುಗರು ತಮ್ಮ ತಮ್ಮ ಮನೆಗಳೊಳಗೆ ಹಾಡುವ ಹಾಡುಗಳಲ್ಲಿ ಚಲೊ ಚಲೋ ಹಾಡುಗಳನ್ನು ಆರಿಸಿ, ಪ್ರತಿ ಒಬ್ಬ ಡಿಪುಟಿ ಇನ್ಸ್ಪೆಕ್ಟರನು ತನ್ನ ಜಿಲ್ಲೆಯ ಉಪಯೋಗಕ್ಕಾಗಿ ಸಂಗ್ರಹಿಸಬೇಕು. ಮತ್ತು ಮೂಲಾಕ್ಷರದ ವರ್ಗಕ್ಕೆ ಕಲಿಸತಕ್ಕ ಸುಲಭವಾದ ಪದ್ಯಗಳ ಒಂದು ಪಟ್ಟಿಯನ್ನು ಮಾಡಿ, ಛಾಪಿಸಿ, ಯಾವತ್ತು ಶಿಕ್ಷಕರಿಗೆ ಒಂದೊಂದು ಪ್ರತಿಯನ್ನು ಕಳಿಸಬೇಕು.

ಹಾಡುವಾಗ ತಕ್ಕ ಅಭಿನಯಗಳನ್ನು ಮಾಡ ಬೇಕಾಗುವಂಥಾ ಪದ್ಯಗಳನ್ನು ನೋಡಿ ಸಂಗ್ರಹಿಸಿಡುವದು ಬಹಳ ಒಳ್ಳೇದು. ಇದರಿಂದ, ಹುಡುಗರಿಗೆ ಪದ್ಯಗಳನ್ನೂ ಅಲ್ಪಸ್ವಲ್ಪ ವ್ಯಾಯಾಮವನ್ನೂ ಕೂಡಿ ಕಲಿಸಲಾಗಿ, ಹಾಡಿಸುತ್ತಾ ಕವಾಯತು ಕಲಿಸಿದಂತೆ ಆಗುವದು. ಬಹುತರವಾಗಿ ಮೂಲಾಕ್ಷರದ ವರ್ಗದಲ್ಲಿಯೂ ಮೊದಲನೇ ಇಯತ್ತೆಯ ವರ್ಗದಲ್ಲಿಯೂ ಯಾವತ್ತು ಹುಡುಗರಿಗೆ ಕವಿತೆಯನ್ನು ಒಮ್ಮೆಲೇ ಅನ್ನಲಿಕ್ಕೆ ಕಲಿಸಬೇಕು.

ಸಾಲಿಯ ಕವಾಯತು ಅನುಕೂಲವಾದ ಮಟ್ಟಿಗೆ ಪದ್ಯಗಳನ್ನು ಅನ್ನಿಸುತ್ತ ಕಲಿಸುವದು ಒಳ್ಳೇದು. ಮೈಕೈಗಳ ಚಲನವಲನಗಳು ಗೀತಕ್ಕೆ ಅನುಸರಿಸಿ ಇರಲಿಕ್ಕೆ ಬೇಕು. ಯಾವತ್ತು ಹುಡುಗರು ಒಂದು ಸಾಲಾಗಿ ನಿಂತು ಮುಂದಕ್ಕೂ ಹಿಂದಕ್ಕೂ ನಡೆಯುವದೂ, ಒಮ್ಮೆ ಕೈಗಳನ್ನು ಜೋಡಿಸುವದೂ, ಒಮ್ಮೆ ಬೇರೆ ಬೇರೆಯಾಗಿ ನಡೆಯುವದೂ, ಒಬ್ಬರಕೈ ಒಬ್ಬರು ಹಿಡುಕೊಂಡು ವರ್ತುಲ, ಚೌರಸ, ಕಾಟಕೋನ ಚೌಕೋನ, ತ್ರಿಕೋನ ಮುಂತಾದ ಆಕೃತಿಗಳಂತೆ ನಿಲ್ಲುವದೂ, ಟೊಪ್ಪಿಗೆಗಳ ಇಲ್ಲವೆ ರುಮಾಲುಗಳ ಬಣ್ಣಗಳಿದ್ದಂತೆ, ಎತ್ತರವಿದ್ದಂತೆ, ಮೊದಲೇ ಅವರ ಕೈಯಲ್ಲಿ ಕೊಟ್ಟ ಬಣ್ಣದ ಇಸ್ಪೇಟುಗಳು, ಹೂಗಳು ಇಲ್ಲವೆ ಇತರ ಪದಾರ್ಥಗಳು ಇದ್ದಂತೆ ಹುಡಗರನ್ನು ಗುಂಪು ಗುಂಪಾಗಿ ನಿಲ್ಲಿಸುವದೂ, ಆ ಮೇಲೆ ಸಾದಾ ಹೆಜ್ಜೆಗಳನ್ನು ಇಡುತ್ತ ಗುಂಪು ಗುಂಪಾಗಿ ಇಲ್ಲವೆ ಸಾಲಾಗಿ ನಿಂತ ಆ ಹುಡುಗರನ್ನು ಯಾವದೊಂದು ಆಕೃತಿಯಂತೆ ನಿಲ್ಲಿಸಿ, ತರುವಾಯ ಪುನಃ ಸಾಲಾಗಿ ಇಲ್ಲವೆ ಗುಂಪು ಗುಂಪಾಗಿ ನಿಲ್ಲಿಸುವದೂ, ಇವೇ ಮೊದಲಾದ ಕೈಮೈಗಳನ್ನು ಅಲ್ಲಾಡಿಸುವ ಬೇಕಾದಷ್ಟು ಆಟಗಳನ್ನು ಸಣ್ಣ ಮಕ್ಕಳಮೇಲೆ ಅಕ್ಕರವುಳ್ಳ ಶಿಕ್ಷಕನು ಯೋಜಿಸ ಬಹುದು. ಇಂಥ ಕವಾಯತನ್ನು ಗೀತದೊಡನೆ

ಇಲ್ಲವೆ ಗೀತವಿಲ್ಲದೆ ನೇಮಿಸಿದ ವೇಳೆಯಲ್ಲಿ ತಪ್ಪದೆ ನಿಯಮದಿಂದಮಾಡಿಸಬೇಕು.

ಸಾರಾಂಶ, ಮೂಲಾಕ್ಷರದ ವರ್ಗಗಳ ಶಿಕ್ಷಕರ ಮನಸಿನಲ್ಲಿ ಮೇಲಿಂದ ಮೇಲೆ ಬಿಂಬಿಸತಕ್ಕದ್ದೇನೆಂದರೆ, ಮೇಲಾದ ಶಿಕ್ಷಕರೆಂದು ಹೆಸರು ಪಡೆಯುವದಾದರೆ, ಸಣ್ಣ ಹುಡುಗರ ಗುಣ ಸ್ವಭಾವಗಳನ್ನು ಅರಿತುಕೊಂಡಿರಲಿಕ್ಕೆ ಬೇಕು. ಹುಡುಗರ ಗುಣಸ್ವಭಾವಾದಿಗಳು ತಿಳಿಯದ್ದರಿಂದ ಅನೇಕ ತಪ್ಪುಗಳಾಗುವದುಂಟು. ಶಿಕ್ಷಕರಿಗೆ ನಮ್ಮ ಮುಂದೆ ಇರುವ ಸೃಷ್ಟಿಯೇ ಉತ್ತಮವಾದ ಮಾರ್ಗವನ್ನು ತೋರಿಸಿಕೊಡುವದು. ಸೃಷ್ಟಿಯ ನಿಯಮಗಳು ಯಾವವೆಂದರೆ:—

೧. ಮೆಲ್ಲ ಮೆಲ್ಲನೆ ಸಾಗುವದು.
೨. ಕ್ರಮಕ್ರಮವಾಗಿ ಸಾಗುವದು.
೩. ಸುಲಭ ವಿಷಯದಿಂದ ಕಠಿಣ ವಿಷಯಕ್ಕೆ ಹೋಗುವದು.
೪. ಹುಡುಗರಿಗೆ ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿಗಳಿಗೆ ಹೋಗುವದು.
೫. ಏಕತ್ವ (ವಿಶೇಷ) ದಿಂದ ಬಹುತ್ವ (ಸಾಮಾನ್ಯ) ಕ್ಕೆ ಹೋಗುವದು.

ನಮ್ಮ ಸುತ್ತುಮುತ್ತಲಿರುವ ಸೃಷ್ಟಿಗೂ ಹುಡುಗರ ಗುಣ ಸ್ವಭಾವಕ್ಕೂ ಹೋಲಿಕೆ ಇರುವದರಿಂದ, ಈ ನಿಯಮಗಳು ಉಂಟಾಗಿರುತ್ತವೆ. ಪ್ರಾಣಿಗಳೂ, ವನಸ್ಪತಿಗಳೂ ಒಮ್ಮೆಲೇ ಹುಟ್ಟಿ ಒಮ್ಮೆಲೇ ಬೆಳೆಯುವದಿಲ್ಲ. ಆದರೆ ಪ್ರತಿಒಂದು ಪ್ರಾಣಿಯು ಇಲ್ಲವೆ ವನಸ್ಪತಿಯ ಬೇರೆ ಬೇರೆ ಭಾಗಗಳು ಮೆಲ್ಲಮೆಲ್ಲನೆ ಬೆಳೆಯುತ್ತ ಹೋಗುತ್ತವೆ. ಇದಲ್ಲದೆ, ಮನುಷ್ಯನು ಉಳಿದ ಯಾವತ್ತು ಪ್ರಾಣಿಗಳಗಿಂತ ಬಹಳ ಸಾವಕಾಶವಾಗಿ ಬೆಳೆಯುತ್ತಾನೆಂಬ ಮಾತು ನಾವು ಚನ್ನಾಗಿ ನೆನಪಿನಲ್ಲಿಡತಕ್ಕದ್ದು.

ಉದಾಹರಣಾರ್ಥವಾಗಿ, ಕುದುರೆಯ ಬೆಳವಣಿಗೆಯು ಆರು ವರ್ಷದಲ್ಲಿ ಪೂರಾ ಮುಗಿಯುತ್ತದೆ; ಆದರೆ ಅಷ್ಟೇ ವಯಸ್ಸಿನ ನರಜೀವಿಯು ಇನ್ನೂ ಕೇವಲ ಬಾಲ್ಯಾವಸ್ಥೆಯಲ್ಲಿರುತ್ತಾನೆ. ಅವನ ಹಾಲ್ದುಟಿಗಳು ಸಹ ಬಣಗಿರುವದಿಲ್ಲ. ಆದಕಾರಣ, ಸಣ್ಣ ಹುಡುಗರ ಅಭ್ಯಾಸವನ್ನು ಕ್ರಮದಿಂದ ಸಾವಕಾಶವಾಗಿ ನಡಿಸಿದರೆ ಕೇವಲ ಸೃಷ್ಟಿಯ ನಿಯಮವನ್ನು ಅನುಸರಿಸಿದಂತೆ ಆಗುವದು. ಆದರೆ ಇವಕ್ಕೆ ವಿಪರೀತವಾಗಿ ನಡೆದರೆ, ಸೃಷ್ಟಿಯ ಮೂಲ ಉದ್ದೇಶವನ್ನು ಮೂಲಿಗೆ ಒತ್ತಿಟ್ಟು, ಅದರಿಂದ ನಿರ್ಮಿಸಲ್ಪಟ್ಟ ಸೋಜಿಗದ ಒಡವೆಯನ್ನು ಕೆಡಿಸಿ ಹಾಳು ಮಾಡಿದಂತೆ ಆಗುವದು.

DEPARTMENTAL NOTICE.

ವಿದ್ಯಾಖಾತೆಯ ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ ೧೮೯೦—೯೧ನೇ ವರ್ಷದ ೨ ನೇ ಮತ್ತು ೩ ನೇ ಗ್ರೇಡಿನ ಮುಲಕೀ ಪರೀಕ್ಷೆಗಳು ಬೆಳಗಾವಿ, ಧಾರವಾಡ, ವಿಜಾಪುರ, ಕಾರವಾರ, ರತ್ನಾಗಿರಿ, ಕುಲಾಬಾ, ಮತ್ತು ಕೊಲ್ಲಾಪುರ ಈ ಸ್ಥಳಗಳಲ್ಲಿ ೧೮೯೦ನೇ ಇಸವಿಯ ಅಕ್ಟೋಬರ ತಿಂಗಳ ೬ನೇ ತಾರೀಖಿಗೆ (ಸೋಮವಾರ) ಆರಂಭವಾಗುವವು. ಈ ಪರೀಕ್ಷೆಗಳು ೧೮೮೮ ನೇ ಇಸವಿಯ ಏಪ್ರಿಲ ತಿಂಗಳ ೫ನೇ ತಾರೀಖಿನ ಗವರ್ಮೆಂಟ ಗ್ಯಾಝಟಿನಲ್ಲಿ ಪ್ರಕಟಿಸಲ್ಪಟ್ಟ ಹೊಸ ನಿಯಮಗಳಿಗೆ ಅನುಸಾರವಾಗಿ **अ** ಮತ್ತು **ब** ಪರಿಶಿಷ್ಟಗಳಂತೆ ತೆಗೆದುಕೊಳ್ಳಲ್ಪಡುವವು.

೨. ಪ್ರತಿಒಬ್ಬ ಉಮೇದವಾರನು ತಾನು ಇರುವ ಜಿಲ್ಲೆಯಲ್ಲಿ ನೇಮಿಸಲ್ಪಟ್ಟ ಕಮೀಟಿಯ ಅಧ್ಯಕ್ಷರಿಗೆ ತನ್ನನ್ನು ಪರೀಕ್ಷೆಗೆ ಕರಕೊಳ್ಳುವ ಬಗ್ಗೆ ಒಂದು ಅರ್ಜಿಯನ್ನು ಬರುವ ಅಗಸ್ಟ ತಿಂಗಳ ೧ನೇ ತಾರೀಖಿಗೆ ಅಥವಾ ಅದಕ್ಕೂ ಪೂರ್ವದಲ್ಲಿ ಕಳ

ಹಿಸಬೇಕು. ಅರ್ಜಿಯಲ್ಲಿ ಉಮೇದವಾರನ ಹೆಸರು, ತಂದೆಯ ಹೆಸರು, ಅಡ್ಡಹೆಸರು ಇವುಗಳನ್ನು ಚನ್ನಾಗಿ ತಿಳಿಯುವಹಾಗ ಬರೆಯಬೇಕು. ಮತ್ತು ಯಾವದೊಂದು ಶಾಲೆಯಿಂದ ಪರೀಕ್ಷೆಗೆ ಬರುವದಿದ್ದರೆ, ಆ ಶಾಲೆಯ ಹೆಸರೂ, ತಾನು ಕೊಡತಕ್ಕ ಗ್ರೇಡಿನಪರೀಕ್ಷೆಯ ಹೆಸರೂ, ಆ ಅರ್ಜಿಯೊಳಗೆ ಬರೆದಿರಬೇಕು.

೩. ಉಮೇದವಾರರು ಒಂದು ಜಿಲ್ಲೆಯಲ್ಲಿ ಪರೀಕ್ಷೆಗೆ ಕೂತಬಳಿಕ, ಅದೇ ವರುಷ ಅವರ ಪರೀಕ್ಷೆಯು ಪುನಃ ಮತ್ತೊಂದು ಜಿಲ್ಲೆಯ ಕಮಿಟಿಯವರ ಮುಂದೆ ಆಗಲಾರದು.

೪. ಪ್ರತಿ ಒಬ್ಬ ಉಮೇದವಾರನು ತಾನು ಇರುವ ಜಿಲ್ಲೆಯಲ್ಲಿಯೇ ಪರೀಕ್ಷೆಗೆ ಕೂಡ್ರಬೇಕು. ಮತ್ತು ತಾನು ಯಾವ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ರುವನೋ ಆ ಜಿಲ್ಲೆಯಲ್ಲಿ ಆರು ತಿಂಗಳು ಇದ್ದಬಗ್ಗೆ ತನ್ನ ಶಾಲೆಯ ಮಾಸ್ತರನಿಂದ ಇಲ್ಲವೆ ಗೌಡನಿಂದ ಸರಟಿಫಿಕೀಟು ಹಾಜರ ಮಾಡಲಿಕ್ಕೆಬೇಕು.

೫. ಉಮೇದವಾರರು ಪರೀಕ್ಷೆಗಳ ಫೀ ಹಣವನ್ನು ತಮ್ಮ ಅರ್ಜಿಗಳೊಡನೆ ಕಳಿಸುವದು ಅವಶ್ಯವಿಲ್ಲ. ಅವನ್ನು ಅವರ ಹೆಸರು ದಾಖಲ ಮಾಡಿಕೊಳ್ಳುವಾಗ ತೆಗೆದುಕೊಳ್ಳಲಾಗುವದು.

೬. ಪರೀಕ್ಷೆಗೆ ಬರುವ ಉಮೇದವಾರರ ವಯಸ್ಸು ಎಷ್ಟಿರಬೇಕು? ಅವರು ಕೊಡತಕ್ಕ ಫೀ ಎಷ್ಟು? ಪರೀಕ್ಷೆಗಳ ವಿಷಯಗಳು ಯಾವವು? ಇವೇ ಮುಂತಾದ ಯಾವತ್ತು ಸಂಗತಿಗಳನ್ನು ೧೮೮೮ನೇ ವರ್ಷದ ಏಪ್ರಿಲ ತಿಂಗಳ ೫ನೇ ತಾರೀಖಿಗೆ ಪ್ರಕಟಿಸಿದ ಬೊಂಬೆ ಗವರ್ನಮೆಂಟ ಗ್ಯಾಝೇಟಿನ ಮೊದಲನೇ ಭಾಗದ ೩೦೨ನೇ ಪುಟದಲ್ಲಿ ಪ್ರಸಿದ್ಧಪಡಿಸಿದ ನಿಯಮಗಳಲ್ಲಿ ನೋಡಿಕೊಳ್ಳಬಹುದು. ಈ ನಿಯಮಗಳನ್ನು ಕಳಿಸುವ ಬಗ್ಗೆ ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ ದಕ್ಷಿಣಭಾಗ ಇವರಿಗ

ಗಲಿ, ತಮ್ಮ ಜಿಲ್ಲೆಯೊಳಗಿನ ಕಮೀಟಿಯ ಅಧ್ಯಕ್ಷರಿಗಾಗಲಿ, ಅರ್ಜಿ ಮಾಡಿಕೊಂಡರೆ ಅವರು ಕಳಿಸಿಕೊಡುವರು.

೩. ಈ ವರ್ಷದ ಪರೀಕ್ಷೆಗಳಿಗೆ ನೇಮಿಸಲ್ಪಟ್ಟ ಪುಸ್ತಕಗಳ ಹೆಸರುಗಳು ೧೮೮೯ನೇ ವರ್ಷದ ನವಂಬರ ತಿಂಗಳ ೩ನೇ ತಾರೀಖಿನಲ್ಲಿ ಪ್ರಕಟಿಸಿದ ಬೊಂಬೆ ಗವರ್ಮೆಂಟ ಗ್ಯಾಝೆಟನ ಎರಡನೇ ಭಾಗದ ೧೧೪೩ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟವೆ.

ಧಾರವಾಡ,
೨೦ನೇ ಮೇ ೧೮೯೦

(Signed) S. V. PATWARDHAN,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ,
ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

೧. ಬಾಗಲಕೋಟಿ ತಾಲೂಕ ಶಿರೂರ ಸಾಲಿಯ ಅಸಿಸ್ಟಂಟರಾದ ರಾ. ಗ. ವಿ. ಕುಲಕರ್ಣಿ ಇವರು ರಾತ್ರಿಯಲ್ಲಿ ಒಮ್ಮೊಮ್ಮೆ ಚಿಕ್ಕೆ ಬೀಳುವ ವಿಷಯದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಅವುಗಳ ಉತ್ತರಗಳನ್ನು ಒಂದು ಸ್ವತಂತ್ರವಾದ ನಿಬಂಧ ಬರೆದು ತೀವ್ರವೇ ತಿಳಿಸುವೆವು.

ಎಡಿಟರ, ಕನ್ನಡ ಶಾಲಾಪತ್ರಕ.

೨. ಮುದ್ದೇಬಿಹಾಳತಾಲೂಕ ತಾಲೀಕೋಟಿಯಿಂದ “ಒಬ್ಬ ಸಭ್ಯ ಗೃಹಸ್ಥನು” ಎಂಬ ಸಹಿಯುಳ್ಳದ್ದೊಂದು ಪತ್ರ ಬಂದದೆ. ಇವರು, ಅಲ್ಲಿಯ ಸಾಲಿಯ ಮೇಲೆ ನೇಮಿಸಲ್ಪಟ್ಟ ಲಾಡಮಹಮ್ಮದ ಎಂಬ ಮಾಸ್ತರರು ಬಂದ ಆರಭ್ಯ ಸಾಲಿಯ ಸ್ಥಿತಿಯು ಬಹಳ ಸುಧಾರಿಸಿದೆ, ಹುಡುಗರ ಸಂಖ್ಯೆ ೯ ರಿಂದ ೮೦ ರವರಿಗೆ ಬೆಳೆದದೆ, ವಾರ್ಷಿಕ ಪರೀಕ್ಷೆ ಬಹಳ ನೆಟ್ಟಗಾಯಿತು, ಎಂದು ತಿಳಿಸುತ್ತಾರೆ. ಇದು ಆ ಮಾಸ್ತರರಿಗೆ ಭೂಷಣವೇ ಸರಿ.

ಅವಶ್ಯ ಲಕ್ಷಕೊಡಿರಿ ಮತ್ತು ಪೂರಾ ಓದದೆ ಬಿಡಬೇಡಿರಿ!!

ಅಯ್ಯಾ, ವೀರಶೈವ ಮತದಲ್ಲಿ ಧುರೀಣರಾದ × × × ಬಂಧುಗಳಿರಾ! ನೀವು ಈಗ ಪಡತಕ್ಕ ಕಷ್ಟ ಶ್ರಮಗಳನ್ನು ನೋಡಿ, ನಮ್ಮ ಮತೋತ್ಪತ್ತಿಯ ನಿಶ್ಚಯವನ್ನೂ ವೃದ್ಧಿಯನ್ನೂ ಮಾಡಬೇಕೆಂದು ರಾ. ಬಾ. ಗುರುಸಿದ್ಧಪ್ಪಾ ಅಂಣಾ ಡಿ.॥ ಡಿ.॥ ಕಲೆಕ್ಟರ್ ಮತ್ತು ರಾ. ಸಾ. ರುದ್ರಗೌಡಾ ಅಂಣಾ ದಪ್ತರದಾರ ಇವರು ಬಹು ಶ್ರಮಪಟ್ಟು ನಮ್ಮ ಮತವನ್ನು ಉದ್ಧರಿಸಿ, ಆ ಸಂಬಂಧವಾಗಿ ಈಗ ೩ ವರ್ಷದ ಕೆಳಗೆ ಧಾರವಾಡದಲ್ಲಿ ಒಂದು ಸಭೆಯನ್ನು ಏರ್ಪಡಿಸಿ, ಅದರಲ್ಲಿ ದೊಡ್ಡ ದೊಡ್ಡ ವಿದ್ವಾಂಸರನ್ನು ತರಿಸಿ, ಅವರಿಂದ ವೇದಾಗಮಪುರಾಣಾಂತರ್ಗತವಾದ ನಿಮ್ಮ ಮತದ "ವೀರಶೈವಾಚಾರ ನಿರ್ಣಯ ಚಿಂತಾಮಣಿ" ಎಂಬ ಪುಸ್ತಕವನ್ನು ರಾ. ರಾ. ರಘುಪ್ಪಂಣಾ ದಡ್ಡಿ ಇವರಿಂದ ಬರಿಸಿ ಒಳ್ಳೇ ದಪ್ಪಕಾಗದಮೇಲೆ ಸುವಾಚ್ಯ ಅಕ್ಷರಗಳಿಂದ ಮುದ್ರಿಸಲುಪಕ್ರಮಿಸಿದ್ದಾರೆ, ಅದರೊಳ್ಗೆ ಅಡಗಿರುವ ವಿಷಯಂಗಳು:—

೧. ಮತವು ಯಾವ ಕಾಲದಲ್ಲಿ ಯಾವ ಯಾವ ಪ್ರಕಾರ ನಡೆಯುತ್ತ ಬಂತು ಅದರ ವಿವರ.

೨. ಪಂಚಾಚಾರ್ಯ ಉತ್ಪತ್ತಿ ಆಗುವಪ್ರಕಾರ.

೩. ಲಿಂಗಧಾರಣವಿಧಾನ, ವಿವಾಹವಿಧಿ, ಮೊದಲು ಮಾಡಿಕೊಂಡು ಮರಣದಪರಿಯಂತರ ಮಾಡತಕ್ಕ ಯಾವತ್ತು ಕರ್ಮಗಳನ್ನೂ ಸರಿಯಾಗಿ ವೇದೋಕ್ತ ವಿಧಿಪ್ರಕಾರ ಬರೆದು ಅರ್ಥಸಹ ಛಾಪಿಸಲಿಕ್ಕೆ ಪ್ರಾರಂಭ ಮಾಡಿದೆ, ಇದು ಡಿಮ್ಮಿ ಅಷ್ಟಪತ್ರಿ ಸಾಡೆಯ ೪೦೦ ಪುಟಗಳಾಗುವವು. ಇದರ ಮುಂಗಡ ವರ್ಗಣೆ ಅಂದರೆ ಬರುವ ಮೇ ತಿಂಗಳು ಪೂರೈಸುವದರೊಳಗೆ ಕಳುಹಿಸಿದರೆ, ಟಪಾಲ ಹಾಸಲು ಸಹಿತ ಒಂದು ರೂಪಾಯಿ ಎಂಟು ಅಣೆ. ಹಿಂದಿನಿಂದ ಹೆಚ್ಚು ಬೀಳುವದು. ಈ ಬೆಲೆ ಇಲ್ಲದ ಪುಸ್ತಕವನ್ನು ಸಂಗ್ರಹಿಸದೆ ಬಿಡಬೇಡಿರಿ. ಇದರಿಂದ ನಿಂಮ ಮತದ ನೆಲೆ ತಿಳಿಯುವದಲ್ಲದೆ ಇದರಲ್ಲಿ ನಿಮಗೆ ಗೊತ್ತಿಲ್ಲದ ಸಂಗತಿಗಳು ಬಹಳ ಬಂದವೆ. ಇದನ್ನು ನಿಮ್ಮ ಸ್ನೇಹಿತರಿಗೂ ನಿಮ್ಮ ಊರ ಮಠಸ್ಥರಿಗೂ ತಿಳಿಸಿ ಯಾವತ್ತು ಜನರ ಸಹಾಯ ದೊರೆಯುವಂತೆ ಮಾಡಿ ನಮ್ಮ ಅಜ್ಞಾನಾಂಧಕಾರದಲ್ಲಿ ಮುಳಿಗಿದ ಲಿಂಗಾಯತ ಜನರ ಮತದ ಸಂಬಂಧದ ಜ್ಞಾನವನ್ನು ಹೆಚ್ಚಿಸುವಿರೆಂದು ಕೋರುತ್ತೇನೆ.

ಧಾರವಾಡ, ಚನ್ನವೀರ ಫಕೀರಪ್ಪ,
28—4—90. | ಪ್ರೊಪ್ರೈಟರ್, ಕರ್ನಾಟಕ ಬುಕ್ ಡಿಪೋಪ್ರೆಸ್.

ಕನ್ನಡ ಶಾಲಾಪತ್ರಕದ ವರ್ಗಣಿ-ಅಂಚೆವೆಚ್ಚ ಸಹಿತ ಮುಂಗಡ ೧॥ ಆಣೆ.
ಒಂದು ಸಂಚಿಕೆಗೆ—... ... ... ೨ ಆಣೆ.

ವ್ಯವಸ್ಥಾಪಕ, ಕ. ಶಾ. ಪತ್ರಕ.

ಪ್ರಕಟನೆ.

ಕನ್ನಡ ಭಾಷೆಯ ಯಾವತ್ತು ಅಭಿಮಾನಿಗಳಿಗೂ, ಶಾಲಾ ಗುರುಗಳಿಗೂ, ವಿದ್ಯಾರ್ಥಿಗಳಿಗೂ ತಿಳಿಸುವದೇನೆಂದರೆ—ಇಂದಿನವರಿಗೆ ಹಳೆಗನ್ನಡ ಹೊಸಗನ್ನಡ ಭಾಷೆಗಳ ಮರ್ಮವನ್ನು ಚನ್ನಾಗಿ ತಿಳಿಸುವ ವ್ಯಾಕರಣವಿದ್ದಿಲ್ಲ. ಈ ಕೊರತೆಯನ್ನು ದೂರಮಾಡಬೇಕೆಂದು ಅನೇಕ ಹಳೆಗನ್ನಡ ಹೊಸಗನ್ನಡ ಗ್ರಂಥಗಳ ಆಧಾರದಿಂದಲೂ, ಸ್ವಾನುಭವದಿಂದಲೂ "ಕನ್ನಡ ಕೈಪಿಡಿ" ಎಂಬ ಹೆಸರಿನದೊಂದು ವ್ಯಾಕರಣವನ್ನು ಬರೆದು, ಅದರ ಪೂರ್ವಾರ್ಧವನ್ನು ಮೊಳೆ ಛಾಪಿನಿಂದ ಛಾಪಿಸಿ ತಯಾರಮಾಡಿದ್ದೇವೆ. ಇದರಲ್ಲಿ ಎರಡೂ ಕನ್ನಡ ಭಾಷೆಗಳ ನಿಯಮಗಳು ಉಂಟು. ಅದರಿಂದ ಕನ್ನಡ ಗದ್ಯಪದ್ಯಗ್ರಂಥಗಳನ್ನು ಓದುವವರಿಗೆ ಅನುಕೂಲವಾಗುವದು. ಪುಸ್ತಕವು ರಾಯಲ್ ದ್ವಾದಶ ಪತ್ರೀ ಸಾಂಚೆಯ ೨೩೬ ಪುಟಗಳುಳ್ಳದ್ದದೆ. ಪುಸ್ತಕದಮಾನದಿಂದ ಬೆಲೆಯು ತೀರ ಕಡಿಮೆಯೆಂದರೆ ಹನ್ನೆರಡು ಆಣೆ, ಅಂಚೇವೆಚ್ಚ ಎರಡು ಆಣೆ ಅಂತು ಹದಿನಾಲ್ಕು ಆಣೆ ಬೀಳುವದು. ಖಾತ್ರೀ ಜನರ ಕಡೆಯಿಂದ ಪತ್ರಗಳು ಬಂದರೆ ವ್ಯಾಲ್ಯುಪೇಏಬಲ್ ಪಾರ್ಸಲ ಪೋಸ್ಟಿನಿಂದ ಪುಸ್ತಕಗಳನ್ನು ಕಳಿಸುವೆವು. ಬೇಕಾದವರು ಕೆಳಗೆ ಸಹಿ ಮಾಡಿದವರ ಕಡೆಗೆ ಬೆಲೆ ಕಳುಹಿಸಿ ಪುಸ್ತಕಗಳನ್ನು ತರಿಸಿಕೊಳ್ಳಬೇಕು.

ತಾ॥ ೩೧।೩।೯೦. } ಧೊಂಡೋ ನರಸಿಂಹ ಮುಳಬಾಗಲ,
ಅ. ಮಾಸ್ತರ ಟ್ರೇನಿಂಗ ಕಾಲೇಜ, ಧಾರವಾಡ.